ಸಂಸ್ಕೃತಿಯ ರೂಪಿಕೆಗಳು

ಮೂಲ
ರೂತ್ ಬೆನೆಡಿಕ್ಟ್

ಅನುವಾದ
ಎನ್ ಪಿ ಶಂಕರನಾರಾಯಣರಾವ್

1978

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಪ್ರಕಟಣೆ....69

ಸಂಸ್ಕೃತಿಯ ರೂಪಿಕೆಗಳು

ಮೂಲ
ರೂತ್ ಬೆನೆಡಿಕ್ಟ್

ಅನುವಾದ
ಎನ್. ಪಿ. ಶಂಕರನಾರಾಯಣರಾವ್

1978

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560 024.

ರೂತ್ ಬೆನೆಡಿಕ್ಟ್ ಕೃತ 'ಪ್ಯಾಟರ್ನ್ಸ್ ಆಫ್ ಕಲ್ಚರ್' ಮೂಲ ಇಂಗ್ಲಿಷ್ ಪುಸ್ತಕದ ಅನುವಾದ 'ಸಂಸ್ಕೃತಿಯ ರೂಪಿಕೆಗಳು' (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಸಂವಹನ ಸಮಿತಿ ಪ್ರಕಾಶಿತ) ಪ್ರಥಮ ಮುದ್ರಣ 1978, ಪ್ರತಿಗಳು 1000 ಪುಟಗಳು. XXIV + 309.

ಬೆಲೆ: ಸಾದಾಪ್ರತಿ ರೂ. 17-00 ಕ್ಯಾಲಿಕೊಪ್ರತಿ ರೂ. 22-00

ಪ್ರಧಾನ ಸಂಪಾದನೆ

ವೀ. ಚ. ಹಿತ್ತಲಮನಿ

ಪ್ರಾಧ್ಯಾಪಕರು

ಸಹ ಸಂಪಾದನೆ

ಎಚ್. ಕೆ. ನರಸಿಂಹೇಗೌಡ

ಸಹಾಯಕ ಪ್ರಾಧ್ಯಾಪಕರು

ಎಂ. ಸತ್ಯನಾರಾಯಣರಾವ್

ಸಂಶೋಧನ ಸಹಾಯಕರು

ಅನುವಾದ ಪರಿಶೀಲನೆ

ಚಂದ್ರಶೇಖರ ಬುಗ್ಗಿ

ಸಮಾಜಶಾಸ್ತ್ರ ಸಹ ಪ್ರಾಧ್ಯಾಪಕರು.

ಎಲ್ಲರೂ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸೇರಿದವರು.

ಮುದ್ರಕರು

ಭರಣಿ ಮುದ್ರಣಾಲಯ

ಸೌತ್‌ಎಂಡ್ ರಸ್ತೆ, ಬೆಂಗಳೂರು–560 004.

ಕುಲಪತಿಗಳ ಹಾರೈಕೆ

ಇಂದಿನ ವಿಶ್ವದಲ್ಲಿನ ಹಲವಾರು ಸಮಸ್ಯೆಗಳಿಗೆ ಕೃಷಿ ಉತ್ಪಾದನೆಯ ಹೆಚ್ಚಳವೇ ಬಹುಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯ. ಕೃಷಿ ಉತ್ಪಾದನೆಯ ಹೆಚ್ಚಳವು ಕೃಷಿ ಸಂಶೋಧನೆಗಳ ಫಲಿತಾಂಶಗಳನ್ನಳವಡಿಸುವಿಕೆಯನ್ನು ಅವಲಂಬಿಸಿದೆ. ಕಳೆದ ಒಂದು ದಶಕದಲ್ಲಿ ಕೃಷಿ ಸಂಶೋಧನೆಯು ನಾನಾಮುಖವಾಗಿ ಬೆಳೆದಿದೆ. ಅದರ ಪ್ರಯೋಜನವನ್ನು ಕೆಲವು ರೈತರು ಪಡೆದಿದ್ದಾರೆ. ಅವರಲ್ಲಿ ಕೆಲವರು ಹೆಚ್ಚಿನ ಪ್ರಗತಿಯನ್ನು ಸಾಧಿಸಿ. ಜಾಗತಿಕ ಗರಿಷ್ಠ ಸಾಧನೆಯನ್ನು ನಾವೂ ಸಾಧಿಸಲು ಸಾಧ್ಯವೆಂಬ ಭರವಸೆಯ ದೃಷ್ಟಾಂತವೆನಿಸಿದ್ದಾರೆ. ಈ ಅಳವಡಿಕೆ ಹಾಗೂ ಸಾಧನೆಗಳು ಕೆಲವರ ಸ್ವತ್ತಾಗಿ ಉಳಿಯದೆ ಸಾರ್ವತ್ರಿಕವಾಗಬೇಕು. ಆಗ ರಾಷ್ಟ್ರದಲ್ಲಿ ನಿಜವಾದ ಕೃಷಿಪ್ರಗತಿ ಹಾಗೂ ಸಾಮಾಜಿಕ ಕಲ್ಯಾಣ ಮೂಡಿಬರುತ್ತವೆ. ಈ ಕಾರ್ಯಸಾಧನೆಯಲ್ಲಿ ಕೃಷಿವಿಜ್ಞಾನ ಸಾಹಿತ್ಯ ರಚನೆಯು ಮಹತ್ವದ ಅಂಶವಾಗಿದೆ. ಈ ದೃಷ್ಟಿಯಲ್ಲಿ ಕೃಷಿವಿಜ್ಞಾನ ಪುಸ್ತಕಗಳು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಾತಂತ್ರ್ಯಾನಂತರದ ಅಭ್ಯುದಯದ ಹಲವಾರು ಯತ್ನಗಳಲ್ಲಿ ರಾಷ್ಟ್ರೀಯ ಭಾಷೆಗಳ ಅಭಿವೃದ್ಧಿಯೂ ಒಂದು. ಹಿಂದಿಭಾಷೆಯೊಂದಿಗೇನೆ ಇತರ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ನಡೆಯಬೇಕೆಂದು ಸಂಸತ್ತು ನಿರ್ಧರಿಸಿದೆ. ಹಲವಾರು ಭಾಷೆಗಳು ಬಳಕೆಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಭಾಷೆಗಳೂ ಸಮತೂಕವಾಗಿ ಬೆಳೆದುಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದುಬರುತ್ತದೆ. ಈ ಭಾಷೆಗಳು ಸಾಕಷ್ಟು ಅಭಿವೃದ್ಧಿ ಹೊಂದಿದಾಗ ಶಿಕ್ಷಣಮಾಧ್ಯಮಗಳಾಗಲು ಸಮರ್ಥವಾಗುತ್ತವೆ. ನಾಡಿನ ಭಾಷೆಗಳೆಲ್ಲವನ್ನೂ ಶಿಕ್ಷಣಮಾಧ್ಯಮಗಳಾಗುವಂತೆ ಬಲಗೊಳಿಸುವ ಹೊಣೆ ವಿವಿಧ ವಿಶ್ವವಿದ್ಯಾನಿಲಯಗಳದ್ದು. ಅದಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳು ಕೃಷಿಶಿಕ್ಷಣ ಮಾಧ್ಯಮಗಳಾಗುವಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದದ್ದು ಕೃಷಿವಿಶ್ವವಿದ್ಯಾನಿಲಯಗಳ ಕೆಲಸವಾಗಿದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವು ಈ ಕಾರ್ಯಸಾಧನೆಗೋಸುಗ ಕನ್ನಡದಲ್ಲಿ ಕೃಷಿಸಾಹಿತ್ಯ ನಿರ್ಮಾಣ ಕೈಗೆತ್ತಿಕೊಂಡಿದೆ. ಇಷ್ಟು ದಿನ ಇಂಗ್ಲಿಷ್ ಭಾಷೆಯಲ್ಲಿಯೇ ಶಿಕ್ಷಣ ಪಡೆದು, ಬಳಿಕೆ ನಡೆಯಿಸಿದ ಶಿಕ್ಷಕ ಹಾಗೂ ವಿಜ್ಞಾನಿಗಳಿಗೆ ಒಮ್ಮೆಲೇ ಪ್ರಾದೇಶಿಕ ಭಾಷೆಯಲ್ಲಿ ಗ್ರಂಥರಚನೆ ಮಾಡುವುದು ಸುಲಭ ಕಾರ್ಯವೇನಲ್ಲ. ಇಂಥದರಲ್ಲಿ ಈ ಕೆಲಸ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭವಾದ ಅಲ್ಪಾವಧಿಯಲ್ಲಿ ಮುಕ್ಕಾಲು ಶತಕ್ಕಿಂತಲೂ ಹೆಚ್ಚು ಗ್ರಂಥಗಳು ಪ್ರಕಟಗೊಂಡು ಜನಪ್ರಿಯವಾದುದು ಅತ್ಯಂತ ಹೆಮ್ಮೆಯ ಸಾಧನೆ.

ಉಪರ್ಯುಕ್ತ ಸಂಶೋಧನಾಧಾರಿತ ಆಳ ಅಭ್ಯಾಸದ ಫಲವಾಗಿ ಸೃಷ್ಟಿಗೊಂಡ ಕೃಷಿವಿಜ್ಞಾನ ಗ್ರಂಥಗಳು ನಮ್ಮ ರಾಜ್ಯದ ಕೃಷಿ ವಿದ್ಯಾರ್ಥಿ ಹಾಗೂ ಕೃಷಿಕರಿಗೆ ಅಮೂಲ್ಯ ಕೊಡಿಗೆಗಳಾಗುವುದರಲ್ಲಿ ಸಂದೇಹವಿಲ್ಲ, ಈ ಕಾರ್ಯ ಮಿಂಚಿನ ವೇಗದಿಂದ ನಡೆಯಲೆಂದು ಹಾರೈಸುತ್ತೇನೆ.

ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು
ದಿನಾಂಕ: 18-5-78

ಹ.ರಾ. ಅರಕೇರಿ
ಕುಲಪತಿಗಳು

ಸಂಪಾದಕರ ಮಾತು

ಈ ಪುಸ್ತಕವು ಶ್ರೀಮತಿ ರೂತ್ ಬೆನೆಡಿಕ್ಟ್ ಅವರು ಬರೆದಿರುವ 'ಪ್ಯಾಟರ್ನ್ಸ್ ಆಫ್ ಕಲ್ಚರ್' ಎಂಬ ಇಂಗ್ಲಿಷ್ ಗ್ರಂಥದ ಅನುವಾದ. ಶ್ರೀಮತಿ ರೂತ್, ವಿಶ್ವ ವಿಖ್ಯಾತ ಮಾನವಶಾಸ್ತ್ರ ವಿಜ್ಞಾನಿ. ಸಂಸ್ಕೃತಿಯು ವಿಕಾಸಗೊಂಡಿದ್ದೇ ಇರಲಿ, ಸರಳವಾದದ್ದೇ ಇರಲಿ, ಅದು ಮಾನವ ಬೆಳವಣಿಗೆಯನ್ನು ನಿರ್ಧರಿಸುವಲ್ಲಿ ಮಹತ್ವದ ಅಂಶವೆಂದು ನಂಬಿದವರು ಅವರು. ಈ ಪುಸ್ತಕದಲ್ಲಿ ಸಂಪ್ರದಾಯದ ವಿಜ್ಞಾನ, ಸಂಸ್ಕೃತಿಗಳ ವೈವಿಧ್ಯತೆ, ಸಂಸ್ಕೃತಿಯ ಸಮಗ್ರತೆ, ನ್ಯೂ ಮೆಕ್ಸಿಕೋವಿನ ಪ್ವೆಬ್ಲೋಗಳು, ಡೋಬು, ಅಮೇರಿಕಾದ ವಾಯುವ್ಯ ತೀರಪ್ರದೇಶ, ಸಮಾಜದ ಸ್ವಭಾವ, ವ್ಯಕ್ತಿ ಮತ್ತು ಸಮಾಜದ ರೂಪಿಕೆ ಈ ಎಂಟು ಅಧ್ಯಾಯಗಳಲ್ಲಿ ನ್ಯೂಮೆಕ್ಸಿಕೊದ ಜುನಿ, ಅಮೇರಿಕೆಯ ವಾಯುವ್ಯ ಭಾಗದ ಕರಾವಳಿಯ ಇಂಡಿಯನ್ನರ ಕ್ವಾಕಿಯಟ್ಲ್ ಹಾಗೂ ಪೂರ್ವ ನ್ಯೂಗಿನಿಯ ಕಡಲಂಚಿನಿಂದ ದೂರದ ದ್ವೀಪ ಒಂದರ ಡೋಬು ಈ ಮೂರು ಆದಿವಾಸಿ ಜನಗಳ ಸಂಸ್ಕೃತಿಗಳನ್ನು ಕುರಿತ ಪರಾಮರ್ಶೆ ಇದೆ. ಸಂಸ್ಕೃತಿಯ ಅಂತಃ ಪ್ರವೃತ್ತಿಯನ್ನು ಆಳವಾಗಿ ಒಳಹೊಕ್ಕು ನೋಡುವ, ವ್ಯಕ್ತಿಗತ ಮತ್ತು ಸಾಮೂಹಿಕ ವರ್ತನೆಗಳನ್ನು ನಿರ್ಣಯಿಸುವ ಮನೋಭಾವಗಳನ್ನು ಅರಿತು ಕೊಳ್ಳುವ ಹಾಗೂ ವಿವಿಧ ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನದ ಒಂದು ಉತ್ತಮ ವಿದಂ.

ಈ ಪುಸ್ತಕವನ್ನು 1934ರಷ್ಟು ಹಿಂದೆ ಬರೆದಿದ್ದರೂ ಇಂದಿಗೂ ಮಾನವ ಶಾಸ್ತ್ರ ಸಾಹಿತ್ಯರಾಶಿಯಲ್ಲಿ ಇದೊಂದು ಪ್ರಮುಖ ಗ್ರಂಥವಾಗಿದೆ. ಸುಮಾರು 50 ವರ್ಷಗಳ ಅವಧಿಯಲ್ಲಿ ಜಗತ್ತಿನ ಹಲವಾರು ಭಾಷೆಗಳಿಗೆ ಇದು ಭಾಷಾಂತರಗೊಂಡುದು ಇದರ ಸತ್ವ ಹಾಗೂ ಜನಾದರಣೆಗಳಿಗೆ ಸಾಕ್ಷಿ. ಸ್ವಲ್ಪ ವಿಲಂಬವಾದರೂ ಕನ್ನಡಕ್ಕೂ ಈಗ ಈ ಭಾಗ್ಯ ಲಭಿಸಿರುವುದು ಕನ್ನಡಿಗರ ಸುದೈವ. ಈ ಗ್ರಂಥದ ಅನುವಾದವನ್ನು ಶ್ರೀ. ಎನ್. ಪಿ. ಶಂಕರನಾರಾಯಣರಾವ್ ಅವರು ಮಾಡಿದ್ದಾರೆ. ಮಾನವ ಹಾಗೂ ಸಮಾಜಶಾಸ್ತ್ರಾಭ್ಯಾಸಿಗಳಾದ ಶ್ರೀಯುತರು ನಾಲ್ಕಾರು ಗ್ರಂಥದ ರಚನೆ ಕೈಗೊಂಡ ಅನುಭವಿಗಳು. ಕ್ಲಿಷ್ಟ ವಿಷಯವನ್ನು ಸರಳ ಶೈಲಿಯಲ್ಲಿ ಅನುವಾದಿಸಿದ್ದಾರೆ. ಅನುವಾದದ ಪರಿಶೀಲನೆಯನ್ನು ಕೃಷಿವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರ ವಿಭಾಗದ ಮುಖ್ಯಾಧಿಕಾರಿಗಳೂ ಸಹ ಪ್ರಾಧ್ಯಾಪಕರೂ ಆಗಿರುವ ಶ್ರೀ ಚಂದ್ರಶೇಖರ ಬುಗ್ಗಿ ಅವರು ಮಾಡಿದ್ದಾರೆ. ಅಚ್ಚಿಗೆ ಪ್ರತಿಯನ್ನು ನಮ್ಮ ವಿಭಾಗದ ಕನ್ನಡ ಬೆರಳಚ್ಚುಗಾರರಾದ ಶ್ರೀ ಟಿ. ಎಸ್. ಚಂಪಕ್ ಅವರು ಸಿದ್ಧಪಡಿಸಿದ್ದಾರೆ. ಈ ಪುಸ್ತಕದ ಮುದ್ರಣದಲ್ಲಿ ಹಲವಾರು ಅಡೆತಡೆಗಳುಂಟಾದವು

ಅವುಗಳನ್ನೆಲ್ಲ ಪರಿಹರಿಸಿ ಮುದ್ರಣ ಮುಗಿಸಿಕೊಟ್ಟವರು ಮೆ| ಭರಣಿ ಪ್ರಿಂಟರ್ಸ್‌ನ ಅವರು. ಈ ಪುಸ್ತಕದ ರಕ್ಷಾ ಕವಚದ ಮೇಲಿನ ಚಿತ್ರ ಟೋವಾಸದ ಸನಿಯಂದರಲ್ಲಿಯ ಒಂದು ನ್ಯೂಮೆಕ್ಸಿಕನ್ 'ಪ್ವೆಬ್ಲೊ'ದ್ದಾಗಿದೆ. ಇದನ್ನು 'ಸ್ಪಾನ್' ಇಂಗ್ಲಿಷ್ ಮಾಸಪತ್ರಿಕೆಯ 1978ರ ಜನವರಿ ಸಂಚಿಕೆಯಿಂದ ತೆಗೆದುಕೊಳ್ಳಲಾಗಿದೆ. ಇವರೆಲ್ಲರಿಗೂ ಅನಂತ ಕೃತಜ್ಞತೆಗಳು.

ವಿವಿಧ ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನಗಾರರು ಹಾಗೂ ಸಂಶೋಧಕರಿಗೆ ಈ ಪುಸ್ತಕ ಬಹುಪ್ರಯೋಜನಕಾರಿಯಾಗಿದೆ.

ವೈಶಾಖ ಮಾಸ
ಕಾಳಾಯುಕ್ತಿನಾಮ ಸಂವತ್ಸರ,
ಶಾಲಿವಾಹನ ಶಕ 1899.
ಕನ್ನಡ ಅಧ್ಯಯನ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು–560 024.

ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿಯ
ಕಾರ್ಯದರ್ಶಿಗಳು

ಲೇಖಕರ ಮಾತು

ಈ ಗ್ರಂಥದಲ್ಲಿ ಪರಾಮರ್ಶಿಸಿರುವ ಮೂರು ಆದಿವಾಸಿ ಬಣಗಳ ಜನಗಳನ್ನು ನಾನು ಆರಿಸಿಕೊಳ್ಳಲು ಕಾರಣಗಳು ಎರಡು. ಹೋಲಿಕೆಯಲ್ಲಿ ನೋಡಿದರೆ ಈ ಬಣಗಳನ್ನು ಕುರಿತು ದೊರೆಯುವ ಜ್ಞಾನ, ಬೇರೆ ಬಣಗಳಿಗಿಂತಲೂ ಹೆಚ್ಚು ಪೂರ್ಣವಾಗಿಯೂ ತೃಪ್ತಿಕರವಾಗಿಯೂ ಇರುವುದು, ಒಂದು. ಪ್ರಕಟಗೊಂಡಿರುವ ವಿವರಣೆಗಳಿಗೆ ಪೂರಕವಾಗಿ ಆ ಜನಗಳ ನಡುವೆ ನಿಕಟವಾಗಿ ಬಾಳಿ ಸಂಬಂಧಪಟ್ಟ ಬಣಗಳನ್ನು ಕುರಿತು ಅಧಿಕೃತ ವಿವರಣೆಗಳನ್ನು ನೀಡಿರುವ ಕ್ಷೇತ್ರಾಧ್ಯಾಯಿ ಮಾನವ ಕುಲಶಾಸ್ತ್ರಜ್ಞರೊಂದಿಗೆ ಹಲವಾರು ಬಾರಿ ಚರ್ಚಿಸಲು ಅವಕಾಶವಾದುದು ಮತ್ತೊಂದು. ಜುನಿಗಳ ಪ್ವೆಬ್ಲೋವಿನಲ್ಲಿಯೂ, ಪ್ವೆಬ್ಲೋ ಸಂಸ್ಕೃತಿಯೊಂದಿಗೆ ವೈದೃಶ್ಯಗಳನ್ನು ತೋರಿಸಲು ನಾನು, ಬಳಸಿಕೊಂಡಿರುವ ನೆರೆಹೊರೆಯ ಬಣಗಳೊಂದಿಗೂ, ನಾನು ಹಲವಾರು ಬೇಸಿಗೆಗಳನ್ನು ಕಳೆದಿದ್ದೇನೆ. ಜುನಿ ಭಾಷೆಯನ್ನು ಕಲಿತು, ಲಭ್ಯವಿರುವ ಪ್ವೆಬ್ಲೋ ಅಧ್ಯಯನಗಳಲ್ಲಿ ಅತ್ಯುತ್ತಮವಾದ ಮೂಲಪಾಠಗಳ ಸಂಗ್ರಹವನ್ನೂ, ಜುನಿಗಳ ಬಗ್ಗೆ ವಿಷಯ ಕಥನವನ್ನೂ ನೀಡಿರುವ ಡಾ. ರೂತ್. ಎಲ್. ಬುನ್ಸೆಲ್ ಅವರಿಗೆ ನಾನು ಬಹಳ ಋಣಿಯಾಗಿದ್ದೇನೆ. ಡೋಬುಗಳನ್ನು ಕುರಿತ ವಿವರಣೆ ಡಾ. ರಿಯೋ ಎಫ್. ಫಾರ್ಚ್ಯೂನ್ ಅವರ ಅಮೂಲ್ಯಕೃತಿ 'ದಿ ಸೋರ್ಸರರ್ಸ್ ಆಫ್ ಡೋಬು' (ಡೋಬುವಿನ ಮಾಟಗಾರರು) ವಿಗೂ ಹಲವಾರು ಹರ್ಷದಾಯಿ ಸಂಭಾಷಣೆಗಳಿಗೂ ನಾನು ಋಣಿ. ಅಮೆರಿಕದ ವಾಯುವ್ಯ ತೀರಪ್ರದೇಶವನ್ನು ಕುರಿತು ನಾನು ಪ್ರೊಫೆಸರ್ ಫ್ರಾನ್ಸ್ ಬೋಅಸ್ ಅವರ ಪ್ರಕಟಣೆಗಳನ್ನೂ, ಕ್ವಾಕಿಯೂಟಲ್ ಜೀವನದ ವಿವರವಾದ ಸಂಕಲನಗಳನ್ನೂ ಬಳಸಿಕೊಂಡಿದ್ದೇನೆ. ಅಷ್ಟು ಮಾತ್ರವಲ್ಲದೆ, ಅಪ್ರಕಟಿತರಾಗಿರುವ ವಿಷಯವಸ್ತುಗಳನ್ನೂ ನಲವತ್ತು ವರ್ಷಗಳ ಕಾಲ ವಾಯುವ್ಯ ತೀರಪ್ರದೇಶದಲ್ಲಿ ಪಡೆದಿರುವ ತಮ್ಮ ಅನುಭವಗಳನ್ನು ಕುರಿತು ಅವರು ನೀಡಿದ ತೀಕ್ಷ್ಣ ದೃಷ್ಟಿಯ ವ್ಯಾಖ್ಯಾನಗಳನ್ನೂ ಬಳಸಿಕೊಂಡಿದ್ದೇನೆ.

ಇಲ್ಲಿನ ಪ್ರತಿಪಾದನೆಗೆ ನಾನು ಮಾತ್ರ ಹೊಣೆ. ಕೆಲವೊಂದು ಅರ್ಥವಿವರಣೆಗಳನ್ನು ಯಾರಾದರೂ ಕ್ಷೇತ್ರಾಧ್ಯಾಯಿಗಳು ಕೊಂಡೊಯ್ಯುತ್ತಿದ್ದುದಕ್ಕಿಂತ ಮುಂದುವರಿಸಿ ನಾನು ಒಯ್ದಿರಬಹುದು. ಆದರೆ ಈ ಅಧ್ಯಾಯಗಳನ್ನು ಆಯಾ ಬಣಗಳಿಗೆ ಸಂಬಂಧಪಟ್ಟ ತಜ್ಞರು ಓದಿ, ವಿಷಯವಸ್ತುಗಳ ಯಥಾರ್ಥತೆಯನ್ನು ದೃಢಪಡಿಸಿಕೊಂಡಿದ್ದಾರೆ. ಅವರುಗಳ ವಿವರವಾದ ಅಧ್ಯಯನಗಳಿಗೆ ಆಕರಸೂಚನೆಯನ್ನು ನೀಡಲಾಗಿದೆ. ಪೂರ್ಣಕಥನಗಳನ್ನು ನೋಡಬಯಸುವವರು ಅವುಗಳನ್ನು ಬಳಸಿಕೊಳ್ಳಬಹುದು.

ಈ ಕೆಳಕಂಡ ಲೇಖನಗಳಿಂದ ಕೆಲವು ಪ್ರಕರಣಗಳನ್ನು ಪುನಃ ಮುದ್ರಿಸಲು ಅನುಮತಿ ನೀಡಿದ ಮೂಲ ಪ್ರಕಾಶಕರಿಗೆ ನನ್ನ ಕೃತಜ್ಞತೆಗಳನ್ನು ತಿಳಿಸಬಯಸುವೆನು: 'ದಿ ಸೆಂಚುರಿ ಮ್ಯಾಗಜಿನ್' ನಿಂದ 'ದಿ ಸೈನ್ಸ್ ಆಫ್ ಕಸ್ಟಮ್' (ಸಂಪ್ರದಾಯದ ವಿಜ್ಞಾನ); 'ದಿ ಅಮೆರಿಕನ್ ಎಂತ್ರೊಪಾಲಜಿಸ್ಟ್'ನಿಂದ "ಕಾನ್‌ಫಿಗರೇಶನ್ಸ್ ಆಫ್ ಕಲ್ಚರ್ ಇನ್ ನಾರ್ತ್ ಅಮೆರಿಕ" (ಉತ್ತರ ಅಮೆರಿಕದಲ್ಲಿ ಸಂಸ್ಕೃತಿಯ ವಿನ್ಯಾಸಗಳು); ಮತ್ತು 'ದಿ ಜರ್ನಲ್ ಆಫ್ ಜನರಲ್ ಸೈಕಾಲಜಿ'ಯಿಂದ 'ಎಂತ್ರೊಪಾಲಜಿ ಅಂಡ್ ದಿ ಅಬ್ನಾರ್ಮಲ್' (ಮಾನವಶಾಸ್ತ್ರ ಹಾಗೂ ಅತಿರೇಕಿ).

ಸೋರ್ಸರರ್ಸ್ ಆಫ್ ಡೋಬುವಿನ ಪ್ರಕಾಶಕರಾದ ಇ.ಪಿ. ಡಟನ್ ಅಂಡ್ ಕಂಪನಿಗೂ ನನ ಧನ್ಯವಾದಗಳು ಸಲ್ಲಬೇಕು.

ಕೊಲಂಬಿಯಾ ವಿಶ್ವವಿದ್ಯಾನಿಲಯ
ನ್ಯೂಯಾರ್ಕ್ ನಗರ

ರೂತ್ ಬೆನೆಡಿಕ್ಟ್

ಆರಂಭದಲ್ಲಿ ದೇವರು ಪ್ರತಿ ಜನಾಂಗಕ್ಕೂ ಒಂದೊಂದು ಮಣ್ಣಿನಬಟ್ಟಲನ್ನಿತ್ತನು; ಅವರು ತಮ್ಮ ತಮ್ಮ ಜೀವನವನ್ನು ಆಯಾ ಬಟ್ಟಲುಗಳಿಂದ ಸವಿದರು.

ಡಿಗ್ಗರ್ ಇಂಡಿಯನ್ನರ ಗಾದೆ

ಮುನ್ನುಡಿ

ಕಾಲುಶತಮಾನದಿಂದ, ರೂತ್ ಬೆನೆಡಿಕ್ಟ್ ಅವರ 'ಪ್ಯಾಟರ್ನ್ಸ್ ಆಫ್ ಕಲ್ಚರ್' (ಸಂಸ್ಕೃತಿಯ ರೂಪಿಕೆಗಳು) ಕೃತಿಯು ಮಾನವಶಾಸ್ತ್ರದ ಅರಿವಿಗೆ ಔಚಿತ್ಯಪೂರ್ಣವೂ, ಉದ್ದೀಪಕವೂ ಆದ ಪರಿಚಯವನ್ನು ಒದಗಿಸಿದೆ. ಹದಿನಾಲ್ಕು ಭಾಷೆಗಳಿಗೆ ಅದು ಅನುವಾದಗೊಂಡಿದ್ದು, ಈ ಪೀಠಿಕೆ ಬರೆಯುವ ವೇಳೆಗೆ ಮೆಂಟರ್ ಆವೃತ್ತಿಯೊಂದರಲ್ಲೇ 800, 000 ಪ್ರತಿಗಳು ಅಚ್ಚಾಗಿವೆ. 'ಪ್ಯಾಟರ್ನ್ಸ್ ಆಫ್ ಕಲ್ಚರ್' ಕೃತಿಯು ವಿಜ್ಞಾನಗಳೂ ಮಾನವಿಕಶಾಸ್ತ್ರಗಳೂ ಒಂದರಿಂದೊಂದು ದೂರವಾಗುತ್ತಿದ್ದ ಕಾಲವೊಂದರಲ್ಲಿ ಅವುಗಳನ್ನು ಕೂಡಿಸಿ ಹೆಣೆಯಲು ಸಹಾಯಕವಾಗಿದೆ.

ರೂತ್ ಬೆನೆಡಿಕ್ಟ್ ಮಾನವಶಾಸ್ತ್ರದಲ್ಲಿ 1921ರಲ್ಲಿ ಕಾರ್ಯ ಆರಂಭಿಸಿದರು. ಅಂದಿಗೆ 'ಸಂಸ್ಕೃತಿ' ಎಂಬ ಪದವು ಕೆಲವೇಮಂದಿ ವೃತ್ತಿಶೀಲ ಮಾನವಶಾಸ್ತ್ರಜ್ಞರ ಸಣ್ಣ ತಾಂತ್ರಿಕ ಗುಂಪಿನಲ್ಲಿ ಮಾತ್ರ ಬಳಕೆಯಲ್ಲಿದ್ದ ಒಂದು ಪದವಾಗಿತ್ತು. ಇಂದು ಅದೇ 'ಸಂಸ್ಕೃತಿ' ಎಂಬ ಪದವು ತಂದೆತಾಯಿಗಳಿಂದ ಮಕ್ಕಳಿಗೆ ಪ್ರಸರಣಗೊಳ್ಳುವ ಕ್ರಮಬದ್ಧವಾದ 'ಕಲಿತ ವರ್ತನೆ' ಎಂಬ ಅರ್ಥದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. ಇಂದು ವಿದ್ಯಾವಂತ ಪುರುಷರು ಮತ್ತು ಮಹಿಳೆಯರು ಒಂದು ಕಾಲಕ್ಕೆ ಇಲ್ಲವೇ ಒಂದು ಪ್ರದೇಶಕ್ಕೆ ಸಂಬಂಧಪಟ್ಟ ಮಾತನಾಡುವಾಗ ಬಳಸುವ ಪದ ಸಮೂಹಗಳಲ್ಲಿ 'ನಮ್ಮ ಸಂಸ್ಕೃತಿ' ಎಂಬುದನ್ನು ಅಪ್ರಯತ್ನವಾಗಿ ಬಳಸುವಷ್ಟು ಮಟ್ಟಿಗೆ, ಆಧುನಿಕ ಜಗತ್ತು ಸಂಸ್ಕೃತಿಯ ಭಾವನೆಯೊಂದಿಗೆ ಸುಲಭ ಬಾಂಧವ್ಯ ಬೆಳೆಸಿಕೊಂಡಿದೆ, ಅವರ ಕೀರ್ತಿ ಬಹಳ ಮಟ್ಟಿಗೆ ಈ ಗ್ರಂಥಕ್ಕೆ ಸಲ್ಲತಕ್ಕದ್ದು.

ಈ ಗ್ರಂಥವು ಹಲವಾರು ದೃಷ್ಟಿಗಳಿಂದ ಮಹತ್ವಪೂರ್ಣವಾಗಿದೆ. ಮೊದಲನೆಯದಾಗಿ, ವಿವಿಧ ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನದ ಮೂಲಕ ಜ್ಞಾನ ಹೆಚ್ಚಿಸಿಕೊಳ್ಳಲು ಆವಶ್ಯಕವಾಗಿರುವ ಅತ್ಯುತ್ತಮ ಪ್ರವೇಶ ಪರಿಚಯವನ್ನು ಈ ಗ್ರಂಥ ಒದಗಿಸುತ್ತದೆ. ಅದರ ಮೂಲಕ ನಮ್ಮಲ್ಲಿ ಸಾಮಾಜಿಕವಾಗಿ ಪ್ರಸರಣಗೊಂಡಿರುವ ರೂಢಿಬದ್ಧ ವರ್ತನೆಯನ್ನೂ ಇತರ, ವಿವಿಧ ವಿಚಿತ್ರ ಜನರ ವರ್ತನೆಗಳನ್ನು ಪಕ್ಕದಲ್ಲಿಟ್ಟು ಹೋಲಿಸಿ ನೋಡಬಹುದು. ರೂತ್ ಬೆನೆಡಿಕ್ಟ್ ಈ ತುಲನಾತ್ಮಕ ವಿಧಾನವನ್ನು ಬಳಸುವಾಗ್ಗೆ ಅಮೆರಿಕದ ಸಂಯುಕ್ತ ಸಂಸ್ಥಾನಗಳು, ಇಂಗ್ಲೆಂಡ್ ಹಾಗೂ ಫ್ರಾನ್ಸ್‌ಗಳಲ್ಲಿ ಬೆಳೆದು ಬರುತ್ತಿದ್ದ ಮಾನವಶಾಸ್ತ್ರ ವಿಜ್ಞಾನ ಸಮಸ್ತದ ಪರವಾಗಿ ಮಾತನಾಡುತ್ತಿದ್ದರು. ಸ್ಪಷ್ಟವಾದ ಸುಬದ್ಧ ಶೈಲಿಯಲ್ಲಿ ಮಾತನಾಡುತ್ತಿದ್ದುದು ಆಕೆಯ ವೈಶಿಷ್ಟ್ಯ.

ಈ ಆಧಾರದ ಮೇಲೆ ಆಕೆ ತಮ್ಮದೇ ಆದ ವಿಶೇಷ ಕೊಡುಗೆಯನ್ನು ನೀಡಿದರು. ಮಾನವ ಸಂಸ್ಕೃತಿಗಳು ಆಕೆಯ ದೃಷ್ಟಿಯಲ್ಲಿ ದೊಡ್ಡದಾಗಿ ನಿರೂಪಿತವಾದ ವ್ಯಕ್ತಿತ್ವಗಳು. ಒಂದು ಸಂಸ್ಕೃತಿಯು ಎಷ್ಟೇ ಸಣ್ಣದಾಗಿ ಹಿಂದುಳಿದುದಾಗಿರಲಿ, ಇಲ್ಲವೇ ಎಷ್ಟೇ ದೊಡ್ಡದಾಗಿ ಜಟಿಲವಾದುದಾಗಿರಲಿ, ಪ್ರತಿಯೊಂದು ಸಂಸ್ಕೃತಿಯನ್ನೂ, ಆಕೆಯ ದೃಷ್ಟಿಕೋನದಲ್ಲಿ ನೋಡುವುದು ಸಾಧ್ಯ. ಮಾನವೀಯ ನಿಗೂಢತೆಗಳ ದೊಡ್ಡ ಖಂಡವೃತ್ತದಿಂದ ಕೆಲವು ಸ್ವಭಾವ ಲಕ್ಷಣಗಳನ್ನು ಆರಿಸಿಕೊಂಡು ಅವುಗಳನ್ನು ಸತ್ವಪೂರ್ಣವಾಗಿ ಹಾಗೂ ಗಾಢವಾಗಿ ವಿಸ್ತರಣೆ ಮಾಡಿ, ಯಾವೊಬ್ಬ ವ್ಯಕ್ತಿಯೂ ತನ್ನ ಜೀವಮಾನದಲ್ಲಿ ಪರಿಷ್ಕರಿಸಲಾಗದಷ್ಟು ಮಟ್ಟಿಗೆ ಅವುಗಳನ್ನು ಆಯಾ ಸಂಸ್ಕೃತಿಗಳು ಪರಿಷ್ಕರಣ ಮಾಡಿವೆ ತಾವು ವರ್ಣಿಸಿದ ಸಂಸ್ಕೃತಿಗಳನ್ನು, ವೈಯಕ್ತಿಕ ವ್ಯಕ್ತಿತ್ವದ ವಿವರಣೆಗಳ ಆಧಾರಕ್ಕೆ ಅನುಗುಣವಾಗಿ ಅಪೋಲೋನಿಯನ್, ಡಯೋನೀಶಿಯನ್ ಮತ್ತು ಪ್ಯಾರನಾಯ್ಡ (ಮತಿಕಲ್ಪಿತ)ಎಂದು ಹೆಸರಿಸಿ ತಮ್ಮ ವಾದಕ್ಕೆ ತೀಕ್ಷ್ಣತೆಯನ್ನು ತಂದಿತ್ತರು. ಆದರೆ ಆಕೆ ಯಾವುದೇ ರೀತಿಯ ನಿರೂಪಣೆಯನ್ನೂ ಪ್ರತಿಪಾದಿಸಲಿಲ್ಲ ಎಲ್ಲ ಸಮಾಜಗಳಿಗೂ ನೀಚೆ ವಾದಕ್ಕೆ ಅನುಸಾರವಾದ ಇಲ್ಲವೇ ಮನೋರೋಗ ಶಾಸ್ತ್ರಕ್ಕೆ ಅನುಸಾರವಾದ ಶೀರ್ಷಿಕೆಗಳು ಹೊಂದುತ್ತವೆಂದು ಆಕೆ ನಂಬಿರಲಿಲ್ಲ. ಹಿಂದಿನ, ಇಂದಿನ ಹಾಗೂ ಮುಂದಿನ, ಎಲ್ಲ ಮಾನವ ಸಮಾಜಗಳನ್ನೂ ಅಳವಡಿಸಬಲ್ಲಂತಹ ಒಂದು ಸಾರಾವೃತ ಪದ್ಧತಿಯನ್ನು ನಿರ್ಮಿಸಬಹುದೆಂದೂ ಆಕೆ ನಂಬಿರಲಿಲ್ಲ. ಪ್ರತಿಯಾಗಿ ಸಾಧನೀಯವಾದ ಸಂಯೋಜನೆಗಳು, ಅಕ್ಷಯವೆನ್ನುವಷ್ಟು ಮಟ್ಟಿಗೆ ಅನೇಕವೂ, ವಿವಿಧವೂ ಆಗಿರುವುದರಿಂದ, ವಿಕಾಸಗೊಳ್ಳುತ್ತಿರುವ ಮಾನವ ಸಂಸ್ಕೃತಿಗಳಿಗೆ ಯಾವ ಇತಿಮಿತಿಯನ್ನೂ ವಿಧಿಸುವುದು ಅಸಾಧ್ಯ ಎಂಬ ರೇಖಾಚಿತ್ರಣಕ್ಕೆ ಆಕೆ ಬದ್ಧರಾಗಿದ್ದರು. ಮೊದಲಿಗೆ ವ್ಯಕ್ತಿಯು ಸಂಸ್ಕೃತಿಯ ಸೃಷ್ಟಿಯೆಂದೂ, ಆ ಕಾರಣದಿಂದ ಅವನು ಹುಟ್ಟಿನಿಂದ ಇಲ್ಲವೇ ಆಕಸ್ಮಿಕವಾಗಿ ಅಡ್ಡದಾರಿಯಲ್ಲಿ ಬೆಳೆಯಬೇಕಾಗಿ ಬಂದರೆ ತನ್ನ ಸ್ಥಾನದಿಂದ ಉಂಟಾಗುವ ಕ್ಲೇಶಗಳಿಗೆ ತಾನು ಎಷ್ಟು ಮಟ್ಟಿಗೂ ಹೊಣೆಗಾರನಲ್ಲವೆಂದೂ ಆಕೆ ನಂಬಿದ್ದರು. ಆದರೆ ವಿವಿಧ ಸಂಸ್ಕೃತಿಗಳನ್ನು ಕುರಿತ ಅರಿವು ಬೆಳದಂತೆ ಈ ಆರಂಭ ಭಾವನೆಯು, ಎಲ್ಲಿ ಮತ್ತು ಯಾವ ವಿಧಾನಗಳಿಂದ ಮಾನವನು ತನ್ನ ಅತ್ಯುನ್ನತ ಕಲ್ಪನೆಗೆ ಸಮೀಪವರ್ತಿಯಾದ ಸಂಸ್ಕೃತಿಯನ್ನು ರೂಪಿಸಿಕೊಳ್ಳಲು ಸಾಧ್ಯ ಎಂಬ ವಿಚಾರದ ವಿವರಪೂರ್ಣ ಚಿಂತನೆಗೆ ದಾರಿಮಾಡಿಕೊಟ್ಟಿತು. ಅದು ಕಾರ್ಯಸಾಧ್ಯವೆಂಬ ವಿಶ್ವಾಸವೂ ಬೆಳೆಯಿತು.

ರೂತ್ ಬೆನೆಡಿಕ್ಟ್ ಮೂಲತಃ ಸಾಹಿತ್ಯ ಜಿಜ್ಞಾಸು. ಆಕೆ 'ನಿಜವಾಗಿಯೂ ಮಹತ್ವಪೂರ್ಣವಾದ ಹಾಗೂ ಇದುವರಗೆ ಕಂಡರಿಯದ ದೇಶವೊಂದನ್ನು ಕಾಣಬೇಕು,' ಎಂಬ ಆಸೆ ಹೊತ್ತಿದ್ದರು. ಮೊದಲಿಗೆ, 'ತನ್ನ ಸ್ವಂತ ಭಾಷೆ ಎನ್ನುವಷ್ಟರ

ಮಟ್ಟಿಗೆ' ರಷ್ಯನ್ ಇಲ್ಲವೇ ಫ್ರೆಂಚ್ ಭಾಷೆಯನ್ನು ಕಲಿಯುವುದೇ ಎಂದು ಭಾವಿಸಿದರು. ಕಾಲಕ್ರಮೇಣ ಆಕೆಯು ಪ್ರತಿಯೊಂದು ಆದಿವಾಸಿ ಸಂಸ್ಕೃತಿಯೂ, ಸಾಹಿತ್ಯ ಅಥವಾ ಕಲೆಯು ಒಂದು ಮಹಾನ್ ಕೃತಿಯೊಂದಿಗೆ ಹೋಲಿಸಿ ನೋಡಬಹುದಾದಂತಹ ಅಸ್ತಿತ್ವವೊಂದನ್ನು ಪ್ರತಿನಿಧಿಸುತ್ತದೆ ಎಂದು ಕಂಡುಕೊಂಡಳು. ಒಂದು ಮಡಕೆಯ ಅಂಚಿನ ಮೇಲೆ ಕೊರೆದಿರುವ ಆಕಾರಗಳನ್ನು ಸಿಸ್ಟೈನ್ ಚಾಪೆಲ್ಲಿನ ಒಳಮಾಳಿಗೆಗೋ. ಇಲ್ಲವೇ ಹಣ್ಣು ಆಯುವಾಗ ಹಾಡುವ ಗೀತೆಗಳನ್ನು ಶೇಕ್ಸ್‌ಪಿಯರನ ಕಾವ್ಯದೊಂದಿಗೋ ಹೋಲಿಸಿ ನೋಡುವುದಕ್ಕೆ ಪ್ರತಿಯಾಗಿ ಆಧುನಿಕ ಮಹಾನ್ ಕಲಾಕೃತಿಯೊಂದನ್ನು ಆದಿವಾಸಿ ಸಂಸ್ಕೃತಿಯೊಂದಿಗೆ ಹೋಲಿಸಿ ನೋಡುವುದೇ ಸೂಕ್ತವಾದ ಕ್ರಮ ಎಂದು ಭಾವಿಸಿದಳು. ಯಾವುದೋ ಒಂದು ಆದಿವಾಸಿ ಸಂಸ್ಕೃತಿಯನ್ನು ಮಾತ್ರವೇ ಹೋಲಿಸಿ ನೋಡಿದಾಗ್ಗ ಅವು ಹೇಳಿಕೊಳ್ಳುವಂತಹ ವಿಶೇಷವನ್ನೇನೂ ಸೂಚಿಸುವುದಿಲ್ಲ, ಆದರೆ ಈ ಸಂಸ್ಕೃತಿಗಳನ್ನು ಸಮಸ್ತವಾಗಿ ಅಂದರೆ ಮಂತ್ರ, ಧರ್ಮ, ಪುರಾಣ, ಸ್ತ್ರೀ ಪುರುಷರ ದೈನಂದಿನ ಜೀವನ ವಿಧಾನಗಳು ಈ ಎಲ್ಲವನ್ನೂ ಕೂಡಿಸಿದ ಸಮಷ್ಟಿಗಳಾಗಿ ನೋಡಿದರೆ ಅವುಗಳಲ್ಲಿ ತೋರಿಬರುವ ಆಂತರಿಕ ಸಾಮರಸ್ಯತೆ ಹಾಗೂ ಗಹನವಾದ ಹೆಣೆತಗಳು ಯಾವುದೇ ಪರಿಶೋಧಕನಿಗಾದರೂ ಕಲಾಕೃತಿಯೊಂದು ನೀಡುವಂತೆ ರಸಜ್ಞತಾ ತೃಪ್ತಿಯನ್ನು ನೀಡಬಲ್ಲವು.

'ಪ್ಯಾಟರ್ನ್ಸ್ ಆಫ್ ಕಲ್ಚರ್' ಕೃತಿಯು ಇನ್ನೊಂದು ಮಟ್ಟದಲ್ಲಿ ರೂತ್ ಬೆನೆಡಿಕ್ಟ್ ಅವರ ಜೀವನದ ಕೇಂದ್ರ ಸಮಸ್ಯೆಗೆ ಸಂಬಂಧಪಟ್ಟುದು. ನಿರ್ದಿಷ್ಟವಾದ ಅನುವಂಶೀಯ ಸಾಮರ್ಥ್ಯ ಮತ್ತು ವಿಶಿಷ್ಟವಾದ ಜೀವನ ಇತಿಹಾಸವನ್ನು ಹೊಂದಿರುವ ಪ್ರತಿಯೊಬ್ಬ ಮಾನವ ಜೀವಿಗೂ, ಅವನು ಬಾಳುತ್ತಿರುವ ಸಂಸ್ಕೃತಿಗೂ ಸಂಬಂಧವೇನು ಎಂಬುದು ಆ ಸಮಸ್ಯೆ. ಆಕೆ ತನ್ನ ಸ್ವಂತ ವ್ಯಕ್ತಿತ್ವವನ್ನು ಅರಸುವುದಕ್ಕೆ ತೊಡಗಿ, ಮೇಲಿಂದ ಮೇಲೆ ತಾನು ಪ್ರಸಕ್ತ ಅಮೆರಿಕಕ್ಕಿಂತ ಬೇರಾವುದಾದರೂ ಕಾಲಕ್ಕೆ ಇಲ್ಲವೇ ಸಂಸ್ಕೃತಿಗೆ ಹೆಚ್ಚು ಸೂಕ್ತವಾದ ರೀತಿಯಲ್ಲಿ ಹೊಂದಿಕೆಯಾಗುತ್ತಿದ್ದೆನೋ ಎಂದು ಕೌತುಕಗೊಳ್ಳುತ್ತಿದ್ದಳು. ಒಂದು ಸಂಸ್ಕೃತಿಯಲ್ಲಿ ಅತಿರೇಕಿಯೆಂದೋ, ನಿಷ್ಪ್ರಯೋಜಕನೆಂದೋ ಕರೆಸಿಕೊಳ್ಳುವಂತಹ ಮುಮುಕ್ಷು, ಪ್ರವಾದಿ, ಕಲಾವಿದ ಮುಂತಾದವರ ವಿಪರೀತವರ್ತನೆಗಳಿಗೆ ಬೇರೊಂದು ಸಂಸ್ಕೃತಿಯಲ್ಲಿ ಎಷ್ಟು ಮಟ್ಟಿನ ಸ್ಥಾನ ದೊರೆಯುತ್ತದೆ ಎಂಬುದರ ಬಗ್ಗೆ ಆಕೆ ವಿಶೇಷವಾಗಿ ಆಸಕ್ತಿ ತಳೆದಿದ್ದಳು. ಮಾನಸಿಕ ಆರೋಗ್ಯದ ಅಧ್ಯಯನ ಮಾಡುವವರು ಈ ಸಮಸ್ಯೆಯನ್ನು ಸಹಜ ಮತ್ತು ಅತಿರೇಕ ವರ್ತನೆಯೆಂದು ಭಾವಿಸಿ ನೋಡುವಂತೆ ಆವಳು ನೋಡುತ್ತಿರಲಿಲ್ಲ. ಸಂಸ್ಕೃತಿಗಳಿಗೂ ಅತಿರೇಕತೆಗೂ ಇರುವ ಸಂಬಂಧವನ್ನು ಕುರಿತು ಆಕೆ ಪ್ರಶ್ನಿಯೆತ್ತಿದ್ದುದರಿಂದ, ಸಂಸ್ಕೃತಿಯಿಂದ ಸಂಸ್ಕೃತಿಗೆ

ಹೇಗೆ ಮನೋರೋಗಗಳು ವ್ಯತ್ಯಾಸಗೊಳ್ಳುತ್ತವೆ ಎಂಬುದರಲ್ಲಿ ಆಸಕ್ತಿಯುಳ್ಳ ಜಿಜ್ಞಾಸುಗಳಿಗೆ ಆಕೆ ದಾರಿತೋರಿಕೊಟ್ಟಳು. ಸಹಜವರ್ತನೆ ಎಂಬುದನ್ನು ಸಂಕುಚಿತವಾಗಿ ಸೂತ್ರೀಕರಿಸುವುದರಿಂದ ಕೆಲವು ನಿರ್ದಿಷ್ಟವಾದ ಸಾಹಸ ಸಾಮರ್ಥ್ಯಗಳು ಹೇಗೆ ದಂಡನೆಗೋ, ಇಲ್ಲವೆ ಪಕ್ಷಪಾತಕ್ಕೋ ಗುರಿಯಾಗುತ್ತವೆ ಎಂಬ ಸಾಂಸ್ಕೃತಿಕ ಸೂತ್ರೀಕರಣಗಳು ವಿಶಾಲಗೊಂಡಂತೆ ಅದೇ ಸಹಜ ಸಾಮರ್ಥ್ಯಗಳು ಸಂಸ್ಕೃತಿಗಳನ್ನು ಹೇಗೆ ಶ್ರೀಮಂತಗೊಳಿಸಿ, ಈಗ ಸಾಂಸ್ಕೃತಿಕ ನಿಯಮಗಳನ್ನು ಅತಿರೇಕಿಗಳು ಹೊರುತ್ತಿರುವ ತಿರಸ್ಕಾರದ ಹೊರೆಯು ಹೇಗೆ ಹಗುರಗೊಂಡೀತು ಎಂಬುದೂ ಆಕೆಯ ವಿಶೇಷ ಗಮನಕ್ಕೆ ಪಾತ್ರವಾಗಿದ್ದ ಪ್ರಶ್ನೆಗಳು, ಆಕೆ ತಮ್ಮ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳೊಂದಿಗೆ ಪಡೆದಿದ್ದ ಸಂಬಂಧದಲ್ಲಿ ಅಸಾಧಾರಣ ಪ್ರತಿಭೆ ಅಥವಾ ವ್ಯಕ್ತಿಗತ ಅದೃಷ್ಟ, ಅಪೂರ್ವ ಸಂಯೋಜನೆ. ಅಸದೃಶವಾದ ವೈಶಿಷ್ಟ್ಯತೆ ಮೊದಲಾದ ಅಂಶಗಳು ಆಕೆಯಲ್ಲಿ ಕ್ರಿಯಾಶೀಲ ಉತ್ಸುಕತೆಯನ್ನೂ, ಶೀಘ್ರ ಅನುಕಂಪವನ್ನೂ ಎಬ್ಬಿಸುತ್ತಿದ್ದವು.

ಕೊನೆಯದಾಗಿ ಸಂಸ್ಕೃತಿಯು ಹೇಗೆ ಕೆಲಸ ಮಾಡುತ್ತದೆ ಎಂಬ ಅರಿವು, ಮಾನವ ಕುಲಕ್ಕೆ ತನ್ನ ಭವಿಷ್ಯ ಜೀವನದ ಮೇಲೆ ಹಿಂದೆ ಎಂದೂ ಇರದಿದ್ದಷ್ಟು ಹತೋಟಿಯನ್ನು ತಂದುಕೊಡುತ್ತದೆ ಎಂಬ ಆಕೆಯ ದೃಢ ವಿಶ್ವಾಸದಿಂದಾಗಿ 'ಪ್ಯಾಟರ್ನ್ಸ್ ಆಫ್ ಕಲ್ಚರ್' ಕೃತಿ ಜೀವಂತವಾಗಿದೆ ಎಂದು ನನ್ನ ನಂಬಿಕೆ. ಮೊದಲಿಗೆ ತನ್ನ ಸಂಸ್ಕೃತಿಯ ಜಾಲದ ಬಲದಲ್ಲಿ ಸಿಕ್ಕಿ ಬಿದ್ದಿದ್ದ ಓದುಗನು ಅದೇ ಸಂಸ್ಕೃತಿಯ ಜಾಲದ ಬಲವನ್ನು ಮಾನವಕುಲದ ಹಿನ್ನೆಲೆಯಲ್ಲಿ ಕಂಡುಕೊಂಡಾಗ ಆ ಅರಿವಿನಿಂದ ಕೌತುಕಗೊಳ್ಳುತ್ತಾನೆ. ಕಾಲ ಉರುಳಿದಂತೆ ರೂತ್ ಬೆನೆಡಿಕ್ಟ್‌ಳಿಗೆ ಬುಡಕಟ್ಟು, ಶಿಕ್ಷಣ, ಯುದ್ಧದಲ್ಲಿ ಜಯ, ಶಾಂತಿಯಲ್ಲಿ ಯಶಸ್ಸು ಮೊದಲಾದುವುಗಳತ್ತ ತಳೆಯಬಹುದಾದ ಮನೋಭಾವಗಳ ಹೊಣೆಗಾರಿಕೆ ಹೆಚ್ಚಿದಂತೆ ಈ ವಿಶ್ವಾಸ ಬಲಗೊಂಡಿತು.

1939ರಲ್ಲಿ ನಾಜಿ ಬುಡಕಟ್ಟು ಸಿದ್ಧಾಂತವು ಎಲ್ಲೆಲ್ಲಿಯೂ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟು ಮಾಡಿತು. ಆಗ ಆರು ತಿಂಗಳ ಬಿಡುವಿನ ವೇಳೆಯಲ್ಲಿ ಆಕೆ ತನ್ನ ಕಾಲವನ್ನು 'ರೇಸ್, ಸೈನ್ಸ್ ಅಂಡ್ ಪಾಲಿಟಿಕ್ಸ್' (ಬುಡಕಟ್ಟು–ವಿಜ್ಞಾನ ಹಾಗೂ ರಾಜಕೀಯ) ಎಂಬ ಕೃತಿಯನ್ನು ರಚಿಸಲು ವಿನಿಯೋಗಿಸಿದಳು. ಯುದ್ಧ ಕಾಲದ ಸ್ಥಿತಿಗತಿಗಳಿಂದಾಗಿ ರುಮೇನಿಯ, ಜರ್ಮನಿ, ನೆದರ್‌ಲೆಂಡ್ಸ್, ಥಾಯ್‌ಲೆಂಡ್ ಮತ್ತು ಜಪಾನ್ ಮೊದಲಾದ ದೇಶಗಳನ್ನು ಪ್ರವೇಶಿಸುವುದು ಅಸಾಧ್ಯವಾಗಿತ್ತು. ಆದರೆ ಆಗಲೂ ಆ ದೇಶಗಳ ಸಂಸ್ಕೃತಿಗಳ ಬಗ್ಗೆ ಮಾಹಿತಿ ನೀಡಬಲ್ಲವರೊಂದಿಗೆ ಶ್ರಮಿಸಿ, ಆಯಾ ಸಂಸ್ಕೃತಿಗಳನ್ನು ವಿಶ್ಲೇಷಿಸಲು ಆಕೆ ತಮ್ಮ ಪ್ರತಿಭೆಯನ್ನು ವಿನಿಯೋಗಿಸಿದಳು. ಯುದ್ಧದ ಕೊನೆಯ ವೇಳೆಗೆ ಆಕೆ "ದಿ ಕ್ರಿಸ್ಯಾಂತೆಮಮ್ ಅಂಡ್ ದಿ ಸ್ವೋರ್ಡ್" (ಸೇವಂತಿಗೆ

ಮತ್ತು ಕತ್ತಿ) ಕೃತಿಯನ್ನು ರಚಿಸಿದಳು. ಹೊಸ ಹಾದಿಗಳನ್ನು ಹಿಡಿಯಲು ಜಪಾನೀಯರಿಗೆ ಸಾಮರ್ಥ್ಯವಿದೆ ಎಂಬ ಅರಿವು ಯುದ್ಧಾನಂತರದಲ್ಲಿ ಅಮೆರಿಕವು ಜಪಾನಿನೊಂದಿಗೆ ಬೆಳೆಸಿಕೊಳ್ಳಬಹುದಾದ ಸಂಬಂಧಗಳಲ್ಲಿ ಹೆಚ್ಚು ವಿವೇಚನಾಶಕ್ತಿಯನ್ನು ನೀಡಿತು ಎಂಬುದು ಆ ಕೃತಿಯ ಮುಖ್ಯ ಉದ್ದೇಶ ಹಾಗೂ ಆಸೆಯಾಗಿತ್ತು. ಶೋಧನೆ ಹಾಗೂ ಕಾರ್ಯ ನೀತಿ ನಿರ್ಧಾರಗಳನ್ನು ಒಟ್ಟುಗೂಡಿಸುವಲ್ಲಿ ಆಕೆ ಪಡೆದಿದ್ದ ವರ್ಷಾಂತರಗಳ ಅನುಭವದಿಂದ ಬಲಗೊಂಡ ದೃಢವಿಶ್ವಾಸ ಆ ಕೃತಿಯಲ್ಲಿದೆ. ಆದರೆ ಮನುಷ್ಯರು ತಮ್ಮ ಜೀವನ ಗುರಿಗಳನ್ನು ಸಾಧಿಸುವುದಕ್ಕೆ ಮಾನವಶಾಸ್ತ್ರವು ಹೇಗೆ ಪ್ರಯೋಜನವಾಗಬಲ್ಲುದು ಎಂಬ ಪ್ರತಿಪಾದನೆಯು 'ಪ್ಯಾಟರ್ನ್ಸ್ ಆಫ್ ಕಲ್ಚರ್'ನಲ್ಲಿ ಹೊಚ್ಚ ಹೊಸದಾಗಿಯೂ, ಹಸುರು ಚಿಗುರಾಗಿಯೂ ಇದೆ. ಈ ಹೊಸತನ ಆಕೆಯ ಮಾತುಗಳ ಮೇಲೆ ಇಬ್ಬನಿಯಂತೆ ಹರಡಿಕೊಂಡು, ಜಗತ್ತನ್ನು ಕುರಿತು ಈ ದೃಷ್ಟಿ ಕೋನದೊಂದಿಗೆ ಮೊಟ್ಟಮೊದಲ ಬಾರಿಗೆ ಸಮಾಗಮಗೊಳ್ಳುವ ಓದುಗನಿಗೆ ಸುಸ್ವಾಗತ ನೀಡುತ್ತಿದೆ

ಮಾರ್ಗರೆಟ್ ಮೀಡ್

ಪೀಠಿಕೆ

ಪ್ರಸ್ತುತ ಶತಮಾನದಲ್ಲಿ ಸಾಮಾಜಿಕ ಮಾನವಶಾಸ್ತ್ರದ ಸಮಸ್ಯೆಗಳನ್ನು ಕುರಿತ ಹಲವಾರು ಹೊಸ ಮಾರ್ಗಗಳು ಬೆಳೆದುಕೊಂಡಿವೆ. ಸಹಜ ಸನ್ನಿವೇಶಗಳಿಂದ ಕಿತ್ತು ತೆಗೆದ ಅಲ್ಪಸ್ವಲ್ಪ ಸಾಕ್ಷ್ಯಾಧಾರಗಳನ್ನು, ಎಲ್ಲ ಕಾಲಗಳಿಂದಲೂ, ಪ್ರಪಂಚದ ಎಲ್ಲ ದೇಶಗಳಿಂದಲೂ ಕೂಡಿಸಿ ಅವುಗಳ ಆಧಾರದ ಮೇಲೆ ಮಾನವನ ಸಾಂಸ್ಕೃತಿಕ ಇತಿಹಾಸವನ್ನು ನಿರ್ಮಿಸುವ ಹಳೆಯ ವಿಧಾನವು ತನ್ನ ಪ್ರಭಾವವನ್ನು ಕಳೆದುಕೊಂಡಿದೆ. ಅದರ ಹಿಂದೆಯೇ ಕೆಲವು ವಿಶೇಷ ಲಕ್ಷಣಗಳ ವ್ಯಾಪನೆಗಳನ್ನು ಕುರಿತು ಅಧ್ಯಯನ ಮಾಡಿ, ಪ್ರಾಚ್ಯಶಾಸ್ತ್ರೀಯ ಸಾಕ್ಷ್ಯಾಧಾರಗಳನ್ನು ಪೂರಕವಾಗಿ ಬಳಸಿಕೊಂಡು ಐತಿಹಾಸಿಕ ಬಾಂಧವ್ಯಗಳನ್ನು ಪುನರ್ರಚಿಸುವ ಕ್ರಮ ಸಾಧ್ಯ ಪ್ರಯತ್ನಗಳು ನಡೆದುವು. ವಿವಿಧ ಸಾಂಸ್ಕೃತಿಕ ಲಕ್ಷಣಗಳ ನಡುವೆ ಸ್ಥಿರವಾದ ಸಂಬಂಧಗಳಿವೆಯೆಂದು ಪ್ರತಿಪಾದಿಸಲು ಪ್ರಯತ್ನಗಳು ನಡೆದುವು. ವಿಶಾಲ ವ್ಯಾಪ್ತಿಯ ಐತಿಹಾಸಿಕ ಸಂಬಂಧಗಳನ್ನು ಸ್ಥಾಪಿಸಲು ಇವುಗಳನ್ನು ಬಳಸಿಕೊಳ್ಳಲಾಯಿತು. ಪ್ರಾಯಿಕವಾದ ಸಂಸ್ಕೃತಿಯ ಇತಿಹಾಸದ ಆಧಾರ ಕಲ್ಪನೆಗಳಲ್ಲಿ ಸಾದೃಶ್ಯವಾದ ಸಾಂಸ್ಕೃತಿಕ ಲಕ್ಷಣಗಳು ಸ್ವತಂತ್ರವಾಗಿ ಅರಳುವುದು ಸಾಧ್ಯ ಎಂಬುದು ಒಂದು. ಈ ಆಧಾರ ಕಲ್ಪನೆಯನ್ನು ತಳ್ಳಿ ಹಾಕಲಾಯಿತು. ಇಲ್ಲವೇ ಪ್ರಭಾವ ಹೀನ ಸ್ಥಾನಕ್ಕೆ ಇಳಿಸಲಾಯಿತು. ವಿಕಾಸಾತ್ಮಕ ವಿಧಾನ ಹಾಗೂ ಸ್ವತಂತ್ರ ಸ್ಥಾನೀಯ ಸಂಸ್ಕೃತಿಗಳ ವಿಶ್ಲೇಷಣೆ–ಇವೆರಡೂ ಸಾಂಸ್ಕೃತಿಕ ರೂಪಗಳ ಅನುಕ್ರಮವನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ಮಗ್ನವಾದುವು. ವಿಕಾಸಾತ್ಮಕ ವಿಧಾನದಿಂದ ಸಂಸ್ಕೃತಿ ಮತ್ತು ನಾಗರೀಕತೆಗಳ ಇತಿಹಾಸದ ಒಂದು ಸಮಗ್ರ ಚಿತ್ರಣವನ್ನು ಪಡೆಯುವುದು ಸಾಧ್ಯ ಎಂದು ಆಶಯ ತಳೆಯಲಾಗಿತ್ತು. ಸ್ವತಂತ್ರ ಸ್ಥಾನೀಯ ಸಂಸ್ಕೃತಿಗಳ ವಿಶ್ಲೇಷಣೆಗೆ ಬದ್ಧರಾದವರು, ಅವರಲ್ಲಿಯೂ ಹೆಚ್ಚು ಸಂಪ್ರದಾಯಿಗಳಾದವರು, ಪ್ರತಿಯೊಂದು ಸಂಸ್ಕೃತಿಯನ್ನು ಒಂದು ಘಟಕವಾಗಿ, ಒಂದು ಪ್ರತ್ಯೇಕ ಐತಿಹಾಸಿಕ ಸಮಸ್ಯೆ ಎಂಬ ದೃಷ್ಟಿಯಿಂದ ನೋಡುತ್ತಿದ್ದರು.

ಸಂಸ್ಕೃತಿಗಳ ತೀವ್ರ ವಿಶ್ಲೇಷಣೆಯು ಪ್ರಭಾವದಿಂದಾಗಿ, ಸಾಂಸ್ಕೃತಿಕ ರೂಪಗಳಿಗೆ ಸಂಬಂಧಪಟ್ಟ ವಿಷಯವಸ್ತು ಸಂಗ್ರಹಣೆಯು ಅನಿವಾರ್ಯವಾಗಿ, ಪ್ರಬಲವಾದ ಉತ್ತೇಜನವನ್ನು ಪಡೆಯಿತು. ಹೀಗೆ ಸಂಗ್ರಹವಾದ ವಸ್ತುವು ಸಾಮಾಜಿಕ ಜೀವನದ ಬಗ್ಗೆ ವಿವರಗಳನ್ನೊದಗಿಸಿತು. ಆದರೆ ಅವು ಆರ್ಥಿಕ ಜೀವನ ಕಾರ್ಯತಂತ್ರಗಳು, ಕಲೆ, ಸಮಾಜವ್ಯವಸ್ಥೆ ಮತಧರ್ಮ ಮೊದಲಾದ ಖಚಿತವಾದ ಪ್ರತ್ಯೇಕ ಪ್ರತ್ಯೇಕವಾದ ವರ್ಗಗಳಾಗಿದ್ದು ಅವುಗಳನ್ನೆಲ್ಲ ಒಂದುಗೂಡಿಸುವ ಸೂತ್ರವನ್ನು ಕಂಡುಹಿಡಿ

ಯುವುದು ಕಠಿಣವಾಗಿತ್ತು. ಮಾನವಶಾಸ್ತ್ರಜ್ಞನ ಸ್ಥಿತಿಯು ಗೋಡೆಯು ಅಣಕವಾಡಿದ ಸ್ಥಿತಿಯಂತೆ ಇತ್ತು.

Wel will was Lebendig' s erkennen und beschereiben,
Sucht erst den Geist heraus zu treiben.
Dann hat er die Tile in seiner Hand.
Fehlt leider nur das geistige Band,

(ಜೀವನದಲ್ಲಿ ಉತ್ಕಟ ಆಕಾಂಕ್ಷೆ, ಗೀಳು, ತನ್ಮಯತೆ ಇವುಗಳೆಲ್ಲವುಗಳ ಮೂಲ ಬುದ್ಧಿಯಲ್ಲಿದೆಯೆಂದು ಕಂಡು ಸೂತ್ರೀಕರಿಸಿದಾತನು ತನ್ನ ಸುತ್ತಿನಲ್ಲಿಯೇ ಬೌದ್ಧಿಕ ಕ್ರಿಯೆಯ ಆ ಮುಖದ ಸೆಲೆಯನ್ನೂ ಕಾಣಲಾಗಲಿಲ್ಲ ಎಂದು ಪದ್ಯದ ಭಾವಾರ್ಥ.)

ಹೀಗೆ ಜೀವಂತ ಸಂಸ್ಕೃತಿಗಳಲ್ಲಿ ಮಗ್ನರಾದುದು ಪ್ರತಿಯೊಂದು ಸಂಸ್ಕೃತಿಯ ಸಮಗ್ರತೆಯನ್ನು ಕುರಿತು ತೀವ್ರಾಸಕ್ತಿಯನ್ನು ಹುಟ್ಟಿಸಿದೆ. ಸಂಸ್ಕೃತಿಯ ಯಾವುದೊಂದು ಸ್ವಭಾವ ಲಕ್ಷಣವನ್ನೂ ಸಹ ಅದರ ಸಾಮಾನ್ಯ ಹಿನ್ನೆಲೆಯಿಂದ ಹೊರತೆಗೆದು ಅರಿತುಕೊಳ್ಳುವುದು ಅಸಾಧ್ಯ ಎಂಬ ಭಾವನೆ ಪ್ರಬಲವಾಗುತ್ತಿದೆ. ಒಂದು ಸಮಗ್ರ ಸಂಸ್ಕೃತಿಯು ಒಂದು ತಂಡದ ಪರಿಸ್ಥಿತಿಗಳ ಅಂಕೆಗೆ ಒಳಗಾಗಿದೆ ಎಂದು ಕಲ್ಪಿಸಿಕೊಳ್ಳುವ ಪ್ರಯತ್ನಗಳು, ಸಮಸ್ಯೆಯನ್ನು ಬಗೆಹರಿಸಲಿಲ್ಲ, ಶುದ್ಧವಾದ ಮಾನವೀಯ. ಭೌಗೋಳಿಕ, ಆರ್ಥಿಕ ಅಥವಾ ಇತರ ಬಾಹ್ಯ ನಿಷ್ಠ ವಿಧಾನಗಳು ವಿರೂಪ ಚಿತ್ರಣಗಳನ್ನು ನೀಡುತ್ತವೆ ಎಂದು ಭಾಸವಾಯಿತು.

ಒಂದು ಸಂಸ್ಕೃತಿಯ ಅರ್ಥವನ್ನು ಸಮಗ್ರವಾಗಿ ಮನನ ಮಾಡಿಕೊಳ್ಳುವ ಪ್ರಯತ್ನವು, ಪ್ರಮಾಣ ಭೂತವಾದ ವರ್ತನೆಯ ವಿವರಣೆಗಳನ್ನು ಇತರ ಸಮಸ್ಯೆಗಳಿಗೆ ದಾರಿಮಾಡಿಕೊಡುವ ಒಂದು ಹಂತವೆಂದು ಮಾತ್ರ ಪರಿಗಣಿಸಬೇಕಾಗಿ ಬರುವಂತೆ ಕಡ್ಡಾಯ ತಂದೊಡ್ಡುತ್ತದೆ. ವ್ಯಕ್ತಿಯು ತನ್ನ ಸಂಸ್ಕೃತಿಯಲ್ಲಿ ಬಾಳುತ್ತಿರುವಂತೆ, ಸಂಸ್ಕೃತಿಯು ವ್ಯಕ್ತಿಗಳನ್ನು ಬಾಳಿಸುತ್ತಿರುವಂತೆ. ನಾವು ಅರಿತುಕೊಳ್ಳಬೇಕು. ಈ ಸಮಾಜೀಯ-ಮಾನವಶಾಸ್ತ್ರ ಸಮಸ್ಯೆಗಳಲ್ಲಿ ಆಸಕ್ತಿವಹಿಸುವುದು ಯಾವ ಬಗೆಯಲ್ಲೂ ಐತಿಹಾಸಿಕ ಮಾರ್ಗಕ್ಕೆ ವಿರೋಧಿಯಲ್ಲ. ತದ್ವಿರುದ್ಧವಾಗಿ, ಈ ವಿಧಾನವು ಸಾಂಸ್ಕೃತಿಕ ಮಾರ್ಪಾಡುಗಳನ್ನುಂಟು ಮಾಡುವಲ್ಲಿ ಕ್ರಿಯಾಶೀಲವಾಗಿರುವ ಪ್ರೇರಕ ಪ್ರತಿಕ್ರಿಯೆಗಳನ್ನು ಎತ್ತಿ ತೋರುತ್ತದೆ. ಇದರಿಂದ ಅನ್ಯೋನ್ಯ ಸಂಬಂಧವುಳ್ಳ ಸಂಸ್ಕೃತಿಗಳನ್ನು ವಿವರವಾಗಿ ತುಲನೆ ಮಾಡುವುದರಿಂದ ದೊರೆಯುವ ಸಾಕ್ಷ್ಯಾಧಾರಗಳನ್ನು ಮೌಲ್ಯಮಾಪನ ಮಾಡಲು ಅವಕಾಶವಾಗುತ್ತದೆ.

ವಿಷಯವಸ್ತುವಿನ ಲಕ್ಷಣದಿಂದಾಗಿ, ಸಾಂಸ್ಕೃತಿಕ ಜೀವನದ ಸಮಸ್ಯೆಯು ಆಗಾಗ್ಗೆ ಸಂಸ್ಕೃತಿಯ ವಿವಿಧ ಅಂಶಗಳ ಪರಸ್ಪರ ಸಂಬಂಧದ ಸಮಸ್ಯೆಯಾಗಿ ತೋರಿಬರುವುದುಂಟು. ಕೆಲವು ಪ್ರಸಂಗಗಳಲ್ಲಿ ಈ ಅಧ್ಯಯನವು ಸಂಸ್ಕೃತಿಯೊಂದರಲ್ಲಿನ ಸಮಗ್ರ

ವತೆಯ ತೀವ್ರತೆ ಅಥವಾ ಕೊರತೆಯನ್ನು ಇನ್ನೂ ಚೆನ್ನಾಗಿ ಗ್ರಹಿಸಲು ದಾರಿ ಮಾಡಿ ಕೊಡುತ್ತದೆ. ಇದು ಸಂಸ್ಕೃತಿಯ ವಿವಿಧ ನಮೂನೆಗಳಲ್ಲಿ ತೋರಿಬರುವ ಸಮಗ್ರತೆಯ ರೂಪಗಳನ್ನು ಸ್ಪಷ್ಟಗೊಳಿಸಿ, ಸಂಸ್ಕೃತಿಯ ವಿವಿಧ ಅಂಶಗಳ ನಡುವಣ ಪರಸ್ಪರಾನುಬಂಧವು ಬೇರೆ ಬೇರೆ ರೂಪಿಕೆಗಳನ್ನು ತಳೆಯುವವೆಂದೂ, ಅವುಗಳನ್ನು ಸಾಮಾನ್ಯ ಸೂತ್ರೀಕರಣಗೊಳಿಸುವುದು ಲಾಭಕಾರಿಯಲ್ಲವೆಂದೂ ಶ್ರುತಪಡಿಸುತ್ತದೆ. ಹೀಗಿದ್ದರೂ ಈ ಕ್ರಮವು ಅಪರೂಪವಾಗಿ. ಹಾಗೂ ಅಪ್ರತ್ಯಕ್ಷವಾಗಿ ವ್ಯಕ್ತಿ ಮತ್ತು ಸಂಸ್ಕೃತಿಯ ನಡುವಣ ಸಂಬಂಧದ ಅರಿವಿಗೆ ದಾರಿಮಾಡಿಕೊಡುತ್ತದೆ.

ಸಂಸ್ಕೃತಿಯ ಅಂತಃಪ್ರವೃತ್ತಿಯನ್ನು ಆಳವಾಗಿ ಹೊಕ್ಕು ನೋಡುವುದೂ ವ್ಯಕ್ತಿಗತ ಹಾಗೂ ಸಾಮೂಹಿಕ ವರ್ತನೆಯನ್ನು ನಿರ್ಣಯಿಸುವ ಮನೋಭಾವಗಳನ್ನು ಅರಿತುಕೊಳ್ಳುವುದೂ ಇದಕ್ಕೆ ಅವಶ್ಯಕ. ಡಾ. ಬೆನೆಡಿಕ್ಟ್ ಅವರು ಸಂಸ್ಕೃತಿಯ ಅಂತಃಪ್ರವೃತ್ತಿಯನ್ನು ಆಧಾರದ ವಿನ್ಯಾಸವೆಂದು ಕರೆಯುತ್ತಾರೆ. ಗ್ರಂಥಕರ್ತರು ಪ್ರಸ್ತುತ ಕೃತಿಯಲ್ಲಿ ನಮ್ಮ ಮುಂದೆ ಈ ಸಮಸ್ಯೆಯನ್ನು ಮಂಡಿಸಿದ್ದಾರೆ. ಒಂದು ಪ್ರಧಾನ ಭಾವನೆಯು ಒಳಹೊಕ್ಕು ಎಲ್ಲೆಲ್ಲೂ ವ್ಯಾಪಿಸಿಕೊಂಡಿರುವಂತಹ ಮೂರು ಸಂಸ್ಕೃತಿಗಳನ್ನು ಉದಹರಿಸುವುದರ ಮೂಲಕ ಸಮಸ್ಯೆಯನ್ನು ಸ್ಪಷ್ಟಪಡಿಸಿದ್ದಾರೆ. ಈ ನಿರೂಪಣಾ ವಿಧಾನವು ಸಾಮಾಜಿಕ ವಿಚಾರವಸ್ತುಗಳ ಬಗೆಗೆ ಕ್ರಿಯಾತ್ಮಕ ವಿಧಾನವೆಂದು ಕರೆಯಲ್ಪಡುವ ಮಾರ್ಗದಿಂದ ಭಿನ್ನವಾದುದು. ಈ ವಿಧಾನದ ಮುಖ್ಯ ಉದ್ದೇಶ ಮೂಲಭೂತ ಮನೋಭಾವಗಳನ್ನು ಕಂಡುಹಿಡಿಯುವುದು. ಪ್ರತಿಯೊಂದು ಸಾಂಸ್ಕೃತಿಕ ಅಂಶದ ಕ್ರಿಯಾತ್ಮಕ ಸಂಬಂಧಗಳನ್ನು ಕಂಡುಕೊಳ್ಳುವುದಲ್ಲ. ಪ್ರಾಯಿಕವಾದ ವಿನ್ಯಾಸವು ತಾನು ಅಸ್ತಿತ್ವದಲ್ಲಿರುವ ತನಕ, ಮಾರ್ಪಾಡುಗಳ ದಿಕ್ಕನ್ನು ತನ್ನ ಅಂಕೆಯಲ್ಲಿಟ್ಟುಕೊಂಡು ನಿಂತಗೊಳಿಸುತ್ತದೆ ಎಂಬುದರ ಹೊರತು ಈ ವಿಧಾನ ಇತಿಹಾಸಾತ್ಮಕವಾದುದಲ್ಲ. ಸಂಸ್ಕೃತಿಯ ಅಂತರ್ಗತ ವಸ್ತುಗಳಲ್ಲಿ ಆಗುವ ಬದಲಾವಣೆಗೆ ಹೋಲಿಸಿದರೆ ವಿನ್ಯಾಸವು ಅಸಾಧಾರಣವಾದ ಶಾಶ್ವತತೆಯನ್ನು ಪಡೆದಿದೆ.

ಪ್ರತಿಯೊಂದು ಸಂಸ್ಕೃತಿಯೂ, ಏಕೈಕ ಪ್ರಧಾನ ಲಕ್ಷಣದಿಂದ ವ್ಯಾಪ್ತವಾಗಿ ವಿಶಿಷ್ಟವಾಗಿರುವುದಿಲ್ಲ ಎಂಬುದನ್ನೂ ಗ್ರಂಥಕರ್ತರು ಎತ್ತಿ ತೋರಿದ್ದಾರೆ. ಆದರೆ ವ್ಯಕ್ತಿಯ ವರ್ತನೆಯನ್ನು ಪ್ರಚೋದಿಸುವ ಸಾಂಸ್ಕೃತಿಕ ಪ್ರೇರಕಗಳನ್ನು ಕುರಿತು ನಿಕಟವಾದ ಅರಿವನ್ನು ಗಳಿಸಿದಂತೆ ನಮ್ಮ ನಾಗರಿಕತೆಯ ದೃಷ್ಟಿಯಿಂದ ನೋಡುವಾಗ ಅತಿರೇಕವೆಂದು ತೋರಿಬರುವ ಮನೋಭಾವಗಳು ಇತರ ನಾಗರಿಕತೆಗಳಲ್ಲಿ ಕಂಡುಬರಲು ಕಾರಣೀಭೂತವಾದ ಕೆಲವೊಂದು ಆವೇಗಗಳ ಮೇಲಿನ ನಿಯಂತ್ರಣಗಳ ಧವಳಿಕೆಯ ಆದರ್ಶಗಳು ಅಸ್ತಿತ್ವದಲ್ಲಿರುವುದು, ಕಾರಣ ಎಂದು ಕಂಡುಕೊಳ್ಳಬಹುದು

ಯಾವುದು ಸಾಮಾಜಿಕ ಇಲ್ಲವೇ ಅಸಾಮಾಜಿಕ, ಯಾವುದು ಸಹಜ ಇಲ್ಲವೇ ಅತಿರೇಕ ಎಂಬುದರ ಸಾಪೇಕ್ಷ್ಯತೆಯನ್ನು ಹೊಸ ಬೆಳಕಿನಲ್ಲಿ ನೋಡುತ್ತೇವೆ.

ಗ್ರಂಥಕರ್ತರು ಆರಿಸಿಕೊಂಡಿರುವ ವಿಪರೀತ ಪ್ರಸಂಗಗಳು ಸಮಸ್ಯೆಯ ಪ್ರಾಮುಖ್ಯತೆಯನ್ನು ಸ್ಪಷ್ಟಗೊಳಿಸುತ್ತವೆ.

ಫ್ರಾನ್ಸ್ ಬೋಸ್

ಪರಿವಿಡಿ

ಸಂಸ್ಕೃತಿಯ ರೂಪಿಕೆಗಳು

ಅಧ್ಯಾಯ I

ಸಂಪ್ರದಾಯದ ವಿಜ್ಞಾನ

ಸಮಾಜ ಜೀವಿಗಳಾದ ಮನುಷ್ಯರನ್ನು ಕುರಿತ ಅಧ್ಯಯನವೇ ಮಾನವ ಶಾಸ್ತ್ರ. ಮಾನವ ಶಾಸ್ತ್ರದ ಗಮನವು ಒಂದು ಜನಸಮುದಾಯವನ್ನು ಬೇರೆ ಜನಸಮುದಾಯಗಳಿಂದ ಪ್ರತ್ಯೇಕಿಸುವಂತಹ ದೈಹಿಕ ಲಕ್ಷಣ, ಔದ್ಯೋಗಿಕ ತಂತ್ರ, ಸಂಪ್ರದಾಯ ಮತ್ತು ಮೌಲ್ಯಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ.

ನಮ್ಮ ಸಮಾಜವನ್ನು ಮಾತ್ರವಲ್ಲದೆ ಇತರ ಸಮಾಜಗಳನ್ನೂ ತನ್ನ ಗಂಭೀರ ಅಧ್ಯಯನದ ವ್ಯಾಪ್ತಿಗೆ ಒಳಪಡಿಸುವುದೇ ಸಮಾಜ ವಿಜ್ಞಾನಗಳಲ್ಲಿ ಮಾನವ ಶಾಸ್ತ್ರದ ವೈಶಿಷ್ಟ್ಯ. ನಮ್ಮ ನಾಗರಿಕತೆಯೊಂದಿಗೆ ಯಾವುದೇ ಬಗೆಯ ಐತಿಹಾಸಿಕ ಸಂಬಂಧವನ್ನು ಹೊಂದಿಲ್ಲದ ಸೀಡೈಕ್ ಜನರಂತಹವರ ದಾಂಪತ್ಯ ಮತ್ತು ಸಂತಾನವನ್ನು ನಿಯಂತ್ರಿಸುವ ಸಾಮಾಜಿಕ ಕಟ್ಟಳೆಗಳೂ ಮಾನವ ಶಾಸ್ತ್ರಕ್ಕೆ ನಮ್ಮಲ್ಲಿಯದರಷ್ಟೇ ಪ್ರಾಮುಖ್ಯವಾಗಿವೆ. ಮಾನವ ಶಾಸ್ತ್ರಜ್ಞನು ನಮ್ಮ ಮತ್ತು ನ್ಯೂಗಿನಿಯ ಆದಿವಾಸಿಗಳ ಸಂಪ್ರದಾಯಗಳು ಒಂದು ಸಮಾನ ಸಮಸ್ಯೆಯನ್ನು ಬಗೆಹರಿಸಲು ರೂಪಿತವಾದ ಎರಡು ಸಾಮಾಜಿಕ ವ್ಯವಸ್ಥೆಗಳೆಂದು ತಿಳಿಯುತ್ತಾನೆ. ಅವೆರಡೂ ಅವನ ದೃಷ್ಟಿಯಲ್ಲಿ ಹೆಚ್ಚು ಕಡಮೆಗಳಾದವುಗಳಲ್ಲ. ಅವನು ಮಾನವನ ವರ್ತನೆಯಲ್ಲಿ ಆಸಕ್ತ. ನಮ್ಮ ಪರಂಪರೆಯಿಂದ ರೂಪಿತವಾದ ಒಂದು ವಿಧಾನದ ಮಾನವ ವರ್ತನೆಯಲ್ಲಿ ಮಾತ್ರವಲ್ಲ, ಅದು ಯಾವುದೇ ಪರಂಪರೆಯಿಂದ ಹೇಗೆ ರೂಪಿತವಾದುದಾದರೂ ಸರಿಯೇ, ವಿಭಿನ್ನ ಸಂಸ್ಕೃತಿಗಳಲ್ಲಿ (ಇಲ್ಲಿ ಸಂಸ್ಕೃತಿ ಎಂಬ ಪದ ಸಮಾಜವೆನ್ನುವ ಪದವನ್ನು ಒಳಗೊಂಡಿರುತ್ತದೆ.) ತೋರಿ ಬರುವ ಸಂಪ್ರದಾಯಗಳ ಮಹಾಶ್ರೇಣಿಗಳತ್ತ ಅವನ ಗಮನ ಹರಿಯುತ್ತದೆ. ಈ ಸಮಾಜ ಸಂಸ್ಕೃತಿಗಳು ಮಾರ್ಪಾಡಾಗಿ, ವೈವಿಧ್ಯತೆ ತಳೆಯುವ ವಿಧಾನ ಹಾಗೂ ಅವು ತಮ್ಮನ್ನು ವ್ಯಕ್ತಪಡಿಸಿಕೊಳ್ಳುವ ವಿವಿಧ

ರೂಪಗಳನ್ನು ಅರಿತುಕೊಳ್ಳುವುದು ಅವನ ಉದ್ದೇಶ. ಯಾವುದೇ ಸಂಪ್ರದಾಯವು ತನ್ನ ಆಶ್ರಯದಲ್ಲಿ ಬಾಳುವ ವ್ಯಕ್ತಿಗಳ ಜೀವನದಲ್ಲಿ ಎಂತು ಕಾರ್ಯಾಚರಣೆಯಲ್ಲಿದೆ ಯೆಂಬುದನ್ನು ತಿಳಿದುಕೊಳ್ಳುವುದು ಅವನ ಗುರಿ.

ಸಂಪ್ರದಾಯವು, ಒಂದು ಪ್ರಮುಖವಾದ ವಿಷಯವೆಂದು ಸಾಧಾರಣವಾಗಿ ಯಾರೂ ಪರಿಗಣಿಸುವುದಿಲ್ಲ. ಬುದ್ಧಿಯ ಅಂತರ್‌ಕಾರ್ಯ ವಿಧಾನಗಳು ಸಂಶೋಧನೆಗೆ ಬಹು ಯೋಗ್ಯವಾದ ವಿಚಾರಗಳೆಂದು ನಾವು ಪರಿಗಣಿಸುತ್ತೇವೆ. ಆದರೆ ಸಂಪ್ರದಾಯವು ಅತಿ ಸಾಧಾರಣ ರೂಪದ ಮಾನವ ವರ್ತನೆ ಎಂದು ನಮ್ಮ ಭಾವನೆ. ನಿಜಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಪ್ರಪಂಚದ ಯಾವುದೇ ಭಾಗದಲ್ಲಿಯೇ ಆಗಲಿ, ಒಬ್ಬ ವ್ಯಕ್ತಿಯು ಎಷ್ಟೇ ದಾರಿತಪ್ಪಿ ನಡೆದರೂ ಅವನ ವ್ಯಕ್ತಿಗತ ಚಟುವಟಿಕೆಗಳು ಪರಂಪರೆ ಯಿಂದ ರೂಪಿತವಾದ ಸಂಪ್ರದಾಯಿಕ ಚಟುವಟಿಕೆಗಳಿಗಿಂತ ತೀರ ಭಿನ್ನವಾಗಿರಲಾರವು ಇದು ಒಂದು ಸಣ್ಣ ವಿಚಾರ ಎನ್ನೋಣ. ಅನುಭವ ಮತ್ತು ನಂಬಿಕೆಗಳನ್ನು ರೂಪಿಸು ವುದರಲ್ಲಿ ಸಂಪ್ರದಾಯವು ಮುಖ್ಯ ಪಾತ್ರವಹಿಸಿ, ನಾನಾ ರೂಪಗಳಲ್ಲಿ ವ್ಯಕ್ತಗೊಳ್ಳು ತ್ತದೆ ಎಂಬುದು ಬಹುಮುಖ್ಯವಾದ ಸಂಗತಿ.

ಪ್ರಪಂಚವನ್ನು ಆದಿಸ್ಥಿತಿಯ ದೃಷ್ಟಿಯಿಂದ ಯಾರೂ ನೋಡಲಾರರು. ಸಂಪ್ರದಾಯ, ಸಂಸ್ಥೆಗಳು ಮತ್ತು ಆಲೋಚನಾ ವಿಧಾನಗಳ ಒಂದು ನಿರ್ದಿಷ್ಟ ಶ್ರೇಣಿಯಿಂದ ಪರಿಷ್ಕಾರಗೊಂಡ ದೃಷ್ಟಿಯಿಂದ ಮಾತ್ರ ನೋಡುತ್ತಾರೆ. ಆಧ್ಯಾತ್ಮಿಕ ಚಿಂತನೆಗಳಲ್ಲಿಯೂ ಸಹ, ಈ ಸಾಮಾಜಿಕ ಪಡಿಯಚ್ಚುಗಳನ್ನು ಯಾರೂ ದಾಟಿ ಹೋಗಲಾರರು. ಸತ್ಯಾಸತ್ಯಗಳನ್ನು ಕುರಿತು ತಳೆಯುವ ಭಾವನೆಗಳು ಸಹ ನಿರ್ದಿಷ್ಟ ಪರಂಪರಾಗತ ಸಂಪ್ರದಾಯಕ್ಕೆ ಅನ್ವಯಗೊಂಡೇ ಇರುತ್ತವೆ. ವ್ಯಕ್ತಿಯ ವರ್ತನೆ ಯನ್ನು ರೂಪಿಸುವುದರಲ್ಲಿ ಸಂಪ್ರದಾಯವು ವಹಿಸುವ ಪಾತ್ರವನ್ನು, ಆತನು ಪರಂಪರಾಗತ ಸಂಪ್ರದಾಯದ ಮೇಲೆ ಬೀರಬಹುದಾದ ಪ್ರಭಾವಕ್ಕೆ ಹೋಲಿಸಿದರೆ, ಅದು, ಆ ವ್ಯಕ್ತಿಯ ಮಾತೃಭಾಷೆಯ ಪದಸಂಪತ್ತಿನೊಂದಿಗೆ ಅವನ ಕುಟುಂಬವು ತನ್ನ ಬಳಕೆಗೆ ಎತ್ತಿಕೊಂಡಿರುವ ಮಗುಮಾತುಗಳಿಗೆ ಹೋಲಿಸಿದಂತೆ ಇರುತ್ತದೆ ಎಂದು ಜಾನ್ ಡ್ಯೂಯಿ ಮಹತ್ವಪೂರ್ಣವಾಗಿ ನುಡಿದಿದ್ದಾನೆ. ಸ್ವತಂತ್ರವಾಗಿ ವಿಕಾಸಗೊಂಡ ಸಮಾಜ ವ್ಯವಸ್ಥೆಗಳನ್ನು ನಾವು ಆಳವಾಗಿ ಅಧ್ಯಯನ ಮಾಡಿದರೆ ಇವು ಖಚಿತವಾದ ವೀಕ್ಷಣೆಗೆ ಸಿಗುವಂತಹ ಸಂಗತಿ. ವ್ಯಕ್ತಿಯ ಜೀವನಚರಿತ್ರೆಯು, ಮುಖ್ಯವಾಗಿ ಜನಸಮುದಾಯವು ಪರಂಪರಾಗತವಾಗಿ ರೂಪಿಸಿ ನೀಡಿರುವ ರೂಪಿಕೆಗಳಿಗೆ ಹಾಗೂ ಆದರ್ಶಗಳಿಗೆ ಹೊಂದಿಕೊಂಡಿರುತ್ತದೆ. ಸಮಾಜವು ತನ್ನ ಸಂಪ್ರದಾಯಗಳಿಂದ ಹುಟ್ಟಿ ದಾಗಿನಿಂದಲೇ ವ್ಯಕ್ತಿಯ ಅನುಭವವನ್ನೂ, ವರ್ತನೆಯನ್ನೂ ರೂಪಿಸತೊಡಗುತ್ತದೆ. ಬೆಳೆದು ಮಾತನಾಡುವಂತಾದಾಗ ಅವನು ತನ್ನ ಸಂಸ್ಕೃತಿಯಿಂದ ರೂಪಿತವಾದ ಪುಟ್ಟ ಸೃಷ್ಟಿ; ಅವನು ದೊಡ್ಡವನಾಗಿ ಸಂಸ್ಕೃತಿಯಲ್ಲಿ ಭಾಗವಹಿಸುವಂತೆ ಆಗುವ ವೇಳೆಗೆ ಸಮಾಜದ ವಾಡಿಕೆಗಳೇ ಅವನ ವಾಡಿಕೆಗಳು. ಅದರ ನಂಬಿಕೆ, ಅದರ ಸಾಧ್ಯಾಸಾಧ್ಯತೆ

ಗಳೇ ಅವನ ನಂಬಿಕೆ ಹಾಗೂ ಸಾಧ್ಯಾಸಾಧ್ಯತೆಗಳು. ಗುಂಪಿನಲ್ಲಿ ಜನಿಸಿದ ಪ್ರತಿಯೊಂದು ಮಗುವೂ ಅದರಲ್ಲಿ ಸಹಭಾಗಿ. ಪ್ರಪಂಚದ ಒಂದೆಡೆಯಲ್ಲಿ ಜನಿಸಿದ ಮಗು, ಇನ್ನೊಂದು ಸಮಾಜಸಂಪ್ರದಾಯದ ಸಾವಿರದ ಒಂದು ಭಾಗವನ್ನೂ ಪಡೆಯಲಾರದು. ಸಂಪ್ರದಾಯದ ಈ ಪಾತ್ರವನ್ನು ಅರಿತುಕೊಳ್ಳುವುದು ಇತರ ಸಾಮಾಜಿಕ ಸಮಸ್ಯೆಗಳನ್ನು ಅರಿತುಕೊಳ್ಳುವುದಕ್ಕಿಂತಲೂ ಮುಖ್ಯ. ಸಂಪ್ರದಾಯದ ವಿಧಿಸಂಹಿತೆಗಳನ್ನು, ರೂಪ ವೈವಿಧ್ಯಗಳನ್ನು ಅರಿತುಕೊಳ್ಳದೇ ಹೋದಲ್ಲಿ ಮಾನವ ಜೀವನದ ಜಟಿಲ ಸಂಗತಿಗಳು ಅರಿವಿಗೆ ನಿಲುಕಲಾರವು.

ಕೆಲವು ಪೂರ್ವಭಾವಿ ಪ್ರಮೇಯಗಳನ್ನು ಒಪ್ಪಿಕೊಂಡರೆ ಮಾತ್ರ ಸಂಪ್ರದಾಯದ ಅಧ್ಯಯನ ಉಪಯುಕ್ತವಾಗಬಲ್ಲದು. ಈ ಪ್ರಮೇಯಗಳಲ್ಲಿ ಕೆಲವು ಈಗಾಗಲೇ ಉಗ್ರವಾದ ವಿರೋಧಕ್ಕೆ ಗುರಿಯಾಗಿವೆ. ಯಾವುದೇ ವೈಜ್ಞಾನಿಕ ಅಧ್ಯಯನದ ಮೊಟ್ಟಮೊದಲ ಅವಶ್ಯಕತೆಯೆಂದರೆ, ಅಧ್ಯಯನಕ್ಕಾಗಿ ಆಯ್ದುಕೊಂಡ ವಸ್ತು ಶ್ರೇಣಿಯಲ್ಲಿ ಯಾವುದೊಂದರ ಪರವಾಗಿಯೂ ಪಕ್ಷಪಾತ ತೋರದೆ ಇರುವುದು. ಕಡಮೆ ವಿವಾದಗ್ರಸ್ತವಾದ ಕ್ಷೇತ್ರಗಳಾದ ಕಳ್ಳಿಜಾತಿಯ ಸಸ್ಯ, ಗೆದ್ದಲು ಅಥವಾ ಆಕಾಶಗಂಗೆ ಮೊದಲಾದ ವಸ್ತುಗಳನ್ನು ವರ್ಗೀಕರಿಸಿ, ಅವುಗಳಲ್ಲಿ ತೋರಿಬರಬಹುದಾದ ಎಲ್ಲ ರೂಪ ಮತ್ತು ಪರಿಸರ ವೈವಿಧ್ಯಗಳನ್ನು ಗುರುತಿಸುವುದೇ ವೈಜ್ಞಾನಿಕ ಅಧ್ಯಯನವು ಅನುಸರಿಸುವ ಕ್ರಮ. ಈ ವಿಧಾನದಿಂದ ಖಗೋಳ ಶಾಸ್ತ್ರದ ವಿಧಿಸೂತ್ರಗಳು, ಸಂಘಜೀವನ ನಡೆಸುವ ಕೀಟಗಳ ಹವ್ಯಾಸಗಳೇ ಮೊದಲಾದ ವಿಷಯಗಳಲ್ಲಿ ನಾವು ಗಳಿಸಿರುವ ಜ್ಞಾನವನ್ನೆಲ್ಲ ಸಂಗ್ರಹಿಸಲಾಗಿದೆ. ಆದರೆ ಮಾನವನನ್ನು ಕುರಿತು ಅಧ್ಯಯನ ನಡೆಸುವಾಗ ಪ್ರಮುಖ ಸಮಾಜ ವಿಜ್ಞಾನಗಳು ಒಂದು ಪ್ರಾದೇಶಿಕ ವೈವಿಧ್ಯ ಮಾತ್ರವಾದ ಪಾಶ್ಚಿಮಾತ್ಯ ನಾಗರಿಕತೆಯನ್ನು ಆಯ್ದುಕೊಂಡಿವೆ.

ನಮಗೂ ಆದಿವಾಸಿಗಳಿಗೂ, ನಮಗೂ ಅನಾಗರಿಕರಿಗೂ, ನಮಗೂ ಕ್ಷುದ್ರಧರ್ಮಗಳಿಗೂ ನಡುವೆ ಇರುವ ವಿಭಿನ್ನತೆಗಳು ಜನರ ಮನಸ್ಸಿನಲ್ಲಿ ಬೇರೂರಿರುವವರೆಗೂ ಮಾನವಶಾಸ್ತ್ರ ಎಂದು ಹೆಸರಿಸುವುದೂ ಸಹ ಅಸಾಧ್ಯವಾಗಿತ್ತು. ನಮ್ಮ ನೆರೆಯವನ ಮೂಢನಂಬಿಕೆಯ ವಿರುದ್ಧವಾಗಿ ನಮ್ಮ ನಂಬಿಕೆಯನ್ನು ಎತ್ತಿಕಟ್ಟದೇ ಇರುವಷ್ಟು ಮಟ್ಟಿನ ವಿವೇಚನೆಯನ್ನು ಗಳಿಸುವುದು ಮೊದಲ ಅವಶ್ಯಕತೆಯಾಗಿತ್ತು. ಯಾವುದಾದರೂ ಒಂದೇ ಆಧಾರದ ಮೇಲೆ ಉದಾಹರಣೆಗೆ ಪ್ರಕೃತ್ಯತೀತದ ಆಧಾರದ ಮೇಲೆ ನಿರ್ಮಿತವಾದ ಸಂಸ್ಥೆಗಳನ್ನೆಲ್ಲ ಒಂದಾಗಿ ಪರಿಗಣಿಸಬೇಕು. ಅವುಗಳಲ್ಲಿ ನಮ್ಮದೂ ಒಂದು ಆದ್ದರಿಂದ ಈ ಸಂಗತಿಗಳಿಗೆ ಮಾನ್ಯತೆ ನೀಡುವುದು ಅವಶ್ಯಕ.

ಮಾನವಶಾಸ್ತ್ರದ ಈ ಮೂಲಭೂತ ಪ್ರಮೇಯ ಅಥವಾ ಆಧಾರಸ್ತಂಭವು ಹತ್ತೊಂಬತ್ತನೆಯ ಶತಮಾನದ ಪ್ರಥಮಾರ್ಧದಲ್ಲಿ ಪಾಶ್ಚಿಮಾತ್ಯ ನಾಗರಿಕತೆಯ ಅತ್ಯುನ್ನತ ಜ್ಞಾನಿಗೂ ಸಹ ಹೊಳೆಯುವ ಸಾಧ್ಯತೆಯಿರಲಿಲ್ಲ. ಇತಿಹಾಸದುದ್ದಕ್ಕೂ

ಮಾನವ ತನ್ನ ವಿಶಿಷ್ಟತೆಯನ್ನು ಪ್ರತಿಷ್ಠೆಯಾಗಿ ಪರಿಗಣಿಸಿ ಸಮರ್ಥಿಸಿಕೊಂಡು ಬಂದಿದ್ದಾನೆ. ಈ ಸರ್ವೋಚ್ಚತಾ ಭಾವವು ಕೋಪರ್ನಿಕಸನ ಕಾಲದಲ್ಲಿ ಭೂಮಿಯೇ ವಿಶ್ವದ ಕೇಂದ್ರ ಎಂದು ಪರಿಗಣಿಸುವಂತೆ ಮಾಡಿತ್ತು. ಈ ಭೂಗ್ರಹವನ್ನು ಸೌರ ವ್ಯವಸ್ಥೆಯ ಒಂದು ಅಧೀನ ಸ್ಥಾನಕ್ಕೆ ಸೇರಿಸಲು ಹದಿನಾಲ್ಕನೆಯ ಶತಮಾನದಲ್ಲಿ ಉಗ್ರವಾದ ಪ್ರತಿಭಟನೆ ಎದ್ದಿತು. ಡಾರ್ವಿನ್ನನ ಕಾಲಕ್ಕೆ ಈ ಸರ್ವೋಚ್ಚತಾಭಾವವು ಸೋತು, ಈ ಸೌರವ್ಯವಸ್ಥೆಯನ್ನು ಒಪ್ಪಿಕೊಳ್ಳುವಂತಾಗಿತ್ತು. ಆದರೆ ಪರಮಾತ್ಮ ನಿಂದ ನೀಡಲಾದ ಜ್ಞಾನಾತೀತವಾದ ಆತ್ಮದ ಉಚ್ಚತೆಯ ಹೆಸರಿನಲ್ಲಿ ಮಾನವನು ತನ್ನ ಪೂರ್ವೇತಿಹಾಸವು ಪ್ರಾಣಿವರ್ಗಕ್ಕೆ ಸೇರಿದುದು ಎಂಬ ಡಾರ್ವಿನ್ನನ ಪ್ರತಿಪಾದನೆಯನ್ನು ವಿರೋಧಿಸಲು ತನ್ನ ಶಕ್ತಿಯಿದ್ದಷ್ಟು ಹೆಣಗಿದನು. ತನ್ನ ವಾದದಲ್ಲಿ ಏಕಸರಣಿಯಿರಲಿಲ್ಲ. 'ಆತ್ಮದ' ಗುಣಲಕ್ಷಣಗಳನ್ನು ಕುರಿತ ಸಂಶಯಗಳಿದ್ದವು. ಯಾವುದೇ ಪರಕೀಯ ಗುಂಪಿನೊಂದಿಗೆ ಭ್ರಾತೃಭಾವವನ್ನು ಸಮರ್ಥಿಸಿಕೊಳ್ಳಲು ಹತ್ತೊಂಬತ್ತನೆಯ ಶತಮಾನದ ಪಾಶ್ಚಿಮಾತ್ಯನು ಸಿದ್ಧನಿರಲಿಲ್ಲ. ಈ ಎಲ್ಲ ಸಂಗತಿಗಳು ಮಾನವನ ವಿಶಿಷ್ಟತೆಯ ಭಾವನೆಗಳನ್ನು ಕಡೆಗಣಿಸಿದ್ದ ವಿಕಾಸವಾದದ ವಿರುದ್ಧವಾಗಿ ಎದ್ದ ಭಾವ ಪ್ರವಾಹಕ್ಕೆ ಅಡಚಣೆಯುಂಟುಮಾಡಲಿಲ್ಲ.

ಈ ಎರಡು ಹೋರಾಟಗಳಲ್ಲಿ ಜಯಗಳಿಸಿದ್ದೇವೆಂದು ಹೇಳಬಹುದು ಇಲ್ಲವೆ ಶೀಘ್ರದಲ್ಲಿ ಗಳಿಸುತ್ತೇವೆ ಎನ್ನೋಣ. ಆದರೆ ಇದೇ ರೀತಿಯ ಹೋರಾಟ ಈಗ ಬೇರೆ ಕ್ಷೇತ್ರದಲ್ಲಿ ಕಾದಿದೆ. ಭೂಮಿಯು ಸೂರ್ಯನ ಸುತ್ತಲೂ ಸುತ್ತುತ್ತದೆ. ಮಾನವನೂ ಸಹ ಪ್ರಾಣಿ ಮೂಲದವನು ಎಂಬುದನ್ನು ನಾವು ಒಪ್ಪಿಕೊಂಡರೂ ಅವು ಮನುಷ್ಯ ಸಾಧನೆಗಳೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲ. ಸೌರವ್ಯವಸ್ಥೆಗಳ ಅಂಗವಾದ ಒಂದು ಗ್ರಹದ ಮೇಲೆ ಆಕಸ್ಮಿಕವಾಗಿ ನಾವು ನೆಲೆಸಿದ್ದೇವೆ ಎಂದು ಹೇಳಿದಾಗ ನಮ್ಮ ಮಹತ್ವವೇ ಕಿರಿದು ಎಂದಂತಾಯಿತು. ಕಲಬೆರಕೆಯಾದ ಎಲ್ಲ ಮಾನವ ಬುಡಕಟ್ಟುಗಳೂ ವಿಕಾಸಮಾಲೆಯಲ್ಲಿ ಪ್ರಾಣಿಗಳೊಂದಿಗೆ ಸಂಪರ್ಕ ಹೊಂದಿವೆ ಎಂದರೆ, ಅಷ್ಟೇ ಮಟ್ಟಿಗೆ ನಮಗೂ ಇತರರಿಗೂ ಸಾದೃಶ್ಯವಾಗಿ ತೋರಿಸಬಹುದಾದ ವ್ಯತ್ಯಾಸಗಳೂ ವಿಪರೀತವಾಗಿವೆ ; ಅಲ್ಲದೆ ನಮ್ಮ ಸಂಸ್ಥೆಗಳ ಅದ್ವಿತೀಯತೆಯೂ ಗಮನಾರ್ಹವಾಗಿದೆ. ನಮ್ಮ ಸಾಧನೆಗಳು ನಮ್ಮ ಸಂಸ್ಥೆಗಳು ಅದ್ವಿತೀಯ. ಅವು ಕಡಮೆ ದರ್ಜೆಯ ಇತರ ಬುಡಕಟ್ಟುಗಳದ್ದಕ್ಕಿಂತ ಭಿನ್ನವರ್ಗಕ್ಕೆ ಸೇರಿದಂತಹವು. ಅವುಗಳನ್ನು ಹೇಗಾದರೂ ರಕ್ಷಿಸಿಕೊಳ್ಳಬೇಕು. ಹೀಗಾಗಿ, ಇಂದು ಸಾಮ್ರಾಜ್ಯಶಾಹಿಯ ಪ್ರಶ್ನೆಯಲ್ಲಾಗಲಿ, ಬುಡಕಟ್ಟು ಪೂರ್ವಗ್ರಹದ ವಿಚಾರದಲ್ಲಾಗಲಿ, ಕ್ರೈಸ್ತ ಧರ್ಮ ಹಾಗೂ ಕ್ಷುದ್ರ ಧರ್ಮಗಳ ನಡುವಣ ಹೋಲಿಕೆಯ ವಿಷಯದಲ್ಲಾಗಲಿ ನಾವು ನಮ್ಮ ಅದ್ವಿತೀಯತೆಯನ್ನೇ ಎತ್ತಿ ಹಿಡಿಯುತ್ತೇವೆ. ನಮ್ಮ ಗಮನವೆಲ್ಲ ನಮ್ಮ ಸಂಸ್ಥೆಗಳು ನಮ್ಮ ಸಾಧನೆಗಳು ನಮ್ಮ ನಾಗರಿಕತೆಯತ್ತ ಹರಿದಿವೆಯೇ ಹೊರತು ಪ್ರಪಂಚ ವಿಸ್ತೃತ ಇರುವ ಮಾನವೀಯ ಸಂಸ್ಥೆಗಳತ್ತ ಹರಿದಿಲ್ಲ.

ಅನುದ್ದಿಷ್ಟವಾದ ಐತಿಹಾಸಿಕ ಸಂದರ್ಭಗಳಿಂದಾಗಿ ಪಾಶ್ಚಿಮಾತ್ಯ ನಾಗರಿಕತೆ ವಿಶಾಲ ವ್ಯಾಪಕತೆಯನ್ನು ಗಳಿಸಿದೆ. ಇಲ್ಲಿಯವರೆಗೆ ಪರಿಚಿತವಾದ ಯಾವುದೇ ಪ್ರಾದೇಶಿಕ ಗುಂಪು ಅಷ್ಟು ವ್ಯಾಪಕವಾಗಿ ಹರಡಿಲ್ಲ. ಪ್ರಪಂಚದ ಬಹುಭಾಗದಲ್ಲಿ ಅದು ಒಂದು ನಿರ್ದಿಷ್ಟ ಮಟ್ಟವನ್ನು ಮುಟ್ಟಿದೆ. ಅದರಿಂದಾಗಿ ಮಾನವವರ್ತನೆಯಲ್ಲಿಯೇ ಒಂದು ಏಕ ರೂಪತೆಯಿದೆ ಎಂದು ನಂಬಿಕೆ ಹುಟ್ಟುವಂತಾಗಿದೆ. ಇತರ ಸಂದರ್ಭಗಳಲ್ಲಿ ಹೀಗಾಗು ತ್ತಿರಲಿಲ್ಲ. ಕೆಲವೊಮ್ಮೆ ಹಿಂದುಳಿದ ಆದಿವಾಸಿಗಳೂ ಸಂಸ್ಕೃತಿಯ ವಿಶೇಷ ಲಕ್ಷಣಗಳ ಪಾತ್ರದ ಬಗ್ಗೆ ಪ್ರಜ್ಞೆ ಉಳ್ಳವರಾಗಿರುತ್ತಾರೆ. ಹಾಗಾಗಲು ಸಾಕಷ್ಟು ಕಾರಣಗಳೂ ಇವೆ. ಅವರು ಬೇರೆ ಬೇರೆ ಸಂಸ್ಕೃತಿಗಳ ನಿಕಟ ಅನುಭವ ಪಡೆದಿದ್ದಾರೆ. ಅವರು ತಮ್ಮ ಕಣ್ಣೆದುರಿನಲ್ಲಿಯೇ ತಮ್ಮ ಧರ್ಮ,ತಮ್ಮ ಆರ್ಥಿಕ ವ್ಯವಸ್ಥೆ, ವಿವಾಹ ಸಂಬಂಧದ ಪ್ರತಿಷೇಧಗಳೆಲ್ಲ ಶ್ವೇತವರ್ಣೀಯ ಸಂಸ್ಕೃತಿ ಪ್ರಭಾವದ ಎದುರಿಗೆ ನಿಲ್ಲಲಾರದೆ ಕುಸಿದು ಬಿದ್ದುದನ್ನು ಕಂಡಿದ್ದಾರೆ. ಅವರೇ ತಮ್ಮದನ್ನು ಬಿಟ್ಟುಕೊಟ್ಟು ಇನ್ನೊಂದನ್ನು ಸ್ವೀಕರಿಸಿದ್ದಾರೆ. ಕೆಲವೊಮ್ಮೆ ಅವರ ಅರಿವಿಗೇ ಬಾರದಂತೆ ಹಾಗಾಗಿರಬಹುದು. ಆದರೆ ಮಾನವ ಜೀವನ ಕ್ರಮದಲ್ಲಿ ವಿವಿಧ ವ್ಯವಸ್ಥೆಗಳಿವೆ ಎಂಬುದು ಮಾತ್ರ ಅವರಿಗೆ ಸ್ಪಷ್ಟ ವಾಗಿ ಮನಗಂಡಿದೆ. ಹಲವೊಮ್ಮೆ ಅವರೂ ಸಹ, ಮಾನವ ಶಾಸ್ತ್ರಜ್ಞರಂತೆಯೇ ಶ್ವೇತ ವರ್ಣೀಯರ ಮೇಲುಗೈಗೆ ವಾಣಿಜ್ಯ ಸ್ಪರ್ಧೆ ಹಾಗೂ ಸೈನಿಕ ಸಂಸ್ಥೆಗಳೇ ಕಾರಣ ಎಂದು ಹೇಳುತ್ತಾರೆ.

ಶ್ವೇತವರ್ಣೀಯನ ಅನುಭವವು ವಿಭಿನ್ನವಾದುದು. ಅವನು ಹೊರಗಿನವರನ್ನು ಕಂಡೇ ಇಲ್ಲ. ಹಾಗೆ ಕಂಡಿದ್ದರೂ ಈಗಾಗಲೇ ಐರೋಪ್ಯೀಕರಣಕ್ಕೆ ಗುರಿಯಾದವನನ್ನು ಮಾತ್ರ. ಅವನು ಪ್ರವಾಸ ಕೈಗೊಂಡವನಾಗಿದ್ದರೆ, ಹೋಟೆಲುಗಳನ್ನು ಬಿಟ್ಟು ಬೇರೆಲ್ಲೂ ತಂಗದೆ ಇಡೀ ಪ್ರಪಂಚವನ್ನೇ ಸುತ್ತಿ ಬಂದಿರುತ್ತಾನೆ. ಅವನಿಗೆ ತನ್ನದರ ಹೊರತು ಇತರರ ಜೀವನ ವಿಧಾನಗಳ ಪರಿಚಯವಿಲ್ಲ. ಅವನು ತನ್ನನ್ನು ಎಲ್ಲೆಲ್ಲೂ ಸುತ್ತುವರಿದಿರುವ ಸಂಪ್ರದಾಯ ಹಾಗೂ ಮನೋಭಾವದ ಏಕರೂಪತೆಯ ಗುಂಗಿನಲ್ಲಿ ಅದು ಐತಿಹಾಸಿಕ ಆಕಸ್ಮಿಕ ಘಟನೆ ಎಂಬ ಸತ್ಯ ಸಂಗತಿಯನ್ನು ಮರೆಯುತ್ತಾನೆ. ಅವನು ಹೆಚ್ಚು ಜಿಜ್ಞಾಸೆಗೆ ಹೊರಡದೆ ಮಾನವಸ್ವಭಾವದ ಮತ್ತು ತನ್ನ ನಿರ್ದಿಷ್ಟ ಆದರ್ಶಗಳ ಸಮಸಂಯೋಗತೆಯನ್ನೂ ಒಪ್ಪಿಕೊಂಡುಬಿಡುತ್ತಾನೆ.

ಶ್ವೇತವರ್ಣೀಯನ ನಾಗರಿಕತೆಯ ಪ್ರಸಾರ ಪ್ರತ್ಯೇಕವಾದ ಐತಿಹಾಸಿಕ ಘಟನೆ ಏನೂ ಅಲ್ಲ. ಈಚೀಚೆಗೆ ಪಾಲಿನೇಷಿಯನ್ ಜನಾಂಗವು ಆಂಟಾಂಗ್, ಜಾವಾಗಳಿಂದ ಈಸ್ಟರ್ ದ್ವೀಪಗಳವರೆಗೂ, ಹವಾಯಿನಿಂದ ನ್ಯೂಜಿಲೆಂಡಿನವರೆಗೂ ಹರಡಿಕೊಂಡಿತು. ಬಂಟು ಭಾಷೀ ಕುಲಗಳು ಸಹಾರಾದಿಂದ ದಕ್ಷಿಣ ಆಫ್ರಿಕದವರೆಗೂ ಹರಡಿಕೊಂಡವು. ಆದರೆ ಈ ಎರಡು ಸಂದರ್ಭಗಳಲ್ಲೂ ನಾವು ಈ ಜನರನ್ನು ಮಿತಿಮೀರಿ ಬೆಳೆದ, ಮಾನವ ಕುಲದ ಪ್ರಾದೇಶಿಕ ಪಂಗಡವೆಂದೇ ಎಣಿಸಿದ್ದೇವೆ.ಪಾಶ್ಚಿಮಾತ್ಯ ನಾಗರಿಕತೆಯು ಹೆಚ್ಚು ವ್ಯಾಪಕವಾಗಿ ಹರಡಿಕೊಳ್ಳಲು ಸಾರಿಗೆಯಲ್ಲಿ ನಡೆದ ಯಂತ್ರಸಾಧನ ನಿರ್ಮಾಣ

ಹಾಗೂ ದೂರವ್ಯಾಪಕವಾದ ವಾಣಿಜ್ಯ ವ್ಯವಸ್ಥೆಯೂ ಕಾರಣ. ಐತಿಹಾಸಿಕವಾಗಿ ಇದು ಹೇಗೆ ಕೂಡಿಬಂದಿತು ಎಂದು ಅರಿತುಕೊಳ್ಳುವುದು ಸುಲಭ.

ಶ್ವೇತಸಂಸ್ಕೃತಿಯ ಈ ವ್ಯಾಪಕತೆಯು ಉಂಟುಮಾಡಿರುವ ಮಾನಸಿಕ ಪರಿಣಾಮಗಳು ಐಹಿಕ ಪರಿಣಾಮಗಳಿಗಿಂತ ದೊಡ್ಡ ಪ್ರಮಾಣದ್ದು. ಈ ಸಂಸ್ಕೃತಿ ಪ್ರಸಾರದಿಂದಾಗಿ ಇತರ ಜನರ ನಾಗರಿಕತೆಗಳು ನಮ್ಮ ಗಂಭೀರವಾದ ಪರಿಗಣನೆಗೆ ಬಾರದೆ ಉಳಿದವು. ಅದು ನಮ್ಮ ಸಂಸ್ಕೃತಿಗೆ ಒಂದು ಬೃಹತ್ ಏಕರೂಪತೆಯನ್ನು ತಂದಿತು. ಆದಕಾರಣ ಅದರ ಐತಿಹಾಸಿಕ ಕಾರಣಗಳನ್ನು ಪರಿಗಣಿಸುವುದನ್ನು ಸಹ ಕೈಬಿಡಲಾಯಿತು. ಎಲ್ಲವೂ ಅಗತ್ಯ ಹಾಗೂ ಅನಿವಾರ್ಯ ಎಂಬ ಭಾವನೆ ಮೂಡಿತು. ನಮ್ಮ ನಾಗರಿಕತೆ ನಮ್ಮ ಆರ್ಥಿಕ ಸ್ಪರ್ಧೆಯನ್ನು ಅವಲಂಬಿಸಿದೆ. ಇದೇ ಮಾನವ ಸ್ವಭಾವದ ಪ್ರಧಾನ ಪ್ರೇರಕ ಎಂಬುದಕ್ಕೆ ನಿದರ್ಶನವೆಂದು ಹೇಳಿ ವಿವರಣೆ ನೀಡುತ್ತೇವೆ. ನಮ್ಮ ನಾಗರಿಕತೆಯಲ್ಲಿ ಮಕ್ಕಳ ವರ್ತನೆಯು ರೂಪಿತವಾಗಿ ನಮ್ಮ ಶಿಶುಚಿಕಿತ್ಸಾಲಯಗಳಲ್ಲಿ ವರದಿಯಾದಂತೆಯೇ ಎಲ್ಲ ಮಕ್ಕಳ ವರ್ತನೆಯೂ ಇರುತ್ತದೆಂದು ಪರಿಗಣಿಸಿ ಅದನ್ನು ಶಿಶುಮಾನಸ ಶಾಸ್ತ್ರವೆಂದು ಹೆಸರಿಸಿ ಎಳೆಯರೆಲ್ಲ ಹೀಗೆಯೇ ವರ್ತಿಸಬೇಕಾದ್ದು ಎಂದು ಭಾವಿಸುತ್ತೇವೆ. ನಮ್ಮ ನೀತಿನಿಯಮ ಅಥವಾ ಕುಟುಂಬ ವ್ಯವಸ್ಥೆಗಳ ವಿಷಯದಲ್ಲಿಯೂ ಹೀಗೆಯೇ. ನಮಗೆ ಸುಪರಿಚಿತವಾದ ಪ್ರೇರಕಶಕ್ತಿಯನ್ನೇ ಎತ್ತಿ ಹಿಡಿಯುತ್ತ ಪ್ರಾದೇಶಿಕವಾದ ನಮ್ಮ ವರ್ತನೆಯ ವಿಧಾನವನ್ನೇ ಮಾನವ ವರ್ತನೆಯೆಂದೋ, ನಮ್ಮ ಸಮಾಜೀಕೃತ ರೂಢಿಗಳನ್ನೇ ಮಾನವಸ್ವಭಾವವೆಂದೋ ಸದಾ ಪರಿಗಣಿಸುತ್ತಿದ್ದೇವೆ.

ಈ ಪ್ರತಿಪಾದನೆಯು ಆಧುನಿಕ ಮನುಷ್ಯನು ತನ್ನ ಆಲೋಚನೆಯಲ್ಲೂ ವ್ಯವಹಾರಿಕ ವರ್ತನೆಯಲ್ಲೂ ಜೀವಂತಗೊಳಿಸಿಕೊಂಡಿರುವ ಅಂಶಗಳಲ್ಲೊಂದು. ಈ ಪ್ರತಿಪಾದನೆಯ ಮೂಲವನ್ನು ಅರಸುತ್ತ ಹೋದರೆ, ಅದು ಮಾನವನಲ್ಲಿರುವ ಭೇದಭಾವಗಳಲ್ಲಿ ಅತಿ ಪ್ರಾಚೀನ ಎನ್ನಬಹುದಾದ ತನ್ನ ಗುಂಪು ಮತ್ತು ಹೊರಗುಂಪುಗಳ ನಡುವಣ ವ್ಯತ್ಯಾಸ ಭಾವದಲ್ಲಿ ಹುದುಗಿದೆ ಎಂದು ತೋರುತ್ತದೆ. ಈ ಭೇದಭಾವವು ಆದಿವಾಸಿ ಜನವರ್ಗಗಳಲ್ಲಿಯೂ ಸಾರ್ವತ್ರಿಕವಾಗಿ ಪ್ರಸಾರವಾಗಿದೆ. ಎಲ್ಲ ಆದಿವಾಸಿ ಬಣಗಳೂ ಹೊರಗಿನವರನ್ನು ಈ ರೀತಿ ಗುರುತಿಸುವುದರಲ್ಲಿ ಒಮ್ಮಸಮ್ಮತಿ ತೋರಿವೆ. ತಮ್ಮ ತಮ್ಮ ಜನರಲ್ಲಿ ಪ್ರಚಲಿತವಾಗಿರುವ ನೀತಿನಿಯಮಗಳು ಈ ಹೊರ ಜನರಿಗೆ ಸಲ್ಲವು; ಅವರ ಮಾನವ ವ್ಯವಸ್ಥೆಯಲ್ಲಿ ಆ ಹೊರ ಜನರಿಗೆ ಸ್ಥಾನವಿಲ್ಲ; ಜುನಿ, ಡೇನೆ, ಕಿಯೋವಾ, ಹೀಗೆ ಹಲವಾರು ಆದಿವಾಸಿ ಬಣಗಳ ಹೆಸರುಗಳು ಆ ಜನ ತಮ್ಮನ್ನು ಕರೆದುಕೊಳ್ಳುವ ಹೆಸರು ಮಾತ್ರವಲ್ಲ; ಮನುಷ್ಯ ಎಂಬುದಕ್ಕೆ ಆಯಾ ಭಾಷೆಗಳಲ್ಲಿರುವ ಏಕೈಕ ಪದ. ಮನುಷ್ಯರೆಂದರೆ ತಾವು ಮಾತ್ರ ಆದರೆ ವಸ್ತುಸ್ಥಿತಿಯೇ ಬೇರೆ. ವಸ್ತುಸ್ಥಿತಿಯನ್ನು ನೋಡಿದರೆ ಪ್ರತಿಯೊಂದು ಬಣವು, ಬಹು ಕಾಲ ಜನತೆಯಿಂದ ಜನತೆಗೆ ನಡೆದುಬಂದ ವರ್ತನೆಯ ಪರಸ್ಪರ ಕೊಡಕೊಳ್ಳುಗೆಯಿಂದಾಗಿ

ಕಲೆ, ತಾಂತ್ರಿಕನಿರ್ಮಾಣಗಳು, ಕರ್ಮಕಾಂಡ ವಿವರಗಳನ್ನು ತನ್ನೊಂದಿಗೆ ಸಮಾನವಾಗಿ ಹಂಚಿಕೊಂಡಿರುವ ಇತರ ಬಣಗಳಿಂದ ಸುತ್ತುವರಿದಿರುತ್ತದೆ.

ಆದಿಮಾನವನು ಪ್ರಪಂಚವನ್ನೆಲ್ಲ ನೋಡಿ ಮಾನವರೆಲ್ಲ ಒಂದೇ ಗುಂಪು ಎಂದು ಭಾವಿಸಿದವನಲ್ಲ. ತನ್ನಂತಹ ಇತರ ಎಲ್ಲ ಮಾನವನ ಪೀಳಿಗೆಗಳ ಸಮಾನ ಗುರಿಗಳ ಭಾವನೆಯನ್ನು ಅರಿತವನಲ್ಲ; ಆರಂಭದಿಂದಲೂ ತನ್ನ ಸುತ್ತಲಿನ ಗೋಡೆಗಳನ್ನು ಎತ್ತರಕ್ಕೆ ಏರಿಸಿದ ಸಂಕುಚಿತ ಮನೋಭಾವದವನು. ಒಂದು ಹೆಣ್ಣನ್ನು ಆಯ್ದುಕೊಳ್ಳುವಲ್ಲಾಗಲಿ, ಒಬ್ಬರ ತಲೆ ತೆಗೆಯುವಲ್ಲಾಗಲಿ ಅವನು ಕಾಣುವ ಮೊಟ್ಟಮೊದಲ ಹಾಗೂ ಪ್ರಮುಖವಾದ ಬೇಧವೆಂದರೆ ತನ್ನ ಸ್ವಗುಂಪು ಮತ್ತು ಪರಗುಂಪು ಎಂಬುದು. ತನ್ನ ಗುಂಪು ಮತ್ತು ಅದರ ವರ್ತನೆಯ ವಿಧಾನಗಳೆಲ್ಲ ಅಸದೃಶ.

ಆದ್ದರಿಂದ ಆಧುನಿಕ ಮಾನವನೂ ಸಹ ನಾಗರಿಕನಾಗಿ ಸುಸಂಸ್ಕೃತಿ ಹೊಂದಿದ, ತಾನು ಬಾಂಧವ್ಯ ಪಡೆದ ಗುಂಪುಗಳಲ್ಲಿಯೂ ಶತ್ರು ಮಿತ್ರರೆಂಬ ಭೇದವೆಣಿಸುತ್ತಾನೆ. ಆಸ್ಟ್ರೇಲಿಯದ ಕಾಡು ಜನರೂ ಸಹ ತಮ್ಮ ತಮ್ಮಲ್ಲಿ ಇದೇ ರೀತಿ ಭೇದವನ್ನೆಣಿಸುತ್ತಿದ್ದರು. ಇವೆರಡರ ಹಿಂದೆಯೂ ದೀರ್ಘವಾದ ಐತಿಹಾಸಿಕ ಸಮರ್ಥನೆಯಿದೆ. ಪಿಗ್ಮಿಗಳಲ್ಲಿಯೂ ಸಹ ಇದೇ ರೀತಿಯಾಗಿದ್ದುದು ಕಂಡುಬರುತ್ತದೆ. ಮೂಲಭೂತವಾದ ಒಂದು ಮಾನವ ಸ್ವಭಾವ ಲಕ್ಷಣ ನಮಗೆ ಸ್ಪಷ್ಟವಾಗಿ ಅರಿವಾಗಿದ್ದರೂ ಅದರ ಇತಿಹಾಸ ಹಾಗೂ ಬಹುರೂಪ ವ್ಯಕ್ತತೆಯನ್ನು ಗುರುತಿಸುವುದು ಸಾಧ್ಯ.

ಇವುಗಳಲ್ಲಿ ಒಂದು ರೂಪವು ಸಾಧಾರಣವಾದ ಪ್ರಾದೇಶಿಕ ಭಾವಕ್ಕಿಂತ ಹೆಚ್ಚಿಗೆ ಧಾರ್ಮಿಕ ಉದ್ವೇಗದಿಂದ ಪ್ರಚೋದಿತವಾದುದಾಗಿ, ಮಹತ್ವದ್ದಾಗಿ ಪರಿಗಣಿಸಲ್ಪಟ್ಟಿದೆ. ಎಲ್ಲಿಯವರೆಗೆ ಧರ್ಮವು ಒಂದು ಜೀವಂತ ವಿವಾದ ಸಂಗತಿಯಾಗಿತ್ತೋ, ಅಲ್ಲಿಯವರೆಗೆ ಪಾಶ್ಚಿಮಾತ್ಯ ನಾಗರಿಕತೆಯಲ್ಲಿ ಈ ಭಾವ ಏಕರೂಪವಾಗಿ ಆವರಿಸಿತ್ತು. ಧರ್ಮದ ವಿಚಾರ ವ್ಯಾಪ್ತಿಯಲ್ಲಿ ನೋಡಿದರೆ, ಒಂದು ಒಳಗುಂಪಿನ ಜನಕ್ಕೂ, ಹೊರಗಿನವರಿಗೂ ಇರುವ ವ್ಯತ್ಯಾಸವು ನಿಜವಾದ ಮತಶ್ರದ್ಧೆಯುಳ್ಳವರಿಗೂ, ನಾಸ್ತಿಕರಿಗೂ ಇರುವ ವ್ಯತ್ಯಾಸವಾಗಿ ತೋರುತ್ತದೆ. ಈ ಎರಡು ಗುಂಪುಗಳಲ್ಲಿ ಸಾವಿರಾರು ವರ್ಷಗಳಿಂದಲೂ ಒಂದು ಒಮ್ಮತದ ಕ್ಷೇತ್ರವೇರ್ಪಟ್ಟಿಲ್ಲ. ಒಂದರಲ್ಲಿ ಮಾನ್ಯತೆ ಪಡೆದ ಭಾವನೆಗಾಗಲಿ, ಸಂಸ್ಥೆಗಾಗಲಿ ಇನ್ನೊಂದರಲ್ಲಿ ಮಾನ್ಯತೆಯಿಲ್ಲ. ಎರಡು ಧರ್ಮಗಳಲ್ಲಿ ಕೆಲವೊಮ್ಮೆ ಬಹಳ ಕಡಮೆ ಅಂತರವಿದ್ದವುಗಳಲ್ಲೂ ಸಹ, ಎಲ್ಲ ಸಂಸ್ಥೆಗಳೂ ಅದಕ್ಕೆ ಸೇರಿದುದೋ, ಇದಕ್ಕೆ ಸೇರಿದುದೋ ಎಂಬುದನ್ನು ಆಧರಿಸಿ ಪರಸ್ಪರ ವಿರೋಧವಾಗಿಯೇ ಪರಿಗಣಿಸಲ್ಪಡುತ್ತವೆ. ಒಂದು ಕಡೆ 'ದಿವ್ಯಸತ್ಯ' ಧರ್ಮನಿಷ್ಠರು, ದೈವ ವಾಣಿ ಹಾಗೂ ದೇವರು, ಇನ್ನೊಂದು ಕಡೆ ಘೋರ ಪಾಪ, ಕಂತೆ ಪುರಾಣ, ಶಾಪಗ್ರಸ್ತರು ಮತ್ತು ಭೂತಗಳು. ಈ ಎರಡು ಪರಸ್ಪರ ವಿರೋಧಿ

ಗುಂಪುಗಳ ಮನೋಭಾವವನ್ನು ಏಕೀಕರಿಸುವ ಪ್ರಶ್ನೆಯೇ ಏಳುತ್ತಿರಲಿಲ್ಲ. ಆದ್ದರಿಂದ ಮುಖ್ಯವಾದ ಮಾನವೀಯ ಸ್ವಭಾವ ಲಕ್ಷಣಗಳಲ್ಲಿ ಒಂದಾದ ಧರ್ಮದ ಸ್ವಭಾವವನ್ನು ಕುರಿತು ವಾಸ್ತವವಾದ ವಿಷಯವನ್ನು ಅಧ್ಯಯನ ಮಾಡಿ ಅರಿತುಕೊಳ್ಳುವ ಸಾಧ್ಯತೆಯೇ ಇರಲಿಲ್ಲ.

ಪ್ರಚಲಿತವಿರುವ ಧಾರ್ಮಿಕ ಭಾವನೆಗಳನ್ನು ಕುರಿತು ಇಂತಹ ವಿವರಣೆಯನ್ನು ಓದಿದಾಗ ನಾವೆಲ್ಲ ಸಹಜವಾಗಿ ಒಂದು ಬಗೆಯ ಹೆಮ್ಮೆ ತಳೆಯುತ್ತೇವೆ. ಕೊನೆಯ ಪಕ್ಷ ಈ ಒಂದು ಅಸಂಗತ ಭಾವನೆಯನ್ನು ನಾವು ತೊರೆದು ತುಲನಾತ್ಮಕ ಧರ್ಮದ ಅಧ್ಯಯನವನ್ನು ಕೈಗೊಂಡಿದ್ದೇವೆ. ಆದರೆ ನಮ್ಮ ನಾಗರಿಕತೆಯಲ್ಲಿ ಇಂತಹುದೇ ಒಂದು ಮನೋಭಾವವು, ಬುಡಕಟ್ಟು ಪೂರ್ವಗ್ರಹದ ರೂಪತಳೆದು ಪಡೆದಿರುವ ವ್ಯಾಪ್ತಿಯನ್ನು ಗಮನಿಸಿದರೆ ಧರ್ಮದ ವಿಚಾರದಲ್ಲಿ ನಾವು ಸಾಧಿಸಿರುವ ವಿವೇಚನೆಗೆ ಬಾಲಿಶ ಪ್ರವೃತ್ತಿಯನ್ನು ಮೀರಿ ನಾವು ಬೆಳೆದಿರುವುದು ಕಾರಣವೋ ಅಥವಾ ಜೀವನದ ಒಂದು ಕ್ಷೇತ್ರವಾದ ಧರ್ಮ ಎಂಬುದರಲ್ಲಿ ಆಧುನಿಕ ಹೋರಾಟಗಳು ನಡೆಯುತ್ತಿಲ್ಲ ಎಂಬುದು ಕಾರಣವೋ ಎಂದು ಸಂಶಯ ತಳೆಯಬೇಕಾಗುತ್ತದೆ. ನಮ್ಮ ನಾಗರಿಕತೆಯ ಜ್ವಲಂತ ಸಮಸ್ಯೆಗಳನ್ನು ಕುರಿತು ವಿಚಾರ ಮಾಡುವಾಗ. ಧರ್ಮದ ಕ್ಷೇತ್ರದಲ್ಲಿ ನಾವು ಸಾಧಿಸಿರುವ ಈ ನಿರ್ಲಿಪ್ತತೆಯಿಂದ ದೂರವಿರುವುದು ಕಂಡುಬರುತ್ತದೆ.

ಸಂಪ್ರದಾಯದ ಆಳವಾದ ಅಧ್ಯಯನವು ತಡವಾಗಿ ಆರಂಭಗೊಂಡು ಅರೆ ಮನಸ್ಸಿನಿಂದ ನಡೆಯುವ ಅಧ್ಯಯನ ವಿಷಯವಾಗಲು ಇನ್ನೊಂದು ಸನ್ನಿವೇಶವೂ ಕಾರಣ. ಈಗ ಪ್ರಸ್ತಾಪಿಸಿದುದಕ್ಕಿಂತಲೂ ಇದನ್ನು ಪರಿಹರಿಸುವುದು ಕಠಿಣ. ಸಮಾಜಶಾಸ್ತ್ರಜ್ಞರ ಗಮನವನ್ನು ಸಂಪ್ರದಾಯವು ಸೆಳೆಯದೇ ಇದ್ದುದಕ್ಕೆ ಅವರ ಆಲೋಚನಾ ವಿಧಾನವು ಸಂಪ್ರದಾಯದಿಂದ ರೂಪಿತವಾಗಿದ್ದುದೂ ಒಂದು ಕಾರಣ. ಅವರು ಆಲೋಚನಾ ವಿಧಾನವನ್ನು ನೋಡಲು ಬಳಸುತ್ತಿದ್ದ ಮಸೂರವೇ ಸಂಪ್ರದಾಯ. ಅದಿಲ್ಲದೇ ಅವರು ನೋಡಲೇ ಆಗುತ್ತಿರಲಿಲ್ಲ. ಅದು ಮೂಲಭೂತವಾಗಿರುವಷ್ಟೇ ಪ್ರಮಾಣದಲ್ಲಿ ಪ್ರಜ್ಞೆಯ ಗಮನದಿಂದ ಹೊರಗೆ ಉಳಿಯುತ್ತದೆ. ಈ ಅಂಧತೆಯಲ್ಲಿ ರಹಸ್ಯವೇನೂ ಇಲ್ಲ. ಒಬ್ಬ ಜಿಜ್ಞಾಸುವು ತನ್ನ ಅಧ್ಯಯನಕ್ಕಾಗಿ ಅಂತರಾಷ್ಟ್ರೀಯ ಸಾಲಗಳನ್ನೋ, ಕಲಿಕೆಯ ಕ್ರಮವನ್ನೋ, ಮನೋವ್ಯಾಧಿಯ ಕಾರಣಾಂಶಗಳಲ್ಲಿ ಸ್ವಾನುರಕ್ತಿಯ ಪಾತ್ರವನ್ನೋ ಕುರಿತು ಅಗಾಧವಾಗಿ ವಿಷಯ ಸಂಗ್ರಹಣೆ ಮಾಡಿದಾಗ, ಆ ಅರ್ಥಶಾಸ್ತ್ರಜ್ಞನೋ, ಮಾನಸಶಾಸ್ತ್ರಜ್ಞನೋ, ಮನೋವ್ಯಾಧಿ ಚಿಕಿತ್ಸಕನೋ ಆ ವಿಷಯವಸ್ತುಗಳ ಆಧಾರದ ಮೇಲೆ, ಅವುಗಳನ್ನೇ ಬಳಸಿಕೊಂಡು ಮುಂದುವರಿಯುವನು. ಎಲ್ಲ ಆಧಾರಾಂಶಗಳೂ ಬೇರೆ ಬೇರೆ ರೀತಿಯಲ್ಲಿ ಅಳವಟ್ಟಿರುವ ಇತರ ಸಾಮಾಜಿಕ ವ್ಯವಸ್ಥೆಗಳತ್ತ ಅವನು ಗಮನ ಹರಿಸುವುದಿಲ್ಲ. ಅಂದರೆ ಅವನು ಸಾಂಸ್ಕೃತಿಕ ಉಪಾಧಿಯನ್ನು ಪರಿಗಣನೆಗೆ ತಂದುಕೊಳ್ಳುವುದಿಲ್ಲ. ತಾನು ಅಧ್ಯಯನ ಮಾಡುತ್ತಿರುವ ಸ್ವಭಾವಲಕ್ಷಣವು ನಿರ್ದಿಷ್ಟ ಹಾಗೂ ಅನಿವಾರ್ಯವಾದ ಕೆಲವು ರೂಪ

ಬೇಧಗಳನ್ನು ಹೊಂದಿರುವುದನ್ನು ವೀಕ್ಷಿಸುತ್ತಾನೆ, ತಾನು ಪರಿಗಣಿಸಿರುವ ವಸ್ತು ಅಷ್ಟೇ ಆದುದರಿಂದ ಅದೇ ನಿರುಪಾಧಿಕವೆಂದು ಬಗೆಯುತ್ತಾನೆ. ಹೀಗೆ 1930ರ ಪ್ರಾದೇಶಿಕ ಮನೋಭಾವಗಳನ್ನು ಮಾನವ ಸ್ವಭಾವವೆಂದೂ, ಅವುಗಳ ವಿವರಣೆಯೇ ಅರ್ಥಶಾಸ್ತ್ರ ಅಥವಾ ಮಾನಸಶಾಸ್ತ್ರವೆಂದೂ ಸಮೀಕರಿಸುತ್ತಾನೆ.

ವ್ಯವಹಾರಿಕವಾಗಿ ಇದಕ್ಕೆ ಅಷ್ಟೊಂದು ಮಹತ್ವವಿಲ್ಲ. ನಮ್ಮ ಮಕ್ಕಳು ನಮ್ಮ ಶೈಕ್ಷಣಿಕ ಪರಂಪರೆಯಲ್ಲಿಯೇ ವಿದ್ಯಾವಂತರಾಗಬೇಕು. ನಮ್ಮ ಶಾಲೆಗಳಲ್ಲಿನ ಕಲಿಕೆಯ ಕ್ರಮದ ಅಧ್ಯಯನವು ಬಹಳ ಮುಖ್ಯವಾದುದು. ಅದೇ ರೀತಿ ಇತರ ಆರ್ಥಿಕ ವ್ಯವಸ್ಥೆಗಳ ಬಗ್ಗೆ ಚರ್ಚಿಸುವಾಗ ನಾವು ತೋರುವ ಹಾರಿಕೆಗೂ ಒಂದು ಬಗೆಯ ನ್ಯಾಯವಿದೆ. ನಾವು ನಮ್ಮ ಸಂಸ್ಕೃತಿಯು ಸಂಸ್ಥೀಕರಿಸಿರುವ ನಾನು ನೀನುಗಳ ಚೌಕಟ್ಟಿನಲ್ಲಿಯೇ ಬಾಳಬೇಡವೇ ?

ಅದು ನಿಜ. ಸಂಸ್ಕೃತಿ ವೈವಿಧ್ಯತೆಗಳನ್ನು ಪ್ರಾದೇಶಿಕವಾಗಿ ಯಥಾಸ್ಥಿತಿಯಲ್ಲಿ ಚರ್ಚಿಸುವುದು ಅತ್ಯುತ್ತಮ ಎಂಬುದು ನಮ್ಮ ಉದಾಸೀನಭಾವಕ್ಕೆ ಪುಷ್ಟಿ ನೀಡುತ್ತದೆ. ನಾವು ಸಂಸ್ಕೃತಿಯ ಕಾಲಾನುಕ್ರಮಣಿಕೆಯಿಂದಲೂ ಉದಾಹರಣೆಗಳನ್ನು ಎತ್ತಿಕೊಳ್ಳುವುದಕ್ಕೆ ಐತಿಹಾಸಿಕ ಮಾಹಿತಿಯ ಮಿತಿಯೇ ತಡೆಯಾಗಿದೆ. ಈ ಆನುಕ್ರಮವನ್ನು ನಾವು ಬಯಸಿದರೂ ತಪ್ಪಿಸಿಕೊಳ್ಳಲಾರೆವು. ನಮ್ಮ ಅತ್ಯಂತ ನಿಕಟ ವರ್ತನೆಯಲ್ಲಿಯೂ ಒಂದೇ ಒಂದು ಪೀಳಿಗೆಯ ಅಂತರದಲ್ಲಿ ಆಗಿರುವ ಮಾರ್ಪಾಡನ್ನು ಗಮನಕ್ಕೆ ತೆಗೆದುಕೊಂಡಾಗ ಇದು ನಮ್ಮ ಅರಿವಿಗೆ ಬರುತ್ತದೆ. ಇದುವರೆಗೆ ಈ ಮಾರ್ಪಾಡುಗಳು ಅನುದ್ದಿಷ್ಟವಾಗಿದ್ದು, ಹಿನ್ನೋಟದಲ್ಲಿ ಮಾತ್ರ ನಾವು ಆಯಾ ಸಂದರ್ಭಗಳಿಂದ ಆದ ಪರಿಣಾಮಗಳನ್ನು ಕಾಣಬಹುದು. ನಮಗೆ ನಿಕಟವಾದ ವಿಷಯಗಳಲ್ಲಿ ನಮ್ಮ ಮೇಲೆ ಬಲವಂತದಿಂದ ಹೊರಿಸಿದಲ್ಲದೆ ಸಾಂಸ್ಕೃತಿಕ ಮಾರ್ಪಾಡಿಗೆ ನಾವು ಸಿದ್ಧರಿಲ್ಲ ಎಂಬುದನ್ನು ಬಿಟ್ಟರೆ, ಈ ವಿಚಾರದಲ್ಲಿ ಹೆಚ್ಚು ವಿವೇಚನೆಯ ಹಾಗೂ ಮಾರ್ಗದರ್ಶೀಯ ಮನೋಭಾವವನ್ನು ತಳೆಯುವುದು ಅಸಾಧ್ಯವಾದುದೇನೂ ಅಲ್ಲ. ಸಾಂಸ್ಕೃತಿಕ ಆಚರಣೆಯನ್ನು ಕುರಿತು ನಮ್ಮಲ್ಲಿ ತಪ್ಪುಭಾವನೆಯಿದ್ದು, ನಮ್ಮ ದೇಶ ಮತ್ತು ಕಾಲದ ಆಚರಣೆಯನ್ನೇ ಎತ್ತಿ ಹಿಡಿಯುತ್ತಿರುವುದು ಇದಕ್ಕೆ ಬಹುಮಟ್ಟಿಗೆ ಕಾರಣ. ಇತರ ಸಂಸ್ಕೃತಿಗಳ ಆಚರಣೆಗಳ ಬಗ್ಗೆ ಸ್ವಲ್ಪ ಪರಿಚಯ ಮತ್ತು ಅವು ಎಷ್ಟು ಬಹುರೂಪಿಗಳಾಗಿವೆ ಎಂಬುದರ ಅರಿವು ಒಂದು ವಿವೇಚನಾಪೂರ್ಣವಾದ ಸಾಮಾಜಿಕ ವ್ಯವಸ್ಥೆಗೆ ದಾರಿ ಮಾಡಿಕೊಡಬಲ್ಲವು.

ವಿಭಿನ್ನ ಸಂಸ್ಕೃತಿಗಳ ಅಧ್ಯಯನವು ಇನ್ನೊಂದು ರೀತಿಯಲ್ಲಿ ಇಂದಿನ ಆಲೋಚನೆ ಹಾಗೂ ವರ್ತನೆಯ ಮೇಲೆ ಪರಿಣಾಮಕಾರಿಯಾಗಬಲ್ಲದು. ಆಧುನಿಕ ಜೀವನವು ವಿಧವಿಧ ನಾಗರಿಕತೆಗಳಲ್ಲಿ ನಿಕಟ ಸಂಪರ್ಕ ಉಂಟುಮಾಡಿದೆ. ಈ ಪರಿಸ್ಥಿತಿಗೆ ಸದ್ಯದಲ್ಲಿ ರಾಷ್ಟ್ರೀಯತೆ ಮತ್ತು ಬುಡಕಟ್ಟಿನ ಪ್ರತಿಷ್ಠೆಯ ಪೂಜೆ ಇವುಗಳೇ

ಬಹುಮಂಟ್ಟಿನ ಪ್ರತಿಕ್ರಿಯೆಗಳಾಗಿವೆ. ಪ್ರಾಮಾಣಿಕ ಸಾಂಸ್ಕೃತಿಕ ಪ್ರಜ್ಞೆಯುಳ್ಳ ವ್ಯಕ್ತಿಗಳ ಹಾಗೂ ಸಾಮಾಜಿಕ ನಿಯಮಾಧೀನವಾದ ಇತರ ಜನರ ವರ್ತನೆಗಳನ್ನು ಭಯ ಮತ್ತು ತಿರಸ್ಕಾರಗಳಿಲ್ಲದೆ ವಾಸ್ತವವಾಗಿ ನೋಡಬಲ್ಲವರ ಅವಶ್ಯಕತೆಯು ನಮ್ಮ ನಾಗರಿಕತೆಗೆ ಇಂದು ಇರುವಷ್ಟು ಹಿಂದೆಂದೂ ಇರಲಿಲ್ಲ.

ವಿವಿಧ ಬುಡಕಟ್ಟುಗಳ ಹಾಗೂ ಜನಾಂಗಗಳ ಪ್ರಸ್ತುತ ಸಂಪರ್ಕ ವಿಷಯದಲ್ಲಿ ಪರರನ್ನು ಕಂಡರೆ ತಿರಸ್ಕಾರವೊಂದೇ ಪರಿಹಾರವಲ್ಲ. ಅದು ವೈಜ್ಞಾನಿಕ ಆಧಾರಗಳಿಂದ ರೂಪಿತವಾದ ಪರಿಹಾರವೂ ಅಲ್ಲ. ಕಾಲ, ದೇಶಾನುಗುಣವಾದ ಹಲವು ಸಂಸ್ಕೃತಿ ಲಕ್ಷಣಗಳಂತೆಯೇ ಆಂಗ್ಲೊಸ್ಯಾಕ್ಸನ್ ಅಸಹಿಷ್ಣುತೆಯೂ ಒಂದು. ರಕ್ತಬಂಧುತ್ವ ಮತ್ತು ಸಂಸ್ಕೃತಿಯಲ್ಲಿ ಅವರಿಗೆ ಅತಿ ಸಮೀಪದವರೇ ಆದ ಸ್ಕ್ಯಾನೀಯರಲ್ಲೂ ಇದು ಇಲ್ಲ. ಸ್ಕ್ಯಾನೀಯರು ನೆಲೆಸಿರುವ ದೇಶಗಳಲ್ಲಿನ ಬುಡಕಟ್ಟು ಪೂರ್ವಗ್ರಹವು ಪ್ರಗತಿ ಪರದೇಶಗಳಾದಂತಹ ಇಂಗ್ಲೆಂಡ್ ಹಾಗೂ ಅಮೇರಿಕಾ ಸಂಯುಕ್ತ ಸಂಸ್ಥಾನಗಳಿಗಿಂತ ಸಂಪೂರ್ಣವಾಗಿ ಬೇರೆಯಾದುದು. ಈ ದೇಶದಲ್ಲಿ ಅದು ಜೈವಿಕವಾಗಿ ದೂರದೂರದ ಬುಡಕಟ್ಟುಗಳಲ್ಲಿ ರಕ್ತ ಮಿಶ್ರವಾದುದಕ್ಕೆ ತೋರುವ ಅಸಹಿಷ್ಣುತೆಯಲ್ಲ. ಹಲವಾರು ಬಾರಿ ಬೋಸ್ಟನಿನಲ್ಲಿ ಐರಿಷ್ ಕ್ಯಾಥಲಿಕರ ವಿರುದ್ಧ, ನ್ಯೂಇಂಗ್ಲೆಂಡಿನ ಔದ್ಯೋಗಿಕ ನಗರಗಳಲ್ಲಿ ಇಟಾಲಿಯನರ ವಿರುದ್ಧ, ಕ್ಯಾಲಿಫೋರ್ನಿಯಾದಲ್ಲಿ ಪೌರ್ವಾತ್ಯರ ವಿರುದ್ಧ, ಈ ಅಸಹಿಷ್ಣುತೆ ಉದ್ರಿಕ್ತ ರೂಪ ತಳೆದಿದೆ. ಹಳೆ ಕಾಲದ ನನ್ನ ಗುಂಪು, ಪರರ ಗುಂಪು ಎಂಬ ಭೇದಭಾವನೆಯೇ ಇದು. ಈ ವಿಚಾರದಲ್ಲಿ ನಾವು ಆದಿವಾಸಿ ಪರಂಪರೆಯನ್ನು ಮುನ್ನಡೆಸಿದರೆ ಕಿರಾತ ಬಣಗಳಿಗಿಂತ ಕಡಮೆ ಕ್ಷಮಾರ್ಹರು. ನಾವು ವಿಶ್ವಪರ್ಯಟನೆ ಮಾಡಿದ್ದೇವೆ. ನಮ್ಮ ವಿವೇಚನಾ ಪರಿಷ್ಕಾರದ ಬಗ್ಗೆ ಹೆಮ್ಮೆ ತಳೆದಿದ್ದೇವೆ. ಆದರೆ ಸಂಸ್ಕೃತೀಯ ಪ್ರವೃತ್ತಿಗಳ ಸಾಪೇಕ್ಷತೆಯನ್ನು ಅರಿಯಲಾರದವರಾಗಿ, ವಿಭಿನ್ನ ಮಟ್ಟದ ಜನರೊಂದಿಗೆ ನಾವು ಹೊಂದಿರುವ ಸಂಪರ್ಕದಿಂದ ಲಾಭ ಹಾಗೂ ಸಂತುಷ್ಟಿ ಪಡೆಯಲಾರದವರಾಗಿ, ಅವರೊಂದಿಗೆ ನಮ್ಮ ವ್ಯವಹಾರದಲ್ಲಿ ನಿಷ್ಠಾರಹಿತರಾಗಿದ್ದೇವೆ.

ಇಂದಿನ ಪಾಶ್ಚಿಮಾತ್ಯ ನಾಗರಿಕತೆಯಲ್ಲಿ ಬುಡಕಟ್ಟು ಪೂರ್ವಗ್ರಹದ ಸಾಂಸ್ಕೃತಿಕ ತಳಹದಿಯನ್ನು ಕಂಡುಕೊಳ್ಳುವುದು ಅತ್ಯಗತ್ಯವಾಗಿದೆ. ನಮ್ಮ ರಕ್ತಬಂಧುಗಳಾದ ಐರಿಷರ ಬಗ್ಗೆ ಬುಡಕಟ್ಟು ಪೂರ್ವಗ್ರಹ ತಳೆಯುವ ಮಟ್ಟಕ್ಕೆ, ನಾರ್ವೆ ಮತ್ತು ಸ್ವೀಡನ್ನಿನ ಜನರು, ವಿಭಿನ್ನ ರಕ್ತಸಂತತಿಯವರೋ ಎನ್ನುವ ರೀತಿಯಲ್ಲಿ ಮಾತನಾಡಿಕೊಳ್ಳುವವರ ಮಟ್ಟಿಗೆ ನಾವು ಬಂದಿದ್ದೇವೆ. ಫ್ರಾನ್ಸ್ ಮತ್ತು ಜರ್ಮನಿಗಳು ಪರಸ್ಪರ ವಿರುದ್ಧವಾಗಿ ಹೋರಾಡುವಾಗ ಶಾರೀರಿಕವಾಗಿ ಒಂದೇ ರೀತಿಯವರಾಗಿದ್ದು ಆಲ್ಪೈನ್ ಬುಡಕಟ್ಟಿಗೇ ಸೇರಿದ ಬೇಡನ್ ಪ್ರಾಂತದ ಜನರನ್ನು ಆಲ್ಸೇಸ್ ಪ್ರಾಂತದ ಜನರಿಂದ ಬೇರೆ ಬುಡಕಟ್ಟು ಪಂಕ್ತಿಯೆಂದು ಗುರುತಿಸುವ ಒಂದು ರೇಖೆ ಏರ್ಪಡುತ್ತದೆ. ನೆಲೆ ಮುಂಚೆ ಕಾಲು ಕಿತ್ತು, ಜನ ಎಲ್ಲೆಲ್ಲೂ ಓಡಿಯಾಡುತ್ತಿದ್ದು, ಜನಪದದ ಅತ್ಯಂತ

ಅಪೇಕ್ಷಣೀಯ ಜನರೂ ಅಂತರ ವಿವಾಹಜಾತರಾದ ಈ ಕಾಲದಲ್ಲಿಯೂ ನಾವು ಶುದ್ಧ ಬುಡಕಟ್ಟಿನ ಸಂದೇಶವನ್ನು ಸಂಕೋಚ ಬಿಟ್ಟು ಸಾರುತ್ತಿದ್ದೇವೆ.

ಈ ಪರಿಸ್ಥಿತಿಯನ್ನು ಕುರಿತು ಮಾನವಶಾಸ್ತ್ರ ಎರಡು ವಿವರಣೆಗಳನ್ನು ನೀಡುತ್ತದೆ. ಒಂದು ಸಂಸ್ಕೃತಿಯ ಸ್ವಭಾವಕ್ಕೆ, ಇನ್ನೊಂದು ಅನುವಂಶೀಯತೆಯ ಸ್ವಭಾವಕ್ಕೆ ಸಂಬಂಧಪಟ್ಟುದು. ಸಂಸ್ಕೃತಿಯ ಸ್ವಭಾವಕ್ಕೆ ಸಂಬಂಧಪಟ್ಟ ವಿವರಣೆಯು ನಮ್ಮನ್ನು ಮಾನವಪೂರ್ವ ಸಮಾಜಗಳತ್ತ ಒಯ್ಯುತ್ತದೆ. ಅತ್ಯಂತ ಸೂಕ್ಷ್ಮವಾದ ವರ್ತನೆಯ ವಿಧಾನವನ್ನೂ ಪ್ರಕೃತಿಯು ಜೈವಿಕ ಸಾಧನಗಳಿಂದಲೇ ಅವಿಚ್ಛಿನ್ನವಾಗಿ ಸಾಗಿಸುತ್ತಿರುವ ಸಮಾಜಗಳಿವೆ. ಆದರೆ ಅವು ಮಾನವ ಸಮಾಜಗಳಲ್ಲ, ಸಂಘಜೀವನ ನಡೆಸುವ ಕೀಟಗಳದ್ದು. ಏಕಾಂತವಾದ ಗೂಡಿಗೆ ಒಯ್ದಿಟ್ಟರೂ ರಾಣಿ ಇರುವೆಯು ಲೈಂಗಿಕ ವರ್ತನೆಯ ಒಂದೊಂದು ಸ್ವಭಾವಲಕ್ಷಣವನ್ನೂ, ತನ್ನ ಗೂಡಿನ ವಿವರ ವಿಶೇಷಗಳನ್ನೂ ಪುನರೂಪಿಸಿಕೊಳ್ಳುತ್ತದೆ. ಸಂಘಜೀವನ ನಡೆಸುವ ಕೀಟಗಳು ಪ್ರಕೃತಿಯ 'ಯಾವ ಆಕಸ್ಮಿಕಕ್ಕೂ ಸಿದ್ಧವಿಲ್ಲದಿರುವ' ಪ್ರವೃತ್ತಿಯನ್ನು ಪ್ರತಿನಿಧಿಸುತ್ತವೆ. ಇರುವೆಯು ಸಹಜಪ್ರವೃತ್ತ ವರ್ತನೆಯಲ್ಲಿಯೇ ಇಡೀ ಸಾಮಾಜಿಕ ಬಂಧದ ರೂಪಿಕೆಯನ್ನೂ ಪ್ರಕೃತಿ ಅಳವಡಿಸಿತು. ಒಂದು ಇರುವೆಯು ತನ್ನ ಗುಂಪಿನಿಂದ ದೂರವಾಗುವುದರಿಂದ ಅದು ಹೇಗೆ ತನ್ನ ಸಂತಾನದಲ್ಲಿನ ಮೀಸೆಯ ಆಕಾರವನ್ನೂ, ಹೊಟ್ಟೆಯ ಅಂಗ ವಿನ್ಯಾಸವನ್ನೂ ಪುನರೂಪಿಸದೇ ಇರುವುದಿಲ್ಲವೋ, ಅಂತೆಯೇ ಅಷ್ಟೇ ಮಟ್ಟಿಗೆ ಇರುವೆ ಸಮಾಜದ ಸಾಮಾಜಿಕ ವರ್ಗಗಳೂ, ವ್ಯವಸಾಯದ ವಿಧಾನವೂ ಸಹ ಪುನರೂಪಿತವಾಗದೆ ಹಾಳಾಗುವ ಸಂಭವವಿಲ್ಲ.

ಒಳ್ಳೆಯದಕ್ಕೋ ಇಲ್ಲವೇ ಕೆಟ್ಟದ್ದಕ್ಕೋ ಅಂತೂ ಮಾನವನಲ್ಲಿ ಈ ಸಮಸ್ಯೆಯ ಪರಿಹಾರವು ವಿರುದ್ಧ ಧ್ರುವದಲ್ಲಿ ಆಗಿದೆ. ಕುಲದ ಸಮಾಜ ವ್ಯವಸ್ಥೆ, ಭಾಷೆ, ಸ್ಥಳೀಯ ಧರ್ಮಗಳ ಒಂದೇ ಒಂದು ಅಂಶವೂ ಮನುಷ್ಯನ ಗರ್ಭಾಣುವಿನಿಂದ ಪ್ರಸಾರವಾಗುವುದಿಲ್ಲ. ಯೂರೋಪಿನಲ್ಲಿ ಕಳೆದ ಶತಮಾನಗಳಲ್ಲಿ ಅಡವಿಯಲ್ಲಿ ತಪ್ಪಿಹೋದ ಮಕ್ಕಳು ಇತರ ಮನುಷ್ಯರಿಂದ ಬೇರ್ಪಟ್ಟು ತಮ್ಮನ್ನು ತಾವೇ ಹೇಗೋ ಕಾಪಾಡಿಕೊಂಡಿದ್ದುಂಟು. ಅವರಲ್ಲಿ ಇದ್ದ ಸಾಮ್ಯತೆಯನ್ನು ಕಂಡು ಲಿನ್ನಸನು ಅವರನ್ನು 'ಹೋಮೋಫೆರಸ್' ಎಂಬ ವಂಶವಿಭಾಗವೆಂದು ಪ್ರತ್ಯೇಕವಾಗಿ ಪರಿಗಣಿಸಿದನು. ಅಪರೂಪವಾಗಿ ಕಂಡುಬರುವ ಒಂದು ತೆರನಾದ ಭೂತವೆಂದು ಭಾವಿಸಿದನು. ತಮ್ಮ ಸುತ್ತುಮುತ್ತಲಿನ ವ್ಯವಹಾರದಲ್ಲಿ ಏನೊಂದೂ ಆಸಕ್ತಿವಹಿಸದೇ, ಪ್ರಾಣಿ ಸಂಗ್ರಹಾಲಯದಲ್ಲಿನ ಕಾಡುಮೃಗಗಳಂತೆ ತಾಳಬದ್ಧವಾಗಿ ತಮ್ಮನ್ನು ತಾವು ತೂಗಿಕೊಳ್ಳುತ್ತ, ವಾಕ್‌ಶ್ರವಣ ಅಂಗಗಳು ಕೆಲಸ ಮಾಡುವಂತೆ ತರಬೇತಿ ನೀಡಲು ಅಸಾಧ್ಯವಾಗಿದ್ದು, ನೀರು ಗಡ್ಡೆ ಕಟ್ಟುವಷ್ಟು ಚಳಿಯನ್ನು ಹರಕು ಚಿಂದಿ ಹೊದ್ದು ತಡೆದುಕೊಂಡು, ಯಾವ ತೊಂದರೆಯನ್ನೂ ಅನುಭವಿಸದೆ ಕುದಿಯುವ ನೀರಿನಿಂದ ಆಲೂಗಡ್ಡೆಯನ್ನು ಎತ್ತುತ್ತಿದ್ದ ಈ ಮೊದ್ದು ಪಶುಪ್ರಾಯ ಜೀವಿಗಳೂ ಸಹ ಮಾನವರಾಗಿಯೇ ಹುಟ್ಟಿ

ದವರು ಎಂಬುದನ್ನು ಅವನು ಕಲ್ಪಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಅವರೆಲ್ಲ ಸಣ್ಣ ವಯಸ್ಸಿನಲ್ಲಿ ತಪ್ಪಿಹೋದ ಮಕ್ಕಳು. ಮಾನವೀಯ ಸಾಮರ್ಥ್ಯಗಳು ಯಾವ ಮಾನವ ಸಂಪರ್ಕದಿಂದ ಮಾತ್ರ ಮೆರುಗುಗೊಂಡು ರೂಪ ತಳೆಯಬಲ್ಲುವೋ ಆ ಸಂಪರ್ಕದಿಂದ ಅವರು ವಂಚಿತರಾಗಿದ್ದರು, ಅಷ್ಟೆ.

ಹೆಚ್ಚು ಮಾನವೀಯವಾದ ನಮ್ಮ ನಾಗರಿಕತೆಯಲ್ಲಿ ಈಗ ಪ್ರಾಣಿಪ್ರಾಯರಾದ ಇಂತಹ ಮಕ್ಕಳು ಕಂಡುಬರುವುದಿಲ್ಲ. ಆದರೆ ಒಂದು ಬುಡಕಟ್ಟು ಮತ್ತು ಸಂಸ್ಕೃತಿಯಲ್ಲಿ ಜನಿಸಿದ ಶಿಶುವನ್ನು ಇನ್ನೊಂದಕ್ಕೆ ದತ್ತಕ ಪಡೆದಾಗಲೂ ಈ ವಿಚಾರವು ಸ್ಪಷ್ಟವಾಗುತ್ತದೆ. ಒಂದು ಪೌರ್ವಾತ್ಯ ಮಗು ಪಾಶ್ಚಿಮಾತ್ಯ ಕುಟುಂಬಕ್ಕೆ ದತ್ತಕವಾದಾಗ ಅದು ಇಂಗ್ಲಿಷನ್ನು ಕಲಿಯುತ್ತದೆ. ಆಟಪಾಟಗಳಲ್ಲಿ ತನ್ನ ಜೊತೆಗಾರರಾದ ಮಕ್ಕಳು ತಮ್ಮ ತಂದೆತಾಯಿಗಳತ್ತ ತೋರುವ ಮನೋಭಾವವನ್ನೇ ತನ್ನ ಸಾಕು ತಂದೆತಾಯಿಗಳಲ್ಲಿ ತೋರುತ್ತದೆ ಹಾಗೂ ಬೆಳೆದಾಗ ಅವರೂ ಆ ಯುವವೃತ್ತಿಗಳನ್ನೇ ಅನುಸರಿಸುತ್ತದೆ. ಅವನು ದತ್ತಕ ಸಮಾಜದ ಸಂಸ್ಕೃತಿಯ ಸ್ವಭಾವ ಲಕ್ಷಣಗಳನ್ನು ಕಲಿಯುತ್ತಾನೆ. ಅದರಲ್ಲಿ ಅವನ ನಿಜವಾದ ತಂದೆತಾಯಿಗಳ ಗುಂಪಿನ ಪಾತ್ರ ಏನೇನೂ ಇಲ್ಲ. ಒಂದೆರಡು ತಲೆಮಾರಿನಲ್ಲಿ ಒಂದು ಇಡೀ ಜನತೆ ತನ್ನ ಸಾಂಪ್ರದಾಯಿಕ ಸಂಸ್ಕೃತಿಯನ್ನು ತೊರೆದು, ಪರಗುಂಪಿನ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಾಗ ಬೃಹತ್ ಪ್ರಮಾಣದಲ್ಲಿ ಇದೇ ಪ್ರಕ್ರಿಯೆ ಜರಗುತ್ತದೆ. ಉತ್ತರದ ನಗರಗಳಲ್ಲಿ ಅಮೆರಿಕನ್ ನೀಗ್ರೋಗಳ ಸಂಸ್ಕೃತಿಯು ವಿವರ ವಿಶೇಷಗಳಲ್ಲಿ ಅದೇ ನಗರಗಳ ಶ್ವೇತವರ್ಣೀಯರ ಸಂಸ್ಕೃತಿಯನ್ನು ಬಹುಮಟ್ಟಿಗೆ ಹೋಲುತ್ತದೆ. ಕೆಲವು ವರ್ಷಗಳ ಹಿಂದೆ ನಡೆದ ಹಾರ್ಲೆಮ್ಮಿನ ಒಂದು ಸಂಸ್ಕೃತಿ ಸಮೀಕ್ಷೆಯಲ್ಲಿ ಮರುದಿನದ ಬಂಡವಾಳ ಪತ್ರದ ಪೇಟೆಯ ಬೆಲೆಗಳ ಕೊನೆಯ ಮೂರು ಅಂಕೆಗಳ ಮೇಲೆ ಜೂಜಾಡುವ ವಿಧಾನವು ನೀಗ್ರೋಗಳ ಒಂದು ವಿಶೇಷ ಲಕ್ಷಣವಾಗಿ ತೋರಿಬಂದಿತು. ಬಿಳಿಯರಲ್ಲಿ ಅದಕ್ಕೆ ಸರಿಸಮವಾದ ಬಂಡವಾಳ ಪತ್ರದ ಮೇಲೆಯೇ ಜೂಜು ಕಟ್ಟುವ ಒಲವಿಗಿಂತಲೂ ಇದು ಕಡಮೆ ವೆಚ್ಚದ್ದಾಗಿದ್ದು ಅನಿಶ್ಚಿತತೆ ಹಾಗೂ ಉತ್ತೇಜನದಲ್ಲಿ ಅದಕ್ಕಿಂತ ಕಮ್ಮಿಯಿರಲಿಲ್ಲ. ಶ್ವೇತವರ್ಣೀಯರದೇ ಮಾದರಿಯ, ಅದರಿಂದ ಬಹುದೂರವಲ್ಲದ ಒಂದು ರೂಪಾಂತರವಿದು. ಹೀಗೆಯೇ ಬಹುತೇಕ ಹಾರ್ಲೆಮ್ ಸ್ವಭಾವ ಲಕ್ಷಣಗಳು ಶ್ವೇತವರ್ಣೀಯರಲ್ಲಿದ್ದುದಕ್ಕೆ ಸಮೀಪರೂಪಸಾದೃಶ್ಯ ಪಡೆದಿದ್ದವು.

ಪ್ರಪಂಚಾದ್ಯಂತವೂ, ಮಾನವ ಇತಿಹಾಸದ ಆರಂಭದಿಂದ ಜನರು ಬೇರೊಂದು ಕುಲದ ಜನರ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಲು ಸಾಧ್ಯವಾಗಿದೆಯೆಂಬುದನ್ನು ತೋರಿಸಬಹುದು. ಮಾನವನ ಜೈವಿಕರಚನೆಯಲ್ಲಿ ಇದನ್ನು ಕಠಿಣಗೊಳಿಸುವ ಯಾವ ಅಂಶವೂ ಇಲ್ಲ. ಮಾನವನು ತನ್ನ ಜೈವಿಕನಿಯೋಜನೆಯಲ್ಲಿ ಒಂದು ನಿರ್ದಿಷ್ಟ ಬಗೆಯ ವರ್ತನೆಗೆ ಬದ್ಧನಾಗಿಲ್ಲ. ವಿಭಿನ್ನ ಸಂಸ್ಕೃತಿಗಳಲ್ಲಿ ಮನುಷ್ಯನು ದಾಂಪತ್ಯ, ವಾಣಿಜ್ಯ ಮುಂತಾದವುಗಳನ್ನು ಕುರಿತು ರೂಪಿಸಿರುವ ಬಹುವಿಧವಾದ ಸಾಮಾಜಿಕ ಉಪಾಯ

ಗಳೆಲ್ಲವೂ ಮಾನವನ ಮೂಲಭೂತ ಸಾಮರ್ಥ್ಯದ ಆಧಾರದ ಮೇಲೆ ಏಕರೀತಿಯಾಗಿ ಸಾಧ್ಯವಾಗಿರುವುದನ್ನು ಇಲ್ಲಿ ಉದಹರಿಸಬಹುದು. ಸಂಸ್ಕೃತಿಯು ಜೈವಿಕವಾಗಿ ಪ್ರಸಾರವಾಗುವ ಸಂಕೀರ್ಣವಲ್ಲ.

ಪ್ರಕೃತಿದತ್ತವಾದ ರಕ್ಷಣೆಯ ಭರವಸೆ ತಪ್ಪಿಹೋದುದರಿಂದ ಆದ ನಷ್ಟವು, ಅಧಿಕ ಹೊಂದಾಣಿಕೆಯ ನಮ್ಯತೆಯ (ಪರಿಸ್ಥಿತಿಗೆ ಒಗ್ಗಿಕೊಳ್ಳುವ ಸಹಜ ಗುಣ) ಅನುಕೂಲತೆಗಳಿಂದ ತುಂಬಿ ಬಂದಿದೆ. ಕರಡಿಯಂತೆ ಮಾನವ ಪ್ರಾಣಿ ಹಲವಾರು ಪೀಳಿಗೆಗಳನಂತರ ಆರ್ಕ್‌ಟಿಕ್ ಪ್ರದೇಶಕ್ಕೆ ಹೊಂದಿಕೊಳ್ಳಲು ದಟ್ಟವಾದ ಉಣ್ಣೆ ಅಂಗಿಯನ್ನು ಬೆಳೆಸಿಕೊಳ್ಳಲಾರ. ಅವನು ತನಗಾಗಿ ಅಂಗಿ ಹೊಲಿದುಕೊಳ್ಳು ವುದನ್ನೂ, ಮಂಜುಗಡ್ಡೆಯಲ್ಲಿ ಮನೆ ನಿರ್ಮಿಸಿಕೊಳ್ಳುವುವನ್ನೂ ಕಲಿಯುತ್ತಾನೆ. ಈ ನಮ್ಯತೆಯೇ ಮಾನವನ ಪ್ರಗತಿಯ ಉಗಮ ಹಾಗೂ ಅದರ ನೆಲೆ ನಿಲ್ಲುವಿಕೆ ಯಾಗಿದೆಯೆಂಬುದನ್ನು ಮಾನವ ಪೂರ್ವ ಹಾಗೂ ಮಾನವ ಸಮಾಜಗಳ ಇತಿಹಾಸ ದಲ್ಲಿನ ಜಾಣ್ಮೆಯ ಚರಿತ್ರೆಯಿಂದ ಅರಿತುಕೊಳ್ಳಬಹುದಾಗಿದೆ. ರಾಕ್ಷಸ ಪ್ರಾಣಿಗಳ ಯುಗದಲ್ಲಿ ಆ ನಮ್ಯತೆಯಿಲ್ಲದ ಪ್ರಾಣಿವರ್ಗಗಳು ಒಂದರನಂತರ ಒಂದು ಹುಟ್ಟಿ, ತಮ್ಮ ಪೀಳಿಗೆಯ ಉನ್ನತಿಯ ತುಟ್ಟ ತುದಿಯನ್ನು ಮುಟ್ಟಿ ತಮ್ಮ ಆವರಣಕ್ಕೆ ಹೊಂದಿಕೊಳ್ಳಲು ಯಾವ ಸ್ವಭಾವಲಕ್ಷಣಗಳನ್ನು ಅವು ಜೈವಿಕವಾಗಿ ರೂಪಿಸಿ ಕೊಂಡಿದ್ದುವೋ ಅವೇ ಸ್ವಭಾವ ಲಕ್ಷಣಗಳಿಂದಾಗಿ ನಾಶಹೊಂದಿದುವು. ಬೇಟೆಗಾರ ಪ್ರಾಣಿಗಳು ಮತ್ತು ಮೇಲ್ದರ್ಜೆಯ ವಾನರಗಳು ಕ್ರಮೇಣ ಜೈವಿಕ ಹೊಂದಾಣಿಕೆ ಯನ್ನು ಬಿಟ್ಟು ಇತರವುಗಳನ್ನು ರೂಢಿಸಿಕೊಳ್ಳತೊಡಗಿದವು. ಹೀಗೆ ಅಧಿಕವಾದ ನಮ್ಯತೆಯಲ್ಲಿ ಸ್ವಲ್ಪ ಸ್ವಲ್ಪವಾಗಿ ಪ್ರಜ್ಞೆಯ ಅಭಿವೃದ್ಧಿಯ ಅಡಿಪಾಯ ಬಿದ್ದಿತು. ಮನುಷ್ಯನು ಇದೇ ಪ್ರಜ್ಞೆಯ ಅಭಿವೃದ್ಧಿಯಿಂದಾಗಿಯೇ ನಾಶಹೊಂದುವನೆಂದು ಕೆಲವರು ಸೂಚಿಸುತ್ತಾರೆ ; ಹಾಗಾದರೂ ಆಗಬಹುದು. ಆದರೆ ಯಾರೊಬ್ಬರೂ ನಾವು ಸಂಘಜೀವನ ನಡೆಸುವ ಕೀಟಗಳ ಜೈವಿಕಸಾಧನಗಳತ್ತ ಹೇಗೆ ಹಿಂತಿರುಗ ಬಹುದೆಂಬುದನ್ನು ಸೂಚಿಸಿಲ್ಲವಾದ್ದರಿಂದ ನಮಗೆ ಬೇರಾವ ಮಾರ್ಗವೂ ಇಲ್ಲವಾಗಿದೆ. ಒಳ್ಳೆಯದಕ್ಕೋ, ಇಲ್ಲವೆ ಕೇಡಿಗೋ ಅಂತೂ ಮಾನವನ ಸಾಂಸ್ಕೃತಿಕ ಪರಂಪರೆ ಜೈವಿಕವಾಗಿ ಪ್ರಸಾರವಾಗುವುದಿಲ್ಲ.

ಕೆಲವು ಆನುವಂಶೀಯ ಗರ್ಭಾಣುಗಳನ್ನು ಆಯ್ದು, ನಮ್ಮ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಸಾಧನೆಗಳ ಜವಾಬ್ದಾರಿಯನ್ನು ಅವಕ್ಕೆ ಒಪ್ಪಿಸಿಬಿಡಬೇಕೆಂಬ ವಾದಕ್ಕೆ ಯಾವ ಆಧಾರವೂ ಇಲ್ಲ ಎಂಬುದೇ ಆಧುನಿಕ ರಾಜಕೀಯದಲ್ಲಿ ಇದರ ಉಪಸಿದ್ಧಾಂತ. ನಮ್ಮ ಪಾಶ್ಚಿಮಾತ್ಯ ನಾಗರಿಕತೆಯಲ್ಲಿ ಮುಂದಾಳುತ್ವವು ಕ್ರಮವಾಗಿ ಬೇರೆ ಬೇರೆ ಕಾಲದಲ್ಲಿ ಸೆಮಿಟಿಕ್ ಭಾಷೀಯ ಜನರಿಗೆ, ಹ್ಯಾಮಿಟಿಕ್ಕರಿಗೆ, ಶ್ವೇತ ಬುಡಕಟ್ಟಿನ ಮೆಡಿಟರೇನಿಯನ್ ಉಪವರ್ಗಕ್ಕೆ, ಅನಂತರ ನಾರ್ಡಿಕ್ಕರಿಗೆ ಸಿಕ್ಕಿದೆ. ತತ್ಕಾಲಕ್ಕೆ ಯಾರು ಅದರ ವಾಹಕವಾಗಿರಲಿ, ನಮ್ಮ ನಾಗರಿಕತೆಯ ಸಾಂಸ್ಕೃತಿಕ ಅನುಕ್ರಮತೆಯು

ಬಗ್ಗೆ ಸಂದೇಹವೇ ಇಲ್ಲ. ಮಾನವನ ಅನುವಂಶೀಯತೆಯ ಎಲ್ಲ ಪರಿಣಾಮಗಳಿಗೂ ನಾವು ಬದ್ಧರು. ಜೈವಿಕವಾಗಿ ಪ್ರಸಾರವಾಗುವ ವರ್ತನೆಗೆ ಇರುವ ಅವಕಾಶ ಮಿತಿ ಕಿರಿದು.. ಆದ್ದರಿಂದ ಸಾಂಸ್ಕೃತಿಕ ಪ್ರಕ್ರಿಯೆಯಿಂದ ಪ್ರಸಾರವಾಗುವ ಪರಂಪರೆಗೆ ಇರುವ ಅವಕಾಶ ಅಪರಿಮಿತವಾಗಿದೆ. ಮಾನವ ಅನುವಂಶೀಯತೆಯಲ್ಲಿ ಅದು ಒಂದು ಅತಿ ಮುಖ್ಯವಾದ ಪರಿಣಾಮ.

ಬುಡಕಟ್ಟು ಪರಿಶುದ್ಧತಾವಾದಿಯ ವಾದಗಳಿಗೆ ಮಾನವಶಾಸ್ತ್ರ ನೀಡುವ ಎರಡನೆಯ ಉತ್ತರವು ಅನುವಂಶೀಯತೆಯ ಸ್ವಭಾವಕ್ಕೆ ಸಂಬಂಧಪಟ್ಟುದು. ಬುಡಕಟ್ಟು ಪರಿಶುದ್ಧತಾದಿಯು ಒಂದು ಗೊಡ್ಡು ಪುರಾಣಕ್ಕೆ ಬಲಿಯಾದವ. 'ಬುಡಕಟ್ಟು ಅನುವಂಶೀಯತೆ' ಎಂಬುದೇನು ? 'ತಂದೆಯಿಂದ ಮಗನಿಗೆ ಬಂದ ಅನುವಂಶೀಯತೆ' ಎಂದರೇನೆಂಬುದು ನಮಗೆ ಸರಿಸುಮಾರಾಗಿ ಗೊತ್ತು. ಒಂದು ಕುಟುಂಬ ಪಂಕ್ತಿಯಲ್ಲಿ ಅನುವಂಶೀಯತೆಯ ಪ್ರಾಮುಖ್ಯತೆ ಹೆಚ್ಚು. ಆದರೆ ಅನುವಂಶೀಯತೆಯು ಕುಟುಂಬಪಂಕ್ತಿಗಳಿಗೆ ಮಾತ್ರ ಸೇರಿದ ವಿಚಾರ, ಅದರಿಂದ ಆಚೆಗೆ ಅದು ಗೊಡ್ಡುಪುರಾಣ. ಒಂದು ಎಸ್ಕಿಮೋ ಹಳ್ಳಿಯಂತಹ ಸಣ್ಣ ಹಾಗೂ ನಿಶ್ಚಲ ಸಮುದಾಯಗಳಲ್ಲಿ ಬುಡಕಟ್ಟು ಅನುವಂಶೀಯತೆ ಹಾಗೂ ಮಕ್ಕಳು ಮತ್ತು ತಂದೆತಾಯಿಗಳ ಅನುವಂಶೀಯತೆ ಬಹುಮಟ್ಟಿಗೆ ಒಂದೇ. ಅಲ್ಲಿ ಬುಡಕಟ್ಟು ಅನುವಂಶೀಯತೆ ಎಂಬುದಕ್ಕೆ ಅರ್ಥವಿದೆ. ಆದರೆ ನಾರ್ಡಿಕ್ಕರಂತೆ ವಿಸ್ತಾರವಾದ ಪ್ರದೇಶದಲ್ಲಿ ಹಂಚಿ ಹೋಗಿರುವ ಗುಂಪುಗಳಿಗೆ ಸಂಬಂಧಪಟ್ಟ ಭಾವನೆಯಾಗಿ ಅದಕ್ಕೆ ತಥ್ಯತೆಯ ಆಧಾರ ಇಲ್ಲ. ಮೊದಲನೆಯದಾಗಿ ಎಲ್ಲ ನಾರ್ಡಿಕ್ ರಾಷ್ಟ್ರಗಳಲ್ಲೂ, ಆಲ್ಪೈನ್ ಹಾಗೂ ಮೆಡಿಟರೇನಿಯನ್ ಜನಸಮುದಾಯಗಳಲ್ಲಿ ಕಂಡುಬರುವ ಕುಟುಂಬಪಂಕ್ತಿಗಳೇ ಕಂಡು ಬರುತ್ತವೆ. ಯಾವೊಂದು ಯೂರೋಪಿಯನ್ ಜನಾಂಗದ ದೈಹಿಕ ರಚನೆಯ ವಿಶ್ಲೇಷಣೆಯೂ ಮೇಲುಸೇರುವೆಯನ್ನು ತೋರುತ್ತದೆ. ಕಪ್ಪು ಕಣ್ಣು ಹಾಗೂ ಕಪ್ಪು ಕೂದಲಿನ ಸ್ವೀಡನ್ ದೇಶೀಯನು ದಕ್ಷಿಣದಲ್ಲಿ ಇನ್ನೂ ದಟ್ಟವಾಗಿರುವ ಕುಟುಂಬ ಪಂಕ್ತಿಗಳನ್ನು ಪ್ರತಿನಿಧಿಸುತ್ತಾನೆ. ಈ ದಕ್ಷಿಣದ ಗುಂಪುಗಳ ಬಗ್ಗೆ ನಾವು ತಿಳಿದುಕೊಂಡಿರುವುದಕ್ಕೆ ಸರಿಹೊಂದಿಸಿ ಅವನನ್ನು ಅರಿತುಕೊಳ್ಳಬೇಕು. ದೈಹಿಕ ಸ್ವರೂಪದ ಮಟ್ಟಿಗೆ ಅವನ ಅನುವಂಶೀಯತೆಯು ಸ್ವೀಡನ್ನಿಗೆ ಮಾತ್ರ ಸೀಮಿತವಲ್ಲದ ಅವನ ಕುಟುಂಬ ಪಂಕ್ತಿಗೆ ಸೇರಿದುದು. ಗೋತ್ರಮಿಶ್ರಣವಿಲ್ಲದೆ ದೈಹಿಕ ಮಾದರಿಗಳು ಎಷ್ಟು ಮಟ್ಟಿಗೆ ವಿಭಿನ್ನತೆಯನ್ನು ತಾಳಬಲ್ಲವು ಎಂಬುದು ನಮಗೆ ತಿಳಿದಿಲ್ಲ. ಆದರೆ ಒಳಗುಂಪಿನಲ್ಲಿಯೇ ಸಂತಾನಾಭಿವೃದ್ಧಿಯಾಗುವುದರಿಂದ ಒಂದು ಸ್ಥಳೀಯ ಮಾದರಿ ರೂಪಿತವಾಗುವುದೆಂದು ಬಲ್ಲೆವು. ನಮ್ಮ ಸರ್ವಜನವ್ಯಾಪಿ ಶ್ವೇತನಾಗರಿಕತೆಯಲ್ಲಿ ಇಂತಹ ಪರಿಸ್ಥಿತಿಯಿಲ್ಲ. ಇಲ್ಲಿ ಬುಡಕಟ್ಟು ಅನುವಂಶೀಯತೆಯ ಮಾತೆತ್ತಿದಾಗ ಸಾಧಾರಣ ಅದು ಸುಮಾರು ಒಂದೇ ಆರ್ಥಿಕಮಟ್ಟದ, ಸುಮಾರು ಒಂದೇ ಬಗೆಯ ಶಾಲೆಗಳಿಂದ ಹೊರಬಂದು ಒಂದೇ ಗುಂಪಿನ ವಾರಪತ್ರಿಕೆಗಳನ್ನೋದುವ ಒಂದು

ಗುಂಪಿನ ಜನರನ್ನು ಒಗ್ಗೂಡಿಸುವುದೇ ಅದರ ಉದ್ದೇಶ. ಅಂತಹ ಒಂದು ಜನವಿಭಾಗ, ಅದೇ ಒಳಗುಂಪು, ಹೊರಗುಂಪುಗಳ ಇನ್ನೊಂದು ರೂಪಾಂತರವೇ ಹೊರತು ತಥ್ಯವಾದ ಜೈವಿಕ ಸಮರೂಪವನ್ನು ಹೊಂದಿರುವ ಗುಂಪಲ್ಲ.

ಮಾನವರನ್ನು ಒಂದಾಗಿ ಕೂಡಿಸಿರುವುದು ಅವರ ಸಂಸ್ಕೃತಿ. ಅವರ ಸಮಾನ ಭಾವನೆಗಳು ಮತ್ತು ಆದರ್ಶಗಳು. ಸಮಾನರಕ್ತ ಅನುವಂಶೀಯತೆಯ ಲಾಂಛನವನ್ನು ಆಯ್ದುಕೊಂಡು ಈ ಒಗ್ಗಟನ್ನು ಪೋಷಿಸುವುದನ್ನು ಬಿಟ್ಟು ರಾಷ್ಟ್ರವು ತನ್ನ ಜನರನ್ನು ಒಗ್ಗೂಡಿಸಿರುವ ಸಂಸ್ಕೃತಿಯತ್ತ ಗಮನ ಹರಿಸಬೇಕು, ಅದರಲ್ಲಿನ ಶ್ರೇಷ್ಠ ಗುಣಗಳನ್ನು ಒತ್ತಿ ಹೇಳಬೇಕು. ವಿಭಿನ್ನ ಸಂಸ್ಕೃತಿಗಳಲ್ಲಿ ವಿಕಸಿಸುವ ವಿಭಿನ್ನ ಗುಣಗಳನ್ನು ಮಾನ್ಯ ಮಾಡಬೇಕು. ಹೀಗಾದಲ್ಲಿ ತಪ್ಪು ದಾರಿಗೆಳೆಯುವ ಅಪಾಯಕಾರಿಯಾದ ಒಂದು ಬಗೆಯ ಸಾಂಕೇತಿಕ ನಿರೂಪಣೆಯನ್ನು ವಾಸ್ತವಿಕ ವಿವೇಚನೆಯಿಂದ ಸ್ಥಾನಪಲ್ಲಟ ಮಾಡಿದಂತಾಗುತ್ತದೆ. ಸಾಮಾಜಿಕ ವಿವೇಚನೆಗೆ ಸಂಸ್ಕೃತಿಯ ರೂಪಗಳ ಜ್ಞಾನವು ಅವಶ್ಯಕ. ಪ್ರಸ್ತುತ ಗ್ರಂಥವು ಸಂಸ್ಕೃತಿಯ ಸಮಸ್ಯೆಯನ್ನು ಕುರಿತುದು. ಈಗಾಗಲೇ ನಾವು ನೋಡಿರುವಂತೆ ದೈಹಿಕರೂಪ ಅಥವಾ ಬುಡಕಟ್ಟು ಇವುಗಳನ್ನು ಸಂಸ್ಕೃತಿಯಿಂದ ಬೇರ್ಪಡಿಸಬಹುದು. ವಿಶೇಷ ಕಾರಣಗಳಿಗಾಗಿ ಕೆಲವೆಡೆ ಅದು ಸಮಂಜಸ ಎಂದು ತೋರಬಹುದಾದರೂ ಅದನ್ನು ನಾವು ಒತ್ತಟ್ಟಿಗೆ ಸರಿಸಬಹುದು. ಸಂಸ್ಕೃತಿಯನ್ನು ಕುರಿತ ಚರ್ಚೆಗೆ ಮುಖ್ಯವಾದ ಅಗತ್ಯತೆಯೆಂದರೆ, ಅದು ಸಂಭವನೀಯವಾದ ಸಾಂಸ್ಕೃತಿಕ ರೂಪಗಳ ವಿಶಾಲವಾದ ಆಯ್ಕೆಯ ಆಧಾರದ ಮೇಲೆ ಅವಲಂಬಿತವಾಗಿರಬೇಕು ಎಂಬುದಷ್ಟೆ. ಹೀಗೆ ವಸ್ತುಸ್ಥಿತಿಯ ಮೂಲಕ ಮಾತ್ರ ನಾವು ಸಾಂಸ್ಕೃತಿಕವಾಗಿ ರೂಪಿತವಾದ ಮಾನವೀಯ ಹೊಂದಾಣಿಕೆಗಳನ್ನೂ, ಎಲ್ಲರಿಗೂ ಸಮಾನವಾಗಿದ್ದು ಇಡೀ ಮಾನವ ಕುಲಕ್ಕೇ ಅನಿವಾರ್ಯವಾದ ಜೈವಿಕ ಹೊಂದಾಣಿಕೆಯನ್ನೂ ಬೇರ್ಪಡಿಸಬಹುದು. ಅಂತರಂಗಿಕ ಪರಿಶೀಲನೆಯಿಂದಾಗಲಿ ಅಥವಾ ಯಾವುದೇ ಒಂದು ಸಮಾಜವನ್ನು ವೀಕ್ಷಿಸುವುದರಿಂದಾಗಲಿ ಯಾವುದೇ ವರ್ತನೆಯು ಸಹಜಪ್ರವೃತ್ತೀಯ ಇಲ್ಲವೇ ಜೈವಿಕವಾಗಿ ನಿರ್ಧಾರವಾದುದು ಎಂಬುದನ್ನು ಕಂಡುಹಿಡಿಯಲು ಸಾಧ್ಯವಿಲ್ಲ. ಯಾವುದೇ ವರ್ತನೆಯನ್ನು ಸಹಜಪ್ರವೃತ್ತೀಯವಾದುದು ಎಂದು ವರ್ಗೀಕರಿಸಲು ಅದು ಸ್ವಯಂಚಾಲಿತವಾದುದು ಎಂದು ಸಾಧನೆ ಮಾಡಿ ತೋರುವುದು ಮಾತ್ರ ಸಾಲದು. ಸೋಪಾಧಿಕ ಪ್ರತಿಕ್ರಿಯೆಯೂ, ಜೈವಿಕವಾಗಿ ನಿರ್ಧರವಾದ ಪ್ರತಿಕ್ರಿಯೆಯಷ್ಟೇ ಸ್ವಯಂಚಾಲಿತವಾಗಿರಬಲ್ಲುದು. ನಮ್ಮ ಸ್ವಯಂಚಾಲಿತ ವರ್ತನೆಯ ದೊಡ್ಡ ಸಜ್ಜು, ಬಹುಮಟ್ಟಿಗೆ ಸಂಸ್ಕೃತಿಯಿಂದ ಸೋಪಾಧಿಕವಾದ ಪ್ರತಿಕ್ರಿಯೆಗಳಿಂದಲೇ ಆದುದು. ಆದುದರಿಂದ ಸಾಂಸ್ಕೃತಿಕ ರೂಪಗಳು ಮತ್ತು ಪ್ರಕ್ರಿಯೆಗಳನ್ನು ಕುರಿತ ಚರ್ಚೆಗೆ ಅತ್ಯಂತ ಹೆಚ್ಚಿನ ಬೆಳಕು ಬೀರುವ ವಸ್ತುಗಳೆಂದರೆ, ನಮ್ಮದಕ್ಕೂ ಅವಕ್ಕೂ, ಮತ್ತು ಅವುಗಳೊಳಗೆ ತಮ್ಮ ತಮ್ಮಲ್ಲಿಯೂ ಅತ್ಯಂತ ಕಡಮೆ ಐತಿಹಾಸಿಕ ಸಂಬಂಧವುಳ್ಳ ಸಮಾಜಗಳು. ವಿಶಾಲ ಪ್ರದೇಶಗಳಿಗೆ ವ್ಯಾಪಿಸಿರುವ ಮಹಾನ್ ನಾಗರಿಕತೆಗಳು

ಐತಿಹಾಸಿಕ ಸಂಪರ್ಕ ಜಾಲದಿಂದಲೇ ಆ ವ್ಯಾಪ್ತಿಯನ್ನು ಪಡೆದಿವೆ. ಆದ್ದರಿಂದ ನಾವು ಗಮನ ಹರಿಸಬಹುದಾದ ಏಕೈಕ ಮೂಲ, ಆದಿವಾಸಿ ಸಂಸ್ಕೃತಿಗಳು. 'ಮಾನವ ಸಂಸ್ಥೆಗಳ ವೈವಿಧ್ಯತೆಯನ್ನು ಅಧ್ಯಯನ ಮಾಡಲು ಅವು ಪ್ರಯೋಗಶಾಲೆಯಿದ್ದಂತೆ. ಹಲವು ಆದಿವಾಸಿ ಪ್ರದೇಶಗಳು, ಹೆಚ್ಚಿನ ಪ್ರತ್ಯೇಕತೆಯಿಂದ ಕೂಡಿವೆ. ಆದ್ದರಿಂದ ಅಲ್ಲಿನ ಆದಿವಾಸಿಗಳಿಗೆ ತಾವು ಆಯ್ದುಕೊಂಡ ಸಾಂಸ್ಕೃತಿಕತೆಯನ್ನು ಪರಿಷ್ಕರಿಸಿ, ವಿಸ್ತರಿಸಿಕೊಳ್ಳಲು ಶತಮಾನಗಳ ಕಾಲ ಬೇಕು. ಮಾನವೀಯ ಹೊಂದಾಣಿಕೆಗಳಲ್ಲಿ ಸಾಧ್ಯವಾಗುವ ಬಹುತರದ ವಿಭಿನ್ನತೆಗಳನ್ನು ಕುರಿತು ಅತ್ಯಗತ್ಯ ವಿವರಗಳನ್ನು ಈ ಆದಿವಾಸಿಗಳ ಸಂಸ್ಕೃತಿಗಳು ನಮಗೆ ಸಿದ್ಧರೂಪದಲ್ಲಿ ಒದಗಿಸುತ್ತವೆ. ಸಾಂಸ್ಕೃತಿಕ ಪ್ರಕ್ರಿಯೆಗಳನ್ನು ಅರಿತುಕೊಳ್ಳಲು ಅವುಗಳ ವಿಮರ್ಶಾತ್ಮಕ ಪರಿಶೀಲನೆಯು ಅತ್ಯವಶ್ಯಕ. ಇದು ಸಾಮಾಜಿಕ ಮಾದರಿಗಳನ್ನು ಕುರಿತು ನಾವು ಪಡೆದಿರುವ ಅಥವಾ ಪಡೆಯಬಹುದಾದ ಏಕೈಕ ಪ್ರಯೋಗಾಲಯ.

ಈ ಪ್ರಯೋಗಾಲಯದ ಅನುಕೂಲತೆ ಮತ್ತೊಂದಿದೆ. ಪಾಶ್ಚಿಮಾತ್ಯ ಮಹಾನ್ ನಾಗರಿಕತೆಗಳಿಗಿಂತ, ಅವುಗಳಲ್ಲಿನ ಸಮಸ್ಯೆಗಳು ಸರಳರೂಪದಲ್ಲಿ ಮಂಡಿತವಾಗಿವೆ. ಪಾಶ್ಚಿಮಾತ್ಯ ನಾಗರಿಕತೆಯು ಸಂಚಾರ ಸಾಗಾಣಿಕೆಗಳನ್ನು ಸುಲಭಗೊಳಿಸಿರುವ ಯಂತ್ರಸಾಧನಗಳು, ಅಂತರಾಷ್ಟ್ರೀಯ ಕೇಬಲ್ ಜಾಲ, ಟೆಲಿಫೋನು, ರೇಡಿಯೋಗಳು, ಶಾಶ್ವತತೆ ಹಾಗೂ ಸುಲಭ ಪ್ರಸಾರಕ್ಕೆ ಅಳವಟ್ಟ ಮುದ್ರಿತ ಪುಟ, ಸ್ಪರ್ಧಾತ್ಮಕ ವೃತ್ತಿ ಗುಂಪುಗಳು, ಪಂಥಗಳು ಮತ್ತು ವರ್ಗಗಳ ಬೆಳವಣಿಗೆ ಮೊದಲಾದುವುಗಳಿಂದ ಪ್ರಪಂಚದಾದ್ಯಂತ ನಿರ್ದಿಷ್ಟ ಪ್ರಾಮಾಣಿಕತೆಯನ್ನು ಸಾಧಿಸಿದೆ. ಇವೇ ಮುಂತಾದ ಆವಿಷ್ಕರಣಗಳ ಪರಿಣಾಮದಿಂದ ಆಧುನಿಕ ಸಮಾಜ ಅತಿ ಜಟಿಲತೆಯಿಂದ ಕೂಡಿರುವುದರಿಂದ ಅದನ್ನು ಸಣ್ಣಸಣ್ಣದಾಗಿ ವಿಂಗಡಣೆ ಮಾಡಿದ ಹೊರತು ಅದರ ಯಥೋಚಿತ ವಿಶ್ಲೇಷಣೆ ಅಸಾಧ್ಯ. ಈ ಭಾಗಶಃ ವಿಶ್ಲೇಷಣೆಗಳು ಬಹಳಷ್ಟು ಹೊರಗಿನ ಪ್ರಭಾವಾಂಶಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲದ ಕಾರಣ ಯಥೋಚಿತತೆಯನ್ನು ಕಳೆದುಕೊಳ್ಳುತ್ತವೆ. ಇವುಗಳಲ್ಲಿ ಯಾವುದೇ ಒಂದು ಗುಂಪಿನ ಸಮೀಕ್ಷೆಯು ಸಹ ಪರಸ್ಪರ ವಿರೋಧವಾದ ವಿಜಾತೀಯ ಗುಂಪುಗಳಿಗೆ ಸೇರಿದ ವಿಭಿನ್ನ ಆದರ್ಶಗಳು, ಸಾಮಾಜಿಕ ಗುರಿಗಳು, ಕುಟುಂಬ ಸಂಬಂಧಗಳು ಹಾಗೂ ನೈತಿಕತೆಯನ್ನು ಪಡೆದಿರುವ ವ್ಯಕ್ತಿಗಳನ್ನು ಒಳಗೊಂಡಿರುತ್ತದೆ. ಈ ಗುಂಪುಗಳ ಸಂಬಂಧಜಾಲವು ಸಾಕಷ್ಟು ವಿವರವಾದ ಮಾಪನಕ್ಕೆ ಅತಿ ಜಟಿಲ. ಆದಿವಾಸಿ ಸಮಾಜಗಳಲ್ಲಿಯಾದರೋ ಪ್ರತಿಯೊಬ್ಬ ವಯಸ್ಕ ವ್ಯಕ್ತಿಗೂ ಸಾಂಸ್ಕೃತಿಕ ಪರಂಪರೆಯ ಅರಿವಿರುತ್ತದೆ. ಏಕೆಂದರೆ ಅದು ಅಷ್ಟು ಸರಳವಾಗಿರುತ್ತದೆ. ಗುಂಪಿನ ರೀತಿ ನೀತಿಗಳು ಖಚಿತವಾದ ಸರ್ವಸಾಮಾನ್ಯ ಮಾದರಿಯಲ್ಲಿ ರೂಪುಗೊಂಡಿವೆ. ಈ ಸರಳ ಪರಿಸರದಲ್ಲಿ ಸ್ವಭಾವ ಲಕ್ಷಣಗಳ ಪರಸ್ಪರ ಸಂಬಂಧವನ್ನು ಯಾವ ರೀತಿಯಲ್ಲಿ ಅಂದಾಜು ಮಾಡಬಹುದೋ ಆ ರೀತಿಯಲ್ಲಿ ನಮ್ಮ ಜಟಿಲ ಸಮಾಜದ ತಿರುವುಮುರುವುಗಳಲ್ಲಿ ಮಾಡುವುದು ಅಸಾಧ್ಯ.

ಆದಿವಾಸಿ ಸಂಸ್ಕೃತಿಯನ್ನು ಕುರಿತ ಈ ವಾಸ್ತವಾಂಶಗಳನ್ನು ಒತ್ತಿಹೇಳಲು ಮುಂಡಿಸುತ್ತಿರುವ ಈ ಕಾರಣಗಳಿಗೂ, ಇದುವರೆಗೆ ಮಾನವಶಾಸ್ತ್ರ ಸಂಪ್ರದಾಯಾನುಸಾರ ಆ ವಸ್ತುವನ್ನು ಬಳಸಿರುವ ಬಗೆಗೂ ಯಾವ ಸಂಬಂಧವೂ ಇಲ್ಲ. ಮೂಲಗಳನ್ನು ಪುನರ್ರಚಿಸಲು ಆ ವಸ್ತು ಬಳಕೆಯಾಗುತ್ತಿತ್ತು. ಮೊದಮೊದಲು ಮಾನವ ಶಾಸ್ತ್ರಜ್ಞರು ವಿಭಿನ್ನ ಸಂಸ್ಕೃತಿಗಳ ಎಲ್ಲ ಸ್ವಭಾವಲಕ್ಷಣಗಳನ್ನು ವಿಕಾಸಾನುರೀತ್ಯವಾದ ಅನುಕ್ರಮದಲ್ಲಿ ಅವುಗಳ ಅತಿ ಹಳೆಯ ರೂಪಗಳಿಂದ ಅವುಗಳ ಅತ್ಯಂತ ಉಚ್ಚಾ_ಯ ರೂಪವೆಂದು ಗಣಿಸಲ್ಪಟ್ಟ ಪಾಶ್ಚಿಮಾತ್ಯ ರೂಪಗಳವರೆಗೆ ಅಳವಡಿಸುತ್ತಿದ್ದರು. ಆದರೆ ನಮ್ಮ ಧರ್ಮಕ್ಕೆ ಬದಲು ಆಸ್ಟ್ರೇಲಿಯದ ಆದಿವಾಸಿಗಳ ಧರ್ಮವನ್ನು ಕುರಿತು ಚರ್ಚಿಸಿದರೆ ನಾವು ಸೃಷ್ಟಿ ಪ್ರಥಮವಾದ ಧರ್ಮವನ್ನು ಕಂಡುಹಿಡಿಯುತ್ತಿದ್ದೇವೆಂದೋ, ಇರೋಕ್ವಿಯನ್ ಸಮಾಜ ವ್ಯವಸ್ಥೆಯನ್ನು ಕುರಿತು ಚರ್ಚಿಸಿದರೆ ಮಾನವನ ಆದಿಪೂರ್ವಜರ ಕೂಡಿಕೆಯ ರೂಢಿಗಳನ್ನು ಅರಿಯುತ್ತಿದ್ದೇವೆಂದೋ ಭಾವಿಸಲು ಯಾವ ಕಾರಣಗಳೂ ಇಲ್ಲ.

ಮಾನವ ಬುಡಕಟ್ಟೆಲ್ಲ ಒಂದೇ ವಂಶವೆಂದು ನಾವು ನಂಬಲೇಬೇಕಾಗಿರುವುದರಿಂದ, ಎಲ್ಲೆಲ್ಲಿಯೂ ಮಾನವನ ಇತಿಹಾಸವೂ ಏಕರೀತಿಯಲ್ಲಿ ಪ್ರಾಚೀನವಾದುದು ಎಂದು ಹೇಳಬೇಕಾಗುತ್ತದೆ. ಕೆಲವು ಆದಿವಾಸಿ ಕುಲಗಳು ನಾಗರಿಕ ಮಾನವನದಕ್ಕಿಂತ ಸೃಷ್ಟಿ ಪ್ರಥಮ ರೂಪದ ವರ್ತನೆಗಳಿಗೆ ಹತ್ತಿರವಾದ ರೂಪಗಳಿಗೆ ಅಂಟಿಕೊಂಡಿರಬಹುದು. ಆದರೆ ಇದು ಸಾಪೇಕ್ಷ್ಯವಾದುದು; ನಮ್ಮ ಊಹೆಗಳು ಸರಿಯೂ ಇರಬಹುದು ಅಥವಾ ತಪ್ಪೂ ಇರಬಹುದು. ಸಮಕಾಲೀನ ಆದಿವಾಸಿ ಸಂಪ್ರದಾಯವೊಂದನ್ನು ಮಾನವ ವರ್ತನೆಯ ಮೂಲರೂಪವೆಂದು ಹೆಸರಿಸುವುದಂತೂ ಸಮರ್ಥನೀಯವಾದುದಲ್ಲ. ಈ ಪ್ರಥಮ ಆರಂಭಗಳ ಸರಿಸುಮಾರು ಜ್ಞಾನವನ್ನು ಗಳಿಸಲು ಶಾಸ್ತ್ರೀಯವಾಗಿ ಒಂದೇ ಒಂದು ಹಾದಿಯಿದೆ. ಮಾನವ ಸಮಾಜಗಳಲ್ಲಿ ಸರ್ವವ್ಯಾಪಿಯಾದ ಅಥವಾ ಬಹುಮಟ್ಟಿಗೆ ಸರ್ವವ್ಯಾಪಿಯಾದ ಕೆಲವು ಸ್ವಭಾವಲಕ್ಷಣಗಳನ್ನು ಅಧ್ಯಯನ ಮಾಡುವುದೇ ಆ ಹಾದಿ. ಅಂತಹ ಕೆಲವು ಸ್ವಭಾವಲಕ್ಷಣಗಳು ಎಲ್ಲರಿಗೂ ತಿಳಿದಂತಹುವು, ಅವುಗಳಲ್ಲಿ ಸರ್ವಚೇತನಸಿದ್ಧಾಂತ ಮತ್ತು ಮದುವೆಯ ಮೇಲೆ ಇರುವ ಬಹಿರ್ವಿವಾಹ ನಿರ್ಬಂಧಗಳು ಎಲ್ಲರೂ ಒಪ್ಪುವಂತಹವು. ಮಾನವನ ಆತ್ಮ ಮತ್ತು ಮರಣೋತ್ತರ ಜೀವನಗಳ ಬಗ್ಗೆ ವಿಭಿನ್ನ ಅಭಿಪ್ರಾಯಗಳಿದ್ದು ಹೇಗೆ ಪ್ರಶ್ನೆಗಳೇಳುತ್ತವೆ. ಇಂತಹ ಬಹುಮಟ್ಟಿಗೆ ಸರ್ವವ್ಯಾಪಿಗಳಾದ ನಂಬಿಕೆಗಳನ್ನು ಅತಿ ಹಳೆಯ ಮಾನವ ಆವಿಷ್ಕರಣಗಳೆಂದು ಸಹಜವಾಗಿ ಭಾವಿಸಬಹುದು. ಹಾಗೆಂದ ಮಾತ್ರಕ್ಕೆ ಅವು ಜೈವಿಕವಾಗಿ ನಿರ್ಧರಿತವಾದುವು ಎಂದು ಹೇಳಿದಂತಲ್ಲ. ಅವು ಮಾನವ ಕುಲದ ಮೊದಮೊದಲ ಆವಿಷ್ಕರಣಗಳಾಗಿದ್ದು, ಮಾನವನ ಆಲೋಚನೆಯಲ್ಲಿ ಮೂಲಭೂತವಾಗಿ ನಿಂತಿರುವ 'ತೊಟ್ಟಿಲಿನ' ಸ್ವಭಾವಲಕ್ಷಣಗಳಾಗಿರಬಹುದು. ಕೂಲಂಕಶವಾಗಿ

ವಿಶ್ಲೇಷಣೆ ಮಾಡಿದಲ್ಲಿ ಅವೂ ಸಹ ಇತರ ಪ್ರಾದೇಶಿಕ ಸಂಪ್ರದಾಯಗಳಷ್ಟೇ ಸಾಮಾಜಿಕವಾಗಿ ಸೋಪಾಧಿಕವಾದುವುಗಳಾಗಿ ತೋರಬಹುದು. ಆದರೆ ಅವು ಬಹುಕಾಲದಿಂದ ಮಾನವನ ವರ್ತನೆಯಲ್ಲಿ ಅನಿಚ್ಛಿತವಾಗಿ ನಿಂತಿವೆ. ಅವು ಹಳೆಯವು. ಸರ್ವವ್ಯಾಪಿಗಳು. ಹೀಗೆಂದ ಮಾತ್ರಕ್ಕೆ ಇಂದು ನಾವು ಕಾಣುವ ಯಾವುದೇ ರೂಪ ವಿಶೇಷವೂ ಸೃಷ್ಟಿ ಪ್ರಥಮದಲ್ಲಿ ತೋರಿ ಬಂದ ಮೂಲರೂಪಗಳಾಗಲಾರವು. ವೈವಿಧ್ಯತೆಗಳನ್ನು ಅಧ್ಯಯನಮಾಡುವುದರಿಂದ ಮೂಲಗಳನ್ನು ಪುನರ್ನಿರ್ಮಿಸುವ ಯಾವ ದಾರಿಯೂ ಕಾಣಬರುವುದಿಲ್ಲ. ನಂಬಿಕೆಯ ಸರ್ವವ್ಯಾಪಿ ತಿರುಳನ್ನು ಪ್ರತ್ಯೇಕಿಸಿ, ಅದರಿಂದ ಅದರ ಪ್ರಾದೇಶಿಕ ರೂಪಾಂತರಗಳನ್ನು ಬೇರ್ಪಡಿಸಬಹುದು ಅಷ್ಟೆ. ಆಗಲೂ ಸಹ ಆ ಸ್ವಭಾವಲಕ್ಷಣವು ಅವಲೋಕನಮಾಡಿದ ಎಲ್ಲ ಸ್ವಭಾವಲಕ್ಷಣಗಳಿಗೂ ಸಮಾನವಾದ ಕನಿಷ್ಠ ರೂಪದಲ್ಲಿ ತೋರಿ ಬಂದುದಾಗಿರದೇ ಖಚಿತವಾದ ಒಂದು ಪ್ರಾದೇಶಿಕ ರೂಪಾಂತರದಲ್ಲಿಯೇ ತೋರಿಬಂದುದಾಗಿರಬಹುದು.

ಈ ಕಾರಣದಿಂದ ಮೂಲಗಳನ್ನು ಪುನರ್ರಚಿಸಲು ಆದಿವಾಸಿ ಸಂಪ್ರದಾಯಗಳನ್ನು ಬಳಸಿಕೊಳ್ಳುವುದು ಊಹಾಪೋಹವಷ್ಟೆ. ಪರಸ್ಪರ ಪ್ರತ್ಯೇಕವಾದ, ಅಷ್ಟೇ ಮಟ್ಟಿಗೆ ಪರಸ್ಪರ ಪೂರಕವಾದ ಮತ್ತು ನಮಗೆ ಇಚ್ಛಿತವಾದ ಮೂಲಗಳ ಪರವಾಗಿ ವಾದಗಳನ್ನು ಹೂಡಬಹುದು. ಮಾನವ ಶಾಸ್ತ್ರೀಯ ಸಾಧನ ಸಾಮಗ್ರಿಗಳ ಬಳಕೆಗಳಲ್ಲಿ, ಇದೊಂದರಲ್ಲಿ ಮಾತ್ರ ಅತಿ ವೇಗದಿಂದ ಊಹಾಪೋಹಗಳೆದ್ದಿದ್ದರೂ ಪ್ರಸ್ತುತ ವಿಷಯದ ಸ್ವಭಾವಕ್ಕೆ ಅನುಗುಣವಾಗಿ ಯಾವ ಪ್ರಮಾಣವನ್ನು ಒದಗಿಸುವುದೂ ಸಾಧ್ಯವಿಲ್ಲ.

ಸಾಮಾಜಿಕ ರೂಪಗಳನ್ನು ಚರ್ಚಿಸಲು ಆದಿವಾಸಿ ಸಮಾಜಗಳನ್ನು ಬಳಸಿಕೊಂಡೆವೆಂಬ ಕಾರಣದಿಂದ ಅದಕ್ಕೂ ಆದಿವಾಸಿ ಜೀವನಕ್ಕೆ ಮರಳಬೇಕೆಂಬ ಭಾವಪೂರ್ಣತೆಗೂ ಸಂಬಂಧ ಕಲ್ಪಿಸಬಾರದು. ಸರಳ ಜನರನ್ನು ಕಾವ್ಯಮಯಗೊಳಿಸುವ ಭಾವದಿಂದ ನಾವು ನಮ್ಮ ವಾದಗಳನ್ನು ಮಂಡಿಸುತ್ತಿಲ್ಲ. ವಿಜಾತೀಯ ಆದರ್ಶಗಳ ಹಾಗೂ ಯಾಂತ್ರಿಕ ಗದ್ದಲಗೊಂದಲದ ಈ ಕಾಲದಲ್ಲಿ ನಮಗೆ ಈ ಜನದ ಅಥವಾ ಆ ಜನದ ಸಂಸ್ಕೃತಿಯು ಹಲವು ವಿಧಗಳಲ್ಲಿ ರಂಜಿಸಬಹುದು. ಆದಿವಾಸಿ ಜನರು ಕಾಪಾಡಿ ಇಟ್ಟಿರುವ ಆದರ್ಶಗಳನ್ನು ಪುನಃಪ್ರಾಧಾನ್ಯ ಮಾಡುವುದರಿಂದ ನಮ್ಮ ಸಮಾಜವು ತನ್ನ ವ್ಯಾಧಿಗಳಿಂದ ಮುಕ್ತವಾಗುವುದಿಲ್ಲ. ಸರಳ ಆದಿವಾಸಿಯತ್ತ ತಳೆಯುವ ಭಾವಪೂರ್ಣ 'ಅಸಾಧ್ಯಾದರ್ಶವಾದಿತ್ವ'ವು ಕೆಲವೊಮ್ಮೆ ಆಕರ್ಷಕವಾಗಿ ತೋರಬಹುದಾದರೂ ಮಾನವ ಕುಲ ಅಧ್ಯಯನದಲ್ಲಿ ಸಹಾಯಕವಾಗುವಷ್ಟೇ ಮಟ್ಟಿಗೆ ಮಾರಕವೂ ಆಗುವುದುಂಟು.

ಸಂಸ್ಕೃತಿಯ ರೂಪಾಂತರಗಳು ಹಾಗೂ ಪ್ರಕ್ರಿಯೆಗಳ ಅಧ್ಯಯನಕ್ಕೆ ಪ್ರಮಾಣ ಸಾಧನ ಸಾಮಗ್ರಿಗಳನ್ನೊದಗಿಸುವ ಕಾರಣದಿಂದ ಇಂದು ಆದಿವಾಸಿ ಸಮಾಜಗಳ ಕೂಲಂಕಷ ಅಧ್ಯಯನವು ಬಹಳ ಮುಖ್ಯವಾದುದು ಎಂದು ಮೊದಲೇ ಹೇಳಿದ್ದೇವೆ. ಒಂದು ನಿರ್ದಿಷ್ಟ ಸಾಂಸ್ಕೃತಿಕ ಮಾದರಿಗೆ ಅನುಗುಣವಾದ ಪ್ರತಿಕ್ರಿಯೆಗಳನ್ನು ಮಾನವ

ಕುಲಕ್ಕೆಲ್ಲ ಸಮಾನವಾದವುಗಳಿಂದ ಬೇರ್ಪಡಿಸಲು ಅವು ನಮಗೆ ಸಹಾಯಕವಾಗುತ್ತವೆ. ಅಲ್ಲದೆ. ಸಾಂಸ್ಕೃತಿಕವಾಗಿ ಉಪಾಧಿಯಾದ ವರ್ತನೆಯ ಅತ್ಯಂತ ಪ್ರಮುಖಪಾತ್ರವನ್ನು ಅಂದಾಜುಮಾಡಿ ಅಂತುಕೊಳ್ಳಲೂ ಸಹಾಯಕವಾಗುತ್ತವೆ. ಸಂಸ್ಕೃತಿ, ಆದರ ಪ್ರಕ್ರಿಯೆಗಳು ಹಾಗೂ ಕ್ರಿಯೆಗಳು, ಈ ವಿಷಯದ ಬಗ್ಗೆ ಸಾಧ್ಯವಿದ್ದಷ್ಟೂ ಜ್ಞಾನವನ್ನು ಗಳಿಸುವುದು ಅವಶ್ಯಕ. ಈ ಜ್ಞಾನವನ್ನು ಅಕ್ಷರಪೂರ್ವ ಸಮಾಜಗಳಲ್ಲಿನ ಮಾಸ್ತವಾಂಶಗಳ ಮೂಲಕ ಗಳಿಸುವುದಕ್ಕಿಂತ ಹೆಚ್ಚು ಲಾಭಕಾರಿಯಾಗಿ ಬೇರಾವ ಮಾರ್ಗದಲ್ಲಿಯೂ ಗಳಿಸಲಾರೆವು.

ಅಧ್ಯಾಯ 2

ಸಂಸ್ಕೃತಿಗಳ ವೈವಿಧ್ಯತೆ

ಕ್ಯಾಲಿಫೋರ್ನಿಯಾದ ಜನರು ಡಿಗ್ಗರ್ ಇಂಡಿಯನರೆಂದು ಕರೆಯುವ ಜನಗಳ ಮುಖ್ಯಸ್ಥನೊಬ್ಬ, ತನ್ನ ಜನರು ಪೂರ್ವಕಾಲದಲ್ಲಿ ಅನುಸರಿಸುತ್ತಿದ್ದ ಜೀವನವಿಧಾನಗಳನ್ನು ಕುರಿತು ನನ್ನೊಂದಿಗೆ ಬಹಳಷ್ಟು ಮಾತನಾಡಿದ. ಅವನು ಕ್ರೈಸ್ತಧರ್ಮಾವಲಂಬಿ, ನೀರಾವರಿ ಆಶ್ರಯದಲ್ಲಿ ಪೀಚ್ ಮತ್ತು ಎಫ್ರಿಕಾಟ್ ಕೃಷಿ ಮಾಡುವ ಜನರ ಮುಖಂಡ. ಆದರೆ ಕರಡಿ ಕುಣಿತದ ಸಂದರ್ಭದಲ್ಲಿ ಮಾಂತ್ರಿಕರು ಕಣ್ಣೆದುರಿಗೇ ಕರಡಿಗಳಾಗಿ ಮಾರ್ಪಡುತ್ತಿದ್ದುದನ್ನು ಪ್ರಸ್ತಾಪಿಸುವಾಗ ಉದ್ವೇಗದಿಂದ ಅವನ ಕೈಗಳು ನಡುಗುತ್ತಿದ್ದುವು; ಧ್ವನಿ ಕಂಪಿಸುತ್ತಿತ್ತು. ಅವನ ಪೂರ್ವಿಕರು ಪಡೆದಿದ್ದ ಈ ಶಕ್ತಿ ಅದ್ವಿತೀಯವಾದುದು. ಅವರು ತಿನ್ನುತ್ತಿದ್ದ ಮರಳ್ಗಾಡಿನ ಆಹಾರಪದಾರ್ಥಗಳನ್ನು ಕುರಿತು ಮಾತನಾಡುವುದೆಂತೂ ಅವನಿಗೆ ಬಹಳ ಪ್ರಿಯವಾಗಿತ್ತು. ಹಲವಾರು ಗಿಡಗಳನ್ನು ಬೇರು ಸಹಿತ ಕಿತ್ತು ತಂದು ತನಗೆ ಅವುಗಳ ಪ್ರಾಮುಖ್ಯತೆಯ ಅರಿವಿರುವುದರ ಬಗ್ಗೆ ಹೆಮ್ಮೆಪಡುತ್ತ ತೋರುತ್ತಿದ್ದ. ಆ ಕಾಲದಲ್ಲಿ ತನ್ನ ಜನ 'ಮರಳ್ಗಾಡಿನ ಆರೋಗ್ಯದಾಯಕ ಆಹಾರ'ಗಳನ್ನು ಸೇವಿಸುತ್ತಿದ್ದರು ಎಂದು ಹೇಳಿದ. ಅವರಿಗೆ ಡಬ್ಬಗಳಲ್ಲಿ ಸಂಗ್ರಹಿಸಿದ ಆಹಾರಗಳ ವಿಷಯವಾಗಲಿ, ಕಟುಕರ ಅಂಗಡಿಯಲ್ಲಿ ಮಾರಾಟವಾಗುವ ಮಾಂಸಗಳ ವಿಷಯವಾಗಲಿ ಏನೇನೂ ತಿಳಿದಿರಲಿಲ್ಲ. ಕಾಲಕ್ರಮದಲ್ಲಿ ಆತನ ಜನರನ್ನು ಕೀಳ್ಮಟ್ಟಕ್ಕಿಳಿಯಲು ಇಂತಹ ಇಂದಿನ ಹೊಸ ಪದ್ಧತಿಗಳೇ ಕಾರಣವೆಂದು ಅವನ ಇಂಗಿತ.

ರಾಮೊನ್ ಒಂದು ದಿನ ನನಗೆ ಮೆಸಕ್ವೆಟ್ (ಒಂದು ಬಗೆಯ ವನ್ಯ ಸಸ್ಯದ ಬೀಜ)ನ ಹಿಟ್ಟು ತಯಾರಿಸುವುದನ್ನೂ, ಓಕ್ ಮರದ ಹಣ್ಣಿನ ಸಾರು ಮಾಡುವುದನ್ನೂ ವಿವರಿಸುತ್ತಿದ್ದ. ಆ ಮಾತಿನ ನಡುವೆ ತಟಕ್ಕನೆ "ಆರಂಭದಲ್ಲಿ ದೇವರು ಪ್ರತಿ ಜನಾಂಗಕ್ಕೂ ಒಂದೊಂದು ಮಣ್ಣಿನ ಬಟ್ಟಲನ್ನಿತ್ತ. ಅವರು ಆಯಾ ಬಟ್ಟಲಿನಿಂದ

ತಮ್ಮ ಜೀವನವನ್ನು ಸವಿದರು." ಎಂದು ಹೇಳಿದ. ಆ ಮಾತಿನ ಈ ಅಲಂಕಾರಿಕತೆ, ಆ ಜನರ ಯಾವುದಾದರೂ ಪರಂಪರಾಗತ ಸಂಸ್ಕಾರದಲ್ಲಿ ಬರುತ್ತದೋ ಅಥವಾ ಅದು ಅವನ ಸ್ವಂತ ಕಲ್ಪನೆಯೋ ಎಂಬುದು ನನಗೆ ತಿಳಿಯದು. ಬಾನ್ನಿಂಗ್ ಪ್ರದೇಶದ ಬಿಳಿಯರಿಂದ ಅವನು ಅಂತಹ ಮಾತು ಕೇಳಿರುವನೆಂದು ಊಹಿಸುವುದು ಕಷ್ಟ. ಅವರು ಬೇರೆ ಜನರ ಜೀವನ ಪದ್ಧತಿಗಳನ್ನು ಕುರಿತು ಚರ್ಚೆ ಮಾಡುವವರಲ್ಲ. ಅದು ಎಲ್ಲಿಂದಲೇ ಬಂದಿರಲಿ, ಈ ನಮ್ರ ಇಂಡಿಯನ್ನನ ಮನಸ್ಸಿನಲ್ಲಿ ಈ ಮಾತಿನ ಅಲಂಕಾರಿಕತೆಯು ಸ್ಪಷ್ಟವಾಗಿದ್ದು, ಅರ್ಥಗರ್ಭಿತವಾಗಿತ್ತು. ಅವನು ಅದೇ ಧಾಟಿಯಲ್ಲಿ ಮುಂದುವರಿದು,"ಅವರೆಲ್ಲ ತಮ್ಮ ಬಟ್ಟಲುಗಳನ್ನು ನೀರಿನಲ್ಲಿ ಅದ್ದಿದರು. ಆದರೆ ಅವರ ಬಟ್ಟಲುಗಳು ಬೇರೆ ರೀತಿಯವಾಗಿದ್ದವು. ಈಗ ನಮ್ಮ ಬಟ್ಟಲು ಒಡೆದು ಹೋಗಿದೆ. ಅದು ಇಂದು ಇಲ್ಲ" ಎಂದ.

'ನಮ್ಮ ಬಟ್ಟಲು ಒಡೆದು ಹೋಗಿದೆ'. ಗೃಹಗಳಲ್ಲಿ ಭೋಜನ ಸಮಯದ ಆಚಾರವಿಧಿಗಳು, ಆರ್ಥಿಕ ವ್ಯವಸ್ಥೆಯ ಪರಸ್ಪರ ಹಂಗುಗಳು, ಗ್ರಾಮಗಳಲ್ಲಿಯ ಸಮಾರಂಭಗಳು, ಪರಂಪರಾಗತ ಕರಡಿ ಕುಣಿತದಲ್ಲಿ ಮೈದುಂಬುವುದು, ಒಳ್ಳೆಯದು ಕೆಟ್ಟದರ ಬಗ್ಗೆ ಅವರ ನೈತಿಕ ಆದರ್ಶಗಳು, ಒಟ್ಟಿನಲ್ಲಿ ಆ ಜನರ ಜೀವನಕ್ಕೆ ಮೆರಗು ನೀಡಿ, ಅದಕ್ಕೆ ರೂಪವಿತ್ತು, ಅರ್ಥಪೂರ್ಣಗೊಳಿಸಿದ್ದ ಆಚಾರ ವಿಚಾರಗಳೆಲ್ಲ ಕಣ್ಮರೆಯಾಗಿದ್ದವು. ಆ ಮುದುಕನೇನೋ ಇನ್ನೂ ಬಲಶಾಲಿಯಾಗಿಯೇ ಇದ್ದ. ಬಿಳಿಯರೊಂದಿಗಿನ ವ್ಯವಹಾರಗಳಲ್ಲಿ ಮುಖಂಡನೂ ಆಗಿದ್ದ. ತನ್ನ ಜನರು ದೈಹಿಕವಾಗಿ ನಾಶಗೊಂಡರೆಂಬುದು ಅವನ ಮಾತಿನ ಇಂಗಿತವಲ್ಲ. ಅವನು ತನ್ನ ಮಾತಿನಲ್ಲಿ ಪ್ರಸ್ತಾಪಿಸಿದುದು, ಜೀವನದಷ್ಟೇ ಬೆಲೆಯುಳ್ಳಂತಹ, ತನ್ನ ಜನರ ಆದರ್ಶಗಳು ಹಾಗೂ ನಂಬಿಕೆಗಳ ಸೌಧ ಕುಸಿದು ಬಿದ್ದು ನಾಶವಾಯಿತು ಎಂಬ ಸಂಗತಿ. ಜೀವನದ ಇತರ ಬಟ್ಟಲುಗಳೂ ಇದ್ದವು. ಅವುಗಳಲ್ಲಿಯೂ ಅದೇ ನೀರು ಇರಬಹುದು. ಆದರೆ ಆದ ನಷ್ಟ ಮತ್ತೆ ತುಂಬಲಾರದಂತಹುದು. ಇಲ್ಲಿ ಒಂದು ಅಂಶವನ್ನು ತೆಗೆದು, ಅಲ್ಲಿ ಒಂದನ್ನು ಕೂಡಿಸಿ ಕೈಯಾಡಿಸಿ ಸರಿಪಡಿಸುವಂತಹುದಲ್ಲ. ಅವರ ಜೀವನ ವಿಧಾನದ ವಿನ್ಯಾಸ ಮೂಲಭೂತವಾಗಿದ್ದು, ಅದು ಒಂದು ಸಮಗ್ರ ರಚನೆಯಾಗಿತ್ತು ; ಅವರ ಸ್ವಂತದ್ದಾಗಿತ್ತು.

ತಾನು ಮಾತನಾಡುತ್ತಿದ್ದ ವಿಚಾರದಲ್ಲಿ ರಾಮೋನ್ ಸ್ವಂತ ಅನುಭವ ಪಡೆದಿದ್ದ. ಮೌಲ್ಯಗಳು ಹಾಗೂ ಆಲೋಚನಾ ವಿಧಾನಗಳಲ್ಲಿ ಪರಸ್ಪರ ಸಾದೃಶ್ಯವಿಲ್ಲದ ಎರಡು ಸಂಸ್ಕೃತಿಗಳ ಸಂಪೂರ್ಣ ಜ್ಞಾನ ಪಡೆದಿದ್ದ. ಅದು ದುರ್ಭರ ವಿಧಿ. ಪಾಶ್ಚಿಮಾತ್ಯ ನಾಗರಿಕತೆಯಲ್ಲಿ ನಮ್ಮ ಅನುಭವ ಬೇರೆ ತೆರನಾದುದು. ನಾವು ಒಂದು ಸಮದರ್ಶಿ ಸಂಸ್ಕೃತಿಯಲ್ಲಿ ಬೆಳೆದು ಬಂದಿದ್ದೇವೆ. ರಾಮೋನ್‌ನ ಆಲಂಕಾರಿಕ ಮಾತುಗಳಲ್ಲಿ ಅಡಗಿರುವ ಸತ್ಯವನ್ನು ನಮ್ಮ ಸಮಾಜವಿಜ್ಞಾನಗಳು, ಮಾನಸಶಾಸ್ತ್ರ, ಮತಧರ್ಮಶಾಸ್ತ್ರಗಳೆಲ್ಲ ಮೇಲಿಂದ ಮೇಲೆ ಕಡೆಗಾಣಿಸಿವೆ.

ಮಾನವೀಯ ಕಲ್ಪನೆಯ ಫಲಶಕ್ತಿಯನ್ನು ಒತ್ತಟ್ಟಿಗಿಟ್ಟರೂ, ಜೀವನದ ಗತಿ ಮತ್ತು ಸನ್ನಿವೇಶದ ಒತ್ತಡಗಳೇ ಒಂದು ಸಮಾಜವು ತನ್ನ ಬಾಳನ್ನು ಸಾಗಿಸಲು ಏಕ ರೀತಿಯಾಗಿ ಸಹಾಯವಾಗುವಂತಹ, ಊಹೆಗೂ ಎಟುಕದಷ್ಟು ಸಾಧ್ಯತೆಗಳನ್ನು ತೋರುತ್ತವೆ. ಆಸ್ತಿಗೆ ಸಂಬಂಧಪಟ್ಟಂತೆ ಸಾಮಾಜಿಕ ಶ್ರೇಣಿಗಳ ವ್ಯವಸ್ಥೆಯಿರುವ ಹಲವು ಬಗೆಯ ಒಡೆತನದ ವಿಧಗಳಿವೆ ; ವಿವರವಾದ ತಾಂತ್ರಿಕತೆಯನ್ನೊಳಗೊಂಡ ಬಳಕೆಯ ವಸ್ತುಗಳಿವೆ : ಲೈಂಗಿಕ ಜೀವನ, ತಾಯ್ತಂದೆತನ, ತಾಯ್ತಂದೆತನದ ಉತ್ತರ ಕಾಲಗಳ ವಿವಿಧ ಮುಖಗಳಿವೆ ; ಸಮಾಜಕ್ಕೆ ಒಂದು ರಚನಾವಿನ್ಯಾಸವನ್ನು ನೀಡುವ ಸಂಘಗಳೂ ಪಂಥಗಳೂ ಇವೆ ; ಆರ್ಥಿಕ ವಿನಿಮಯ ಇದೆ ; ದೇವತೆಗಳು ಮತ್ತು ದೈವನಿಯಾಮಕ ವಿಧಿಗಳಿವೆ. ಇವುಗಳಲ್ಲಿ ಯಾವುದಾದರೂ ಒಂದನ್ನೋ ಇಲ್ಲವೇ ಕೆಲವನ್ನೋ ಎತ್ತಿಕೊಂಡು ಸಾಂಸ್ಕೃತಿಕವಾಗಿಯೂ ಸಾಂಪ್ರದಾಯಿಕವಾಗಿಯೂ ಸಾಂಸ್ಕೃತಿಕ ಶಕ್ತಿಯನ್ನೆಲ್ಲ ಆವರಿಸಿಕೊಳ್ಳುವಂತೆ ವಿಸ್ತರಿಸಿಕೊಂಡಲ್ಲಿ ಆಗ ಇತರ ಸಾಂಸ್ಕೃತಿಕ ಅಂಶಗಳತ್ತ ಹರಿಸಲು ಸಾಂಸ್ಕೃತಿಕ ಶಕ್ತಿಯೇ ಉಳಿಯದಂತಾಗುವುದು, ನಮಗೆ ಬಹಳ ಪ್ರಮುಖವಾದುವೆಂದು ತೋರುವ ಜೀವನದ ಅಂಶಗಳನ್ನು ಕಡೆಗಣಿಸಿ ಬೇರೆ ದಿಶೆಗೆ ತಿರುಗಿಸಿರುವ ಜನರ ಸಂಸ್ಕೃತಿಗಳೂ ಸಹ ಕೊರತೆಗಳೇನನ್ನೂ ತೋರ್ಪಡಿಸುತ್ತಿಲ್ಲ. ಅವೇ ಅಂಶಗಳೇ ಬೇರೆಯ ಸಂಸ್ಕೃತಿಗಳಲ್ಲಿ ನಮಗೆ ತೋರುವಷ್ಟು ಮಟ್ಟಿಗೆ ದೊಡ್ಡದಾಗಿ ವಿಸ್ತಾರಗೊಂಡಿರಲೂಬಹುದು.

ಮಾತಿನಲ್ಲಿ ಹೇಗೋ ಸಾಂಸ್ಕೃತಿಕ ಜೀವನದಲ್ಲಿಯೂ ಸಹ ಆಯ್ಕೆಯೇ ಪ್ರಮುಖವಾದುದು. ನಮ್ಮ ಧ್ವನಿತಂತುಗಳು, ಬಾಯಿ, ಮೂಗಿನ ರಂಧ್ರಗಳು ಉತ್ಪತ್ತಿ ಮಾಡಬಹುದಾದ ಶಬ್ದಗಳ ಸಂಖ್ಯೆಗೆ ಮಿತಿಯೇ ಇಲ್ಲ ಎನ್ನಬಹುದು. ಅವುಗಳಲ್ಲಿ ಇಂಗ್ಲಿಷ್ ಆಯ್ದುಕೊಂಡಿರುವ ಮೂರು-ನಾಲ್ಕು ಡಜನ್ ಶಬ್ದಗಳು, ಅದರೊಂದಿಗೆ ಸಮೀಪ ಸಂಬಂಧ ಹೊಂದಿರುವ ಜರ್ಮನ್ ಮತ್ತು ಫ್ರೆಂಚ್ ಮಾತುಗಳೊಂದಿಗೆ ಸಹ ಸಮಪಾತವಾಗಿಲ್ಲ. ಪ್ರಪಂಚದ ವಿವಿಧ ಭಾಷೆಗಳು ಬಳಸಿಕೊಂಡಿರುವ ಶಬ್ದಗಳ ಸಂಖ್ಯೆಯನ್ನು ಅಂದಾಜು ಮಾಡುವ ಸಾಹಸಕ್ಕೂ ಯಾರೂ ಕೈಯಿಟ್ಟಿಲ್ಲ. ಆದರೆ ಪ್ರತಿಯೊಂದು ಭಾಷೆಯೂ ತನ್ನ ಆಯ್ಕೆಯನ್ನು ನಿರ್ಧರಿಸಿಕೊಂಡು ಅದನ್ನು ಅನುಸರಿಸದಿದ್ದರೆ ಅದು ಅರ್ಥವಾಗುವುದೇ ಇಲ್ಲ. ಉಚ್ಚರಿಸಲು ಸಾಧ್ಯವಿರುವ ಈಗಾಗಲೇ ಮುದ್ರಿತವಾಗಿರುವ ಕೆಲವು ನೂರು ಧ್ವನಿಗಳನ್ನು ಬಳಸಿಕೊಳ್ಳುವ ಭಾಷೆಯೂ ಸಹ ವಿಚಾರ ವಿನಿಮಯಕ್ಕೆ ಉಪಯೋಗವಾಗಲಾರದು. ನಮ್ಮ ಭಾಷೆಗೆ ಸಂಬಂಧವಿಲ್ಲದ ಇತರ ಭಾಷೆಗಳನ್ನು ಕುರಿತು ಬಹುಪಾಲು ತಪ್ಪುತಿಳಿವಳಿಕೆಗೆ ಆ ಪರಕೀಯ ಭಾಷೆಯ ಧ್ವನಿಕ್ರಮವನ್ನು ನಮ್ಮ ಧ್ವನಿಕ್ರಮಕ್ಕೆ ತಾಳೆಯಿಟ್ಟು ನೋಡುವುದೇ ಕಾರಣ. ನಾವು ಒಂದೇ ಒಂದು k ಶಬ್ದವನ್ನು ಗುರುತಿಸುತ್ತೇವೆ. ಬೇರೆ ಜನ ಬಾಯಿ ಮತ್ತು ಗಂಟಲಿನ ವಿವಿಧ ಭಾಗಗಳಲ್ಲಿ ಹೊರಡುವ ಐದು k ಗಳನ್ನು ಗುರುತಿಸುತ್ತಾರೆ. ಅವು ಪದಸಂಪದದಲ್ಲೂ, ವಾಕ್ಯಬಂಧದಲ್ಲೂ ನೀಡುವ ಬೇರೆ ಬೇರೆ ಅರ್ಥಗಳನ್ನು ಗ್ರಹಿಸಲು ಆ ಭಾಷೆ

ಯಲ್ಲಿ ಪರಿಣತಿಗಳಿಸದಿದ್ದರೆ ಸಾಧ್ಯವಿಲ್ಲ. ನಾವು ಒಂದು d ಮತ್ತು ಒಂದು n ಪಡೆದಿದ್ದೇವೆ. ಬೇರೆ ಜನ ಆವೆರಡರ ನಡುವಣ ಒಂದು ಶಬ್ದವನ್ನು ಪಡೆದಿದ್ದರೆ ಅದನ್ನು ಗುರುತಿಸಲಾರದ ನಾವು, ಅದನ್ನು ಸೂಚಿಸಲು ಒಮ್ಮೆ d, ಒಮ್ಮೆ nಬಳಸಿ, ಅವುಗಳಲ್ಲಿ ಇಲ್ಲದ ವ್ಯತ್ಯಾಸಗಳನ್ನು ತರಲು ಪ್ರಯತ್ನ ಪಡುತ್ತೇವೆ. ಅಮಿತವಾದ ಶಬ್ದ ಸಾಧ್ಯತೆಗಳಿಂದ ಪ್ರತಿ ಭಾಷೆಯೂ ತನ್ನ ಆಯ್ಕೆಯನ್ನು ಮಾಡಿದೆ ಎಂಬ ಪರಿಜ್ಞಾನ ಭಾಷಾ ವಿಶ್ಲೇಷಣೆಗೆ ಪೀಠಿಕಾರೂಪವಾದ ಅವಶ್ಯಕತೆ.

ಇದೇ ರೀತಿಯಾಗಿ ಸಂಸ್ಕೃತಿಯಲ್ಲಿಯೂ ಸಹ ಮಾನವನ ಕಾಲಾನುಕ್ರಮದಿಂದಲೋ, ಸನ್ನಿವೇಶದಿಂದಲೋ ಅಥವಾ ವಿವಿಧ ಚಟುವಟಿಕೆಗಳಿಂದಲೋ ಉಂಟಾಗುವಂತಹ ಸಾಧ್ಯವಾದ ಅಭಿರುಚಿಗಳನ್ನು ಅಳವಡಿಸಿರುವ ಒಂದು ಬೃಹತ್ ವೃತ್ತಖಂಡವನ್ನು ಕಲ್ಪಿಸಿಕೊಳ್ಳಬೇಕು. ಅವುಗಳಲ್ಲಿ ಒಂದು ಗಮನಾರ್ಹ ಪ್ರಮಾಣವನ್ನು ಮೈಗೂಡಿಸಿಕೊಂಡ ಸಂಸ್ಕೃತಿಯೂ ಸಹ, ಶ್ವಾಸನಾಳದ ಎಲ್ಲ ಧ್ವನಿಸ್ಥಾವರಗಳನ್ನೂ, ಅನುಚ್ಚಾರಿತದಿಂದ ಉಚ್ಚಾರಿತದವರೆಗೆ, ಬಾಯಿಧ್ವನಿಯಿಂದ ಮೂಗಿನ ಧ್ವನಿಗಳವರೆಗೆ, ಎಲ್ಲ ಓಷ್ಠ್ಯ, ದಂತ್ಯ, ಊಷ್ಮ, ಕಂಠ್ಯ ಧ್ವನಿಗಳನ್ನೂ ಪ್ರಯೋಗ ಮಾಡುವ ಭಾಷೆಯಂತೆಯೇ ಅರ್ಥವಿಹೀನವಾಗಿರುತ್ತದೆ. ಸಂಸ್ಕೃತಿಯೊಂದರ ವ್ಯಕ್ತಿತ್ವವು ಈ ವೃತ್ತಖಂಡದಿಂದ ಅದು ಆಯ್ದುಕೊಳ್ಳುವ ಅಂಶಗಳ ಮೇಲೆ ಆಧಾರಗೊಂಡಿದೆ. ಪ್ರತಿಯೊಂದು ಮಾನವ ಸಮಾಜವೂ ತನ್ನ ಸಾಂಸ್ಕೃತಿಕ ಸಂಸ್ಥೆಗಳನ್ನು ರೂಪಿಸುವಲ್ಲಿ ಈ ಆಯ್ಕೆಯನ್ನು ಕೈಗೊಂಡಿದೆ. ಇನ್ನೊಂದು ಸಂಸ್ಕೃತಿಯ ದೃಷ್ಟಿಯಲ್ಲಿ ಪ್ರತಿಯೊಂದು ಸಂಸ್ಕೃತಿಯೂ ಮೂಲಭೂತ ಅಂಶಗಳನ್ನು ತಳ್ಳಿಹಾಕಿ ಅಸಂಬದ್ಧತೆಗಳನ್ನೇ ಬಳಸಿಕೊಂಡಿರುವುದಾಗಿ ತೋರಿಬರುತ್ತದೆ. ಒಂದು ಸಂಸ್ಕೃತಿಯು ಹಣದ ಬೆಲೆಯನ್ನೇ ಪರಿಗಣಿಸುವುದಿಲ್ಲ. ಇನ್ನೊಂದು ಸಂಸ್ಕೃತಿ ತನ್ನ ಪ್ರತಿಯೊಂದು ವರ್ತನಾಕ್ಷೇತ್ರದಲ್ಲಿಯೂ ಹಣವೇ ಮೂಲಭೂತವಾದುದೆಂದು ತಿಳಿದಿರುತ್ತದೆ. ಮಾನವನ ಉಳಿವಿಗೇ ಅತ್ಯವಶ್ಯವಾಗಿ ತೋರಿಬರುವ ಅಂಶಗಳಲ್ಲಿ ಸಹ ಒಂದು ಸಮಾಜದ ತಾಂತ್ರಿಕತೆಯು ನಂಬಲೂ ಸಾಧ್ಯವಿಲ್ಲದಷ್ಟು ಕೀಳುಸ್ಥಾನದಲ್ಲಿರಬಹುದು. ಅಷ್ಟೇ ಸರಳವಾಗಿರುವ ಇನ್ನೊಂದು ಸಮಾಜದಲ್ಲಿ ತಾಂತ್ರಿಕ ಸಾಧನೆಗಳು ಸಂಕೀರ್ಣವಾಗಿದ್ದು, ಪರಿಸ್ಥಿತಿಗೆ ಬಹು ಚೆನ್ನಾಗಿ ಹೊಂದಿಕೊಂಡಿರಬಹುದು. ಒಂದು ಸಮಾಜ ತಾರುಣ್ಯದ ಮೇಲೆ, ಇನ್ನೊಂದು ಮರಣದ ಮೇಲೆ, ಮತ್ತೊಂದು ಮರಣಾನಂತರ ಜೀವನದ ಮೇಲೆ, ಬೃಹತ್ ಸಾಂಸ್ಕೃತಿಕ ಸೌಧಗಳನ್ನು ನಿರ್ಮಿಸಿರುತ್ತವೆ.

ತಾರುಣ್ಯಾವಸ್ಥೆಯ ವಿಚಾರವೂ ವಿಶೇಷತಃ ಕುತೂಹಲಕಾರಿಯಾಗಿದೆ. ಏಕೆಂದರೆ ನಮ್ಮ ನಾಗರಿಕತೆಯಲ್ಲಿಯೂ ಈ ವಿಷಯ ಪ್ರಮುಖ ಗಮನಕ್ಕೆ ಪಾತ್ರವಾಗಿದೆ ಮತ್ತು ಇತರ ಸಂಸ್ಕೃತಿಗಳಿಂದ ಇದರ ಬಗ್ಗೆ ಸಾಕಷ್ಟು ವಿವರಗಳು ದೊರೆತಿವೆ. ಪ್ರೌಢಾವಸ್ಥೆಗೆ ಬರುವ ಕಾಲದಲ್ಲಿ ಮಾನಸಿಕ ಕ್ಷೋಭೆ ಅಥವಾ ಅಶಾಂತಿ ಅನಿವಾರ್ಯವೆಂದು ಎತ್ತಿತೋರುವಂತಹ ಮಾನಸಶಾಸ್ತ್ರೀಯ ಗ್ರಂಥಗಳ ದೊಡ್ಡ ಪುಸ್ತಕ ರಾಶಿಯೇ ನಮ್ಮ

ನಾಗರಿಕತೆಯಲ್ಲಿ ರಚಿತವಾಗಿದೆ. ಟೈಫಾಯ್ಡ್ ರೋಗಕ್ಕೆ ಜ್ವರವು ಹೇಗೆ ಕುರುಹೋ ಹಾಗೆಯೇ ಗೃಹ ಆಸ್ಫೋಟಗಳು, ಪ್ರತಿಭಟನೆಗಳು ಪ್ರೌಢಾವಸ್ಥೆಗೆ ಬರುವ ಕಾಲದ ಮನೋಸ್ಥಿತಿಯ ಕುರುಹು ಎಂಬುದು ನಮ್ಮ ಪರಂಪರೆಯ ಎಣಿಕೆ. ಈ ವಸ್ತುಸ್ಥಿತಿಗಳನ್ನು ಪ್ರಶ್ನಿಸುವ ಮಾತೇ ಇಲ್ಲ. ಅಮೆರಿಕದಲ್ಲಿ ಅವು ಸರ್ವಸಾಮಾನ್ಯವಾಗಿವೆ. ಆದರೆ ಅವುಗಳ ಅನಿವಾರ್ಯತೆ, ಪ್ರಶ್ನೆಯ ಮಾತಾಗಿದೆ.

ತಾರುಣ್ಯವನ್ನು ವಿವಿಧ ಸಮಾಜಗಳು ಹೇಗೆ ನಿರ್ವಹಿಸುತ್ತವೆ ಎಂಬುದನ್ನು ಸ್ಥೂಲವಾಗಿ ಪರಿಶೀಲಿಸಿದರೆ ಒಂದು ಸಂಗತಿ ಎದ್ದು ನಿಲ್ಲುತ್ತದೆ. ತಾರುಣ್ಯವನ್ನು ಪ್ರಮುಖವಾಗಿ ಪರಿಗಣಿಸಿರುವ ಸಂಸ್ಕೃತಿಗಳಲ್ಲೂ ಸಹ ಗಮನಕ್ಕೆ ಗುರಿಯಾಗುವ ತಾರುಣ್ಯ ವಯಸ್ಸು ಹಲವಾರು ವರ್ಷಗಳ ಕಾಲಶ್ರೇಣಿಯಲ್ಲಿ ಅಡ್ಡಾಡುತ್ತದೆ. ಆದ್ದರಿಂದ ಪ್ರೌಢಾವಸ್ಥೆಯ ಸಂಸ್ಥೆಗಳಿಗೂ, ದೈಹಿಕವಾಗಿ ಪ್ರೌಢಾವಸ್ಥೆಗೆ ಬರುವುದಕ್ಕೂ ನಂಟು ತಂದಿಕ್ಕಿದರೆ ಅದು ತಪ್ಪು ಕಲ್ಪನೆಯಾಗುತ್ತದೆ ಎಂಬುದು ಸ್ಪಷ್ಟ. ಜನಮಾನ್ಯಮಾಡುವ ಪ್ರೌಢಾವಸ್ಥೆ ಸಾಮಾಜಿಕವಾದುದು. ಸಂಬಂಧಪಟ್ಟ ಸಮಾರಂಭಗಳು ಮಗುವು ಹೊಸದಾಗಿ ವಯಸ್ಕನ ಸ್ಥಾನಕ್ಕೆ ಏರಿದುದನ್ನು ಮಾನ್ಯಮಾಡುವ ಒಂದು ಬಗೆ. ಈ ಸಮಾರಂಭಗಳಲ್ಲಿ ದೀಕ್ಷೆ ನೀಡಲ್ಪಡುವ ಹೊಸ ವೃತ್ತಿಗಳು ಮತ್ತು ಕರ್ತವ್ಯಗಳೂ ಸಹ, ಸಾಧಾರಣತಃ ವೃತ್ತಿಗಳು ಮತ್ತು ಕರ್ತವ್ಯಗಳಂತೆಯೇ ವಿವಿಧ ತೆರನಾಗಿದ್ದು ಸಾಂಸ್ಕೃತಿಕವಾಗಿ ಕಟ್ಟುಪಾಡಿಗೊಳಗಾಗಿವೆ. ಒಂದು ಸಮಾಜದಲ್ಲಿ ವಯಸ್ಕ ಪುರುಷನ ಮುಖ್ಯ ಅಧಿಕಾರವು ಮೊಗವಾಡ ಧರಿಸಿ ದೇವತೆಗಳ ಪ್ರತಿರೂಪ ತಳೆದು ಕುಣಿತದಲ್ಲಿ ಭಾಗವಹಿಸುವುದು ಎಂದು ಪರಿಗಣಿತವಾಗಿದ್ದರೆ ಈ ಅಧಿಕಾರವನ್ನು ನೀಡುವ ಸಮಾರಂಭ ಒಂದು ತೆರನಾಗಿರುತ್ತದೆ. ಇನ್ನೊಂದು ಸಮಾಜದಲ್ಲಿ ಗಂಡಸಿನ ಏಕೈಕ ಗೌರವಾನ್ವಿತ ಕರ್ತವ್ಯ ಯುದ್ಧಕಾರ್ಯ ಎಂದು ಪರಿಗಣಿತವಾದಾಗ ಆ ಯುದ್ಧವೀರ ಪದವಿಯನ್ನು ನೀಡುವ ಸಮಾರಂಭವು ತಡವಾಗಿಯೂ, ಬೇರೆ ತೆರನಾಗಿಯೂ ಇರುತ್ತದೆ. ಪ್ರೌಢಾವಸ್ಥೆಯ ಸಂಸ್ಥೆಗಳನ್ನು ಅರಿತುಕೊಳ್ಳಬೇಕಾದರೆ ಜೀವನದ ಮಹತ್ತರ ಹಂತಗಳಾದ ಜನನ, ಪ್ರಾಯ ಮತ್ತು ಮರಣಕ್ಕೆ ಸಂಬಂಧಪಟ್ಟ ಸಂಸ್ಕಾರ ವಿಧಿಗಳ ಸ್ವಭಾವಲಕ್ಷಣಗಳ ವಿಶ್ಲೇಷಣೆ ಅತ್ಯಗತ್ಯವಲ್ಲ. ವಿವಿಧ ಸಂಸ್ಕೃತಿಗಳಲ್ಲಿ ಯಾವುದನ್ನು ವಯಸ್ಕ ಜೀವನದ ಆರಂಭ ಎಂದು ಗುರುತಿಸಿದ್ದಾರೆ, ಆ ಹೊಸ ಸ್ಥಾನಕ್ಕೆ ಪ್ರವೇಶ ನೀಡಲು ಯಾವ ಕ್ರಮಗಳನ್ನು ಅನುಸರಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದು ಹೆಚ್ಚು ಅಗತ್ಯ. ಆಯಾ ಸಂಸ್ಕೃತಿಗಳಲ್ಲಿ ಪ್ರೌಢತ್ವ, ಪ್ರೌಢತ್ವ ಕಾರ್ಯಗಳನ್ನು ನಿರ್ವಹಿಸುವುದರ ಮೇಲಿಂದ ಬರುತ್ತದೆಯೇ ಹೊರತು ದೈಹಿಕವಾಗಿ ಪ್ರೌಢಾವಸ್ಥೆಗೆ ಬರುವುದರಿಂದಲ್ಲ.

ಉತ್ತರ ಅಮೆರಿಕದ ಮಧ್ಯಭಾಗದಲ್ಲಿ ಪ್ರೌಢತ್ವ ಎಂದರೆ ಯುದ್ಧಾಸಕ್ತಿ. ಯುದ್ಧದಲ್ಲಿ ಘನತೆ ಪಡೆಯುವುದೇ ಎಲ್ಲ ಗಂಡಸರ ಮುಖ್ಯ ಗುರಿ. ಯಾವುದೇ ವಯಸ್ಸಿನವರಿರಲಿ, ಯುವಕರು ಪ್ರಾಪ್ತವಯಸ್ಕರಾಗುತ್ತಿದ್ದುದು ಅವರು ಯುದ್ಧಕ್ಕೆ

ಎಂತು ಅಣಿಯಾಗುತ್ತಿದ್ದರೆಂಬುದನ್ನು ಅವಲಂಬಿಸಿರುತ್ತಿತ್ತು. ಯುದ್ಧಗಳಲ್ಲಿ ಜಯ ದೊರಕಿಸುವುದು ಅವರು ಆಗ ಪಡೆಯುವ ಮಾಂತ್ರಿಕ ಸಂಸ್ಕಾರವನ್ನೇ ಆಧರಿಸುತ್ತಿತ್ತು. ಅವರು ಇನ್ನೊಬ್ಬರನ್ನು ಚಿತ್ರಹಿಂಸೆಗೆ ಗುರಿಪಡಿಸುತ್ತಿರಲಿಲ್ಲ. ತಮ್ಮನ್ನು ತಾವೇ ಹಿಂಸಿಸಿಕೊಳ್ಳುತ್ತಿದ್ದರು. ಎದೆಗೋ, ಕಾಲಿಗೋ ಬಹು ಭಾರದ ವಸ್ತುಗಳನ್ನು ಕಟ್ಟಿ ಕೊಂಡು ಎಳೆಯುತ್ತಿದ್ದರು. ಯುದ್ಧಕ್ಕೆ ಬೇಕಾದ ಪರಾಕ್ರಮ ಈ ಕಾರ್ಯಗಳಿಂದ ಅವರಲ್ಲಿ ಚೇತನಗೊಳ್ಳುತ್ತಿತ್ತು.

ಆಸ್ಟ್ರೇಲಿಯದಲ್ಲಿ ವಯಸ್ಕತೆಯೆಂದರೆ ಗಂಡಸರ ಗುಂಪಿನಿಂದ ಹೆಂಗಸರನ್ನು ದೂರವಿರಿಸುವುದು ಮತ್ತು ಗಂಡಸರು ಬರೀ ಗಂಡಸರ ಪಂಥದಲ್ಲಿ ಭಾಗವಹಿಸುವುದು. ಈ ಸಮಾರಂಭಗಳಲ್ಲಿ ಗೂಳಿಯಂತೆ ಗಂಟುರು ಹಾಕುವುದರ ಶಬ್ದವನ್ನು ಯಾವುದೇ ಹೆಂಗಸರು ಕೇಳಿಸಿಕೊಂಡರೆ ಅವಳನ್ನು ಕೊಂದುಹಾಕುತ್ತಾರೆ. ಗಂಡಸರಿಗೆ ಸಂಬಂಧಿಸಿದ ಸಂಸ್ಕಾರ ವಿಧಿಗಳನ್ನಂತೂ ಹೆಂಗಸು ತಿಳಿದುಕೊಳ್ಳಲೇಬಾರದು. ಗಂಡಸರು ಪ್ರಾಯಕ್ಕೆ ಬಂದಾಗ ಆಚರಿಸುವ ಸಮಾರಂಭಗಳು ವಿಸ್ತಾರವಾಗಿರುತ್ತವೆ. ಹೆಂಗಸರೊಂದಿಗಿನ ಸಂಬಂಧ ತೊರೆಯಲು ಇದು ಒಂದು ಸಾಂಕೇತಿಕ. ಗಂಡಸರು ಸ್ವಯಂಪೂರ್ಣರು, ಸಮುದಾಯದ ಜವಾಬ್ದಾರಿ ನಿರ್ವಾಹಕರು ಎಂಬುದನ್ನು ಈ ಸಮಾರಂಭ ಅರಿವು ಮಾಡಿಕೊಡುತ್ತದೆ. ಈ ಗುರಿಯನ್ನು ಸಾಧಿಸಲು ತೀವ್ರವಾದ ಲೈಂಗಿಕ ಸಂಸ್ಕಾರ ವಿಧಿಗಳನ್ನು ಬಳಸಿ, ದೈವಿಕ ಅಥವಾ ಅಲೌಕಿಕ ಹೊಣೆಯನ್ನು ಹೊರುತ್ತಾರೆ.

ತಾರುಣ್ಯದ ಸ್ಪಷ್ಟವಾದ ಶಾರೀರಿಕ ಸಂಗತಿಗಳನ್ನು ಒತ್ತಿ ಹೇಳುವಲ್ಲಿಯೂ ಸಹ, ಅವುಗಳನ್ನು ಮೊದಲು ಸಾಮಾಜಿಕವಾಗಿ ನಿರೂಪಿಸುತ್ತಾರೆ. ಪ್ರೌಢಾವಸ್ಥೆಯ ಸಂಸ್ಥೆಗಳ ಸಮೀಕ್ಷೆಯು ಇನ್ನೂ ಒಂದು ಸಂಗತಿಯನ್ನು ಸ್ಪಷ್ಟಪಡಿಸುತ್ತದೆ. ಪ್ರೌಢಾವಸ್ಥೆಯು ಶಾರೀರಿಕವಾಗಿ ಗಂಡಸರು ಮತ್ತು ಹೆಂಗಸರ ಜೀವನ ಚಕ್ರದಲ್ಲಿ ಬೇರೆ ಬೇರೆ ತೆರನಾದುದು. ಸಾಂಸ್ಕೃತಿಕ ಪ್ರಾಮುಖ್ಯತೆಯು ಶಾರೀರಿಕ ಪ್ರಾಮುಖ್ಯತೆಯನ್ನೇ ಅನುಸರಿಸಿದ್ದರೆ ಹೆಣ್ಣುಮಕ್ಕಳಿಗೆ ಸಂಬಂಧಪಟ್ಟ ಸಮಾರಂಭಗಳು ಗಂಡುಮಕ್ಕಳದ್ದಕ್ಕಿಂತ ಮೇಲಿದ್ದು ಕಾಣಬೇಕಾಗಿತ್ತು. ಆದರೆ ನಿಜವಾಗಿ ಹಾಗಿಲ್ಲ. ಈ ಸಮಾರಂಭಗಳು ಸಾಮಾಜಿಕ ಸಂಗತಿಯನ್ನು ಪ್ರಾಮುಖ್ಯವಾಗಿ ಎಣಿಸಿವೆ. ಪ್ರತಿ ಸಂಸ್ಕೃತಿಯಲ್ಲಿಯೂ ಗಂಡಸರ ವಯಸ್ಕತೆಯು ಹಕ್ಕುಬಾಧ್ಯತೆಗಳು ಹೆಂಗಸರದ್ದಕ್ಕಿಂತ ಹೆಚ್ಚು ಪರಿಣಾಮಕಾರಿಗಳು. ಆದ್ದರಿಂದಲೇ ಮೇಲೆ ಹೇಳಿದ ಉದಾಹರಣೆಗಳಂತೆ, ಸಾಧಾರಣತಃ ಸಮಾಜಗಳು ಹೆಣ್ಣುಮಕ್ಕಳ ಪ್ರೌಢಾವಸ್ಥೆಗಿಂತ ಗಂಡುಮಕ್ಕಳದ್ದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿವೆ.

ಹೀಗಿದ್ದರೂ, ಒಂದೇ ಬಣದಲ್ಲಿ ಹೆಣ್ಣು ಹಾಗೂ ಗಂಡುಮಕ್ಕಳ ಪ್ರೌಢಾವಸ್ಥೆಯನ್ನು ಸಾಮಾಜಿಕವಾಗಿ ಸಾದೃಶ್ಯವಿಧಾನಗಳಲ್ಲಿಯೇ ಆಚರಿಸಬಹುದು. ಬ್ರಿಟಿಷ್ ಕೊಲಂಬಿಯಾದ ಒಳಭಾಗದಲ್ಲಿರುವಂತೆ. ಪ್ರೌಢಾವಸ್ಥೆಯ ಸಂಸ್ಕಾರ ಕ್ರಮಗಳು ಎಲ್ಲ ವೃತ್ತಿಗಳಿಗೂ ಮಾಂತ್ರಿಕ ತರಬೇತಿ ನೀಡುವಂತಹುದಾದರೆ, ಅವರ ಹೆಣ್ಣುಮಕ್ಕಳಿಗೂ,

ಗಂಡುಮಕ್ಕಳಿಗೂ ಒಂದೇ ರೀತಿಯ ನಿಯಮಗಳ ಮೇಲೆ ಪ್ರವೇಶ ದೊರೆಯುತ್ತದೆ. ಗಂಡುಮಕ್ಕಳು ತಮ್ಮ ಕಾಲುಗಳಿಗೆ ವೇಗ ಬರಲು ಬೆಟ್ಟಗಳ ಮೇಲಿಂದ ಕಲ್ಲುಗಳನ್ನು ಕೆಳಕ್ಕುರುಳಿಸಿ, ಅವುಗಳಿಗಿಂತ ವೇಗದಲ್ಲಿ ಕೆಳಕ್ಕೆ ಓಡಿಬರುತ್ತಾರೆ ; ಇಲ್ಲವೇ ಜೂಜಿನಲ್ಲಿ ಅದೃಷ್ಟವಂತರಾಗಲು ಜೂಜುಗಡ್ಡಿಗಳನ್ನು ಎಸೆಯುತ್ತಾರೆ. ಹೆಣ್ಣುಮಕ್ಕಳು ದೂರ ದೂರದ ಚಿಲುಮೆಗಳಿಂದ ನೀರು ತರುತ್ತಾರೆ. ಇಲ್ಲವೇ ತಮಗೆ ಹುಟ್ಟುವ ಮಕ್ಕಳೂ ಕಲ್ಲು ನೆಲಕ್ಕೆ ಜಾರಿ ಬೀಳುವಷ್ಟೇ ಸುಲಭವಾಗಿ ಹುಟ್ಟಲೆಂದು ತಮ್ಮ ಉಡುಗೆಗಳ ಮೂಲಕ ಸಣ್ಣ ಕಲ್ಲುಗಳನ್ನು ನೆಲಕ್ಕೆ ಜಾರಿಸಿ ಬಿಡುತ್ತಾರೆ.

ಪೂರ್ವ ಆಫ್ರಿಕದ ಲೇಕ್ ಪ್ರದೇಶದ ನಂದಿಯಂತಹ ಬಣಗಳಲ್ಲಿ ಗಂಡು ಹಾಗೂ ಹೆಣ್ಣು ಮಕ್ಕಳಿಬ್ಬರೂ ಒಂದೇ ರೀತಿಯ ಪ್ರೌಢಾವಸ್ಥೆಯ ಸಂಸ್ಕಾರವಿಧಿಗಳನ್ನು ಪಡೆಯುತ್ತಾರೆ. ಆದರೂ ಈ ಸಂಸ್ಕೃತಿಯಲ್ಲಿ ಗಂಡಸಿನದೇ ಮೇಲುಗೈ ಆಗಿರುವುದರಿಂದ ಗಂಡುಮಕ್ಕಳ ತರಬೇತಿ ಅವಧಿಗೆ ಹೆಚ್ಚಿನ ಗಮನನೀಡಲಾಗುತ್ತದೆ. ಈಗಾಗಲೇ ವಯಸ್ಕರಾದವರು, ವಯಸ್ಕರಾಗಲಿರುವವರನ್ನು ಕ್ರೂರ ಪರೀಕ್ಷೆಗೆ ಗುರಿ ಮಾಡುವುದೇ ಪ್ರೌಢಾವಸ್ಥೆಯ ಸಂಸ್ಕಾರವಿಧಿ. ಸುನತಿಗೆ ಸಂಬಂಧಪಟ್ಟ ಸ್ಥಳೀಯ ಹಿಂಸೆಗಳನ್ನು ಎದುರಿಸುವಾಗ ಅಭ್ಯರ್ಥಿಗಳು ಅನುದ್ವೇಗಭಾವದವರಾಗಿರಬೇಕು ಎಂದು ನಿರೀಕ್ಷಿಸುತ್ತಾರೆ. ಹೆಣ್ಣುಗಂಡುಗಳಿಬ್ಬರಿಗೂ ಸಂಸ್ಕಾರ ವಿಧಿಗಳು, ಬೇರೆಬೇರೆಯೇ ಆದರೂ ಅವು ಒಂದೇ ಮಾದರಿಯವು. ಹೆಣ್ಣೇ ಆಗಿರಲಿ, ಗಂಡೇ ಆಗಿರಲಿ ಸಮಾರಂಭದಲ್ಲಿ ಅಭ್ಯರ್ಥಿಗಳು ತಮ್ಮ ತಮ್ಮ ಪ್ರೇಮಿಗಳ ಅಲಂಕಾರಗಳನ್ನು ಧರಿಸಬೇಕು. ಶಸ್ತ್ರ ಪ್ರಯೋಗ ಮಾಡುವಾಗ ಅವರ ಮುಖದಲ್ಲಿ ಯಾವ ನೋವಿನ ವಿಕಾರಗಳೂ ಕಂಡಂತಿರಬಾರದು. ಈ ಪರಾಕ್ರಮಕ್ಕೆ ಪ್ರತಿಫಲವಾಗಿ ಪ್ರೇಮಿಗಳು ಓಡಿಬಂದು ಧರಿಸಿದ ಅಲಂಕಾರಗಳಲ್ಲಿ ತಮ್ಮ ಕೆಲವು ಅಲಂಕಾರಗಳನ್ನು ಕಿತ್ತುಕೊಳ್ಳುತ್ತಾರೆ. ಗಂಡು ಮತ್ತು ಹೆಣ್ಣು ಇಬ್ಬರಿಗೂ ಈ ಸಂಸ್ಕಾರವಿಧಿಯು ಹೊಸ ಲೈಂಗಿಕ ಸ್ಥಾನಕ್ಕೇರಲು ಒಂದು ಪ್ರವೇಶ ಹುಡುಗ ಆಗ ಯುದ್ಧವೀರ. ತನ್ನ ಪ್ರೇಯಸಿಯೊಬ್ಬಳನ್ನು ಪಡೆಯಲೂ ಅರ್ಹ. ಹುಡುಗಿ ವಿವಾಹಕ್ಕೆ ಅರ್ಹಳಾಗುವಳು. ಈ ಪ್ರೌಢಾವಸ್ಥೆಯ ಪರೀಕ್ಷೆಗಳು ಇಬ್ಬರಿಗೂ ವಿವಾಹಪೂರ್ವ ಸತ್ವಪರೀಕ್ಷೆ. ಪ್ರಿಯರಾದವರ ಪಾಣಿಗ್ರಹಣವೇ ಬಹುಮಾನ.

ಪ್ರೌಢಾವಸ್ಥೆಯ ಸಂಸ್ಕಾರವಿಧಿಗಳನ್ನು ಹೆಣ್ಣುಮಕ್ಕಳು ವಯಸ್ಸಿಗೆ ಬರುವುದರ ಆಧಾರದ ಮೇಲೆ ರೂಪಿಸಿದ್ದು, ಗಂಡುಮಕ್ಕಳಿಗೆ ವಿಸ್ತೃತವಾಗಿಲ್ಲದಿರಬಹುದು. ಮಧ್ಯ ಆಫ್ರಿಕಾದಲ್ಲಿ ಹೆಣ್ಣುಮಕ್ಕಳಿಗಾಗಿ ನಡೆಸುವ ಕೊಬ್ಬಿಸುವ ಗೃಹಗಳು, ಇಂತಹ ಒಂದು ಸರಳ ಸಂಸ್ಥೆ. ಈ ಪ್ರದೇಶದಲ್ಲಿ ಸ್ತ್ರೀಸೌಂದರ್ಯವೆಂದರೆ ಕೊಬ್ಬಿರುವುದೇ ಎಂಬ ಎಣಿಕೆ. ಹುಡುಗಿಯು ಪ್ರೌಢಳಾದಾಗ ಕೆಲವು ಕಾಲ ಬೇರ್ಪಡಿಸಿಟ್ಟು ಸಿಹಿ ಹಾಗೂ ಕೊಬ್ಬಿನ ಆಹಾರಗಳನ್ನಿತ್ತು, ಯಾವ ಕೆಲಸ ಮಾಡಲೂ ಬಿಡದೆ, ಅವಳ ದೇಹವನ್ನು ಎಣ್ಣೆಗಳಿಂದ ನೀವುತ್ತಾರೆ. ಈ ಅವಧಿ ಕೆಲವೊಮ್ಮೆಯಂತೂ

ಹಲಕೆಲವು ವರ್ಷಗಳೂ ಆಗಬಹುದು. ಈ ಅವಧಿಯಲ್ಲಿ ಅವಳಿಗೆ ತನ್ನ ಮುಂದಿನ ಕರ್ತವ್ಯಗಳ ಬಗ್ಗೆ ಶಿಕ್ಷಣ ನೀಡಲಾಗುತ್ತದೆ. ಈ ಅವಧಿಯ ಕೊನೆಯಲ್ಲಿ ಕೊಬ್ಬಿದ ಹುಡುಗಿಯ ಮೆರವಣಿಗೆ ನಡೆಯುತ್ತದೆ. ಅದರ ಹಿಂದೆಯೇ ಅವಳನ್ನು ಹೆಮ್ಮೆಯಿಂದ ಬೀಗುವ ವರನಿಗಿತ್ತು ಮದುವೆ ಮಾಡುತ್ತಾರೆ. ಮದುವೆಗೆ ಮುಂಚೆ ಗಂಡಸೂ ಹೀಗೆ ಕೊಬ್ಬಬೇಕಾದ ಅವಶ್ಯಕತೆಯಿಲ್ಲ.

ಹೆಣ್ಣುಮಕ್ಕಳ ಪ್ರೌಢಾವಸ್ಥೆಯ ಕಟ್ಟುಕಟ್ಟಳೆಗಳು ಅವಳು ಮುಟ್ಟಾಗುವಿಕೆಯ ಸುತ್ತ ಹೆಣೆದುಕೊಂಡಿವೆ. ಅವು ಗಂಡುಮಕ್ಕಳಿಗೆ ಅನ್ವಯಿಸುವುದಿಲ್ಲ. ಋತುವಾಗಿರುವ ಹೆಂಗಸು ಅಶುದ್ಧಳು ಎಂಬುದು ಬಹಳವಾಗಿ ಪ್ರಚಾರವಾಗಿರುವ ಒಂದು ಭಾವನೆ. ಹಲವು ಪ್ರದೇಶಗಳಲ್ಲಿ ಈ ಮನೋಭಾವಗಳು ಮೊದಲ ಬಾರಿಗೆ ಋತುಮತಿಯಾದಾಗ ತೀವ್ರವಾಗಿ ವ್ಯಕ್ತವಾಗುತ್ತವೆ. ಇಂತಹ ಸನ್ನಿವೇಶದಲ್ಲಿ ಪ್ರೌಢಾವಸ್ಥೆಯ ಸಂಸ್ಕಾರ ವಿಧಿಗಳು ಇದುವರೆಗೆ ನಾವು ಪ್ರಸ್ತಾಪ ಮಾಡಿರುವವುಗಳಿಗಿಂತ ಬೇರೆ ತೆರನಾಗಿರುತ್ತವೆ. ಬ್ರಿಟಿಷ್ ಕೊಲಂಬಿಯಾದ ಕ್ಯಾರಿಯರ್ ಇಂಡಿಯನ್ನರಲ್ಲಿ ಋತುಮತಿಯಾದ ಹುಡುಗಿಯನ್ನು ಕುರಿತ ಭಯ ಹಾಗೂ ಅಸಹ್ಯ ಭಾವನೆಗಳು ಅತ್ಯಂತ ತೀವ್ರವಾದವುಗಳು. ಮೂರು ನಾಲ್ಕು ವರ್ಷಗಳ ಕಾಲ ಅವಳನ್ನು ಬೇರ್ಪಡಿಸಿಟ್ಟಿರುತ್ತಾರೆ. ಅದನ್ನು 'ಜೀವಸಹಿತ ಸಮಾಧಿ' ಎಂದೇ ಕರೆಯುತ್ತಿದ್ದರು. ಕಗ್ಗಾಡಿನಲ್ಲಿ ಎಲ್ಲ ಕಾಲುದಾರಿ ಕವಲುದಾರಿಗಳಿಂದ ದೂರವಾಗಿ ಪರ್ಣಕುಟಿಯೊಂದರಲ್ಲಿ ಅವಳು ಈ ಅವಧಿಯನ್ನು ಒಂಟಿಯಾಗಿ ಕಳೆಯಬೇಕಾಗುತ್ತಿತ್ತು. ಅವಳ ಇರುವಿಕೆಯನ್ನು ಗಮನಿಸಿದ ಯಾವನಿಗೇ ಆದರೂ ಅವಳು ಅಪಾಯಕಾರಿ. ಅವಳು ಮೆಟ್ಟಿದ ದಾರಿ, ಮುಟ್ಟಿದ ನದಿ ಎರಡೂ ಅಶುದ್ಧವಾಗುತ್ತಿದ್ದವು. ಅವಳ ಮುಖವನ್ನೂ ಎದೆಯನ್ನೂ ದೊಡ್ಡದೊಂದು ಹದ ಗೊಳಿಸಿದ ಚರ್ಮದಿಂದ ಮುಚ್ಚುವಂತೆ ಬಿಗಿಯುತ್ತಿದ್ದರು. ಅವಳಲ್ಲಿ ತುಂಬಿಕೊಂಡಿದ್ದ ದುಷ್ಟಶಕ್ತಿಯಿಂದ ಅವಳನ್ನು ರಕ್ಷಿಸಲೆಂದು ಅವಳ ಕೈಕಾಲುಗಳನ್ನು ನರಸ್ನಾಯುಗಳಿಂದ ಮಾಡಿದ ಹಗ್ಗಗಳಿಂದ ಕಟ್ಟಿರುತ್ತಿದ್ದರು. ಅವಳಿಗೂ ಇದು ಅಪಾಯ, ಇತರರಿಗೂ ಆಕೆ ಅಪಾಯಕಾರಿ.

ಋತುವಾಗುವುದರೊಂದಿಗೆ ಸಂಬಂಧಪಟ್ಟ ಹೆಣ್ಣುಮಕ್ಕಳ ಪ್ರೌಢಾವಸ್ಥೆಯ ಸಮಾರಂಭಗಳು ವೈಯಕ್ತಿಕವಾಗಿ ಬಹು ಸುಲಭವಾಗಿ ತದ್ವಿರುದ್ಧ ವರ್ತನೆಯನ್ನು ಪ್ರಚೋದಿಸಿಬಿಡಬಹುದು. ಪೂಜ್ಯವಾದುದರ ಬಗ್ಗೆ ಎರಡು ಮನೋಭಾವಗಳನ್ನು ತಳೆಯುವ ಸಾಧ್ಯತೆಗಳಿವೆ. ಒಂದೋ ವಿಪತ್ಕಾರಿಯಾಗಿರಬಹುದು, ಇಲ್ಲವೇ ಅನುಗ್ರಹ ಕಾರಿಯಾಗಬಹುದು. ಕೆಲವು ಬಣಗಳಲ್ಲಿ ಹುಡುಗಿಯು ಮೊದಲ ಬಾರಿ ಋತುಮತಿ ಯಾಗುವುದು ದೈವೀಕ ಅನುಗ್ರಹ ಪಡೆಯುವ ಒಂದು ಅವಕಾಶ. ಅಪಾಚೆ ಜನರಲ್ಲಿ ಸಾಲಾಗಿ ಶಾಂತಮುದ್ರೆ ತಳೆದು ಕುಳಿತ ಸಣ್ಣ ಹುಡುಗಿಯರ ಮುಂದೆ ಪುರೋಹಿತರೇ ಮಂಡಿಯೂರಿ ನಡೆದು ಅವರಿಂದ ಅನುಗ್ರಹ ಸ್ಪರ್ಶವನ್ನು ಪಡೆಯುವುದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಎಲ್ಲ ಕೂಸುಗಳೂ, ಮುದುಕರೂ ಅವರಿಂದ ರೋಗ ನಿವಾರಿಸಿ

ಕೊಳ್ಳಲು ಬರುತ್ತಾರೆ. ತಾರುಣ್ಯಾವಸ್ಥೆಯಲ್ಲಿರುವ ಹುಡುಗಿಯರು ಅಪಾಯಕಾರಿಗಳೆಂದು ದೂರವಿಡಲ್ಪಡದೇ ದೈವೀಕ ಅನುಗ್ರಹದ ಆಕರಗಳಾಗಿ ಗೌರವಕ್ಕೆ ಪಾತ್ರರಾಗುತ್ತಾರೆ. ಕ್ಯಾರಿಯರ್ ಮತ್ತು ಅಪಾಚೆ ಎರಡೂ ಜನರಲ್ಲಿ ಹುಡುಗಿಯರ ಪ್ರೌಢಾವಸ್ಥೆಯ ಸಂಸ್ಕಾರವಿಧಿಗಳು, ಋತುವಾಗುವುದನ್ನು ಕುರಿತ ನಂಬಿಕೆಗಳ ಆಧಾರದ ಮೇಲೆ ರೂಪಿತವಾಗಿದ್ದು ಹುಡುಗರಿಗೆ ವ್ಯಾಪಿಸಿಲ್ಲ. ಇದಕ್ಕೆ ಬದಲಾಗಿ ಗಂಡುಮಕ್ಕಳ ಪ್ರೌಢಾವಸ್ಥೆಯ ಸಂಸ್ಕಾರಗಳು ಪೌರುಷದ ಸರಳ ಪರೀಕ್ಷೆಗಳು ಮತ್ತು ಪ್ರಮಾಣಗಳಿಂದ ಕೂಡಿರುತ್ತವೆ.

ಇದೆಲ್ಲದರಿಂದ ತಾರುಣ್ಯಾವಸ್ಥೆಯ ವರ್ತನೆಯು ಆ ಅವಧಿಯ ಯಾವುದೋ ಕೆಲವು ಶಾರೀರಕ ಲಕ್ಷಣಗಳಿಂದ ರೂಪಿತವಾಗುವುದಿಲ್ಲ. ಇದು ಮದುವೆ ಅಥವಾ ಯಾಂತ್ರಿಕ ವೃತ್ತಿಗಳಿಗೆ ಸಂಬಂಧಪಟ್ಟ ಸಾಮಾಜಿಕ ಅವಶ್ಯಕತೆಗಳಿಂದ ಬಹುಮಟ್ಟಿಗೆ ರೂಪಿತವಾಗುತ್ತದೆ ಎಂದು ಹೇಳಬಹುದು. ಬಾಲೆಯರಿಗೂ ಈ ಮಾತು ಅನ್ವಯಿಸುತ್ತದೆ. ತಾರುಣ್ಯಾವಸ್ಥೆಗೆ ಸಂಬಂಧಪಟ್ಟ ಈ ನಂಬಿಕೆಗಳು ಒಂದು ಬಣದಲ್ಲಿ ತಾರುಣ್ಯವನ್ನು ಪ್ರಶಾಂತ ಪೂಜ್ಯವಾಗಿಯೂ, ಅನುಗ್ರಹಕಾರಿಯಾಗಿಯೂ ಪರಿಗಣಿತವಾಗುವಂತೆ ಮಾಡಿವೆ. ಇನ್ನೊಂದರಲ್ಲಿ, ಕಾಡಿನಲ್ಲಿಯೂ ಸಹ ಇತರರು ತನ್ನನ್ನು ಕಾಣದಂತೆ ಮಾಡಲು ಹುಡುಗಿಯು ಕೂಗಿ ಎಚ್ಚರಿಸಬೇಕು ಎನ್ನುವಷ್ಟು ಮಟ್ಟಿಗೆ ಅಪಾಯಕಾರಿ ಅಶುದ್ಧತೆಯಾಗಿ ಪರಿಗಣಿತವಾಗಿದೆ. ಅಂತೆಯೇ ಬಾಲಿಕೆಯರ ತಾರುಣ್ಯವನ್ನು ಸಂಸ್ಥೀಕರಣ ಮಾಡದಿರುವ ಸಂಸ್ಕೃತಿಗಳೂ ಇವೆ ಎಂಬುದನ್ನು ನಾವು ಕಂಡಿದ್ದೇವೆ. ಆಸ್ಟ್ರೇಲಿಯದ ಬಹುಭಾಗದಲ್ಲಿರುವಂತೆ ಗಂಡುಮಕ್ಕಳ ತಾರುಣ್ಯಾವಸ್ಥೆಯು ಪರಿಷ್ಕಾರವಾಗಿ ನಿರೂಪಿತವಾಗಿರುವಲ್ಲಿ ಸಂಬಂಧಪಟ್ಟ ಸಂಸ್ಕಾರವಿಧಿಗಳು ಹುಡುಗರನ್ನು ಪುರುಷತ್ವದ ಸ್ಥಾನಕ್ಕೆ ಪ್ರವೇಶಗೊಳಿಸಿ, ಬಣದ ವ್ಯವಹಾರದಲ್ಲಿ ಭಾಗವಹಿಸಲು ಅವಕಾಶ ನೀಡಲೆಂದೇ ರೂಪಿತವಾಗಿರಬಹುದು. ಹುಡುಗಿಯರ ತಾರುಣ್ಯವಾದರೋ ಯಾವೊಂದು ವಿಧಿವಿಹಿತ ಮಾನ್ಯತೆಗೂ ಪಾತ್ರವಾಗಿಲ್ಲ.

ಇಷ್ಟೆಲ್ಲ ಸಂಗತಿಗಳು ಸಹ ಮೂಲಭೂತವಾದ ಪ್ರಶ್ನೆಗೆ ಸಮಾಧಾನ ನೀಡುವುದಿಲ್ಲ. ಪ್ರೌಢಾವಸ್ಥೆಯು ಯಾವುದೇ ರೀತಿಯ ಸಂಸ್ಥೆ ಅಥವಾ ಪದ್ಧತಿಯ ರೂಪದಲ್ಲಿ ವ್ಯಕ್ತವಾಗದಿದ್ದರೂ ಈ ಅವಧಿಯ ಸಹಜ ಪ್ರಕ್ಷುಬ್ಧತೆಯನ್ನು ಎಲ್ಲ ಸಂಸ್ಕೃತಿಗಳೂ ಹೇಗಾದರೂ ಎದುರಿಸಬೇಕಲ್ಲವೆ ? ಡಾ॥ ಮೀಡ್ ಅವರು ಸಮೋವಾದಲ್ಲಿ ಈ ಪ್ರಶ್ನೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಅಲ್ಲಿ ಹುಡುಗಿಯರ ಜೀವನವು ಖಚಿತವಾಗಿ ನಿರ್ಧರಿತವಾಗಿರುವ ಕಾಲಾವಧಿಗಳಲ್ಲಿ ಮುಂದುವರಿಯುತ್ತದೆ ಶೈಶವ ಮುಗಿದ ಕೆಲವು ವರ್ಷಗಳ ಕಾಲ ಹುಡುಗಿಯು ತನ್ನದೇ ವಯಸ್ಸಿನ ನೆರೆಹೊರೆಯ ಹುಡುಗಿಯರ ಗುಂಪಿನಲ್ಲಿ ಸೇರಿಕೊಳ್ಳುತ್ತಾಳೆ. ಆ ಗುಂಪಿಗೆ ಕಟ್ಟುನಿಟ್ಟಾಗಿ ಹುಡುಗರನ್ನು ಸೇರಿಸುವುದಿಲ್ಲ. ಆ ಹುಡುಗಿಯು ಗ್ರಾಮದ ಯಾವ ಭಾಗಕ್ಕೆ ಸೇರಿರುವಳೆಂಬುದು ಬಹಳ ಮುಖ್ಯವಾದುದು. ಸಣ್ಣ ಹುಡುಗರು ಕೂಡ ಬದ್ಧ ಶತ್ರುಗಳು.

ಸಣ್ಣ ಮಕ್ಕಳನ್ನು ನೋಡಿಕೊಳ್ಳುವುದು ಅವಳ ಕೆಲಸ. ಮಗುವನ್ನು ಗಮನಿಸಲೆಂದು ಅವಳು ಮನೆಯಲ್ಲಿಯೇ ಇರುವುದಕ್ಕಿಂತ ಮಗುವನ್ನು ತನ್ನೊಂದಿಗೆ ಕರೆದೊಯ್ಯುವುದೇ ಹೆಚ್ಚು. ಇದರಿಂದ ಅವಳ ಆಟಪಾಟಗಳು ಅಷ್ಟಾಗಿ ತಪ್ಪುವುದಿಲ್ಲ. ಪ್ರೌಢಾವಸ್ಥೆಗೆ ಬರುವುದಕ್ಕೆ ಕೆಲವು ವರ್ಷಗಳ ಮುಂಚೆಯೇ ಅವಳು ಸ್ವಲ್ಪ ಹೆಚ್ಚಿನ ಶ್ರಮದ ಕಾರ್ಯ ನಿರ್ವಹಿಸುವಷ್ಟು ಹಾಗೂ ಹೆಚ್ಚು ಕುಶಲತೆಯ ಕಾರ್ಯವಿಧಾನಗಳನ್ನು ಕಲಿಯುವಷ್ಟು ಶಕ್ತಿವಂತಳಾದಾಗ ಅವಳು ಬೆಳೆದು ಬಂದ ಸಣ್ಣ ಹುಡುಗಿಯರ ಗುಂಪು ಇನ್ನಿಲ್ಲವಾಗುತ್ತದೆ. ಅವಳು ಹೆಂಗಸಿನ ಉಡುಪನ್ನು ಧರಿಸಿ, ಗೃಹಕೃತ್ಯಗಳಲ್ಲಿ ತನ್ನ ಪಾಲನ್ನು ನಿರ್ವಹಿಸಬೇಕು. ಅವಳ ಜೀವನದ ಈ ಅವಧಿಯು ಕುತೂಹಲಕಾರಿಯಾಗಿರದೇ ಅನುದ್ವಿಗ್ನವಾಗಿರುತ್ತದೆ. ಪ್ರೌಢಾವಸ್ಥೆಯು ಯಾವ ರೀತಿಯ ಬದಲಾವಣೆಯನ್ನೂ ತರುವುದಿಲ್ಲ.

ಪ್ರಾಪ್ತ ವಯಸ್ಕಳಾದ ಕೆಲವು ವರ್ಷಗಳ ಬಳಿಕ ಅವಳು ಬೇಜವಾಬ್ದಾರಿಯಿಂದ ಪ್ರೇಮಪ್ರಸಂಗಗಳಲ್ಲಿ ದಿನಗಳನ್ನು ಕಳೆಯುತ್ತಾಳೆ. ಅವಳ ಈ ಪ್ರೇಮಸಲ್ಲಾಪವು ಅವಳಿಗೆ ಮದುವೆ ನಿಶ್ಚಯವಾಗುವವರೆಗೂ ನಡೆಯುತ್ತದೆ. ಅವಳು ಪ್ರೌಢಾವಸ್ಥೆಯನ್ನು ಮುಟ್ಟಿದಳೆಂಬುದಕ್ಕೆ ಯಾವುದೇ ರೀತಿಯ ಸಾಮಾಜಿಕ ಮಾನ್ಯತೆಯಿಲ್ಲ ಅದು ಅವಳ ಮನೋವೃತ್ತಿಯಲ್ಲಾಗಲೀ, ಆಸೆ ಆಕಾಂಕ್ಷೆಗಳಲ್ಲಾಗಲೀ ಯಾವ ಮಾರ್ಪಾಡನ್ನೂ ತರುವುದಿಲ್ಲ. ಅವಳ ತಾರುಣ್ಯಪೂರ್ವ ಲಜ್ಜೆಯು, ಕೆಲ ವರ್ಷಗಳ ಕಾಲ ಬದಲಾಗದೇ ಇರುತ್ತದೆಂದು ಅವರ ಭಾವನೆ. ಸಮೋವಾದಲ್ಲಿ ಹುಡುಗಿಯರ ಜೀವನವು ಶಾರೀರಿಕವಾಗಿ ಮೈನೆರೆಯುವುದನ್ನು ಬಿಟ್ಟು ಇತರ ನಿಮಿತ್ತಗಳ ಆಧಾರದ ಮೇಲೆ ಹಂತ ಹಂತವಾಗಿ ನಿರೂಪಿತವಾಗಿದೆ. ಅವಳು ಪ್ರೌಢಾವಸ್ಥೆಗೆ ಬರುವ ಕಾಲವು ವಿಶೇಷವಾದ ಒತ್ತಡಗಳಿಲ್ಲದೆ,ಯಾವ ರೀತಿಯ ತಾರುಣ್ಯದ ತಿಕ್ಕಾಟಗಳೂ ವ್ಯಕ್ತವಾಗದ ಶಾಂತವಾದ ಅವಧಿಯ ಹಂತದಲ್ಲಿ ಬೀಳುತ್ತದೆ. ಆದ್ದರಿಂದ ತಾರುಣ್ಯವನ್ನು ಸಾಂಸ್ಕೃತಿಕವಾಗಿ ಯಾವುದೇ ರೀತಿಯ ಸಂಸ್ಕಾರ ಸಮಾರಂಭಗಳೂ ಇಲ್ಲದೇ ಕಳೆಯಬಹುದು. ಆ ಹುಡುಗಿಯ ಭಾವಜೀವನದಲ್ಲಿ ಆದಕ್ಕೆ ಯಾವೊಂದು ಪ್ರಾಮುಖ್ಯತೆಯೂ ಇಲ್ಲದಿರಬಹುದು. ಆಕೆಯತ್ತ ಗ್ರಾಮಸ್ಥರು ತಳೆಯುವ ಮನೋಭಾವದಲ್ಲಿಯೂ ಯಾವ ರೀತಿಯ ವಿಶೇಷತೆಯೂ ಇಲ್ಲದಿರಬಹುದು.

ಯಾವುದೇ ಸಂಸ್ಕೃತಿಯಲ್ಲಿ ಬಳಕೆಯಾಗಿರಬಹುದಾದ ಅಥವಾ ಆಗಿಲ್ಲದಿರಬಹುದಾದ ಸಾಮಾಜಿಕ ವಿಷಯಗಳಲ್ಲಿ ಯುದ್ಧವೂ ಒಂದು. ಯುದ್ಧಕ್ಕೆ ಪ್ರಧಾನ ಸ್ಥಾನ ಇರುವ ಎಡೆಗಳಲ್ಲೂ, ಯುದ್ಧದ ಉದ್ದೇಶಗಳು ಬೇರೆಬೇರೆಯಾಗಿರಬಹುದು. ಆಯಾ ರಾಜ್ಯಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳೂ ಬೇರೆಬೇರೆಯಾಗಿರಬಹುದು ಹಾಗೂ ಶಾಸನ ನಿಯಮಗಳೂ ಬೇರೆಬೇರೆಯಾಗಿರಬಹುದು ಆಜ್ಟೆಕ್ ಯುದ್ಧವು ಧಾರ್ಮಿಕ ಬಲಿಗಳಿಗಾಗಿ ಸೆರೆಯಾಳುಗಳನ್ನು ಸಂಗ್ರಹಿಸುವ ಮಾರ್ಗ. ಸ್ಪ್ಯಾನೀಯರು ಕೊಲ್ಲಲೆಂದು ಯುದ್ಧ ಮಾಡುತ್ತಿದ್ದರು. ಆಜ್ಟೆಕರ ಆದರ್ಶಗಳ ದೃಷ್ಟಿಯಲ್ಲಿ ಇದು ನಿಯಮಗಳನ್ನು

ಉಲ್ಲಂಘಿಸಿದಂತೆ. ಆಜ್ಟೆಕ್‌ರು ದಿಙ್ಮೂಢರಾದರು ; ಕೋರ್ಟೆಸ್ ವಿಜಯಿಯಾಗಿ ರಾಜಧಾನಿಯನ್ನು ಪ್ರವೇಶಿಸಿದ.

ನಮ್ಮ ದೃಷ್ಟಿಯಿಂದ ನೋಡಿದರೆ ಪ್ರಪಂಚದ ವಿವಿಧ ಭಾಗಗಳಲ್ಲಿ ಯುದ್ಧವನ್ನು ಕುರಿತು ಇದಕ್ಕಿಂತ ವಿಚಿತ್ರವಾದ ಭಾವನೆಗಳೂ ಪ್ರಚಲಿತವಾಗಿವೆ. ಸಾಮಾಜಿಕ ಗುಂಪುಗಳ ನಡುವೆ ವ್ಯವಸ್ಥಿತ ರೀತಿಯಲ್ಲಿ ಪರಸ್ಪರ ಸಾಮೂಹಿಕ ಸಂಹಾರವು ಎಂದೆಂದಿಗೂ ನಡೆಯದಂತಹ ಪ್ರದೇಶಗಳೂ ಪ್ರಪಂಚದಲ್ಲಿವೆ ಎಂಬುದನ್ನು ನಮ್ಮ ಗಮನಕ್ಕೆ ತಂದುಕೊಂಡರೆ ಈ ಸಂದರ್ಭಕ್ಕೆ ಯಥೇಚ್ಛವಾಯಿತು. ಒಂದು ಬಣವು ಇನ್ನೊಂದರೊಂದಿಗೆ ಬೆಳೆಸಿಕೊಂಡಿರುವ ಸಂಬಂಧಗಳಲ್ಲಿ ಯುದ್ಧ ಸ್ಥಿತಿಯ ನಂತರ ಶಾಂತಸ್ಥಿತಿಯೂ ಉಂಟಾಗಲೇಬೇಕೆಂಬುದು ನಮಗೆ ಅರ್ಥವಾಗುತ್ತದೆ. ನಮಗೆ ಯುದ್ಧವನ್ನು ಕುರಿತು ಇರುವ ನಿಕಟ ಪರಿಚಯವೇ ಇದಕ್ಕೆ ಕಾರಣ. ಈ ಭಾವನೆ ಪ್ರಪಂಚದಲ್ಲೆಲ್ಲಾ ಸಾಧಾರಣವಾಗಿ ಪ್ರಚಲಿತವಾಗಿದೆ. ಆದರೆ ಕೆಲವು ಜನಗಳಲ್ಲಿ ಶಾಂತಸ್ಥಿತಿಯ ಸಾಧ್ಯತೆಯನ್ನು ಕಲ್ಪಿಸಿಕೊಳ್ಳುವುದೂ ಸಹ ಅಸಾಧ್ಯ. ಏಕೆಂದರೆ ಹಾಗೆ ಒಪ್ಪಿಕೊಂಡರೆ ಯುದ್ಧದಶತ್ರುಬಣಗಳು ತಮ್ಮದೇ ಬುಡಕಟ್ಟು ಮತ್ತು ಸಂಸ್ಕೃತಿಗಳಿಗೇ ಸೇರಿದವರಾದರೂ, ಮನುಷ್ಯ ಕುಲಕ್ಕೇ ಸೇರಿದವರಲ್ಲ ಎಂಬ ಭಾವನೆಯನ್ನು ತೊರೆದು ಅವರನ್ನು ಮನುಷ್ಯ ಕುಲಕ್ಕೆ ಸೇರಿಸಿಕೊಂಡಂತೆ ಆಗಿ ಬಿಡುತ್ತದೆ ಎಂದು ಆ ಜನಗಳ ಭಾವನೆ.

ಹೀಗೆಯೇ ಯುದ್ಧಸ್ಥಿತಿಯನ್ನು ಕಲ್ಪಿಸಿಕೊಳ್ಳಲೂ ಅಸಾಧ್ಯವಾಗಿರುವಂತಹ ಜನರೂ ಇದ್ದಾರೆ. ಎಸ್ಕಿಮೋ ಜನರಿಗೆ ನಮ್ಮ ಯುದ್ಧ ಪದ್ಧತಿಯನ್ನು ಕುರಿತು ಹೇಳಿದಾಗ ಅವರು ಅದನ್ನು ಅರಿತುಕೊಳ್ಳಲು ಅಸಾಧ್ಯವಾದುದನ್ನು ರಾಸ್‌ಮುಸ್ಸೆನ್ ಪ್ರಸ್ತಾಪಿಸಿದ್ದಾನೆ. ಇನ್ನೊಬ್ಬ ಮನುಷ್ಯನನ್ನು ಕೊಲೆ ಮಾಡುವ ವಿಚಾರ ಎಸ್ಕಿಮೋಗಳಿಗೆ ಚೆನ್ನಾಗಿ ಗೊತ್ತು. ಯಾವನಾದರೂ ಒಬ್ಬ ಇನ್ನೊಬ್ಬನ ಹಾದಿಗೆ ಅಡ್ಡ ಬಂದರೆ, ಅವನು ತನ್ನ ಶಕ್ತಿಯೆಷ್ಟು ಎಂಬುದನ್ನು ಅಂದಾಜು ಮಾಡಿಕೊಳ್ಳುತ್ತಾನೆ. ಪರಿಸ್ಥಿತಿಯನ್ನು ಸುಧಾರಿಸಬಲ್ಲೆನೆಂದು ಭಾವಿಸಿದರೆ ಆ ಇನ್ನೊಬ್ಬನನ್ನು ಕೊಲ್ಲುತ್ತಾನೆ. ಅವನು ಶಕ್ತಿಶಾಲಿಯಾದರೆ, ಯಾವ ರೀತಿಯ ಸಾಮಾಜಿಕ ಪ್ರತೀಕಾರವೂ ಇರುವುದಿಲ್ಲ. ಆದರೆ ಒಂದು ಎಸ್ಕಿಮೋ ಗ್ರಾಮವೋ, ಬಣವೋ, ಇನ್ನೊಂದು ಗ್ರಾಮ ಅಥವಾ ಬಣದ ಮೇಲೆ ಯುದ್ಧಸಜ್ಜಿನಲ್ಲಿ ಬೀಳುವುದು ಅಥವಾ ಒಂದು ಗ್ರಾಮ ಇನ್ನೊಂದರ ಮೇಲೆ ಹೊಂಚುಹಾಕಿ ದಾಳಿ ಮಾಡುವುದು ನ್ಯಾಯಸಮ್ಮತ ಎಂಬುದು ಅವರಿಗೆ ಪರಕೀಯವಾದ ಭಾವನೆ. ಎಲ್ಲ ಕೊಲೆಗೂ ಅವರಲ್ಲಿ ಒಂದೇ ಅರ್ಥ: ನಮ್ಮಲ್ಲಿರುವಂತೆ ಕೆಲವು ಕೊಲೆಗಳು ಶ್ಲಾಘ್ಯವೆಂದೂ, ಮತ್ತೆ ಕೆಲವು ದಂಡನಾರ್ಹ ಅಪರಾಧವೆಂದೂ ವಿವಿಧ ಬಗೆಗಳಾಗಿ ವಿಂಗಡಿತವಾಗಿಲ್ಲ.

ಕ್ಯಾಲಿಫೋರ್ನಿಯಾದ ಮಿಷನ್ ಇಂಡಿಯನ್ನರೊಂದಿಗೆ ನಾನೇ ಯುದ್ಧವನ್ನು ಕುರಿತು ಮಾತನಾಡಲು ಯತ್ನಿಸಿದೆ. ಆದರೆ ಅದು ಸಾಧ್ಯವಾಗಲಿಲ್ಲ, ಯುದ್ಧವನ್ನು ಕುರಿತು ಅವರ ಅಜ್ಞಾನ ಅಗಾಧವಾದುದು. ಅವರ ಸಂಸ್ಕೃತಿಯಲ್ಲಿ ಆ ಭಾವನೆಯ

ಅಸ್ತಿತ್ವಕ್ಕೆ ತಕ್ಕ ತಳಹದಿಯಿಲ್ಲದಿದ್ದುದರಿಂದ, ನಾವು ನೈತಿಕ ಹುರುಪಿನಿಂದ ಭಾಗವಹಿಸುವ ಮಹಾಯುದ್ಧಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ ಅವನ್ನು ಬೀದಿ ಜಗಳದ ಮಟ್ಟಕ್ಕೆ ಇಳಿಸುತ್ತಿದ್ದರು. ಅವೆರಡನ್ನೂ ಬೇರ್ಪಡಿಸಿ ಅರಿತುಕೊಳ್ಳಲು ಸೂಕ್ಷ್ಮವಾದ ಒಂದು ಸಾಂಸ್ಕೃತಿಕ ರೂಪಿಕೆ ಅವರಲ್ಲಿಲ್ಲ.

ನಮ್ಮ ನಾಗರಿಕತೆಯಲ್ಲಿ ಯುದ್ಧವು ದೊಡ್ಡ ಸ್ಥಾನವನ್ನು ಪಡೆದಿದ್ದರೂ, ಅದು ಒಂದು ಅಸಾಮಾಜಿಕ ಲಕ್ಷಣ ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕಾಗಿದೆ. ಮಹಾಯುದ್ಧಗಳ ಕಾಲದಲ್ಲಿ ನಮ್ಮಲ್ಲಿ ಧೈರ್ಯ, ಪರಾರ್ಥತೆ, ಉದಾತ್ತ ಮೌಲ್ಯಗಳನ್ನು ಪ್ರಚೋದಿಸಲು ಬಳಸುವ ವಾದಗಳೆಲ್ಲ ಯುದ್ಧಾನಂತರದ ಅವ್ಯವಸ್ಥೆಯ ಕಾಲದಲ್ಲಿ ಅಸತ್ಯ ಹಾಗೂ ಅಸಹ್ಯಭಾವ ತಳೆಯುತ್ತವೆ. ಸಾಂಸ್ಕೃತಿಕವಾಗಿ ಆಯ್ದ ಒಂದು ಲಕ್ಷಣವು ಬೆಳೆದು, ಎಷ್ಟುಮಟ್ಟಿಗೆ ವಿನಾಶದ ಹಾದಿಯಲ್ಲಿ ಮುಂದುವರಿಯಬಹುದು ಎಂಬುದಕ್ಕೆ ನಮ್ಮ ನಾಗರಿಕತೆಯಲ್ಲಿನ ಯುದ್ಧದ ಸ್ಥಾನ ಒಂದು ಉತ್ತಮ ನಿದರ್ಶನವಾದೀತು. ಎಲ್ಲ ಜನರೂ ತಮ್ಮಲ್ಲಿರುವ ಲಕ್ಷಣಗಳನ್ನು ಸಮರ್ಥಿಸಿಕೊಳ್ಳುತ್ತಾರೆ ಎಂಬ ಕಾರಣದಿಂದ ನಾವು ಯುದ್ಧವನ್ನು ಸಮರ್ಥಿಸುತ್ತಿದ್ದೇವೆ; ಗುಣಾವಗುಣಗಳ ಪರಿಶೀಲನೆಯಿಂದ ಅದು ನಮಗೆ ಸರಿತೋರುತ್ತದೆ ಎಂಬುದರಿಂದಲ್ಲ.

ಯುದ್ಧವು ಒಂದು ವಿಶಿಷ್ಟ ವಿಷಯವೇನಲ್ಲ. ಪ್ರಪಂಚದ ಎಲ್ಲ ಭಾಗಗಳಿಂದಲೂ, ಸಾಂಸ್ಕೃತಿಕ ಸಂಕೀರ್ಣತೆಯ ಎಲ್ಲ ಮಟ್ಟಗಳಿಂದಲೂ, ಒಂದು ಸಾಂಸ್ಕೃತಿಕ ಲಕ್ಷಣವು ಅತಿ ಪ್ರತಿಷ್ಠೆಯಿಂದ ಮೊದಲಾಗಿ, ಅಸಾಮಾಜಿಕವಾಗಿ ಪರ್ಯವಸಾನವಾಗುವುದರ ನಿದರ್ಶನಗಳನ್ನು ಎತ್ತಿತೋರಿಸಬಹುದು. ಆಹಾರ ಕ್ರಮಗಳು ಇಲ್ಲವೇ ದಾಂಪತ್ಯ ನಿಯಮಗಳಲ್ಲಿನಂತೆ ಜೈವಿಕ ಪ್ರೇರಣೆಗೆ ವಿರುದ್ಧವಾಗಿ ಬೆಳೆದು ಬಂದಿರುವ ಪರಂಪರಾಗತ ರೂಢಿನಿಯಮಗಳಲ್ಲಿ ಈ ವಿಚಾರ ಬಹು ಸ್ಪಷ್ಟವಾಗುತ್ತದೆ. ಎಲ್ಲ ಮಾನವ ಸಮಾಜಗಳಲ್ಲೂ ಕೆಲವು ಗುಂಪುಗಳೊಂದಿಗೆ ವಿವಾಹ ಬಾಂಧವ್ಯವನ್ನು ಪ್ರತಿಬಂಧಿಸಿರುವುದು ಸರ್ವೇಸಾಮಾನ್ಯವಾಗಿರುವುದರಿಂದ, ಮಾನವಶಾಸ್ತ್ರದಲ್ಲಿ ಸಾಮಾಜಿಕ ವ್ಯವಸ್ಥೆಗೆ ಒಂದು ವಿಶೇಷವಾದ ಅರ್ಥಪೂರ್ಣತೆಯಿದೆ. ತಿಳಿವಳಿಕಸ್ಥನಾದ ಯಾವ ಮನುಷ್ಯನೂ ಎಲ್ಲ ಹೆಂಗಸರೂ ಜೊತೆಗೂಡುವುದಕ್ಕೋಸ್ಕರವಾಗಿಯೇ ಇರುವರೆಂದು ತಿಳಿಯುವುದಿಲ್ಲ. ಇದು ಎಲ್ಲರೂ ತಿಳಿದುಕೊಂಡಿರುವಂತೆ ಹತ್ತಿರ ಸಂಬಂಧ ಸಂತಾನಾಭಿವೃದ್ಧಿಯನ್ನು ತಡೆಗಟ್ಟುವ ಪ್ರಯತ್ನವಲ್ಲ ಏಕೆಂದರೆ ತಾಯಿಯ ಸೋದರನ ಮಗಳನ್ನೇ ಒಡನಾಡಿಯನ್ನಾಗಿ ಹೊಂದಬೇಕೆಂಬ ಪದ್ಧತಿ ಪ್ರಪಂಚದ ಬಹುಭಾಗದಲ್ಲಿ ಪ್ರಚಲಿತವಾಗಿದೆ. ಈ ಪ್ರತಿಬಂಧವು ಯಾವ ಯಾವ ನೆಂಟರಿಗೆ ಅನ್ವಯವಾಗತಕ್ಕದ್ದೆಂಬುದರಲ್ಲಿ ಬೇರೆ ಬೇರೆ ಜನ ಬೇರೆ ಬೇರೆ ನಿಯಮಗಳನ್ನು ಅನುಸರಿಸುವರಾದರೂ, ಎಲ್ಲ ಮಾನವ ಸಮಾಜಗಳೂ ಅಂತಹ ಒಂದು ತಡೆಯನ್ನು ರೂಪಿಸಿವೆ. ಸಂಸ್ಕೃತಿಯಲ್ಲಿ ಅಗಮ್ಯಗಮನ ಗುಂಪು ಪಡೆದಿರುವಷ್ಟು ಸತತ ಹಾಗೂ ಸಂಕೀರ್ಣ ಪರಿಷ್ಕಾರ ಭಾವನೆಯನ್ನು ಬೇರಾವ ಮಾನವ ಭಾವನೆಯೂ ಪಡೆದಿಲ್ಲ. ಈ ಅಗಮ್ಯಗಮನ ಗುಂಪುಗಳು ಬಣದ

ಕ್ರಿಯಾತ್ಮಕ ಘಟಕಗಳಾಗಿದ್ದು, ಒಬ್ಬ ವ್ಯಕ್ತಿಯು ಗುಂಪುಗಳೊಂದಿಗೆ ಹೊಂದಿರುವ ಸಂಬಂಧ ಹಾಗೂ ನಿರ್ವಹಿಸಬೇಕಾದ ಕರ್ತವ್ಯಗಳು, ಅವನು ಆಯಾ ಗುಂಪುಗಳಲ್ಲಿ ಪಡೆದಿರುವ ಸಾಪೇಕ್ಷ ಸ್ಥಾನಗಳ ಆಧಾರದ ಮೇಲೆ ನಿರ್ಧರಿತವಾಗುತ್ತವೆ. ಧಾರ್ಮಿಕ ಸಮಾರಂಭಗಳಲ್ಲಿ ಆರ್ಥಿಕ ವಿನಿಮಯ ವೃತ್ತದಲ್ಲಿ ಈ ಗುಂಪುಗಳು ಘಟಕಗಳಾಗಿವೆ. ಸಾಮಾಜಿಕ ಇತಿಹಾಸದಲ್ಲಿ ಅವು ನಿರ್ವಹಿಸುವ ಪಾತ್ರ ಪ್ರಾಮುಖ್ಯವಾದುದೆಂದು ಹೇಳಿದರೆ ಅದು ಅತಿಶಯೋಕ್ತಿಯೇನಲ್ಲ.

ಕೆಲವು ಪ್ರದೇಶಗಳಲ್ಲಿ ಈ ಅಗಮ್ಯತೆಯ ನಿಷೇಧವನ್ನು ಮಿತವಾಗಿ ಬಳಸುತ್ತಾರೆ. ಪ್ರತಿಬಂಧನೆಗಳಿದ್ದರೂ ಒಬ್ಬ ಗಂಡಸಿಗೆ ಹಲವಾರು ಹೆಂಗಸರು ಒದಗಿಬರುತ್ತಾರೆ. ಇನ್ನು ಕೆಲವು ಗುಂಪುಗಳಲ್ಲಿ ತಮ್ಮ ಸಮಾನ ಪೂರ್ವಜರನ್ನು ಕುರಿತು ಒಂದು ಸಾಮಾಜಿಕ ಐತಿಹ್ಯವನ್ನು ಇಟ್ಟುಕೊಂಡು ಈ ನಿಷೇಧವನ್ನು ವಿಸ್ತರಿಸುವುದರಿಂದ ದಾಂಪತ್ಯ ಸಂಗಾತಿಯ ಆಯ್ಕೆಯ ಅವಕಾಶ ಬಹಳ ಕಿರಿದಾಗಿರುತ್ತದೆ. ಈ ಸಾಮಾಜಿಕ ಐತಿಹ್ಯವು ಬಳಕೆಯಲ್ಲಿರುವ ಬಾಂಧವ್ಯಸೂಚಕಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ನಾವು ತಂದೆ, ಕಕ್ಕ (ಅಂಕಲ್), ಸಹೋದರ, ದಾಯಾದಿ ಎಂದು ಹೆಸರಿಸಿ ನೇರ ಶಾಖೆಗೂ, ಭಿನ್ನ ಶಾಖೆಗೂ ವ್ಯತ್ಯಾಸ ಮಾಡುತ್ತೇವೆ. ಅದಕ್ಕೆ ಬದಲಾಗಿ "ತಂದೆಯ ಗುಂಪಿಗೆ ಸೇರಿದ (ಬಾಂಧವ್ಯ, ವಾಸಸ್ಥಾನ ಇತ್ಯಾದಿಯಲ್ಲಿ) ಅವನ ತಲೆಮಾರಿನವನು" ಎಂಬುದನ್ನು ಸೂಚಿಸಲು ಒಂದೇ ಬಾಂಧವ್ಯಸೂಚಕವನ್ನು ಬಳಸಿ ನೇರ ಶಾಖೆಗೂ ಭಿನ್ನ ಶಾಖೆಗೂ ವ್ಯತ್ಯಾಸ ಬಗೆಯದೆ, ನಮಗೆ ಪರಕೀಯವಾದ ಬೇರೆ ಬೇರೆ ವ್ಯತ್ಯಾಸಗಳನ್ನು ಎಣಿಸುತ್ತಾರೆ. ಪೂರ್ವ ಆಸ್ಟ್ರೇಲಿಯಾದ ಕೆಲವು ಬಣಗಳು ವರ್ಗೀಕೃತ ಬಾಂಧವ್ಯ ಸೂಚಕ ಪದ್ಧತಿ ಎಂದು ಕರೆಯುವ ಈ ಕ್ರಮದ ವಿಪರೀತ ರೂಪವೊಂದನ್ನು ಬಳಸುತ್ತವೆ. ಅವರು ಸಹೋದರ, ಸಹೋದರಿ ಎಂದು ಕರೆಯುವವರಲ್ಲಿ ಅವರ ತಲೆಮಾರಿಗೆ ಸೇರಿದ ಎಲ್ಲ ರೀತಿಯ ಬಂಧುತ್ವವುಳ್ಳವರೂ ಸೇರಿಹೋಗುತ್ತಾರೆ. ದಾಯಾದಿ (ಕಸಿನ್) ಎಂಬ ವರ್ಗವೇ ಆಗಲಿ, ಅದಕ್ಕೆ ಸಮಾನವಾದ ಬೇರಾವುದೇ ಪದವಾಗಲಿ ಇಲ್ಲ. ತನ್ನ ತಲೆಮಾರಿಗೆ ಸೇರಿದ ಎಲ್ಲ ಬಂಧುಗಳೂ ಸಹೋದರ ಸಹೋದರಿಯರೇ.

ಈ ರೀತಿಯಲ್ಲಿ ಬಂಧುತ್ವವನ್ನು ಪರಿಗಣಿಸುವುದು ಪ್ರಪಂಚದಲ್ಲಿ ಅಸಾಧಾರಣವಾದುದೇನೂ ಅಲ್ಲ. ಆದರೆ ಆಸ್ಟ್ರೇಲಿಯದಲ್ಲಿ ಇದರೊಟ್ಟಿಗೆ ಸಹೋದರಿ ವಿವಾಹದ ಬಗ್ಗೆ ಅಸದೃಶವಾದ ಭೀತಿಯಿದ್ದು, ಹೊರ ವಿವಾಹದ ನಿಷೇಧಗಳು ಎಲ್ಲೂ ಇಲ್ಲದಷ್ಟು ವಿಸ್ತಾರವಾಗಿವೆ. ಕುರ್ನಾಯ್ ಜನರಲ್ಲಿ ಈ ರೀತಿ ವರ್ಗೀಕೃತ ಬಾಂಧವ್ಯ ಸೂಚಕ ಪದ್ಧತಿಯಿದ್ದು ತಮ್ಮೆಲ್ಲ ಸಹೋದರಿಯರೊಂದಿಗೆ ಅಂದರೆ ತಮ್ಮ ತಲೆಮಾರಿನವರಾಗಿ ಯಾವುದೇ ರೀತಿಯಲ್ಲಿ ನೆಂಟರಾದವರೊಂದಿಗೆ ಬೆಳೆಯಬಹುದಾದ ಲೈಂಗಿಕ ಸಂಬಂಧಗಳ ಬಗ್ಗೆ ಈ ಆಸ್ಟ್ರೇಲಿಯನ್ ರೀತಿಯ ಭೀತಿಯಿದೆ. ಇಷ್ಟಲ್ಲದೆ ದಾಂಪತ್ಯ ಸಂಗಾತಿಯನ್ನು ಆರಿಸುವುದರಲ್ಲಿ ಪ್ರಾದೇಶಿಕ ನಿಬಂಧನೆಗಳೂ ಪ್ರಚಲಿತವಾಗಿವೆ. ಹೀಗಾಗಿ

ಬಣವು ಹದಿನೈದು, ಹದಿನಾರು ಪ್ರಾದೇಶಿಕ ಗುಂಪುಗಳಾಗಿ ನೆಲೆಸಿದ್ದರೂ, ಹಲವು ಸಂದರ್ಭಗಳಲ್ಲಿ ಎರಡು ಪ್ರದೇಶಗಳು ತಮ್ಮ ತಮ್ಮಲ್ಲಿ ಮಾತ್ರ ಹೆಂಗಸರನ್ನು ಅದಲು ಬದಲು ಮಾಡಿಕೊಳ್ಳಬೇಕು. ಬೇರೆ ಯಾವ ಗುಂಪಿನಲ್ಲೂ ಅವನಿಗೆ ಮದುವೆಯ ಹೆಣ್ಣು ದೊರೆಯುವುದಿಲ್ಲ. ಕೆಲವೊಮ್ಮೆ, ಎರಡು ಮೂರು ಪ್ರದೇಶಗಳ ಗುಂಪುಗಳು ಅಂತಹುದೇ ಎರಡು ಮೂರು ಪ್ರದೇಶಗಳ ಗುಂಪುಗಳೊಂದಿಗೆ ವ್ಯವಹರಿಸುತ್ತವೆ. ಇದಿಷ್ಟು ಸಾಲದೆಂದು, ಆಸ್ಟ್ರೇಲಿಯದ ಎಲ್ಲೆಡೆಗಳಲ್ಲಿರುವಂತೆ ಇವರಲ್ಲಿಯೂ ವೃದ್ಧರು ವಿಶೇಷಾಧಿಕಾರಗಳುಳ್ಳ ಗುಂಪಾಗಿದ್ದು, ಸಣ್ಣ ವಯಸ್ಸಿನ ಆಕರ್ಷಕ ಹುಡುಗಿಯರನ್ನು ಮದುವೆಯಾಗುವ ಹಕ್ಕನ್ನು ಪಡೆದಿದ್ದಾರೆ. ಪರಿಣಾಮವಾಗಿ ಒಬ್ಬ ಯುವಕನಿಗೆ ಹೆಂಡತಿಯನ್ನು ಒದಗಿಸಬೇಕಾದ ಗುಂಪುಗಳಲ್ಲಿ ಈ ನಿಷೇಧಗಳಿಂದ ಹೊರತಾದ ಒಂದು ಹುಡುಗಿಯೂ ಇರುವುದಿಲ್ಲ. ಪ್ರತಿ ಹುಡುಗಿಯೂ ಅವನ ತಾಯಿಯ ಬಳ್ಳಿಯ ಮೂಲಕ 'ಸಹೋದರಿ'ಯಾಗಿರುತ್ತಾಳೆ. ಇಲ್ಲವೇ ಒಬ್ಬ ವೃದ್ಧನಿಗೆ ಈಗಾಗಲೇ ಗೊತ್ತಾಗಿರುತ್ತಾಳೆ ಅಥವಾ ಬೇರಾವುದಾದರೂ ಕಾರಣದಿಂದ ಅವನ ಕೈಹಿಡಿಯಲು ನಿಷೇಧಿತಳಾಗಿರುತ್ತಾಳೆ.

ಇಷ್ಟಾದರೂ ಕುರ್ನಾಯ್ ಜನ ತಮ್ಮ ಬಹಿರ್ವಿವಾಹ ನಿಷೇಧಗಳನ್ನು ಪುನರ್ರೂಪಿಸುವುದರತ್ತ ಗಮನ ಹರಿಸಿಲ್ಲ, ಉದ್ವೇಗಭರಿತರಾಗಿ ಈ ನಿಷೇಧಗಳನ್ನು ಎತ್ತಿ ಹಿಡಿಯುತ್ತಾರೆ. ಆದ್ದರಿಂದ ಅವರು ವಿವಾಹವಾಗಲು ಉಳಿದಿರುವ ಒಂದೇ ಒಂದು ದಾರಿಯೆಂದರೆ ಈ ನಿಷೇಧಗಳ ವಿರುದ್ಧ ಬಂಡಾಯ ಮಾಡುವುದು. ಅವರು ಗುಪ್ತ ರೀತಿಯಿಂದ ಓಡಿಹೋಗುತ್ತಾರೆ. ಗ್ರಾಮದ ಇತರರಿಗೆ ಒಬ್ಬ ಯುವಕ, ಒಬ್ಬಳು ಹುಡುಗಿಯೊಂದಿಗೆ ಪಲಾಯನಮಾಡಿರುವ ಸುದ್ದಿ ತಿಳಿದೊಡನೆಯೇ, ಗ್ರಾಮಕ್ಕೆ ಗ್ರಾಮವೇ ಅವರ ಬೆನ್ನಟ್ಟಿಕೊಂಡು ಹೋಗಿ, ಅವರು ಕೈಗೆ ಸಿಕ್ಕಿದಲ್ಲಿ ಕೊಂದುಬಿಡುತ್ತಾರೆ. ಪ್ರಾಯಶಃ ಬೆಂಬತ್ತಿರುವವರೆಲ್ಲ, ತಾವೇ ಆ ರೀತಿಯಲ್ಲಿ ಪಲಾಯನವಾಗಿ ಮದುವೆಯಾದವರು ಎಂಬುದು ಗಣನೆಗೆ ಬರುವುದಿಲ್ಲ. ನೈತಿಕ ಕ್ರೋಧವು ಅತಿ ತೀವ್ರ ಸ್ವರೂಪ ತಳೆಯುತ್ತದೆ. ಆದರೆ ಪರಂಪರಾಗತವಾಗಿ ಸುರಕ್ಷಿತ ಸ್ಥಾನವೆಂದು ಮಾನ್ಯತೆ ಪಡೆದಿರುವ ದ್ವೀಪವೊಂದಿದೆ. ಆ ದಂಪತಿಗಳು ಅಲ್ಲಿಗೆ ತಲುಪಿ, ಒಂದು ಮಗುವಾಗುವವರೆಗೆ ಇವರಿಂದ ದೂರವಾಗಿ ಇದ್ದು ಬಿಟ್ಟರೆ, ಅವರನ್ನು ಹೊಡೆದು ಬಡಿದು ಬಣಕ್ಕೆ ಪುನಃ ಸೇರಿಸಿಕೊಳ್ಳುತ್ತಾರೆ. ಹೊಡೆಯುವಾಗ ಅವರು ತಮ್ಮನ್ನು ರಕ್ಷಿಸಿಕೊಳ್ಳಲೂ ಬಹುದು. ಸಾಲುಗಳಲ್ಲಿ ನಿಂತು ಹೊಡೆಯುತ್ತಿರುವವರ ನಡುವೆ ಓಡಿಬಂದು, ಮೈ ಮುರಿಯುವಂತೆ ಏಟು ತಿಂದಮೇಲೆ, ಬಣದಲ್ಲಿ ಅವರು ಮಾಮೂಲಿಯಾದ ದಂಪತಿಗಳ ಸ್ಥಾನವನ್ನು ಪಡೆಯುತ್ತಾರೆ.

ಕುರ್ನಾಯ್ ಜನ ತಮ್ಮ ಈ ಸಾಂಸ್ಕೃತಿಕ ಇಕ್ಕಟ್ಟನ್ನು ಬಗೆಹರಿಸುವ ರೀತಿ ಲಾಕ್ಷಣಿಕವಾಗಿದೆ. ಅವರು ವರ್ತನೆಯ ಒಂದು ವಿಶಿಷ್ಟ ಅಂಗವನ್ನು ಸಾಮಾಜಿಕ

ಹೊರೆಯಾಗುವಷ್ಟು ಮಟ್ಟಿಗೆ ವಿಸ್ತರಿಸಿ, ಜಟಿಲಗೊಳಿಸಿಕೊಂಡಿದ್ದಾರೆ. ಅವರು ಅವನ್ನು ಮಾರ್ಪಡಿಸಿಕೊಳ್ಳಬೇಕು, ಇಲ್ಲವೇ ಕಪಟೋಪಾಯದ ದಾರಿ ಹಿಡಿಯಬೇಕು. ಹೀಗೆ ಅವರು ವಿನಾಶದಿಂದಲೂ ಪಾರಾಗಿ, ತಮ್ಮ ನೈತಿಕ ಆದರ್ಶಗಳನ್ನೂ ಮಾರ್ಪಡಿಸದೆ ಉಳಿಸಿಕೊಂಡಿದ್ದಾರೆ. ನೈತಿಕಾಧಾರವುಳ್ಳ ರೂಢಿಗಳ ಅನುಕರಣೆಯ ಈ ರೀತಿಯಲ್ಲಿ ನಾಗರಿಕತೆಯ ಪ್ರಗತಿಯಿಂದಾಗಿ ಯಾವ ಬದಲಾವಣೆಯೂ ಆಗಿಲ್ಲ. ನಮ್ಮದೇ ನಾಗರಿಕತೆಯಲ್ಲಿ ಹಿಂದಿನ ತಲೆಮಾರಿನವರು ಇದೇ ರೀತಿ ಏಕ ಪತ್ನೀತ್ವವನ್ನು ಅಸ್ತಿತ್ವದಲ್ಲಿಟ್ಟುಕೊಂಡು ವೇಶ್ಯಾವೃತ್ತಿಗೂ ಪ್ರೋತ್ಸಾಹ ನೀಡುತ್ತಿದ್ದರು. ಕೆಂಪು ದೀಪವು ಅತ್ಯುಚ್ಚಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಏಕ ಪತ್ನೀತ್ವದ ಶ್ಲಾಘನೆ ನಡೆದಷ್ಟು ಬಿರುಸಿನಲ್ಲಿ ಬೇರೆ ಕಾಲದಲ್ಲಿರಲಿಲ್ಲ. ಸಮಾಜಗಳು ತಮಗೆ ಅಚ್ಚು ಮೆಚ್ಚಾದ, ಪರಂಪರಾನುಗತವಾದ ಕ್ರಮಗಳನ್ನು ಸದಾ ಎತ್ತಿ ಹಿಡಿಯುತ್ತವೆ. ಈ ಸಾಂಸ್ಕೃತಿಕ ಸ್ವಭಾವ ಲಕ್ಷಣಗಳು ಕೈಮೀರಿ ಯಾವುದಾದರೊಂದು ರೀತಿಯ ಪೂರಕ ವರ್ತನೆಯ ಆವಶ್ಯಕತೆ ತೋರಿಬಂದಲ್ಲಿ ಅದನ್ನು ಅನುಸರಿಸುತ್ತಾರೆ, ಪೂರಕ ವರ್ತನೆಯೋ ಅಸ್ತಿತ್ವದಲ್ಲಿಲ್ಲವೇನೋ ಎಂಬಂತೆ ಪಾರಂಪರಿಕಕ್ರಮಗಳಿಗೆ ಬಾಯಿಮಾತಿನ ಗೌರವ ಸಲ್ಲುತ್ತದೆ.

ಮಾನವ ಸಾಂಸ್ಕೃತಿಕ ರೂಪಗಳ, ಇಂತಹ ಪಕ್ಷಿನೋಟವು ಸಾಧಾರಣವಾದ ಹಲವು ತಪ್ಪು ತಿಳಿವಳಿಕೆಗಳನ್ನು ಸರಿಪಡಿಸುತ್ತದೆ. ಮೊದಲನೆಯದಾಗಿ ಮಾನವ ಸಂಸ್ಕೃತಿಗಳು ಸನ್ನಿವೇಶವೋ ಅಥವಾ ಮನುಷ್ಯನ ಶಾರೀರಿಕ ಆವಶ್ಯಕತೆಗಳೋ, ಸೂಚಿಸುವ ಸುಳಿವುಗಳ ತಳಪಾಯದ ಮೇಲೆ ನಿರ್ಮಿತವಾದ ಸಂಸ್ಥೆಗಳು. ಅವು ನಾವು ಕಲ್ಪಿಸಿಕೊಳ್ಳುವಷ್ಟು ಮಟ್ಟಿಗೆ ಮೂಲಪ್ರೇರಣೆಗೆ ಸಮೀಪವಾಗಿರುವುದಿಲ್ಲ. ನಿಜವಾಗಿ ನೋಡಿದರೆ ಈ ಸುಳಿವುಗಳು ಬರೀ ಕಿರುಡು ರೂಪರೇಷೆಗಳು; ವಾಸ್ತವಾಂಶಗಳ ಒಂದು ಪಟ್ಟಿ; ಅಸ್ತಿತ್ವಕ್ಕೆ ಬರುವ ಸಾಮರ್ಥ್ಯವುಳ್ಳ ಸೂಜಿಬಿಂದುವಿನಂತಹ ಅಂಶಗಳು. ಅವುಗಳ ಸುತ್ತ ಪರಿಷ್ಕಾರಗೊಳ್ಳುವ ರೂಪಗಳು ಹಲವಾರು ಪರಕೀಯ ನಿಮಿತ್ತಗಳಿಂದ ಕಟ್ಟುಪಾಡಾಗುತ್ತವೆ. ಯುದ್ಧವು ಹೋರಾಟದ ಮನಃಪ್ರವೃತ್ತಿಯ ವ್ಯಕ್ತರೂಪವಲ್ಲ. ಮನುಷ್ಯನಲ್ಲಿರುವ ಹೋರಾಟದ ಪ್ರವೃತ್ತಿಯು, ಇಡೀ ಮಾನವಸಜ್ಜಿನ ಒಂದು ಸಣ್ಣ ಸುಳಿವು; ಅಂತರ್ಬಣ ಸಂಬಂಧಗಳಲ್ಲಿ ಅದು ವ್ಯಕ್ತರೂಪವನ್ನೇ ತಾಳದಿರಬಹುದು. ಆದರೆ ಅದನ್ನು ಸಂಸ್ಥೀಕರಿಸಿದಾಗ ಅದು ಮೂಲ ಪ್ರೇರಣೆಯಿಂದ ದೂರಸರಿದು ಇತರ ಆಲೋಚನಾಸರಣಿಗಳು ನಿರ್ಮಿಸಿದ ಹಾದಿಯಲ್ಲಿ ನಡೆದು ಒಂದು ರೂಪ ತಳೆಯುತ್ತದೆ. ರೂಢಿಯೆಂಬ ಚೆಂಡಿಗೆ ಹೋರಾಟ ಪ್ರವೃತ್ತಿಯು ಒಂದು ಸಣ್ಣ ನೂಕಾಟವಿದ್ದಂತೆ. ಆ ನೂಕಾಟವನ್ನೂ ತಡೆಹಿಡಿಯಬಹುದು.

ಸಾಂಸ್ಕೃತಿಕ ಪ್ರಕ್ರಿಯೆಗಳ ಬಗ್ಗೆ ಈ ರೀತಿಯ ದೃಷ್ಟಿಕೋನವನ್ನು ತಳೆದೆವಾದರೆ ನಮ್ಮ ಪಾರಂಪರಿಕ ಸಂಸ್ಥೆಗಳನ್ನು ಎತ್ತಿಹಿಡಿಯಲು ಮಂಡಿಸುವ ಪ್ರಚಲಿತ ವಾದಗಳೆಲ್ಲ ಪುನರೂಪಿಸಬೇಕಾಗುತ್ತದೆ. ಆಯಾ ವಿಶಿಷ್ಟ ಪಾರಂಪರಿಕ ರೂಪಗಳಿಲ್ಲದೆ ಮಾನವನು ಕ್ರಿಯಾಶೀಲನಾಗುವುದೇ ಅಸಾಧ್ಯ ಎಂಬ ತಳಹದಿಯ ಮೇಲೆ ಈ ವಾದ

ಗಳು ನಿಂತಿವೆ. ಆಸ್ತಿಯ ಒಡೆತನದ ನಮ್ಮ ಪದ್ಧತಿಯಲ್ಲಿ ತಲೆಯೆತ್ತಿರುವ ಆರ್ಥಿಕ ಪ್ರೇರಣೆಯ ವಿಶಿಷ್ಟ ರೂಪದಂತಹ ವಿಶೇಷ ಸ್ವಭಾವ ಲಕ್ಷಣಗಳು ಇಂತಹ ಸಮರ್ಥನೆಗೆ ಪಾತ್ರವಾಗಿವೆ. ಇದು ಸುಸ್ಪಷ್ಟವಾಗಿ ಒಂದು ವಿಶೇಷ ಪ್ರೇರಣೆಯಾಗಿದ್ದು, ನಮ್ಮ ತಲೆಮಾರಿನಲ್ಲಿಯೇ ಪ್ರಬಲವಾಗಿ ಮಾರ್ಪಾಡಾಗುತ್ತಿದೆ ಎಂಬುದಕ್ಕೆ ಸಾಕ್ಷ್ಯಾಧಾರಗಳಿವೆ. ಅದು ಜೈವಿಕ ಉಳಿವಿಗೇ ಸಂಬಂಧಪಟ್ಟ ಮೌಲ್ಯವುಳ್ಳದ್ದು ಎಂದು ವಾದ ಹೂಡಿ ನಾವು ವಿಚಾರವನ್ನು ಗಲಿಬಿಲಿಗೊಳಿಸಬೇಕಾಗಿಲ್ಲ. ನಮ್ಮ ನಾಗರಿಕತೆಯು ಸ್ವಾವಲಂಬನೆಯ ಪ್ರವೃತ್ತಿಯನ್ನೇ ಆದ್ಯಪ್ರವರ್ತಕವನ್ನಾಗಿ ಎಣಿಸಿದೆ. ಪಶ್ಚಿಮ ಸೀಮೋಲ್ಲಂಘನ ಮತ್ತು ವಿಸ್ತಾರವಾಗುತ್ತಿದ್ದ ಔದ್ಯಮಿಕ ಪದ್ಧತಿಯ ಕಾಲದಲ್ಲಿ ಈ ಪ್ರವೃತ್ತಿಯು ಪ್ರೇರಕವಾಗಿದ್ದಷ್ಟು ಪ್ರಬಲವಾಗಿಲ್ಲದ ರೀತಿಯಲ್ಲಿ, ನಮ್ಮ ಆರ್ಥಿಕ ವಿನ್ಯಾಸವು ಮಾರ್ಪಾಡಾಗಬೇಕು. ಹೀಗಾದಾಗ ಬದಲಾದ ಆರ್ಥಿಕವ್ಯವಸ್ಥೆಗೆ ಹಲವು ಬೇರೆ ಪ್ರವೃತ್ತಿಗಳು ಸಮಂಜಸವಾಗುತ್ತವೆ. ಪ್ರತಿ ಸಂಸ್ಕೃತಿಯೂ, ಪ್ರತಿ ಯುಗವೂ ಅಸಂಖ್ಯಾತವಾದ ಸಾಧ್ಯತೆಗಳಲ್ಲಿ ಕೆಲವನ್ನು ಮಾತ್ರ ಕಾರ್ಯರೂಪಕ್ಕೆ ತರುತ್ತವೆ. ಬದಲಾವಣೆಗಳು ಕಳವಳಕಾರಿಯಾಗಿದ್ದು, ಭಾರಿ ನಷ್ಟಗಳಿಗೆ ಈಡುಮಾಡಬಹುದು. ಆದರೆ ಅದಕ್ಕೆ ಕಾರಣ ಬದಲಾವಣೆ ಕಠಿಣ ಎಂಬುದೇ ಹೊರತು, ಮಾನವ ಜೀವನವನ್ನು ನಿರ್ವಹಿಸಲು ಸಾಧ್ಯವಾಗುವ ಏಕೈಕ ಪ್ರೇರಣೆಯನ್ನು ನಮ್ಮ ದೇಶ ಹಾಗೂ ತಲೆಮಾರು ಕಂಡುಕೊಂಡಿವೆ ಎಂಬುದಲ್ಲ. ಏನೇ ಕಷ್ಟವಿರಲಿ, ಬದಲಾವಣೆಯನ್ನು ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಸಂಪ್ರದಾಯಗಳಲ್ಲಿ ಆಗುವ ಅಲ್ಪಸ್ವಲ್ಪ ಮಾರ್ಪಾಡಿಗೂ ನಾವು ಹೆದರುತ್ತೇವೆ ಎಂಬುದು ಇಲ್ಲಿ ಅಸಂಗತ. ಯಾವ ಮಾನವ ನಿರ್ಮಿತ ಅಧಿಕಾರವೂ ಬಯಸದಷ್ಟು ಇಲ್ಲವೇ ಕಲ್ಪಿಸಿಕೊಳ್ಳದಷ್ಟು ಮಟ್ಟಿನ ರಭಸದಲ್ಲಿ ನಾಗರಿಕತೆಯು ಬದಲಾದರೂ, ಕಾರ್ಯ ಸಾಧ್ಯವಾಗಿಯೇ ಉಳಿಯಬಹುದು. ವಿವಾಹವಿಚ್ಛೇದನದ ಏರಿಕೆ, ನಮ್ಮ ನಗರಗಳಲ್ಲಿ ಬೆಳೆಯುತ್ತಿರುವ ಐಹಿಕತೆ, ಸಲಿಗೆಕೂಟಗಳ ಪ್ರಾಬಲ್ಯ ಹಾಗೂ ಈ ಬಗೆಯ ಇತರ, ಬದಲಾವಣೆಗಳು ಇಂದು ತೀವ್ರ ಖಂಡನೆಗೆ ಗುರಿಯಾಗುತ್ತಿರುವುವಾದರೂ ಸ್ವಲ್ಪ ವಿಭಿನ್ನವಾದ ರೂಪಿಕೆಯ ಸಂಸ್ಕೃತಿಯಲ್ಲಿ ಸೂಕ್ತವಾಗಿ ಅಳವಡಬಹುದು. ಇವು ಒಮ್ಮೆ ಪಾರಂಪರಿಕವಾಗಿ ಬಿಟ್ಟರೆ, ಹಿಂದಿನ ರೂಪಿಕೆಗಳು ಆಗಿನ ತಲೆಮಾರಿನಲ್ಲಿ ಪಡೆದಿದ್ದಂತೆಯೇ ಯಥೇಚ್ಛವಾದ ಅಂತಃಸತ್ವವನ್ನೂ, ಪ್ರಾಮುಖ್ಯತೆಯನ್ನೂ, ಮೌಲ್ಯವನ್ನೂ ಪಡೆದುಕೊಳ್ಳುತ್ತವೆ.

ಸಾಂಸ್ಕೃತಿಕ ಸರಳತೆಯು ಹಾಗೂ ಸಂಕೀರ್ಣತೆಯು ಪ್ರತಿ ಕ್ಷೇತ್ರದಲ್ಲಿಯೂ, ಸಾಧನೀಯವಾದ ಮಾನವಸಂಸ್ಥೆಗಳು ಮತ್ತು ಪ್ರೇರಣೆಗಳು ರಾಶಿರಾಶಿಯಾಗಿವೆ ಎಂಬುದೇ ಸತ್ಯ ಎನ್ನಿಸುತ್ತದೆ. ಅವುಗಳಲ್ಲಿ ತೋರಿಬರುವ ವೈವಿಧ್ಯತೆಯತ್ತ ಹೆಚ್ಚಿನ ಸಹನಶೀಲತೆಯನ್ನು ತಳೆಯುವುದರಲ್ಲಿಯೇ ವಿವೇಕ ಅಡಗಿದೆ. ಆಯಾ ಸಂಸ್ಕೃತಿ ಹಾಗೂ ಅದರ ವಿಧಾನಗಳಲ್ಲಿ ಬಾಳಿ ಬೆಳೆದಿದ್ದರೆ ಮಾತ್ರ ಮನುಷ್ಯನು ಆ ಸಂಸ್ಕೃತಿಯಲ್ಲಿ

ಸಂಪೂರ್ಣವಾಗಿ ಸಹಭಾಗಿಯಾಗಲು ಸಾಧ್ಯ. ಆದರೆ ತನ್ನ ಸಂಸ್ಕೃತಿಯಲ್ಲಿ ತಾನು ಕಾಣುವ ಅರ್ಥಗರ್ಭಿತತೆಯನ್ನೇ ಇತರರು ತಮ್ಮ ತಮ್ಮ ಸಂಸ್ಕೃತಿಗಳಲ್ಲಿ ಕಾಣುತ್ತಾರೆ ಎಂಬುದನ್ನು ಒಪ್ಪಿಕೊಳ್ಳಬೇಕು.

ಸಮಾಜಗಳು ಬಾಳಿನ ಸಾಧನೀಯ ಅಂಶಗಳನ್ನು ಸುಲಭವಾಗಿ ಪರಿಷ್ಕರಿಸುತ್ತವೆ ಇಲ್ಲವೆ ನಿರಾಕರಿಸುತ್ತವೆ ಎಂಬ ಕಾರಣವೊಂದರಿಂದ ಮಾತ್ರ ಸಂಸ್ಕೃತಿಗಳಲ್ಲಿ ವೈವಿಧ್ಯತೆಯುಂಟಾಗುವುದಿಲ್ಲ. ಅದಕ್ಕಿಂತ ಮುಖ್ಯವಾಗಿ ಸಾಂಸ್ಕೃತಿಕ ಸ್ವಭಾವಲಕ್ಷಣಗಳು ಸಂಕೀರ್ಣವಾಗಿ ಹಾಸುಹೊಕ್ಕಾಗಿ ನೇಯ್ದುಕೊಂಡಿರುವುದು ಇದಕ್ಕೆ ಕಾರಣ. ಯಾವುದೇ ಪಾರಂಪಾರಿಕ ಸಂಸ್ಥೆಯ ರೂಪಾಂತರವು ಮೂಲವಾದ ಮಾನವ ಪ್ರೇರಣೆಯನ್ನು ಬಿಟ್ಟು ಬಹು ದೂರ ಸರಿದಿರುತ್ತದೆ ಎಂದು ಈಗಾಗಲೇ ಹೇಳಿದ್ದೇವೆ. ಈ ರೂಪಾಂತರ ಆಯಾ ಸ್ವಭಾವಲಕ್ಷಣವು ಜೀವನಾನುಭವದ ವಿಭಿನ್ನಕ್ಷೇತ್ರಗಳ ಇತರ ಸ್ವಭಾವಲಕ್ಷಣಗಳೊಂದಿಗೆ ಹೇಗೆ ಒಗ್ಗೂಡಿದೆ ಎಂಬುದರ ಮೇಲೆ ಬಹುಮಟ್ಟಿಗೆ ಆಧಾರಗೊಂಡಿರುತ್ತದೆ.

ಬಹಳ ಪ್ರಸಾರವಾಗಿರುವ ಒಂದು ಸ್ವಭಾವಲಕ್ಷಣವು ಒಂದು ಪ್ರದೇಶದ ಜನರಲ್ಲಿ ಧಾರ್ಮಿಕ ನಂಬಿಕೆಗಳಿಂದ ಸಂಪೂರಣವಾಗಿ, ಅವರ ಮತಧರ್ಮದ ಒಂದು ಪ್ರಮುಖ ಅಂಗವಾಗಿ ಕ್ರಿಯಾರೂಪಗೊಂಡಿರಬಹುದು. ಇನ್ನೊಂದು ಪ್ರದೇಶದಲ್ಲಿ ಅದೇ ಸ್ವಭಾವ ಲಕ್ಷಣವೇ ಸಂಪೂರ್ಣವಾಗಿ ಆರ್ಥಿಕವಿನಿಮಯದ ವಿಚಾರವಾಗಿ ನೆಲಸಿ, ಆ ಜನರ ಹಣ ವ್ಯವಸ್ಥೆಯ ಪ್ರಮುಖವಾದ ಅಂಗವಾಗಿರಬಹುದು. ಹೀಗೆ ಈ ಸಾಧನೀಯತೆಗಳು ಕೊನೆಮೊದಲಿಲ್ಲದಂತಿದ್ದು, ಹಲವೊಮ್ಮೆ ಹೋದಾಣಿಕೆಗಳಲ್ಲಿ ವೈಪರೀತ್ಯಗಳು ತೋರಿ ಬರಬಹುದು. ಆ ಸ್ವಭಾವಲಕ್ಷಣದ ಸಹಜ ಗುಣವು ಬೇರೆ ಬೇರೆ ಪ್ರದೇಶಗಳಲ್ಲಿ ವಿಭಿನ್ನವಾಗಿರುತ್ತದೆ. ಏಕೆಂದರೆ ಅದು ಬೇರೆ ಬೇರೆ ಅಂಶಗಳೊಂದಿಗೆ ಬೆರೆತು ಕೊಂಡಿರುತ್ತದೆ.

ಈ ಪ್ರಕ್ರಿಯೆಯನ್ನು ಸ್ಪಷ್ಟಪಡಿಸಿಕೊಳ್ಳುವುದು ಬಹಳ ಮುಖ್ಯ. ಇಲ್ಲದಿದ್ದರೆ, ಒಂದೆಡೆ ಪ್ರಾದೇಶಿಕವಾಗಿ ಸ್ವಭಾವಲಕ್ಷಣಗಳು ಒಗ್ಗೂಡಿರುವುದರ ಪರಿಣಾಮವನ್ನೇ ಒಂದು ಸಮಾಜ ಶಾಸ್ತ್ರೀಯ ನಿಯಮವೆಂದು ಸಾಮಾನ್ಯ ಸೂತ್ರೀಕರಣ ಮಾಡುವುದಕ್ಕೆ ಇಲ್ಲವೇ ಅವುಗಳ ಒಕ್ಕೂಟವನ್ನು ಸಾರ್ವಲೌಕಿಕ ಸಂಗತಿಯೆಂದು ಭಾವಿಸುವುದಕ್ಕೆ ಎಡೆಮಾಡಿಕೊಟ್ಟಂತಾಗುತ್ತದೆ. ಯೂರೋಪಿನ ಆಕೃತಿಶಿಲ್ಪ ಕಲೆಯ ಮಹಾನ್ ಯುಗವು ಧಾರ್ಮಿಕತೆಯಿಂದ ಪ್ರೇರಿತವಾಗಿತ್ತು. ಆ ಕಾಲದ ಮನೋಭಾವದಲ್ಲಿ ಮೂಲವಾಗಿದ್ದ ಧಾರ್ಮಿಕ ದೃಶ್ಯಗಳಿಗೂ, ತತ್ವಸಿದ್ಧಾಂತಗಳಿಗೂ ಕಲೆಯು ಚಿತ್ರರೂಪಕೊಟ್ಟು ಸಾರ್ವಜನಿಕ ಸಂಪತ್ತನ್ನಾಗಿ ಮಾಡಿತು. ಮಧ್ಯಕಾಲೀನ ಕಲೆಯು ಧರ್ಮದೊಂದಿಗೆ ಸಮಾನಗುರಿಯನ್ನು ಹೊಂದಿರದೆ ಪರಿಶುದ್ಧವಾದ ಅಲಂಕಾರಿಕ ಕಲೆಯಾಗಿದ್ದಿದ್ದರೆ ಆಧುನಿಕ ಯೂರೋಪಿನ ರಸಜ್ಞತೆಯೇ ಬೇರೆ ತೆರನಾಗಿ ಬಿಡುತ್ತಿತ್ತು.

ಕಲೆಯ ಮಹಾನ್ ವಿಕಸನಗಳು, ಕೆಲವೊಮ್ಮೆ ಧಾರ್ಮಿಕ ಪ್ರೇರಣೆ ಮತ್ತು ಧಾರ್ಮಿಕ ಬಳಕೆಗಳಿಂದ ಸುಸ್ಪಷ್ಟವಾಗಿ ಬೇರ್ಪಟ್ಟಿದ್ದುವೆಂಬುದು, ಐತಿಹಾಸಿಕ ಸಂಗತಿ. ಕಲೆ ಮತ್ತು ಧರ್ಮ ಎರಡೂ ಉನ್ನತವಾಗಿ ಅಭಿವೃದ್ಧಿ ಪಡೆದ ಎಡೆಗಳಲ್ಲೂ ಕಲೆಯನ್ನು ಧರ್ಮದಿಂದ ಸ್ಪಷ್ಟವಾಗಿ ಬೇರ್ಪಡಿಸಬಹುದು. ಅಮೆರಿಕದ ಸಂಯುಕ್ತ ಸಂಸ್ಥಾನಗಳ ನೈಋತ್ಯ ಭಾಗದ ಪ್ವೆಬ್ಲೋಗಳ ಕುಂಭ ಹಾಗೂ ವಸ್ತ್ರ ಕಲಾರೂಪಗಳು ಯಾವುದೇ ಸಂಸ್ಕೃತಿಯ ಕಲಾವಿದನಿಂದಲಾದರೂ ಗೌರವಗಳಿಸುವಂತಹವು. ಆದರೆ ಅವರಲ್ಲಿ ಪುರೋಹಿತರು ಒಯ್ಯುವ ಅಥವಾ ಪೂಜಾಪೀಠದ ಮೇಲೆ ಜೋಡಿಸಿರುವ ಬೋಗುಣಿಗಳು ಕಳಪೆಯಾಗಿದ್ದು, ಅಲಂಕಾರಿಕತೆಯು ಒರಟಾಗಿಯೂ, ಶೈಲಿ ರಹಿತವಾಗಿಯೂ ಇರುತ್ತದೆ. ನೈಋತ್ಯ ಪ್ರದೇಶದ ಪೂಜಾಪರಿಕರಗಳು ಕುಶಲತೆಯ ಪಾರಂಪರಿಕ ಮಟ್ಟಕ್ಕೆ ಬಹಳ ಕೀಳಾಗಿವೆಯೆಂಬ ಕಾರಣದಿಂದ ವಸ್ತುಸಂಗ್ರಹಾಲಯಗಳಿಂದ ತಿರಸ್ಕಾರಕ್ಕೆ ಪಾತ್ರವಾಗಿವೆ. ಜುನಿ ಇಂಡಿಯನ್ನರೂ ' ಅಲ್ಲಿ ನಾವು ಒಂದು ಕಪ್ಪೆಯನ್ನು ಇಡಬೇಕು ' ಎಂದು ಹೇಳುವಾಗ ಧಾರ್ಮಿಕ ವಿಧಿಯ ಅವಶ್ಯಕತೆಗಳು ಕಲಾತ್ಮಕತೆಗೆ ಅವಕಾಶ ನೀಡುವುದಿಲ್ಲ ಎಂಬುದೇ ಅರ್ಥ. ಕಲೆ ಮತ್ತು ಧರ್ಮಗಳು ಹೀಗೆ ಬೇರ್ಪಟ್ಟಿರುವುದು ಪ್ವೆಬ್ಲೋಗಳಿಗೇ ವಿಶಿಷ್ಟವಾದ ಸ್ವಭಾವಲಕ್ಷಣವಲ್ಲ. ದಕ್ಷಿಣ ಅಮೆರಿಕ ಮತ್ತು ಸೈಬೀರಿಯಾದ ಆದಿವಾಸಿ ಬಣಗಳೂ ಸಹ ಬೇರೆ ಬೇರೆ ರೀತಿಗಳಿಂದ ಪ್ರೇರಿತರಾಗಿದ್ದರೂ ಇದೇ ರೀತಿ ಭೇದವೆಣಿಸುತ್ತಾರೆ. ಅವರುಗಳು ಕಲಾಕುಶಲತೆಯನ್ನು ಧರ್ಮದ ಉದ್ದೇಶಗಳಿಗಾಗಿ ಬಳಸುವುದಿಲ್ಲ. ಆದ್ದರಿಂದ ಹಿಂದಿನ ಕಲಾ ವಿಮರ್ಶಕರಂತೆ, ಪ್ರಾದೇಶಿಕವಾಗಿ ಪ್ರಾಧಾನ್ಯತೆ ಪಡೆದಿರುವ ಅಂಶಗಳಲ್ಲೊಂದಾದ ಮತಧರ್ಮದಲ್ಲಿ ಕಲೆಯ ಮೂಲವನ್ನು ಅರಸುವುದನ್ನು ಬಿಟ್ಟು ನಾವು ಕಲೆ ಮತ್ತು ಧರ್ಮ ಇವೆರಡೂ ಎಷ್ಟರಮಟ್ಟಿಗೆ ಪರಸ್ಪರವಾಗಿ ಬೆರೆತಿವೆ ಮತ್ತು ಅಂತಹ ಪರಸ್ಪರ ಒಳವ್ಯಾಪನೆಯ ಪರಿಣಾಮವೇನು ಎಂಬುದನ್ನು ಕಂಡುಹಿಡಿಯಲು ಮುಂದಾಗಬೇಕು.

ಅನುಭವದ ವಿವಿಧ ಕ್ಷೇತ್ರಗಳ ಪರಸ್ಪರ ವ್ಯಾಪನೆ ಹಾಗೂ ಅದರ ಪರಿಣಾಮವಾಗಿ ಅವುಗಳಲ್ಲಿ ಉಂಟಾಗುವ ಮಾರ್ಪಾಡುಗಳನ್ನು ಅರ್ಥವ್ಯವಸ್ಥೆ, ಲೈಂಗಿಕ ಸಂಬಂಧಗಳು, ಜಾನಪದ ಸಾಹಿತ್ಯ, ಐಹಿಕ ಸಂಸ್ಕೃತಿ, ಮತಧರ್ಮ ಹೀಗೆ ಜೀವನದ ಸಕಲ ಮುಖಗಳಲ್ಲಿಯೂ ಕಾಣಬಹುದು. ಈ ಪ್ರಕ್ರಿಯೆಯನ್ನು ಉತ್ತರ ಅಮೆರಿಕದ ಇಂಡಿಯನ್ನರಲ್ಲಿ ವ್ಯಾಪಕವಾಗಿ ಹರಡಿರುವ ಮತಧರ್ಮ ಸ್ವಭಾವಲಕ್ಷಣಗಳಲ್ಲಿ ಒಂದನ್ನು ತೆಗೆದುಕೊಂಡು ಉದಹರಿಸಬಹುದು. ಈ ಇಡೀ ಖಂಡದಲ್ಲಿ ನೈಋತ್ಯ ಭಾಗದ ಪ್ವೆಬ್ಲೋಗಳನ್ನು ಬಿಟ್ಟು ಇತರ ಎಲ್ಲ ಸಂಸ್ಕೃತಿ ಪ್ರದೇಶಗಳಲ್ಲೂ ಅಲೌಕಿಕ ಶಕ್ತಿಯನ್ನು ಸ್ವಪ್ನ ಅಥವಾ ವಶ್ಯಸುಪ್ತಿಯಲ್ಲಿ ಪಡೆಯುತ್ತಾರೆ. ಅವರ ನಂಬಿಕೆಗಳ ಪ್ರಕಾರ ಅಲೌಕಿಕತೆಯೊಂದಿಗೆ ಪಡೆದಿರುವ ಸಂಬಂಧದಿಂದ ಜೀವನದಲ್ಲಿ ಯಶಸ್ಸು ದೊರೆಯುತ್ತದೆ. ಪ್ರತಿಯೊಬ್ಬ ಮನುಷ್ಯನಿಗೂ ಅವನವನ ಜೀವನ ಕಾಲಕ್ಕೆ ಅವನವನ ದಿವ್ಯದರ್ಶನವು ಶಕ್ತಿ ನೀಡುತ್ತದೆ. ಕೆಲವು ಬಣಗಳಲ್ಲಿ ಆಗಾಗ್ಗೆ ದಿವ್ಯದರ್ಶನಗಳ ಮೂಲಕ

ಭೂತಗಳೊಂದಿಗೆ ತನ್ನ ವೈಯಕ್ತಿಕ ಸಂಬಂಧವನ್ನು ಪುನರುಜ್ಜೀವನಗೊಳಿಸಿಕೊಳ್ಳು. ವುದುಂಟು, ಯಾವುದಾದರೂ ಪ್ರಾಣಿಯನ್ನೋ, ನಕ್ಷತ್ರವನ್ನೋ, ಗಿಡವನ್ನೋ ದೈವೀಭೂತವನ್ನೋ ಅವನು ದಿವ್ಯದರ್ಶನದಲ್ಲಿ ಕಂಡಾಗ ಅದು ಅವನನ್ನು ಆಶ್ರಿತ ನನ್ನಾಗಿ ಸ್ವೀಕರಿಸುತ್ತದೆ. ಅವನಿಗೆ ಅವಶ್ಯಕತೆ ಏರ್ಪಟ್ಟಾಗಲೆಲ್ಲ ಅದರ ಸಹಾಯ ವನ್ನು ಕೋರಬಹುದು. ಅವನು ದಿವ್ಯದರ್ಶನದಲ್ಲಿ ಕಂಡ ರಕ್ಷಕನಿಗೆ ಕಾಣಿಕೆಗಳನ್ನು ಸಲ್ಲಿಸಬೇಕು; ನಾನಾ ಬಗೆಯ ಹರಕೆಗಳನ್ನು ಹೊರಬೇಕು; ಹಲವು ಕಾರ್ಯಗಳನ್ನು ನಿರ್ವಹಿಸಬೇಕು. ಇದಕ್ಕೆ ಪ್ರತಿಫಲವಾಗಿ ಆ ಭೂತವು ದಿವ್ಯದರ್ಶನದಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಕೆಲವು ನಿರ್ದಿಷ್ಟ ಶಕ್ತಿಗಳನ್ನು ಅವನಿಗೆ ನೀಡುತ್ತದೆ.

ಉತ್ತರ ಅಮೆರಿಕದ ಪ್ರತಿಯೊಂದು ಪ್ರದೇಶದಲ್ಲೂ ಈ ರಕ್ಷಕ ಭೂತದ ಸಂಕೀರ್ಣವು, ಸಂಸ್ಕೃತಿಯ ಯಾವ ಇತರ ಸ್ವಭಾವಲಕ್ಷಣಗಳೊಂದಿಗೆ ಅತ್ಯಂತ ಸಮೀಪ ನಂಟನ್ನು ಪಡೆದಿದೆಯೋ ಅದಕ್ಕೆ ಅನುಗುಣವಾಗಿ ವಿವಿಧ ರೂಪಗಳನ್ನು ತಳೆದಿದೆ. ಬ್ರಿಟಿಷ್ ಕೊಲಂಬಿಯಾದ ಪ್ರಸ್ಥಭೂಮಿಗಳಲ್ಲಿ ಅದು ನಾವು ಈ ಮೊದಲು ಪ್ರಸ್ತಾಪಿಸಿದ ಪ್ರೌಢಾವಸ್ಥೆಯ ಸಂಸ್ಕಾರ ಸಮಾರಂಭಗಳೊಂದಿಗೆ ಬೆರೆತುಕೊಂಡಿದೆ. ಈ ಬಣಗಳಲ್ಲಿ ಹುಡುಗರು, ಹುಡುಗಿಯರು ಪ್ರೌಢಾವಸ್ಥೆಗೆ ತಲುಪಿದಾಗ ಮಾಂತ್ರಿಕ ತರಬೇತಿಗಾಗಿ ಬೆಟ್ಟ ಸೀಮೆಗಳಿಗೆ ಹೋಗುತ್ತಾರೆ. ಪೆಸಿಫಿಕ್ ಕರಾವಳಿಯ ಉದ್ದಕ್ಕೂ, ಪ್ರೌಢಾವಸ್ಥೆಯ ಸಂಸ್ಕಾರ ಸಮಾರಂಭಗಳು ವಿಸ್ತಾರವಾಗಿ ಪ್ರಚಲಿತವಾಗಿವೆ. ಈ ಪ್ರದೇಶದ ಬಹುಭಾಗಗಳಲ್ಲಿ ಅವು ರಕ್ಷಕ ಭೂತಕ್ಕೆ ಸಂಬಂಧಪಟ್ಟ ರೂಢಿಗಳಿಂದ ಬೇರೆಯಾಗಿವೆ. ಆದರೆ ಬ್ರಿಟಿಷ್ ಕೊಲಂಬಿಯಾದಲ್ಲಿ ಮಾತ್ರ ಅವೆರಡೂ ಒಂದುಗೂಡಿವೆ. ಹುಡುಗರಿಗೆ ತಾರುಣ್ಯದಲ್ಲಿ ನೀಡುವ ಮಾಂತ್ರಿಕ ತರಬೇತಿಯ ಪರಾಕಾಷ್ಠೆಯಲ್ಲಿ ಅವನು ಒಂದು ರಕ್ಷಕ ಭೂತವನ್ನು ಪಡೆದು, ಅದರ ವರವು ನಿರ್ದೇಶಿಸುವಂತಹ ವೃತ್ತಿಯನ್ನು ತನ್ನ ಜೀವಮಾನದ ವೃತ್ತಿಯಾಗಿ ಸ್ವೀಕರಿಸುತ್ತಾನೆ. ಆ ಅಲೌಕಿಕ ಅಭ್ಯಾಗತನ ಸೂಚನೆಯ ಪ್ರಕಾರ ಅವನು ಯುದ್ಧವೀರನೋ, ಮಾಂತ್ರಿಕನೋ, ಬೇಟೆಗಾರನೋ, ಜೂಜು ಕೋರನೋ ಆಗುತ್ತಾನೆ. ಹೆಣ್ಣು ಹುಡುಗಿಯರೂ ಸಹ ಈ ರಕ್ಷಕ ಭೂತಗಳನ್ನು ಪಡೆದು ತಮ್ಮ ಗೃಹಕೃತ್ಯದ ಕರ್ತವ್ಯಗಳಲ್ಲಿ ನಿರ್ದೇಶನ ಪಡೆಯುತ್ತಾರೆ. ಈ ಜನ ಗಳಲ್ಲಿ ಪ್ರೌಢಾವಸ್ಥೆಯ ಸಂಸ್ಕಾರವಿಧಿಗಳು, ರಕ್ಷಕ ಭೂತಕ್ಕೆ ಸಂಬಂಧಪಟ್ಟ ಅನುಭವ ದೊಂದಿಗೆ ಎಷ್ಟು ಪ್ರಬಲವಾಗಿ ಜೋಡಣೆಯಾಗಿವೆಯೆಂದರೆ, ಈ ಪ್ರದೇಶವನ್ನು ಚೆನ್ನಾಗಿ ಅರಿತಿರುವ ಮಾನವ ಶಾಸ್ತ್ರಜ್ಞರು ಅಮೆರಿಕದ ಇಂಡಿಯನ್ನರಲ್ಲಿ ದಿವ್ಯದರ್ಶನ ಸಂಕೀರ್ಣವು ಪ್ರೌಢಾವಸ್ಥೆಯ ಸಂಸ್ಕಾರ ವಿಧಿಗಳಿಂದ ಹುಟ್ಟಿದುದು ಎಂದು ವಾದ ಮಂಡಿಸುತ್ತಾರೆ. ಆದರೆ ಇವೆರಡೂ ಮೂಲಾರಂಭದಿಂದ ಪರಸ್ಪರ ಸಂಬಂಧಪಟ್ಟ- ವಲ್ಲ. ಸ್ಥಳೀಯವಾಗಿ ಒಂದುಗೂಡಿದ್ದು ಹಾಗೆ ಒಂದುಗೂಡಿದಾಗ ಎರಡು ಸ್ವಭಾವ ಲಕ್ಷಣಗಳೂ ವಿಶೇಷವಾದ ಹಾಗೂ ವಿಲಕ್ಷಣವಾದ ರೂಪಗಳನ್ನು ತಳೆದಿವೆ.

ಈ ಖಂಡದ ಇತರ ಭಾಗಗಳಲ್ಲಿ ಪ್ರೌಢಾವಸ್ಥೆಗೆ ಬರುವಾಗ ರಕ್ಷಕ ಭೂತವನ್ನು

ಅನ್ವೇಶಿಸುವುದಿಲ್ಲ ಹಾಗೂ ಬಣದ ಎಲ್ಲ ಯುವಕರೂ ಇದನ್ನು ಅನ್ವೇಷಿಸುವುದಿಲ್ಲ. ಇದರ ಪರಿಣಾಮವಾಗಿ ಆ ಸಂಸ್ಕೃತಿಗಳಲ್ಲಿ ಪ್ರೌಢಾವಸ್ಥೆಯ ಸಂಸ್ಕಾರವಿಧಿಗಳು ಪ್ರಚಲಿತವಾಗಿದ್ದಾಗ್ಯೂ ರಕ್ಷಕ ಭೂತಸಂಕೀರ್ಣದೊಂದಿಗೆ ಯಾವ ರೀತಿಯಲ್ಲೂ ಸಂಬಂಧಪಟ್ಟಿಲ್ಲ. ದಕ್ಷಿಣದ ಮೈದಾನಗಳಲ್ಲಿ ಅತೀಂದ್ರಿಯ ಶಕ್ತಿಯನ್ನು ಪಡೆಯ ಬೇಕಾದವರು ವಯಸ್ಕರು. ದಿವ್ಯದರ್ಶನ ಸಂಕೀರ್ಣವು ಪ್ರೌಢಾವಸ್ಥೆಯ ಸಂಸ್ಕಾರ ವಿಧಿಗಳನ್ನು ಬಿಟ್ಟು ಬೇರೊಂದು ಸ್ವಭಾವ ಲಕ್ಷಣಗಳೊಂದಿಗೆ ಒಂದುಗೂಡಿರುತ್ತದೆ. ಒಸಾಗೆ ಜನ ತಂದೆಯ ಕಡೆಯಿಂದ ಸಂತತಿಯನ್ನು ಪರಿಗಣಿಸುವರು. ತಾಯಿಯ ಕಡೆಯ ಬಳ್ಳಿಯನ್ನು ಅವರು ಪರಿಗಣನೆಗೇ ತೆಗೆದುಕೊಳ್ಳುವುದಿಲ್ಲ. ಈ ಕುಲೀನ ಗುಂಪುಗಳು ದೈವಿಕ ಅನುಗ್ರಹವನ್ನು ಸರ್ವಸಮವಾಗಿ ಪಿತ್ರಾರ್ಜಿತವಾಗಿ ಪಡೆದಿರುತ್ತವೆ. ಪ್ರತಿಯೊಂದು ಕುಲದ ಐತಿಹ್ಯವೂ ಆಯಾ ಕುಲದ ಮೂಲಪುರುಷನು ದಿವ್ಯದರ್ಶನ ವನ್ನು ಕೋರಿದುದನ್ನೂ, ಆಯಾಕುಲದ ಹೆಸರೇ ಸೂಚಿಸುವ ಪ್ರಾಣಿಯಿಂದ ಅನುಗ್ರಹ ಪಡೆದುದನ್ನೂ ಕುರಿತು ಹೇಳುತ್ತದೆ. ಚಿಪ್ಪುಮೀನು (ಮಸೆಲ್) ಕುಲದ ಮೂಲ ಪುರುಷ, ತನ್ನ ಕೆನ್ನೆಯೆಲ್ಲ ಧಾರಾಕಾರವಾಗಿ ಹರಿಯುತ್ತಿದ್ದ ಕಣ್ಣೀರಿಂದ ತೋಯ್ದಿರಲು ಏಳುಬಾರಿ ದೈವದ ಅನುಗ್ರಹವನ್ನು ಬೇಡಿದ. ಕೊನೆಗೆ ಅವನು ಚಿಪ್ಪುಮೀನನ್ನು (ಮಸೆಲನ್ನು) ಕಂಡು ಅದರೊಂದಿಗೆ ಹೇಳಿದ.

ಏ ತಾತಯ್ಯಾ,
ನಮ್ಮ ಪುಟ್ಟ ಮಕ್ಕಳಿಗೆ ಮೈರೂಪಿಸಿಕೊಳ್ಳಲು ಏನೂ ಇಲ್ಲವಲ್ಲಾ.
ಆಗ ಚಿಪ್ಪುಮೀನು (ಮಸೆಲ್) ನುಡಿಯಿತು :
ನಿನ್ನ ಪುಟ್ಟಮಕ್ಕಳಿಗೆ ಮೈರೂಪಿಸಿಕೊಳ್ಳಲು ಏನೂ ಇಲ್ಲವೆಂದೆನ್ನುವೆ,
ರೂಪಿಸಿಕೊಳ್ಳಲಿ ತಮ್ಮ ಮೈಯನು ನನ್ನ ದೇಹದಿಂದ.
ಪುಟ್ಟಮಕ್ಕಳು ನನ್ನ ದೇಹದಿಂದ ಮೈರೂಪಿಸಿಕೊಂಡಾಗ
ಅವರು ಬಾಳುವರು ತಮ್ಮ ಮುದಿತನ ಕಾಣುವತನಕ ;
ನೋಡು ನೋಡು ನನ್ನ ಚಿಪ್ಪಿನ ಮೇಲಿನ ಸುಕ್ಕುಗಳ ;
ಮುದಿತನವನು ನಾ ಕಂಡುದೇ ಅವುಗಳ ಮೂಲಕ.
ಪುಟ್ಟಮಕ್ಕಳು ನನ್ನ ದೇಹದಿಂದ ಮೈರೂಪಿಸಿಕೊಂಡಾಗ
ಅವರು ಕೂಡ ಸದಾ ಬಾಳುವರು ತಮ್ಮ ಚರ್ಮ ಸುಕ್ಕಾಗುವ ತನಕ.
ಬಾಳಿನ ನದಿಯ ಏಳು ತಿರುವುಗಳ
ಅತಿ ಸುಲಭದಲಿ ನಾ ಹಾಯುವೆನು
ಪಯಣದಲಿ ನಾ ಸಾಗುವ ಹಾದಿಯ ಗುರುತನು
ದೇವತೆಗಳು ಸಹ ಕಾಣಲರಿಯರು ;
ಪುಟ್ಟ ಮಕ್ಕಳು ನನ್ನ ದೇಹದಿಂದ ಮೈರೂಪಿಸಿಕೊಂಡಾಗ

ಯಾರೊಬ್ಬರೂ, ಆ ದೇವತೆಗಳು ಸಹ
ಅವರು ಸಾಗುವ ಹಾದಿಯ ಗುರುತನು ಕಾಣಲರಿಯರು.

ಈ ಜನಗಳಲ್ಲಿ ದಿವ್ಯದರ್ಶನದ ಅನ್ವೇಷಣೆಯನ್ನು ಕುರಿತು ಎಲ್ಲ ಪರಿಚಿತಾಂಶಗಳೂ ಪ್ರಚಲಿತವಾಗಿವೆ. ಆದರೂ, ಕುಲದ ಮೂಲಪುರುಷನೊಬ್ಬನೇ ಅದನ್ನು ಪಡೆದುದು. ಆ ಅನುಗ್ರಹವನ್ನು ರಕ್ತಸಂಬಂಧ ಗುಂಪು ವಂಶಾನುಕ್ರಮವಾಗಿ ಪಡೆದಿದೆ.

ಒಸಾಗೆ ಜನದ ಈ ಪರಿಸ್ಥಿತಿಯು, ಸಾಮಾಜಿಕ ವ್ಯವಸ್ಥೆ ಮತ್ತು ಮೂಲ ಪುರುಷನನ್ನು ಕುರಿತ ಪವಿತ್ರ ಭಾವನೆಗಳು ಹೊಸೆದುಕೊಂಡಿರುವ ಕುಲದೇವತಾವಾದದ ಜಗತ್ತಿನ ಒಂದು ಸಂಪೂರ್ಣ ಚಿತ್ರ. ಪ್ರಪಂಚದ ಎಲ್ಲ ಭಾಗಗಳಿಂದಲೂ ಕುಲದೇವತಾವಾದದ ವಿವರಗಳು ದೊರೆತಿದ್ದು, ಮಾನವ ಶಾಸ್ತ್ರಜ್ಞರು ರಕ್ಷಕ ಭೂತ ಅಥವಾ ವೈಯಕ್ತಿಕ ದೇವತೆಯ ಭಾವನೆಯಿಂದ ಕುಲದೇವತಾ ಭಾವನೆಯು ಉಗಮವಾಯಿತು ಎಂದು ವಾದಿಸಿದ್ದಾರೆ. ಇಲ್ಲಿಯೂ ಸಹ ಪರಿಸ್ಥಿತಿಯು ಬ್ರಿಟಿಷ್ ಕೊಲಂಬಿಯಾದ ಪ್ರಸ್ಥಭೂಮಿಗಳಲ್ಲಿರುವುದಕ್ಕೆ ಸದೃಶವಾದುದು. ಅಲ್ಲಿ ದಿವ್ಯದರ್ಶನದ ಅನ್ವೇಷಣೆಯು ಪ್ರೌಢಾವಸ್ಥೆಯ ಸಂಸ್ಕಾರ ವಿಧಿಗಳೊಂದಿಗೆ ಬೆರೆತುಕೊಂಡಿದೆ. ಇಲ್ಲಿ, ಕುಲದ ವಂಶಾನುಕ್ರಮ ಹಕ್ಕಿನೊಂದಿಗೆ ಬೆರೆತುಕೊಂಡಿದೆ. ಈ ವಿನೂತನ ಒಕ್ಕೂಟದಲ್ಲಿ ದಿವ್ಯದರ್ಶನವು ತಾನೇ ತಾನಾಗಿ ಒಬ್ಬನಿಗೆ ಶಕ್ತಿ ನೀಡುತ್ತದೆ ಎಂಬ ನಂಬಿಕೆಗೆ ಎಡೆಯಿಲ್ಲ. ಆ ದರ್ಶನದ ಅನುಗ್ರಹವನ್ನು ವಂಶಾನುಕ್ರಮದಿಂದ ಮಾತ್ರ ಪಡೆಯಬಹುದು. ಒಸಾಗೆ ಜನರಲ್ಲಿ, ಕುಲದ ಮೂಲಪುರುಷನ ಆಲೆದಾಟ, ಸಮಾಗಮಗಳನ್ನೂ, ಅವನ ವಂಶಸ್ಥರಾಗಿ ಹುಟ್ಟಿದ್ದರಿಂದ ಅವನ ವಂಶಜರು ಪಡೆಯಬಹುದಾದ ಅನುಗ್ರಹಗಳ ವಿವರಗಳನ್ನೂ ಚಿತ್ರಿಸುವ ನೀಳವಾದ ಗೀತಗಾಥೆಗಳು ರಚಿತವಾಗಿವೆ.

ಈ ಎರಡು ಸಂದರ್ಭಗಳಲ್ಲೂ, ಪ್ರೌಢಾವಸ್ಥೆಯ ಸಂಸ್ಕಾರವಿಧಿಗಳೊಂದಿಗೋ ಇಲ್ಲವೇ ಕುಲವ್ಯವಸ್ಥೆಯೊಂದಿಗೋ ಕೂಡಿಕೊಂಡುದರಿಂದ ದಿವ್ಯದರ್ಶನ ಸಂಕೀರ್ಣವು ವಿವಿಧ ಪ್ರದೇಶಗಳಲ್ಲಿ ವಿವಿಧ ಲಕ್ಷಣಗಳನ್ನು ತಳೆದಿದೆ. ಅಲ್ಲದೆ ಪ್ರೌಢಾವಸ್ಥೆಯ ಸಂಸ್ಕಾರ ವಿಧಿ, ಸಾಮಾಜಿಕ ವ್ಯವಸ್ಥೆಗಳೂ ಸಹ ದಿವ್ಯದರ್ಶನದೊಂದಿಗೆ ಬೆರೆತಿರುವುದರಿಂದ ಬೇರೆ ಬೇರೆ ರೀತಿಯಲ್ಲಿ ರಂಜಿಸಿವೆ. ಇದು ಪರಸ್ಪರ ಕ್ರಿಯೆ. ಪ್ರೌಢಾವಸ್ಥೆಯ ಸಂಸ್ಕಾರವಿಧಿ, ಕುಲವ್ಯವಸ್ಥೆಗಳು ದಿವ್ಯದರ್ಶನದೊಂದಿಗೆ ಕೂಡಿಕೊಳ್ಳುವ ಹಲವು ಇತರ ಸ್ವಭಾವಲಕ್ಷಣಗಳು. ಇವೆಲ್ಲವೂ ಬೇರೆ ಬೇರೆ ರೀತಿಯಲ್ಲಿ ಕೂಡಿಸಿ ಹೊಸೆಯಬಹುದಾದ ಹಗ್ಗದ ಎಳೆಗಳು. ಹೀಗೆ ವಿವಿಧ ಸ್ವಭಾವಲಕ್ಷಣಗಳು ಬೆರೆತುಕೊಳ್ಳುವುದರಿಂದ ಉಂಟಾಗುವ ವಿವಿಧ ಕೂಡಿಕೆಗಳ ಪರಿಣಾಮಗಳು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ನಾವು ಪ್ರಸ್ತಾಪಿಸಿರುವ ಎರಡು ಪ್ರದೇಶಗಳಲ್ಲಿ ಆಧ್ಯಾತ್ಮಿಕ ಅನುಭವವು ಪ್ರೌಢಾವಸ್ಥೆಯ ಸಂಸ್ಕಾರವಿಧಿಯೊಂದಿಗೆ ಅಥವಾ ಕುಲವ್ಯವಸ್ಥೆಯೊಂದಿಗೆ

ಹೊಂದಿಕೊಂಡಿದೆ. ಇದರ ಸಹಜ ಪರಿಣಾಮವಾಗಿ ಬಣಕ್ಕೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯೂ ತಾನು ಹಿಡಿಯುವ ಕಾರ್ಯಗಳಲ್ಲಿ ಜಯಗಳಿಸಲು ಬೇಕಾದ ಶಕ್ತಿಯನ್ನು ದಿವ್ಯದರ್ಶನದಿಂದ ಪಡೆಯಬಹುದು. ಯಾವುದೇ ವೃತ್ತಿಯಲ್ಲಿ ಯಶಸ್ಸುಗಳಿಸಿದರೂ ಅದಕ್ಕೆ ಆ ವ್ಯಕ್ತಿಯು ದಿವ್ಯದರ್ಶನಾನುಭವಕ್ಕೆ ಬಾಧ್ಯನಾಗಿದ್ದುದೇ ಕಾರಣ ಎಂದು ಪರಿಗಣಿತವಾಗುತ್ತದೆ. ಯಶಸ್ವಿಯಾದ ಒಬ್ಬ ಮಾಂತ್ರಿಕನಷ್ಟೇ, ಯಶಸ್ವಿಯಾದ ಜೂಜು ಕೋರನೂ, ಬೇಟೆಗಾರನೂ ಅದರಿಂದಲೇ ತನ್ನ ಶಕ್ತಿಯನ್ನು ಪಡೆದಂತಾಗುತ್ತದೆ. ಅವರ ಸಿದ್ಧಾಂತದ ಪ್ರಕಾರ ದೈವೀಕ ರಕ್ಷಕನನ್ನು ಹೊಂದದವರಿಗೆ ಯಶಸ್ಸಿನ ಎಲ್ಲ ಮಾರ್ಗ ಗಳೂ ಮುಚ್ಚಿವೆ.

ಕ್ಯಾಲಿಫೋರ್ನಿಯಾದಲ್ಲಿ ದಿವ್ಯದರ್ಶನವೆಂಬುದು ಮಾಂತ್ರಿಕನಿಗೆ ವೃತ್ತಿಸಂಬಂಧ ವಾದ ಅನುಮತಿ ಪತ್ರವಿದ್ದಂತೆ. ಅದು ಅವನನ್ನು ಇತರರಿಂದ ಬೇರ್ಪಡಿಸಿ ಎತ್ತಿ ತೋರುತ್ತದೆ. ಆದ್ದರಿಂದ ದಿವ್ಯದರ್ಶನಾನುಭವದ ಅತ್ಯಂತ ವೈಪರೀತ್ಯದ ಅಂಶಗಳು ಬೆಳೆದುಬಂದುದೂ ಈ ಪ್ರದೇಶದಲ್ಲಿಯೇ. ದಿವ್ಯದರ್ಶನವು ಉಪವಾಸ, ಚಿತ್ರಹಿಂಸೆ, ಏಕಾಂತವಾಸ ಇವುಗಳಿಂದ ಪ್ರಚೋದಿಸಬಹುದಾದ ಅಲ್ಪ ಭ್ರಾಂತಿಯಲ್ಲ. ಸಮು-ದಾಯದ ಅಸ್ಥಿರ ವ್ಯಕ್ತಿಗಳನ್ನು, ಅದರಲ್ಲಿಯೂ ಮುಖ್ಯವಾಗಿ ಹೆಂಗಸರನ್ನು ಆವರಿಸುವ ಇಂದ್ರಿಯಾತೀತ ಅನುಭವ. ಶಾಸ್ತ ಜನರಲ್ಲಿ ಹೆಂಗಸರೇ ಈ ಅನುಗ್ರಹಕ್ಕೆ ಪಾತ್ರರಾ ಗುವುದು ರೂಢಿ. ಈ ಅನುಭವ ಓರ್ವ ಹೊಸಬಳಿಗೆ ಆಗುವುದು ಈ ರೀತಿ : ಆರಂಭ ದಲ್ಲಿ ಅವಳನ್ನು ಸಿದ್ಧಗೊಳಿಸುತ್ತಾರೆ. ಆಮೇಲೆ ಅವಳು ಮೂರ್ಛೆ ಹೊಂದುತ್ತಾಳೆ. ಆಗ ಅವಳು ಸ್ವಪ್ನ ಕಾಣುತ್ತಾಳೆ ; ಜ್ಞಾನ ತಪ್ಪಿ, ಮರಗಟ್ಟಿ ನೆಲಕ್ಕೆ ಬಿದ್ದುಬಿಡುತ್ತಾಳೆ. ಅವಳಿಗೆ ಸ್ಮೃತಿ ಬರುವ ವೇಳೆಗೆ ಅವಳ ಬಾಯಿಂದ ರಕ್ತ ಹರಿಯುತ್ತಿರುತ್ತದೆ. 'ಮಾಂತ್ರಿಕಳಾಗು' ಎಂಬ ಕರೆ ಅನೇಕ ವಿಧಿನಿಯಮಗಳಿಂದ ಅವಳಿಗೆ ಮಾನ್ಯ. ಅವಳು ಮುಂದಿನ ಹಲವಾರು ವರ್ಷಗಳ ಕಾಲ ನೀಡುವ ಪ್ರದರ್ಶನಗಳಲ್ಲೆಲ್ಲ ಇದೇ ರೀತಿ ಮೂರ್ಛೆ ಹೋಗುತ್ತಾಳೆ. ಅವಳು ಜೀವಸಹಿತ ಬದುಕಿರುವುದಕ್ಕೂ ಇದೇ ಸರಿಯಾದ ಚಿಕಿತ್ಸೆ ಎಂದು ಭಾವಿಸಲಾಗುತ್ತದೆ. ಶಾಸ್ತ ಜನರಂತಹ ಬಣಗಳಲ್ಲಿಯೂ ದಿವ್ಯ ದರ್ಶನಾನುಭವದ ಲಕ್ಷಣವು, ಈ ರೀತಿ ಮೂರ್ಛೆ ಹೋಗುವುದೇ ಆಗಿರುತ್ತದೆ. ಮತ ಧರ್ಮವೃತ್ತಿಯನ್ನನುಸರಿಸುವವರನ್ನು ಇತರರಿಂದ ಬೇರ್ಪಡಿಸಲಾಗುತ್ತದೆ. ಅಲ್ಲದೆ ಅತೀಂದ್ರಿಯ ಅನುಭವದ ಈ ಸ್ವಭಾವವು ಮಾಂತ್ರಿಕರ ಗುಣಲಕ್ಷಣಗಳನ್ನೂ ಮಾರ್ಪ ಡಿಸುತ್ತದೆ. ಮಾಂತ್ರಿಕರು ಖಚಿತವಾಗಿ ಜನಸಮುದಾಯದ ಅಸ್ಥಿರವ್ಯಕ್ತಿಗಳು. ಈ ಪ್ರದೇಶದಲ್ಲಿ ಮಾಂತ್ರಿಕರ ನಡುವೆ ಕುಣಿತದ ಸ್ಪರ್ಧೆಯು ನಡೆಯುತ್ತದೆ. ಅವರಲ್ಲಿ ಒಬ್ಬರನ್ನೊಬ್ಬರು ಸೋಲಿಸಬೇಕು. ನೃತ್ಯದಲ್ಲಿ ಕೊನೆಗೆ ಬರಲೇಬೇಕಾದ ಮೂರ್ಛಾ ವಸ್ಥೆಯನ್ನು ಯಾರು ಯಾರು ಎಷ್ಟು ಎಷ್ಟು ಹೆಚ್ಚು ವೇಳೆ ದೂರವಿಡಬಲ್ಲರು ಎಂಬು ದನ್ನು ಕಂಡುಹಿಡಿಯುವುದೇ ಆ ಸ್ಪರ್ಧೆ. ದಿವ್ಯದರ್ಶನಾನುಭವವೂ, ಮಾಂತ್ರಿಕತೆಯೂ ಬಹು ಸಮೀಪ ನಂಟಸ್ತಿಕೆಗೆ ಒಳಗಾಗುವುದರಿಂದ ಅವೆರಡೂ ಪರಸ್ಪರ ತೀವ್ರ ಪ್ರಭಾ

ವಕ್ಕೆ ಒಳಗಾಗಿವೆ. ದಿವ್ಯದರ್ಶನಾನುಭವವು ಪ್ರೌಢಾವಸ್ಥೆಯ ಸಂಸ್ಕಾರ ವಿಧಿಗಳು ಅಥವಾ ಕುಲ ವ್ಯವಸ್ಥೆಯೊಂದಿಗೆ ಸೇರಿದಾಗ ಅದು ಈ ಎರಡು ಸ್ವಭಾವಲಕ್ಷಣಗಳ ಒಕ್ಕೂಟವು ಮಾನವ ವರ್ತನೆಯ ಎರಡು ಕ್ಷೇತ್ರಗಳನ್ನೂ ತೀವ್ರವಾಗಿ ಮಾರ್ಪಡಿಸಿದೆ

ಇದೇ ರೀತಿ ನಮ್ಮ ನಾಗರಿಕತೆಯಲ್ಲಿ ಚರ್ಚು ಮತ್ತು ವಿವಾಹಗಳ ಭೇದವು ಐತಿಹಾಸಿಕವಾಗಿ ಸ್ಪಷ್ಟವಾಗಿದೆ. ಆದರೆ ನೂರಾರು ವರ್ಷಗಳ ಕಾಲ, ವಿವಾಹ ಸಂಬಂಧವಾದ ಧಾರ್ಮಿಕ ಸಂಸ್ಕಾರವಿಧಿಗಳು, ಲೈಂಗಿಕ ವರ್ತನೆ ಮತ್ತು ಚರ್ಚು. ಎರಡೂ ಕ್ಷೇತ್ರಗಳ ಬೆಳವಣಿಗೆಗಳ ಮೇಲೆ ನಿರ್ಣಾಯಕ ಪ್ರಭಾವವನ್ನು ಬೀರುತ್ತಿದ್ದವು. ಪರಸ್ಪರವಾಗಿ ಸಂಬಂಧ ಪಡೆದ ಎರಡು ಸಾಂಸ್ಕೃತಿಕ ಸ್ವಭಾವಲಕ್ಷಣಗಳು ಒಂದುಗೂಡಿದ್ದರಿಂದಾಗಿ ಆ ಕಾಲದಲ್ಲಿ ವಿವಾಹವು ವಿಶಿಷ್ಟ ಲಕ್ಷಣಗಳನ್ನು ತಳೆಯಿತು. ಹೀಗೆಯೇ ವಿವಾಹವು, ಹಲವಾರು ಎಡೆಗಳಲ್ಲಿ ಪರಂಪರಾಗತವಾಗಿ ಆಸ್ತಿಯನ್ನು ವರ್ಗಾಯಿಸುವ ವಿಧಾನವಾಗಿದೆ. ಇದು ಪ್ರಚಲಿತವಾಗಿರುವ ಸಂಸ್ಕೃತಿಗಳಲ್ಲಿ ವಿವಾಹ ಹಾಗೂ ಆರ್ಥಿಕ ವರ್ಗಾವಣೆಗಳ ನಿಕಟ ಬಾಂಧವ್ಯದಿಂದ, ವಿವಾಹವೆಂಬುದು ಮೂಲತಃ ಲೈಂಗಿಕ ಹಾಗೂ ಸಂತಾನೋತ್ಪತ್ತಿಯ ಹೊಂದಾಣಿಕೆ ಎಂಬ ವಿಚಾರವೂ ಸಹ ತೊಡೆದುಹೋಗಬಹುದು. ಪ್ರತಿಸಂದರ್ಭದಲ್ಲಿಯೂ ವಿವಾಹವು ಇತರ ಯಾವ ಸ್ವಭಾವಲಕ್ಷಣಗಳೊಂದಿಗೆ ಬೆರೆತುಕೊಂಡಿದೆ ಎಂಬುದನ್ನು ಅರಿತುಕೊಳ್ಳಬೇಕು. ಎರಡು ಸಂದರ್ಭಗಳಲ್ಲೂ ಒಂದೇ ಭಾವನಾಶ್ರೇಣಿಯನ್ನು ಬಳಸಿ 'ವಿವಾಹ'ವನ್ನು ಅರ್ಥಮಾಡಿಕೊಳ್ಳಬಹುದು ಎಂಬ ತಪ್ಪುಕಲ್ಪನೆಗೆ ಬಲಿಯಾಗಬಾರದು. ಪರಿಣಾಮ ಸ್ವರೂಪವಾದ ಸ್ವಭಾವಲಕ್ಷಣವು ವಿವಿಧ ಘಟಕಗಳ ಸಂಯೋಜನೆಯಿಂದಾದುದು ಎಂಬುದಕ್ಕೆ ಸಾಕಷ್ಟು ಬೆಲೆ ನೀಡಬೇಕು.

ನಮ್ಮ ಸಾಂಸ್ಕೃತಿಕ ಪರಂಪರೆಯ ಸ್ವಭಾವ ಲಕ್ಷಣಗಳನ್ನು ಅವುಗಳ ಅಂಗಾಂಶಗಳಾಗಿ ವಿಂಗಡಿಸಿ ವಿಶ್ಲೇಷಿಸುವ ಸಾಮರ್ಥ್ಯ ಅತ್ಯವಶ್ಯಕ. ನಮ್ಮ ಅತಿ ಸರಳವಾದ ವರ್ತನೆಯ ಸಂಕೀರ್ಣತೆಯನ್ನು ಸಹ ನಾವು ಈ ವಿಧದಲ್ಲಿ ಅರಿತುಕೊಳ್ಳಲು ಹೊರಟರೆ ಸಮಾಜ ವ್ಯವಸ್ಥೆಯನ್ನು ಕುರಿತ ನಮ್ಮ ವಾದಗಳಿಗೆ ಹೆಚ್ಚು ಸ್ಪಷ್ಟತೆ ಬರುತ್ತದೆ. ಆಂಗ್ಲೋಸ್ಯಾಕ್ಸನ್‌ಜನರಲ್ಲಿ ಬುಡಕಟ್ಟು ಭೇದಗಳು ಮತ್ತು ಪ್ರತಿಷ್ಠೆಯ ಹಕ್ಕುಗಳು ಎಷ್ಟರಮಟ್ಟಿಗೆ ಒಕ್ಕೂಡಿವೆಯೆಂದರೆ, ನಾವು ಸಾಮಾಜಿಕವಾಗಿ ರೂಪಿತವಾದ ನಮ್ಮ ಪೂರ್ವಗ್ರಹಗಳನ್ನು ಜೈವಿಕವಾದ ಬುಡಕಟ್ಟನ್ನು ಕುರಿತ ಸಂಗತಿಗಳಿಂದ ಬೇರ್ಪಡಿಸಿ ನೋಡಲು ಅಶಕ್ತರಾಗಿದ್ದೇವೆ. ಆಂಗ್ಲೋಸ್ಯಾಕ್ಸನ್ ಮತ್ತು ಲ್ಯಾಟಿನ್ ಜನರಂತೆ ಸಮೀಪ ಸಂಬಂಧಿಗಳಾದ ರಾಷ್ಟ್ರಗಳಲ್ಲಿ ಸಹ ಈ ಪೂರ್ವಗ್ರಹಗಳು ವಿವಿಧ ರೂಪಗಳನ್ನು ತಳೆದಿವೆ. ಸ್ಪ್ಯಾನಿಷ್ ವಸಾಹತು ದೇಶಗಳು ಹಾಗೂ ಬ್ರಿಟಿಷ್ ವಸಾಹತುಗಳಲ್ಲಿ ಬುಡಕಟ್ಟು ಭೇದಗಳು ಏಕರೀತಿಯ ಸಾಮಾಜಿಕ ಪ್ರಾಮುಖ್ಯತೆಯನ್ನು ಪಡೆದಿಲ್ಲ. ಅಂತೆಯೇ ಕ್ರೈಸ್ತಧರ್ಮ ಮತ್ತು ಮಹಿಳೆಯರ ಸ್ಥಾನಮಾನಗಳು ಐತಿಹಾಸಿಕವಾಗಿ

ಪರಸ್ಪರ ಸಂಬಂಧ ಪಡೆದ ಸ್ವಭಾವಲಕ್ಷಣಗಳಾಗಿದ್ದು, ಅವು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ರೀತಿಯಲ್ಲಿ ಪರಸ್ಪರವಾಗಿ ಪ್ರಭಾವಿತವಾಗಿವೆ. ಓರಿಜೆನ್ನನು ಹೆಂಗಸನ್ನು ಮೋಹಪಾಶವೆಂದು ಬಣ್ಣಿಸಿದುದು ಮಹಿಳೆಯ ಅವನತಿಗೆ ಹೇಗೆ ಕಾರಣವಾಗಲಿಲ್ಲವೋ ಹಾಗೆಯೇ ಪ್ರಸ್ತುತವಾಗಿ ಕ್ರೈಸ್ತಧರ್ಮೀಯ ದೇಶಗಳಲ್ಲಿ ಸ್ತ್ರೀಯರು ಪಡೆದಿರುವ ಉನ್ನತ ಸ್ಥಾನಮಾನಗಳಿಗೆ ಕ್ರೈಸ್ತಧರ್ಮವೂ ಕಾರಣವಲ್ಲ. ಈ ರೀತಿಯಲ್ಲಿ ಸ್ವಭಾವ ಲಕ್ಷಣಗಳ ಪರಸ್ಪರ ಒಳಹೊಗುವಿಕೆಯೂ ಆಗುತ್ತಿರುತ್ತದೆ; ಹೋಗುತ್ತಿರುತ್ತದೆ. ಸಂಸ್ಕೃತಿಯ ಇತಿಹಾಸವು ಬಹುಮಟ್ಟಿಗೆ ಅವುಗಳ ಸ್ವಭಾವ, ಉನ್ನತಿ, ಅವನತಿಗಳನ್ನು ಅವಲಂಬಿಸಿರುತ್ತದೆ. ಒಂದು ಸ್ವಭಾವಲಕ್ಷಣ ಸಂಕೀರ್ಣದಲ್ಲಿ ನಾವು ಕಾಣುವ ಮೂಲಭೂತ ಸಂಬಂಧಗಳು, ಆ ಪರಸ್ಪರ ಸಂಬಂಧಗಳಲ್ಲಿ ಏರುಪೇರುಂಟಾದಾಗ ವ್ಯಕ್ತಪಡಿಸುವ ಭೀತಭಾವಗಳು ಬಹುತೇಕ ಬರಿಯ ಭ್ರಾಂತಿಯಷ್ಟೆ, ಸಾಧನೀಯ ಸಂಯೋಜನೆಗಳ ವೈವಿಧ್ಯತೆಗೆ ಕೊನೆಮೊದಲೇ ಇಲ್ಲ. ಇವು ಒದಗಿಸುವ ವಿವಿಧ ತಳಹದಿಗಳ ಮೇಲೆ ಮನ ತೋಚಿದ ರೀತಿಯಲ್ಲಿ ಕಾರ್ಯಸಾಧ್ಯವಾದ ವಿವಿಧ ಸಮಾಜ ವ್ಯವಸ್ಥೆಗಳನ್ನು ನಿರ್ಮಿಸಿಕೊಳ್ಳಬಹುದು.

ಅಧ್ಯಾಯ 3

ಸಂಸ್ಕೃತಿಯ ಸಮಗ್ರತೆ

ಸಂಸ್ಕೃತಿಗಳ ವೈವಿಧ್ಯತೆಯನ್ನು ದಾಖಲೆಮಾಡುತ್ತ ಹೋದರೆ ಅದಕ್ಕೆ ಕೊನೆ ಮೊದಲಿಲ್ಲ. ಕೆಲವು ಸಮಾಜಗಳು ಮಾನವ ವರ್ತನೆಯ ಒಂದು ನಿರ್ದಿಷ್ಟ ಕ್ಷೇತ್ರದ ಅಸ್ಥಿತ್ವವನ್ನೇ ಅಲಕ್ಷ್ಯ ಮಾಡಿರಬಹುದು ; ಕೆಲ ಸಂದರ್ಭಗಳಲ್ಲಿ ಅದು ಕಲ್ಪನೆಗೂ ನಿಲುಕದಂತಿರಬಹುದು. ಇನ್ನು ಕೆಲವು ಸಮಾಜಗಳಲ್ಲಿ ಅದೇ ಕ್ಷೇತ್ರ ಸಮಾಜದ ವ್ಯವಸ್ಥಿತ ವರ್ತನೆಯನ್ನೆಲ್ಲ ತಾನೇ ಆವರಿಸಿಕೊಂಡು, ಅತ್ಯಂತ ವಿಜಾತೀಯ ಸನ್ನಿವೇಶಗಳನ್ನೂ ಸಹ ತನ್ನನ್ನೇ ಹೊಂದಿಕೊಳ್ಳುವಂತೆ ನಿರ್ವಹಿಸಲು ಶಕ್ತವಾಗಿರಬಹುದು. ವಾಸ್ತವಿಕವಾಗಿ ಪರಸ್ಪರ ಸಂಬಂಧಪಡದ ಮತ್ತು ಐತಿಹಾಸಿಕವಾಗಿ ಸ್ವತಂತ್ರವಾದ ಸ್ವಭಾವಲಕ್ಷಣಗಳೂ ಸಹ ಒಂದುಗೂಡಿ, ಬೇರ್ಪಡಿಸಲಾರದಂತಾಗುತ್ತವೆ. ಆ ರೀತಿಯಲ್ಲಿ ಒಂದುಗೂಡಿ ಬೇರೆ ಪ್ರದೇಶಗಳಲ್ಲೆಲ್ಲಿಯೂ ಸಾದೃಶ್ಯವಿಲ್ಲದಂತಹ ವರ್ತನೆಗೆ ಕಾರಣೀಭೂತವಾಗಬಹುದು. ಇದರ ಪರಿಣಾಮವಾಗಿ ವಿವಿಧ ಸಂಸ್ಕೃತಿಗಳಲ್ಲಿ, ವರ್ತನೆಯ ಯಾವುದೇ ಮುಖವನ್ನು ತೆಗೆದುಕೊಳ್ಳಲಿ ಅದು ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಎಲ್ಲಿಯಾದರೂ ವ್ಯಾಪಿಸಿರಲು ಸಾಧ್ಯ. ಕಡೆಯ ಪಕ್ಷ ಜೀವಹತ್ಯೆಯನ್ನು ಖಂಡಿಸುವುದರಲ್ಲಿ ಎಲ್ಲ ಜನಾಂಗಗಳೂ ಒಮ್ಮತವಾಗಿರುವುದೆಂದು ನಾವು ಭಾವಿಸಬಹುದು. ಆದರೆ ತದ್ವಿರುದ್ಧವಾಗಿ ಕೆಲವು ಸಮಾಜಗಳು ಕೆಲವು ಸಂದರ್ಭಗಳಲ್ಲಿ ಜೀವಹತ್ಯೆಯ ವಿಷಯದಲ್ಲಿ ಬೇರೆಯೇ ಅಭಿಪ್ರಾಯವನ್ನು ಹೊಂದಿವೆ. ಅವು, ಜೀವಹತ್ಯೆ ಅಪರಾಧವೆಂದು ಪರಿಗಣಿಸುವುದಿಲ್ಲ. ಉದಾಹರಣೆಗೆ, ಎರಡು ನೆರೆಹೊರೆಯ ದೇಶಗಳ ನಡುವೆ ರಾಜತಾಂತ್ರಿಕ ಸಂಬಂಧ ಕಡಿದು ಒಂದು ದೇಶದ ನಾಗರಿಕ, ವೈರಿ

ದೇಶದವನ ಜೀವಹರಣ ಮಾಡಬಹುದು ಅಥವಾ ಸಂಪ್ರದಾಯಕ್ಕನುಗುಣವಾಗಿ ತನ್ನ ಮೊದಲ ಎರಡು ಮಕ್ಕಳನ್ನು ಕೊಲ್ಲಬಹುದು ಅಥವಾ ಹೆಂಡತಿಯ ಜೀವಮರಣದ ಹಕ್ಕನ್ನು ಪಡೆದ ಗಂಡನು ಅವಳನ್ನು ಕೊಲ್ಲಬಹುದು ಅಥವಾ ವೃದ್ಧರಾಗುವ ಮೊದಲೆ ತಂದೆತಾಯಿಗಳನ್ನು ಕೊಲ್ಲುವ ಕರ್ತವ್ಯ ಹೊಂದಿದ ಮಗನು ಅವರನ್ನು ಕೊಲ್ಲಬಹುದು. ಈ ಎಲ್ಲ ಸಾಮಾಜಿಕ ಸಂದರ್ಭಗಳಲ್ಲಿ ಜೀವಹರಣ ಅಪರಾಧವೆಂದು ಎಣಿಸುವುದಿಲ್ಲ. ಅಂತೆಯೇ ಕೋಳಿ ಕದ್ದುದಕ್ಕೋ, ಮೇಲು ಸಾಲಿನ ಹಲ್ಲು ಮೊದಲು ಹುಟ್ಟಿದುದಕ್ಕೋ, ಬುಧವಾರ ಜನಿಸಿದುದಕ್ಕೋ ಹತರಾಗಬೇಕಾದ ಸಂಭವವೂ ಬರಬಹುದು. ಕೆಲವು ಜನಾಂಗಗಳಲ್ಲಿ ಆಕಸ್ಮಿಕ ಹತ್ಯೆಗೆ ಕಾರಣನಾದವನು ಚಿತ್ರಹಿಂಸೆಗೆ ಈಡಾಗುತ್ತಾನೆ. ಇದು ಕೆಲವು ಜನಾಂಗಗಳಲ್ಲಿ ಯಾವ ಲೆಕ್ಕಕ್ಕೂ ಇಲ್ಲ. ಇದೇ ರೀತಿ ಆತ್ಮಹತ್ಯೆಯು ಸಹ ಹಗುರವಾದ ವಿಷಯವಾಗಿದ್ದು, ಸ್ವಲ್ಪ ಮಟ್ಟಿಗೆ ವಿರೋಧಕ್ಕೆ ಗುರಿಯಾದವನೂ ಸಹ ಆ ಹಾದಿ ಹಿಡಿಯುವಂತಿದ್ದು, ಇದು ಬುಡಕಟ್ಟುವೊಂದರಲ್ಲಿ ಮೇಲಿಂದ ಮೇಲೆ ನಡೆಯುವ ಕೃತ್ಯವಿರಬಹುದು. ಪ್ರಾಜ್ಞನಾದ ಮನುಷ್ಯನು ಕೈಗೊಳ್ಳಬಹುದಾದ ಅತ್ಯುದಾತ್ತ ಹಾಗೂ ಅತ್ಯುನ್ನತ ಕಾರ್ಯವೇ ಆತ್ಮಹತ್ಯೆಯಾಗಿರಬಹುದು. ಬೇರೆಡೆಗಳಲ್ಲಿ ಅದರ ಪ್ರಸ್ತಾಪವೇ ಪರಿಹಾಸಕಾರಿಯಾಗಿದ್ದು, ಮಾನವನಿಂದ ಅಂತಹ ಕಾರ್ಯವು ಸಾಧ್ಯ ಎಂಬುದೇ ಕಲ್ಪನೆಗೆ ನಿಲುಕದಂತಹ ವಿಷಯವಾಗಿರಬಹುದು ಅಥವಾ ಕಾನೂನುರೀತ್ಯಾ ಶಿಕ್ಷಾರ್ಹವಾದ ಅಪರಾಧವಾಗಿರಬಹುದು ಇಲ್ಲವೇ ದೈವದ್ರೋಹವೆಂದು ಪರಿಗಣಿತವಾಗಬಹುದು.

ಪ್ರಪಂಚದಲ್ಲಿರುವ ಸಂಪ್ರದಾಯಗಳ ವೈವಿಧ್ಯತೆಯು ನಾವು ಪಟ್ಟಿ ಮಾಡಿ ನಿಸ್ಸಹಾಯಕರಂತೆ ಕೈಬಿಡಬೇಕಾದ ವಿಷಯವಲ್ಲ. ಒಂದೆಡೆ ಸ್ವಯಂ ಹಿಂಸೆ, ಮತ್ತೊಂದೆಡೆ ತಲೆ ಬೇಟೆ, ಒಂದು ಬಣದಲ್ಲಿ ವಿವಾಹಪೂರ್ವ ಜಿತೇಂದ್ರಿಯತೆ, ಇನ್ನೊಂದರಲ್ಲಿ ತಾರುಣ್ಯದಲ್ಲಿಯೇ ಸ್ವಚ್ಛಂದತೆ, ಇವೆಲ್ಲ ಒಂದೆಡೆ ಇದ್ದು ಇನ್ನೊಂದೆಡೆ ಇಲ್ಲದಿದ್ದರೆ ಅಚ್ಚರಿಗೊಳ್ಳಬೇಕಾದಂತಹ ಅಸಂಬದ್ಧ ಸಂಗತಿಗಳಲ್ಲ. ಅಂತೆಯೇ ತನ್ನನ್ನಾಗಲಿ, ಬೇರೊಬ್ಬರನ್ನಾಗಲಿ ಹತ್ಯೆಮಾಡುವುದರ ಬಗ್ಗೆ ಇದಮಿತ್ಥಂ ಎಂಬ ಒಂದು ಆದರ್ಶವಿಲ್ಲದಿದ್ದರೂ ಪ್ರಚಲಿತ ಸಂಪ್ರದಾಯಗಳು ಆಕಸ್ಮಿಕಗಳಂತೂ ಅಲ್ಲ. ಮಾನವನ ವರ್ತನೆಯು ಸ್ಥಳೀಯ, ಮಾನವನಿರ್ಮಿತ ಹಾಗೂ ಬೃಹತ್ ಪ್ರಮಾಣದಲ್ಲಿ ವೈವಿಧ್ಯತೆಯುಳ್ಳದ್ದು ಎಂದು ಅರಿತುಕೊಂಡಮಾತ್ರಕ್ಕೆ ಅವುಗಳ ಪ್ರಾಮುಖ್ಯತೆಯನ್ನೆಲ್ಲ ಅರಿತಂತಾಗಲಿಲ್ಲ. ಸಾಂಸ್ಕೃತಿಕ ವರ್ತನೆಯು ಸಮಗ್ರತೆಯನ್ನು ಸಾಧಿಸುವುದರತ್ತ ಓಲುತ್ತದೆ. ಒಬ್ಬ ವ್ಯಕ್ತಿಯಂತೆಯೇ ಒಂದು ಸಂಸ್ಕೃತಿಯೂ ಸಹ ವಿಚಾರ ಮತ್ತು ಆಚಾರಗಳ ಸುಸಂಗತ ಮಾದರಿ. ಈ ಸುಸಂಗತತೆ ಹೆಚ್ಚಿರಬಹುದು ; ಕಡಮೆ ಇರಬಹುದು. ಪ್ರತಿಯೊಂದು ಸಂಸ್ಕೃತಿಯಲ್ಲಿಯೂ, ಇತರ ರೀತಿಯ ಸಮಾಜಗಳೂ ಸಹ ಹೊಂದಿರಲೇಬೇಕೆಂಬ ನಿರ್ಬಂಧವಿಲ್ಲದ, ವೈಶಿಷ್ಟ್ಯಪೂರ್ಣ ಗುರಿಗಳು ರೂಪುಗೊಂಡಿರು

ತ್ರವೆ. ಈ ಗುರಿಗಳಿಗೆ ಅನುಗುಣವಾಗಿ ಪ್ರತಿ ಜನಾಂಗವೂ ತನ್ನ ಅನುಭವಗಳನ್ನು ಕ್ರೋಢೀಕರಿಸಿಕೊಳ್ಳುತ್ತದೆ. ಈ ಪ್ರೇರಣೆಗಳ ತುರ್ತಿನ ಪ್ರಮಾಣವನ್ನನುಸರಿಸಿ, ವರ್ತನೆಯ ವಿಜಾತೀಯ ಅಂಶಗಳು ಸಹ ಹೆಚ್ಚು ಹೆಚ್ಚಿಗೆ ಸಮಂಜಸ ರೂಪಗಳನ್ನು ತಳೆಯುತ್ತವೆ. ಅತ್ಯಂತ ಅಸಂಬದ್ಧವಾದ ನಡವಳಿಕೆಗಳೂ ಸಹ, ಬಹು ಸಮಗ್ರವಾದ ಸಂಸ್ಕೃತಿಯಿಂದ ಸ್ವೀಕೃತವಾದಾಗ ಅತ್ಯಂತ ಅಸಂಭವವಾದ ರೀತಿಯಲ್ಲಿ ರೂಪಾಂತರ ಹೊಂದಿ ಆ ಸಂಸ್ಕೃತಿಯ ನಿರ್ದಿಷ್ಟ ಗುರಿಗಳ ವಿಶಿಷ್ಟತೆಯನ್ನೇ ಪಡೆಯುತ್ತವೆ. ಈ ನಡವಳಿಕೆಗಳು ತಳೆಯಬಹುದಾದ ರೂಪಿಕೆಗಳನ್ನು ಅರಿತುಕೊಳ್ಳಬೇಕಾದರೆ, ಆ ಸಮಾಜದ ಭಾವನಾತ್ಮಕ ಹಾಗೂ ಮೂಲ ಚಿಲುಮೆಗಳನ್ನು ಮೊದಲು ಅರಸಿ ಅರಿತುಕೊಳ್ಳಬೇಕು.

ಸಂಸ್ಕೃತಿಯು ಈ ಬಗೆಯಲ್ಲಿ ರೂಪಿಕೆಗೊಳ್ಳುವುದನ್ನು ಅನವಶ್ಯಕ ವಿವರವೆಂದು ಅಲಕ್ಷಿಸಲಾಗದು. ಆಧುನಿಕ ವಿಜ್ಞಾನವು ಹಲವಾರು ಕ್ಷೇತ್ರಗಳಲ್ಲಿ ಎತ್ತಿ ತೋರುತ್ತಿರುವಂತೆ, ಸಮಗ್ರವು ಅದರ ಎಲ್ಲ ಭಾಗಗಳ ಮೊತ್ತ ಮಾತ್ರವಲ್ಲ; ಆ ನೂತನ ಅಸ್ತಿತ್ವವನ್ನು ರೂಪಿಸಿರುವ ವಿಶಿಷ್ಟ ವಿನ್ಯಾಸ ಮತ್ತು ಭಾಗಗಳ ಪರಸ್ಪರ ಸಂಬಂಧದ ಪರಿಣಾಮವೂ ಆಗಿದೆ. ಹಾರುಮದ್ದು – ಗಂಧಕ, ಇದ್ದಿಲು ಹಾಗೂ ಪೆಟ್ಲುಪ್ಪುಗಳ ಮೊತ್ತಮಾತ್ರವಲ್ಲ, ಅದರ ಮೂರು ಮೂಲವಸ್ತುಗಳು ನೈಸರ್ಗಿಕ ಸ್ಥಿತಿಯಲ್ಲಿ ಯಾವ ಯಾವ ರೂಪತಳೆದಿವೆ ಎಂಬುದನ್ನು ಕುರಿತು ಎಷ್ಟು ಅರಿವನ್ನು ಗಳಿಸಿದರೂ, ಅದು ಹಾರುಮದ್ದಿನ ಗುಣಗಳನ್ನು ತಿಳಿಸುವುದಿಲ್ಲ. ಮೂಲವಸ್ತುಗಳಲ್ಲಿರದಿದ್ದ ವಿನೂತನ ಸಾಮರ್ಥ್ಯವೊಂದು, ಈ ಹೊಸ ಸಂಯುಕ್ತ ವಸ್ತುವಿನಲ್ಲಿ ಪರಿಣಾಮಗೊಂಡಿದೆ. ಅವೇ ಮೂಲವಸ್ತುಗಳು ಇತರ ಸಂಯೋಜನೆಗಳಲ್ಲಿ ಈ ಬಗೆಯ ಕ್ರಿಯೆಯನ್ನು ತೋರದಿರುವ ಸಾಧ್ಯತೆಯೂ ಇದೆ.

ಇದೇ ರೀತಿ ಸಂಸ್ಕೃತಿಗಳೂ ಸಹ ಅವುಗಳ ಸ್ವಭಾವ ಲಕ್ಷಣಾಂಶಗಳ ಮೊತ್ತವಲ್ಲ. ನಾವು ಒಂದು ಬಣದ ವಿವಾಹ ಪದ್ಧತಿಗಳು, ಸಂಸ್ಕಾರಗಳು, ಪ್ರೌಢಾವಸ್ಥೆಯ ದೀಕ್ಷಾಕ್ರಮಗಳು ಮೊದಲಾದುವು ವಿಂಗಡವಾಗಿರುವ ರೀತಿಯನ್ನು ಕುರಿತು ವಿವರವಾಗಿ ತಿಳಿದುಕೊಂಡರೂ ಸಹ ಈ ಎಲ್ಲ ಅಂಶಗಳನ್ನೂ ತನ್ನ ಗುರಿಗಾಗಿ ಬಳಸಿಕೊಂಡಿರುವ ಆ ಸಮಗ್ರ ಸಂಸ್ಕೃತಿಯ ಬಗ್ಗೆ ಏನನ್ನೂ ಅರಿತುಕೊಳ್ಳಲು ಸಾಧ್ಯವಿಲ್ಲ. ಸಂಸ್ಕೃತಿಯ ಗುರಿಯು ಸುತ್ತಮುತ್ತಣ ಪ್ರದೇಶದಿಂದ ತಾನು ಬಳಸಿಕೊಳ್ಳಬಹುದಾದ ಸ್ವಭಾವ ಲಕ್ಷಣಗಳನ್ನು ಆಯ್ದು ಬಳಸಿಕೊಳ್ಳುತ್ತದೆ. ತಾನು ಬಳಸಲಾಗದಂತಹವನ್ನು ತ್ಯಜಿಸುತ್ತದೆ. ಈ ಎರಡೂ ವರ್ಗಕ್ಕೆ ಸೇರದೇ ಉಳಿದ ಸ್ವಭಾವಲಕ್ಷಣಗಳನ್ನು ತನ್ನ ಅಗತ್ಯತೆಗಳಿಗೆ ಸೂಕ್ತವಾಗುವಂತೆ ಪುನರ್‍ರೂಪಿಸಿಕೊಳ್ಳುತ್ತದೆ. ಈ ಪ್ರಕ್ರಿಯೆಯು ನಡೆಯುತ್ತಿದ್ದರೂ ನಮ್ಮ ಗಮನಕ್ಕೇ ಬರುವಂತಹುದಲ್ಲ. ಆದರೆ ಮಾನವ ವರ್ತನೆಯ ಮಾದರಿಗಳನ್ನು ಅಧ್ಯಯನ ಮಾಡುವಾಗ ಈ ಪ್ರಕ್ರಿಯೆಯನ್ನು ಕಡೆಗಣಿಸಿದ್ದೇ ಆದರೆ ಅದನ್ನು ವಿವೇಚನೆಯಿಂದ ಅರ್ಥೈಸುವ ಸಾಧ್ಯತೆಯನ್ನು ತಳ್ಳಿ ಹಾಕಿದಂತೆಯೇ ಸರಿ.

ಸಂಸ್ಕೃತಿಗಳ ಈ ಸಮಗ್ರತೆಯಲ್ಲಿ ನಿಗೂಢತೆಯೇನೂ ಇಲ್ಲ. ಇದು ಕಲೆಯ ಒಂದು ಶೈಲಿಯು ರೂಪತಳೆದು, ಬೆಳೆದು ನಿಲ್ಲುವಂತಹ ಪ್ರಕ್ರಿಯೆ. ಮೊದಲಿಗೆ, ಎತ್ತರ ಮತ್ತು ಬೆಳಕಿಗೆ ಒಲವು ತೋರುವಂತೆ ಗಾಥಿಕ್ ಶಿಲ್ಪವು ಆರಂಭಗೊಂಡಿತು. ನಂತರ ತನ್ನದೇ ಆದ ತಾಂತ್ರಿಕಕುಶಲತೆ ಅಭಿರುಚಿಯ ಕೈವಾಡವನ್ನು ರೂಢಿಸಿಕೊಂಡು ಹದಿಮೂರನೆಯ ಶತಮಾನದ ವಿಶಿಷ್ಟ ಅನುರೂಪ ಕಲೆಯಾಯಿತು. ಅದು ತನಗೆ ಹೊಂದಿಕೊಳ್ಳದ ಅಂಶಗಳನ್ನು ಕೈಬಿಟ್ಟು, ಕೆಲವನ್ನು ತನ್ನ ಉದ್ದೇಶಗಳಿಗೆ ತಕ್ಕಂತೆ ಮಾರ್ಪಡಿಸಿಕೊಂಡು, ತನ್ನ ಅಭಿರುಚಿಗೆ ತಕ್ಕಂತಹ ಕೆಲವು ನೂತನ ಅಂಶಗಳನ್ನು ರೂಪಿಸಿಕೊಂಡಿತು. ನಾವು ಐತಿಹಾಸಿಕವಾಗಿ ಈ ಪ್ರಕ್ರಿಯೆಯನ್ನು ವಿವರಿಸುವಾಗ, ಆ ಮಹಾನ್ ಕಲಾಪಂಥಕ್ಕೆ ನಿಜವಾಗಿಯೂ ಆಯ್ಕೆ ಮತ್ತು ಉದ್ದೇಶ್ಯಗಳಿದ್ದುವು ಎಂಬ ಅರ್ಥ ಬರುವಂತೆ ಸ್ವ-ಇಚ್ಛೆಯನ್ನು ಆರೋಪಿಸಿ ವ್ಯಕ್ತಪಡಿಸುತ್ತೇವೆ. ಇದಕ್ಕೆ ಕಾರಣ ನಮ್ಮ ಭಾಷೆಗಳಲ್ಲಿ ಅಂತಹ ವಿಚಾರಗಳನ್ನು ವ್ಯಕ್ತಪಡಿಸುವ ವಿಧಾನದಲ್ಲಿರುವ ತೊಡಕು. ನಿಜವಾಗಿಯೂ ಅದರಲ್ಲಿ ಇಚ್ಛಾಪೂರ್ಣವಾದ ಆಯ್ಕೆಯಾಗಲಿ, ಉದ್ದೇಶ್ಯವಾಗಲಿ ಇರಲಿಲ್ಲ. ಮೊದಲಿಗೆ ಸ್ಥಳೀಯ ರೂಪ ಹಾಗೂ ತಂತ್ರಗಳಲ್ಲಿ ಅಡಗಿದ್ದ ಸ್ವಲ್ಪ ಪ್ರಮಾಣದ ಒಂದು ಬಗೆಯ ಒಲವು, ಹೆಚ್ಚೆಚ್ಚು ಸ್ಪಷ್ಟವಾಗಿ ಭರದಿಂದ ವ್ಯಕ್ತವಾಗಿ, ಕ್ರಮೇಣ ನಿರ್ದಿಷ್ಟವಾದ ಪ್ರಮಾಣಗಳಲ್ಲಿ ಸಮಗ್ರತೆಯನ್ನು ಪಡೆದು ಕೊನೆಗೆ ಗಾಥಿಕ್ ಕಲೆಯಾಯಿತು.

ಮಹಾನ್ ಕಲಾಶೈಲಿಗಳಲ್ಲಿ ಏನಾಗಿದೆಯೋ ಸಮಗ್ರ ಸಂಸ್ಕೃತಿಗಳಲ್ಲೂ ಅದೇ ಆಗಿದೆ. ಜೀವನನಿರ್ವಹಣೆ, ದಾಂಪತ್ಯ, ಯುದ್ಧ, ದೇವತಾರ್ಚನೆ ಮೊದಲಾದ ಬಿಡಿ ಬಿಡಿ ವರ್ತನೆಗಳೆಲ್ಲಾ, ಆ ಸಂಸ್ಕೃತಿಗಳೊಳಗೇ ಉಗಮಗೊಳ್ಳುವ ಅವಿಚ್ಛಿನ್ನವಾದ ಆಯ್ಕೆಯ ಸೂತ್ರಗಳಿಗನುಸಾರವಾಗಿ, ಸುಸಂಗತವಾದ ರೂಪಿಕೆಗಳೊಳಗೆ ಅಳವಡುತ್ತವೆ. ಕಲೆಯು ಕೆಲವು ಕಾಲಗಳಲ್ಲಿ ಈ ರೀತಿಯ ಸಮಗ್ರತೆಯನ್ನು ಸಾಧಿಸುವಲ್ಲಿ ವಿಫಲಗೊಂಡಿರುವಂತೆಯೇ ಕೆಲವು ಸಂಸ್ಕೃತಿಗಳೂ ವಿಫಲಗೊಂಡಿವೆ. ಮತ್ತೆ ಕೆಲವು ಸಂಸ್ಕೃತಿಗಳನ್ನು ಪ್ರಚೋದಿಸುವ ಪ್ರೇರಣೆಗಳ ಬಗ್ಗೆ ನಮಗೆ ತಿಳಿದುಬಂದಿರುವುದು ಅತ್ಯಲ್ಪ. ಆದರೆ ಸಂಸ್ಕೃತಿಗಳು ಸರಳತೆಯಿಂದ ಸಂಕೀರ್ಣತೆಯವರೆಗಿನ ಎಲ್ಲ ಮಟ್ಟಗಳಲ್ಲಿ ಈ ಸಮಗ್ರತೆಯನ್ನು ಸಾಧಿಸಿವೆ. ಅಂತಹ ಸಂಸ್ಕೃತಿಗಳು, ಹೆಚ್ಚು ಕಡಮೆ ಯಶಸ್ವಿಯಾದ ಸಮಗ್ರ ವರ್ತನೆಯ ಸಾಧನೆಗಳಾಗಿದ್ದು, ಇಷ್ಟೊಂದು ಸಾಧನೀಯ ವಿನ್ಯಾಸಗಳನ್ನೊಳಗೊಂಡಿವೆಯೆಂಬುದು ನಿಜಕ್ಕೂ ಅಚ್ಚರಿಪಡಬೇಕಾದಂತಹ ಸಂಗತಿ.

ಮಾನವ ಶಾಸ್ತ್ರವು ಸಂಸ್ಕೃತಿಗಳನ್ನು ಸ್ಫುಟವಾಗಿ ಒಕ್ಕೂಡಿರುವ ಸಮಗ್ರತೆಗಳನ್ನಾಗಿ ಅಧ್ಯಯನ ಮಾಡುವುದನ್ನು ಬಿಟ್ಟು ಸಂಸ್ಕೃತಿಗಳ ಬಿಡಿ ಬಿಡಿ ಸ್ವಭಾವ ಲಕ್ಷಣಗಳ ವಿಶ್ಲೇಷಣೆಯ ಮೇಲೆ ವಿಶೇಷ ಗಮನವಿಟ್ಟು ಕಾರ್ಯತತ್ಪರವಾಗಿದೆ. ಮೊದಮೊದಲಿಗೆ ದೊರೆತ ಮಾನವಕುಲ ವಿವರಣೆಗಳ ಸ್ವಭಾವವೇ ಇದಕ್ಕೆ ಬಹುಮಟ್ಟಿನ ಕಾರಣ. ಹಿಂದಿನ ಶ್ರೇಷ್ಠ ಮಾನವ ಶಾಸ್ತ್ರಜ್ಞರು ಆದಿವಾಸಿಗಳ ಬಗ್ಗೆ ಪ್ರತ್ಯಕ್ಷಜ್ಞಾನವನ್ನು ಪಡೆದು ಬರೆದವರಲ್ಲ. ಅವರು, ಯಾತ್ರಿಕರು ಹಾಗೂ ಧರ್ಮಪ್ರಚಾರಕರು ಬರೆದಿಟ್ಟ ವೃತ್ತಾಂತಗಳು ಮತ್ತು ಆರಂಭಿಕ ಮಾನವಕುಲಶಾಸ್ತ್ರಜ್ಞರು ಬರೆದಿಟ್ಟ ಬಾಹ್ಯನಿಷ್ಠ

ವಾದ ಕ್ರಮಬದ್ಧ ವರದಿಗಳನ್ನು ಆಧಾರವಾಗಿಟ್ಟುಕೊಂಡಿದ್ದ ವಿದ್ವಾಂಸರಾಗಿದ್ದವರು. ಅವರಿಗೆ ದೊರೆತ ಮಾಹಿತಿಗಳಿಂದ ಹಲ್ಲುಮುರಿಸಿಕೊಳ್ಳುವ ರೂಢಿಯು ಇಲ್ಲವೇ ಅಂತರ್ ದೃಷ್ಟಿಯಿಂದ ಕಾಲಜ್ಞಾನ ನಿರೂಪಿಸುವುದು ಮೊದಲಾದ ರೂಢಿಗಳ ವ್ಯಾಪ್ತಿವಿಂಗಡಣೆಗಳನ್ನು ಅರಿತುಕೊಳ್ಳಬಹುದಾಗಿತ್ತು. ಆದರೆ ವಿವಿಧ ಬಣಗಳಲ್ಲಿ ಪ್ರಕ್ರಿಯೆಗಳಿಗೆ ರೂಪವನ್ನೂ, ಅರ್ಥವನ್ನೂ ನೀಡಿ ಗುಣಾತ್ಮಕವಾದ ವಿನ್ಯಾಸಗಳಲ್ಲಿ ಈ ಸ್ವಭಾವ ಲಕ್ಷಣಗಳು ಹೇಗೆ ಅಳವಟ್ಟಿದ್ದುವೆಂಬುದನ್ನು ಅರಿತುಕೊಳ್ಳುವುದು ಸಾಧ್ಯವಿರಲಿಲ್ಲ.

'ದಿ ಗೋಲ್ಡನ್ ಬೋ' ದಂತಹ ಸಂಸ್ಕೃತಿಯ ಅಧ್ಯಯನಗಳು ಮತ್ತು ಸಾಧಾರಣತಃ ಸಾಪೇಕ್ಷ ಮಾನವಕುಲೀಯ ಕೃತಿಗಳು ಸ್ವಭಾವಲಕ್ಷಣಗಳ ವಿಶ್ಲೇಷಣಾತ್ಮಕ ತರ್ಕಗಳಾಗಿದ್ದು ಸಾಂಸ್ಕೃತಿಕ ಸಮಗ್ರತೆಯ ಎಲ್ಲ ಅಂಶಗಳನ್ನೂ ಅಲಕ್ಷ್ಯ ಮಾಡಿವೆ. ದಾಂಪತ್ಯ, ಮರಣೋತ್ತರ ಸಂಸ್ಕಾರಗಳು ಮುಂತಾದವುಗಳನ್ನೂ ಬಹು ವಿಭಿನ್ನವಾದ ಸಂಸ್ಕೃತಿಗಳಿಂದ ಭಾಗಶಃ ವರ್ತನೆಗಳನ್ನು ತಾರತಮ್ಯವಿಲ್ಲದಂತೆ ಆಯ್ದು ನಿರೂಪಿಸುತ್ತವೆ. ಆ ತರ್ಕವು ಬಲಗಣ್ಣನ್ನು ಫಿಜಿದ್ವೀಪದಿಂದ, ಎಡಗಣ್ಣನ್ನು ಯೂರೋಪಿನಿಂದ, ಒಂದು ಕಾಲನ್ನು ಟಿಯೆರ್ರಾ ಡೆಲ್‌ಫ್ಯೂಗೋದಿಂದ, ಇನ್ನೊಂದನ್ನು ತಾಹಿತಿಯಿಂದ, ಕೈಬೆರಳು, ಕಾಲ್ಬೆರಳುಗಳನ್ನು ಇನ್ನೂ ಬೇರೆ ಬೇರೆ ದೇಶಗಳಿಂದ ತಂದು ಯಾಂತ್ರಿಕವಾಗಿ ಕೂಡಿಸಿದ ಒಂದು ಬಗೆಯ ಕರ್ತೃನಾಶಕ ಭೂತವಿಕಲಸ್ವರೂಪವನ್ನು ನಿರ್ಮಿಸುತ್ತದೆ. ಅಂತಹ ಒಂದು ಆಕೃತಿಯು ಹಿಂದೆ ಇದ್ದ, ಇಲ್ಲವೇ ಈಗ ಇರುವ ಯಾವ ಯಥಾರ್ಥತೆಗೂ ಸಾದೃಶ್ಯವಲ್ಲ. ಮೂಲಭೂತವಾದ ತೊಡಕು ಹೀಗಿದೆ. ಈ ರೀತಿಯ ಅಧ್ಯಯನವು. ಮನೋರೋಗ ಚಿಕಿತ್ಸಾಶಾಸ್ತ್ರವು ಮನೋರೋಗ ಪೀಡಿತರು ಬಳಸುವ ಸಂಕೇತಗಳ ಪಟ್ಟಿಯನ್ನು ಮಾಡುವುದರಲ್ಲೇ ಕೊನೆಗೊಂಡು, ಆ ಸಂಕೇತಗಳು ಅಳವಟ್ಟಿರುವಂತಹ ಸಿಜೋಫ್ರೇನಿಯ, ಉನ್ಮಾದ-ಉನ್ಮತ್ತವಿಷಣ್ಣತೆ ಮೊದಲಾದ ರೋಗಗಳನ್ನು ಸೂಚಿಸುವ ವರ್ತನೆಗಳ ರೂಪಿಕೆಗಳ ಅಧ್ಯಯನವನ್ನು ಅಲಕ್ಷಿಸಿದರೆ ಹೇಗಿರುತ್ತದೋ ಹಾಗಿರುತ್ತದೆ. ಮನೋರೋಗಿಯ ವರ್ತನೆಯಲ್ಲಿ ಸಂಬಂಧಪಟ್ಟ ಸ್ವಭಾವಲಕ್ಷಣದ ಪಾತ್ರ, ಸಮಗ್ರ ವ್ಯಕ್ತಿತ್ವದಲ್ಲಿ ಅದರ ಕ್ರಿಯಾಶಕ್ತಿಯ ಪ್ರಮಾಣ, ಅನುಭವದ ಇತರ ಅಂಶಗಳೊಂದಿಗೆ ಅದರ ಸಂಬಂಧ, ಇವೆಲ್ಲ ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಾಗುವಂತಹವು. ಮಾನಸಿಕಪ್ರಕ್ರಿಯೆಯನ್ನು ಅರಿತುಕೊಳ್ಳುವುದರಲ್ಲಿ ನಾವು ಆಸಕ್ತರಾಗಿರುವುದು ನಿಜವಾದರೆ, ನಿರ್ದಿಷ್ಟ ಸಂಕೇತವನ್ನು, ವ್ಯಕ್ತಿಯ ಇಡೀ ಮನೋವಿನ್ಯಾಸಕ್ಕೆ ಹೊಂದಿಸಿ ನೋಡಿದಾಗ ಮಾತ್ರ ತೃಪ್ತಿಕರ ಪರಿಣಾಮವಾದೀತು.

ಸಂಸ್ಕೃತಿಗಳನ್ನು ಕುರಿತ ಅಧ್ಯಯನಗಳಲ್ಲೂ ಅಷ್ಟೇ ದೊಡ್ಡ ಮಿಥ್ಯೆಯಿದೆ. ನಾವು ಸಂಸ್ಕೃತಿಗಳ ಪ್ರಕ್ರಿಯೆಗಳನ್ನು ಅರಿತುಕೊಳ್ಳಬೇಕಾದರೆ ಆಯಾ ಸಂಸ್ಕೃತಿಯಲ್ಲಿ ಸಂಸ್ಥೀಕೃತವಾಗಿರುವ ಭಾವನೆಗಳು ಹಾಗೂ ಮೌಲ್ಯಗಳ ಹಿನ್ನೆಲೆಯಲ್ಲಿ ಆಯ್ದ ವರ್ತನೆಯ ಒಂದು ಅಂಶದ ಗುರುತ್ವವನ್ನು ನಿರ್ಧರಿಸುವುದೊಂದೇ ದಾರಿ. ಜೀವಂತ

ಸಂಸ್ಕೃತಿಯನ್ನು ಅಧ್ಯಯನ ಮಾಡಿ, ಅದರ ಆಲೋಚನಾವಿಧಾನಗಳನ್ನೂ, ಅದರ ಸಂಸ್ಥೆಗಳ ಕ್ರಿಯಾತ್ಮಕತೆಯನ್ನೂ ಅರಿತುಕೊಳ್ಳುವುದು ಮೊಟ್ಟಮೊದಲಿನ ಅವಶ್ಯಕತೆ. ಇಂತಹ ಅರಿವನ್ನು ನಾವು ಮರಣೋತ್ತರ ಪರೀಕ್ಷೆಯಿಂದಾಗಲಿ, ಕಾಲ್ಪನಿಕ ಪುನರ್ರಚನೆಗಳಿಂದಾಗಲಿ ಪಡೆಯಲಾರೆವು.

ಮ್ಯಾಲಿನೋವ್‌ಸ್ಕಿಯವರು ಸಂಸ್ಕೃತಿಯ ಕ್ರಿಯಾತ್ಮಕ ಅಧ್ಯಯನಗಳ ಅವಶ್ಯಕತೆಯನ್ನು ಕುರಿತು ಮೇಲಿಂದ ಮೇಲೆ ಒತ್ತಿ ಹೇಳಿದ್ದಾರೆ. ಸಾಧಾರಣವಾದ ಪ್ರಸಾರಣಾ ಅಧ್ಯಯನಗಳು ಜೀವಿಗಳ ಮರಣೋತ್ತರ ವಿಚ್ಛೇದನವೆಂದು ಟೀಕಿಸಿ, ಅದಕ್ಕೆ ಬದಲು ಅವು ಸಜೀವವಾಗಿದ್ದಾಗ ಅವುಗಳ ಅಂಗಾಂಗಗಳನ್ನೂ ಕ್ರಿಯಾತ್ಮಕ ಚೈತನ್ಯವನ್ನೂ ಅಧ್ಯಯನ ಮಾಡುವುದು ಲೇಸೆಂದು ತೋರಿದ್ದಾರೆ. ಮ್ಯಾಲಿನೋವ್‌ಸ್ಕಿಯವರು ಮೆಲನೇಷಿಯಾದ ಟ್ರೋಬ್ರಿಯಾಂಡ್ ದ್ವೀಪವಾಸಿಗಳನ್ನು ಕುರಿತು ಬರೆದಿರುವ ವಿಶಾಲ ವರದಿಯು, ಆದಿವಾಸಿ ಜನರನ್ನು ಕುರಿತು ಪ್ರಪ್ರಥಮವಾದ ಹಾಗೂ ಅತ್ಯುತ್ತಮವಾದ ರೂಪಚಿತ್ರವಾಗಿದ್ದು ಆಧುನಿಕ ಮಾನವ ಕುಲಶಾಸ್ತ್ರವನ್ನು ಸುಗಮಗೊಳಿಸಿದೆ. ಆದರೆ ಮ್ಯಾಲಿನೋವ್‌ಸ್ಕಿಯವರು, ಸ್ವಭಾವಲಕ್ಷಣಗಳು ಸಂಸ್ಕೃತಿಯ ಅಂಗಗಳಾಗಿದ್ದು, ಅದನ್ನು ಕ್ರಿಯಾತ್ಮಕವಾಗುವಂತೆ ಮಾಡಿರುವ ಜೀವಂತ ಅಂಶಗಳು ಎಂದಿಷ್ಟು ಹೇಳಿ ತಮ್ಮ ಮಾನವಕುಲೀಯ ಸೂತ್ರೀಕರಣ ಮಾಡಿ ತೃಪ್ತರಾಗಿದ್ದಾರೆ. ಪರಸ್ಪರ ಹಂಗಿನ ಪ್ರಾಮುಖ್ಯತೆ, ಮಾಂತ್ರಿಕ ವಿಧಿಗಳ ಸ್ಥಳೀಯ ಗುಣಲಕ್ಷಣಗಳು, ಟ್ರೋಬ್ರಿಯಾಂಡ್ ಕುಟುಂಬ ಮೊದಲಾದ ಟ್ರೋಬ್ರಿಯಾಂಡ್ ಸ್ವಭಾವಲಕ್ಷಣಗಳನ್ನು ಸೂತ್ರೀಕರಿಸಿ ಅವೇ ಆದಿವಾಸಿ ಜಗತ್ತಿಗೆಲ್ಲ ಸಮಾನಲಕ್ಷಣಗಳು ಎಂಬಂತೆ ನಿರೂಪಿಸಿದ್ದಾರೆ. ಅದಕ್ಕೆ ಬದಲು ತನ್ನದೇ ಆದ ಆರ್ಥಿಕ, ಧಾರ್ಮಿಕ ಹಾಗೂ ಗೃಹಜೀವನದ ವಿಶಿಷ್ಟ ವ್ಯವಸ್ಥೆಗಳನ್ನು ರೂಪಿಸಿಕೊಂಡು ವೀಕ್ಷಣಾಸಾಧ್ಯವಾದ ಹಲವು ಮಾದರಿಗಳಲ್ಲಿ ಟ್ರೋಬ್ರಿಯಾಂಡ್ ವಿನ್ಯಾಸವೂ ಒಂದು ಎಂದು ಹೇಳಬೇಕಾಗಿತ್ತು.

ವಿಶಿಷ್ಟವಾದ ಸ್ಥಳೀಯ ವ್ಯವಸ್ಥೆಗಳನ್ನು ಆದಿಮೂಲದೊಂದಿಗೆ ಸಮವೆಂದು ಬಗೆದು ಸಾಂಸ್ಕೃತಿಕ ವರ್ತನೆಯ ಅಧ್ಯಯನವನ್ನು ನಾವು ಮುಂದುವರಿಸಲಾರೆವು. ಮಾನವ ಶಾಸ್ತ್ರಜ್ಞರು 'ಆದಿವಾಸಿ ಸಂಸ್ಕೃತಿಯ' ಅಧ್ಯಯನದಿಂದ 'ಆದಿವಾಸಿ ಸಂಸ್ಕೃತಿಗಳ' ಅಧ್ಯಯನದತ್ತ ತಿರುಗುತ್ತಿದ್ದಾರೆ. ಏಕವನ್ನು ಬಿಟ್ಟು ಅನೇಕ ಎಂಬ ಈ ಬದಲಾವಣೆಯ ಮಹತ್ವವು ಈಗೀಗ ಗೋಚರವಾಗ ತೊಡಗಿದೆ.

ಭಾಗಗಳ ವಿಶ್ಲೇಷಣೆಯ ಮುಂದುವರಿಕೆಗೆ ವಿರುದ್ಧವಾಗಿ ಪೂರ್ಣವಿನ್ಯಾಸಗಳ ಅಧ್ಯಯನದ ಮಹತ್ವವನ್ನು ಆಧುನಿಕ ವಿಜ್ಞಾನದ ಪ್ರತಿ ಕ್ಷೇತ್ರವೂ ಒತ್ತಿ ಹೇಳುತ್ತಿದೆ. ತತ್ವಶಾಸ್ತ್ರ ಮತ್ತು ಮಾನಸ ಶಾಸ್ತ್ರಗಳನ್ನು ಕುರಿತು ತನ್ನ ಕೃತಿಗಳಲ್ಲಿ ವಿಲ್ ಹೆಲ್ಮ್ ಸ್ಟರ್ನ್ ಇದನ್ನು ಮೂಲಾಂಶವನ್ನಾಗಿ ಮಾಡಿಕೊಂಡಿದ್ದಾರೆ. ವ್ಯಕ್ತಿಯ ಅವಿಭಾಜ್ಯ ಪೂರ್ಣತೆಯೇ ಈ ರೀತಿಯ ಅಧ್ಯಯನದ ಆರಂಭ ಬಿಂದುವಾಗಬೇಕೆಂದು ಅವರು

ಪ್ರಬಲವಾಗಿ ಪ್ರತಿಪಾದಿಸಿದ್ದಾರೆ, ಅಂತರಂಗಿಕ ಹಾಗೂ ಪ್ರಾಯೋಗಿಕ ಮಾನಸಶಾಸ್ತ್ರದಲ್ಲಿ ಬಹುಮಟ್ಟಿಗೆ ಸರ್ವಮಾನ್ಯವಾಗಿದ್ದ ಅಣುರೂಪ ಅಧ್ಯಯನಗಳನ್ನು ಅವರು ಟೀಕಿಸಿ, ಅದಕ್ಕೆ ಬದಲು ವ್ಯಕ್ತಿತ್ವದ ವಿನ್ಯಾಸ ಪರೀಕ್ಷೆಯನ್ನು ಕೈಗೊಳ್ಳಲು ಸೂಚಿಸಿದ್ದಾರೆ. 'ಸ್ಟ್ರಕ್ಚರ್' ಪಂಥವು ವಿವಿಧ ಕ್ಷೇತ್ರಗಳಲ್ಲಿ ಇಂತಹುದೇ ಕಾರ್ಯಕ್ಕೆ ತನ್ನನ್ನು ಮೀಸಲಿಟ್ಟುಕೊಂಡಿದೆ. ರಸಾಭಿಜ್ಞಾನದ ಕ್ಷೇತ್ರದಲ್ಲಿ ಈ ವಿಧಾನದಿಂದ ಎಂತಹ ಮೂಲಭೂತ ಮಾರ್ಪಾಡು ಉಂಟಾಗುತ್ತದೆಂಬುದನ್ನು ಓರಿಂಗರ್ ತೋರಿದ್ದಾರೆ. ಅವರು ಗ್ರೀಕ್ ಮತ್ತು ಬೈಜಂಟೈನ್ ಈ ಎರಡು ಕಾಲಗಳ ಉನ್ನತ ಕಲೆಗಳ ವೈದೃಶ್ಯವನ್ನು ತೋರಿದ್ದಾರೆ. ಕಲೆಯನ್ನು ನಿರುಪಾಧಿಕ ರೀತಿಯಲ್ಲಿ ಸೂತ್ರೀಕರಣ ಮಾಡಿ, ಪ್ರೌಢ ಪ್ರಾಚೀನ (ಗ್ರೀಕ್–ಲ್ಯಾಟಿನ್) ಆದರ್ಶಗಳಲ್ಲಿ ಸಮೀಕರಿಸಿದ ಪೂರ್ವಕಾಲದ ಕಲಾ ವಿಮರ್ಶೆಯು ಬೈಜಾಂಟೈನ್ ತೈಲವರ್ಣ ಚಿತ್ರಗಳಲ್ಲಿನ ಅಥವಾ ಶಬಲ ಚಿತ್ರಗಳಲ್ಲಿನ ಕಲೆಯ ಪ್ರಕ್ರಿಯೆಯನ್ನೇ ಅರಿತುಕೊಂಡಿರಲಿಕ್ಕಿಲ್ಲವೆಂದು ಅವರು ವಾದಿಸಿದ್ದಾರೆ. ಒಂದು ವಿಧಾನದ ಸಾಧನೆಯನ್ನು ಮತ್ತೊಂದರ ವಿಚಾರವ್ಯಾಪ್ತಿಯಲ್ಲಿ ಒರೆಹಚ್ಚಬಾರದು. ಆವೆರಡೂ ಬೇರೆ ಬೇರೆ ಗುರಿಗಳನ್ನು ಸಾಧಿಸುವುದರಲ್ಲಿ ಕಾರ್ಯನಿರತವಾಗಿದ್ದುವು. ಗ್ರೀಕರು ತಮ್ಮ ಕಲೆಯಲ್ಲಿ ತಾವು ಕಾರ್ಯಶೀಲತೆಯಲ್ಲಿ ಕಂಡುಕೊಂಡ ಆನಂದವನ್ನು ವ್ಯಕ್ತಗೊಳಿಸುವ ಪ್ರಯತ್ನ ಮಾಡಿದರು. ತಾವು ತಮ್ಮ ಚೈತನ್ಯವೆಂದು ಕಂಡುಕೊಂಡುದನ್ನು ಜಗತ್ತಿನೊಂದಿಗೆ ಮೂರ್ತೀಕರಿಸಲು ಇಚ್ಛಿಸಿದರು. ತದ್ವಿರುದ್ಧವಾಗಿ ಬೈಜಾಂಟೈನ್ ಕಲೆಯು ಅಮೂರ್ತಭಾವನೆಯನ್ನೂ, ಬಾಹ್ಯ ಪ್ರಕೃತಿಯ ಎದುರಿನಲ್ಲಿ ಒಂದು ಪರಮವಿರಹ ಭಾವವನ್ನೂ ವಾಸ್ತವಗೊಳಿಸಿತು. ಇವೆರಡನ್ನೂ ಅರಿತುಕೊಳ್ಳಬೇಕಾದರೆ ಅವುಗಳಲ್ಲಿರುವ ಕಲಾ ಸಾಮರ್ಥ್ಯದ ಸಾದೃಶ್ಯಗಳನ್ನು ಮಾತ್ರ ಪರಿಗಣಿಸಿದರೆ ಸಾಲದು ; ಅದಕ್ಕಿಂತ ಮುಖ್ಯವಾಗಿ ಕಲೆಯ ಉದ್ದೇಶ್ಯಗಳಲ್ಲಿದ್ದ ಭೇದವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಅವೆರಡೂ ಪರಸ್ಪರ ವಿರುದ್ಧವಾಗಿದ್ದ ಸಮಗ್ರ ವಿನ್ಯಾಸಗಳು. ಒಂದು ಇನ್ನೊಂದರಲ್ಲಿ ಅರ್ಥ ಅನ್ವಯವಾಗದಂತಹ ಬಂಧಗಳನ್ನೂ, ಆದರ್ಶಗಳನ್ನೂ ಬಳಸಿಕೊಳ್ಳಬಲ್ಲವಾಗಿದ್ದವು.

ಭಾಗಾಂಶಗಳತ್ತಣಿಂದ ಗಮನವನ್ನು ಪೂರ್ಣತೆಯತ್ತ ಹರಿಸಬೇಕಾದುದರ ಮಹತ್ವವನ್ನು ಕುರಿತು ಗೆಸ್ಟಾಲ್ಟ್ (ವಿನ್ಯಾಸ) ಮಾನಸಶಾಸ್ತ್ರವು ಗಮನಾರ್ಹವಾದ ಕೆಲಸ ಮಾಡಿದೆ. ವಿಭಿನ್ನ ಗ್ರಹಿಕೆಗಳ ವಿಶ್ಲೇಷಣೆಯನ್ನು ಎಷ್ಟು ಮಾಡಿದರೂ ಅದು ಸರಳಾತಿಸರಳ ಮನೋಗ್ರಹಿಕೆಯ ಪೂರ್ಣ ಅನುಭವದ ಮೇಲೆ ಯಾವ ಬೆಳಕನ್ನೂ ಚೆಲ್ಲಲಾರದೆಂಬುದನ್ನು ಗೆಸ್ಟಾಲ್ಟ್ ಮಾನಸಶಾಸ್ತ್ರಜ್ಞರು ತೋರಿಸಿಕೊಟ್ಟಿದ್ದಾರೆ. ಮನೋಗ್ರಹಣವನ್ನು ವಾಸ್ತವಿಕ ತುಂಡುಗಳಾಗಿ ವಿಭಾಗಿಸುವುದು ಮಾತ್ರ ಸಾಲದು. ಭಾವನೆಯ ಚೌಕಟ್ಟು, ಪೂರ್ವಾನುಭವಗಳು ಒದಗಿಸಿದ ಆಕಾರಗಳು ಸಹ ಬಹು ಮುಖ್ಯವಾಗಿದ್ದು ಅವುಗಳನ್ನು ಅಲಕ್ಷಿಸುವುದು ಸಾಧ್ಯವಿಲ್ಲ. ಲಾಕ್ ಅವರ ಕಾಲದಿಂದ

ಮಾನಸಶಾಸ್ತ್ರವು ತೃಪ್ತಿಪಟ್ಟು ನಡೆಸಿರುವಂತೆ ಸರಳ ಸಂಯೋಜನಾ ಯಾಂತ್ರಿಕ ವ್ಯೂಹದ ಜೊತೆಗೆ 'ಪೂರ್ಣತೆಯ ಗುಣಲಕ್ಷಣ' ಗಳನ್ನೂ 'ಪೂರ್ಣತೆಯ ಒಲವು' ಗಳನ್ನೂ ಅಧ್ಯಯನ ಮಾಡಬೇಕು. ಪೂರ್ಣತೆಯು ತನ್ನ ಭಿನ್ನಾಂಶಗಳ ಪರಸ್ಪರ ಸಂಬಂಧಗಳನ್ನು ಮಾತ್ರವಲ್ಲ, ಅವುಗಳ ಸ್ವಭಾವಗಳನ್ನು ಸಹ ನಿರ್ಧರಿಸುತ್ತದೆ. ಎರಡು ಪೂರ್ಣತೆಗಳ ನಡುವೆ ಸ್ವಭಾವ ಜನ್ಯ ವಿಚ್ಛಿನ್ನತೆಯಿದೆ. ಅವುಗಳನ್ನು ಅರಿತು ಕೊಳ್ಳಬೇಕಾದರೆ, ಅವುಗಳಲ್ಲಿ ಸ್ಥಾನ ಪಡೆದಿರಬಹುದಾದ ಸಾದೃಶ್ಯಾಂಶಗಳನ್ನು ಗುರು ತಿಸಬೇಕಾದುದರ ಜೊತೆಯಲ್ಲಿಯೇ ಅವುಗಳ ವಿಭಿನ್ನ ಸ್ವಭಾವಗಳನ್ನು ಸಹ ಪರಿಗಣಿಸ ಬೇಕು. ಗೆಸ್ಟಾಲ್ಟ್ ಮಾನಸ ಶಾಸ್ತ್ರದ ಕಾರ್ಯವು ಮುಖ್ಯವಾಗಿ ಪ್ರಯೋಗಾಲಯ ದಲ್ಲಿ ಪ್ರಯೋಗ ಸಿದ್ಧವಾದ ಸಾಕ್ಷ್ಯಾಧಾರಗಳನ್ನು ಒದಗಿಸಬಹುದಾದಂತಹ ಕ್ಷೇತ್ರಗಳಲ್ಲಿ ನಡೆದಿದ್ದರೂ, ಅದರ ಮಹತ್ವವು ಅದರ ಕಾರ್ಯದೊಂದಿಗೆ ಸಂಬಂಧಪಟ್ಟ ಸರಳ ನಿರೂಪಣೆಗಳನ್ನು ಮೀರಿ ವಿಶಾಲವಾಗಿ ವ್ಯಾಪಿಸಿಕೊಂಡಿದೆ.

ವಿಲ್‌ಹೆಲ್ಮ್ ಡಿಲ್ತಿ ಅವರು ಹಿಂದಿನ ತಲೆಮಾರಿನವರಲ್ಲಿನ ಸಮಾಜ ವಿಜ್ಞಾನಗಳ ಸಮಗ್ರತೆ ಮತ್ತು ವಿನ್ಯಾಸಗಳ ಪ್ರಾಮುಖ್ಯತೆಯನ್ನು ಎತ್ತಿ ಹಿಡಿದಿದ್ದಾರೆ. ಅವರ ಆಸಕ್ತಿ ಸೆಳೆದ ವಿಷಯಗಳೆಂದರೆ ಮಹಾನ್ ತತ್ವ ಶಾಸ್ತ್ರಗಳು ಹಾಗೂ ಬಾಳಿನ ಅರ್ಥ ವಿವರಣೆ. ತಮ್ಮ 'ಡೈ ಟೈಪೆನ್ ಡರ್ ವೆಲ್ಟಾನ್‌ಷಾಂಗ್' (ಬಾಳನ್ನು ಕುರಿತು ವಿವಿಧ ಕಲ್ಪನೆಗಳು) ಎಂಬ ಕೃತಿಯಲ್ಲಿ ತತ್ವನಿರೂಪಣಾ ಪದ್ಧತಿಗಳಲ್ಲಿ ಸಾಪೇಕ್ಷತೆಯನ್ನು ತೋರಲು ಚಿಂತ ನೆಯ ಇತಿಹಾಸದ ಹಲವು ಭಾಗಗಳ ವಿಶ್ಲೇಷಣೆ ನಡೆಸಿದ್ದಾರೆ ಅವರು ಅವುಗಳನ್ನು ಬಾಳಿನ ವೈವಿಧ್ಯತೆ, ಮನೋಧರ್ಮ, ಬಾಳಿನ ಶ್ರುತಿ [ಲೆಬೆನ್ ಸ್ಟಿಮುಂಗೆನ್] ಹಾಗೂ ವಿಭಜಿಸಲಸಾಧ್ಯವಾದ ಸಮಗ್ರ ಮನೋಭಾವಗಳ ಮೂಲಭೂತ ವಿಂಗಡಣೆಗಳ ಮಹಾನ್ ವ್ಯಕ್ತರೂಪಗಳಾಗಿ ಕಂಡಿದ್ದಾರೆ. ಇವುಗಳಲ್ಲಿ ಯಾವುದಾದರೊಂದನ್ನು ನಿರ್ಣಾಯಕವೆಂದು ಭಾವಿಸುವುದರ ವಿರುದ್ಧವಾಗಿ ಚೈತನ್ಯಪೂರ್ಣ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಅವರು ತಾವು ವಿಚಾರ ಮಾಡಿರುವ ವಿವಿಧ ಮನೋಭಾವಗಳನ್ನು ಸಾಂಸ್ಕೃತಿಕ ಎಂದು ಹೆಸರಿಸಿಲ್ಲ. ಆದರೆ ಅವರು ಮಹಾನ್ ತತ್ವ ನಿರೂಪಣಾ ವಿನ್ಯಾಸಗಳನ್ನೂ, ಮಹಾಪುರುಷ ಫ್ರೆಡರಿಕನ ಕಾಲದಂತಹ ಐತಿಹಾಸಿಕ ಅವಧಿಗಳನ್ನೂ ಚರ್ಚೆಗೆ ಎತ್ತಿಕೊಂಡಿರುವುದರಿಂದ ಅವರ ಕೃತಿಗಳು ಸಂಸ್ಕೃತಿಯ ಪಾತ್ರಕ್ಕೆ ಹೆಚ್ಚು ಪ್ರಜ್ಞಾಪೂರ್ವಕವಾಗಿ ಮಾನ್ಯತೆ ನೀಡುವುದರತ್ತ ನಮ್ಮನ್ನು ಸ್ವಾಭಾವಿಕವಾಗಿ ಸೆಳೆ ದೊಯ್ಯುತ್ತವೆ.

ಸಂಸ್ಕೃತಿಯ ಈ ಪಾತ್ರವನ್ನು ಆಸ್‌ವಾಲ್ಡ್ ಸ್ಪೆಂಗ್ಲರ್ ಅವರು ಸವಿಸ್ತಾರವಾಗಿ ವಿವರಿಸಿದ್ದಾರೆ. ಅವರ ಒಂದು ಕೃತಿ 'ದಿ ಡಿಕ್ಲೈನ್ ಆಫ್ ದಿ ವೆಸ್ಟ್'. ಆ ಕೃತಿಯ ಹೆಸರಿಗೆ ಅದರೊಳಗಿನ ನಿಯತಭಾವನೆಗಳ ವಿಷಯವು ಕಾರಣವಲ್ಲ. ಅವರು ಅದನ್ನು ನಾಗರಿಕತೆಯ ಪ್ರಧಾನ ರೂಪಿಕೆಗಳು ಎಂದು ಕರೆಯುತ್ತಾರೆ. ಸಾಂಸ್ಕೃತಿಕ ವಿನ್ಯಾ

ಸಗಳಿಗೂ ಸಹ ಯಾವುದೇ ಜೀವಿಯಂತೆ ಜೀವಾವಧಿ ಇರುತ್ತದೆ; ಅದಷ್ಟೂ ಕಾಲ ಇವು ಇದ್ದೇ ಇರಂತ್ತವೆ ; ಜೀವಾವಧಿ ಮುಗಿಯದೆ ಅವು ಅಳಿದು ಹೋಗಲೂ ಸಾಧ್ಯವಿಲ್ಲ ; ಒಂದು ಆಯುರ್‌ಪರಿಮಿತಿಯನ್ನು ಪಡೆದಿವೆ ಎಂಬ ಪ್ರತಿಪಾದನೆಯಿಂದ ಆ ಕೃತಿಗೆ ಹೆಸರು ಬಂದಿದೆ. ಅದು ನಮ್ಮ ಪ್ರಸಕ್ತ ಚರ್ಚೆಗೆ ಅಸಂಗತ. ಪಾಶ್ಚಿಮಾತ್ಯ ನಾಗರಿಕತೆಯ ಸಾಂಸ್ಕೃತಿಕ ಕೇಂದ್ರಗಳ ಸ್ಥಳಾಂತರ ಹಾಗೂ ಉನ್ನತ ಸಾಂಸ್ಕೃತಿಕ ಸಾಧನೆಗಳ ನಿಯತ ಕಾಲಾತ್ಮಕತೆಗಳ ಆಧಾರದ ಮೇಲೆ ಅವರು ನಾಗರಿಕತೆಗಳ ವಿನಾಶವನ್ನು ಕುರಿತು ತಮ್ಮ ಪ್ರತಿಪಾದನೆಯನ್ನು ಸಮರ್ಥಿಸಿಕೊಂಡಿದ್ದಾರೆ. ಸಜೀವಿಗಳ ಹುಟ್ಟು ಸಾವಿನ ಚಕ್ರದೊಂದಿಗೆ ಇದರ ಹೋಲಿಕೆ ನಡೆಸಿ ತಮ್ಮ ವಾದಕ್ಕೆ ಪುಷ್ಟಿಕೊಟ್ಟಿದ್ದಾರೆ, ಈ ಹೋಲಿಕೆ, ಹೋಲಿಕೆ ಮಾತ್ರವೇ ಆಗಿದ್ದು ಅದಕ್ಕಿಂತ ಹೆಚ್ಚಿನ ಅರ್ಥವುಳ್ಳದ್ದಾಗಲು ಸಾಧ್ಯವಿಲ್ಲ. ಪ್ರತಿಯೊಂದು ನಾಗರಿಕತೆಯೂ ಚೈತನ್ಯ ಪೂರ್ಣ ಯೌವ್ವನ, ಬಲಶಾಲಿ ಪುರುಷಪ್ರಾಯ ಹಾಗೂ ಶಿಥಿಲಗೊಳಿಸುವ ಮುಪ್ಪು ಈ ಅವಸ್ಥೆಗಳನ್ನು ಹೊಂದಿದೆ ಎಂದು ಅವರ ನಂಬಿಕೆ.

ಇತಿಹಾಸದ ಈ ಅರ್ಥವಿವರಣೆಯು ಸಾಮಾನ್ಯವಾಗಿ 'ದಿ ಡಿಕ್ಲೈನ್ ಆಫ್ ದಿ ವೆಸ್ಟ್' ಕೃತಿಯ ಸ್ಥಾರಸಾರಾಂಶವಾಗಿ ಪರಿಗಣಿತವಾಗಿದೆ. ಆದರೆ ಇದು ಪಾಶ್ಚಿಮಾತ್ಯ ನಾಗರಿಕತೆಯ ವಿರುದ್ಧ ವಿನ್ಯಾಸಗಳ ಮೌಲ್ಯಾತ್ಮಕ ಹಾಗೂ ಮೂಲಭೂತ ವಿಶ್ಲೇಷಣೆ ಎನ್ನಬಹುದು. ಅವರು ಎರಡು ಮಹಾನ್ ನಿಯಂತ್ರಿ ಭಾವಗಳನ್ನು ಪ್ರತ್ಯೇಕಿಸಿ ತೋರಿದ್ದಾರೆ. ಒಂದು ಪ್ರಾಚೀನ ಜಗತ್ತಿನ ಅಪೊಲೋನಿಯನ್; ಮತ್ತೊಂದು ಆಧುನಿಕ ಜಗತ್ತಿನ ಫಾಸ್ಟಿಯನ್. ಅಪೊಲೋನಿಯನ್ ತನ್ನ ಆತ್ಮವು ಉನ್ನತಾಂಶಗಳ ಗುಂಪಿನಲ್ಲಿ ಜೋಡಿಸಲಾದ ಸ್ವಚಾಲಿತ ಸುವ್ಯವಸ್ಥಿತ ವಿಶ್ವ ಎಂದು ಭಾವಿಸಿದ್ದ; ಅವನ ಜಗತ್ತಿನಲ್ಲಿ ಸಂಕಲ್ಪಕ್ಕೆ ಸ್ಥಾನವಿರಲಿಲ್ಲ; ಘರ್ಷಣೆಯು ಪಾಪವೆಂಬುದು ಅವನ ಸಿದ್ಧಾಂತ. ವ್ಯಕ್ತಿಯ ಅಂತರ್ಮುಖಿ ಬೆಳವಣಿಗೆ ಅವನ ಭಾವನೆಗೆ ಹೊರತು. ಜೀವನವು ಸದಾ ಬಾಹ್ಯ ಜಗತ್ತಿನಿಂದ ಘೋರವಾದ ಅಪಾಯಕ್ಕೆ ತುತ್ತಾಗಿ ಉತ್ಪಾತದ ಛಾಯೆಯಲ್ಲಿದೆ ಎಂದೇ ಅವನು ಕಾಣುತ್ತಿದ್ದ. ಸಹಜ ಜೀವನದ ಹರ್ಷದಾಯಕ ಸನ್ನಿವೇಶಗಳ ಇಚ್ಛಾಪೂರ್ಣ ವಿನಾಶವೇ ರೌದ್ರತೆಯ ಪರಾಕಾಷ್ಠೆ ಎಂದು ಅವನ ಭಾವನೆ. ಒಂದೇ ಘಟನೆ ಈ ಅನೇಕ ವ್ಯಕ್ತಿಗಳಿಗೆ ಒಂದೇರೀತಿಯಲ್ಲಿ ಒದಗುವುದಲ್ಲದೇ ಒಂದೇ ಪರಿಣಾಮ ಉಂಟುಮಾಡಬಹುದಾಗಿದೆ.

ಇದಕ್ಕೆ ತದ್ವಿರುದ್ಧವಾಗಿ ಆಧುನಿಕ ಜಗತ್ತಿನ ಫಾಸ್ಟಿಯನ್, ತಾನೇ ಅಡ್ಡಿ ಅಡಚಣೆಗಳ ವಿರುದ್ಧ ನಿರಂತರ ಹೋರಾಟ ನಡೆಸುತ್ತಿರುವ ಶಕ್ತಿಯೆಂದು ಚಿತ್ರಿಸಿಕೊಳ್ಳುತ್ತಾನೆ. ಅವನು ವ್ಯಕ್ತಿಯ ಜೀವನ ಪಥವು ಆಂತರಿಕ ಬೆಳವಣಿಗೆಯೇ ಎಂದು ಪರಿಗಣಿಸಿದ್ದಾನೆ. ಅಲ್ಲದೆ ಬಾಳಿನಲ್ಲಿ ಒದಗಿಬರುವ ವಿಪತ್ತುಗಳು, ತನ್ನ ಹಿಂದಿನ ದಿನಗಳ ಅನುಭವ ಹಾಗೂ ಆಯ್ಕೆಗಳ ಫಲ, ಇದನ್ನು ಎದುರಿಸದೆ ಗತ್ಯಂತರವೇ ಇಲ್ಲ ಎಂದು

ಎಣಿಸುತ್ತಾನೆ. ಅವನ ಪ್ರಕಾರ ಘರ್ಷಣೆಯೇ ಬಾಳಿನ ಸಾರಸಾರಾಂಶ. ಅದಿಲ್ಲದೆ ವ್ಯಕ್ತಿಯ ಜೀವನಕ್ಕೆ ಅರ್ಥವಿಲ್ಲ. ಬಾಳಿನ ಅಸ್ತಿತ್ವದ ಬಾಹ್ಯ ಮೌಲ್ಯಗಳನ್ನು ಮಾತು ಅರಿತಂತಾಗುತ್ತದೆ. ಫಾಸ್ಟಿಯನ್ ಮನುಷ್ಯ ಅನಂತಕ್ಕಾಗಿ ಹಾತೊರೆಯುವವನಾಗಿದ್ದು, ಅವನು ಅದನ್ನು ಮುಟ್ಟಲು ಪ್ರಯತ್ನ ಮಾಡುತ್ತಾನೆ. ಹೀಗೆ ಫಾಸ್ಟಿಯನ್ ಮತ್ತು ಅಪೊಲೋನಿಯನ್‌ಗಳೆರಡೂ ಬಾಳಿನ ಬಗೆಗೆ ತದ್ವಿರುದ್ಧವಾದ ಅರ್ಥವಿವರಣಾ ಲೋಕಗಳು. ಒಂದರಲ್ಲಿ ತೋರಿಬರುವ ಮೌಲ್ಯಗಳು ಇನ್ನೊಂದರಲ್ಲಿ ಪರಕೀಯ ಹಾಗೂ ಗೌಣ.

ಪ್ರಾಚೀನ ಜಗತ್ತಿನ ನಾಗರಿಕತೆಗಳು ಅಪೊಲೋನಿಯನ್ ಜೀವನದೃಷ್ಟಿಯ ಮೇಲೆ ನಿರ್ಮಿಸಲ್ಪಟ್ಟಂತಹವು. ಆಧುನಿಕ ಜಗತ್ತು ತನ್ನ ಸಕಲ ಸಂಸ್ಥೆಗಳ ಮೂಲಕವೂ ಫಾಸ್ಟಿಯನ್ ದೃಷ್ಟಿಯ ಗೂಢಾರ್ಥಗಳನ್ನೇ ಕಾರ್ಯರೂಪಕ್ಕೆ ತರುತ್ತಲಿದೆ. ಸ್ಪೆಂಗ್ಲರನು ಜೀವನವು ಕಿರಿದಾದ ಹಾಗೂ ಪೂರ್ವನಿರ್ಣಿತ ಜೀವನ ಪಥದಲ್ಲಿ ಸಾಗಿಂತ್ತಾ ಕೊನೆಗೆ ಸತ್ತವರನ್ನು ವಿಚಾರಿಸುವ ನ್ಯಾಯಾಧಿಕಾರಿಗಳ ಮುಂದೆ ಬಂದು ನಿಲ್ಲುತ್ತದೆ ಎಂದು ಭಾವಿಸುವ ಈಜಿಪ್ಶಿಯನ್ ಜೀವನ ದೃಷ್ಟಿಯನ್ನೂ, ಆತ್ಮ ಮತ್ತು ದೇಹಗಳ ಶುದ್ಧ ದ್ವೈತವನ್ನು ಎತ್ತಿ ಹಿಡಿದಿದ್ದ ಮ್ಯಾಜಿಯನ್ ಜೀವನ ದೃಷ್ಟಿಯನ್ನೂ ಸಹ ಪ್ರಸ್ತಾಪಿಸಿದ್ದಾನೆ. ಅವನ ಮುಖ್ಯ ವಿಷಯಗಳೆಂದರೆ, ಅಪೊಲೋನಿಯನ್ ಹಾಗೂ ಫಾಸ್ಟಿಯನ್. ಈ ಎರಡು ಭಾವನೆಗಳು ಪಾಶ್ಚಿಮಾತ್ಯ ನಾಗರಿಕತೆಯ ಗಣಿತ, ಶಿಲ್ಪ, ಸಂಗೀತ, ಚಿತ್ರಕಲೆಗಳಲ್ಲಿ ವಿವಿಧಕಾಲಗಳಲ್ಲಿ ವ್ಯಕ್ತವಾಗಿವೆಯೆಂದು ಅವನ ಭಾವನೆ.

ಸ್ಪೆಂಗ್ಲರನ ಕೃತಿಗಳು ಉಂಟುಮಾಡುವ ಗೊಂದಲದ ಪರಿಣಾಮಕ್ಕೆ ಅವನ ವಿಚಾರಮಂಡನೆಯ ರೀತಿ, ಭಾಗಶಃ ಮಾತ್ರ ಕಾರಣ; ಬಹುಮಟ್ಟಿಗೆ ಅವನು ನಿರೂಪಿಸಿದ ನಾಗರಿಕತೆಗಳ ಸಂಕೀರ್ಣತೆಯು ಹಲವಾರು ತೊಡಕುಗಳು ಬಗೆಹರಿಯದೆ ಇರುವುದು ಪ್ರಮುಖ ಕಾರಣ. ಐತಿಹಾಸಿಕ ವೈವಿಧ್ಯ, ವೃತ್ತಿ ಮತ್ತು ವರ್ಗಗಳಾಗಿ ವಿಂಗಡಣೆ ಹಾಗೂ ತುಲನಾತ್ಮಕವಾಗಿ ಹೋಲಿಸಲು ಸಾಧ್ಯವಿಲ್ಲದಷ್ಟು ವಿವರಯುತ ಸ್ಪಷ್ಟೀಕರಣಗಳನ್ನೊಳಗೊಂಡ ಪಾಶ್ಚಿಮಾತ್ಯ ನಾಗರಿಕತೆಗಳನ್ನು ಕೆಲವೇ ಸ್ಪಷ್ಟ ಮಾತು (ಹಿಡಿನುಡಿ) ಗಳಲ್ಲಿ ವ್ಯಕ್ತಗೊಳಿಸುವುದು ಅಸಾಧ್ಯ. ಅಲ್ಲದೆ ಫಾಸ್ಟಿಯನ್ ಮನುಷ್ಯ ಒಂದು ವೇಳೆ ಇದ್ದಾಗ್ಯೂ, ಕೆಲವು ಪರಿಮಿತ ಬೌದ್ಧಿಕ ಹಾಗೂ ಕಲಾತ್ಮಕ ವೃತ್ತಗಳ ಹೊರಗೆ ನಮ್ಮ ನಾಗರಿಕತೆಯಲ್ಲಿ ಅವನು ತನ್ನದೇ ದಾರಿ ಹಿಡಿಯುವ ಅವಕಾಶವಿಲ್ಲ. ಮೆದು ಕೆಲರೂ ಇದ್ದಾರೆ. ಫಾಸ್ಟಿಯನ್ನರಂತಹ ಪ್ರಚಂಡ ಕಾರ್ಯಶೀಲರೂ ಇದ್ದಾರೆ. ಆಧುನಿಕ ನಾಗರಿಕತೆಯ ಯಾವ ಮಾನವ ಕುಲದ ಸಮರ್ಪಕ ಚಿತ್ರಣವೂ ಪುನಃ ಪುನಃ ತೋರಿಬರುವ ಈ ಮಾದರಿಗಳನ್ನು ಅಲಕ್ಷ್ಯ ಮಾಡುವಂತಿಲ್ಲ. ನಮ್ಮ ಸಂಸ್ಕೃತಿಯು ಸಂಪೂರ್ಣ ಬಾಹ್ಯ ಪ್ರವೃತ್ತಿ ಪರವಾಗಿರುವಂಥದು. ನಿರಂತರ ಲೌಕಿಕ ಚಟುವಟಿಕೆಗಳಲ್ಲಿ ಕಾರ್ಯನಿರತವಾಗಿರುವಂಥದು. ಪರಿಶೋಧನೆಯಲ್ಲಿ ತೊಡಗಿರುವಂಥದೂ

ಅಳೆಯುವ ಶಕ್ತಿ ಹೊಂದಿರುವಂಥದೂ ಹಾಗೂ ಎಡ್ವರ್ಡ್ ಕಾರ್ಪೆಂಟರ್ ಹೇಳುವಂತೆ ಫಾಸ್ಟಿಯನ್ನರಲ್ಲಿರುವಂಥ ಅನೂಚಾನವಾಗಿ ನಡೆದುಬಂದುದನ್ನು ಹಿಂಬಾಲಿಸುವಂಥದೂ ಆಗಿ ಅನಂತಕ್ಕಾಗಿ ಹಾತೊರೆಯುವುದು ಎಂದು ಗುಣವಿವರಣೆ ನೀಡಿದರೆ ಅದು ಎಲ್ಲರಿಗೂ ಒಪ್ಪಿಗೆಯಾಗಬಹುದು

ಮಾನವ ಶಾಸ್ತ್ರೀಯ ದೃಷ್ಟಿಯಿಂದ, ಸ್ಪೆಂಗ್ಲರ್ ನೀಡಿರುವ ಜಗತ್ತಿನ ನಾಗರಿಕತೆಗಳ ಚಿತ್ರಣಗಳ ದೋಷವೆಂದರೆ ಆಧುನಿಕ ಶ್ರೇಣೀಕೃತ ಸಮಾಜವನ್ನು ಜಾನಪದ ಸಂಸ್ಕೃತಿಯೊಂದರಂತೆ ಮೂಲಭೂತ ಸಮರೂಪವನ್ನು ಆರೋಪಿಸಿ ನೋಡುವುದಕ್ಕೆ ಪ್ರಯತ್ನಿಸಿರುವುದು. ಇಂದು ನಮಗೆ ಇರುವ ಅರಿವಿನ ಮಟ್ಟದಲ್ಲಿ, ಪಾಶ್ಚಿಮಾತ್ಯ ಸಂಸ್ಕೃತಿಯಿಂದ ದೊರೆಯುವ ಐತಿಹಾಸಿಕ ವಿಷಯವಸ್ತುಗಳು ಬಹು ಸಂಕೀರ್ಣವಾಗಿದ್ದು, ಸಾಮಾಜಿಕ ಪ್ರತ್ಯೇಕತೆಗಳು ಆಮೂಲಾಗ್ರವಾಗಿದ್ದು ಸೂಕ್ತ ವಿಶ್ಲೇಷಣೆಗೆ ಒದಗಿಬರುವಂತಿಲ್ಲ. ಐರೋಪ್ಯ ಸಾಹಿತ್ಯ ಮತ್ತು ತತ್ವ ಶಾಸ್ತ್ರಗಳ ಅಧ್ಯಯನಕ್ಕೆ ಸ್ಪೆಂಗ್ಲರ್ ನೀಡಿರುವ ಫಾಸ್ಟಿಯನ್ ಮನುಷ್ಯನನ್ನು ಕುರಿತ ವಾದ ನಿರೂಪಣೆ ಭಾವಸ್ಫೂರಕವಾಗಿರಬಹುದು ; ಮೌಲ್ಯಗಳ ಸಾಪೇಕ್ಷತೆಗೆ ಅವನು ನೀಡಿರುವ ಪ್ರಾಮುಖ್ಯತೆಯು ನ್ಯಾಯವಾದುದಾಗಿರಬಹುದು ; ಆದರೆ ಅವನದರಷ್ಟೇ ಸಮಂಜಸವಾದ ಇತರ ಚಿತ್ರಣಗಳನ್ನು ನೀಡಬಹುದಾಗಿರುವುದರಿಂದ ಅವನು ನೀಡಿರುವ ವಿಶ್ಲೇಷಣೆಯೇ ಅಂತಿಮವೆಂದು ಭಾವಿಸಲು ಸಾಧ್ಯವಿಲ್ಲ. ಹಿನ್ನೋಟದಿಂದ ನೋಡುವಾಗ ಪಾಶ್ಚಿಮಾತ್ಯ ಸಂಸ್ಕೃತಿ ಎಂಬ ಒಂದು ಮಹಾನ್ ಸಂಕೀರ್ಣದ ಪೂರ್ಣ ಗುಣ ನಿರೂಪಣೆ ಮಾಡಲು ಸಾಧ್ಯವಾಗಬಹುದು. ಆದರೆ ಸ್ಪೆಂಗ್ಲರ್‌ನ ಅನುರೂಪತೆಯಿಲ್ಲದ ನಿಯತಿ ಭಾವಗಳ ಆಧಾರ ಕಲ್ಪನೆಯು ಬಹಳ ಮಹತ್ವವುಳ್ಳದ್ದೇ ಆದರೂ, ಪ್ರಸಕ್ತ ಸಮಯದಲ್ಲಿ ಪಾಶ್ಚಿಮಾತ್ಯ ಪ್ರಪಂಚವನ್ನು ಯಾವುದೋ ಒಂದೆರಡು ಸ್ವಭಾವಲಕ್ಷಣಗಳನ್ನಾಯು ಅವುಗಳ ವಿಚಾರವ್ಯಾಪ್ತಿಯಲ್ಲಿ ಅರ್ಥೈಸುವುದರಿಂದ ಗಲಿಬಿಲಿಯುಂಟಾಗುತ್ತದೆ,

ಆದಿವಾಸಿ ಜನರನ್ನು ಅಧ್ಯಯನ ಮಾಡಲು ಇರುವ ಒಂದು ತತ್ವಶಾಸ್ತ್ರೀಯ ಸಮರ್ಥನೆಯು ಸ್ಪಷ್ಟ ವೀಕ್ಷಣೆಗೆ ದೊರೆಯದಂತಹ ದಿಗ್ಭ್ರಮೆಗೊಳಿಸುವ ಸಾಮಾಜಿಕ ಸಂಗತಿಗಳನ್ನು ಸರಳ ಸಂಸ್ಕೃತಿಗಳ ಸಂಗತಿಗಳು ಸ್ಪಷ್ಟಗೊಳಿಸುತ್ತವೆ ಎಂಬುದು. ಆಯಾ ಸಂಸ್ಕೃತಿಗಳಲ್ಲಿ ಭಾಗವಹಿಸುವ ವ್ಯಕ್ತಿಗಳ ಆಲೋಚನೆ ಮತ್ತು ಭಾವನೆಗಳನ್ನು ನಿರ್ಣಯಿಸುವ ಮೂಲಭೂತ ಹಾಗೂ ವೈಶಿಷ್ಟ್ಯಪೂರ್ಣ ಸಾಂಸ್ಕೃತಿಕ ವಿನ್ಯಾಸಗಳ ವಿಚಾರದಲ್ಲಿ ಈ ಮಾತು ಬೇರೆಲ್ಲಕ್ಕಿಂತಲೂ ಹೆಚ್ಚು ಸತ್ಯವಾದುದು. ಪ್ರಸಕ್ತ ಸಮಯದಲ್ಲಿ ಸರಳ ಜನರ ಅಧ್ಯಯನದಿಂದ ಪರಂಪರಾಗತ ಸಂಪ್ರದಾಯದ ಪ್ರಭಾವದಲ್ಲಿ ವ್ಯಕ್ತಿಯ ಹವ್ಯಾಸ ಹೇಗೆ ರೂಪಗೊಳ್ಳುತ್ತದೆ ಎಂಬುದರ ಸಮಸ್ಯೆಯನ್ನು ಅತ್ಯಂತ ಸೂಕ್ತವಾಗಿ ಅರಿತುಕೊಳ್ಳಬಹುದು. ಹೀಗೆಂದ ಮಾತ್ರಕ್ಕೆ ನಾವು ಕಂಡುಹಿಡಿಯುವ ಸಂಗತಿಗಳು ಹಾಗೂ ಪ್ರಕ್ರಿಯೆಗಳು ಆದಿವಾಸಿ ನಾಗರಿಕತೆಗಳಿಗೆ ಮಾತ್ರ ಹೊಂದತಕ್ಕವು ಎಂದು ಅರ್ಥವಲ್ಲ

ನಮ್ಮ ಅರಿವಿನ ವ್ಯಾಪ್ತಿಗೆ ಬಂದಿರುವ ಅತ್ಯುನ್ನತ ಹಾಗೂ ಅತಿ ಸಂಕೀರ್ಣ ಸಮಾಜಗಳಲ್ಲೂ, ಈ ಸಾಂಸ್ಕೃತಿಕ ವಿನ್ಯಾಸಗಳು ಅಷ್ಟೇ ನಿರ್ಬಂಧಕವೂ, ಮಹತ್ವಪೂರ್ಣವೂ ಆಗಿವೆ. ಆದರೆ ವಿಚಾರವಸ್ತು ಬಲು ತೊಡಕಿನದಾಗಿದ್ದು, ನಮ್ಮ ದೃಷ್ಟಿಗೆ ಅತಿ ಸಮೀಪದಲ್ಲಿರುವ ಕಾರಣ ನಾವು ಅದನ್ನು ಯಶಸ್ವಿಯಾಗಿ ನಿರ್ವಹಿಸಲಾರೆವು ಅಷ್ಟೆ.

ನಮ್ಮ ಸಾಂಸ್ಕೃತಿಕ ಪ್ರಕ್ರಿಯೆಗಳನ್ನು ಕುರಿತು ಅಗತ್ಯವಾದ ಅರಿವನ್ನು ನಾವು ಈ ಸುತ್ತು ಬಳಸು ದಾರಿಯಲ್ಲಿ ಅತ್ಯಂತ ಕಡಿಮೆ ಶ್ರಮದಲ್ಲಿ ಪಡೆಯಬಲ್ಲೆವು. ಜೈವಿಕ ವಿಕಾಸದ ಸಂಗತಿಯನ್ನು ನಿರೂಪಿಸುವಾಗ ಮನುಷ್ಯರಿಗೂ, ಪ್ರಾಣಿವರ್ಗದಲ್ಲಿ ಅವರಿಗೆ ಅತ್ಯಂತ ಸಮೀಪವಾದ ಪ್ರಾಣಿಗಳಿಗೂ ಇದ್ದ ಐತಿಹಾಸಿಕ ನಂಟು ಬಹಳ ತೊಡಕಿನದಾಗಿದ್ದು, ಡಾರ್ವಿನ್ನನು ತನ್ನ ವಾದ ಮಂಡನೆಗೆ ಜೀರುಂಡೆಯ ದೇಹ ರಚನೆಯನ್ನು ಬಳಸಿಕೊಂಡನು. ಮನುಷ್ಯನ ಸಂಕೀರ್ಣ ದೇಹ ವ್ಯವಸ್ಥೆಯಲ್ಲಿ ಗಲಿಬಿಲಿಯಾಗಿ ತೋರಿದ ಪ್ರಕ್ರಿಯೆಯು, ಆ ಸರಳವಾದ ವಿಷಯ ವಸ್ತುವಿನಲ್ಲಿ ಸುಸಂಬದ್ಧವಾಗಿ ಗೋಚರವಾಯಿತು. ಸಾಂಸ್ಕೃತಿಕ ಯಂತ್ರ ರಚನಾ ವಿಧಾನದ ಅಧ್ಯಯನದಲ್ಲಿಯೂ ಹೀಗೆಯೇ. ಕಡಿಮೆ ತೊಡಕಿರುವ ಗುಂಪುಗಳಲ್ಲಿ ವಿಚಾರ ಮತ್ತು ವರ್ತನೆಯು ಹೇಗೆ ವ್ಯವಸ್ಥಿತವಾಗಿದೆ ಎಂಬುದನ್ನು ಅಧ್ಯಯನ ಮಾಡುವುದರಿಂದ ದೊರೆಯುವ ಅರಿವೆಲ್ಲ ನಮಗೆ ಅತ್ಯಗತ್ಯ.

ವಿವರವಾಗಿ ಚಿತ್ರಿಸಲು ನಾವು ಮೂರು ಆದಿವಾಸಿ ನಾಗರಿಕತೆಗಳನ್ನು ಆಯುಕೊಂಡಿದ್ದೇವೆ. ಹಲವಾರು ಸಂಸ್ಕೃತಿಗಳ ಉನ್ನತ ಶಿಖರಗಳನ್ನು ಮಾತ್ರ ಮುಟ್ಟುವುದಕ್ಕಿಂತ, ಕೆಲವೇ ಸಂಸ್ಕೃತಿಗಳನ್ನು ವರ್ತನೆಯ ಸುಸಂಬದ್ಧ ವ್ಯವಸ್ಥೆಗಳನ್ನಾಗಿ ಅಧ್ಯಯನ ಮಾಡುವುದು ಹೆಚ್ಚಿನ ಅರಿವನ್ನು ನೀಡಬಲ್ಲದು. ಪ್ರಪಂಚದ ವಿಸ್ತಾರ ಸಮೀಕ್ಷೆ ನಡೆಸಿ ಹುಟ್ಟು, ಸಾವು, ಪ್ರೌಢಾವಸ್ಥೆಗೆ ಬರುವುದು, ವಿವಾಹ ಮೊದಲಾದ ಸಂದರ್ಭಗಳಲ್ಲಿ ತೋರಿಬರುವ ವಿವಿಧ ಸಾಂಸ್ಕೃತಿಕ ವರ್ತನೆಗಳ ಪ್ರೇರಣೆಗಳು ಹಾಗೂ ಉದ್ದೇಶ್ಯಗಳ ಸಂಬಂಧವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ಕೆಲವು ಸಂಸ್ಕೃತಿಗಳ ಬಹುಮುಖವಾದ ಅರಿವನ್ನು ಗಳಿಸುವ ಕಡಿಮೆ ಮಹತ್ವಾಕಾಂಕ್ಷೆಯ ಕೆಲಸದಲ್ಲಿ ತೊಡಗೋಣ.

ಅಧ್ಯಾಯ 4

ನ್ಯೂಮೆಕ್ಸಿಕೋದ ಪ್ವೆಬ್ಲೋಗಳು

ನೈಋತ್ಯ ಪ್ರದೇಶದ ಪ್ವೆಬ್ಲೋ ಇಂಡಿಯನ್ನರು ಪಾಶ್ಚಿಮಾತ್ಯ ನಾಗರಿಕತೆಗೆ ಅತ್ಯಂತ ಸುಪರಿಚಿತರಾದ ಆದಿವಾಸಿ ಜನಗಳಲ್ಲಿ ಒಬ್ಬರು. ಅವರು ಅಮೆರಿಕದ ಮಧ್ಯಭಾಗದಲ್ಲಿ ವಾಸಿಸುತ್ತಿದ್ದು, ಯಾವ ಖಂಡಾಂತರ ಪ್ರಯಾಣಿಕನೂ ಅವರನ್ನು ಸುಲಭವಾಗಿ ಕಾಣಬಹುದು. ಅವರು ತಮ್ಮ ಪೂರ್ವ ಪದ್ಧತಿಗಳಿಗನುಸಾರವಾಗಿಯೇ ಬಾಳುತ್ತಿರುವರು. ಅರಿಜೋನ ಮತ್ತು ನ್ಯೂ ಮೆಕ್ಸಿಕೋಗಳ ಹೊರಗಿನ ಇಂಡಿಯನ್ ಸಮುದಾಯಗಳ ಸಂಸ್ಕೃತಿಗಳು ಶಿಥಿಲಗೊಂಡಿರುವಂತೆ ಇವರ ಸಂಸ್ಕೃತಿ ಶಿಥಿಲಗೊಂಡಿಲ್ಲ. ಅವರು ತಮ್ಮ ಶಿಲಾಗ್ರಾಮಗಳಲ್ಲಿ ತಿಂಗಳು ತಿಂಗಳೂ, ವರ್ಷವರ್ಷವೂ ತಮ್ಮ ದೇವತೆಗಳ ಹಳೆಯ ನೃತ್ಯಗಳನ್ನು ನರ್ತಿಸುತ್ತಾರೆ. ಅವರ ಜೀವನ ಬಹುಮಟ್ಟಿಗೆ ಹಳೆಯ ಜಾಡನ್ನೇ ಹಿಡಿದಿದೆ. ಅವರು ನಮ್ಮ ನಾಗರಿಕತೆಯಿಂದ ಎತ್ತಿಕೊಂಡಿರುವ ಅಂಶಗಳನ್ನು ಪುನರ್ರೂಪಿಸಿಕೊಂಡು, ತಮ್ಮ ಮನೋಭಾವಕ್ಕೆ ಅಂಕಿತಗೊಳಿಸಿಕೊಂಡಿದ್ದಾರೆ.

ಅವರ ಇತಿಹಾಸ ರೋಮಾಂಚಕಾರಿಯಾದುದು. ಅವರು ಈಗಲೂ ನೆಲೆಸಿರುವ ಅಮೇರಿಕದ ಭಾಗದ ಉದ್ದಗಲಕ್ಕೂ ಅವರ ಸಾಂಸ್ಕೃತಿಕ ಪೂರ್ವಜರ ನಿವಾಸಗಳನ್ನೂ, ಶಿಖರ ಗೃಹಗಳನ್ನೂ, ಪ್ವೆಬ್ಲೋಗಳ ಸುವರ್ಣಯುಗದಲ್ಲಿ ನಿರ್ಮಾಣವಾಗಿದ್ದ ನಿಯೋಜಿತ ಮಹಾನ್ ಕಣಿವೆ ನಗರಗಳನ್ನೂ ಕಾಣಬಹುದು. ಅವರ ನಗರಗಳು ನಂಬಲಸಾಧ್ಯವಾದಷ್ಟು ಸಂಖ್ಯೆಯಲ್ಲಿವೆ. ಅವು ಹನ್ನೆರಡು ಹದಿಮೂರನೆಯ ಶತಮಾನಗಳಲ್ಲಿ ನಿರ್ಮಾಣವಾದಂತಹವು. ಆದರೆ ಅವರ ಇತಿಹಾಸ ಅದಕ್ಕಿಂತಲೂ ಹಿಂದೆ ಸರಿದು ಪ್ರತಿಯೊಂದು ಮನೆಗೂ ಸೇರಿದಂತೆ ನೆಲದೊಳಗೆ ನಿರ್ಮಾಣವಾದ ಪೂಜಾಗೃಹವಿದ್ದ ಒಂದು ಕೋಣೆಯ ಕಲ್ಲುಮನೆಗಳ ನಿವಾಸದ ಸರಳ ಆರಂಭಿಕ ಕಾಲದ ತನಕ ಹೋಗುತ್ತದೆ. ಈ ನೈಋತ್ಯದ ಮರಳ್ಗಾಡನ್ನು ತಮ್ಮ ನಿವಾಸಸ್ಥಾನವನ್ನಾಗಿ ಆಯ್ದುಕೊಂಡ

ವರಲ್ಲಿ ಈ ಆದಿಕಾಲದ ಪ್ವೆಬ್ಲೋಗಳೇ ಮೊದಲಿಗರಲ್ಲ. ಅವರಿಗಿಂತ ಮೊದಲು ಬುಟ್ಟಿ ಹೆಣೆಯುವ ಜನ ಅಲ್ಲಿ ನೆಲೆಸಿದ್ದರು. (ಅದೆಷ್ಟು ಕಾಲದ ಹಿಂದೆ ಅವರು ಅಲ್ಲಿ ನೆಲೆಸಿದ್ದರು ಎಂದು ಅಂದಾಜು ಮಾಡುವುದು ಅಸಾಧ್ಯ.) ಆ ಜನರನ್ನು ಪ್ರಾಯಶಃ ಆದಿ ಪ್ವೆಬ್ಲೋ ಜನರು ನಿರ್ನಾಮಗೊಳಿಸಿರಬೇಕು.

ಪ್ವೆಬ್ಲೋ ಸಂಸ್ಕೃತಿಯು ಈ ಬೆಂಗಾಡು ಪ್ರಸ್ಥಭೂಮಿಯಲ್ಲಿ ನೆಲೆಗೊಂಡ ನಂತರ ಉಚ್ಛ್ರಾಯ ಸ್ಥಿತಿಗೆ ಬಂದಿತು. ಬಿಲ್ಲು ಬಾಣ, ಶಿಲಾಶಿಲ್ಪದ ಜ್ಞಾನ, ಕೃಷಿ ವೈವಿಧ್ಯತೆಯ ಅರಿವು ಆ ಸಂಸ್ಕೃತಿಗೆ ಆಗಾಗಲೇ ಹೊಂದಿಬಂದಿತ್ತು. ಉತ್ತರದಿಂದ ಹರಿದು ಬರುವ ಕೊಲರೆಡೋ ನದಿಗೆ ಸೇರುವ ಸ್ಯಾನ್ ಹ್ವಾನ್ ನದಿಯ ಬಹುತೇಕ ನಿರ್ಜಲವಾದ ಈ ಬೆಂಗಾಡು ಕಣಿವೆಯನ್ನು ಈ ಸಂಸ್ಕೃತಿಯು ತನ್ನ ಅಭಿವೃದ್ಧಿಯ ನೆಲೆಯನ್ನಾಗಿ ಏಕೆ ಆಯ್ಕೆ ಮಾಡಿತು ಎಂಬುದನ್ನು ವಿವರಿಸುವ ಗೋಜಿಗೆ ಯಾರೂ ಹೋಗಿಲ್ಲ. ಈಗ ಅಮೇರಿಕದ ಸಂಯುಕ್ತ ಸಂಸ್ಥಾನಗಳು ಎಂದು ಹೆಸರಾಗಿರುವ ಭೂಭಾಗದಲ್ಲಿನ ಅತ್ಯಂತ ಅನಪೇಕ್ಷಣೀಯ ಪ್ರದೇಶಗಳಲ್ಲಿ ಇದು ಒಂದು. ಆದರೆ ಇಲ್ಲಿಯೇ ಮೆಕ್ಸಿಕೋಕ್ಕೆ ಉತ್ತರಕ್ಕಿರುವ ಅತ್ಯಂತ ಮಹಾನ್ ಇಂಡಿಯನ್ ನಗರಗಳು ತಲೆಯೆತ್ತಿದ್ದುವು. ಒಂದೇ ನಾಗರಿಕತೆಯಿಂದ, ಒಂದೇ ಕಾಲಾವಧಿಯಲ್ಲಿ ನಿರ್ಮಿತವಾದಂತೆ ತೋರಿಬರುವ ಈ ನಗರಗಳಲ್ಲಿ ಎರಡು ವಿಧ ಒಂದು ಶಿಖರಗೃಹಗಳ ದುರ್ಗಗಳು, ಇನ್ನೊಂದು ಅರ್ಧವೃತ್ತಾಕಾರದ ಕಣಿವೆ ಕೋಟೆಗಳು, ಪ್ರಪಾತದ ಮುಖಭಾಗದಲ್ಲಿಯೇ ಕೊರೆದ ಅಥವಾ ಕಣಿವೆಯ ನೆಲದಿಂದ ನೂರಾರು ಅಡಿ ಎತ್ತರಕ್ಕೆ ಎದ್ದ ಬಂಡೆಗಳ ಉಬ್ಬು ಸಾಲುಗಳಲ್ಲಿ ನಿರ್ಮಿಸಿದ ಈ ಶಿಖರಗೃಹಗಳು, ಮಾನವ ನಿವಾಸ ಸ್ಥಾನಗಳಲ್ಲಿ ಅತ್ಯಂತ ರೋಮಾಂಚಕಾರಿಯಾದುವುಗಳ ಸಾಲಿಗೆ ಸೇರುವಂತಹವು. ಬೇಸಾಯದ ಜಮೀನುಗಳಿಂದ, ನೀರಿನ ವಸತಿಗಳಿಂದ ಬಹುದೂರದಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳುವಂತೆ ಮಾಡಿದ ಸನ್ನಿವೇಶಗಳು ಎಂತಹುವೋ ಎಂಬುದನ್ನು ನಾವು ಊಹಿಸಲಾರೆವು. ಇವು ಕೋಟೆ ಕೊತ್ತಲಗಳಾಗಿ ನಿರ್ಮಿತವಾಗಿದ್ದರೆ ಆ ಸನ್ನಿವೇಶಗಳು ನಿಜಕ್ಕೂ ತೀವ್ರವಾದುವುಗಳೇ ಆಗಿರಬೇಕು. ಅದೇನೇ ಇರಲಿ ಈಗ ಉಳಿದಿರುವ ಭಗ್ನಾವಶೇಷಗಳಲ್ಲಿ ಹಲವು, ಅವುಗಳ ನಿರ್ಮಾಣ ಕೌಶಲ ಹಾಗೂ ಸೌಂದರ್ಯದಿಂದ ನಮ್ಮ ಮನವನ್ನು ಸೂರೆಗೊಳ್ಳುತ್ತವೆ. ಅದನ್ನು ನಿರ್ಮಿಸಿರುವ ಕಲ್ಲಿನ ಉಬ್ಬು ಸಾಲು ಎಷ್ಟೇ ಕಠಿಣವಾಗಿರಲಿ ಈ ಪ್ವೆಬ್ಲೋಗಳು 'ಕಿವಾ' ಎಂಬ ಭೂಗರ್ಭ ಪೂಜಾಗೃಹವನ್ನು ಕಡ್ಡಾಯವಾಗಿ ನಿರ್ಮಿಸಿರುತ್ತಾರೆ. ಇದರಲ್ಲಿ ಒಂದು ಕಲ್ಲು ಒಬ್ಬ ಮನುಷ್ಯ ನಿಲ್ಲುವಷ್ಟು ಅಗಲದೊಂದಿಗೆ ಎತ್ತರವಾಗಿರುತ್ತದೆ ಮತ್ತು ಕೆಳಗೆ ಸಣ್ಣ ಸಭೆ ಸೇರುವಷ್ಟು ವಿಶಾಲವಾಗಿ, ಕಲ್ಲಿನಲ್ಲಿ ಕೊರೆದು ಸ್ಥಳ ಮಾಡಿರುತ್ತಾರೆ. ಕಂಡಿಯೊಂದರಿಂದ ಇಳಿಬಿಟ್ಟಿರುವ ಏಣಿಯ ಮೂಲಕ ಇದಕ್ಕೆ ಪ್ರವೇಶ.

ಇನ್ನೊಂದು ರೀತಿಯ ವಾಸಸ್ಥಾನವು ಆಧುನಿಕ ನಿಯೋಜಿತ ನಗರದ ಪಡಿಯಚ್ಚಿ

ನಂತಿದೆ. ಹೊರಾವರಣದಲ್ಲಿ ಕೋಟೆಯಂತೆ ಮೂರು ಅಂತಸ್ತು ಎತ್ತರದ ಅರ್ಧವೃತ್ತಾಕೃತ್ತಿಯ ಗೋಡೆ, ಅದರ ಕೊನೆಯ ಅಂತಸ್ತು ಗಾರೆಗಚ್ಚಿನ ಕೆಲಸದಿಂದ ಕೂಡಿದ್ದು ಭೂಗರ್ಭದಲ್ಲಿ ಕಟ್ಟಿದ ಕಿವಾಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಈ ಮಾದರಿಯ ಕೆಲವು ಮಹಾನ್ ಕಣಿವೆ ನಗರಗಳಲ್ಲಿ ಸಣ್ಣ ಕಿವಾಗಳ ಜೊತೆಗೆ ಭೂಗರ್ಭದಲ್ಲಿ ಹುದುಗಿಸಿದ ಸುಂದರ ಹಾಗೂ ಕುಶಲ ಗಾರೆ ಕೆಲಸದಿಂದ ನಿರ್ಮಿಸಿದ ಒಂದು ದೊಡ್ಡ ದೇವಾಲಯವೂ ಇದೆ.

ಸ್ಪ್ಯಾನಿಷ್ ಸಾಹಸಿಗಳು ಬಂಗಾರದ ನಗರಗಳನ್ನು ಹುಡುಕುತ್ತ ಬರುವುದಕ್ಕೆ ಮುಂಚೆಯೇ ಪ್ವೆಬ್ಲೋ ನಾಗರಿಕತೆ ತನ್ನ ಉನ್ನತ ಶಿಖರವನ್ನು ಮುಟ್ಟಿ, ಇಳಿಮುಖವಾಗಿತ್ತು. ಇನ್ನೂ ಉತ್ತರದ ನವಾಜೋ—ಅಪಾಚೆ ಜನಗಳು ಈ ಪುರಾತನ ಜನರ ನಗರಗಳ ನೀರು ಸರಬರಾಜು ವ್ಯವಸ್ಥೆಯನ್ನು ಕತ್ತರಿಸಿ ಅವರನ್ನು ಸೋಲಿಸಿರಬೇಕೆಂದು ತೋರುತ್ತದೆ. ಸ್ಪ್ಯಾನಿಷ್‌ರು ಬರುವ ವೇಳೆಗಾಗಲೇ ಪ್ವೆಬ್ಲೋ ಜನ ತಮ್ಮ ಶಿಖರ ಗೃಹಗಳನ್ನೂ, ಅರ್ಧ ವೃತ್ತಾಕೃತಿಯ ನಗರಗಳನ್ನೂ ತ್ಯಜಿಸಿ, ಈಗ ಅವರು ನೆಲೆಸಿರುವ ರಯೋಗ್ರಾಂಡ್ ನದಿ ತೀರದ ಗ್ರಾಮಗಳಲ್ಲಿ ಸ್ಥಿರಗೊಂಡಿದ್ದರು. ಪಶ್ಚಿಮದ ಕಡೆಗೆ ಆರೋಮಾ, ಜುನಿ, ಹೋಪಿ ಮೊದಲಾದ ಮಹಾನ್ ಪಶ್ಚಿಮ ಪ್ವೆಬ್ಲೋಗಳು ನೆಲೆಯಾಗಿದ್ದರು.

ಪ್ವೆಬ್ಲೋ ಸಂಸ್ಕೃತಿಯ ಹಿಂದೆ ದೀರ್ಘಕಾಲದ ಏಕಸರಣಿಯ ಇತಿಹಾಸವಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಉತ್ತರ ಅಮೆರಿಕದ ಇತರ ಜನಗಳಿಗಿಂತ ಈ ಜನರ ಸಾಂಸ್ಕೃತಿಕ ಜೀವನ ವಿಭಿನ್ನವಾಗಿರುವುದರಿಂದ ಈ ವಿಷಯವನ್ನು ನಾವು ಗಮನದಲ್ಲಿಟ್ಟುಕೊಳ್ಳುವುದು ಅತ್ಯವಶ್ಯಕ. ವಿಷಾದದ ಸಂಗತಿಯೆಂದರೆ ಪ್ರಾಚ್ಯಶಾಸ್ತ್ರವು ಇನ್ನೂ ಹಿಂದೆ ಹೋಗಿ, ಅಮೆರಿಕದ ಈ ಒಂದು ಸಣ್ಣ ಪ್ರದೇಶದಲ್ಲಿ, ಒಂದು ಸಂಸ್ಕೃತಿಯು ತನ್ನನ್ನು ಆವರಿಸಿಕೊಂಡಿದ್ದ ಇತರ ಎಲ್ಲ ಸಂಸ್ಕೃತಿಗಳಿಂದ ಬೇರ್ಪಟ್ಟು, ಬಾಳಿನತ್ತ ಸುಸಂಗತವೂ, ವಿಶಿಷ್ಟವೂ ಆದ ಒಂದು ಮನೋಭಾವವನ್ನು ಸದಾ ತಳೆದು, ಹೇಗೆ ಅದನ್ನು ತೀವ್ರರೂಪದಲ್ಲಿ ವ್ಯಕ್ತಪಡಿಸುವಂತಾಯಿತು ಎಂಬುದನ್ನು ತಿಳಿಸಲು ಅಶಕ್ತವಾಗಿರುವುದು.

ಪ್ವೆಬ್ಲೋ ಜನರ ಸಂಪ್ರದಾಯಗಳು, ಜೀವನ ವಿಧಾನಗಳ ಪರಿಚಯವಿಲ್ಲದೆ ಸಂಸ್ಕೃತಿಯ ಪ್ವೆಬ್ಲೋ ವಿನ್ಯಾಸವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಅವರ ಸಾಂಸ್ಕೃತಿಕ ಗುರಿಗಳನ್ನು ಕುರಿತು ಚರ್ಚಿಸುವುದಕ್ಕೆ ತೊಡಗುವ ಮೊದಲು ಅವರ ಸಮಾಜದ ಚೌಕಟ್ಟನ್ನು ಸಂಕ್ಷೇಪವಾಗಿ ಪರಿಚಯ ಮಾಡಿಕೊಳ್ಳುವುದು ಅವಶ್ಯಕ.

ಜುನಿ ಜನ ಉತ್ಸವಪ್ರಿಯರು. ಅವರು ಶಾಂತತೆ ಹಾಗೂ ನಿರಾಕ್ರಮಣಗಳನ್ನು ಎಲ್ಲ ಗುಣಗಳಿಗಿಂತ ಮಿಗಿಲಾಗಿ ಗೌರವಿಸುತ್ತಾರೆ. ಶ್ರೀಮಂತವೂ, ಸಂಕೀರ್ಣವೂ ಆದ

ಉತ್ಸವ ಜೀವನದಲ್ಲಿ ಅವರಿಗೆ ಆಸಕ್ತಿ. ಅವರಲ್ಲಿ ಮುಖವಾಡ ತೊಟ್ಟ ದೇವತೆಗಳು, ರೋಗ ಚಿಕಿತ್ಸೆ, ಸೂರ್ಯ, ಪವಿತ್ರ ಪೂಜನೀಯವಸ್ತುಗಳು, ಯುದ್ಧ, ಮೃತರಾದವರು ಹೀಗೆ ಹಲವು ಪಂಥಗಳಿವೆ,ಪಂಥಗಳಲ್ಲಿ ಪ್ರತಿಯೊಂದೂ ತನ್ನದೇ ಆದ ಪೌರೋಹಿತ್ಯದ ಅಧಿಕಾರಿಗಳನ್ನೂ ಪಂಚಾಂಗ ಬದ್ಧವಾದ ಸಮಾರಂಭಗಳನ್ನು ಒಳಗೊಂಡ ವಿಧಿವತ್ತಾಗಿ ಸ್ಥಾಪಿತವಾದ ಕೂಟ. ಅವರ ಶ್ರದ್ಧೆಯನ್ನು ಆಕರ್ಷಿಸುವಲ್ಲಿ ಸಂಸ್ಕಾರಕ್ಕೆ ಸಾಟಿಯಾಗಬಲ್ಲಂತಹ ಜೀವನದ ಕ್ಷೇತ್ರ ಬೇರಾವುದೂ ಇಲ್ಲ. ಪಶ್ಚಿಮ ಪ್ವೆಬ್ಲೋಗಳಲ್ಲಿ ಬಹಳಷ್ಟು ವಯಸ್ಕ ಪುರುಷರು ಪ್ರಜ್ಞಾವಸ್ಥೆಯ ಬಹುಪಾಲನ್ನು ಸಂಸ್ಕಾರಗಳಿಗೇ ಮೀಸಲಿಟ್ಟಿರುತ್ತಾರೆ.

ಅವರಲ್ಲಿ ಕಂಡು ಬರುವ ಪದಶುದ್ಧವಾದ ಮಂತ್ರಗಳ ಕಂಠಪಾಠ, ಪಂಚಾಂಗ ನಿರ್ದೇಶಿತವಾಗಿ ಎಲ್ಲ ವಿವಿಧ ಪಂಥ ಹಾಗೂ ಕಾರ್ಯನಿರ್ವಾಹಕ ಮಂಡಳಿಗಳನ್ನು ನಿರಂತರ ವಿಹಿತಾಚರಣೆಗಳಿಂದ ಬೆಸೆಯುವ ಉತ್ಸವಗಳ ಆಚರಣೆ ಯಾರಿಗಾದರೂ ಅತ್ಯಾಶ್ಚರ್ಯ ಉಂಟುಮಾಡುತ್ತದೆ.

ಈ ಉತ್ಸವ ಜೀವನ ಅವರ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ಅಲ್ಲದೆ ಅವರು ಇದರಲ್ಲಿ ಅತೀವ ಗಮನವನ್ನು ಇರಿಸುತ್ತಾರೆ. ಈ ಸಂಸ್ಕಾರಗಳ ಜವಾಬ್ದಾರಿ ಹೊತ್ತು ಅದರಲ್ಲಿ ಭಾಗವಹಿಸುವವರಷ್ಟೇ ಅಲ್ಲದೆ ಇದಕ್ಕೆ ಸಂಬಂಧವಿಲ್ಲದ ಗ್ರಾಮದ ಗಂಡಸರೂ ಹಾಗೂ ಹೆಂಗಸರೂ ಇದರ ಬಗ್ಗೆ ಯಾವಾಗಲೂ ಮಾತನಾಡುತ್ತಿರುತ್ತಾರೆ. ಉತ್ಸವಗಳು ಜರುಗುವಾಗ ಅವರುಗಳು ದಿನವೆಲ್ಲ ನಿಂತು ನೋಡುತ್ತಾರೆ. ಅವು ನಡೆಯುತ್ತಲಿರುವಾಗ ಯಾವನೊಬ್ಬ ಪುರೋಹಿತ ಅಸ್ವಸ್ಥನಾದರೆ, ಇಲ್ಲವೆ ಅವನು ತಪಸ್ಸಾಧನೆಗಾಗಿ ಏಕಾಂತವಾಸದಲ್ಲಿರುವಾಗ ಮಳೆ ಬಾರದ ಹೋದರೆ ಜನರೆಲ್ಲ ಅವನು ತಪ್ಪಿತಸ್ಥನೆಂದು ಗುಲ್ಲೆಬ್ಬಿಸುತ್ತಾರೆ. ಮುಖವಾಡದ ದೇವತೆಗಳ ಪುರೋಹಿತ ಯಾವುದಾದರೂ ದೇವತೆಗೆ ಅಪಚಾರ ಮಾಡಿರಬೇಕು; ಇಲ್ಲವೇ ಏಕಾಂತದಲ್ಲಿ ಇರಬೇಕಾದ ಅವಧಿಯಲ್ಲಿ ತನ್ನ ಹೆಂಡತಿಯನ್ನು ನೋಡಬಯಸಿ ಮನೆಗೆ ಹೋಗಿರಬೇಕು ಇವೇ ಗ್ರಾಮಸ್ಥರ ಮಾತಿನ ವಿಷಯವಸ್ತುಗಳು. ವೇಷ ಕಟ್ಟಿದವನು ತನ್ನ ಮುಖವಾಡಕ್ಕೆ ಹೊಸದೊಂದು ಗರಿಯನ್ನು ಸೇರಿಸಿದ್ದರೂ ಅದನ್ನೇ ಕುರಿತು ಜನರು ಮಾತನಾಡುತ್ತಿರುತ್ತಾರೆ. ಆಗ ಕುರಿ, ತೋಟ, ಮದುವೆ, ವಿವಾಹವಿಚ್ಛೇದ ಈ ವಿಷಯಗಳೆಲ್ಲ ಗೌಣ. ವಿವರಗಳನ್ನು ಕುರಿತ ಅವರ ಈ ಬಗೆಯ ಗೀಳು ಸಕಾರಣವಾದುದು. ಜುನಿ ಧರ್ಮಾಚರಣೆಗಳು ತಮ್ಮಷ್ಟಕ್ಕೆ ತಾವೇ ದೈವಿಕವಾದ ಶಕ್ತಿಯುಳ್ಳಂತಹವು ಎಂಬುದು ಅವರ ನಂಬಿಕೆ. ಉತ್ಸವಾಚರಣೆಯ ಪ್ರತಿ ಹಂತದಲ್ಲೂ ಕ್ರಮವು ಸರಿಯಾಗಿದ್ದು, ಸೂಕ್ಷ್ಮ ವಿವರಗಳಲ್ಲಿಯೂ ಮುಖವಾಡದ ದೇವತೆಯ ಅಲಂಕಾರ ಸಂಪ್ರದಾಯಬದ್ಧವಾಗಿದ್ದು, ನೈವೇದ್ಯಗಳು ಕುಂದಿಲ್ಲದವಾಗಿದ್ದು, ಗಂಟೆಗಟ್ಟಲೆಯ ಪ್ರಾರ್ಥನೆಗಳ ಪಠಣ ಪದಶುದ್ಧವಾಗಿದ್ದರೆ ಮಾನವನ ಕೋರಿಕೆಯ ಪ್ರಕಾರವಾಗಿ ಪರಿಣಾಮಗಳು ತಾವೇ

ಕಾವಾಗಿ ಫಲಿಸುತ್ತವೆ. ಸದಾ ಅವರು ನಾಲಿಗೆಯ ತುದಿಯಲ್ಲಿ ಮಂತ್ರಗಳು ಹೇಗೆ ಉಚ್ಚರಿಸಬೇಕು ಎಂಬುದನ್ನು ತಿಳಿದಿರಬೇಕಷ್ಟೇ. ಅವರ ಮತಾಚರಣೆಯು ನಂಬಿಕೆಗಳಿಗೆ ಅನುಗುಣವಾಗಿ ಮುಖವಾಡಕ್ಕೆ ಜೋಡಿಸಿರುವ ಹದ್ದಿನ ಗರಿಗಳಲ್ಲಿ ಒಂದು ಗರಿ ಭುಜದ ಮೇಲಿಂದ ತೆಗೆದುದೋ ಇಲ್ಲವೇ ಎದೆಯ ಮೇಲಿನಿಂದ ತೆಗೆದುದೋ ಎಂಬುದು ಬಹು ಮುಖ್ಯವಾದ ವಿಚಾರ. ಪ್ರತಿಯೊಂದು ವಿವರಕ್ಕೂ ಮಾಂತ್ರಿಕವಾದ ಕಾರ್ಯಕಾರಿತ್ವ ಇದೆ.

ಜುನಿ ಜನಕ್ಕೆ ಅನುಕರಣೀಯ ಮಾಟದ ಮೇಲೆ ಅಪಾರ ನಂಬಿಕೆ. ಮಳೆಯನ್ನು ಕೋರಿ ಪುರೋಹಿತರು ಏಕಾಂತವಾಸದಲ್ಲಿದ್ದಾಗ ಗುಡುಗನ್ನು ತರಿಸಲೆಂದು ಅಲ್ಲಿನ ನೆಲದ ಮೇಲೆ ಗುಂಡುಕಲ್ಲುಗಳನ್ನು ಉರುಳಾಡಿಸುತ್ತಾರೆ. ಮಳೆ ಬರಲೆಂದು ನೀರು ಚಿಮುಕಿಸುತ್ತಾರೆ; ಕೆರೆಕುಂಟೆಗಳು ತುಂಬಲೆಂದು ಪೂಜಾಪೀಠದ ಮೇಲೆ ನೀರು ತುಂಬಿದ ಬೋಗುಣಿಯನ್ನು ಇಡುತ್ತಾರೆ; ಆಕಾಶದಲ್ಲಿ ಮೋಡಗಳು ಕವಿಯಲೆಂದು ಸ್ಥಳೀಯ ಸಸ್ಯವೊಂದರಿಂದ ನೊರೆ ಬರಿಸಿ ಊದುತ್ತಾರೆ. ದೇವತೆಗಳು ತಮ್ಮ ಮಂಜುಮಂಜಾದ ಉಸಿರನ್ನು ತಡೆಯದಿರಲೆಂದು ಹೊಗೆ ಸೊಪ್ಪಿನ ಹೊಗೆ ಎಬ್ಬಿಸುತ್ತಾರೆ. ಮುಖವಾಡದ ದೇವತೆಗಳ ಕುಣಿತದಲ್ಲಿ ಮನುಷ್ಯರು ದೇವತೆಗಳ 'ಮಾಂಸಖಂಡ'ಗಳಿಂದ ಅಂದರೆ ಅವರ ಬಣ್ಣ ಮತ್ತು ಮುಖವಾಡಗಳಿಂದ ಸಿಂಗಾರಗೊಳ್ಳುತ್ತಾರೆ. ಇದರಿಂದ ದೇವತೆಗಳು ಹರಸಲೇಬೇಕಾದ ನಿರ್ಬಂಧಕ್ಕೆ ಒಳಗಾಗುತ್ತಾರೆ. ಮಾಟದ ಪ್ರಪಂಚದಿಂದ ಹೆಚ್ಚು ಕಡಿಮೆ ದೂರವಾದ ಆಚರಣೆಗಳಲ್ಲಿಯೂ ಕೂಡ ಜುನಿ ಜನರ ಆಲೋಚನೆ ಇದೇ ರೀತಿಯ ಯಾಂತ್ರಿಕ ಕಾರ್ಯಕಾರಿತ್ವದಲ್ಲಿಯೇ ನಾಟಿದೆ. ಮತಾಚರಣೆಯಲ್ಲಿ ಪಾತ್ರವಹಿಸಬೇಕಾದ ಸಂದರ್ಭಗಳಲ್ಲಿ ಪ್ರತಿಯೊಬ್ಬ ಪುರೋಹಿತನೂ, ಅಧಿಕಾರಿಯೂ ಕೋಪದಿಂದ ದೂರವಿರಬೇಕಾದುದು ಅವನ ಹೊಣೆಗಾರಿಕೆಗಳಲ್ಲೊಂದು. ಇದರ ಇಂಗಿತ ಋಜು ಮಾರ್ಗದ ದೇವತೆಯೊಂದಿಗೆ ಸಂಪರ್ಕ ಬೆಳೆಸಲು ಶುದ್ಧವಾದ ಹೃದಯದಿಂದ ಪ್ರಾರ್ಥಿಸಬೇಕು ಎಂಬುದಲ್ಲ; ಕೋಪವಿಲ್ಲದಿರುವುದು ದೈವಿಕ ಭಾವಗಳಲ್ಲಿ ಮನನಾಟಿದೆಯೆಂಬುದರ ಸಂಕೇತ. ಈ ಮನೋಭಾವವು ದೇವತೆಗಳನ್ನು ಬಲಾತ್ಕಾರಕ್ಕೆ ಗುರಿಮಾಡಿ, ಆ ವ್ಯವಹಾರದಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುವಂತೆ ಮಾಡುತ್ತದೆ. ಕೋಪವಿಲ್ಲದಿರುವಿಕೆಗೂ ಒಂದು ಮಾಂತ್ರಿಕ ಕಾರ್ಯಕಾರಿತ್ವ ಇದೆ.

ಅವರ ಪ್ರಾರ್ಥನೆಗಳು ಸೂತ್ರದೋಪಾದಿಯಲ್ಲಿರುತ್ತವೆ. ಅವುಗಳ ಪರಿಣಾಮ ಅವರ ಕರಣ ಶ್ರದ್ಧೆಯಲ್ಲಿರುತ್ತದೆ. ಜುನಿಗಳಲ್ಲಿ ಬಳಕೆಯಲ್ಲಿರುವ ಈ ತೆರನಾದ ವಿವಿಧ ಸಾಂಪ್ರದಾಯಿಕ ಪ್ರಾರ್ಥನಾ ರೂಪಗಳು ಅತಿ ದೊಡ್ಡ ಮೊತ್ತದಲ್ಲಿ ಕಂಡು ಬರುತ್ತವೆ. ಸಾಧಾರಣವಾಗಿ ಅವು ಸಂಸ್ಕಾರ ಬದ್ಧ ಭಾಷೆಯಲ್ಲಿದ್ದು, ಪರಿಸ್ಥಿತಿ ಅಥವಾ ಉತ್ಸವ ಸಂಬಂಧೀ ಹೊಣೆಗಾರಿಕೆಯನ್ನು ಕ್ರಮಾಕ್ರಮವಾಗಿ ವಿವರಿಸುತ್ತ ಅಂದಿನ ಪಾತ್ರದಲ್ಲಿ ಕೊನೆಗೊಳ್ಳುತ್ತವೆ. ಪ್ರಾರ್ಥನೆಗಳಲ್ಲಿ ಪಾತ್ರಧಾರಿಯ ಅಂಗ, ಮುಖ,

ಪ್ರಾರ್ಥನಾದಂಡಗಳಿಗೆ ವಿಲ್ಲೋ ರೆಂಬೆಗಳನ್ನು ಕಟ್ಟುವುದು, ಹಕ್ಕಿಗಳ ಗರಿಗಳನ್ನು ನೂಲು ದಾರದಿಂದ ಜೋಡಿಸಿ ಕಟ್ಟುವುದು, ದಂಡಗಳಿಗೆ ಬಣ್ಣ ಬಳಿಯುವುದು, ಹೀಗೆ ಸಿದ್ಧಗೊಳಿಸಿದ ಗರಿ ದಂಡಗಳನ್ನು ದೇವತೆಗಳಿಗೆ ಅರ್ಪಿಸುವುದು, ಪವಿತ್ರ ಚಿಲುಮೆಗಳಿಗೆ ಯಾತ್ರೆ ಹೋಗುವುದು, ತಪಸ್ಸಾಧನೆಗಾಗಿ ಏಕಾಂತ ವಾಸಮಾಡುವುದು——ಇವನ್ನೆಲ್ಲ ಪ್ರಾರ್ಥನಕಾರರು ನಿರ್ವಹಿಸುತ್ತಾರೆ. ಸಂಸ್ಕಾರವು ವಿಧಿವತ್ತಾಗಿರುವುದರ ಜೊತೆಗೆ ಪಠಣವೂ ಪರಿಶುದ್ಧವಾಗಿರಬೇಕು.

ನದಿಯ ಹಾದಿಗಳಲ್ಲಿ ಅರಸುವೆನು ನಾನು ;
ಗಂಡು ವಿಲ್ಲೋ ;
ಹೆಣ್ಣು ವಿಲ್ಲೋ ;
ಒಂದು ಜನ್ಮದಲ್ಲಿ ನನ್ನ ಪಿತೃಗಳು ;
ಇವುಗಳ ನೇರ ಎಳೆಯ ರೆಂಬೆಗಳನ್ನು ನಾಲ್ಕು ಬಾರಿ ಕೊಯ್ಯುವೆ ;
ಹೊರೆಯ ಮಾಡಿ ತರುವೆ
ನನ್ನ ಮನೆಗೆ ;
ನನ್ನ ಬೆಚ್ಚನೆಯ ಕೈಗಳಿಂದ
ಅವುಗಳನ್ನು ಹಿಡಿದು ನಾನು
ನನ್ನ ಪ್ರಾರ್ಥನಾ ದಂಡಗಳಿಗಿತ್ತೆ ಮಾನವ ರೂಪವನು ;
ನನ್ನ ತಾತನಾಗಿದ್ದ
ಗಂಡು ಟರ್ಕಿಯ
ಮೇಘ ಪಟ್ಟೆಯ ಬಾಲದಿಂದ
ಮೇಘ ಪಟ್ಟೆಯ ರೆಕ್ಕೆಗಳಿಂದ
ಹದ್ದಿನ ತೆಳುವಾದ ಮೇಘ ಬಾಲದಿಂದ
ಎಲ್ಲ ಬೇಸಿಗೆ ಹಕ್ಕಿಗಳ
ಮೇಘ ಬಾಲಗಳನೆಲ್ಲ ಕೂಡಿಸಿ
ನಾಲ್ಕು ಬಾರಿ ನನ್ನ ಪ್ರಾರ್ಥನಾ ದಂಡಗಳಿಗಿತ್ತೆ ಮಾನವ ರೂಪವನು.
ನನ್ನ ತಾಯಿ ಹತ್ತಿಯ ಹೆಂಗಸು
ಅವಳ ಮಾಂಸ ಹತ್ತಿಯ ಎಳೆ
ಆ ಹತ್ತಿಯ ಎಳೆ
ಅದರಿಂದಲೇ ನಾಲ್ಕು ಬಾರಿ ಸುತ್ತಿ ಅವರ ದೇಹಗಳಿಗೆ ಜೋಡಿಸಿ
ನನ್ನ ಪ್ರಾರ್ಥನಾ ದಂಡಗಳಿಗಿತ್ತೆ ಮಾನವ ರೂಪವನು ;
ನನ್ನ ತಾಯಿಯಾಗಿದ್ದ
ಕರಿಯ ಬಣ್ಣದ ಹೆಂಗಸಿನ ಮಾಂಸದಿಂದ

ನಾಲ್ಕು ಬಾರಿ ಬಳಿದು
ನನ್ನ ಪ್ರಾರ್ಥನಾ ದಂಡಗಳಿಗಿತ್ತೆ ಮಾನವ ರೂಪವನು.

ಜೂನಿಗಳಲ್ಲಿ ಪ್ರಾರ್ಥನೆಯು ಮಾನವನ ಹೃದಯಭಾವದ ಧಾರೆಯಾಗಿರುವುದಿಲ್ಲ. ಸ್ವಲ್ಪ ಬದಲಾವಣೆ ಮಾಡಿಕೊಳ್ಳುವ ಅವಕಾಶವಿರುವ ಸಾಧಾರಣ ಪ್ರಾರ್ಥನೆಗಳು ಕೆಲವಿವೆ. ಅವನ್ನು ಸಹ ಸ್ವಲ್ಪ ಹಿಗ್ಗಿಸಬಹುದು ಇಲ್ಲವೇ ಕುಗ್ಗಿಸಬಹುದು ಅಷ್ಟೆ. ಪ್ರಾರ್ಥನೆಗಳು ತಮ್ಮ ಭಾವೋನ್ಮಾದದಿಂದ ಗಮನ ಸೆಳೆಯಲಾರವು. ಸರ್ವದಾ ಅವು ಶಾಂತ; ರೂಪದಲ್ಲಿ ಔಪಚಾರಿಕ; ವ್ಯವಸ್ಥಿತವಾದ ಜೀವನ, ಸಂತೋಷದ ದಿನ ಹಾಗೂ ಹಿಂಸೆಯಿಂದ ರಕ್ಷಣೆಯನ್ನು ಒದಗಿಸುತ್ತವೆ. ಯುದ್ಧ ಪಂಥದ ಪುರೋಹಿತರು ಕೊನೆಗೊಳಿಸುವ ಪ್ರಾರ್ಥನೆ ಸಹ ಇಂತಿರುತ್ತದೆ.

ಇದು ನನ್ನ ಪ್ರಾರ್ಥನೆ,
ಪ್ರಭಾತದ ಅಂಚಿನಲ್ಲಿ
ಮನೆ ಮಾಡಿಕೊಂಡಿರುವ
ನಮ್ಮ ಮಕ್ಕಳಿಗೆಲ್ಲಾ
ಹಾದಿಗಳು ಸುರಕ್ಷಿತವಾಗಲಿ ;
ಕಾಡುಗಳು,
ಕುರುಚಲುಗಳು,
ತಮ್ಮ ನೀರು ತುಂಬಿದ ತೋಳುಗಳ ಚಾಚಿ
ಅವರ ಹೃದಯಗಳಿಗೆ ಸಂರಕ್ಷಣೆ ನೀಡಲಿ!
ಅವರ ಹಾದಿಗಳು ಸುರಕ್ಷಿತವಾಗಲಿ!
ಅವರ ಪಯಣಗಳೆಲ್ಲ ಕೈಗೂಡಲಿ;
ಕೆಲದೂರ ಅವರು ಸಾಗಿದ ಬಳಿಕ
ಯಾವುದೋ ತೊಡಕೆದ್ದು ಕಠಿಣವಾಗದಿರಲಿ !
ಪಯಣದ ಹಾದಿಯಲ್ಲಿ ಮುನ್ನಡೆದಿರುವ
ಎಲ್ಲ ಪುಟ್ಟ ಹುಡುಗರಿಗೂ
ಎಲ್ಲ ಪುಟ್ಟ ಹುಡುಗಿಯರಿಗೂ
ಅವರ ಹೃದಯಗಳಲ್ಲಿ ಬಲ ತುಂಬಲಿ !
ಸ್ಥೈರ್ಯ ಚೇತನ ತುಂಬಲಿ !!
ಉದಯ ಸರೋವರವ ಸೇರುವ ಹಾದಿಗಳಲ್ಲಿ
ನೀವು ವೃದ್ಧರಾಗುವವರೆಗೂ ಇರಿ
ನಿಮ್ಮ ಪಯಣಗಳು ಕೈಗೂಡಲಿ !
ನೀವು ಆಯುಷ್ಮಂತರಾಗಿ

ನಿಮ್ಮ ತಂದೆ ಸೂರ್ಯನ ಜೀವ ಪ್ರಧಾನ ಮಾರ್ಗ ಆರಂಭವಾಗುವಲ್ಲಿಗೆ,
ನಿಮ್ಮ ಹಾದಿಗಳು ಕೂಡಲಿ !
ನಿಮ್ಮ ಪಯಣಗಳು ಕೈಗೂಡಲಿ !!

ಯಾರಾದರೂ ಜುನಿಯನ್ನು ಯಾವುದಾದರೂ ಧಾರ್ಮಿಕ ಆಚರಣೆಯ ಉದ್ದೇಶವೇನು ಎಂದು ಕೇಳಿದರೆ ರೂಢಿಯಂತೆ ಮಳೆಗಾಗಿ ಎಂದು ಉತ್ತರಿಸುತ್ತಾನೆ. ಇದು ಜುನಿಯ ಆಳ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. ದೇವತೆಗಳು ಮಾತ್ರ ನೀಡಬಹುದಾದ ವರಗಳಲ್ಲಿ ಫಲಶಕ್ತಿ ಎಲ್ಲಕ್ಕಿಂತ ಮಿಗಿಲಾದುದು. ಜುನಿ ಪ್ರಸ್ಥಭೂಮಿಯ ಮರಳ್ಗಾಡು ಸೀಮೆಯಲ್ಲಿ ಬೆಳೆ ಬೆಳೆಯಲು ಮಳೆ ಅತ್ಯವಶ್ಯಕ. ಪುರೋಹಿತರ ಏಕಾಂತವಾಸದ ತಪಸ್ಸಾಧನೆ, ಮುಖವಾಡದ ದೇವತೆಗಳ ಕುಣಿತ, ಕೆಲವೊಮ್ಮೆ ಔಷಧ ಸಂಘದ ಕಾರ್ಯಾಚರಣೆಗಳು ಸಹ ಮಳೆ ಬಂದಿತೇ, ಇಲ್ಲವೇ ಎಂಬುದರಿಂದ ಯಶಸ್ವಿಯೋ, ಅಲ್ಲವೇ ಎಂಬ ತೀರ್ಪಿಗೆ ಗುರಿಯಾಗುತ್ತವೆ. 'ನೀರಿನಿಂದ ಹರಸುವುದು' ಎಲ್ಲ ಆಶೀರ್ವಾದಗಳ ಪರ್ಯಾಯ ಪದ. ಪ್ರಾರ್ಥನೆಗಳಲ್ಲಿ ದೇವತೆಗಳು ಜುನಿ ಕೋಣೆಗಳಿಗೆ ಬಂದು ಹರಸುವಾಗ ಬಳಸುವ ಕಡ್ಡಾಯ ಪದವೂ ಅದೇ. ಅವರು ಬರುವ ಕೋಣೆಗಳು "ನೀರಿನಿಂದ ತುಂಬಿದವು"; ಅವರ ಏಣಿಗಳು "ನೀರು ಏಣಿಗಳು"; ಯುದ್ಧದಲ್ಲಿ ಅವರು ತೆಗೆದುಕೊಳ್ಳುವ ತಲೆಯೋಡು "ನೀರು ತುಂಬಿದ ಬುರುಡೆ"; ಕಾಲವಾದವರು ಸಹ ಮಳೆಯ ಮೋಡಗಳಾಗಿ ಹಿಂತಿರುಗಿ ಬಂದು ಎಲ್ಲರನ್ನೂ ಸರ್ವಸಮವಾಗಿ ಹರಸುತ್ತಾರೆ. ಬೇಸಿಗೆಯ ಮಧ್ಯಾಹ್ನದಲ್ಲಿ ಆಕಾಶದಲ್ಲಿ ಮೋಡಗಳು ಕವಿದಾಗ ಜನ ತಮ್ಮ ಮಕ್ಕಳಿಗೆ "ನಿಮ್ಮ ತಾತಂದಿರು ಬರುತ್ತಿದ್ದಾರೆ" ಎಂದು ಹೇಳುತ್ತಾರೆ. ಅವರ ಇಂಗಿತ ವ್ಯಕ್ತಿಗತರಾಗಿ ಕಾಲವಾದ ಹಿರಿಯರು ಎಂದಲ್ಲ ; ವ್ಯಕ್ತಿ ಸಂಬಂಧವಿಲ್ಲದೆ ಎಲ್ಲ ಪೂರ್ವಜರನ್ನೂ ಕೂಡಿಸಿ ಭಾವಿಸಿದಂತೆ. ಮುಖವಾಡದ ದೇವತೆಗಳೇ ಕುಣಿಯುವಾಗ ಅವರು ತಮ್ಮದೇ ಅಸ್ತಿತ್ವವಾದ ಮಳೆಯು, ಜನರ ಮೇಲೆ ಬರುವಂತೆ ಬಲಾತ್ಕರಿಸುತ್ತಾರೆ, ಪುರೋಹಿತರು ತಮ್ಮ ತಪಸ್ಸಾಧನೆಗಾಗಿ ಪೂಜಾಪೀಠಗಳ ಮುಂದೆ ನಿಶ್ಚಲರಾಗಿ ಎಂಟು ದಿನಗಳ ಕಾಲ ಕುಳಿತು ಮಳೆಯನ್ನು ಆಹ್ವಾನಿಸುತ್ತಾರೆ:

ನೀವು ಶಾಶ್ವತವಾಗಿ ಎಲ್ಲಿರುವಿರೋ ಅಲ್ಲಿಂದ
ನಿಮ್ಮ ದಾರಿಗಳೆಲ್ಲ ಇತ್ತ ಬರಲಿ
ಗಾಳಿಯಲಿ ತೇಲಿ ಬಹ ನಿಮ್ಮ ಸಣ್ಣ ಮೋಡಗಳು
ನಿಮ್ಮ ತೆಳು ಮೋಡಗಳನು
ಜೀವಜಲದಿಂದ ತುಂಬಿರುವುದನು
ನಮ್ಮೊಂದಿಗಿರಲು ಕಳುಹಿ ಕೊಡಿರಿ

ಇಲ್ಲಿ ಇಟಿವಾನ*ದಲ್ಲಿ
ಭೂಮಿಯನು ಲಾಲಿಸುವ ಸೊಗಸಾದ ಮಳೆಯು
ನಮ್ಮ ತಂದೆಗಳು,
ನಮ್ಮ ತಾಯಂದಿರು ನೆಲೆಸಿರುವ ಎಡೆಯಿಂದ
ಆದಿಯಲಿ ಜನ್ಮ ತಳೆದವರೇ
ನಿಮ್ಮ ಜಲರಾಶಿಯನು ಹೊತ್ತು
ನೀವು ಒಟ್ಟಾಗಿ ಬರುವಿರಿ.

ಜುನಿಗಳು ಪದೇ ಪದೇ ಪ್ರಾರ್ಥನೆ ಮಾಡಿ ಕೋರುವ ಫಲಶಕ್ತಿಯಲ್ಲಿ ಮಳೆಯು ಒಂದು ಅಂಶ ಮಾತ್ರ. ತೋಟಗಳ ಅಭಿವೃದ್ಧಿ ಮತ್ತು ತಮ್ಮ ಬುಡಕಟ್ಟಿನ ಅಭಿವೃದ್ಧಿ ಇವುಗಳನ್ನು ಒಟ್ಟಿಗೆ ಆಲೋಚಿಸುತ್ತಾರೆ. ಸಂತೃಪ್ತರಾದ ಸ್ತ್ರೀಯರನ್ನು ವರವಾಗಿ ಕೇಳಿಕೊಳ್ಳುತ್ತಾರೆ.

ಈಗಾಗಲೇ ಮಗುವಿರುವವರಿಗೆ ಸಹ
ಬೆನ್ನ ಮೇಲೊಂದು ಮಗುವನ್ನು ಹೊತ್ತು
ಇನ್ನೊಂದನು ತೊಟ್ಟಿಲ ಮಣೆಯೊಳಗಿಟ್ಟು
ಮತ್ತೊಂದನು ಕೈಯಲ್ಲಿ ಹಿಡಿದು ದಾರಿ ತೋರುತ
ಮತ್ತೂ ಒಂದು ಹಿಂದುಗಡೆ ಬರುತ

ಮಾನವನ ಫಲಶಕ್ತಿಯನ್ನು ಪ್ರವರ್ಶಿಸುವ ವಿಧಾನಗಳು ಸಾಂಕೇತಿಕವಾಗಿಯೂ, ಅಮೂರ್ತವಾಗಿಯೂ ಇರುವುದು ಒಂದು ಅಚ್ಚರಿ. ಅದೇನೇ ಇರಲಿ, ಧಾರ್ಮಿಕ ಆಚರಣೆಗಳ ಉದ್ದೇಶಿತ ಗುರಿಯಲ್ಲೊಂದು, ಫಲಶಕ್ತಿ.

ಜುನಿಗಳ ಗಮನವನ್ನೆಲ್ಲ ಆಕ್ರಮಿಸಿರುವ ಈ ಉತ್ಸವ ಜೀವನವು ಪರಸ್ಪರ ಜೋಡಣೆಯಾಗುವ ಚಕ್ರಗಳ ಸರಣಿಯಂತೆ ವ್ಯವಸ್ಥಿತವಾಗಿದೆ. ಪುರೋಹಿತ ಪಂಥಗಳಿಗೆ ಅವರದೇ ಆದ ಪೂಜ್ಯ ವಸ್ತುಗಳು, ತಪಸ್ಸಾಧನೆಗಳು, ಕುಣಿತಗಳು, ಪ್ರಾರ್ಥನೆಗಳು ಇವೆ. ಅವರ ವಾರ್ಷಿಕ ಕಾರ್ಯಕ್ರಮವು ಪ್ರತಿ ವರ್ಷವೂ ಮಕರ ಸಂಕ್ರಾಂತಿಯಲ್ಲಿ ನಡೆಯುತ್ತದೆ. ಎಲ್ಲ ವಿವಿಧ ಗುಂಪುಗಳ ಜನರೂ ಸೇರುತ್ತಾರೆ. ಎಲ್ಲ ರೀತಿಯ ಪೂಜ್ಯವಸ್ತುಗಳನ್ನೂ ಕಾರ್ಯಕ್ರಮಕ್ಕೆ ಬಳಸಿಕೊಳ್ಳುತ್ತಾರೆ, ಎಲ್ಲರ ಕಾರ್ಯ ಚಟುವಟಿಕೆಗಳೂ ಅಂದು ಕಂಡುಬರುತ್ತವೆ. ಬುಡಕಟ್ಟಿನ ಮುಖವಾಡದ ದೇವತಾರಾಧಕರ ಸಂಘದಲ್ಲೂ ಇದೇ ಬಗೆಯ ಕಾರ್ಯಕ್ರಮಗಳಿವೆ. ಅವರ ಪಂಚಾಂಗ ನಿರ್ದೇಶಿತ ಆಚರಣೆಗಳು ಚಳಿಗಾಲದಲ್ಲಿ ನಡೆಯುತ್ತವೆ. ದೇವತಾರಾಧಕರ ದೊಡ್ಡ ಹಬ್ಬವನ್ನು "ಶಲಾಕೋ" ಎಂದು ಕರೆಯುತ್ತಾರೆ, ಇದೇ ರೀತಿ ಔಷಧ ಸಂಘಗಳು ಚಿಕಿತ್ಸೆಗೆ ವಿಶೇಷವಾಗಿ

---

* 'ಮಧ್ಯ' ಎಂದು ಅರ್ಥ, ಪ್ರಪಂಚದ ಕೇಂದ್ರವಾದ ಜೂನಿ ನಾಡಿನ ಉತ್ಸವ ತಾಣ.

ಸಂಬಂಧಿಸಿದಂತೆ ವರ್ಷದ ಪೂರ್ತ ಕಾರ್ಯಕ್ರಮಗಳನ್ನಿಟ್ಟುಕೊಂಡಿದ್ದು, ವರ್ಷಕ್ಕೆ ಒಂದು ಬಾರಿ ಬಣದ ಕ್ಷೇಮಕ್ಕಾಗಿ ವಾರ್ಷಿಕ ಪರಿಸಮಾಪ್ತಿ ಸಮಾರಂಭವನ್ನು ನಡೆಸುತ್ತವೆ. ಜುನಿ ಜನರ ಉತ್ಸವ ಜೀವನದ ಈ ಮೂರು ಮುಖ್ಯ ಪಂಥಗಳು ಒಂದಕ್ಕೊಂದು ಹೊರತಲ್ಲ, ಒಬ್ಬನೇ ಮನುಷ್ಯ ತನ್ನ ಜೀವನದ ಬಹುಭಾಗದಲ್ಲಿ ಮೂರೂ ಪಂಥಗಳ ಸದಸ್ಯನಾಗಿರಬಹುದು ; ಹಾಗೆ ಆಗಿರುವುದು ರೂಢಿ. ಪ್ರತಿಯೊಂದು ಪಂಥವೂ ಅವನಿಗೆ "ಬಾಳು ಸಾಗಿಸಲು" ಪೂಜ್ಯ ವಸ್ತುಗಳನ್ನು ನೀಡಿ, ಅದಕ್ಕೆ ಪ್ರತಿಯಾಗಿ ಅವನು ಕರಾರುವಾಕ್ಕಾದ ಉತ್ಸವ ಸಂಬಂಧೀ ತಿಳುವಳಿಕೆಯನ್ನು ಪಡೆದಿರಬೇಕೆಂದು ನಿರೀಕ್ಷಿಸುತ್ತದೆ.

ಪುರೋಹಿತ ಪಂಥಗಳು ಪವಿತ್ರತೆಯ ಅತ್ಯುನ್ನತ ಮಟ್ಟವನ್ನು ಆಕ್ರಮಿಸಿವೆ. ಪುರೋಹಿತರಲ್ಲಿ ಒಟ್ಟು ನಾಲ್ಕು ಪ್ರಧಾನ, ಎಂಟು ಅಪ್ರಧಾನ ಪಂಥಗಳಿವೆ. ಪುರೋಹಿತ ಪಂಥಕ್ಕೆ ಸೇರಿದ ಜುನಿಯ ಜನರು ಇವುಗಳಿಗೆ ಬದ್ಧರಾಗಿರುತ್ತಾರೆ. ಇವರು ಪವಿತ್ರ ವ್ಯಕ್ತಿಗಳು. ಅವರ ಪವಿತ್ರ ಔಷಧಗಳ ಗಂಟು "ವರ್ಣಿಸಲಸದಳವಾದಷ್ಟು ಪವಿತ್ರ" ಎಂದು ಡಾ. ಬನ್ಜೆಲ್ ಹೇಳಿದ್ದಾರೆ, ಅವುಗಳನ್ನು ಮುಚ್ಚಳವಿರುವ ದೊಡ್ಡ ಹರವಿಗಳಲ್ಲಿಟ್ಟು, ಪುರೋಹಿತರ ಮನೆಗಳ ಒಳಕೋಣೆಗಳಲ್ಲಿಟ್ಟಿರುತ್ತಾರೆ. ಆ ಗಂಟಿನಲ್ಲಿ ಎರಡು ಜೋಡುಕಡ್ಡಿಗಳಿಗೆ ಬಿರಡೆಯಿಟ್ಟು ಮುಚ್ಚಿ ಇಟ್ಟಿರುತ್ತಾರೆ. ಒಂದರಲ್ಲಿ ನೀರಿದ್ದು, ಪುಟ್ಟ ಕಪ್ಪೆಗಳಿರುತ್ತವೆ ; ಇನ್ನೊಂದರಲ್ಲಿ ಧಾನ್ಯವಿರುತ್ತದೆ. ಎರಡನ್ನೂ ಒಟ್ಟಿಗೆ ಇಟ್ಟು ಗಜಗಟ್ಟಲೆ ಕಚ್ಚಾ ಹತ್ತಿಯಿಂದ ಸುತ್ತಿಟ್ಟಿರುತ್ತಾರೆ. ಅರ್ಚನಾವಿಧಿಗಳಿಗಾಗಿ ಪುರೋಹಿತರು ಆ ಕೋಣೆಯೊಳಕ್ಕೆ ಹೋಗುತ್ತಾರೆ. ಆ ಗಂಟುಗಳಿಗೆ ನೈವೇದ್ಯ ಅರ್ಪಿಸಲು ಆ ಮನೆಯ ಹಿರಿಯ ಹೆಂಗಸು ಅಥವಾ ಅತ್ಯಂತ ಕಿರಿಯ ಹುಡುಗಿ ಅಲ್ಲಿಗೆ ಹೋಗಬಹುದು. ಇವರನ್ನು ಬಿಟ್ಟು ಪವಿತ್ರ ಕೋಣೆಗೆ ಬೇರೆ ಯಾರೂ ಹೋಗುವುದಿಲ್ಲ. ಅವರುಗಳು ಸಹ ತಮ್ಮ ಪಾದರಕ್ಷೆಗಳನ್ನು ಕಳಚಿ ಹೋಗುತ್ತಾರೆ. ಈ ಪುರೋಹಿತರು ಪುರೋಹಿತರಾಗಿ ಯಾವ ಸಾರ್ವಜನಿಕ ಉತ್ಸವದ ಪೌರೋಹಿತ್ಯವನ್ನೂ ನಡೆಸಲು ಹೋಗುವುದಿಲ್ಲ. ಆದರೆ ಬಹಳಷ್ಟು ಸಂಸ್ಕಾರಗಳಲ್ಲಿ ಅವರು ಇರಬೇಕಾದುದು ಅವಶ್ಯಕ. ಅಲ್ಲದೆ, ಸಮಾರಂಭದ ಮೊದಲ ಹಂತಗಳು ಅವರಿಂದಲೇ ಆರಂಭವಾಗಬೇಕಾಗಿರುತ್ತದೆ. ಅವರು ತಮ್ಮ ಪವಿತ್ರ ಗಂಟುಗಳೆದುರಿಗೆ ಮಾಡುವ ಏಕಾಂತ ತಪಸ್ಸಾಧನೆ ರಹಸ್ಯ ; ಪರಮ ಪವಿತ್ರವಾದುದು. ಜೂನ್ ತಿಂಗಳಲ್ಲಿ ಮುಸುಕಿನ ಜೋಳದ ಪೈರು, ನೆಲದಿಂದ ಒಂದು ಅಡಿ ಮೇಲೆ ಎದ್ದಿದ್ದು ಮಳೆಯ ಅವಶ್ಯಕತೆ ಇರುವಾಗ ಏಕಾಂತ ತಪಸ್ಸಾಧನೆಯ ಸರಣಿ ಆರಂಭವಾಗುತ್ತದೆ. ಕ್ರಮವಾಗಿ ಒಂದು ಪುರೋಹಿತ ಪಂಥ ಆ ಸಾಧನೆಯನ್ನು ಆರಂಭಿಸುತ್ತ, ಇನ್ನೊಂದು ಪುರೋಹಿತ ಪಂಥ ಮುಗಿಸುತ್ತ ನಿರಂತರವಾಗಿ

ತಮ್ಮ ಪೂಜಾ ದಿನಗಳನ್ನು ಕಳೆಯುತ್ತಾರೆ. ಸೂರ್ಯ ಪಂಥ, ಯುದ್ಧ ಪಂಥಗಳ ಮುಖ್ಯಸ್ಥರೂ ಪುರೋಹಿತರ ಈ ತಪಸ್ಸಾಧನೆಯಲ್ಲಿ ಹೋಗುವ ಸರಣಿಗಳಲ್ಲಿ ಸೇರುತ್ತಾರೆ. ಅವರು ನಿಶ್ಚಲರಾಗಿ ತಮ್ಮ ಮನಸ್ಸನ್ನು ಪೂಜ್ಯವಸ್ತುಗಳ ಮೇಲೆ ಇಟ್ಟು ಕುಳಿತಿರಬೇಕು. ಪ್ರಧಾನ ಪುರೋಹಿತ ಪಂಥಗಳಿಗೆ ಎಂಟು ದಿನ, ಕೆಳದರ್ಜೆಯ ಪುರೋಹಿತ ಪಂಥಗಳಿಗೆ ನಾಲ್ಕು ದಿನ ಕುಳಿತಿರಬೇಕು. ಆ ಕಾಲದಲ್ಲಿ ಎಲ್ಲ ಜುನಿಗಳೂ ಮಳೆ ಬರುವುದನ್ನೇ ಕಾಯುತ್ತಿರುತ್ತಾರೆ. ಮಳೆ ಆರಂಭವಾದ ಕೂಡಲೇ ಪುರೋಹಿತರು ತಮ್ಮ ತಪಸ್ಸಾಧನೆ ಮುಗಿಸಿ ಏಕಾಂತ ಸ್ಥಳದಿಂದ ಹೊರಬರುತ್ತಾರೆ. ಹಾಗೆ ಅವರು ಹೊರಬರುತ್ತಲೇ ಬೀದಿಗಳಲ್ಲಿ ಉದ್ದಕ್ಕೂ ನಿಂತ ಜನರು ಸ್ವಾಗತಿಸಿ ವಂದಿಸುತ್ತಾರೆ. ಆ ಪುರೋಹಿತರು ತಮಗೆ ಮಳೆಗಿಂತ ಮಿಗಿಲಾದ ಹರಕೆಯನ್ನು ದೇವರಿಂದ ಪಡೆದು ತಂದಿದ್ದಾರೆ. ಅಂದರೆ ಜುನಿ ಜನಗಳು ತಮ್ಮ ಜೀವನ ಕ್ರಮವನ್ನು ಎತ್ತಿ ಹಿಡಿದಿದ್ದಾರೆ. ತಮ್ಮ ರಕ್ಷಕರಾಗಿ ಅವರ ಸ್ಥಾನಮಾನ ಸಾರ್ಥಕಗೊಂಡಿದೆ. ಏಕಾಂತ ತಪಸ್ಸಾಧನೆಯಲ್ಲಿರುವಾಗ ಅವರು ಸಲ್ಲಿಸಿದ ಪ್ರಾರ್ಥನೆಗಳಿಗೆ ಫಲ ದೊರತಿದೆ ಎಂದು ಅಲ್ಲಿ ನೆರೆದಿರುವ ಜನರು ಉದ್ಗಾರ ತೆಗೆಯುತ್ತಾರೆ.

ನನ್ನ ಮಕ್ಕಳೆಲ್ಲ ಏಣಿ ಇಳಿಯುತ್ತಿರುವರು.
ಅವರೆಲ್ಲರನು ನನ್ನ ಕೈಗಳಲಿ ಹಿಡಿದಿಹೆನು,
ಯಾರೂ ನನ್ನ ಹಿಡಿತದಿಂದ ಜಾರಿ ಬೀಳದಿರಲಿ
ಸ್ವಲ್ಪ ದೂರ ಹೋದ ಬಳಿಕ,
ಪ್ರತಿಯೊಂದು ಪುಟ್ಟ ಜೀರುಂಡೆಯನ್ನೂ ಸಹ.
ಪ್ರತಿಯೊಂದು ಪುಟ್ಟ ಕೊಳಕು ಜೀರುಂಡೆಯನ್ನೂ ಸಹ,
ನನ್ನ ಕೈಗಳಲ್ಲಿ ನಾನು ಭದ್ರವಾಗಿ ಹಿಡಿಯಬೇಕು,
ಅವರಾರೂ ನನ್ನ ಹಿಡಿತದಿಂದ ಜಾರಿ ಬೀಳದಿರಲಿ,
ನನ್ನ ಮಕ್ಕಳ ಪಯಣಗಳೆಲ್ಲ ಕೂಡಿ ಬರಲಿ ;
ಅವರೆಲ್ಲ ಬಾಳಿ ವೃದ್ಧರಾಗಲಿ ;
ಅವರ ಹಾದಿಗಳೆಲ್ಲ ಉದಯ ಸರೋವರದ ತನಕ ಮುಟ್ಟಲಿ
ಅವರ ಪಯಣಗಳೆಲ್ಲ ಕೂಡಿ ಬರಲಿ,
ಇತ್ತ ಕಡೆ ನಿಮ್ಮ ಮನ ವಾಲುವಂತಾಗಲೇ
ನಿಮ್ಮ ದಿನಗಳು ಸೃಷ್ಟಿಯಾಗಿವೆ.

ಪ್ರಧಾನ ಪುರೋಹಿತ ಪಂಥಗಳ ಮುಖ್ಯಸ್ಥರು, ಸೂರ್ಯ ಪಂಥದ ಮುಖ್ಯ ಪುರೋಹಿತ ಹಾಗೂ ಯುದ್ಧ ಪಂಥದ ಇಬ್ಬರು ಮುಖ್ಯ ಪುರೋಹಿತರುಗಳೆಲ್ಲ ಕೂಡಿ ಜುನಿಯ ಆಡಳಿತ ಮಂಡಲಿಯಾಗಿರುತ್ತವೆ. ಜುನಿ ಒಂದು ಶುದ್ಧರೂಪದ ಮತಾ

ಚಾರ್ಯ ಪ್ರಭುತ್ವ. ಪುರೋಹಿತರು ಪವಿತ್ರ ವ್ಯಕ್ತಿಗಳು. ತಮ್ಮ ಕಾರ್ಯ ನಿರ್ವಹಣೆಯಲ್ಲಿ ಯಾವಾಗಲೂ ಅವರು ಕೋಪಗೊಳ್ಳಬಾರದು. ಆದ್ದರಿಂದ ಒಮ್ಮತದ ನಿರ್ಧಾರಕ್ಕೆ ಬರಬಹುದಾದ ವಿಚಾರಗಳನ್ನು ಹೊರತು ಇತರ ವಿಚಾರಗಳನ್ನು ಅವರ ಮುಂದೆ ತರುವುದಿಲ್ಲ. ಅವರು ಜುನಿ ಪಂಚಾಂಗದ ಪ್ರಕಾರ ದೊಡ್ಡ ಹಬ್ಬ, ಸಮಾರಂಭಗಳನ್ನು ತೊಡಗಿಸುತ್ತಾರೆ, ಸಂಸ್ಕಾರ ಸಂಬಂಧವಾದ ನಿಯಾಮಕಗಳನ್ನು ಮಾಡುತ್ತಾರೆ. ಹಾಗೂ ಮಾಟಗಾರಿಕೆಯ ವ್ಯವಹಾರಗಳಲ್ಲಿ ತೀರ್ಪು ನೀಡುತ್ತಾರೆ. ಇತರ ಆಡಳಿತ ಮಂಡಲಿಗಳಂತೆ ಈ ಆಡಳಿತ ಮಂಡಲಿಗೆ ಅಧಿಕಾರ ವ್ಯಾಪ್ತಿಯೂ, ಅಧಿಕಾರವೂ ಇಲ್ಲ.

ಪುರೋಹಿತ ಪಂಥಗಳು ಪೂಜ್ಯತೆಯ ಪರಮಾವಧಿ ಮಟ್ಟದಲ್ಲಿದ್ದರೆ, ಮುಖವಾಡದ ದೇವತೆಗಳ ಪಂಥವು ಅತ್ಯಂತ ಜನಪ್ರಿಯವಾಗಿದೆ. ಜುನಿ ಜನಕ್ಕೆ ಇದರಲ್ಲಿ ಹೆಚ್ಚು ಅಭಿಮಾನ.

ಮುಖವಾಡದ ದೇವತೆಗಳಲ್ಲಿ ಎರಡು ಬಗೆ. ನಿಜವಾದ ಮುಖವಾಡದ ದೇವತೆಗಳಾದ ಕಚೀನಾಗಳು ಒಂದು; ಕಚೀನಾ ಪುರೋಹಿತರುಗಳು ಮತ್ತೊಂದು; ಈ ಕಚೀನಾ ಪುರೋಹಿತರು ದೇವಲೋಕದ ಮುಖಂಡರು. ಜುನಿ ಕುಣಿತಗಾರರು ಮುಖವಾಡ ತೊಟ್ಟು ಅವರ ಪಾತ್ರಗಳನ್ನು ಕಟ್ಟುತ್ತಾರೆ. ಜುನಿ ದೃಷ್ಟಿಯಲ್ಲಿ, ಅವರ ಪವಿತ್ರತೆಯು, ಆ ಪಂಥವನ್ನು ನಿಜವಾದ ನೃತ್ಯಗಾರದೇವತೆಗಳ ಪಂಥದಿಂದ ಬೇರ್ಪಡಿಸಿದೆ. ನೃತ್ಯಗಾರ ದೇವತೆಗಳು ಜುನಿಯ ದಕ್ಷಿಣಕ್ಕಿರುವ ಮರಳ್ಗಾಡಿನ ಆಚೆ ಬಹು ದೂರದಲ್ಲಿರುವ ಸರೋವರವೊಂದರ ತಳದಲ್ಲಿ ವಾಸಿಸುವ ಸಂತುಷ್ಟ ಹಾಗೂ ಸ್ನೇಹಮಯರಾದ ದೇವತೆಗಳು. ಅವರು ಸದಾ ನೃತ್ಯವಾಡುತ್ತಿರುತ್ತಾರೆ. ಆದರೆ ಜುನಿಗಳಿಂತಿರುಗಿ ಬಂದು ನೃತ್ಯ ಮಾಡುವುದೆಂದರೆ ಅವರಿಗೆ ಬಹುಪ್ರಿಯ. ಅವರ ಪಾತ್ರಗಳನ್ನು ಕಟ್ಟುವುದೆಂದರೆ ಅವರು ಬಹಳವಾಗಿ ಬಯಸುವ ಸಂತೋಷವನ್ನು ಅವರಿಗೆ ನೀಡಿದಂತೆ. ದೇವತೆಯ ಮುಖವಾಡವನ್ನು ಧರಿಸಿದಾಗ ಮನುಷ್ಯನು ಆಗಿನ ಮಟ್ಟಿಗೆ ಆ ದೇವತೆಯೇ ಆಗಿ ಬಿಟ್ಟಿರುತ್ತಾನೆ. ಅವನಿಗೆ ಮನುಷ್ಯರಂತೆ ಮಾತಿಲ್ಲ; ಆ ದೇವತೆಗೇ ವಿಶಿಷ್ಟವಾದ ಕೂಗು ಮಾತ್ರ ಅವನ ಶಬ್ದ. ಅವನು ಮಡಿ. ಅವನು ಆಗಿನ ಮಟ್ಟಿಗೆ ಪವಿತ್ರರಾದವರ ಎಲ್ಲ ಹೊಣೆಗಾರಿಕೆಗಳನ್ನೂ ನಿರ್ವಹಿಸಬೇಕು. ಅವನು ಕುಣಿಯುವುದು ಮಾತ್ರವಲ್ಲ; ಕುಣಿತಕ್ಕೆ ಮೊದಲಾಗಿ ರಹಸ್ಯವಾದ ತಪಸ್ಸನ್ನು ಆಚರಿಸಿ, ಪ್ರಾರ್ಥನಾ ದಂಡಗಳನ್ನು ನೆಟ್ಟು ಬ್ರಹ್ಮಚರ್ಯವನ್ನು ಪಾಲಿಸಬೇಕು.

ಜುನಿ ದೇವಗಣದಲ್ಲಿ ನೂರಕ್ಕಿಂತ ಹೆಚ್ಚಿಗೆ ಮುಖವಾಡದ ದೇವತೆಗಳಿದ್ದಾರೆ. ಅವರಲ್ಲಿ ಮೂವತ್ತು, ನಲವತ್ತು ಮಂದಿ ಒಟ್ಟಿಗೆ ಗುಂಪಾಗಿ ಬರುವ ನೃತ್ಯ ತಂಡಗಳು ಹಲವು. ಇತರರು ಆರು ಮಂದಿಯ ತಂಡಗಳಾಗಿ ಬರುತ್ತಾರೆ. ಜುನಿಗಳ

ಊರ್ಧ್ವ ಹಾಗೂ ಅಧೋ ದಿಶೆಗಳನ್ನು ದಿಕ್ಕುಗಳೆಂದೆಣಿಸುವುದರಿಂದ ಆರು ಮಂದಿ ಆರು ದಿಕ್ಕುಗಳ ಬಣ್ಣಧರಿಸಿ ಬರುತ್ತಾರೆ. ಇವರಲ್ಲಿ ಪ್ರತಿ ದೇವತೆಗೂ ವಿವರವಾದ ಅಲಂಕರಣಗಳು, ವಿಶಿಷ್ಟವಾದ ಮುಖವಾಡ, ದೇವತಾ ಶ್ರೇಣಿಯಲ್ಲಿ ತನ್ನದಾದ ಒಂದು ಸ್ಥಾನ, ಅವನ ಸಾಹಸಗಳನ್ನು ವರ್ಣಿಸುವ ಪುರಾಣಕತೆಗಳು, ಮತ್ತು ಯಾವ ಉತ್ಸವದಲ್ಲಿ ಅವನು ಬರಬೇಕು ಮೊದಲಾದುವುಗಳೆಲ್ಲ ನಿರ್ದಿಷ್ಟವಾಗಿವೆ.

ಬುಡಕಟ್ಟಿನ ವಯಸ್ಕ ಪುರುಷರ ಸಂಘವು ಮುಖವಾಡದ ದೇವತೆಗಳ ನೃತ್ಯ ಕಾರ್ಯಕ್ರಮವನ್ನು ನಡೆಸಿಕೊಡುತ್ತದೆ. ಹೆಂಗಸರು ಸಹ ತಮ್ಮ ಜೀವ ಕಾಪಾಡಿಕೊಳ್ಳಲು, ದೀಕ್ಷೆ ಪಡೆಯಬಹುದಾದರೂ ಅದು ರೂಢಿಯಲ್ಲಿಲ್ಲ. ಯಾವುದೇ ನಿಷೇದದಿಂದಾಗಿ ಅವರನ್ನು ಹೊರಗಿಟ್ಟಿಲ್ಲವಾದರೂ ರೂಢಿಯಂತೆ ಹೆಂಗಸರಿಗೆ ಈ ಪಂಥದ ಸದಸ್ಯತ್ವವಿಲ್ಲ. ಈಗ ಮೂವರೇ ಹೆಂಗಸರು ಸದಸ್ಯರಾಗಿದ್ದಾರೆ. ಪರಂಪರೆಯಲ್ಲಿ ದಾಖಲಾದ ಯಾವ ಗತಕಾಲದಲ್ಲೂ ಇಷ್ಟಕ್ಕಿಂತ ಹೆಚ್ಚಿನ ಹೆಂಗಸರು ಸದಸ್ಯತ್ವವನ್ನು ಪಡೆದ ಹಾಗಿಲ್ಲ. ಪುರುಷರ ಸಂಘವು ಆರು ಗುಂಪುಗಳಲ್ಲಿ ವ್ಯವಸ್ಥೆಗೊಂಡಿದ್ದು, ಪ್ರತಿಯೊಂದಕ್ಕೂ ಒಂದು ಕಿವಾ ಅಥವಾ ಪೂಜಾಗೃಹವಿದೆ. ಪ್ರತಿ ಕಿವಾಗೂ ಅದರದೇ ಅಧಿಕಾರಿಗಳು, ಅದರದೇ ಆದ ನೃತ್ಯಗಳು, ಅದರದೇ ಸದಸ್ಯತ್ವದ ಪಟ್ಟಿ ಎಲ್ಲ ಇವೆ.

ಒಬ್ಬನು ಯಾವ ಕಿವಾವಿಗೆ ಸದಸ್ಯನಾಗುತ್ತಾನೆ ಎಂಬುದು ಹುಡುಗ ಹುಟ್ಟಿದಾಗ ಅವನ ಮತ ವ್ರತಾಚಾರಣೆಯ ಸಂಬಂಧವಾಗಿ ತಂದೆಯಾಗಿ ನಿಯಮಿತನಾದವನ ಆಯ್ಕೆಯನ್ನು ಅವಲಂಬಿಸಿದೆ. ಆದರೆ ಹುಡುಗ ಐದರಿಂದ ಒಂಬತ್ತು ವಯಸ್ಸಿನವನಾಗುವವರೆಗೂ ದೀಕ್ಷೆ ನೀಡುವುದಿಲ್ಲ. ದೀಕ್ಷಾವಧಿಯು ಅವನಿಗೆ ದೊರೆಯುವ ಮೊದಲ ಹಂತದ ಪವಿತ್ರ ಸ್ಥಾನ. ಡಾ. ಬುನ್ಜೆಲ್ ಅವರು, ಈ ದೀಕ್ಷಾವಧಿಯು ಹುಡುಗನಿಗೆ ಯಾವ ಗೂಢ ವಿದ್ಯೆಯನ್ನೂ ಉಪದೇಶಿಸುವುದಿಲ್ಲವೆಂದೂ, ದೇವತಾ ಶಕ್ತಿಯೊಂದಿಗೆ ಅವನನ್ನೂ ಗಂಟಿಕ್ಕುತ್ತದೆಂದೂ ಹೇಳಿದ್ದಾರೆ. ಅವನು ಆ ಬುಡಕಟ್ಟಿನಲ್ಲಿ ಬಲಶಾಲಿಯಾಗುತ್ತಾನೆ. ಅವನ ಯೋಗ್ಯತೆ ಹೆಚ್ಚಿ ದೀಕ್ಷಾವಿಧಿಗೆ “ದಿಗಿಲು ಬೀಳಿಸುವ ಕಚೀನಾ” ಗಳೆಂಬ ಮುಖವಾಡದ ದಂಡದೇವತೆಗಳು ಬಂದು ಅವನನ್ನು ತಮ್ಮ ಯುಕ್ಕಾ ಚಾವಟಿಗಳಿಂದ ಥಳಿಸುತ್ತಾರೆ. ಇದು ಅವರಲ್ಲಿರಬಹುದಾದ ‘ಕೆಟ್ಟ ಚರ್ಯೆಯನ್ನು ತೆಗೆದು ಹಾಕುವ’ ಮತ್ತು ಮುಂದಿನ ಘಟನೆಗಳನ್ನು ಸುಗಮ ಗೊಳಿಸಲು ನಡೆಸುವ ಒಂದು ಉಚ್ಚಾಟನಾ ಸಂಸ್ಕಾರ. ಜುನಿಗಳಲ್ಲಿ ಮಕ್ಕಳನ್ನು ತಿದ್ದಲೆಂದು ಚಾವಟಿಯನ್ನೆಂದೂ ಬಳಸುವುದಿಲ್ಲ. ಬಿಳಿಯ ಜನರಲ್ಲಿ ತಂದೆ ತಾಯಿಗಳು ಹಾಗೆ ಬಳಸುತ್ತಾರೆಂಬುದು ಅವರಿಗೆ ಅತ್ಯಂತ ಅಚ್ಚರಿಯ ಸಂಗತಿ. ದೀಕ್ಷಾವಿಧಿಯ ಸಂದರ್ಭದಲ್ಲಿ ಮಕ್ಕಳು ಹೆದರುತ್ತಾರೆಂಬುದೇ ಅವರ ನಿರೀಕ್ಷೆ. ಜೋರಾಗಿ ಅತ್ತರೆ ಅದಕ್ಕಾಗಿ ಯಾರೂ ನಾಚಬೇಕಾಗಿಲ್ಲ. ಹಾಗೆ ಅತ್ತರೆ ಸಂಸ್ಕಾರ ಹೆಚ್ಚು ಯಶಸ್ವಿಯಾದಂತೆ.

ಮುಂದೆ ಹುಡುಗ ಸುಮಾರು ಹದಿನಾಲ್ಕು ವರ್ಷದವನಾಗಿ, ಜವಾಬ್ದಾರಿ ವಹಿಸಿಕೊಳ್ಳುವಷ್ಟು ದೊಡ್ಡವನಾದಾಗ ಸಂಪ್ರದಾಯನುಸಾರವಾಗಿ ಇನ್ನೂ ಬಲವಾದ ದೇವತೆಗಳು ಅವನನ್ನು ಥಳಿಸುತ್ತಾರೆ. ಈ ದೀಕ್ಷಾವಧಿಯಲ್ಲಿ ಅವನ ತಲೆಯಮೇಲೆ ಕಚೀನಾ ಮುಖವಾಡವನ್ನು ಇಡುತ್ತಾರೆ. ಆಗ ಅವನಿಗೆ ನೃತ್ಯಗಾರರು ನಿಜವಾಗಿಯೂ ಪವಿತ್ರ ಸರೋವರದಿಂದ ಬಂದ ದೇವತೆಗಳಲ್ಲ, ತನ್ನ ನೆಂಟರು ಹಾಗೂ ನೆರೆಯವರೇ ಎಂಬ ಸತ್ಯ ತಿಳಿಯುತ್ತದೆ. ಕೊನೆಯ ಬಾರಿ ಥಳಿಸಿದ ಬಳಿಕ ನಾಲ್ವರು ಅತಿ ಎತ್ತರದ ಹುಡುಗರನ್ನು ಆಯ್ದು ಅವರನ್ನು ಇದುವರೆಗೂ ಥಳಿಸಿದ ದಿಗಿಲು ಬೀಳಿಸುವ ಕಚೀನಾ ದೇವತೆಗಳಿಗೆ ಎದುರು ಬದರಾಗಿ ನಿಲ್ಲಿಸುತ್ತಾರೆ. ಪುರೋಹಿತರು ಕಚೀನಾ ದೇವತೆಗಳ ಮುಖವಾಡಗಳನ್ನೆತ್ತಿ ಹುಡುಗರ ತಲೆಯ ಮೇಲೆ ಇಡುತ್ತಾರೆ. ಅದೊಂದು ಮಹತ್ತರ ದಿವ್ಯ ದರ್ಶನ. ಹುಡುಗರು ಭಯಗೊಂಡಿರುತ್ತಾರೆ. ದಿಗಿಲು ಬೀಳಿಸುವ ಕಚೀನಾ ದೇವತೆಗಳ ಕೈಯಿಂದ ಯುಕ್ಕಾ ಚಾಟಿಗಳನ್ನು ತೆಗೆದುಕೊಂಡು ಈಗ ಮುಖವಾಡ ಧರಿಸಿ ಅವರೆದುರಿಗೆ ನಿಂತಿರುವ ಹುಡುಗರ ಕೈಗೆ ಕೊಡುತ್ತಾರೆ. ಕಚೀನಾಗಳನ್ನು ಥಳಿಸಲು ಆಜ್ಞೆಯಾಗುತ್ತದೆ. ದೀಕ್ಷೆ ಪಡೆಯುವವರು, ದೇವತೆಗಳು ಮಾತ್ರ ನಿರ್ವಹಿಸುವರೆಂದು ತಿಳಿದಿರುವ ಎಲ್ಲ ಕಾರ್ಯಗಳನ್ನೂ ಮಾನವರೇ ಆದ ತಾವು ನಿರ್ವಹಿಸಬೇಕು ಎಂಬ ಸತ್ಯದ ಮೊದಲ ಉದ್ದೇಶಪೂರ್ಣ ಪಾಠವಿದು. ಹುಡುಗರು ಕಚೀನಾ ದೇವತೆಗಳನ್ನು ಥಳಿಸುತ್ತಾರೆ. ಬಲ ತೋಳಿಗೆ ನಾಲ್ಕು, ಎಡ ತೋಳಿಗೆ ನಾಲ್ಕು, ಬಲಗಾಲಿಗೆ ನಾಲ್ಕು, ಎಡಗಾಲಿಗೆ ನಾಲ್ಕು ಏಟು ಬಿಗಿಯುತ್ತಾರೆ. ಆ ಬಳಿಕ ಇದೇ ರೀತಿಯಲ್ಲಿ ಇತರ ಬಾಲಕರೂ ಕಚೀನಾಗಳನ್ನು ಕ್ರಮಾನುಗುಣವಾಗಿ ಥಳಿಸುತ್ತಾರೆ. ಅನಂತರ ಪುರೋಹಿತರು ಆ ಬಾಲಕರಿಗೆ ಕಚೀನಾಗಳು ಕೇವಲ ಸೋಗುಹಾಕಿದವರು ಎಂಬ ರಹಸ್ಯವನ್ನು ಬಯಲು ಮಾಡಿದ ಬಾಲಕನೊಬ್ಬನ ಕಥೆ ಹೇಳುತ್ತಾರೆ. ಮುಖವಾಡದ ದೇವತೆಗಳು ಆ ಹುಡುಗನನ್ನು ಕೊಂದರು; ಅವನ ತಲೆಯನ್ನು ಕಡಿದು, ರುಂಡವನ್ನು ಪವಿತ್ರ ಸರೋವರದವರೆಗೆ ಒದೆಯುತ್ತ ಒಯ್ದರು; ಅವನ ಮುಂಡವನ್ನು ಪೇಟೆ ಚೌಕದಲ್ಲಿ ಎಸೆದರು. ಈ ಕತೆಯನ್ನು ಕೇಳಿದ ಹುಡುಗರು ಕಚೀನಾ ದೇವತೆಗಳ ಬಗ್ಗೆ ಅನುಮಾನ ಪಡುವ ಸಾಹಸಕ್ಕೆ ಇಳಿಯುವುದಿಲ್ಲ. ಇಂಥ ಬಾಲಕರು ಮುಖವಾಡ ಪಂಥದ ಸದಸ್ಯರಾಗುತ್ತಾರೆ. ಹಾಗೂ ಮುಖವಾಡದ ದೇವತೆಗಳ ವೇಷ ಕಟ್ಟಲು ಯೋಗ್ಯತೆ ಪಡೆಯುತ್ತಾರೆ.

ಬಾಲಕರ ಬಳಿ ಮುಖವಾಡಗಳಿರುವುದಿಲ್ಲ. ಅವರು ಮದುವೆಯಾಗುವವರೆಗೆ ತಮ್ಮ ಮುಖವಾಡಗಳನ್ನು ಮಾಡಿಸುವುದಿಲ್ಲ. ಮುಖವಾಡ ಮಾಡಬಯಸುವವನು ಆ ವರ್ಷ ತನ್ನ ಹೊಲಗಳಲ್ಲಿ ಸಮೃದ್ಧವಾಗಿ ಬೆಳೆ ಬೆಳೆದು, ತನ್ನ ಕೀವಾದ ಮುಖ್ಯಸ್ಥ

ನಿಗೆ ತಾನು ಮುಖವಾಡದ ದೀಕ್ಷೆ ಕೊಳ್ಳಬಯಸುವುದಾಗಿ ತಿಳಿಸುತ್ತಾನೆ. ಅವನು ಹುಡುಗನಾಗಿದ್ದಾಗ ಥಳಿಸಿದ ಕಚೀನಾಗಳೇ ಮತ್ತೆ ಅವನನ್ನು ಥಳಿಸುತ್ತಾರೆ. ಅವನು ತನ್ನ ಕೀವಾದ ಸದಸ್ಯರಿಗೂ ಕುಣಿದವರಿಗೂ ಔತಣ ನೀಡುತ್ತಾನೆ. ಆಗ ಅವನ ಮುಖವಾಡ ಅವನಿಗೆ ಸ್ವಂತವಾಗುತ್ತದೆ. ಅವನು ಅದನ್ನು ತನ್ನ ಮನೆಯಲ್ಲಿಡುತ್ತಾನೆ; ಮುಖವಾಡದಿಂದಾಗಿ ಅವನ ಮನೆಯು ಪವಿತ್ರವಾಗುತ್ತದೆ. ಅವನು ಕಾಲವಾದಾಗ, ಅವನು ಪವಿತ್ರ ಸರೋವರದಲ್ಲಿ ಕಚೀನಾ ನೃತ್ಯಗಾರರ ಗುಂಪಿಗೆ ಸೇರಲು ಅನುವಾಗುವುದಕ್ಕಾಗಿ ಮುಖವಾಡವನ್ನೂ ಅವನೊಂದಿಗೆ ಹೂಳುತ್ತಾರೆ. ಸ್ವಂತ ಮುಖವಾಡವಿಲ್ಲದವನು ಯಾವಾಗಬೇಕಾದರೂ ಅಡ್ಡಿಯಿಲ್ಲದೇ, ಯಾವ ಪ್ರತಿಫಲವನ್ನೂ ನೀಡದೇ ಮುಖವಾಡ ಹೊಂದಿರುವವರಿಂದ ಮುಖವಾಡವನ್ನು ಪಡೆಯಬಹುದು. ಬದಲಾವಣೆಗಳೊಂದಿಗೆ ಒಂದು ಮುಖವಾಡವನ್ನು ಹಲವಾರು ಕಚೀನಾಗಳ ವೇಷಕಟ್ಟಲು ಬಳಸಿಕೊಳ್ಳಬಹುದು.

ಕಚೀನಾ ಪುರೋಹಿತರ ಪಂಥವೇ ಬೇರೆ ತೆರನಾದುದು. ಕಚೀನಾ ಪುರೋಹಿತರ ಮುಖವಾಡವನ್ನು ಅವರವರ ಬೇಡಿಕೆಯಂತೆ ತಯಾರಿಸುವುದಿಲ್ಲ. ಹಾಗೆಯೇ ಅವನು ಪ್ರತಿ ಕುಣಿತದಲ್ಲೂ ಬೇರೆ ಬೇರೆ ವೇಷಕಟ್ಟಲು ಪುನರ್ರೂಪಿಸ ಬರುವುದಿಲ್ಲ. ಪಂಥದ ಕೆಲವು ಕಟ್ಟುನಿಟ್ಟಾದ ಆಚರಣೆಗಳಿಂದ ಆವೃತವಾದ ಅವು ಶಾಶ್ವತ ಮುಖವಾಡಗಳು. ಪ್ರಮುಖ ಪುರೋಹಿತ ಪಂಥಗಳಲ್ಲಿ ಔಷಧದ ಗಂಟುಗಳ ನಂತರ ಇವುಗಳಿಗೆ ಎರಡನೆಯ ಸ್ಥಾನ. ಜುನಿ ಹೇಳಿಕೆಯಂತೆ ಪ್ರಪಂಚವು ಆರಂಭವಾದಾಗಿನಿಂದ ಆ ಮುಖವಾಡಗಳು ತಲೆಮಾರಿನಿಂದಲೂ ಆ ಕುಟುಂಬ ಪಂಕ್ತಿಗಳಲ್ಲೇ ನೆಲೆಸಿವೆ ಮತ್ತು ಅವರು ಆ ಮುಖವಾಡಗಳನ್ನು ಕಾಪಾಡಿಕೊಂಡು ಬಂದಿದ್ದಾರೆ.

ಪ್ರತಿಯೊಂದು ಮುಖವಾಡಕ್ಕೂ ತನ್ನದೇ ಪಂಥವಿದೆ. ಈ ಪಂಥಗಳು ಜುನಿ ಉತ್ಸವ ಸಮಾರಂಭಗಳಲ್ಲಿ ಮುಖವಾಡದ ವೇಷ ಕಟ್ಟುವ, ತಮ್ಮ ಸರದಿ ಬಂದಾಗಲೆಲ್ಲ ಅವುಗಳ ಜವಾಬ್ದಾರಿಯನ್ನು ಹೊರುತ್ತವೆ. ಕಚೀನಾ ಪುರೋಹಿತರು ಈ ಶಾಶ್ವತ ಮುಖವಾಡಗಳನ್ನು ಧರಿಸಿ ವೇಷಕಟ್ಟಿ ಎಲ್ಲರ ಮುಂದೆ ಕಾಣಿಸಿಕೊಂಡಾಗ ಮಂತ್ರ ಪಠಣ ಮಾಡುತ್ತಾರೆ. ನೃತ್ಯ ಮಾಡುವ ಕಚೀನಾಗಳಂತೆ ಅವರು ನೃತ್ಯ ಮಾಡುವುದಿಲ್ಲ; ಪಂಚಾಂಗ ಬದ್ಧ ಸಂಸ್ಕಾರಗಳಲ್ಲಿ ಕೆಲವು ನಿರ್ದಿಷ್ಟವಾದ ಉತ್ಸವ ಸಂಬಂಧಿ ಕರ್ತವ್ಯಗಳನ್ನು ನಿರ್ವಹಿಸಲು ಬರುತ್ತಾರೆ. ದೀಕ್ಷಾವಿಧಿ ನೀಡುವಲ್ಲಿ ಮಕ್ಕಳನ್ನು ಥಳಿಸಲು ಬರುವವರೂ ಅವರೇ; ವರ್ಷದ ದೊಡ್ಡ ಹಬ್ಬವಾದ ಶಲಾಕೋ ಹಬ್ಬದಲ್ಲಿ ಭಾಗವಹಿಸಲು ಬರುವವರೂ ಅವರೇ; ಹೊಸವರ್ಷದ ಹಬ್ಬಮಾಡಲು ಬರುವವರೂ ಅವರೇ. ಅವರು ತಮ್ಮ ಹಗಲುಗಾಲದ ಮಕ್ಕಳಾದ ಜುನಿ ಮುಖ್ಯ ಪುರೋಹಿತರ, ದೇವತಾ ಮಟ್ಟದ ಪ್ರತಿರೂ

ಹಿಗಳು. ಅವರು ಕಚೀನಾಗಳ ಮುಖ್ಯ ಪುರೋಹಿತರು.

ಜುನಿ ಸಂಸ್ಕಾರ ಸಂಬಂಧಿ ವ್ಯವಸ್ಥೆಯಲ್ಲಿ ಮೂರನೆಯ ಪ್ರಮುಖ ಅಂಗವೆಂದರೆ ಔಷಧ ಸಂಘಗಳು. ಈ ಔಷಧ ಸಂಘಗಳ ಆರಾಧನಾ ದೇವತೆಗಳು ಕಾಡುಮೃಗಗಳು. ಅವುಗಳಲ್ಲಿ ಕರಡಿ ಮುಖ್ಯಸ್ಥ. ನೃತ್ಯಗಾರರು ಕಚೀನಾಗಳ ವೇಷಕಟ್ಟುವಂತೆ, ಔಷಧ ಸಂಘಗಳವರು ಕರಡಿಯ ವೇಷ ಕಟ್ಟುತ್ತಾರೆ. ಮುಖವಾಡಗಳ ಬದಲಿಗೆ ಅವರು ಉಗುರುಗಳ ಸಮೇತ ಇರುವ ಕರಡಿಯ ಮುಂಗಾಲಿನ ಚರ್ಮವನ್ನು ತಮ್ಮ ತೋಳುಗಳಿಗೆ ತೊಟ್ಟುಕೊಳ್ಳುತ್ತಾರೆ. ನೃತ್ಯಗಾರರು ಕಚೀನಾಗಳ ಕೂಗನ್ನು ಮಾತ್ರ ಉಚ್ಚರಿಸುವಂತೆ ಪ್ರಾಣಿದೇವರುಗಳ ವೇಷ ಕಟ್ಟುವವರು ಕರಡಿಯಂತೆ ಭಯಂಕರವಾಗಿ ಗುರುಗುಟ್ಟುತ್ತಾರೆ. ರೋಗ ನಿವಾರಣೆಯ ಪರಮ ಶಕ್ತಿ ಇರುವುದು ಕರಡಿಗೆ. ಕಚೀನಾಗಳಲ್ಲಿಯಂತೆಯೇ , ಇಲ್ಲಿಯೂ ಕರಡಿಯ ದೇಹದ ತತ್ತ್ವವನ್ನು ಬಳಸಿ ಅದರ ಶಕ್ತಿಗಳನ್ನು ಬಲಾತ್ಕಾರದಿಂದ ಪಡೆಯಬಹುದು.

ಔಷಧ ಸಂಘಗಳಲ್ಲಿ ರಹಸ್ಯ ಜ್ಞಾನದ ಒಂದು ಭಂಡಾರವೇ ಇದೆ. ಇದನ್ನು ಸದಸ್ಯರು ತಮ್ಮ ಜೀವನ ಪರ್ಯಂತ ಅಭ್ಯಾಸವಾಗಿ ಕಲಿಯುತ್ತಾರೆ. ಧಗಧಗ ಉರಿಯುವ ಕೆಂಡದ ಮೇಲೆ ನಡೆಯುವುದು, ಕತ್ತಿಗಳನ್ನು ನುಂಗುವುದು. ಮೊದಲಾದ ರಹಸ್ಯ ತಂತ್ರಗಳ ದೀಕ್ಷೆಯ ಉನ್ನತ ಮಟ್ಟವನ್ನು ಮುಟ್ಟಿದ ಮೇಲೆ ಜ್ಞಾನವನ್ನು ಪಡೆಯಬಹುದು. ಸಂಘಗಳ ಎಲ್ಲ ಮಟ್ಟಗಳಲ್ಲೂ ವೈದ್ಯರೇ ಶ್ರೇಷ್ಠರು. ಅವರು ತಮ್ಮ ಜೀವನದ ಪರಮಾವಧಿಯನ್ನು ಮುಟ್ಟಿದವರು; ಈ ಪದವಿ ಬಯಸುವವರು ಈಗಾಗಲೇ ಜ್ಞಾನಗಳಿಸಿರುವವರ ಪದತಲದಲ್ಲಿ ಹಲವಾರು ವರ್ಷಗಳನ್ನು ಕಳೆಯಬೇಕು.

ಕಾಯಿಲೆಯ ಸಂದರ್ಭಗಳಲ್ಲಿ ಈ ವೈದ್ಯರನ್ನು ಆಹ್ವಾನಿಸುತ್ತಾರೆ. ಸಂಘದ ಸೊತ್ತಾದ ಶಕ್ತಿಗಳನ್ನು ಬಳಸಿ ಕಾಯಿಲೆಯನ್ನು ಗುಣಪಡಿಸಲಾಗುವುದು. ರೋಗಿಯು ಈ ಶಕ್ತಿಗಳಲ್ಲಿ ಪಾಲುಗಾರನಾಗಬೇಕಾದ ಹೊಣೆಗಾರಿಕೆಯನ್ನು ಹೊರಬೇಕು. ಆದ್ದರಿಂದ ತನ್ನನ್ನು ಗುಣಪಡಿಸಿದ ವೈದ್ಯನ ಗುಂಪಿನ ಕ್ರಮ ಬದ್ಧವಾದ ಸದಸ್ಯತ್ವವನ್ನು ಅವನು ಗುಣವಾದ ನಂತರ ಪಡೆದುಕೊಳ್ಳಬೇಕು. ಔಷಧ ಸಂಘಗಳಿಗೆ ಪ್ರವೇಶ ದೊರಕಬೇಕಾದರೆ ತೀವ್ರವಾದ ಕಾಯಿಲೆಯನ್ನು ಅನುಭವಿಸಿ ಗುಣಮುಖನಾಗಿರಬೇಕು. ಗಂಡಸರು, ಹೆಂಗಸರು ಇಬ್ಬರೂ ಸದಸ್ಯರಾಗಬಹುದು. ಕಾಯಿಲೆಯಾಗಿರದಿದ್ದರೂ ಸೇರಲು ಬಯಸುವವರಿಗೆ ಇತರ ಸಂಸ್ಕಾರ ಕ್ರಮಗಳಿವೆಯಾದರೂ ಬಹುಮಂದಿ ತೀವ್ರವಾಗಿ ಕಾಯಿಲೆಯಾಗಿ ಗುಣಹೊಂದಿದ ನಂತರವೇ ಸದಸ್ಯತ್ವ ಪಡೆಯುತ್ತಾರೆ. ದೀಕ್ಷಾವಿಧಿ ಬಹಳ ಖರ್ಚಿನದಾಗಿದ್ದು ಸದಸ್ಯತ್ವವು ಪೂರ್ಣರೂಪ ತಳೆಯಲು ಸಾಧಾರಣವಾಗಿ ವರ್ಷಗಳೇ ಹಿಡಿಯುತ್ತವೆ. ದೀಕ್ಷೆ ಪಡೆ

ಯುವವನಿಗೆ ನಾಟಕೀಯವಾಗಿ ಹೊಸದಾಗಿಯೇ ಒಂದು ಹೃದಯ ನೀಡಬೇಕಾಗುತ್ತದೆ.

ಔಷಧ ಸಂಘಗಳು ಜುನಿ ಜನರಲ್ಲಿ ಉನ್ನತ ಸ್ಥಾನಗಳಿಸಿರುವ ಪೂಜಾಪೀಠಗಳು ಹಾಗೂ ಪವಿತ್ರ ವಸ್ತುಗಳನ್ನು ಪಡೆದಿವೆ ವೈದ್ಯರುಗಳ ಹತ್ತಿರ ಸ್ವಲ್ಪವೂ ಕುಂದಿಲ್ಲದ ಮುಸುಕಿನ ಜೋಳದ ತೆನೆಯೊಂದನ್ನು, ಸುಂದರವೂ ಅಮೂಲ್ಯವೂ ಆದ ಹಕ್ಕಿ ಗರಿಗಳಿಂದ ಅಲಂಕರಿಸಿ, ಸೊಗಸಾದ ಬಿದಿರಿನ ಬುಟ್ಟಿಯ ಮೇಲೆ ಕೂರಿಸಿ ಮಾಡಿರುವ ತಮ್ಮದೇ ಆದ ಮಾಂತ್ರಿಕ ವಸ್ತುವಿರುತ್ತದೆ ಆ ವಸ್ತುವಿನ ಒಡೆಯನು ಬದುಕಿರುವವರೆಗೆ ಅವನ ಸಂಘದ ಪೂಜಾಪೀಠಗಳು ಏರ್ಪಟ್ಟಾಗಲೆಲ್ಲ ಅದರ ಮೇಲಿಡಲು ಆ ಮಾಂತ್ರಿಕ ವಸ್ತುವನ್ನು ತರುತ್ತಾನೆ. ಅವನು ತೀರಿಕೊಂಡಾಗ ಅದರ ಬೆಲೆಬಾಳುವ ಗರಿಗಳನ್ನು ತೆಗೆದು ಅವನ ದೇಹದೊಂದಿಗೆ ಗೋರಿಮಾಡುತ್ತಾರೆ.

ಔಷಧ ಸಂಘಗಳು ನಡೆಸುವ ಸಮಾರಂಭವು ಚಳಿಗಾಲದಲ್ಲಿ ಜರುಗುತ್ತದೆ. ಇದೊಂದು ಏಕಾಂತ ತಪಸ್ಸಾಧನೆಯಾಗಿದ್ದು ಅವರ ಕಾರ್ಯಕ್ರಮದ ಪರಮಾವಧಿ ಮಟ್ಟದ ದೊಡ್ಡ ಸಾರ್ವಜನಿಕ ಹಬ್ಬ. ಆ ರಾತ್ರಿ ಪ್ರತಿಯೊಂದು ಸಂಘವೂ ತಮ್ಮ ತಮ್ಮ ಮಂದಿರಗಳಲ್ಲಿ ಸಭೆ ಕೂಡುತ್ತವೆ. ಪೂಜಾಪೀಠಗಳನ್ನು ನಿರ್ಮಿಸಿ, ಸದಸ್ಯರು ಕರಡಿ ಮತ್ತಿತರ ಪ್ರಾಣಿ ದೇವತೆಗಳ ವೇಷ ಕಟ್ಟುತ್ತಾರೆ. ಕಾಯಿಲೆಗಳು ಗುಣವಾಗಿ, ದೇಹಾರೋಗ್ಯ ನೆಟ್ಟಗಾಗುವುದೆಂಬ ಭಾವನೆಯಿಂದ ಪ್ರತಿಯೊಬ್ಬರೂ ಈ ಉತ್ಸವಕ್ಕೆ ಹೋಗುತ್ತಾರೆ.

ಜುನಿಯ ಪ್ರಕಾರ ಯುದ್ಧ, ಬೇಟೆ, ಹಾಸ್ಯಗಾರ ಪಂಥಗಳೆಲ್ಲ ಔಷಧ ಸಂಘಗಳೊಂದಿಗೆ ವರ್ಗೀಕೃತವಾಗಿವೆ. ಪ್ರತಿಯೊಂದರಲ್ಲಿಯೂ ಸ್ವಾಭಾವಿಕವಾಗಿಯೇ ಇವುಗಳಲ್ಲಿ ವ್ಯತ್ಯಾಸಗಳು ಇವೆ. ಯಾರನ್ನಾದರೂ ಕೊಂದಿರುವವರು ಮಾತ್ರ ಯುದ್ಧ ಸಂಘಕ್ಕೆ ಸೇರಿಕೊಳ್ಳುತ್ತಾರೆ. ಕೊಂದ ಸಂದರ್ಭವು ಯಾವುದಾದರೂ ಸರಿಯೇ. ರಕ್ತ ಹರಿಸಿದವನು 'ತನ್ನನ್ನು ಕಾಪಾಡಿಕೊಳ್ಳಲು' ಎಂದರೆ, ಆಪತ್ತಿನಿಂದ ಪಾರಾಗಲು ಈ ಸಂಘಕ್ಕೆ ಸೇರಿಕೊಳ್ಳಬೇಕು. ಈ ಸಂಘದ ಸದಸ್ಯರು ತಲೆಯೋಡುಗಳ ಭಂಡಾರದ ನಿರ್ವಹಣೆಯನ್ನು ಹೊತ್ತು, ಜನರ ರಕ್ಷಕರಾಗಿದ್ದಾರೆ. ಗ್ರಾಮದ ಪಹರೆಯು ಅವರ ಕರ್ತವ್ಯ. ಬೇಟೆಗಾರರ ಸಂಘದ ಸದಸ್ಯರಂತೆ ಇವರು ಚಿಕಿತ್ಸೆಯನ್ನು ಕೈಗೊಳ್ಳುವುದಿಲ್ಲ. ಇದಕ್ಕೆ ಪುರುಷರು ಮಾತ್ರ ಸದಸ್ಯರಾಗಬಹುದು. ಹೀಗೆಯೇ ಹಾಸ್ಯಗಾರರ ಸಂಘವೂ ತನ್ನದೇ ಆದ ವಿಶಿಷ್ಟಾತ್ಮಕ ವ್ಯತ್ಯಾಸಗಳನ್ನು ಹೊಂದಿದ್ದರೂ ಔಷಧ ಸಂಘಗಳಲ್ಲಿಯೇ ಸೇರಿದೆ

ಜುನಿಗಳಿಗೆ ನೃತ್ಯ ಮತ್ತು ಧಾರ್ಮಿಕ ಉತ್ಸವಗಳಲ್ಲಿ ಆಸಕ್ತಿ ಹೆಚ್ಚು. ಇವುಗಳ ಮುಂದೆ ಅವರ ಜೀವನದ ಇತರ ಕಾರ್ಯಗಳೆಲ್ಲವೂ ಗೌಣ. ಮದುವೆ,

ವಿವಾಹವಿಚ್ಛೇದನ ಮೊದಲಾದ ಗೃಹಸಂಬಂಧ ವಿಷಯಗಳು ಮಾಮೂಲು. ಇವುಗಳನ್ನು ವೈಯಕ್ತಿಕವಾಗಿ ಮನತೋಚಿದಂತೆ ಏರ್ಪಡಿಸಿಕೊಳ್ಳುತ್ತಾರೆ. ಜುನಿಯ ಸಾಮಾಜಿಕ ಸಂಸ್ಕೃತಿಯೂ ತೀವ್ರವಾದುದು. ವ್ಯಕ್ತಿಯ ವೈಯಕ್ತಿಕ ವಿಷಯಗಳಿಗೆ ಅಷ್ಟಾಗಿ ತಲೆ ಹಾಕುವುದಿಲ್ಲ. ವಿವಾಹ ಪೂರ್ವ ಪ್ರಣಯಾಚರಣೆ ಇಲ್ಲದೆ ಮದುವೆಯೂ ಏರ್ಪಾಡಾಗುತ್ತದೆ. ಸಂಪ್ರದಾಯಾನುಸಾರವಾಗಿ ಹುಡುಗಿಯು ಹುಡುಗನೊಂದಿಗೆ ಒಂಟಿಯಾಗಿ ಮಾತನಾಡಲು ಅವಕಾಶ ಕಡಮೆ. ಆದರೆ ಸಂಜೆಯ ವೇಳೆ ಹುಡುಗಿಯರೆಲ್ಲ ಕೂಡಿ ನೀರಿನ ಬಿಂದಿಗೆಗಳನ್ನು ಹೊತ್ತು ಚಿಲುಮೆಗಳಿಂದ ನೀರು ತರಲು ಹೋಗುವಾಗ ಹುಡುಗನು ಒಬ್ಬಳನ್ನು ನಿಲ್ಲಿಸಿ ಕುಡಿಯಲು ನೀರು ಕೇಳಬಹುದು. ಅವಳು ಅವನನ್ನು ಇಷ್ಟಪಟ್ಟರೆ ನೀರು ಕೊಡುವಳು. ಮೊಲಗಳ ಬೇಟೆಗಾಗಿ ತನಗೊಂದು ಎಸೆಗೋಲನ್ನು ಮಾಡಿಕೊಡೆಂದು ಕೇಳಬಹುದು. ಅವನು ಬೇಟೆಯಾಡಿದ ಮೊಲಗಳನ್ನು ಅವಳಿಗೆ ತಂದುಕೊಡಬಹುದು. ಹುಡುಗ ಹುಡುಗಿಯರು ಇದಕ್ಕಿಂತ ಹೆಚ್ಚಿನ ಭೇಟಿಗಳನ್ನು ಮಾಡಬಾರದು. ವಿವಾಹಿತರಾಗಿರುವ ಜುನಿ ಮಹಿಳೆಯರಲ್ಲಿ ಬಹು ಮಂದಿ ಇದಕ್ಕಿಂತ ಹೆಚ್ಚಿನ ಲೈಂಗಿಕ ಅನುಭವವಿಲ್ಲದೆ ಮದುವೆಯಾದವರೇ.

ಹುಡುಗನು, ಹುಡುಗಿಯನ್ನು ಮದುವೆಯಾಗಲು ಇಷ್ಟಪಟ್ಟಾಗ, ಹುಡುಗಿಯ ತಂದೆಯನ್ನು ಕೇಳಲು ಅವಳ ಮನೆಗೆ ಹೋಗುತ್ತಾನೆ. ಜುನಿಯ ಆಚಾರ ಪದ್ಧತಿಯಂತೆ ಮೊದಲು ಅವನು ತನ್ನ ಮುಂದೆ ತಂದಿಡುವ ತಿಂಡಿಗಳ ರುಚಿ ನೋಡುತ್ತಾನೆ. ಮನೆಗೆ ಬಂದವರನ್ನೆಲ್ಲ ವಿಚಾರಿಸುವ ರೂಢಿಯಂತೆಯೇ ತಂದೆಯು ಅವನನ್ನು ಬಹುಶಃ ನೀವು 'ಯಾವುದೋ ನಿಮಿತ್ತವಾಗಿ ಬಂದಿರಬೇಕು' ಎಂದು ಕೇಳುತ್ತಾನೆ. ಹುಡುಗ ಅದಕ್ಕೆ 'ಹೌದು, ನಿಮ್ಮ ಮಗಳನ್ನು ಕುರಿತು ಯೋಚಿಸುತ್ತ ಬಂದೆ' ಎಂದು ಉತ್ತರ ನೀಡುತ್ತಾನೆ. 'ಅವಳ ಪರವಾಗಿ ನಾನು ಮಾತನಾಡಲಾರೆ. ಅವಳೇ ಹೇಳಲಿ' ಎಂದು ಹೇಳಿ ತಂದೆ ಮಗಳನ್ನು ಕರೆಯುತ್ತಾನೆ. ಅವಳು ಇಷ್ಟಪಟ್ಟಲ್ಲಿ ತಾಯಿಯು ಒಂದು ಕೋಣೆಗೆ ಹೋಗಿ ಹುಲ್ಲಿನ ಹಾಸಿಗೆ ಹಾಸುತ್ತಾಳೆ. ಹುಡುಗನೂ, ಹುಡುಗಿಯೂ ಒಟ್ಟಿಗೆ ಆ ಕೋಣೆಯಲ್ಲಿ ತಂಗುತ್ತಾರೆ. ಮರುದಿನ ಅವಳು ಅವನ ತಲೆಯನ್ನು ತೊಳೆಯುತ್ತಾಳೆ. ನಾಲ್ಕು ದಿನಗಳ ನಂತರ ಅವಳು ಒಳ್ಳೆಯ ಉಡುಪುಗಳನ್ನು ಧರಿಸಿ ಒಂದು ದೊಡ್ಡ ಬುಟ್ಟಿಯ ತುಂಬ ಮುಸುಕಿನ ಜೋಳದ ಹಿಟ್ಟನ್ನು ಕಾಣಿಕೆಯಾಗಿ ಅವನ ತಾಯಿಯ ಮನೆಗೆ ಒಯ್ಯುತ್ತಾಳೆ. ಮುಂದಕ್ಕೆ ಬೇರಾವ ಔಪಚಾರಿಕ ಸಮಾರಂಭಗಳೂ ಇಲ್ಲ. ಈ ವಿಚಾರದಲ್ಲಿ ಸಾಮಾಜಿಕವಾದ ಆಸಕ್ತಿಯೂ ಬಹಳ ಕಡಮೆ.

ಗಂಡಹೆಂಡಿರಿಬ್ಬರೂ ಒಟ್ಟಿಗೆ ಸಂತೋಷವಾಗಿ ದಾಂಪತ್ಯ ಜೀವನ ನಡೆಸಲಾಗ

ದಿದ್ದು. ಬೇರೆಯಾಗುವ ಯೋಚನೆ ಬಂದರೆ, ಅದರಲ್ಲೂ ಮುಖ್ಯವಾಗಿ ಮಕ್ಕಳಿಲ್ಲವಾದರೆ ಹೆಂಡತಿಯು ಉತ್ಸವ ಸಂಬಂಧವಾದ ಔತಣಗಳಲ್ಲಿ ಬಡಿಸಲು ಹೋಗುವುದನ್ನು ಆರಂಭಿಸುತ್ತಾಳೆ. ಅಲ್ಲಿನ ಸರಸ ಸಲ್ಲಾಪಗಳಲ್ಲಿ ತನಗೆ ಸೂಕ್ತನಾದ ಮನುಷ್ಯನನ್ನು ಕಂಡುಕೊಂಡರೆ ಅವರವರ ಭೇಟಿ ಏರ್ಪಡುತ್ತದೆ. ಜುನಿಗಳಲ್ಲಿ ಹೆಂಗಸಿಗೆ ಹೊಸ ಗಂಡನನ್ನು ಪಡೆಯುವುದು ಕಠಿಣ ವಿಷಯವಲ್ಲ. ಅವರಲ್ಲಿ ಹೆಂಗಸರ ಸಂಖ್ಯೆ ಗಂಡಸರಿಗಿಂತ ಕಡಮೆ. ಗಂಡಸು ತನ್ನ ತಾಯಿಯ ಮನೆಯಲ್ಲಿರುವುದಕ್ಕಿಂತ ಹೆಂಡತಿಯೊಂದಿಗೆ ಬಾಳುವುದು ಹೆಚ್ಚು ಗೌರವಾನ್ವಿತವಾದುದು. ಗಂಡಸರು ಸದಾ ಮದುವೆಗೆ ಸಿದ್ಧರು. ಮದುವೆಯಾದ ಹೆಂಗಸಿಗೆ ತನ್ನನ್ನು ಬೇರೊಬ್ಬ ಗಂಡಸು ಮದುವೆಯಾಗಲು ಸಿದ್ಧನಿದ್ದಾನೆ ಎಂಬುದು ಖಂಡಿತವಾದ ಮೇಲೆ, ಅವಳು ತನ್ನ ಗಂಡನ ಒಡವೆ ವಸ್ತುಗಳನ್ನು ಕೂಡಿಸಿ ಬಾಗಿಲು ಕಟ್ಟೆಯ ಮೇಲೆ ಇಡುತ್ತಾಳೆ. ಹಿಂದಿನ ಕಾಲದಲ್ಲಿ ಇದನ್ನೇ ಮನೆ ಬಾಗಿಲ ಮೇಲ್ಛಾವಣಿಯ ಮೇಲೆ ಇಡುತ್ತಿದ್ದುದುಂಟು. ಆ ವಸ್ತುಗಳೇನೂ ಹೆಚ್ಚಿಲ್ಲ. ಗಂಡನ ಪಚ್ಚೆನ ಜೊತೆ ಚಡಾವು, ನೃತ್ಯದಲ್ಲಿ ಅವನು ಧರಿಸುವ ಲುಂಗಿ ಮತ್ತು ಅಂಗಿ, ಅವನಲ್ಲಿದ್ದರೆ ಪ್ರಾರ್ಥನಾ ದಂಡಗಳಿಗೆ ಬಳಸುವ ಅಮೂಲ್ಯವಾದ ಗರಿಗಳ ಪೆಟ್ಟಿಗೆ, ಪ್ರಾರ್ಥನಾ ದಂಡಗಳಿಗೆ ಮತ್ತು ಮುಖವಾಡಕ್ಕೆ ಪುನರಲಂಕಾರಕ್ಕೆ ಬಳಿಯುವ ಬಣ್ಣದ ಕುಡಿಕೆಗಳು, ಇವೇ ಆ ವಸ್ತುಗಳು. ಮುಖ್ಯವಾದಂತಹ ಸಂಸ್ಕಾರ ಸಂಬಂಧವಾದ ವಸ್ತುಗಳನ್ನು ಅವನು ತನ್ನ ತಾಯಿಯ ಮನೆಯಿಂದ ತಂದೇ ಇರುವುದಿಲ್ಲ. ಅವನು ಸಂಜೆ ಮನೆಗೆ ಬಂದಾಗ ತನ್ನ ವಸ್ತುಗಳ ಪುಟ್ಟ ಗಂಟನ್ನು ನೋಡಿ ಅವನ್ನೆತ್ತಿಕೊಂಡು, ಅಳುತ್ತಾ ಅದರೊಂದಿಗೆ ತನ್ನ ತಾಯಿಯ ಮನೆಗೆ ಹಿಂತಿರುಗುತ್ತಾನೆ. ಅಲ್ಲಿ ಅವನೊಂದಿಗೆ ಕುಟುಂಬದವರೂ ಅಳುತ್ತಾರೆ. ತಾವು ಅದೃಷ್ಟ ಹೀನರೆಂದು ತಿಳಿಯುತ್ತಾರೆ. ವಾಸಸ್ಥಾನದ ಬದಲಾವಣೆಯು ಸಮಯೋಚಿತವಾದ ಹರಟೆಯ ವಸ್ತುವಾಗಿ ಹೋಗುತ್ತದೆ. ತೀವ್ರವಾದ ಮನಸ್ತಾಪಗಳು ಅಪರೂಪ. ಗಂಡಂದಿರೂ, ಹೆಂಡತಿಯರೂ ನಿಯಮಕ್ಕೆ ಬದ್ಧರು. ಇದರಿಂದಾಗಿ ಅವರು ಅತಿರೇಕ, ಅಬ್ಬರ, ಅಸೂಯೆ ಇಲ್ಲವೇ ದ್ವೇಷಗಳಿಗೆ ಆಸ್ಪದ ಕೊಡುವುದಿಲ್ಲ. ಬಿಡಿಸಿಕೊಳ್ಳಲಾಗದ ಸಂಬಂಧ ಅವರಲ್ಲಿಲ್ಲ.

ವಿವಾಹ ಮತ್ತು ವಿಚ್ಛೇದನಗಳು ಹೀಗೆ ಅನಿಶ್ಚಿತ ರೀತಿಯವಾಗಿದ್ದರೂ ಬಹುತೇಕ ಜುನಿ ವಿವಾಹಗಳು ಬಾಳಿನ ಬಹುಪಾಲು ಭಾಗ ಭದ್ರವಾಗಿರುತ್ತವೆ. ಕಾದಾಟವನ್ನು ಯಾರೂ ಬಯಸುವುದಿಲ್ಲ. ಬಹುಪಾಲು ವಿವಾಹಿತರು ಶಾಂತರೀತಿಯ ಜೀವನ ನಡೆಸುತ್ತಾರೆ. ಜುನಿಗಳ ವಿವಾಹ ಕಾರ್ಯವು ಅಮೆರಿಕನ್ನರ ಸಂಸ್ಕೃತಿಯಲ್ಲಿರುವಂತೆ ಕೇವಲ ಬರಿಯ ಒಂದು ಸಾಮಾಜಿಕ ಕೂಟವಲ್ಲ. ಜುನಿಗಳ ಮದುವೆ

ಗಳು ಅತ್ಯಂತ ಸ್ಥಿರವಾದುವು. ಮದುವೆಯಲ್ಲಿನ ಸಾಮಾಜಿಕ ಬಂಧನ ಹೆಚ್ಚು ಬಿಗಿಯಾದುದು. ಈ ವಿಷಯದಲ್ಲಿ ಜುನಿಯರ ವೈವಾಹಿಕ ಜೀವನವು ಅಮೆರಿಕನರ ಪದ್ಧತಿಗಿಂತ ತೀರ ಭಿನ್ನವಾದುದು.

ಈ ಸಾಮಾಜಿಕ ಬಂಧವು ಸ್ತ್ರೀ ಸಂತಾನ ಕುಟುಂಬ. ಈ ಸ್ತ್ರೀ ಸಂತಾನ ಕುಟುಂಬವು ಪವಿತ್ರ ವಸ್ತುಗಳ ಒಡೆತನ ಮತ್ತು ಸಂರಕ್ಷಣೆಗಾಗಿ ವಿಧಿವಿಹಿತವಾದ ಒಕ್ಕೂಟ. ಮನೆ ಹಾಗೂ ಮನೆಯಲ್ಲಿರುವ ಧಾನ್ಯ ಎಲ್ಲವೂ ಮನೆತನದ ಸ್ತ್ರೀಯರಿಗೆ ಎಂದರೆ ಅಜ್ಜಿ, ಅವಳ ಸಹೋದರಿಯರು, ಅವಳ ಹೆಣ್ಣು ಮಕ್ಕಳಿಗೆ ಸೇರಿದುದು. ವಿವಾಹದ ಪರಿಣಾಮ ಏನೇ ಆಗಲಿ ಮನೆತನದ ಹೆಂಗಸರು ಮಾತ್ರ ತಮ್ಮ ಜೀವನ ಪರ್ಯಂತ ತಮ್ಮ ಮನೆಯಲ್ಲೇ ಇರುತ್ತಾರೆ. ಅವರದು ಒಮ್ಮತ ಜೀವನ. ಅವರು ಪವಿತ್ರತೆಗೆ ಹೆಚ್ಚು ಗಮನ ಕೊಡುತ್ತಾರೆ. ಪವಿತ್ರ ವಸ್ತುಗಳನ್ನೇ ತಿನ್ನುತ್ತಾರೆ. ಅವರ ರಹಸ್ಯಗಳು ಅವರಲ್ಲೇ ಇರುತ್ತವೆ. ಅವರ ಗಂಡಂದಿರೂ ಹೊರಗಿನವರು. ಇವರಿಗೆ ಮನೆಯ ಮುಖ್ಯ ಕಾರ್ಯ ಪ್ರಸಂಗಗಳ ಪರಿಚಯ ಅಷ್ಟಾಗಿರುವುದಿಲ್ಲ. ಆದ್ದರಿಂದ ಎಲ್ಲ ಮುಖ್ಯ ಪ್ರಸಂಗಗಳಲ್ಲೂ ಅವರೊಂದಿಗೆ ಒಂದಾಗುವವರು ಬೇರೆ ಕುಲಗಳ ಮನೆಗಳೊಂದಿಗೆ ವಿವಾಹ ಸಂಬಂಧ ಬೆಳೆಸಿಕೊಂಡಿರುವ ಅವರ ಸಹೋದರರೇ; ಮನೆಯ ಪವಿತ್ರ ವಸ್ತುಗಳನ್ನು ಪೂಜಾಪೀಠಗಳ ಮುಂದೆ ಅಣಿಮಾಡಿದಾಗ ಆ ಸಹೋದರರು ಏಕಾಂತ ತಪಸ್ಸಾಧನೆಗಾಗಿ ಮನೆಗೆ ಹಿಂತಿರುಗಿ ಬರುತ್ತಾರೆ. ತಮ್ಮ ಪವಿತ್ರ ಗಂಟಿಗೆ ಸಂಬಂಧ ಪಟ್ಟ ಪದಶುದ್ಧವಾದ ಮಂತ್ರಪಾಠಗಳನ್ನು ಕಲಿತು, ಉಳಿಸಿಕೊಳ್ಳುವವರು ಸಹೋದರರೇ ಹೊರತು ಹೆಂಗಸರಲ್ಲ. ಪ್ರತಿಯೊಂದು ಪ್ರಮುಖ ಸಂದರ್ಭಕ್ಕೂ ಗಂಡಸು ತನ್ನ ತಾಯಿಯ ಮನೆಗೆ ಹೋಗುತ್ತಾನೆ. ತಾಯಿ ಕಾಲವಾದಾಗ ಅದು ಅವನ ಸಹೋದರಿಯ ಮನೆಯಾಗುತ್ತದೆ. ಒಂದು ವೇಳೆ ಅವನ ವಿವಾಹ ಸಂಬಂಧ ಮುರಿದು ಬಿದ್ದರೆ ಅವನಿಗೆ ಈ ಮನೆಯೇ ಶಾಶ್ವತ.

ರಕ್ತ ಸಂಬಂಧವಿರುವವರು ಆ ಮನೆಗೆ ಒಡೆಯರಾಗುತ್ತಾರೆ. ಮನೆಯ ಪವಿತ್ರ ವಸ್ತುಗಳನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬರುವುದು ಅವರ ಕರ್ತವ್ಯ. ಇವರದು ಜುನಿಗಳಲ್ಲಿ ಒಂದು ಮುಖ್ಯ ಗುಂಪು. ಈ ರಕ್ತ ಸಂಬಂಧಿ ಗುಂಪು ಶಾಶ್ವತವಾದುದು. ಅದಕ್ಕೆ ಮುಖ್ಯವಾದ ಹೊಣೆಗಾರಿಕೆಗಳಿವೆ. ಆದರೆ ಅದು ಆರ್ಥಿಕವಾಗಿ ಕಾರ್ಯ ನಿರತರಾಗಿರುವ ಗುಂಪಲ್ಲ. ವಿವಾಹಿತನಾಗಿರುವ ಪ್ರತಿಯೊಬ್ಬ ಮಗನೂ, ಪ್ರತಿಯೊಬ್ಬ ಸಹೋದರನೂ ತನ್ನ ಹೆಂಡತಿಯ ಉಗ್ರಾಣವನ್ನು ತುಂಬಿಸುವುದಕ್ಕಾಗಿ ಪೈರು ಬೆಳೆಯಲು ತನ್ನ ಶ್ರಮವನ್ನು ವಿನಿಯೋಗಿಸುತ್ತಾನೆ. ತನ್ನ ತಾಯಿ ಅಥವಾ ಸಹೋದರಿಯ ಮನೆಯಲ್ಲಿ ಗಂಡಾಳುಗಳ ಕೊರತೆಯಿದ್ದಾಗ

ಹುತ್ರ, ಅವನು ತನ್ನ ರಕ್ತ ಸಂಬಂಧೀ ಗುಂಪಿನ ಹೊಲಗಳ ಕಡೆ ತನ್ನ ಗಮನ ಹರಿಸುತ್ತಾನೆ. ವಯಸ್ಸಾದ ಅಜ್ಜಿ, ಅವಳ ಗಂಡ, ಅವಳ ಹೆಣ್ಣು ಮಕ್ಕಳು ಮತ್ತು ಅವರ ಗಂಡಂದಿರುಗಳೆಲ್ಲ ಮನೆತನದ ಆರ್ಥಿಕ ಗುಂಪು. ಇವರೆಲ್ಲರೂ ಒಟ್ಟಿಗೆ ಜೀವಿಸುತ್ತಾರೆ. ಗಂಡಂದಿರು ಆರ್ಥಿಕ ಗುಂಪಿನಲ್ಲಿ ಪರಿಗಣನೆಗೆ ಬರುತ್ತಾರೆ. ಆದರೆ ಶಿಷ್ಟಾಚಾರ ಗುಂಪಿನಿಂದ ಅವರು ಹೊರಗೆ.

ಹೆಂಗಸರ ಮಟ್ಟಿಗೆ ಈ ಯಾವ ಘರ್ಷಣೆಯೂ ಇಲ್ಲ. ತಮ್ಮ ಗಂಡಂದಿರ ಗುಂಪುಗಳ ಬಗ್ಗೆ ಅವರಲ್ಲಿ ಯಾವ ನಿಷ್ಠೆಯೂ ಇಲ್ಲ. ಆದರೆ ಪ್ರತಿಯೊಬ್ಬ ಗಂಡಸಿಗೂ ನಿಷ್ಠೆ ಇಬ್ಬಗೆ. ಅವರು ಒಂದು ಗುಂಪಿನಲ್ಲಿ ಗಂಡಂದಿರು ಇನ್ನೊಂದರಲ್ಲಿ ಸಹೋದರರು. ಶಾಶ್ವತವಾದ ಪೂಜ್ಯವಸ್ತುಗಳನ್ನು ಒಪ್ಪಗೊಳಿಸುವ ಹೊಣೆಯಿರುವ ಮುಖ್ಯವಾದ ಕುಟುಂಬಗಳಲ್ಲಿ ಸಹೋದರನಾಗಿ ಗಂಡಸಿಗೆ ಹೆಚ್ಚು ಸಾಮಾಜಿಕ ಬಲ ಇದೆ. ಪ್ರತಿಯೊಂದು ಕುಟುಂಬದಲ್ಲಿಯೂ ಗಂಡಸಿನ ಸ್ಥಾನಮಾನಗಳು ನಮ್ಮಲ್ಲಿರುವಂತೆ ಅನ್ನ ತರುವವನು ಎಂಬ ಸ್ಥಾನದಿಂದ ನಿರ್ಧಾರಿತವಾಗದೆ, ಮನೆತನದ ಪೂಜ್ಯ ವಸ್ತುಗಳೊಂದಿಗೆ ಅವನ ಸಂಬಂಧವೇನು ಎಂಬುದನ್ನು ಹೊಂದಿಕೊಂಡಿದೆ. ತನ್ನ ಹೆಂಡತಿಯ ಮನೆಯ ಸಾಂಸ್ಕೃತಿಕ ಆಸ್ತಿಗಳೊಂದಿಗೆ ಯಾವ ರೀತಿಯ ಸಂಬಂಧದ ಬಲವನ್ನು ಪಡೆಯದೆ ಇರುವ ಗಂಡನು ಕಾಲಕ್ರಮೇಣ ತನ್ನ ಮಕ್ಕಳು ವಯಸ್ಕರಾದ ಹಾಗೆ ಮನೆತನದಲ್ಲಿ ಸ್ಥಾನಮಾನ ಗಳಿಸಿಕೊಳ್ಳುತ್ತಾನೆ. ಅವನು ಇಪ್ಪತ್ತು ವರ್ಷ ಕಾಲ ಬಾಳಿರಬಹುದಾದ ಮನೆಯಲ್ಲಿ ಮಕ್ಕಳ ತಂದೆಯಾಗಿ ಅಲ್ಪಸ್ವಲ್ಪ ಅಧಿಕಾರ ಗಳಿಸಬಹುದೇ ಹೊರತು ಅವರಿಗೆ ಅನ್ನ ನೀಡುವವನಾಗಿಯಾಗಲಿ, ಅವರ ತಾಯಿಯ ಪತಿಯಾಗಿಯಾಗಲಿ ಅಲ್ಲ.

ಜೂನಿಗಳಲ್ಲಿ ವಂಶ ಸಂಬಂಧವನ್ನು ನಿರ್ಧರಿಸುವಾಗ ಮಾತ್ರ ಆರ್ಥಿಕ ವಿಚಾರಗಳು ಬರುತ್ತವೆ. ಇತರ ಸಂದರ್ಭಗಳಲ್ಲಿ ಇವು ಅಷ್ಟೊಂದು ಪ್ರಮುಖವಲ್ಲ. ಇತರ ಪ್ಯೆಬ್ಲೋಗಳಂತೆಯೇ ಅಥವಾ ಅವರುಗಳಿಗಿಂತ ಹೆಚ್ಚಿನದೆಂದೇ ಹೇಳಬಹುದಾದಷ್ಟು ಮಟ್ಟಿಗೆ, ಜೂನಿ ಪ್ರದೇಶವು ಶ್ರೀಮಂತವಾಗಿದೆ. ಅಲ್ಲಿ ತೋಟಗಳಿವೆ, ಪೀಚ್ ಹಣ್ಣಿನ ತೋಟಗಳಿವೆ ; ಕುರಿಗಳಿವೆ ; ಬೆಳ್ಳಿ, ವೈಡೂರ್ಯಗಳು ಇವೆ. ಒಬ್ಬ ತನಗಾಗಿಯೇ ಒಂದು ಮುಖವಾಡ ಮಾಡಿಸಿಕೊಳ್ಳಲೋ, ಮಂತ್ರವಾದ ಕಲಿಯಲು ದಕ್ಷಿಣೆ ನೀಡಲೋ, ಶಲಾಕೋ ಹಬ್ಬದಲ್ಲಿ ಬಣ್ಣದ ಮುಖವಾಡದ ದೇವತೆಗಳನ್ನು ಬರಮಾಡಿಕೊಳ್ಳಲೋ ಅವು ಬಳಕೆಯಾಗುವುದರಿಂದ ಇವೆಲ್ಲವೂ ಅವನಿಗೆ ಮುಖ್ಯವಾದುವು. ಶಲಾಕೋವಿನಲ್ಲಿ ಬಣ್ಣದ ಮುಖವಾಡದ ದೇವತೆಗಳನ್ನು ಬರಮಾಡಿಕೊಳ್ಳಲು, ದೇವತೆಗಳು ಗೃಹ ಪ್ರವೇಶ ಸಮಾರಂಭದಲ್ಲಿ ಬಂದು ಹರಸಲು ಅನುವಾಗುವಂತೆ ಅವನು ಒಂದು ಹೊಸ ಮನೆಯನ್ನು ಕಟ್ಟಬೇಕು. ತನಗಾಗಿ ಕಟ್ಟಡದ ಕೆಲಸ ಮಾಡುವ

ತನ್ನ ಸಂಘದ ಸದಸ್ಯರಿಗೆ ವರ್ಷ ಪೂರಾ ಊಟದ ವ್ಯವಸ್ಥೆ ಮಾಡಬೇಕು. ಮೇಲ್ಛಾಧಿಯ ತೊಲೆಗಳಿಗಾಗಿ ದೊಡ್ಡ ದಿಮ್ಮಿಗಳನ್ನು ಒದಗಿಸಿಕೊಳ್ಳಬೇಕು. ಅಂತಿಮ ಸಮಾರಂಭದಲ್ಲಿ ಇಡೀ ಬಣವನ್ನೇ ಬರಮಾಡಿಕೊಳ್ಳಬೇಕು. ಕೊನೆ ಮೊದಲಿಲ್ಲದಷ್ಟು ಹೊಣೆಗಾರಿಕೆ ಹೊತ್ತುಕೊಳ್ಳಬೇಕು. ಈ ಉದ್ದೇಶದಿಂದ ಹಿಂದಿನ ವರ್ಷ ಅವನು ಹೆಚ್ಚಿಗೆ ಪೈರು ಬೆಳೆದಿರುತ್ತಾನೆ. ತನ್ನ ಕುರಿ ಮಂದೆಯನ್ನು ವೃದ್ಧಿ ಪಡಿಸಿಕೊಂಡಿರುತ್ತಾನೆ. ತನ್ನ ಕುಲದವರಿಂದ ಅವನು ಸಹಾಯ ಪಡೆಯುತ್ತಾನೆ. ಅದನ್ನೆಲ್ಲ ಅವನು ಅದೇ ರೀತಿಯ ನೆರವಿನ ಮೂಲಕವೇ ತೀರಿಸಬೇಕು. ಪ್ರತಿಷ್ಠಿತ ವ್ಯಕ್ತಿ ತನ್ನ ಸಂಪತ್ತನ್ನು ಹೀಗೆ ಬಳಸಬೇಕಾದುದು ಅನಿವಾರ್ಯ. ಆದರೆ ಅವನ ದೃಷ್ಟಿಯಲ್ಲಾಗಲಿ. ಇತರರ ದೃಷ್ಟಿಯಲ್ಲಾಗಲಿ ಸಂಪತ್ತನ್ನು ಎಣಿಕೆ ಹಾಕುವುದು ಮುಖ್ಯವಲ್ಲ; ಅವನು ಗಳಿಸಿದ ಸಾಂಸ್ಕಾರಿಕ ಸ್ಥಾನಮಾನವೇ ಮುಖ್ಯ. ಈ ಜನರ ದೃಷ್ಟಿಯಲ್ಲಿ ಶಾಶ್ವತವಾದ ಪೂಜ್ಯವಸ್ತುಗಳನ್ನು ಪಡೆದಿರುವ ಕುಟುಂಬವು 'ಪ್ರತಿಷ್ಠಿತ' ಕುಟುಂಬ, ಹಲವು ಸಾಂಸ್ಕಾರಿಕ ಪಾತ್ರಗಳನ್ನು ನಿರ್ವಹಿಸುವಾತ ಪ್ರಮುಖ ವ್ಯಕ್ತಿ.

ಸಾಂಸ್ಕಾರಿಕ ಹಕ್ಕುಗಳ ನಿರ್ವಹಣೆಯಲ್ಲಿ ಸಂಪತ್ತಿನ ಪಾತ್ರ ಅದೆಷ್ಟು ಸಣ್ಣದಾಗಲು ಪರಂಪರಾಗತವಾದ ಎಲ್ಲ ವ್ಯವಸ್ಥೆಗಳೂ ಉದ್ದೇಶಿತವಾಗಿವೆ. ಸಾಂಸ್ಕಾರಿಕ ವಸ್ತುಗಳು ವ್ಯಕ್ತಿಗಳ ಆಸ್ತಿಯೆಂದು ಪರಿಗಣಿತವಾಗಿದ್ದರೂ, ಅವುಗಳನ್ನು ಸಾಧಿಸಿಕೊಳ್ಳಲು ಹಣ ಮತ್ತು ಪರಿಶ್ರಮಗಳನ್ನು ವೆಚ್ಚ ಮಾಡಬೇಕಾಗಿದ್ದರೂ ಅವುಗಳನ್ನು ಬಳಸಬಲ್ಲ ಯಾರೇ ಆದರೂ ಅವುಗಳನ್ನು ಬಳಸಲು ಸ್ವತಂತ್ರನು. ಕೆಲವು ಪವಿತ್ರ ವಸ್ತುಗಳಂತೂ, ಅವುಗಳನ್ನು ಕೈಯ್ಯಾಡಿಸಲು ಯೋಗ್ಯತೆ ಪಡೆದವರ ಹೊರತು ಇತರರು ಮುಟ್ಟುವುದು ಸಹ ಅಪಾಯಕರ. ಆದರೆ ಈ ತಡೆ ಸಂಪತ್ಸಂಬಂಧವಾದ ತಡೆಯಲ್ಲ. ಬೇಟೆಗಾರರ ತಾಯಿತ ವಸ್ತುಗಳು ಬೇಟೆಗಾರ ಸಂಘದ ಆಸ್ತಿಯಾದರೂ, ಬೇಟೆಗೆ ಹೋಗುವ ಯಾರೇ ಆದರೂ ಅವುಗಳನ್ನು ತನ್ನ ಬಳಕೆಗೆ ತೆಗೆದೊಯ್ಯಬಹುದು. ಪವಿತ್ರವಸ್ತುಗಳನ್ನು ಬಳಸುವಾಗ ವಹಿಸಬೇಕಾದ ಹೊಣೆಗಾರಿಕೆಯನ್ನು ಅವನೂ ವಹಿಸಬೇಕು. ಪ್ರಾರ್ಥನಾ ದಂಡಗಳನ್ನು ನೆಡಬೇಕು. ನಾಲ್ಕು ದಿನಗಳ ಕಾಲ ಬ್ರಹ್ಮಚರ್ಯವನ್ನೂ, ದಾನಶೀಲತೆಯನ್ನೂ ಕೈಗೊಳ್ಳಬೇಕು. ಅವನು ಯಾವ ರೀತಿಯ ಶುಲ್ಕವನ್ನೂ ತೆರಬೇಕಾಗಿಲ್ಲ. ತಾಯಿತಗಳನ್ನು ಸ್ವಂತ ಆಸ್ತಿಯಾಗಿ ಪಡೆದ ಮಾತ್ರಕ್ಕೇ ಅವುಗಳ ದೈವೀಕ ಬಲದ ಸರ್ವಮಾನ್ಯತೆಯನ್ನು ಪಡೆದಂತಲ್ಲ. ಅಂತೆಯೇ ಮುಖವಾಡವಿಲ್ಲದವನು ಇತರರಿಂದ ಅದನ್ನು ಎರವಲು ಪಡೆಯಬಹುದು; ಆ ಮಾತ್ರಕ್ಕೆ ಅವನು ತಿರುಪೆಯವನೆಂದೋ, ದೀನನೆಂದೋ ಪರಿಗಣಿತವಾಗುವುದಿಲ್ಲ.

ಜುನಿಗಳಲ್ಲಿ ಸಾಂಸ್ಕಾರಿಕ ವಸ್ತುಗಳ ಒಡೆತನ ಹಾಗೂ ಆಸ್ತಿಹಕ್ಕುಗಳ

ನಡುವೆ ಇರುವ ಈ ವಿಶಿಷ್ಟ ಅಂತರವಲ್ಲದೇ ಇತರ ಬಹುತೇಕ ವ್ಯವಸ್ಥೆಗಳೂ ಸಹ ಸಂಪತ್ತಿನ ಪ್ರಾಮುಖ್ಯತೆಯನ್ನು ಕಿರಿದುಗೊಳಿಸಿವೆ. ಹೆಚ್ಚಿನ ಸಂಪತ್ತು ಹೊಂದಿರುವವನಿಗಿಂತಲೂ ಹೆಚ್ಚಿನ ಸಂಸ್ಕಾರಗಳು ಹಾಗೂ ಹಲವಾರು ಸಾಂಸ್ಕಾರಿಕ ಹಕ್ಕುಗಳನ್ನು ಹೊಂದಿರುವ ಕುಲದ ಸದಸ್ಯತ್ವವನ್ನು ಪಡೆದವನು ಹೆಚ್ಚು ಶ್ರೇಷ್ಠ. ಅವನು ಬಡವನೇ ಆದರೂ ಸಾಂಸ್ಕಾರಿಕ ಸ್ಥಾನ ಮಾನಗಳನ್ನು ನಿರ್ವಹಿಸಲು ಮೇಲಿಂದ ಮೇಲೆ ಅವನಿಗೆ ಆಹ್ವಾನ ನೀಡಲಾಗುತ್ತದೆ. ಇಷ್ಟಲ್ಲದೆ, ಬಹುತೇಕ ಸಾಂಸ್ಕಾರಿಕ ಕಾರ್ಯ ನಿರ್ವಹಣೆಯು ಒಂದು ಗುಂಪಿನ ಜನರ ಜವಾಬ್ದಾರಿಯಾಗಿರುತ್ತದೆ. ಜೀವನದ ಇತರ ಸಂದರ್ಭಗಳಲ್ಲಿಯಂತೆಯೇ ಒಬ್ಬ ವ್ಯಕ್ತಿಯು ಗುಂಪಿನ ಸದಸ್ಯನಾಗಿ ಸಾಂಸ್ಕಾರಿಕ ಸ್ಥಾನಮಾನಗಳನ್ನು ನಿರ್ವಹಿಸುತ್ತಾನೆ. ಹೋಲಿಕೆಯಿಂದ ಅವನು ಬಡವನೇ ಆಗಿದ್ದರೂ, ಅವನ ಮನೆತನ ಅಥವಾ ಕಿವಾ ಸಾಂಸ್ಕಾರಿಕ ಅವಶ್ಯಕತೆಗಳನ್ನು ಪೂರೈಸಿಕೊಟ್ಟು ಅವನ ಮೂಲಕ ಕಾರ್ಯನಿರ್ವಹಣೆ ಮಾಡಿಸುತ್ತದೆ. ಅವನ ಈ ಪಾತ್ರ ನಿರ್ವಹಣೆಯಿಂದಾಗಿ ಲಭ್ಯವಾಗುವ ಪ್ರಬಲ ವರಶಕ್ತಿಯಿಂದ ಆ ಗುಂಪಿಗೆ ಶ್ರೇಯಸ್ಸಾಗುತ್ತದೆ. ಆತ್ಮಗೌರವವುಳ್ಳ ಒಬ್ಬ ವ್ಯಕ್ತಿಗೆ ನೀಡಲಾಗುವ ಸಾಂಸ್ಕಾರಿಕ ಸ್ಥಾನಮಾನ ಅವನು ಗಳಿಸಿರುವ ಸಂಪತ್ತನ್ನು ಪರಿಗಣಿಸಿನೀಡುವಂತಹುದಲ್ಲ.

ಪ್ವೆಬ್ಲೋಗಳು ಸಂಸ್ಕಾರಪ್ರಿಯರು. ಆದರೆ ಅವರು ಉತ್ತರ ಅಮೇರಿಕ ಮತ್ತು ಮೆಕ್ಸಿಕೋದ ಇತರ ಜನರಿಂದ ಬೇರ್ಪಟ್ಟಿರುವುದಕ್ಕೆ ಇದೇ ಮೂಲ ಕಾರಣವಲ್ಲ. ಅವರ ನಡುವೆ ಇರುವ ವ್ಯತ್ಯಾಸವು ಅವರಲ್ಲಿ ಈಗ ಸಂಸ್ಕಾರವಿಧಿಗಳಲ್ಲಿ ಕಂಡುಬರುವ ವ್ಯತ್ಯಾಸಗಳಿಗಿಂತಲೂ ಆಳವಾಗಿದೆ. ಮೆಕ್ಸಿಕೋದ ಆಜ್ಟೆಕ್ ನಾಗರಿಕತೆಯು ಪ್ವೆಬ್ಲೋಗಳಷ್ಟೇ ಸಂಸ್ಕಾರ ನಿರತವಾಗಿತ್ತು. ಮೈದಾನ ಸೀಮೆಯ ನಮ್ಮ ದೇಶದ ಜನರು ತಮ್ಮ ಸೂರ್ಯನೃತ್ಯ, ಪುರುಷರ ಸಂಘಗಳು, ಹೊಗೆಸೊಪ್ಪಿನ ಪಂಥಗಳು ಮತ್ತು ಯುದ್ಧ ಸಂಸ್ಕಾರಗಳಿಂದಾಗಿ ಪ್ವೆಬ್ಲೋಗಳಿಗಿಂತಲೂ ಹೆಚ್ಚು ಶ್ರೀಮಂತ ಕರ್ಮಾಚರಣೆಯನ್ನು ಪಡೆದಿದ್ದಾರೆ.

ಪ್ವೆಬ್ಲೋಗಳು ಮತ್ತು ಉತ್ತರ ಅಮೇರಿಕದ ಇತರ ಸಂಸ್ಕೃತಿಗಳ ನಡುವಣ ಮೂಲಭೂತ ಭಿನ್ನಭಾವವನ್ನು ನೀತ್ಸೆಯು ತನ್ನ ಗ್ರೀಕ್ ರುದ್ರನಾಟಕಗಳನ್ನು ಕುರಿತು ನಡೆಸಿದ ಅಧ್ಯಯನದಲ್ಲಿ ಪ್ರಸ್ತಾಪಿಸಿ ವಿವರಿಸಿದ್ದಾನೆ. ಅವನು ಬಾಳಿನ ಮೌಲ್ಯವನ್ನು ನಿರ್ಧರಿಸುವಲ್ಲಿ ಎರಡು ಪರಸ್ಪರ ತದ್ವಿರುದ್ಧ ಮಾರ್ಗಗಳನ್ನು ವಿಚಾರ ಮಾಡಿದ್ದಾನೆ. ಡಯೋನೀಶಿಯನ್ ಮನೋಭಾವವುಳ್ಳ ವ್ಯಕ್ತಿಯು ಬಾಳಿನ ಸಾಧಾರಣ ಬಂಧನ ಮತ್ತು ಮಿತಿಯನ್ನು ಕಿತ್ತೊಗೆಯುವುದರ ಮೂಲಕ ಬಾಳಿನ ಮೌಲ್ಯವನ್ನು ನಿರ್ಧರಿಸಹೊರಡುತ್ತಾನೆ. ಅವನು ತನ್ನ ಅತ್ಯಂತ ಅಪೇಕ್ಷಣೀಯ ಕ್ಷಣಗಳಲ್ಲಿ ಪಂಚೇಂದ್ರಿಯಗಳಿಂದ

ತನ್ನ ಮೇಲೆ ವಿಧಿಸಲಾಗಿರುವ ಬಂಧನದಿಂದ ಹೊರತಪ್ಪಿಸಿಕೊಂಡು ಅನುಭವದ ಬೇರೊಂದು ಸ್ತರಕ್ಕೆ ಏರಲು ಬಯಸುತ್ತಾನೆ. ವ್ಯಕ್ತಿಗತ ಅನುಭವದಲ್ಲಾಗಲಿ, ಸಂಸ್ಕಾರಗಳಲ್ಲಾಗಲಿ ಮಾನಸಿಕವಾಗಿ ಆ ಸ್ತರದತ್ತ ಮುನ್ನಡೆದು, ಅತಿರೇಕವನ್ನು ಮುಟ್ಟಬೇಕೆಂಬುದು ಡಯೋನೀಶಿಯನ್ ವ್ಯಕ್ತಿಯ ಬಯಕೆ. ಅವನು ಬಯಸುವ ಭಾವಕ್ಕೆ ಅತ್ಯಂತ ಸಮೀಪ ಸಾದೃಶ್ಯವಾದುದೆಂದರೆ ಕುಡಿದು ಮತ್ತೇರುವುದು. ಉನ್ಮಾದವು ನೀಡುವ ಪ್ರಕಾಶ ಅವನಿಗೆ ಅತ್ಯಂತ ಪ್ರಿಯ. ಬ್ಲೇಕನು, ಅತಿರೇಕದ ದಾರಿಯು ವಿವೇಕ ಸೌಧಕ್ಕೆ ಒಯ್ಯುತ್ತದೆ ಎನ್ನುತ್ತಾನೆ. ಆದರೆ ಅಪೊಲೋನಿಯನ್ ವ್ಯಕ್ತಿ ಇದಾವುದನ್ನೂ ನಂಬುವುದಿಲ್ಲ. ಅವನಿಗೆ ಇಂತಹ ಅನುಭವಗಳ ಪರಿಚಯ ಅತ್ಯಲ್ಪ. ಅವನು ತನ್ನ ವಾಸ್ತವ ಜೀವನದಿಂದ ಅವುಗಳನ್ನು ದೂರವಿಡಲು ದಾರಿ ಕಂಡುಕೊಂಡಿದ್ದಾನೆ. ಹೆಲೆನಿಕ್ ದೃಷ್ಟಿಕೋನದ ಪ್ರಕಾರ ಇತಿಮಿತಿಯೊಂದೇ ಅವನು ಅರಿತಿರುವ ಏಕೈಕ ಸೂತ್ರ. ಅವನು ರಸ್ತೆಯ ನಡುಭಾಗದಲ್ಲಿ ನಡೆಯುತ್ತ, ತನಗೆ ತಿಳಿದ ನಕ್ಷೆಯ ಮಿತಿಯೊಳಗೇ ಇದ್ದು, ವಿಚ್ಛಿದ್ರಕಾರಿ ಮಾನಸಿಕ ಸ್ಥಿತಿಗಳೊಂದಿಗೆ ಆಟವಾಡಲು ಹೋಗದೆ ಇರುತ್ತಾನೆ. ನೀಷೆಯ ಸೊಗಸಾದ ವಿವರಣೆಯಂತೆ ಕುಣಿತದ ಆನಂದಾತಿರೇಕದಲ್ಲಿದ್ದರೂ ಕೂಡ ಅವನು ತಾನು ತಾನಾಗಿಯೇ ಉಳಿದು, ತನ್ನ ಲೌಕಿಕ ನಾಮವನ್ನೇ ತಳೆದಿರುತ್ತಾನೆ.

ನೈಋತ್ಯ ಪ್ವೆಬ್ಲೋಗಳು ಅಪೋಲೋನಿಯನರು. ಪ್ವೆಬ್ಲೋಗಳು ಮತ್ತು ಸುತ್ತಮುತ್ತಲಿನ ಇತರ ಜನರ ನಡುವಣ ಭಿನ್ನಭಾವಕ್ಕೆ ನೀಷೆಯು ತಿಳಿಸಿರುವ ಅಪೋಲೋನಿಯನ್ ಮತ್ತು ಡಯೋನಿಶಿಯನ್‌ರ ನಡುವಣ ಭಿನ್ನಭಾವಗಳು ಅನ್ವಯಿಸುವುದಿಲ್ಲ. ನಾನು ಉದಾಹರಿಸಿರುವ ಅಂಶಗಳು ಪ್ರಾಮಾಣಿಕವಾದ ನಿರೂಪಣೆಗಳು. ನೈಋತ್ಯ ಪ್ರದೇಶದ ಇಂಡಿಯನ್ನರಲ್ಲಿ ಗ್ರೀಕ್ ಮಾದರಿಗಳಲ್ಲಿ ತೋರಿಬರುವ ಸೂಕ್ಷ್ಮ ವ್ಯತ್ಯಾಸಗಳು ತೋರಿಬರುವುದಿಲ್ಲ. ಹಾಗೆಯೇ ಗ್ರೀಕರಲ್ಲಿ ತೋರಿಬಾರದ ಸೂಕ್ಷ್ಮ ವ್ಯತ್ಯಾಸಗಳು ನೈಋತ್ಯ ಪ್ರದೇಶದ ಇಂಡಿಯನ್ನರಲ್ಲಿ ತೋರಿಬರುತ್ತವೆ. ಗ್ರೀಕರ ಸಂಸ್ಕೃತಿಯಿಂದ ಎರವಲು ಪಡೆದ ಪದಸೂತ್ರಗಳನ್ನು ನೈಋತ್ಯ ಪ್ರದೇಶದ ಇಂಡಿಯನ್‌ರ ಸಂಸ್ಕೃತಿ ವಿನ್ಯಾಸವನ್ನು ವರ್ಣಿಸಲು ನಾನು ಬಳಸಿಕೊಂಡಿರುವುದರಿಂದ ಗ್ರೀಕರ ನಾಗರಿಕತೆಯನ್ನೂ, ಅಮೇರಿಕದ ಆದಿವಾಸಿ ನಾಗರಿಕತೆಗಳನ್ನೂ ಸಮೀಕರಣಗೊಳಿಸುವ ಉದ್ದೇಶವಿದೆಯೆಂದು ಭಾವಿಸಬಾರದು. ಆ ಪದಸೂತ್ರಗಳನ್ನು ನಾನು ಬಳಸಲು ಕಾರಣವೆಂದರೆ. ಪ್ವೆಬ್ಲೋ ಸಂಸ್ಕೃತಿಯನ್ನು ಇತರ ಅಮೇರಿಕನ್ ಇಂಡಿಯನ್ನರ ಸಂಸ್ಕೃತಿಗಳಿಂದ ಬೇರ್ಪಡಿಸಿರುವ ಪ್ರಮುಖ ಲಕ್ಷಣಗಳನ್ನು ಅವು ಸ್ಪಷ್ಟವಾಗಿ ನಿರೂಪಿಸುತ್ತವೆ ಎಂಬುದೇ ಹೊರತು ಗ್ರೀಕರಲ್ಲಿ ತೋರಿಬರುವ ಮನೋಭಾವಗಳೆಲ್ಲವೂ, ಆದಿವಾಸಿ ಅಮೇರಿಕನರಲ್ಲೂ ತೋರಿಬರುತ್ತವೆ ಎಂಬುದಲ್ಲ.

ಪ್ವೆಬ್ಲೋ ಅಪೋಲೋನಿಯನ್ ಸಂಸ್ಥೆಗಳು, ಗ್ರೀಕರದಕ್ಕಿಂತಲೂ ಹೆಚ್ಚು ಮುಂದುವರಿದಿವೆ. ಗ್ರೀಕರು ಇಷ್ಟು ಏಕಾಗ್ರ ಚಿತ್ತರಾಗಿರಲಿಲ್ಲ. ಮುಖ್ಯವಾಗಿ ಅಪೋಲೋನಿಯನ್ ಜೀವನ ಮಾರ್ಗವು ಸೂಚಿಸುವಂತೆ, ವ್ಯಕ್ತಿ ಭಾವವನ್ನು ಕುರಿತ ಅಪನಂಬಿಕೆಯನ್ನು ಪ್ವೆಬ್ಲೋಗಳು ಕಾರ್ಯಗತಗೊಳಿಸಿರುವಂತೆ ಗ್ರೀಕರು ಕಾರ್ಯಗತಗೊಳಿಸಿರಲಿಲ್ಲ. ಗ್ರೀಕರಲ್ಲಿ ಅದು ತಾನು ಎದುರಿಸಬೇಕಾಗಿ ಬಂದ ಪ್ರಬಲ ಶಕ್ತಿಗಳಿಂದಾಗಿ ದುರ್ಬಲವಾಯಿತು. ಈ ವಿಚಾರದಲ್ಲಿ ಜುನಿ ಆದರ್ಶಗಳು ಮತ್ತು ಸಂಸ್ಥೆಗಳು ಕಟ್ಟುನಿಟ್ಟಾಗಿವೆ. ಯಾವನೇ ಅಪೋಲೋನಿಯನನಿಗಾದರೂ, ಅವನಿಗೆ ತಿಳಿದಿರುವ ಜೀವನದ ನಕ್ಷೆ ಅಥವಾ ಬಾಳಿನ ಹಾದಿಯ ನಡುಭಾಗ ಅವನ ಜನರ ಸಮಾನ ಪರಂಪರೆಯಲ್ಲಿ ಮೂರ್ತೀಕೃತವಾಗಿದೆ. ಸದಾ ಅದರೊಳಗೇ ಇರುವುದು ಎಂದರೆ ನಡೆದು ಬಂದ ರೂಢಿಗೆ ಮತ್ತು ಪರಂಪರೆಗೆ ಬದ್ಧನಾದಂತೆ. ಆದ್ದರಿಂದ ಸಂಪ್ರದಾಯಕ್ಕೆ ವಿರೋಧವಾದ ಪ್ರಬಲ ಪ್ರಭಾವಗಳು ಅಹಿತಕಾರಿಗಳು. ಪರಿಣಾಮವಾಗಿ ಅವರ ಸಂಸ್ಥೆಗಳಲ್ಲಿ ಈ ಅಹಿತಕಾರಿ ಭಾವನೆಗಳು ಕನಿಷ್ಠ ಮಟ್ಟಕ್ಕೆ ಇಳಿಯುತ್ತವೆ. ಇವುಗಳಲ್ಲಿ ವ್ಯಕ್ತಿಭಾವವು ಅತ್ಯಂತ ಪ್ರಮುಖವಾದುದು. ನೈಋತ್ಯ ಪ್ರದೇಶದ ಅಪೋಲೋನಿಯನ್ ತತ್ವದ ಅನುಸಾರವಾಗಿ ಪರಂಪರೆಯಿಂದ ನಯಗೊಂಡು, ವಿಸ್ತಾರಗೊಳ್ಳಲು ಪ್ರಯತ್ನಿಸಿದಾಗಲೂ ವ್ಯಕ್ತಿಭಾವವು ವಿಚ್ಛಿದ್ರಕಾರಿ. ಹೀಗೆಂದು ಹೇಳಿದ ಮಾತ್ರಕ್ಕೆ ಪ್ವೆಬ್ಲೋಗಳು ಅದನ್ನು ತಡೆಗಟ್ಟುವರೆಂದಲ್ಲ. ಹೊಸ ಲಕ್ಷಣಗಳ ಸೇರುವಿಕೆ ಮತ್ತು ಬದಲಾವಣೆಗಳಿಂದ ಯಾವುದೇ ಸಂಸ್ಕೃತಿಯು ತನ್ನನ್ನು ರಕ್ಷಿಸಿಕೊಳ್ಳಲಾರದು. ಆದರೆ ಇವುಗಳನ್ನು ತರುವ ಪ್ರಕ್ರಿಯೆಗಳು ಸಂಶಯಗ್ರಸ್ತವಾಗಿದ್ದು, ಮುಚ್ಚುಮರೆಯಾಗಿವೆ. ವ್ಯಕ್ತಿಗಳಿಗೆ ಸ್ವತಂತ್ರವಾದ ಅವಕಾಶ ನೀಡುವ ಸಂಸ್ಥೆಗಳು ಬಹಿಷ್ಕೃತವಾಗಿವೆ.

ಪ್ವೆಬ್ಲೋಗಳು ಉತ್ತರ ಅಮೆರಿಕದ ಇತರ ಸಂಸ್ಕೃತಿಗಳಿಂದ ಬೇರ್ಪಟ್ಟಿದ್ದಾರೆ. ಆ ಇತರ ಸಂಸ್ಕೃತಿಗಳನ್ನು ಅರಿತುಕೊಳ್ಳುವುದರಿಂದ ಅವರ ಜೀವನ ದೃಷ್ಟಿಯನ್ನು ಅರಿಯುವುದು ಸಾಧ್ಯವಾಗುತ್ತದೆ. ಹೀಗೆ ಅವೆರಡನ್ನು ಪರಸ್ಪರ ವಿರುದ್ಧ ಭಾಗದಲ್ಲಿಟ್ಟು ನೋಡಿದರೆ ಅವುಗಳ ವಿರೋಧ ಗಮನ ಹಾಗೂ ಅಮೆರಿಕದ ಆದಿವಾಸಿಗಳ ವಿಲಕ್ಷಣ ಸ್ವಭಾವಗಳಿಂದ ಪ್ವೆಬ್ಲೋಗಳನ್ನು ಹೊರಗಿಟ್ಟಿರುವ ವಿರೋಧ ಶಕ್ತಿಯ ಬಲವನ್ನು ಅಂದಾಜು ಮಾಡಬಹುದು. ಏಕೆಂದರೆ ಮೆಕ್ಸಿಕೋವು ಸೇರಿದಂತೆ, ಅಮೆರಿಕನ್ ಇಂಡಿಯನರು ಭಾವೋದ್ದೀಪ್ತರಾದ ಡಯೋನೀಶಿಯನರು. ಆವೇಶದ ಅನುಭವಕ್ಕೆ ಹಾಗೂ ಮನುಷ್ಯನು ತನ್ನ ದಿನನಿತ್ಯದ ಸಂವೇದನೆಗಳ ಕ್ರಮದಿಂದ ಹೊರಬರುವುದಕ್ಕೆ ಮಹತ್ವ ನೀಡುತ್ತಾರೆ. ಅಂತಹ ಅನುಭವಗಳಿಗೆ ಅವರಲ್ಲಿ ಅತ್ಯಂತ ಹೆಚ್ಚಿನ ಮೌಲ್ಯದ ಸ್ಥಾನವಿದೆ.

ಪ್ವೆಬ್ಲೋಗಳನ್ನು ಬಿಟ್ಟರೆ ಅಮೆರಿಕದ ಇತರ ಇಂಡಿಯನ್ನರಲ್ಲಿ ಸಮರೂಪದ ಸಂಸ್ಕೃತಿಯಿಲ್ಲ. ಪ್ರತಿಯೊಂದೂ ಅಂಶದಲ್ಲಿಯೂ ಅವು ತೀವ್ರ ಭಿನ್ನಭಾವವನ್ನು ವ್ಯಕ್ತಪಡಿಸುತ್ತವೆ. ಸೌಕರ್ಯದ ದೃಷ್ಟಿಯಿಂದ ಅವುಗಳನ್ನು ಎಂಟು ವಿಭಿನ್ನ ಸಂಸ್ಕೃತಿಯ ಪ್ರದೇಶಗಳಾಗಿ ಪರಿಗಣಿಸಬಹುದು. ಆದರೆ ಅವುಗಳಲ್ಲೆಲ್ಲಾ ಕೆಲವು ಮೂಲಭೂತ ಡಯೋನೀಶಿಯನ್ ರೂಢಿಗಳು ಒಂದಲ್ಲ ಒಂದು ರೂಪದಲ್ಲಿ ಇದ್ದೇ ಇವೆ.

ಅವುಗಳಲ್ಲಿ ಮುಖ್ಯವಾದುವೆಂದರೆ ನಾವು ಈಗಾಗಲೇ ಪ್ರಸ್ತಾಪಿಸಿರುವಂತೆ ಕನಸಿನ ಅಥವಾ ದಿವ್ಯದರ್ಶನದ ಮೂಲಕ ದೈವಿಕ ಶಕ್ತಿಯನ್ನು ಗಳಿಸಿಕೊಳ್ಳುವ ರೂಢಿ. ಪಶ್ಚಿಮದ ಮೈದಾನಗಳ ಜನರು ಕ್ರೂರವಾದ ಚಿತ್ರಹಿಂಸೆಗಳಿಗೆ ಒಳಪಟ್ಟು ಇಂತಹ ದಿವ್ಯದರ್ಶನಗಳನ್ನು ಪಡೆಯಲೆತ್ನಿಸುತ್ತಾರೆ. ತಮ್ಮ ತೋಳುಗಳ ಚರ್ಮ ಸುಲಿದುಕೊಳ್ಳುತ್ತಾರೆ; ಬೆರಳುಗಳನ್ನು ಕತ್ತರಿಸಿಕೊಳ್ಳುತ್ತಾರೆ; ತೋಳುಗಳ ಮಾಂಸಖಂಡಗಳ ಕೆಳಗಿಂದ ಕಟ್ಟು ಪಟ್ಟಿಗಳನ್ನು ಕಟ್ಟಿಕೊಂಡು ಎತ್ತರವಾದ ದೂಲಗಳಿಂದ ನೇತು ಹಾಕಿಕೊಳ್ಳುತ್ತಾರೆ. ಅಸಹನೀಯವಾಗುವಷ್ಟು ಸಮಯ ಅನ್ನ ಆಹಾರಗಳಿಲ್ಲದೆ ಇರುತ್ತಾರೆ. ನಿತ್ಯ ಜೀವನದಿಂದ ಹೊರತಾದ ಶ್ರೇಣಿಯ ಅನುಭವಗಳನ್ನು ಗಳಿಸಲು ಹಲವು ರೀತಿಗಳಲ್ಲಿ ಯತ್ನಿಸುತ್ತಾರೆ. ಮೈದಾನ ಪ್ರದೇಶಗಳಲ್ಲಿ ಈ ದಿವ್ಯದರ್ಶನಗಳನ್ನರಸುವವರು ವಯಸ್ಕರು. ಕೆಲವೊಮ್ಮೆ ಅವರು ತಮ್ಮ ಕೈಗಳನ್ನು ಹಿಂಭಾಗಕ್ಕೆ ಕಟ್ಟಿಕೊಂಡು ನಿಶ್ಚಲರಾಗಿ ನಿಲ್ಲುತ್ತಾರೆ. ಇಲ್ಲವೇ ಕಿರಿದಾದ ಜಾಗವೊಂದರಲ್ಲಿ ಸಿಕ್ಕಿಬಿದ್ದು, ವರವನ್ನು ಪಡೆಯುವವರೆಗೆ ಹೊರಳಾಡದಂತೆ ಇರಲು ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಕೆಲವು ಬಣಗಳವರು ಕೆಲವೊಮ್ಮೆ ದೂರ ದೂರದ ಪ್ರದೇಶಗಳಲ್ಲಿ, ಅಪತ್ಕಾರಿ ಪ್ರದೇಶಗಳೊಳಗೆ ಅಲೆದಾಡುತ್ತಾರೆ. ಕೆಲವು ಬಣಗಳವರು ಪ್ರಪಾತಗಳು ಮತ್ತು ವಿಪತ್ಕಾರಿ ಜಾಗಗಳನ್ನು ಆರಿಸಿಕೊಳ್ಳುತ್ತಾರೆ. ಸಾಧಾರಣತಃ ಒಂಟಿಯಾಗಿ ಹೋಗುವುದು ವಾಡಿಕೆ. ಚಿತ್ರ ಹಿಂಸೆಯ ಮೂಲಕ ದಿವ್ಯದರ್ಶನವನ್ನು ಬಯಸುವಿಕೆ ಇದು. ದೈವಿಕ ಅನುಭವವನ್ನು ಪಡೆಯಲು ನೇತಾಡುವ ದೂಲಕ್ಕೆ ಕಟ್ಟಿಹಾಕಲು ಮಾತ್ರ ಬೇರೊಬ್ಬನ ನೆರವು ಪಡೆಯುತ್ತಾನೆ. ಆ ಸಹಾಯಕನು ತನ್ನ ಕೆಲಸ ಮುಗಿಸಿ, ಅವನನ್ನು ವಿಷಮ ಪರೀಕ್ಷೆಗೆ ಒಂಟಿಯಾಗಿ ಬಿಟ್ಟು ಹಿಂತಿರುಗುತ್ತಾನೆ.

ಮನಸ್ಸನ್ನು ಅಪೇಕ್ಷಿತ ದರ್ಶನದ ಮೇಲೆ ಕೇಂದ್ರೀಕರಿಸಬೇಕಾದುದು ಅವಶ್ಯಕ. ಅವರುಗಳು ಮಿಕ್ಕೆಲ್ಲ ವಿಧಾನಗಳಿಗಿಂತ ಹೆಚ್ಚಿಗೆ ಏಕಾಗ್ರತೆಯ ಮೇಲೆ ವಿಶ್ವಾಸವಿಟ್ಟಿದ್ದಾರೆ. ವೃದ್ಧರಾದ ವೈದ್ಯರು ಯಾವಾಗಲೂ 'ಸದಾ ಅದನ್ನೇ ಕುರಿತು ಆಲೋಚಿಸು' ಎಂದು ಹೇಳುತ್ತಾರೆ. ಪೇಚಾಟ ಪಡುತ್ತಿರುವವನನ್ನು ಕಂಡು ಭೂತಗಳಿಗೆ ಕನಿಕರ ಹುಟ್ಟಿ, ಕೋರಿಕೆಯನ್ನು ಈಡೇರಿಸುವಂತೆ ಮಾಡಲು ಕೆಲವು ವೇಳೆ ಕಣ್ಣೀರು ಸುರಿಸುತ್ತಲೇ ಇರಬೇಕು. 'ನಾನು ದರಿದ್ರ. ಕೃಪೆ ಮಾಡಿ' ಎಂಬುದು

ಸಹಾ ಕಾಲದ ಪ್ರಾರ್ಥನೆ. "ಏನನ್ನೂ ಇಟ್ಟುಕೊಳ್ಳಬೇಡಿ. ಆಗ ಭೂತಗಳು ನಿಮ್ಮಲ್ಲಿಗೆ ಬರುತ್ತವೆ" ಎಂಬುದು ವೈದ್ಯರ ಉಪದೇಶ.

ಪಶ್ಚಿಮದ ಮೈದಾನಗಳ ಜನರು, ದಿವ್ಯದರ್ಶನ ದೊರೆತಾಗ ಅದು ತಮ್ಮ ಬಾಳಿನ ಪಥವನ್ನು ಮತ್ತು ನಿರೀಕ್ಷಿಸಬಹುದಾದ ಯಶಸ್ಸನ್ನು ನಿರ್ಣಯಿಸುತ್ತದೆಂದು ನಂಬಿದ್ದರು. ದಿವ್ಯದರ್ಶನ ದೊರೆಯದಿದ್ದರೆ ಸೋಲು ಕಟ್ಟಿಟ್ಟದ್ದು ಎಂದು ಅವರ ಅಭಿಪ್ರಾಯ. 'ನಾನು ದರಿದ್ರನಾಗಿಯೇ ಇರಬೇಕಾಗಿತ್ತು; ಹಾಗಿದ್ದುದರಿಂದಲೇ ನನಗೆ ದಿವ್ಯದರ್ಶನವಾಗಲಿಲ್ಲ' ಎಂದು ಬಗೆಯುತ್ತಾರೆ. ದಿವ್ಯದರ್ಶನದಲ್ಲಿ ಒಬ್ಬನ ಅನುಭವ ಚಿಕಿತ್ಸೆಗೆ ಸಂಬಂಧಿಸಿದ್ದರೆ ಅವನಿಗೆ ಚಿಕಿತ್ಸಾಶಕ್ತಿ ಬರುತ್ತಿತ್ತು; ಯುದ್ಧ ಅನುಭವವಾಗಿದ್ದಲ್ಲಿ ವೀರಯೋಧನ ಶಕ್ತಿ ಬರುತ್ತಿತ್ತು. ಆದರಲ್ಲಿ ತನ್ನ ಪ್ರತಿರೂಪದ ಹೆಂಗಸನ್ನು ಕಂಡರೆ ಅವನು ವಿರೋಧ ಲಿಂಗದವನಾಗಿ ಪರಿಗಣಿತನಾಗಿ ಹೆಂಗಸಿನ ವೃತ್ತಿಗಳನ್ನೂ, ರೂಢಿಗಳನ್ನೂ ಅನುಸರಿಸಬೇಕಾಗಿತ್ತು. ಪೌರಾಣಿಕವಾದ ನೀರುಹಾವು ಆಶೀರ್ವದಿಸಿದರೆ ಅವನಿಗೆ ಕೆಟ್ಟಮಾಟ ಮಾಡುವ ಅಲೌಕಿಕಶಕ್ತಿ ದೊರೆತು, ಮಾಂತ್ರಿಕನಾಗಲು ಕಾಣಿಕೆಯಾಗಿ ತನ್ನ ಹೆಂಡತಿ ಮಕ್ಕಳನ್ನು ಬಲಿಕೊಡುತ್ತಿದ್ದನು. ಯಾವನಾದರೂ ತಾನೂ ಬಲಶಾಲಿಯಾಗಬೇಕೆಂದೋ ಇಲ್ಲವೇ ನಿರ್ದಿಷ್ಟವಾದ ಕಾರ್ಯದಲ್ಲಿ ಯಶಸ್ವಿಯಾಗಬೇಕೆಂದೋ ಬಯಸಿದರೆ ಅವನು ಆಗಾಗ್ಗೆ ದಿವ್ಯದರ್ಶನವನ್ನು ಕೋರುತ್ತಿದ್ದ. ಯುದ್ಧ ಜೀವನಕ್ಕೆ, ರೋಗ ಚಿಕಿತ್ಸೆಗೆ ಮಾತ್ರವಲ್ಲದೇ ಮಕ್ಕಳಿಗೆ ಹೆಸರಿಡುವುದು, ಶೋಕಾಚರಣೆ, ಸೇಡುತೀರಿಸುವುದು, ಕದ್ದ ವಸ್ತುಗಳನ್ನು ಕಂಡು ಹಿಡಿಯುವುದು ಮೊದಲಾದ ನಾನಾವಿಧವಾದ ಸಂದರ್ಭಗಳಿಗೆ ದಿವ್ಯದರ್ಶನ ಅವಶ್ಯಕ.

ದಿವ್ಯ ದರ್ಶನ ತೋರಿಬಂದಾಗ ಅದು ದೃಶ್ಯ ಇಲ್ಲವೇ ಶ್ರವಣ ಭ್ರಾಂತಿಯಾಗಿರಬಹುದು. ಆದರೆ ಅದು ಹೀಗೇ ಇರಬೇಕಾದದ್ದು ಎಂಬುದೇನೂ ಇಲ್ಲ. ಬಹುತೇಕ ವಿವರಣೆಗಳು ಯಾವುದಾದರೂ ಪ್ರಾಣಿಯನ್ನು ಕಂಡಂತೆ ನಿರೂಪಿಸುತ್ತವೆ. ಅದು ಮೊದಲು ತೋರಿದಾಗ ಮಾನವರೂಪ ತಳೆದಿದ್ದು, ಪ್ರಾರ್ಥಿಸುವವನೊಂದಿಗೆ ಮಾತನಾಡಿ, ಅವನಿಗೆ ದೈವಿಕ ವೃತ್ತಿಯನ್ನು ಅನುಸರಿಸಲು ಒಂದು ಸೂತ್ರ ಹಾಗೂ ಒಂದು ಹಾಡನ್ನು ಉಪದೇಶಿಸುತ್ತದೆ. ಅದು ಹೊರಡುವಾಗ ತನ್ನ ಪ್ರಾಣಿರೂಪ ತಳೆಯುತ್ತದೆ. ಆರಾಧಕನಿಗೆ ತನ್ನನ್ನು ಅನುಗ್ರಹಿಸಿದ ಪ್ರಾಣಿ ಯಾವುದು, ತನ್ನ ದಿವ್ಯದರ್ಶನಾನುಭವದ ಕುರುಹಾಗಿ ತಾನು ಯಾವ ಚರ್ಮ, ಎಲುಬು ಅಥವಾ ಗರಿಗಳನ್ನು ಸಂಗ್ರಹಿಸಿ ಆಜೀವ ಪರ್ಯಂತ ತನ್ನ ಪವಿತ್ರ ಗಂಟನ್ನಾಗಿ ಇಟ್ಟುಕೊಳ್ಳಬೇಕು ಎಂಬುದು ಅರಿವಾಗುತ್ತದೆ. ಕೆಲವು ಅನುಭವಗಳು ಸಾಧಾರಣ ರೀತಿಯವೂ ಆಗಿರುವುದುಂಟು. ಕೆಲವು ಬಣಗಳ ಜನರು

ಪ್ರಕೃತಿಯೊಂದಿಗೆ ತಲ್ಲೀನರಾಗುವ ಕ್ಷಣಗಳನ್ನು ಮಹತ್ವದ್ದಾಗಿ ಪರಿಗಣಿಸುತ್ತಾರೆ. ನದಿಯ ತೀರದಲ್ಲಿ ಏಕಾಂಗಿಯಾಗಿ ನಡೆದುದನ್ನೋ ಅಥವಾ ತನ್ನ ಮನ ಸೆಳೆದ ಸರಳವಾದ ಜಾಡು ಹಿಡಿದು ನಡೆದುದನ್ನೋ ಅತ್ಯಂತ ಮಹತ್ವವೆಂದು ಪರಿಗಣಿಸುತ್ತಾರೆ.

ಕನಸುಗಳ ಮೂಲಕವೂ ದೈವಿಕ ಶಕ್ತಿಯನ್ನು ಗಳಿಸಬಹುದು. ದಿವ್ಯ ದರ್ಶನದ ಕೆಲವು ನಿರೂಪಣೆಗಳಂತೂ ಖಚಿತವಾಗಿ ನಿದ್ರೆಯಲ್ಲೋ ಇಲ್ಲವೇ ಅದಕ್ಕಿಂತ ಅಸಾಧಾರಣ ಸಂದರ್ಭದಲ್ಲೋ ಪಡೆದ ಸ್ವಪ್ನಾನುಭವಗಳು. ಕೆಲ ಬಣಗಳಲ್ಲಿ ನಿದ್ರೆಯಲ್ಲಿ ಕಂಡ ಕನಸುಗಳು, ಇತರ ರೀತಿಯ ಅನುಭವಗಳಿಗಿಂತ ಮಹತ್ವ ಗಳಿಸಿವೆ. ಲ್ಯೂಯಿಸ್ ಮತ್ತು ಕ್ಲಾರ್ಕ್ ಅವರು ತಾವು ಹಿಂದೆ ಪಶ್ಚಿಮದ ಮೈದಾನ ಪ್ರದೇಶಗಳಲ್ಲಿ ಪ್ರಯಾಣ ಮಾಡಿದಾಗ ಒಂದು ರಾತ್ರಿಯೂ ನಿದ್ರೆ ಮಾಡಲಿಲ್ಲವೆಂದು ಗೊಣಗಾಡಿದ್ದಾರೆ. ಇದಕ್ಕೆ ಕಾರಣವೆಂದರೆ, ಯಾವನಾದರೂ ಒಬ್ಬ ಮುದುಕನು ತಮಟೆ ಬಡಿದು ತಾನು ಅದೇ ತಾನೇ ಕಂಡ ಕನಸನ್ನು ವಿಧಿವತ್ತಾಗಿ ಆಡಿ ತೋರಿಸಲು ಪ್ರತಿ ರಾತ್ರಿ ಎಲ್ಲ ವೇಳೆಗಳಲ್ಲಿ ಎಬ್ಬಿಸುತ್ತಿರುತ್ತಲೇ ಇರುತ್ತಿದ್ದನು. ಹೀಗೆ ಕನಸು ಸಹ ಶಕ್ತಿಯ ಮಹತ್ವಪೂರ್ಣ ಮೂಲನೆಲೆ.

ಇವೆಲ್ಲ ಹೇಗೇ ಇದ್ದರೂ ಒಂದು ದರ್ಶನಾನುಭವವು ಶಕ್ತಿಶಾಲಿಯಾಗಿತ್ತೇ ಎಂಬುದು ಆಯಾ ವ್ಯಕ್ತಿಯ ನಿರ್ಧಾರಕ್ಕೆ ಬಿಟ್ಟ ಸಂಗತಿ. ಮುಂದೆ ಅದನ್ನು ಕಾರ್ಯರೂಪಕ್ಕೆ ತರುವಾಗ ಯಾವುದೇ ಬಗೆಯ ಸಾಮಾಜಿಕ ಅಡೆತಡೆಗಳನ್ನು ವಿಧಿಸಬಹುದಾದರೂ, ದರ್ಶನಾನುಭವವು ಸ್ವಾನುಭವದ ವಿಷಯವೆಂದು ಮಾನ್ಯತೆ ಗಳಿಸಿದೆ. ಕೆಲವು ದರ್ಶನಾನುಭವಗಳು ಶಕ್ತಿಶಾಲಿ. ಕೆಲವು ಹಾಗಲ್ಲ. ಸೂಚಿತಾರ್ಥವು ಹೊಳೆಯುವುದರಿಂದ ಅವುಗಳಲ್ಲಿನ ವ್ಯತ್ಯಾಸಗಳನ್ನು ಕಂಡುಕೊಂಡು ಮಹತ್ವಪೂರ್ಣವಾದುವುಗಳನ್ನು ಎತ್ತಿಕೊಳ್ಳುತ್ತಾರೆ. ಒಂದು ದರ್ಶನಾನುಭವವು ಈ ಪುಲಕವನ್ನು ನೀಡದಿದ್ದಲ್ಲಿ, ಅದು ಚಿತ್ರಹಿಂಸೆಗಳನ್ನು ಅನುಭವಿಸಿ ಪಡೆದುದಾದರೂ ವ್ಯರ್ಥವಾಗಿ ಪರಿಗಣಿತವಾಗುವುದು. ಅಂತಹ ಅನುಭವದಿಂದ ಶಕ್ತಿ ಪಡೆದೆವೆಂದು ಸುಳ್ಳಾಗಿ ಸಾಧಿಸಹೋದರೆ ರಕ್ಷಕ ಭೂತವೆಂದು ಪರಿಗಣಿಸಲಾಗುವ ಪ್ರಾಣಿಯು ತಮಗೆ ಸಾವನ್ನು ಮತ್ತು ಮುಖಭಂಗವನ್ನೂ ತರುತ್ತದೆಂದು ಹೆದರುತ್ತಾರೆ.

ಪಶ್ಚಿಮದ ಮೈದಾನಗಳಲ್ಲಿ ಪ್ರಚಲಿತವಾಗಿರುವ ದರ್ಶನಾನುಭವದ ಶಕ್ತಿಯನ್ನು ಕುರಿತ ಈ ನಂಬಿಕೆಯು, ತತ್ವಶಃ ವ್ಯಕ್ತಿಗೆ ಮಿತಿಯಿಲ್ಲದಷ್ಟು ಸ್ವಾತಂತ್ರ್ಯ ನೀಡುವ ಸಾಂಸ್ಕೃತಿಕ ವ್ಯವಸ್ಥೆ. ಅವನು ಯಾವ ಕುಟುಂಬಕ್ಕೆ ಸೇರಿದವನಾದರೂ ಸರಿ, ಪ್ರಯತ್ನಪೂರ್ವಕವಾಗಿ ಅತ್ಯಂತ ಅಪೇಕ್ಷಣೀಯವಾದ ಈ ಶಕ್ತಿಯನು ಪಡೆದುಕೊಳ್ಳಬಹುದು. ಅಷ್ಟು ಮಾತ್ರವಲ್ಲ, ಯಾವುದೇ ಆವಿಷ್ಕರಣಕ್ಕೆ, ತಾನು

ಕಲ್ಪಿಸಿಕೊಳ್ಳಬಹುದಾದ ಯಾವುದೇ ಬಗೆಯ ವೈಯಕ್ತಿಕ ಲಾಭಕ್ಕೆ ತನ್ನ ದರ್ಶನಾನುಭವವನ್ನು ಅರ್ಹತೆಯನ್ನಾಗಿ ತೋರಿಸಿಕೊಳ್ಳಬಹುದು. ಈ ಅರ್ಹತೆಯನ್ನು ಅವನು ಏಕಾಂತದಲ್ಲಿ ದರ್ಶನಾನುಭವದ ಮೂಲಕ ಪಡೆದುದ್ದರಿಂದ ಅದನ್ನು ಇನ್ನೊಬ್ಬನ ತೀರ್ಪಿಗೆ ಒಪ್ಪಿಸಬೇಕಾದ ಅವಶ್ಯಕತೆಯೂ ಇಲ್ಲ. ಬಹುಶಃ ಅದು ಅವನು ಸಾಧಿಸಲು ಸಾಧ್ಯವಾದ ಅತ್ಯಂತ ಹೆಚ್ಚಿನ ಅಸ್ಥಿರತೆಯ ಅನುಭವವೂ ಆಗಿರಬಹುದು. ವ್ಯಕ್ತಿಗತ ಆರಂಭಶಕ್ತಿಗೆ ಅದು ಸಾಟಿಯಿಲ್ಲದಷ್ಟು ಅವಕಾಶ ನೀಡುತ್ತದೆ. ಆದರೂ ಕಾರ್ಯತಃ ಸಂಪ್ರದಾಯದ ಅಧಿಕಾರ ಮಾತ್ರ ಪ್ರತಿಭಟನೆಗೆ ಗುರಿಯಾಗುವುದಿಲ್ಲ. ಕಷ್ಟು ಸಾಮಾಜಿಕ ಸಂಸ್ಥೆಗಳಿಂದ ಬೇಕಾದ ಹಾಗೆ ಅವಕಾಶ ದೊರೆತಾಗಲೂ, ಸಣ್ಣ ಪುಟ್ಟ ಬದಲಾವಣೆಗಳಿಗಿಂತ ದೊಡ್ಡವನ್ನು ಮಾನವರು ಆವಿಷ್ಕರಣಗೊಳಿಸಲಾರರು. ಹೊರಗಿನವರ ದೃಷ್ಟಿಯಲ್ಲಿ ಒಂದು ಸಂಸ್ಕೃತಿಯಲ್ಲಿ ಆಗುವ ಅತ್ಯಂತ ಕ್ರಾಂತಿಕಾರಿ ಆವಿಷ್ಕರಣವೂ ಸಹ ಸಣ್ಣ ಪುಟ್ಟ ಸುಧಾರಣೆಯಾಗಿಯೇ ತೋರಿಬರುತ್ತದೆ. 'ನ' ಮತ್ತು 'ಣ' ಗಳ ನಡುವಣ ವ್ಯತ್ಯಾಸಕ್ಕಾಗಿ ಪ್ರವಾದಿಗಳನ್ನು ಮರಣದಂಡನೆಗೆ ಗುರಿ ಮಾಡಿರುವುದು ಸರ್ವ ಸಾಧಾರಣವಾದುದು. ಹೀಗೆಯೇ ದಿವ್ಯ ದರ್ಶನಕ್ಕೆ ದೊರೆತಿರುವ ಈ ಸಾಂಸ್ಕೃತಿಕ ಅನುಮತಿಯು, ಆ ದಿವ್ಯದರ್ಶನದ ಸೂಚನೆಯನ್ನು ಅನುಸರಿಸಿ, ಹೊಗೆಸೊಪ್ಪಿನ ಸಂಘದಲ್ಲಿ ಮಂಜು ಹಕ್ಕಿಯ ಶಾಖೆಯಿದ್ದ ಜಾಗದಲ್ಲಿ ನೆಲಮುಳ್ಳಿ ಶಾಖೆಯನ್ನು ಸ್ಥಾಪಿಸಲೋ, ಇಲ್ಲವೇ ಯುದ್ಧ ಕಾರ್ಯದಲ್ಲಿ ಇದುವರೆಗೆ ಬಳಕೆಯಾಗುತ್ತಿದ್ದ ಎಮ್ಮೆಯಿಂದ ಪಡೆದ ಶಕ್ತಿಗೆ ಬದಲು ಸ್ಕಂಕ್ ಪ್ರಾಣಿಯ ಮೂಲಕ ಪಡೆದ ಶಕ್ತಿಯನ್ನು ಬಳಸುವುದಕ್ಕೋ ಉಪಯೋಗವಾಗುತ್ತದೆ. ಅಲ್ಲದೆ ಇತರ ಇತಿಮಿತಿಗಳೂ ಅನಿವಾರ್ಯ. ದಿವ್ಯದರ್ಶನದ ಸೂಚನೆಯನ್ನು ಕಾರ್ಯತಃ ಪ್ರಯತ್ನಿಸಿ ನೋಡುವುದಕ್ಕೆ ಒತ್ತಾಯ ಮಾಡಬಹುದು, ಯುದ್ಧಕಾರ್ಯದಲ್ಲಿ ದೈವಿಕ ಶಕ್ತಿಯನ್ನು ಪರೀಕ್ಷೆಗಿಟ್ಟು, ಯಶಸ್ವಿಯಾಗಿ ಯುದ್ಧ ತಂಡ ಒಂದರ ನಾಯಕತ್ವ ವಹಿಸಿದವನು ಮಾತ್ರ ತನಗೆ ಯುದ್ಧದಲ್ಲಿ ದೈವಿಕ ಶಕ್ತಿ ದೊರೆತಿದೆಯೆಂದು ಹೇಳಿಕೊಳ್ಳಬಹುದು. ಕೆಲವು ಆದಿವಾಸಿ ಬಣಗಳಲ್ಲಿ ದಿವ್ಯ ದರ್ಶನದಲ್ಲಿ ದೊರೆತ ಸೂಚನೆಗಳನ್ನು ಪರೀಕ್ಷೆಗೆ ಗುರಿ ಮಾಡುವ ಸಲಹೆಯು ಸಹ ಹಿರಿಯರ ಮುಂದೆ ಹೋಗಬೇಕು. ಹಿರಿಯರ ಕೂಟವು ಯಾವುದೇ ರೀತಿಯ ರಹಸ್ಯ ಸಂದೇಶದಿಂದಲೂ ಪ್ರಭಾವಿತವಾಗುವಂತಹುದಲ್ಲ.

ಪಶ್ಚಿಮದ ಮೈದಾನ ಪ್ರದೇಶದ ಹೊರಗಿನ ಸಂಸ್ಕೃತಿಗಳಲ್ಲಿ ಡಯೋನೀಶೀಯನ್ ರೂಢಿಗಳ ಮೇಲಿನ ಈ ಮಿತಿಹೇರಿಕೆ ಇನ್ನೂ ಮುಂದುವರೆದಿದೆ. ಪಟ್ಟಭದ್ರ ಹಕ್ಕುಗಳು ಮತ್ತು ಅಧಿಕಾರಗಳು ಪ್ರಮುಖವಾಗಿರುವ ಸಮಾಜಗಳಲ್ಲಿ ದಿವ್ಯ ದರ್ಶನದಂತಹ ಸಾಂಸ್ಕೃತಿಕ ಸ್ವಭಾವಲಕ್ಷಣದಿಂದ ಉಂಟಾಗಬಹುದಾದ ಘರ್ಷಣೆ

ಯನ್ನು ಊಹಿಸಿಕೊಳ್ಳುವುದು ಸುಲಭ. ಇದು ಪ್ರತ್ಯಕ್ಷವಾದ ವಿಚ್ಛಿದ್ರಕಾರಿ ಸಾಂಸ್ಕೃತಿಕ ಸಾಧನ. ಘರ್ಷಣೆ ಪ್ರಬಲವಾಗಿದ್ದ ಸಮಾಜಗಳಲ್ಲಿ ಬೇಕಾದಷ್ಟು ಪರಿಣಾಮಗಳಾಗಬಹುದು. ದೈವಿಕ ಅನುಭವವು, ಬಾಯಿಮಾತಿನಲ್ಲಿ ಹೊಗಳಿಸಿಕೊಂಡರೂ ಕಾರ್ಯತಃ ಬರಿ ಚಿಪ್ಪಾಗಬಹುದು. ಅಧಿಕಾರವು ಪಂಥದ ಗುಂಪುಗಳಲ್ಲಾಗಲಿ, ಕುಟುಂಬಗಳಲ್ಲಾಗಲಿ, ಪಟ್ಟಭದ್ರವಾಗಿದ್ದರೆ ಅವರುಗಳು ಎಲ್ಲ ವ್ಯಕ್ತಿಗಳಿಗೂ ದೈವಿಕತೆಯನ್ನು ಗಳಿಸಲು ದಾರಿಮಾಡಿಕೊಟ್ಟು ಅಂತಹ ಸಂಪರ್ಕದಿಂದ ಸಾಧಿಸಬಹುದಾದ ಶಕ್ತಿಯ ಬಗ್ಗೆ ಶಿಕ್ಷಣ ನೀಡುವುದು ಅಸಾಧ್ಯ. ಎಲ್ಲರಿಗೂ ಅವಕಾಶವಿರುವ ಸ್ವತಂತ್ರವಾದ ದಿವ್ಯದರ್ಶನದ ಸಿದ್ಧಾಂತವನ್ನು ಬೋಧಿಸದಿರಲು ಯಾವ ಕಾರಣವೂ ಇಲ್ಲ. ಅವರು ಹಾಗೆ ಬೋಧಿಸುವುದೂ ರೂಢಿಯಲ್ಲಿದೆ. ಆದರೆ ಅದು ಬರಿ ಠಕ್ಕು. ಯಾವನೇ ಆದರೂ ತನ್ನ ತಂದೆ ಸದಸ್ಯತ್ವ ಪಡೆದ ಪಂಥದಲ್ಲಿ ಆ ಸ್ಥಾನಕ್ಕೆ ಬಂದ ಹೊರತು ಬೇರಾವ ರೀತಿಯಲ್ಲೂ ಹಕ್ಕು ಚಲಾಯಿಸುವಂತಿಲ್ಲ. ಒಮಾಹಾ ಜನರಲ್ಲಿ ಅಧಿಕಾರವೂ ಕುಟುಂಬ ಪಂಕ್ತಿಯಲ್ಲೇ ಕರಾರುವಾಕ್ಕಾಗಿ ನಡೆದುಬಂದಿದೆ. ಅದು ಪಡೆದಿರುವ ಮಾಂತ್ರಿಕತೆಯಿಂದಾಗಿ ಮಹತ್ವಗಳಿಸಿದೆ. ಅಲ್ಲದೆ ಅದು ದೈವಿಕ ಶಕ್ತಿಯನ್ನು ಪಡೆಯಲು ಏಕಾಂತದಲ್ಲಿ ಗಳಿಸಿದ ದಿವ್ಯದರ್ಶನವೇ ಖಚಿತವಾದ, ಏಕೈಕ ಮಾರ್ಗ ಎಂಬ ತಮ್ಮ ಪಾರಂಪರಿಕ ಸಿದ್ಧಾಂತವನ್ನು ಪರಿಷ್ಕರಿಸಿಕೊಂಡಿಲ್ಲ. ವಾಯುವ್ಯ ತೀರ ಪ್ರದೇಶವಲ್ಲಿಯೂ ಮೆಕ್ಸಿಕೋದ ಆಚೆಕರ ನಡುವೆಯೂ ಸ್ಥಾನಮಾನಗಳು ಭದ್ರವಾಗಿ ಕಾಪಾಡಿಕೊಂಡು ಬಂದಿದ್ದ ಅಧಿಕಾರವಾಗಿದ್ದು ಬೇರೆ ಬೇರೆ ಹೊಂದಾಣಿಕೆಗಳೇರ್ಪಟ್ಟಿದ್ದರೂ, ಅವಾವುವೂ ಡಯೋನೀಶೀಯನ್ ಮೌಲ್ಯಗಳನ್ನು ಬಹಿಷ್ಕೃತಗೊಳಿಸಿಲ್ಲ.

ಉತ್ತರ ಅಮೇರಿಕದಲ್ಲಿ ದಿವ್ಯದರ್ಶನಾಕಾಂಕ್ಷೆಯ ಈ ಡಯೋನೀಶಿಯನ್ ಪ್ರವೃತ್ತಿಯು ಸಾಧಾರಣವಾಗಿ ಪಟ್ಟಭದ್ರ ಗುಂಪುಗಳೊಂದಿಗಾಗಲಿ, ಅವರ ಹಕ್ಕುಬಾಧ್ಯತೆಗಳೊಂದಿಗಾಗಲಿ ಹೊಂದಾಣಿಕೆ ಸಾಧಿಸಬೇಕಾದ ಅವಶ್ಯಕತೆ ಏರ್ಪಡುವುದಿಲ್ಲ. ಮಾಯಿಕ ಭರಿಸುವ ಮದ್ದು ಮತ್ತು ಮದ್ಯಗಳ ಮೂಲಕ ಬಹಿರಂಗವಾಗಿ ಈ ಅನುಭವ ಪಡೆಯಲು ಪ್ರಯತ್ನಿಸುವುದುಂಟು. ಮೆಕ್ಸಿಕೋದ ಇಂಡಿಯನ್ ಬಣಗಳಲ್ಲಿ ರಾಕ್ಷಸಕಳ್ಳಿಯ ಹಣ್ಣಿನ ರಸವನ್ನು ಹುಳಿಸಿ, ತಮ್ಮ ವಿಶ್ವಾಸದ ಪ್ರಕಾರ ಅತ್ಯಂತ ತುರೀಯವಾದ ಈ ಆನಂದ ಹಂತವನ್ನು ಮುಟ್ಟಲು ವಿಧಿಪೂರ್ವಕವಾಗಿ ಬಳಸುತ್ತಾರೆ. ಅವರ ನೆರೆಯ ನಂಟರಾದ ಪಿಮಾಗಳಲ್ಲಿ ಸರ್ವವಿಧವಾದ ಅನುಗ್ರಹಗಳನ್ನು ಪಡೆಯಲು ನಡೆಯುವ ವರ್ಷದ ದೊಡ್ಡ ಹಬ್ಬವೆಂದರೆ ಕಳ್ಳಿ ಮದ್ಯವನ್ನು ತಯಾರಿಸುವುದು. ಮೊದಲು ಪುರೋಹಿತರು, ಅನಂತರ ಇತರರು 'ದೈವಿಕ ಘಾಗಳು' ಅವನ್ನು ಕುಡಿಯುತ್ತಾರೆ. ಅವರ ರೂಢಿಗಳಲ್ಲಿ ಕಾವ್ಯದಲ್ಲಿ ಮತ್ತೇರಿದ್ದು

ವುದೂ ಮತ್ತು ದೈವಿಕರಾಗುವುದೂ ಎರಡೂ ಪರ್ಯಾಯ ಪದಗಳು. ಎರಡೂ ಸಹ ಮಂಬ್ಬು ಮಂಬ್ಬಾದ ಹೊರನೋಟ ಮತ್ತು ಒಳನೋಟಗಳು ಬೆರೆತ ಸ್ಥಿತಿ. ಈ ರೀತಿ ಸಾರ್ವಜನಿಕ ಮದ್ಯಪಾನವು ಇಡೀ ಬಣಕ್ಕೆ ಅವರು ದೈವಿಕತೆಯೊಂದಿಗೆ ಭಾವಿಸುವ ಆನಂದಾತಿರೇಕವನ್ನು ನೀಡುತ್ತದೆ.

ಈ ಅನುಭವವನ್ನು ಹೊಂದಲು ಮಯಕ ಬರಿಸುವ ಮದ್ದುಗಳ ಬಳಕೆಯು ಇನ್ನೂ ಹೆಚ್ಚು ವ್ಯಾಪ್ತವಾದುದು. ಪೆಯೋಟ್ ಅಥವಾ ಮೆಸ್ಕಲ್ ಬೀಜವು ಮೆಕ್ಸಿಕೋವಿನ ಎತ್ತರದ ಪ್ರದೇಶಗಳಲ್ಲಿ ಬೆಳೆಯುವ ಒಂದು ಕತ್ತಾಳಿ ಜಾತಿಯ ಗಿಡದ ಗುಬುಟು. ಈ ಪ್ರದೇಶಕ್ಕೆ ಯಾತ್ರೆ ಬರಬಹುದಾದಷ್ಟು ದೂರದಲ್ಲಿ ವಾಸಿಸುವ ಇಂಡಿಯನ್ ಬಣಗಳ ಜನ, ಗಿಡದ ಭಾಗಗಳನ್ನು ಹಸಿಯಾಗಿಯೇ ತಿನ್ನುತ್ತಾರೆ. ಆದರೆ ಗುಬುಟುಗಳು ಕೆನಡಾದ ಗಡಿಯವರೆಗೆ ಸರಕಾಗಿ ವ್ಯಾಪಾರವಾಗುತ್ತವೆ. ಅದನ್ನು ಯಾವಾಗಲೂ ವಿಧಿಪೂರ್ವಕವಾಗಿಯೇ ಬಳಸುತ್ತಾರೆ. ಅದರ ಪರಿಣಾಮ ಚೆನ್ನಾಗಿ ಗೊತ್ತು. ಅದು ವಿಲಕ್ಷಣವಾದ ಹೊಳೆ ಹೊಳೆಯುವ ಬಣ್ಣಗಳ ಚಿತ್ರಗಳ ಅನುಭವ ನೀಡುತ್ತದೆ. ಅದರ ಪರಿಣಾಮ ಹೆಚ್ಚು ಪ್ರಬಲವಾಗಿದ್ದು, ಅಂತಿಮವಾಗಿ ಹತಾಶಭಾವವನ್ನೋ ಇಲ್ಲವೆ, ಎಲ್ಲ ಬಗೆಯ ಕೊರತೆಗಳು ಅಸ್ಥಿರತೆಗಳಿಂದ ಬಿಡುಗಡೆಯ ಭಾವವನ್ನೋ ನೀಡುತ್ತದೆ. ಯಾವರೀತಿಯ ನರಸಂಬಂಧವಾದ ಗೊಂದಲವಾಗಲಿ, ಕಾಮ ಭಾವೋದ್ರೇಕವಾಗಲಿ ಉಂಟಾಗುವುದಿಲ್ಲ.

ಅಮೆರಿಕನ್ ಇಂಡಿಯನ್ನರಲ್ಲಿ ಈ ಪೇಯೋಟ್ ಪಂಥವು ಇನ್ನೂ ಹರಡುತ್ತಿದೆ. ಓಕ್ಲಹಾಮಾದಲ್ಲಿ ಇಂಡಿಯನ್ ಚರ್ಚ್ ಎಂಬ ಹೆಸರಲ್ಲಿ ಅದು ಸಂಘಟಿತವಾಗಿದೆ. ಹಲವಾರು ಬಣಗಳಲ್ಲಿ ಈ ಹೊಸ ಪಂಥದ ಮುಂದೆ ಹಿಂದಿನಿಂದ ಬಂದ ಬಣದ ಸಂಸ್ಕಾರವಿಧಿಗಳು ದುರ್ಬಲಗೊಂಡಿವೆ. ಎಲ್ಲ ಎಡೆಗಳಲ್ಲೂ ಇದರೊಂದಿಗೆ ಶ್ವೇತವರ್ಣೀಯರ ಪ್ರಭಾವಕ್ಕೆ ಕಟ್ಟಾವಿರೋಧ, ಅಥವಾ ಅತಿ ಶೀಘ್ರದಲ್ಲಿ ಅವರ ಜೀವನ ವಿಧಾನಗಳನ್ನು ಅನುಸರಿಸುವುದು, ಹೀಗೆ ಶ್ವೇತರ್ಣೀಯರತ್ತ ಇಳಿದಿರುವ ನಿರ್ದಿಷ್ಟ ಮನೋಭಾವಗಳಿಗೆ ಹೊಂದಿಕೊಂಡಿದೆ. ಅದರೊಂದಿಗೆಹಲವು ಕ್ರಿಶ್ಚಿಯನ್ ಅಂಶಗಳೂ ಹಾಸು ಹೊಕ್ಕಾಗಿವೆ. ಪೆಯೋಟನ್ನು ಒಬ್ಬರಿಂದೊಬ್ಬರು ಪಡೆಯುತ್ತ ಪ್ರಸಾದದಂತೆ ಸೇವಿಸುತ್ತಾರೆ. ನೃತ್ಯಗೀತಗಳೊಂದಿಗೆ, ಮೊದಲು ಪೆಯೋಟ್ ಬಳಿಕ ನೀರು, ಹೀಗೆ ಸುತ್ತಿ ಸುತ್ತಿ ಬರುತ್ತದೆ. ಇದು ಗಂಭೀರವಾದ ಇಡೀ ರಾತ್ರಿಯ ಸಮಾರಂಭವಾಗಿದ್ದು ಅದರ ಪರಿಣಾಮಗಳು ಮರುದಿನ ಪೂರ್ತ ಇರುತ್ತವೆ. ಕೆಲವೆಡೆಗಳಲ್ಲಿ ಇದನ್ನು ನಾಲ್ಕು ರಾತ್ರಿ ಸೇವಿಸಿ ಅದರಿಂದ ದೊರೆಯುವ ಭಾವೋನ್ಮಾದಕ್ಕಾಗಿ ನಾಲ್ಕು ದಿನಗಳನ್ನು ಮೀಸಲಿಡುತ್ತಾರೆ. ಪೆಯೋಟನ್ನು ಸಮರ್ಥಿಸುವ ಪಂಥಗಳಲ್ಲಿ ಅದು ದೈವ ಸಮಾನ. ಅದರ

ಒಂದು ದೊಡ್ಡ ಗುಬುಟನ್ನು ಪೂಜಾಪೀಠದ ಮೇಲಿಟ್ಟು ಪೂಜಿಸುತ್ತಾರೆ. 'ನನ್ನ ಜೀವನದಲ್ಲಿ ಅರಿತಿರುವ ಏಕೈಕ ಪವಿತ್ರ ವಸ್ತು ಅದು. ಈ ಮದ್ದೊಂದೇ ಪವಿತ್ರ. ಅದು ನನ್ನನ್ನು ಎಲ್ಲ ಪಾಪಗಳಿಂದ ಬಿಡುಗಡೆ ಮಾಡಿದೆ. ಈ ರೀತಿಯಾಗಿ ಪ್ರತಿ ಸತ್ಪರಿಣಾಮವೂ ಅದರಿಂದಲೇ ಎಂಬಂತೆ ಬಗೆಯುತ್ತಾರೆ. ಪೆಯೋಟ್ ಸೇವಿಸಿ ಪಡೆಯುವ ಆನಂದ ಪರವಶತೆಯ ಡಯೋನೀಶಿಯನ್ ಅನುಭವವು ಅದು ಗಳಿಸಿರುವ ರಂಜನೆಗೆ ಮತ್ತು ಧಾರ್ಮಿಕ ಅಧಿಕಾರ ಶಕ್ತಿಗೆ ಮೂಲನೆಲೆ.

ದತ್ತೂರಿಯು ಇದಕ್ಕಿಂತ ಪ್ರಬಲವಾದ ವಿಷ. ಅದರ ಬಳಕೆ ಸ್ಥಳೀಯವಾಗಿದ್ದು, ಮೆಕ್ಸಿಕೋ ಮತ್ತು ದಕ್ಷಿಣ ಕ್ಯಾಲಿಫೋರ್ನಿಯಾದ ಬಣಗಳಿಗೆ ಮಾತ್ರ ಸೀಮಿತವಾಗಿದೆ. ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ ಅದನ್ನು ದೀಕ್ಷಾ ಸಮಾರಂಭದಲ್ಲಿ ಹುಡುಗರಿಗೆ ಕೊಡುತ್ತಾರೆ. ಅದರ ಪ್ರಭಾವದಿಂದ ಅವರು ದಿವ್ಯ ದರ್ಶನ ಪಡೆಯುತ್ತಾರೆ. ಆ ಪಾನೀಯ ಕುಡಿದು ಕೆಲ ಹುಡುಗರು ಸತ್ತು ಹೋದುದೂ ಉಂಟು. ಹುಡುಗರು ಮಯಕ ಬಂದು ಹಾಗೆಯೇ ಒಂದು ದಿನ, ಕೆಲವು ವೇಳೆ ನಾಲ್ಕು ದಿನ ಇರುವುದಾಗಿ ಕೆಲವು ಬಣಗಳವರು ಹೇಳಿದ್ದನ್ನು ಕೇಳಿದ್ದೇನೆ. ಈ ಬಣಗಳ ಪೂರ್ವ ಭಾಗದ ನೆರೆಯವರಾದ ಮೊಜಾವೆ ಜನ ಜೂಜಿನಲ್ಲಿ ಅದೃಷ್ಟ ಒಲಿಯಲು ದತ್ತೂರಿಯನ್ನು ಬಳಸಿ, ನಾಲ್ಕು ದಿನ ಸ್ಮೃತಿ ತಪ್ಪಿರುತ್ತಾರಂತೆ. ಈ ಸಮಯದಲ್ಲಿ ಕನಸು ಬಿದ್ದು ಅವರು ಕೋರಿದ ಒಳ್ಳೆಯ ಅದೃಷ್ಟವನ್ನು ದಯಪಾಲಿಸುತ್ತದೆ.

ಹೀಗೆ ದಕ್ಷಿಣದ ಪ್ವೆಬ್ಲೋಗಳ ಹೊರತು ಉತ್ತರ ಅಮೆರಿಕದ ಇಂಡಿಯನ್ನರಲ್ಲಿ ಎಲ್ಲೆಲ್ಲಿಯೂ ದೈವಿಕ ಶಕ್ತಿಯನ್ನು ಪಡೆಯುವ ಸಲುವಾಗಿ ಡಯೋನೀಶಿಯನ್ ದಿವ್ಯ ದರ್ಶನದ ಸಿದ್ಧಾಂತವನ್ನೂ, ಮತ್ತು ಕಾರ್ಯತಃ ಅದರ ಅನುಕರಣೆಯನ್ನೂ ಕಾಣುತ್ತೇವೆ. ನೈಋತ್ಯ ಪ್ರದೇಶವು ಉಪವಾಸ, ಚಿತ್ರಹಿಂಸೆ, ಮಯಕಮದ್ದು ಮತ್ತು ಮದ್ಯದಿಂದ ದಿವ್ಯದರ್ಶನ ಬಯಸುವ ಜನರಿಂದ ಸುತ್ತುವರಿದಿದೆ. ಆದರೆ ಪ್ವೆಬ್ಲೋಗಳು ಮಾತ್ರ ಈ ವಿಚ್ಛಿದ್ರಕಾರಿ ಅನುಭವವನ್ನು ಒಪ್ಪಿಕೊಳ್ಳುವುದಿಲ್ಲ; ಅವರು ಈ ಮೂಲಕ ದೈವಿಶಕ್ತಿಯನ್ನು ಪಡೆಯುವುದಿಲ್ಲ. ಅಕಸ್ಮಾತ್ತಾಗಿ ಯಾವುದಾದರೂ ಜುನಿಯು ದೃಶ್ಯ ಅಥವಾ ಶ್ರವಣ ಭ್ರಾಂತಿಗೆ ಗುರಿಯಾದನೆಂದರೆ ಅದು ಮೃತ್ಯು ಸೂಚಕವೆಂದು ಭಾವನೆ. ಇದೊಂದು ದೂರ ವಿಡಬೇಕಾದಂತಹ ಅನುಭವ; ಉಪವಾಸ ಮಾಡಿ ಪಡೆಯುವ ಅನುಭವವಲ್ಲ. ಪ್ವೆಬ್ಲೋಗಳಲ್ಲಿ ದೈವಿಕ ಶಕ್ತಿಯು ಪಂಥದ ಸದಸ್ಯತ್ವದ ಮೂಲಕ ಪಡೆಯತಕ್ಕಂತಹುದು. ಆ ಸದಸ್ಯತ್ವವನ್ನು ಹಣ ನೀಡಿ ಕೊಂಡಿದ್ದು ಅದಕ್ಕಾಗಿ ಪದಶುದ್ಧವಾದ ಸಂಸ್ಕಾರ ವಿಧಿ ಮಂತ್ರಗಳನ್ನು ಕಲಿಯಬೇಕು. ಸದಸ್ಯತ್ವ ಗಳಿಸುವ

ಸಿದ್ಧತೆ ನಡೆಸಿದಾಗಲಾಗಲಿ, ದೀಕ್ಷಾ ಸ್ವೀಕಾರದಲ್ಲಾಗಲಿ, ಅನಂತರ ಹಾಗೆ ಏಣಿ ಮೇಲಿನ ಸ್ತರಗಳಿಗೆ ಏರುವಾಗಲಾಗಲಿ, ಅಥವಾ ಧಾರ್ಮಿಕ ಹಕ್ಕು ಬಾಧ್ಯತೆಗಳನ್ನು ಚಲಾಯಿಸುವಾಗಲಾಗಲಿ ಚಿತ್ತಸ್ಥಿಮಿತತೆಯನ್ನು ದಾಟಬೇಕಾಗಿ ಬರುವ ಒಂದು ಪ್ರಸಂಗವೂ ಬರುವುದಿಲ್ಲ. ಅವರು ಇವುಗಳಲ್ಲಿ ಅತಿರೇಕ ಬಯಸುವುದೂ ಇಲ್ಲ; ಗೌರವಿಸುವುದೂ ಇಲ್ಲ. ಹೀಗಿದ್ದರೂ ವ್ಯಾಪ್ತವಾದ ದಿವ್ಯ ದರ್ಶನದ ಅನ್ವೇಷಣೆಗೆ ಆಧಾರವಾಗಿರುವಂತಹ ಅಪಾಯಕಾರಿ ತಾಣಗಳನು ಅರಸುವುದು; ಪಕ್ಷಿ ಅಥವಾ ಪ್ರಾಣಿಯೊಂದರೊಂದಿಗೆ ಮಿತ್ರತ್ವ, ಉಪವಾಸ, ದೈವಿಕ ಸಮಾಗಮದಿಂದ ವಿಶೇಷ ಅನುಗ್ರಹ ದೊರೆಯುತ್ತದೆಂಬ ವಿಶ್ವಾಸ ಮೊದಲಾದ ಮೂಲಾಂಶಗಳು ಅವರಲ್ಲಿಯೂ ಇವೆ ಆದರೆ ಅವು ಡಯೋನೀಶಿಯನ್ ಅನುಭವವಾಗಿ ಅನುಕಲನವಾಗಿಲ್ಲ. ಅವು ಸಂಪೂರ್ಣವಾಗಿ ಅರ್ಥಾಂತರಗೊಂಡಿವೆ ಪ್ವೆಬ್ಲೋಗಳಲ್ಲಿ ಗಂಡಸರು ರಾತ್ರಿಯಲ್ಲಿ ಭಯಾನಕವಾದ ಅಥವಾ ಪವಿತ್ರವಾದ ಜಾಗಗಳಿಗೆ ಹೋಗಿ ದೈವವಾಣಿಯನ್ನು ಕೇಳುತ್ತಾರೆ. ಅದರ ಉದ್ದೇಶ ದೈವದೊಂದಿಗೆ ಘಾತುಕತೆ ನಡೆಸುವುದಲ್ಲ: ಒಳ್ಳೆಯ ಅಥವಾ ಕೆಟ್ಟ ಶಕುನದ ಸೂಚನೆಗಳನ್ನು ಪಡೆಯುವುದು ಮಾತ್ರ. ಅದು ಹೆದರಿಕೆಯಾಗುವಂತಹ ಸಣ್ಣ ವಿಷಮ ಪರೀಕ್ಷೆಯೆಂದು ಪರಿಗಣಿತವಾಗಿದ್ದು, ಮನೆಗೆ ಮರಳುವಾಗ ತನ್ನನ್ನು ಏನೇ ಹಿಂಬಾಲಿಸಿ ಬಂದಂತೆ ಭಾಸವಾದರೂ ಹಿಂತಿರುಗಿ ನೋಡಲೇ ಬಾರದೆಂಬ ಕಡ್ಡಾಯವಾದ ನಿಷೇಧವಿದೆ. ಹೊರನೋಟಕ್ಕೆ ಇದು ಸಹ ದಿವ್ಯದರ್ಶನಾನ್ವೇಷಣೆಯಂತೆಯೇ ಇದೆ. ಎರಡರಲ್ಲೂ ಕಠಿಣವಾದ ಕಾರ್ಯಭಾರವೊಂದಕ್ಕೆ ಸಿದ್ಧಗೊಳ್ಳಲು ಹೋಗುತ್ತಾರೆ. ಇದು ನೈಋತ್ಯ ಪ್ರದೇಶದಲ್ಲಿ ನಡಿಗೆ ಸ್ಪರ್ಧೆಯ ರೂಪ ಪಡೆದಿವೆ. ಕತ್ತಲು, ಏಕಾಂತ, ಪ್ರಾಣಿಗಳು ಕಾಣಿಸಿಕೊಳ್ಳುವುದು. ಇವೇ ಪ್ರಾಮುಖ್ಯ ಅಂಶಗಳು. ಆದರೆ ಇತರ ಎಡೆಗಳಲ್ಲಿ ಪಡೆದ ಅನುಭವವು ಡಯೋನೀಶಿಯನ್ ಎಂದು ಎಣಿಸಲ್ಪಟ್ಟರೆ, ಪ್ವೆಬ್ಲೋಗಳಲ್ಲಿ ಅದು ಶಕುನ ಸೂಚನೆಯಾಗಿ ಮಾತ್ರ ಪರಿಗಣಿತವಾಗುತ್ತದೆ.

ಅಮೆರಿಕನ್ ಇಂಡಿಯನ್ನರು ಸ್ವಪ್ರಚೋದಿತ ದಿವ್ಯದರ್ಶನವನ್ನು ಪಡೆಯಲು ಬಹಳವಾಗಿ ನಂಬಿಕೊಂಡಿರುವ ತಂತ್ರವಾದ ಉಪವಾಸವೂ ಸಹ ಇದೇ ರೀತಿ ಅರ್ಥಾಂತರಗೊಂಡಿದೆ. ಪ್ರಜ್ಞಾವಸ್ಥೆಗೆ ನಿಲುಕದೆ ಸುಪ್ತವಾಗಿರುವ ಅನುಭವಗಳನ್ನು ಹೊಡೆದೆಬ್ಬಿಸಲು ಅದು ಬಳಕೆಯಾಗುವುದಿಲ್ಲ. ಪ್ವೆಬ್ಲೋಗಳಲ್ಲಿ ಅದು ಸಂಸ್ಕಾರ ರೀತ್ಯಾ ಶುದ್ಧತೆಗಳಿಸಲು ಒಂದು ಅವಶ್ಯಕ ವಿಧಾನ. ಉಪವಾಸಕ್ಕೂ ಯಾವುದೇ ರೀತಿಯ ಆನಂದೋದ್ರೇಕಕ್ಕೂ ನಂಟು ಕಲ್ಪಿಸುವ ಸಿದ್ಧಾಂತವು ಪ್ವೆಬ್ಲೋ ಇಂಡಿಯನ್ನರಿಗೆ ಅತ್ಯಂತ ಅಚ್ಚರಿ ತರುವ ಸಂಗತಿ. ಪುರೋಹಿತರು ಕೈಗೊಳ್ಳುವ ತಪಸ್ಸಾಧನೆ, ನೃತ್ಯ, ಪಂದ್ಯಾಟ ಇವುಗಳಲ್ಲಿ ಭಾಗವಹಿಸುವ

ಮೊದಲು ಹಾಗೂ ಕೊನೆ ಮೊದಲಿಲ್ಲದ ಸಂಸ್ಕಾರ ಸಮಾರಂಭಗಳಲ್ಲಿ ಉಪವಾಸವು ಅವಶ್ಯಕ. ಆದರೆ ಅದು ಶಕ್ತಿ ನೀಡುವ ಅನುಭವವನ್ನು ತರುವುದಿಲ್ಲ; ಡಯೋನೀಶಿಯನ್ ಬಗೆಯದಲ್ಲ.

ನೈಋತ್ಯ ಪ್ವೆಬ್ಲೋಗಳಲ್ಲಿ ದತ್ತೂರಿ ವಿಷ ಪ್ರಯೋಗದ ಪಾಡು ಸಹ ಹೆಚ್ಚು ಕಡಮೆ ಉಪವಾಸದ ತಂತ್ರದ ಪಾಡೇ ಆಗಿದೆ. ಆ ರೂಢಿ ಇದ್ದರೂ ಹಲ್ಲು ಕಳೆದ ಹಾವಿನಂತೆ ಇದೆ. ದಕ್ಷಿಣ ಕ್ಯಾಲಿಫೋರ್ನಿಯಾದ ಇಂಡಿಯನ್ನರ ಮಾದರಿಯಂತೆ ಒಂದರಿಂದ ನಾಲ್ಕು ದಿನಗಳ ದತ್ತೂರಿ ಪ್ರಚೋದಿತ ಸಮಾಧಿ ಸ್ಥಿತಿಯು ಅವರಿಗಿಲ್ಲ. ಪುರಾತನ ಮೆಕ್ಸಿಕೋವಿನಲ್ಲಿದ್ದಂತೆ ಕಳ್ಳನನ್ನು ಕಂಡುಹಿಡಿಯಲು ಈ ಮಯಕ ಮದ್ದು ಬಳಕೆಯಾಗುತ್ತದೆ. ಆ ಮದ್ದನ್ನು ಪ್ರಯೋಗ ಮಾಡಬೇಕಾದಾಗ ಕಾರ್ಯ ನಡೆಸುತ್ತಿರುವ ಪುರೋಹಿತನು ಒಂದು ಚಿಟಿಕೆಯನ್ನು ತೆಗೆದು ಪ್ರಯೋಗಕ್ಕೆ ಗುರಿಯಾಗುವವನ ಬಾಯಿಗೆ ಹಾಕಿ, ಪಕ್ಕದ ಕೋಣೆಗೆ ಹೋಗಿ, ಅಲ್ಲಿಂದ ದತ್ತೂರಿ ಸೇವಿಸಿದ ಮನುಷ್ಯನ ಬಾಯಿಂದ ಸಂಶಯಗ್ರಸ್ತನ ಹೆಸರು ಬರುತ್ತದೋ ಎಂದು ಕೇಳುತ್ತಾನೆ. ಅವನು ಯಾವ ಕ್ಷಣದಲ್ಲೂ ಮಯಕಗೊಂಡಿರುವನೆಂದು ಪರಿಗಣಿಸಲಾಗುವುದಿಲ್ಲ. ಅವನು ತನ್ನ ಕೋಣೆಯಲ್ಲಿ ಕೆಲವೊಮ್ಮೆ ಮಲಗುತ್ತ, ಕೆಲವೊಮ್ಮೆ ನಡೆದಾಡುತ್ತ ಇರುತ್ತಾನೆ. ಮರುದಿನ ಬೆಳಿಗ್ಗೆ ತನಗೆ ದೊರೆತ ಯಾವ ಅಂತರ್ದೃಷ್ಟಿಯ ನೆನಪೂ ಅವನಿಗೆ ಇರುವುದಿಲ್ಲ. ಮದ್ದಿನ ಎಲ್ಲ ದೋಷಗಳನ್ನೂ ಕಳೆಯಲು ಬಹಳ ಎಚ್ಚರ ವಹಿಸುತ್ತಾರೆ. ಆ ಸಸ್ಯದ ಅಪಾಯಕಾರಿ ಪವಿತ್ರತೆಯನ್ನು ಕಳೆಯಲು ಎರಡು ಶುದ್ಧೀಕರಣ ಮಾರ್ಗಗಳು ರೂಢಿಯಲ್ಲಿವೆ. ನಾಲ್ಕು ಬಾರಿ ವಾಂತಿಗೆ ಕೊಟ್ಟು, ಮದ್ದಿನ ಕಟ್ಟಕಡೆಯ ಗುರುತೂ ಇಲ್ಲದಂತಾಯಿತೆಂದು ಭಾವಿಸುವುದು ಮೊದಲನೆಯದು. ಅನಂತರ ಅವನ ತಲೆಗೂದಲನ್ನು ಯುಕ್ಕಾನೊರೆಯಿಂದ ತೊಳೆಯುವುದು. ಜುನಿಗಳಲ್ಲಿ ಬಳಕೆಯಲ್ಲಿರುವ ದತ್ತೂರಿಯ ಇನ್ನೊಂದು ಉಪಯೋಗವಂತೂ ಡಯೋನೀಶಿಯನ್ ಗುರಿಗಳಿಂದ ಇನ್ನೂ ದೂರವಾದುದು. ಕೆಲವು ಸಂದರ್ಭಗಳಲ್ಲಿ ರಾತ್ರಿ ವೇಳೆ ಪುರೋಹಿತ ಪಂಥಗಳವರು 'ಮಳೆಗಾಗಿ ಹಾಡಿರೆಂದು ಹಕ್ಕಿಗಳನ್ನು ಕೇಳಿಕೊಳ್ಳಲು' ಪ್ರಾರ್ಥನಾ ದಂಡಗಳನ್ನು ನೆಡುವುದಕ್ಕೆ ಹೋಗುತ್ತಾರೆ. ಅಂತಹ ಸಮಯಗಳಲ್ಲಿ ದತ್ತೂರಿ ಬೇರಿನ ಪುಡಿಯನ್ನು ಸಣ್ಣ ಪ್ರಮಾಣದಲ್ಲಿ ತೆಗೆದು ಪ್ರತಿ ಪುರೋಹಿತನ ಕಣ್ಣು, ಕಿವಿ, ಬಾಯಿಗಳಿಗೆ ಹಾಕುತ್ತಾರೆ. ಈ ಸಂದರ್ಭದಲ್ಲಿ ಆ ಮಾಯಕ ಮದ್ದಿನ ಗುಣವಿಶೇಷಗಳು ಗಮನಕ್ಕೆ ಬರುವುದಿಲ್ಲ.

ಪೆಯೋಟ್ ಗತಿಯಂತೂ ಇದಕ್ಕಿಂತ ಹೀನವಾಗಿದೆ. ಪೆಯೋಟ್ ಗುಂಬುಟುಗಳು ಬೆಳೆಯುವ ಮೆಕ್ಸಿಕನ್ ಪ್ರಸ್ಥಭೂಮಿಗೆ ಸಮೀಪದಲ್ಲಿಯೇ ಪ್ವೆಬ್ಲೋಗಳು

ಇದ್ದಾರೆ. ಪ್ವೆಬ್ಲೋಗಳು ಬಹಳವಾಗಿ ಸಂಪರ್ಕ ಸಂಬಂಧ ಪಡೆದಿರುವ ಅಪಾಚಿ ಮತ್ತಿತರ ಮೈದಾನದ ಆದಿವಾಸಿಗಳು ಪೆಯೋಟ್ ಸೇವನೆ ಮಾಡುವವರು. ಆದರೂ ಪ್ವೆಬ್ಲೋಗಳಲ್ಲಿ ಈ ರೂಢಿ ನೆಲೆಗೊಳ್ಳಲಿಲ್ಲ. ಈಚೆಗೆ ಪ್ವೆಬ್ಲೋಗಳಲ್ಲಿ ಮೈದಾನದ ಜನಕ್ಕೆ ಹತ್ತಿರದವರಾದ, ಸರ್ಕಾರ ವಿರೋಧಿ ಗುಂಪೊಂದರಲ್ಲಿ ಟಾವೋಸ್ ಪ್ರದೇಶದಲ್ಲಿ ಇದು ಬಳಕೆಗೆ ಬರುತ್ತಿದೆ. ಆದರೆ ಇತರ ಎಡೆಗಳಲ್ಲಿ ಅದು ರೂಢಿಗೆ ಬಂದಿಲ್ಲ. ತಮ್ಮ ಕಟ್ಟುನಿಟ್ಟಾದ ಅಪೊಲೋನಿಯನ್ ಮನೋಭಾವದಿಂದಾಗಿ ಪ್ವೆಬ್ಲೋಗಳು ಯಾವುದೇ ರೀತಿಯಲ್ಲಿ ವ್ಯಕ್ತಿಯನ್ನು ತನ್ನ ಇತಿ ಮಿತಿಗಳಿಂದ ದಾಟಿಸಿ, ಅವನ ಚಿತ್ತಸ್ಥಿಮಿತವನ್ನು ತಪ್ಪಿಸುವಂತಹ ಅನುಭವಗಳಲ್ಲಿ ವಿಶ್ವಾಸವಿಡದೇ ತಿರಸ್ಕರಿಸುತ್ತಾರೆ.

ಈ ತಿರಸ್ಕಾರ ಎಷ್ಟು ಬಲವಾಗಿದೆಯೆಂದರೆ, ಅದರಿಂದಾಗಿ ಅಮೆರಿಕದ ಮದ್ಯವೂ ಸಹ ಆಡಳಿತ ಸಮಸ್ಯೆಯಾಗಿಲ್ಲ. ಸಂಯುಕ್ತ ಸಂಸ್ಥಾನಗಳ ಬೇರೆ ಎಲ್ಲ ಇಂಡಿಯನ್ನರ ಮೀಸಲು ಪ್ರದೇಶಗಳಲ್ಲೂ ಮದ್ಯವು ಅನಿವಾರ್ಯವಾದ ಒಂದು ಸಮಸ್ಯೆ. ಇಂಡಿಯನ್ನನ ವಿಸ್ಕಿ ದಾಹವನ್ನು ಸರಿಗಟ್ಟುವಂತಹ ಯಾವ ಸರ್ಕಾರಿ ಕಾನೂನೂ ಇಲ್ಲ. ಆದರೆ ಪ್ವೆಬ್ಲೋಗಳಲ್ಲಿ ಇದು ಎಂದೂ ಸಮಸ್ಯಾತ್ಮಕವಾಗಿರಲಿಲ್ಲ. ಹಿಂದೆ ಇವರು ಯಾವ ರೀತಿಯ ಸ್ಥಳೀಯ ಮದ್ಯವನ್ನೂ ತಯಾರಿಸುತ್ತಿರಲಿಲ್ಲ. ಈಗಲೂ ತಯಾರಿಸುವುದಿಲ್ಲ. ಸಮೀಪದ ಅಪಾಚೆಗಳಲ್ಲಿ ಮುದುಕರಾಗಲಿ, ಯುವಕರಾಗಲಿ ನಗರಕ್ಕೆ ಬಂದು ಭೇಟಿಯಿತ್ತರೆಂದರೆ ಅದು ಕಂಡಿದು ಉರುಳಾಡುವ ಸಂದರ್ಭ. ಆದರೆ ಪ್ವೆಬ್ಲೋಗಳಲ್ಲಿ ಹಾಗಿಲ್ಲ. ಪ್ವೆಬ್ಲೋಗಳಲ್ಲಿ ಕುಡಿತದ ಬಗ್ಗೆ ಧಾರ್ಮಿಕ ನಿಷೇಧವಿದೆಯೆಂದಲ್ಲ. ಇದು ಅಂತಹ ನಿಷೇಧಕ್ಕಿಂತ ಆಳವಾದದ್ದು. ಅಮಲು ಎನ್ನುವುದೇ ಅವರಿಗೆ ಹೇಸಿಗೆ. ಜುನಿ ಪ್ರದೇಶಕ್ಕೆ ಮೊದಮೊದಲು ಮದ್ಯವು ಪ್ರವೇಶಿಸಿದಾಗ, ಹಿರಿಯರು ಸ್ವಯಂಪ್ರೇರಿತರಾಗಿ ಅದನ್ನು ಬಹಿಷ್ಕರಿಸಿದರು; ಈ ಕಟ್ಟಳೆ ಜನರ ಮನೋಭಾವಕ್ಕೆ ಅನುಕೂಲವಾಗಿತ್ತು.

ಚಿತ್ರಹಿಂಸೆಯು ಇನ್ನೂ ಹೆಚ್ಚು ನಿಷ್ಠೆಯಿಂದ ನಿರಾಕರಿಸಲ್ಪಟ್ಟಿದೆ. ಪ್ವೆಬ್ಲೋಗಳು ಮುಖ್ಯವಾಗಿ ಪೂರ್ವ ಭಾಗದ ಪ್ವೆಬ್ಲೋಗಳು ಸ್ವಯಂಚಿತ್ರಹಿಂಸೆಯನ್ನು ಬಹಳ ಮಹತ್ವದ್ದನ್ನಾಗಿ ಪರಿಗಣಿಸುವ ಎರಡು ವಿಭಿನ್ನ ಸಂಸ್ಕೃತಿಗಳಾದ ಮೈದಾನ ಸೀಮೆಯ ಇಂಡಿಯನ್ನರು ಮತ್ತು ಮೆಕ್ಸಿಕನ್ ಪೆನಿಟೆಂಟೆಗಳೊಂದಿಗೆ ಸಂಪರ್ಕ ಹೊಂದಿದ್ದರು. ಪುರಾತನ ಮೆಕ್ಸಿಕೋವಿನಲ್ಲಿ ಚಿತ್ರಹಿಂಸೆ ರೂಢಿಯಲ್ಲಿದ್ದ ಗತಕಾಲದ ನಾಗರಿಕತೆಯ ಹಲವಾರು ಸ್ವಭಾವ ಲಕ್ಷಣಗಳನ್ನು ಪ್ವೆಬ್ಲೋ ಸಂಸ್ಕೃತಿಯೂ ಪಡೆದಿದೆ. ಮೆಕ್ಸಿಕೋ ನಾಗರಿಕತೆಯಲ್ಲಿ ಎಲ್ಲ ಸಂದರ್ಭಗಳಲ್ಲೂ ದೇಹದ ವಿವಿಧ ಅಂಗಗಳಿಂದ ಅದರಲ್ಲಿಯೂ ಮುಖ್ಯವಾಗಿ ನಾಲಗೆಯಿಂದ ರಕ್ತ ಸೆಳೆದು ದೇವತೆ

ಗಳಿಗೆ ಅರ್ಪಿಸುವ ರೂಢಿಯಿತ್ತು. ಮೈದಾನ ಪ್ರದೇಶದಲ್ಲಿ ಸ್ವಯಂ ಚಿತ್ರಹಿಂಸೆಯು ದಿವ್ಯದರ್ಶನವನ್ನು ಪಡೆಯಲು ಅವಶ್ಯಕವಾದ ಆತ್ಮವಿಸ್ಮೃತಿಯ ಸ್ಥಿತಿಯನ್ನು ಮುಟ್ಟುವ ತಂತ್ರವಾಗಿತ್ತು. ನ್ಯೂ ಮೆಕ್ಸಿಕೋವಿನ ಪೆನಿಟೆಂಟೆಗಳು ಪ್ರಪಂಚದ ಮೂಲೆಯೊಂದರಲ್ಲಿ ಉಳಿದುಕೊಂಡಿರುವ, ಮಧ್ಯಕಾಲೀನ ಸ್ಪೈನ್ನಿನ ಫ್ಲಾಗೆಲಾಂಟರ ಒಂದು ಶಾಖೆ. ಅವರಲ್ಲಿ ಇಂದಿಗೂ ಗುಡ್‌ಫ್ರೈಡೇಯಂದು ಶಿಲುಬೆಗೇರಿಸುವುದನ್ನು ತೋರಿಸುವ ಆಚರಣೆಗಳು ಬಳಕೆಯಲ್ಲಿವೆ, ಅಂದಿನ ಸಮಾರಂಭದ ಪರಾಕಾಷ್ಠೆಯೆಂದರೆ ಕ್ರಿಸ್ತನ ವೇಷ ಕಟ್ಟಿದ ಪಂಥದ ಸದಸ್ಯನೊಬ್ಬನನ್ನು ಶಿಲುಬೆಗೇರಿಸುವುದು. ಭಾರವಾದ ಶಿಲುಬೆಯ ತೂಕದಿಂದ ತತ್ತರಿಸುತ್ತಿರುವ ಕ್ರಿಸ್ತನ ಮೆರವಣಿಗೆಯು ಗುಡ್‌ಫ್ರೈಡೇ ದಿನದ ಬೆಳಿಗ್ಗೆ ಪೆನಿಟೆಂಟೆಗಳ ಪೂಜಾ ಮಂದಿರದಿಂದ ಹೊರಡುತ್ತದೆ. ಅವನ ಹಿಂದೆ ಅವನ ಅನುಯಾಯಿಗಳು ವಿವಸ್ತ್ರವಾದ ತಮ್ಮ ಬೆನ್ನಿನ ಮೇಲೆ ಕತ್ತಿ ಕಳ್ಳಿಯಿಂದ ಮಾಡಿ, ಜೊಲ್ಲಾ ಮುಳ್ಳು ಕೂಡಿಸಿ ರಿಸಿದ ಚಾವಟಿಗಳಿಂದ ಹೆಜ್ಜೆಗೊಮ್ಮೆ ತಮ್ಮ ಕೈಯಿಂದ ತಾವೇ ಹೊಡೆಸಿ ಕೊಳ್ಳುತ್ತ ಹೋಗುತ್ತಾರೆ. ಅವರ ಬೆನ್ನಿನಿಂದ ರಕ್ತ ಸುರಿಯ ತೊಡಗಿ ಸ್ವಲ್ಪ ದೂರದಿಂದ ನೋಡಿದಾಗ ಅವರ ಬೆನ್ನು ಹೊಳೆಯುವ ಕೆಂಪು ವಸ್ತ್ರದಿಂದ ಮುಚ್ಚಿದ್ದಂತೆ ತೋರುತ್ತದೆ. ಮೆರವಣಿಗೆಯ ದಾರಿ ಸುಮಾರು ಒಂದೂವರೆ ಮೈಲಿಗಳಷ್ಟು ಇರುತ್ತದೆ, ಕೊನೆಯಲ್ಲಿ ಕ್ರಿಸ್ತನನ್ನು ಶಿಲುಬೆಗೆ ಬಂಧಿಸಿ ಕಟ್ಟಿ ಅದನ್ನು ಎತ್ತಿ ನಿಲ್ಲಿಸುತ್ತಾರೆ. ಕ್ರಿಸ್ತನ ವೇಷವನ್ನು ಧರಿಸಿರುವ ವ್ಯಕ್ತಿಯಾಗಲಿ ಚಾವಟಿಯಿಂದ ಬಡಿದು ಕೊಂಡವರಲ್ಲಿ ಯಾರಾಗಲಿ, ಸತ್ತರೆ ಅವರ ಚಡಾವುಗಳನ್ನು ಅವರ ಮನೆಬಾಗಿಲಲ್ಲಿ ಇಡುತ್ತಾರೆ. ಅವರಿಗಾಗಿ ಸಂತಾಪವನ್ನು ಆಚರಿಸುವುದಿಲ್ಲ.

ಪ್ವೆಬ್ಲೋಗಳಿಗೆ ಈ ರೀತಿಯ ಸ್ವಯಂ ಚಿತ್ರಹಿಂಸೆ ಅರ್ಥವಾಗುವುದಿಲ್ಲ, ಪ್ರತಿಯೊಬ್ಬನಿಗೂ ಕೈಯಲ್ಲಿ ಐದು ಬೆರಳುಗಳೂ ಇರುತ್ತವೆ. ಮಾಟಗಾರಿಕೆಯ ತಪ್ಪೊಪ್ಪಿಗೆ ಪಡೆಯಲು ಅವನು ಚಿತ್ರಹಿಂಸೆಗೆ ಗುರಿಯಾಗಿದ್ದರೆ ಹೊರತು. ಅವುಗಳ ಮೇಲೆ ಯಾವ ಗಾಯದ ಗುರುತೂ ಇರುವುದಿಲ್ಲ. ಅವರ ಬೆನ್ನುಗಳ ಮೇಲೆ ಗಾಯದ ಕುರುಹುಗಳಾಗಲಿ. ಚರ್ಮ ಸುಲಿದ ಗುರುತುಗಳಾಗಲಿ ಇರುವುದಿಲ್ಲ. ಅವರಲ್ಲಿ ತಮ್ಮ ರಕ್ತವನ್ನೇ ಅರ್ಪಿಸುವ ಯಾವ ಸಂಸ್ಕಾರ ವಿಧಿಯೂ ಇಲ್ಲ. ಫಲಪ್ರದತೆಯನ್ನು ಗಳಿಸಲೂ ಅದನ್ನು ಬಳಸುವುದಿಲ್ಲ. ದೀಕ್ಷಾ ಸಮಾರಂಭಗಳ ಹಲವು ಉದ್ರೇಕದ ಕ್ಷಣಗಳಲ್ಲಿ ತಮ್ಮನ್ನು ತಾವೇ ಸ್ವಲ್ಪಮಟ್ಟಿಗೆ ನೋಯಿಸಿ ಕೊಳ್ಳುವುದುಂಟು, ಆದರೆ ಅದು ಸಹ ಬಹುತೇಕವಾಗಿ ತರುಣರ ಅತ್ಯುತ್ಸಾಹವೇ ಹೊರತು ಬೇರೇನೂ ಅಲ್ಲ. ಯುದ್ಧಪಂಥಗಳಲ್ಲೊಂದಾದ ಕಳ್ಳಿಸಂಘದವರು ಕಳ್ಳಿ ಪಟ್ಟೆಗಳಿಂದ ಮಾಡಿದ ಚಾವಟಿಗಳಿಂದ ತಮ್ಮನ್ನು ತಾವೇ ಮತ್ತು ಒಬ್ಬರ

ನ್ನೊಬ್ಬರು ಬಾರಿಸಿಕೊಳ್ಳುತ್ತಾರೆ. ಅಗ್ನಿಸಂಘದವರು ವಿನೋದಕ್ಕಾಗಿ ಬೆಂಕಿಯನ್ನು ಎಸೆದಾಡಿಕೊಳ್ಳುತ್ತಾರೆ. ಆದರೆ ಅವುಗಳಿಂದ ಯಾವುದೇ ರೀತಿಯ ಮಾನಸಿಕ ಆಪತ್ತನ್ನಾಗಲಿ, ವಿಲಕ್ಷಣ ಅನುಭವವನ್ನಾಗಲಿ ನಿರೀಕ್ಷಿಸುವುದಿಲ್ಲ. ಪ್ವೆಬ್ಲೋಗಳು ಹಾಗೂ ಮೈದಾನದ ಜನರು ತಮ್ಮ ಅಗ್ನಿ ಕೈಚಳಕಗಳಲ್ಲಿ ಖಂಡಿತವಾಗಿಯೂ ಸ್ವಯಂ ಚಿತ್ರಹಿಂಸೆಯನ್ನು ಬಯಸುವುದಿಲ್ಲ. ಬೆಂಕಿಯ ಮೇಲೆ ನಡೆಯುವಾಗ, ಅವರುಗಳು ಯಾವುದೇ ತಂತ್ರವನ್ನನುಸರಿಸಲಿ ಪಾದಗಳು ಸುಡುವುದಿಲ್ಲ. ಬಾಯಿಗೆ ಬೆಂಕಿ ಹಾಕಿಕೊಂಡಾಗ ಅದು ನಾಲಿಗೆಯ ಮೇಲೆ ಬೊಬ್ಬೆಯೇಳಿಸುವುದಿಲ್ಲ. ಇದೇ ರೀತಿ ಪ್ವೆಬ್ಲೋಗಳ ಕಶಾಪ್ರಹಾರದ ರೂಢಿಯೂ ಸಹ ಹಿಂಸೆ ನೀಡುವ ಉದ್ದೇಶದಿಂದ ರೂಪಿತವಾಗಿಲ್ಲ. ಚಾವಟಿಯು ರಕ್ತಬರಿಸುವುದಿಲ್ಲ. ಮೈದಾನ ಸೀಮೆಯ ಇಂಡಿಯನರಂತೆ ಅಂತಹ ಅತಿರೇಕಗಳಿಗೆ ಸಂತೋಷಪಡದೆ, ತಾರುಣ್ಯದಲ್ಲಾಗಲಿ ಅದಕ್ಕೆ ಮೊದಲಾಗಲಿ ಬಣವ ದೀಕ್ಷಾವಿಧಿಗಳ ಸಮಯದಲ್ಲಿ ಚಿಕ್ಕ ಬಾಲಕನನ್ನು ಮುಖವಾಡದ ದೇವತೆಗಳು ಚಾವಟಿಯಿಂದ ಬಾರಿಸುವಾಗ ಅವನು ಅಳಲೂಬಹುದು, ತನ್ನ ತಾಯಿಯನ್ನು ಕರೆಯಬಹುದು. ಚಾವಟಿಗಳು ಬಾಸುಂಡೆಯೇಳಿಸುತ್ತವೆಂಬ ಅಭಿಪ್ರಾಯವನ್ನು ಹಿರಿಯರು ವ್ಯಥೆಯಿಂದ ಅಲ್ಲಗಳೆಯುತ್ತಾರೆ. ಕಶಾಪ್ರಹಾರದ ಉದ್ದೇಶ ಕೆಟ್ಟದನ್ನು ತೆಗೆದು ಹಾಕುವುದು. ಅದು ವಿಶ್ವಾಸಾರ್ಹವಾದ ಉಚ್ಚಾಟನಾವಿಧಿ. ಇದೇ ಕ್ರಿಯೆಯನ್ನು ಬೇರೆ ಎಡೆಗಳಲ್ಲಿ ಸ್ವಯಂ ಚಿತ್ರಹಿಂಸೆಗೆ ಬಳಸಿಕೊಳ್ಳುತ್ತಾರೆಂಬುದಕ್ಕೂ ಈ ಸಂಸ್ಕೃತಿಯಲ್ಲಿ ಅದು ಬಳಕೆಯಾಗುತ್ತಿರುವ ರೀತಿಗೂ ಯಾವುದೇ ರೀತಿಯ ಸಂಬಂಧವೂ ಇಲ್ಲ.

ಉಪವಾಸ, ಚಿತ್ರಹಿಂಸೆ, ಮಯಂಕ ಬರಿಸುವ ಮದ್ದು ಮತ್ತು ಮದ್ಯ ಇಲ್ಲವೆ ದಿವ್ಯ ದರ್ಶನದ ಸೋಗಿನಿಂದ ಈ ಜನ ಆನಂದಾತಿರೇಕವನ್ನು ಬಯಸದೆ ಇರುವಂತೆಯೇ ನೃತ್ಯದಲ್ಲಿಯೂ ಆ ಭಾವವನ್ನು ಬಯಸುವುದಿಲ್ಲ. ಪ್ರಾಯಶಃ ಉತ್ತರ ಅಮೆರಿಕದ ಬೇರೆ ಯಾವ ಜನರೂ ನೈರುತ್ಯ ಪ್ರದೇಶದ ಪ್ವೆಬ್ಲೋಗಳಷ್ಟು ಸಮಯವನ್ನು ನೃತ್ಯದಲ್ಲಿ ಕಳೆಯುವುದಿಲ್ಲ. ಆದರೆ ಅದರ ಗುರಿ ಆತ್ಮವಿಸ್ಮೃತಿಯನ್ನು ಸಾಧಿಸುವುದಲ್ಲ. ಗ್ರೀಕರ ಡಯೋನೀಶಿಯನ್ ಪಂಥವು ನೃತ್ಯೋನ್ಮಾದಕ್ಕೇ ಹೆಸರಾಗಿತ್ತು. ಉತ್ತರ ಅಮೆರಿಕದಲ್ಲಿಯೂ ಮತ್ತೆ ಮತ್ತೆ ಅದೇ ತೋರಿಬರುತ್ತದೆ. 1870ರ ದಶಕದಲ್ಲಿ ದೇಶವನ್ನೆಲ್ಲ ಆವರಿಸಿದ ಇಂಡಿಯನ್ನರ ಭೂತ ನೃತ್ಯವು ಏಕತಾನದಲ್ಲಿದ್ದು ನೃತ್ಯಗಾರರು ಒಬ್ಬರ ನಂತರ ಒಬ್ಬರು ನೆಲದ ಮೇಲೆ ಬೀಳುತ್ತಿದ್ದ ವರ್ತುಲನೃತ್ಯ. ಅವರ ಮೈಮೇಲೆ ದೇವರು ಬಂದಾಗ ಅವರಿಗೆ ಬಿಳಿಯರಿಂದ ಬಿಡುಗಡೆ ದೊರೆತಂತೆ ದಿವ್ಯದರ್ಶನ ದೊರೆಯುತ್ತಿತ್ತು. ಆ ನಡುವೆ ನೃತ್ಯ ಮುಂದುವರಿದು ಇತರರು ಬೀಳುತ್ತಿದ್ದರು, ಅದು ರೂಢಿಗೆ ಬಂಧ

ಹಲವಾರು ಬಣಗಳಲ್ಲಿ ಪ್ರತಿಭಾನುವಾರವೂ ನೃತ್ಯವೇರ್ಪಡುತ್ತಿದ್ದುದು ವಾಡಿಕೆಯಾಗಿತ್ತು. ಸಂಪೂರ್ಣವಾಗಿ ಡಯೋನೀಶಿಯನ್ ಲಕ್ಷಣಗಳುಳ್ಳ ಇತರ ಇನ್ನೂ ಹಳೆಯ ನೃತ್ಯಗಳು ಇವೆ. ಉತ್ತರ ಮೆಕ್ಸಿಕೋವಿನ ಆದಿವಾಸಿ ಬಣಗಳವರು ಬಾಯಲ್ಲಿ ನೊರೆ ಸುರಿಸುತ್ತಾ ಪೂಜಾಪೀಠದ ಮೇಲೆ ನೃತ್ಯ ಮಾಡುತ್ತಿದ್ದರು. ಕ್ಯಾಲಿಫೋರ್ನಿಯಾದ ಮಾಂತ್ರಿಕರ ನೃತ್ಯಗಳಲ್ಲಿ ಅಪಸ್ಮಾರ ಬರುವುದು ಅವಶ್ಯಕ. ಮೈದು ಜನರಲ್ಲಿ ಮಾಂತ್ರಿಕರ ನೃತ್ಯ ಸ್ಪರ್ಧೆಗಳೇರ್ಪಡುತ್ತಿದ್ದವು. ಅವುಗಳಲ್ಲಿ ನೃತ್ಯದ ವಶ್ಯಸುಪ್ತಿಯ ಪ್ರಚೋದನೆಗೆ ಗುರಿಯಾಗದೇ ಇತರರಿಗಿಂತ ಹೆಚ್ಚು ಹೊತ್ತು ಕುಣಿದವನೇ ವಿಜಯಿ. ವಾಯುವ್ಯ ತೀರ ಪ್ರದೇಶದಲ್ಲಿ ಇಡೀ ಚಳಿಗಾಲದ ಉತ್ಸವವೆಲ್ಲ ಭೂತಗಳು ಹಿಡಿದು ಹುಚ್ಚನಾಗಿ ಹಿಂದಿರುಗಿ ಬಂದಿದ್ದ ಮನುಷ್ಯನನ್ನು ಪಳಗಿಸುವುದಕ್ಕಾಗಿಯೇ ರೂಪಿತವಾಗಿತ್ತು. ದೀಕ್ಷಿತರು ನಿರೀಕ್ಷಿತ ಬಗೆಯ ಉನ್ಮಾದದಿಂದ ತಮ್ಮ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ತಮಗೇ ಆಗಲಿ ಇತರರಿಗೇ ಆಗಲಿ ಅವರಿಂದ ಆಪತ್ತೊದಗದಂತೆ ತಡೆಯಲು, ಸೈಬೀರಿಯಾದ ಶ್ಯಾಮನ್‌ಗಳಂತೆ ನಾಲ್ಕು ಕಡೆಗಳಿಂದ ನಾಲ್ಕು ಹಗ್ಗಗಳಿಂದ ಬಂಧಿತರಾಗಿರುತ್ತಿದ್ದರು.

ಜುನಿ ನೃತ್ಯ ಸಂದರ್ಭಗಳಲ್ಲಿ ಇಂತಹವುಗಳ ಸೂಚನೆಯೂ ಇಲ್ಲ. ಅವರ ಮಂತ್ರ ಕಾವ್ಯದಂತೆಯೇ, ನೃತ್ಯವೂ ಸಹ ಹೇಳಿದ್ದನ್ನೇ ಮೇಲಿಂದ ಮೇಲೆ ಹೇಳಿ ಪ್ರಕೃತಿಯ ಶಕ್ತಿಗಳನ್ನು ನಿರ್ಬಂಧಕ್ಕೆ ಗುರಿಪಡಿಸುವ ಏಕತಾನ. ಆಯಾಸರಹಿತವಾದ ಈ ಹೆಜ್ಜೆಗಳು ಆಕಾಶದಲ್ಲಿರುವ ಮಂಜನ್ನು ಒಟ್ಟುಗೂಡಿಸಿ ದಟ್ಟವಾದ ಮಳೆ ಮೋಡಗಳನ್ನಾಗಿ ಮಾಡುತ್ತದೆ. ಅವರು ಅದರಿಂದ ಯಾವುದೇ ರೀತಿಯ ಉನ್ಮತ್ತತೆಯ ಅನುಭವವನ್ನು ನಿರೀಕ್ಷಿಸುವುದಿಲ್ಲ. ಪ್ರಕೃತಿಯೊಂದಿಗೂ ಸಂಪೂರ್ಣ ಸಮನ್ವಯತೆಯನ್ನು ಸಾಧಿಸಿ, ಪ್ರಕೃತಿಯ ಶಕ್ತಿಗಳನ್ನು ತಮ್ಮ ಉದ್ದೇಶಗಳತ್ತ ತಿರುಗುವಂತೆ ಮಾಡಿಕೊಳ್ಳುವುದೇ ಅವರ ಗುರಿ. ಈ ಗುರಿಯು ಪ್ವೆಬ್ಲೋ ನೃತ್ಯ ನಡೆಯನ್ನೂ ಭಾವವನ್ನೂ ನಿರ್ಣಯಿಸುತ್ತದೆ. ಅವರ ನೃತ್ಯದಲ್ಲಿ ಉನ್ಮತ್ತತೆಯಿಲ್ಲ. ಲಯಬದ್ಧತೆ ಮತ್ತು ನಲವತ್ತು ಮಂದಿ ಚಾಚೂತಪ್ಪದೇ ಒಂದೇ ಆಗಿ ಚಲಿಸುವಿಕೆ ಮೊದಲಾದವುಗಳು ಕೂಡಿ ಅವರ ನೃತ್ಯಗಳು ಪರಿಣಾಮಕಾರಿಗಳಾಗಿವೆ.

ಪ್ವೆಬ್ಲೋ ನೃತ್ಯಗಳ ಈ ಗುಣದ ಚಿತ್ರಣವನ್ನು ಡಿ. ಎಚ್. ಲಾರೆನ್ಸರಿಗಿಂತ ಹೆಚ್ಚು ನಿಷ್ಕೃಷ್ಟವಾಗಿ ಬೇರೆ ಯಾರೂ ನೀಡಿಲ್ಲ. 'ಎಲ್ಲರೂ ಒಂದಾಗೂಡಿ ಹಾಡುತ್ತ ಮೃದುವಾದರೂ ಭಾರವಾದ ಹಕ್ಕಿ ಹೆಜ್ಜೆಯಿಕ್ಕುತ್ತ ಚಲಿಸುವುದೇ ಪೂರ್ಣ ನೃತ್ಯ ದೇಹವನ್ನು ಸ್ವಲ್ಪ ಮುಂದಕ್ಕೆ ಬಾಗಿಸಿದ್ದು. ಭುಜಗಳು ಮತ್ತು ತಲೆಯು ಬಿಗಿಯಿಲ್ಲದೇ ಭಾರವಾಗಿದ್ದು, ಹೆಜ್ಜೆಗಳು ಶಕ್ತಿಶಾಲಿಯಾದರೂ ಮೃದುವಾಗಿದ್ದು ಈ ಮಂದಿ ಲಯಬದ್ಧತೆಯನ್ನು ಭೂಮಿಯ ಕೇಂದ್ರಕ್ಕೆ ತುಳಿದು ತಳ್ಳುವರು, ಹೃದಯದ

ಬಡಿತದ ರೀತಿಯಲ್ಲಿ ತಾಳ ಮದ್ದಳೆಗಳನ್ನು ಬಾರಿಸುತ್ತಾರೆ. ನೃತ್ಯವು ಹೀಗೆ ಗಂಟೆ ಗಟ್ಟಲೆ ನಡೆಯುತ್ತದೆ. ಈಗ ಅವರು ಭೂಮಿಯನ್ನು ಸೀಳಿಕೊಂಡು ಹೊರ ಬರುತ್ತಿರುವ ಜೋಳದ ಮೊಳಕೆಯನ್ನು ಅಭಿನಯಿಸುತ್ತಾರೆ. ಅನಂತರ ತಮ್ಮ ಹೆಜ್ಜೆ ಬಡಿತದಿಂದ ಬೇಟೆಯ ಪ್ರಾಣಿಗಳನ್ನು [ಕರೆಯುತ್ತಾರೆ; ಆ ಬಳಿಕ ಅವರು ಆ ಮರಳ್ಗಾಡಿನಲ್ಲಿ ಮಧ್ಯಾಹ್ನದ ಸಮಯದಲ್ಲಿ ಆಕಾಶದಲ್ಲಿ ಕೂಡುತ್ತಿರುವ ಬಿಳಿಯ ಮೋಡಗಳನ್ನು ನಿರ್ಬಂಧಕ್ಕೊಳಪಡಿಸುತ್ತಾರೆ. ಆಕಾಶದಲ್ಲಿ ಮೋಡಗಳು ತೋರಿ ಬಂದರೇನೇ, ಅವು ಮಳೆ ತರಲಿ ತಾರದಿರಲಿ, ಅದು ದೇವತೆಗಳು ತಮ್ಮ ನೃತ್ಯದ ಮೇಲೆ ತೋರಿದ ಅನುಗ್ರಹ; ತಮ್ಮ ನೃತ್ಯ ಸಂಸ್ಕಾರವನ್ನು ಸ್ವೀಕರಿಸುವ ಕುರುಹು. ಮಳೆ ಬಂದರೆ ಅದು ಅವರ ನೃತ್ಯಶಕ್ತಿಯ ಪೋಷಣೆಯಾದಂತೆ. ನೈರುತ್ಯದಿಂದ ಬರುವ ಮಳೆ ಹುಯ್ಯುತ್ತಿರುವಾಗ ಅವರ ನೃತ್ಯ ನಡೆದೇ ಇರುತ್ತದೆ. ಅವರ ಗರಿಗಳು ನೆನೆದು ಭಾರವಾಗುತ್ತವೆ. ಕಸೂತಿ ಕೆಲಸದ ಬಿಡ್ಡುಲಂಗಗಳೂ, ಮೇಲುಹೊದಿಕೆ ಗಳೂ ತೋಯ್ದು ಹೋಗುತ್ತವೆ. ಆದರೆ ದೇವತೆಗಳು ಅವರಲ್ಲಿ ಅನುಗ್ರಹ ತೋರಿ ದ್ದಾರೆ. ಕೋಡಂಗಿಗಳು ಕೆಸರು ಮಣ್ಣಿನಲ್ಲಿ ಜಾರಾಡುತ್ತ ಕೆಸರು ನೀರಿನಲ್ಲಿ ಹುಟ್ಟು ಹೊಡೆಯುತ್ತಾ ಆಳವಾದ ಕೆಸರಿನಲ್ಲಿ ನಲಿದಾಡುತ್ತಾರೆ. ತಮ್ಮ ನೃತ್ಯಗತಿಯ ಹೆಜ್ಜೆ ಗಳಿಗೆ, ಬಿರುಗಾಳಿಯ ಮೇಲೆ ಪ್ರಕೃತಿ ಶಕ್ತಿಗಳಿಗೆ ಇರುವಂತೆಯೇ ನಿರ್ಬಂಧ ಪಡಿಸುವ ಶಕ್ತಿಯಿದೆಯೆಂದು ಅವರು ಎಣಿಸುತ್ತಾರೆ.

ಡಯೋನೀಶಿಯನ್ನರಿಗೆ ಅಂತಃಸ್ಫೂರ್ತಿಯಾಗಿದ್ದ ಕೆಲವು ನೃತ್ಯ ಮಾದರಿ ಗಳನ್ನು ಪ್ಯೂಬ್ಲೋಗಳೂ ನೆರೆಯ ಜನರೂ ಅನುಸರಿಸುತ್ತಾರೆ. ಆದರೂ ಪ್ಯೂಬ್ಲೋಗಳು ಅವುಗಳನ್ನು ಸ್ತಿಮಿತ ಚಿತ್ತದಿಂದಲೇ ಬಳಸುತ್ತಾರೆ. ಉತ್ತರ ಮೆಕ್ಸಿಕೋವಿನ ಕೋರಾಗಳು, ಅದೇ ಪ್ರದೇಶದ ಇತರ ಬಣಗಳಂತೆ ಒಂದು ದಿರಗಟ್ಟಿ ನೃತ್ಯಮಾಡು ತ್ತಾರೆ. ಅದರ ಪರಾಕಾಷ್ಠೆಯಲ್ಲಿ ನೃತ್ಯಗಾರನು ತನ್ನ ಶಕ್ತಿಯಿದ್ದಷ್ಟೂ ಬಿರುಸನ್ನೂ ತನ್ಮಯತೆಯನ್ನೂ ಮುಟ್ಟಿ ಹಿಂದು ಹಿಂದಕ್ಕೆಹೋಗುತ್ತ ನೆಲದ ಮೇಲಿರುವ ಪೂಜಾಪೀಠದ ಮೇಲೆ ಹೋಗುತ್ತಾನೆ. ಬೇರೆ ಸಂದರ್ಭಗಳಲ್ಲಿ ಯಾವುದೇ ಸಮಯ ದಲ್ಲಾಗಲಿ ಇದು ದೈವದ್ರೋಹವಾದೀತು. ಆದರೆ ಈ ಸಂದರ್ಭದಲ್ಲಿ ಅದಕ್ಕೆ ಡಯೋ ನೀಶಿಯನ್ ಮೌಲ್ಯದ ಅತ್ಯುನ್ನತ ಸ್ಥಾನ ದೊರೆಯುತ್ತದೆ. ಅವನ ಉನ್ಮಾದದಿಂದ ಪೂಜಾಪೀಠ ನಾಶವಾಗಿ, ತುಳಿಯಲ್ಪಟ್ಟು ಮರಳಿಗೇ ಸೇರಿಹೋಗುತ್ತದೆ. ಕೊನೆಗೆ ನೃತ್ಯಗಾರನು ಭಂಗವಾದ ಪೂಜಾಪೀಠದ ಮೇಲೇ ಬೀಳುತ್ತಾನೆ.

ನೆಲಮಾಳಿಗೆಯ ಕಿವಾ ಗರ್ಭಗೃಹದಲ್ಲಿ ಆಡುವ ಹೋಪಿ ಸರ್ಪನೃತ್ಯದ ನೃತ್ಯ ತಂಡಗಳಲ್ಲಿ ಸಹ ಪೂಜಾಪೀಠದ ಮೇಲೆ ನೃತ್ಯ ಮಾಡುತ್ತಾರೆ. ಆದರೆ ಅದರಲ್ಲಿ ಯಾವ ಉನ್ಮಾದವೂ ಇಲ್ಲ. ವರ್ಜನೀಯಾ ರಾಣಿಯ ಒಂದೇ ಚಲನೆಯ ರೀತಿಯಲ್ಲಿ

ಅದು ನಿಯತವಾದ ಒಂದು ನಡೆ. ಪ್ವೆಬ್ಲೋಗಳ ಅತ್ಯಂತ ಸಾಮಾನ್ಯವಾದ ಸಾಂಪ್ರದಾಯಿಕ ನೃತ್ಯಮಾದರಿಯಲ್ಲಿ ನೃತ್ಯರಂಗಕ್ಕೆ ಎದುರುಬದರು ಕಡೆಗಳಿಂದ ಎರಡು ನೃತ್ಯ ತಂಡಗಳು ಬಂದು, ಒಂದು ಸಾದೃಶ್ಯ ವಸ್ತುವಿನ ಮೇಲಿನ ಎರಡು ವಿನ್ಯಾಸಗಳನ್ನು ಒಬ್ಬರ ನಂತರ ಒಬ್ಬರು ಅಭಿನಯಿಸುತ್ತಾರೆ. ಕೊನೆಯ ವಿನ್ಯಾಸಕ್ಕೆ ಎರಡು ತಂಡಗಳೂ ಒಂದೇ ಸಮಯದಲ್ಲಿ ಎರಡು ಕಡೆಗಳಿಂದ ಬರುತ್ತವೆ. ಈ ಕಿವಾದಲ್ಲಿ ನಡೆಯುವ ಸರ್ಪನೃತ್ಯದಲ್ಲಿ ಜಿಂಕೆ ಸಂಘದವರು ಸರ್ಪ ನೃತ್ಯಗಾರರಿಗೆ ಎದುರು ಕಟ್ಟಿ ನಿಲ್ಲುತ್ತಾರೆ. ಮೊದಲ ವಿನ್ಯಾಸದಲ್ಲಿ ಜಿಂಕೆ ಸಂಘದ ಪುರೋಹಿತನು ಕುಕ್ಕರಗಾಲಲ್ಲಿ ಕುಳಿತು ನೃತ್ಯಮಾಡುತ್ತ ಪೂಜಾಪೀಠವನ್ನು ಸುತ್ತುವರಿದು ಹಿಂತಿರುಗುತ್ತಾನೆ. ಅದನ್ನೇ ಸರ್ಪಪುರೋಹಿತ ಆಡುತ್ತಾನೆ. ಎರಡನೇ ವಿನ್ಯಾಸದಲ್ಲಿ, ಜಿಂಕೆಯು ಬಾಯಲ್ಲಿ ಒಂದು ದ್ರಾಕ್ಷಿ ಬಳ್ಳಿಯನ್ನು ಕಚ್ಚಿಕೊಂಡು ಬಂದು ದೀಕ್ಷಿತರ ಮುಂದೆ ಕುಣಿಯುತ್ತ ಬಳ್ಳಿಯನ್ನು ಅವರ ಮಂಡಿಗಳಿಗೆ ತಗುಲಿಸಿ ಎಳೆಯುತ್ತದೆ. ಅವನು ಹೋದ ಕೂಡಲೇ ಸರ್ಪವೇಷಧಾರಿಯು ಬಾಯಲ್ಲಿ ಸಜೀವವಾದ ಒಂದು ಬುಡಬುಡಕೆ ಹಾವನ್ನು ಕಚ್ಚಿಕೊಂಡು ಬಂದು ಜಿಂಕೆಯಂತೆಯೇ ದೀಕ್ಷಿತರ ಮುಂದೆ ಕುಣಿಯುತ್ತ ಹಾವನ್ನು ಅವರ ಮಂಡಿಗಳಿಗೆ ತಗುಲಿಸಿ ಎಳೆಯುತ್ತಾನೆ. ಕೊನೆಯ ವಿನ್ಯಾಸದಲ್ಲಿ ಜಿಂಕೆ, ಸರ್ಪ ಎರಡೂ ಒಟ್ಟಿಗೆ ಕುಕ್ಕರಗಾಲಲ್ಲಿಯೇ ಕುಳಿತು ಬರುತ್ತಾರೆ. ಆಗ ಅವರು ಪೂಜಾಪೀಠವನ್ನು ಸುತ್ತಿ ಬರುವುದಿಲ್ಲ. ಅದರ ಮೇಲೆಯೇ ಏರಿ ನೃತ್ಯವನ್ನು ಮುಗಿಸುತ್ತಾರೆ. ವಿಕಟಚೋರ ನೃತ್ಯದಲ್ಲಿ ಬರುವರೀತಿಯಲ್ಲಿ ಇದು ಒಂದು ಸಾಂಪ್ರದಾಯಿಕ ನೃತ್ಯ. ಸಂಪೂರ್ಣವಾಗಿ ಮನಸ್ಸಿಮಿತ ಮತ್ತು ಗಂಭೀರ ಸ್ಥಿತಿಯಲ್ಲಿಯೇ ನೃತ್ಯ ನಡೆಯುತ್ತದೆ.

ಹೋಪಿಗಳಲ್ಲಿ ಹಾವುಗಳನ್ನು ಹಿಡಿದು ನೃತ್ಯ ಮಾಡುವುದು ಅಪಾಯಕತೆ ಮತ್ತು ಭೀಕರತೆಯನ್ನು ಸ್ವಾಗತಿಸಿದಂತಲ್ಲ. ನಮ್ಮ ನಾಗರಿಕತೆಯಲ್ಲಿ ಹಾವುಗಳನ್ನು ಕುರಿತು ಭೀತಿಯಿರುವುದರಿಂದ ನಾವು ಸರ್ಪನೃತ್ಯವನ್ನು ತಪ್ಪಾಗಿ ಅರ್ಥೈಸುತ್ತೇವೆ. ನಾವು ಹಾಗೆ ಹಾವನ್ನು ಹಿಡಿದುಕೊಂಡರೆ ಯಾವ ಭಾವನೆ ಉಂಟಾಗುವುದೋ ಆ ನೃತ್ಯಗಾರರಿಗೂ ಅದೇ ಭಾವನೆ ಉಂಟಾಗುತ್ತದೆಂದು ಎಣಿಸುತ್ತೇವೆ. ಅಮೆರಿಕನ್ ಇಂಡಿಯನ್ನರು ಹಾವುಗಳನ್ನು ನಮ್ಮಂತೆ ಭೀತಿಯಭಾವದಿಂದ ನೋಡುವುದಿಲ್ಲ. ಬಹುತೇಕ ಅವುಗಳನ್ನು ಪೂಜನೀಯ ದೃಷ್ಟಿಯಿಂದ ನೋಡುತ್ತಾರೆ. ಹಲವು ಸಂದರ್ಭಗಳಲ್ಲಿ ಯಾವುದೇ ಪವಿತ್ರವಾದ ವಸ್ತು ಅಪಕಾರಿಯಾಗುವಂತೆ ಹಾವುಗಳೂ ತಮ್ಮ ಪೂಜನೀಯತೆಯಿಂದಲೇ ಅಪಕಾರಿಗಳಾಗುತ್ತವೆ. ನಮ್ಮ ಅನುಚಿತ ಜಿಗುಪ್ಸೆಯು ಅವರ ಪ್ರತಿಕ್ರಿಯೆಯ ಒಂದು ಅಂಶವಲ್ಲ. ಹಾವುಗಳು ಕಚ್ಚುತ್ತವೆಂಬುದರಿಂದ ವಿಶೇಷ ಭೀತಿಯಿಲ್ಲ. ಆದ್ದರಿಂದಲೇ ಹಲವಾರು ಇಂಡಿಯನ್ ಜಾನಪದ ಕತೆಗಳು

ಬುಡಬುಡಿಕೆ ಹಾವು ಅಪಾಯಕಾರಿ ಎಂದು ಕೊನೆಗೊಳ್ಳುತ್ತವೆ. ಬುಡಬುಡಿಕೆ ಹಾವು ಗಳ ಹವ್ಯಾಸಗಳು ಅವನ್ನು ಪಳಗಿಸುವುದನ್ನು ಸುಲಭಗೊಳಿಸಿವೆ. ಇಂಡಿಯನ್ನರು ಅವನ್ನು ಸುಲಭವಾಗಿ ಪಳಗಿಸುತ್ತಾರೆ. ಸರ್ಪ ನೃತ್ಯದಲ್ಲಿ ಈ ಹಾವುಗಳತ್ತ ನೃತ್ಯ ಗಾರರು ತಳೆಯುವ ಮನೋಭಾವವು ಭೀತಿ ಅಥವಾ ಜಿಗುಪ್ಸೆಯದಲ್ಲ; ಪಂಥದ ಸದಸ್ಯರು ತಮ್ಮ ರಕ್ಷಕ ಪ್ರಾಣಿಯತ್ತ ತೋರುವಂತಹುದು. ಅಲ್ಲದೇ ನೃತ್ಯದ ಸಂದ ರ್ಭಕ್ಕಾಗಿ ಬುಡುಬುಡುಕೆ ಹಾವುಗಳ ವಿಷದ ಚೀಲವನ್ನು ತೆಗೆದು ಬಿಟ್ಟಿರುತ್ತಾರೆ. ಅವುಗಳನ್ನು ಉಜ್ಜಿ ಇಲ್ಲವೇ ಜಿಗುಟಿ ತೆಗೆಯುತ್ತಾರೆ. ನೃತ್ಯದ ನಂತರ ಹಾವುಗಳನು ಬಿಡುಗಡೆ ಮಾಡಿದ ಮೇಲೆ ಪುನಃ ಈ ಚೀಲಗಳು ಬೆಳೆದು ವಿಷ ತುಂಬಿಕೊಳ್ಳುತ್ತವೆ. ಆದರೆ ನೃತ್ಯದ ಸಮಯಕ್ಕೆ ಹಾವುಗಳು ಸಾಧು. ಆದ್ದರಿಂದ ಹೋಪಿ ನೃತ್ಯಗಾರನ ಮನೋಸ್ಥಿತಿಯು ಲೌಕಿಕವಾಗಿಯಾಗಲಿ, ದೈವಿಕವಾಗಿಯಾಗಲಿ ಡಯೋನೀಶಿಯನ್ ಮನೋಸ್ಥಿತಿಯಲ್ಲ. ಮೇಲ್ನೋಟಕ್ಕೆ ಒಂದೇ ರೀತಿ ತೋರುವ ವರ್ತನೆಯ ಮನ ನಾಟಿರುವ ಭಾವನೆಗಳಿಗೆ ಅನುಸಾರವಾಗಿ ಅಪಾಯಕಾರಿ ಹಾಗೂ ಅಸಹ್ಯಕಾರಿಯಾಗಿ ಕಂಡು ಬರಬಹುದು ಅಥವಾ ಶಾಂತವಾದ ಸಂಪ್ರದಾಯ ಬದ್ಧ ಉತ್ಸವವೂ ಆಗಿರ ಬಹುದು.

ಮಂಪರು ಬರಿಸುವ ಮದ್ದುಗಳ ಬಳಕೆಯಿಂದಾಗಲಿ, ಮದ್ಯದಿಂದಾಗಲಿ, ಚಿತ್ರ ಹಿಂಸೆಯಿಂದಾಗಲಿ, ನೃತ್ಯದಿಂದಾಗಲಿ, ಪ್ವೆಬ್ಲೋಗಳು ಸಾಧಾರಣ ಇಂದ್ರಿಯ ಗ್ರಹ ಣಕ್ಕೆ ಹೊರತಾದ ಅನುಭವಗಳನ್ನು ಬಯಸುವುದೂ ಇಲ್ಲ, ಸಹಿಸುವುದೂ ಇಲ್ಲ. ಈ ರೀತಿಯ ವಿಚ್ಛಿದ್ರಕಾರಿ ವೈಯಕ್ತಿಕ ಅನುಭವಗಳಿಗೂ ಪ್ವೆಬ್ಲೋಗಳಿಗೂ ಯಾವ ನಂಟೂ ಇಲ್ಲ. ಮಿತಗಾಮಿತ್ವದ ಒಲವಿಗೆ ಬದ್ಧವಾದ ಅವರ ನಾಗರಿಕತೆಯಲ್ಲಿ ಇದಕ್ಕೆಲ್ಲ ಅವಕಾಶ ವಿಲ್ಲ. ಆದ್ದರಿಂದಲೇ ಅವರಲ್ಲಿ ಶ್ಯಾಮನ್‌ಗಳೂ ಇಲ್ಲ.

ಶ್ಯಾಮನ್ ಸಿದ್ಧಾಂತ ಸಾಮಾನ್ಯವಾಗಿ ರೂಢಿಯಲ್ಲಿರುವ ಮಾನವೀಯ ಸಂಸ್ಥೆ ಗಳಲ್ಲೊಂದು. ಶ್ಯಾಮನ್ ಯಾವುದೇ ಬಗೆಯ ವೈಯಕ್ತಿಕ ಅನುಭವ ಪಡೆದಿರಲಿ ತನ್ನ ಬಣದಲ್ಲಿ ದೈವಿಕವೆಂದು ಪರಿಗಣಿಸ್ಪಡುವ, ದೇವತೆಗಳಿಂದ ನೇರವಾಗಿ ಶಕ್ತಿಯನ್ನು ಪಡೆದಂತಹ ಮತಧರ್ಮ ವೃತ್ತಿಗಾರ. ಶ್ಯಾಮನ್ ಸಾಧಾರಣವಾಗಿ ಕ್ಯಸಾಂದ್ರಾ ಮತ್ತು ಇತರರಂತೆ ಮನಬಂದಂತೆ ಮಾತನಾಡುವವನು. ಒಬ್ಬ ವ್ಯಕ್ತಿಯ ಬುದ್ಧಿಯ ಅಸ್ಥಿರ ತೆಯೇ ಅವನನ್ನು ಈ ವೃತ್ತಿಗೆ ಅಂಕಿತಗೊಳಿಸುತ್ತದೆ. ಉತ್ತರ ಅಮೆರಿಕದಲ್ಲಿ ದಿವ್ಯ ದರ್ಶನದ ಅನುಭವ ಪಡೆದವರೇ ಶ್ಯಾಮನ್‌ಗಳಾಗಿರುವುದು ಒಂದು ಲಕ್ಷಣ. ತದ್ವಿರುದ್ಧ ವಾಗಿ ಪುರೋಹಿತನು ಮಂತ್ರ ವಿಧಿಗಳ ನ್ಯಾಸಧಾರಿ ಹಾಗೂ ಪಂಥದ ಚಟುವಟಿಕೆಗಳ ನಿರ್ವಾಹಕ. ಪ್ವೆಬ್ಲೋಗಳಲ್ಲಿ ಶ್ಯಾಮನ್‌ಗಳಿಲ್ಲ, ಪುರೋಹಿತರು ಮಾತ್ರ ಇದ್ದಾರೆ.

ಜುನಿ ಪುರೋಹಿತ ತನ್ನ ಸ್ಥಾನವನ್ನು ನಂಟಸ್ತಿಕೆಯ ಹಕ್ಕುಬಾಧ್ಯತೆಯಿಂದಲೋ ಇಲ್ಲವೇ ಆ ಸಮಾಜದ ವಿವಿಧ ಕ್ರಮಂಗಳ ಮೂಲಕ ಮೇಲೇರುತ್ತಾ ಬಂದುದರಿಂದಲೋ ಅಥವಾ ಆ ವರ್ಷಕ್ಕೆ ಕಚೀನಾ ಪುರೋಹಿತರ ವೇಷಕಟ್ಟಲು ಅವನನ್ನು ಮುಖ್ಯ ಪುರೋಹಿತರು ಆಯ್ದುದರಿಂದಲೋ ಪಡೆದಿದ್ದಾನೆ. ಯಾವುದೇ ಕಾರಣದಿಂದ ಅವನು ಪುರೋಹಿತನಾಗಿರಲಿ ಅವನು ಕ್ರಿಯೆ ಮತ್ತು ಶಬ್ದರೂಪದ ಅಪಾರ ಮೊತ್ತದ ಸಂಸ್ಕಾರವಿಧಿಗಳನ್ನು ಕಲಿತಿರುವುದರಿಂದ ಆ ಸ್ಥಾನಕ್ಕೆ ತಕ್ಕ ಅರ್ಹತೆ ಪಡೆದವನು. ಅವನು ಆಕ್ರಮಿಸಿಕೊಂಡಿರುವ ಅಧಿಕೃತ ಸ್ಥಾನದಿಂದಾಗಿ, ತಾನು ನಿರ್ವಹಿಸುವ ಸಂಸ್ಕಾರ ವಿಧಿಗಳಿಂದಾಗಿ ಅವನು ಪಡೆದಿರುವ ಅಧಿಕಾರಕ್ಕೆ ಅರ್ಹನು. ಅದು ಪದ ಶುದ್ಧವಾಗಿರಬೇಕು. ಅವನು ನಡೆಸುವ ಪ್ರತಿಯೊಂದು ಜಟಿಲ ಸಮಾರಂಭವೂ ಪರಂಪರಾಗತವಾಗಿ ಸರಿಯಾಗಿರಬೇಕಾದುದಕ್ಕೆ ಅವನು ಜವಾಬ್ದಾರ. ಶಕ್ತಿಯುಳ್ಳ ಮನುಷ್ಯ ಎಂಬುದಕ್ಕೆ ಜುನಿ ಭಾಷೆಯಲ್ಲಿನ ಅರ್ಥ ' ಹೇಗೆ ಎಂದು ತಿಳಿದ ವ್ಯಕ್ತಿ'. ಅತಿ ಪವಿತ್ರವಾದ ಪಂಥಗಳಲ್ಲಿ, ಪಂದ್ಯಾಟಗಳಲ್ಲಿ, ಜೂಜಿನಲ್ಲಿ, ಚಿಕಿತ್ಸೆಯಲ್ಲಿ 'ಹೇಗೆ ಎಂದು' ತಿಳಿದ ವ್ಯಕ್ತಿಗಳಿದ್ದಾರೆ. ಅಂದರೆ ಅವರೆಲ್ಲ, ಪರಂಪರಾಗತ ಮೂಲಗಳಿಂದ ತಮ್ಮ ಶಕ್ತಿಯನ್ನು ಪದಶಃ ಕಲಿತಿದ್ದಾರೆ. ಯಾವುದೇ ಹಂತದಲ್ಲಾಗಲಿ ಮುಂದುವರಿಕೆಯ ಯಾವುದೇ ಕಾರ್ಯಕ್ಕಾಗಲಿ ತಮ್ಮ ಮತಧರ್ಮದ ಶಕ್ತಿಯ ಅಧಿಕಾರ ಮುದ್ರೆಯಿದೆಯೆಂದು ಹೇಳಿಕೊಳ್ಳುವ ಸ್ವಾತಂತ್ರ್ಯ ಅವರಿಗಿಲ್ಲ. ಅವರು ದೈವವನ್ನು ಮೊರೆಹೊಗುವುದು ಸಹ ನಿಖರವಾದ ಕಾಲಾವಧಿಗಳಲ್ಲಿ. ತಮ್ಮ ಗುಂಪಿನ ಸಮ್ಮತಿಯಿಂದ ಪ್ರತಿಯೊಂದು ಪ್ರಾರ್ಥನೆಯೂ, ಪಂಥದ ಪ್ರತಿಯೊಂದು ಕಾರ್ಯವೂ ಸರ್ವವಿದಿತವಾದ ಮತ್ತು ಪ್ರಮಾಣೀಕೃತವಾದ ಕಾಲದಲ್ಲಿ ಪರಂಪರಾಗತ ಕ್ರಮದಲ್ಲಿ ಮಾತ್ರ ಜರುಗಬೇಕು. ಜುನಿಗಳ ಅತ್ಯಂತ ವೈಯಕ್ತಿಕವಾದ ಧಾರ್ಮಿಕ ಕ್ರಿಯೆಯೆಂದರೆ ದೇವತೆಗಳಿಗೆ ಪ್ರಾರ್ಥನಾದಂಡಗಳನ್ನು ಸಮರ್ಪಿಸುವುದು. ಈ ದಂಡಗಳನ್ನು ಕುಶಲತೆಯಿಂದ ತಯಾರಿಸಿದ್ದು, ಪವಿತ್ರ ಸ್ಥಾನಗಳಲ್ಲಿ ಅವುಗಳನ್ನು ಅರ್ಧಮಟ್ಟ ಹೂಳುತ್ತಾರೆ. ಪ್ರತಿ ದಂಡವೂ ದೇವತೆಗಳಿಗೆ ನಿರ್ದಿಷ್ಟವಾದ ಪ್ರಾರ್ಥನೆಯನ್ನು ಸಲ್ಲಿಸುತ್ತದೆ, ಆದರೆ ಅತ್ಯುನ್ನತ ಮಟ್ಟದ ಪುರೋಹಿತರು ಕೂಡ ಪ್ರಾರ್ಥನಾ ದಂಡಗಳನ್ನು ತಮ್ಮ ಇಷ್ಟಬಂದಂತೆ ಸಮರ್ಪಿಸಲಾರರು. ಜಾನಪದಕತೆಯೊಂದರಲ್ಲಿ ಜುನಿಗಳ ಮುಖ್ಯ ಪುರೋಹಿತನು ಪ್ರಾರ್ಥನಾ ದಂಡಗಳನ್ನು ಸಿದ್ಧಪಡಿಸಿಕೊಂಡು ಅವುಗಳನ್ನು ನೆಡಲು ಹೊರಡುತ್ತಾನೆ. ಆಗ ಔಷಧ ಸಂಘಗಳ ಸದಸ್ಯರು ಪ್ರಾರ್ಥನಾ ದಂಡಗಳನ್ನು ನೆಡುವಂತಹ ಚಾಂದ್ರಮಾನ ತಿಥಿಯಲ್ಲ. ಜನರು 'ಮುಖ್ಯ ಪುರೋಹಿತ ಏಕೆ ಪ್ರಾರ್ಥನಾ ದಂಡಗಳನ್ನು ನೆಡುತ್ತಿದ್ದಾನೆ ? ಅವನು ಏನೋ ಪಿತೂರಿ ನಡೆಸಿರಬೇಕು ?' ಎಂದುಕೊಳ್ಳುತ್ತಾರೆ. ನಿಜಕ್ಕೂ ಅವನು ತನ್ನ ಶಕ್ತಿಯನ್ನು ವೈಯಕ್ತಿಕ

ದ್ವೇಷ ಸಾಧನೆಗಾಗಿ ಬಳಸುತ್ತಿದ್ದ. ಮುಖ್ಯ ಪುರೋಹಿತನು ಸಹ ಸ್ವಂತ ಇಚ್ಛೆಯಿಂದ ಅತ್ಯಂತ ವೈಯಕ್ತಿಕವಾದ ಧಾರ್ಮಿಕ ಕ್ರಿಯೆಯನ್ನು ಕೂಡ ನಡೆಸಲಾರನೆಂದ ಮೇಲೆ ಇತರ ಶಾಸ್ತ್ರಾಚಾರಗಳಂತೂ ಸಾರ್ವಜನಿಕ ಅಧಿಕಾರ ಮುದ್ರೆಯಿಂದ ಇಮ್ಮಡಿಯಾಗಿ ರಕ್ಷಿತವಾಗಿವೆ. ಒಬ್ಬ ವ್ಯಕ್ತಿಯು ಏಕೆ ಪ್ರಾರ್ಥಿಸುತ್ತಿರುವನು ಎಂಬ ಕುತೂಹಲವು ಸಹ ಏಳಬಾರದು.

ಪ್ಯೂಬ್ಲೋಗಳು ತಮ್ಮ ಪುರೋಹಿತ ಸಂಸ್ಥೆಯಲ್ಲಿ, ಅಮೆರಿಕದ ಇತರ ಆದಿವಾಸಿಗಳು ತಮ್ಮ ಶ್ಯಾಮನ್ ಸಂಸ್ಥೆಯಲ್ಲಿ, ವ್ಯಕ್ತಿತ್ವದ ಎರಡು ತದ್ವಿರುದ್ಧ ತುದಿಗಳನ್ನು ಆಯ್ದು ಸಂಭಾವಿತಗೊಳಿಸಿದ್ದಾರೆ. ಮೈದಾನಗಳ ಇಂಡಿಯನ್ನರು ತಮ್ಮ ಎಲ್ಲ ಸಂಸ್ಥೆಗಳಲ್ಲೂ, ಅಧಿಕಾರವನ್ನು ಸುಲಭವಾಗಿ ನಿರ್ವಹಿಸಬಲ್ಲ ಸ್ವಾವಲಂಬಿ ಮನುಷ್ಯನಿಗೆ ಇಂಬು ಕೊಟ್ಟಿದ್ದಾರೆ. ಅಂತಹವನಿಗೆ ಇತರರಿಗಿಂತ ಹೆಚ್ಚು ಸಂಭಾವನೆ ಸಲ್ಲುತ್ತದೆ. ದಿವ್ಯದರ್ಶನ ಪಡೆದು ಹಿಂದಿರುಗಿದ ಕ್ರೋ ಇಂಡಿಯನ್ ತನ್ನೊಂದಿಗೆ ತಂದ ಆವಿಷ್ಕರಣಗಳು ಅತ್ಯಲ್ಪವಾಗಿರಬಹುದು. ಅದು ಮುಖ್ಯವಲ್ಲ. ಪ್ರತಿಯೊಬ್ಬ ಬೌದ್ಧ ಭಿಕ್ಷುವೂ, ಮಧ್ಯಕಾಲೀನ ಕ್ರೈಸ್ತ ಮುಮುಕ್ಷುವೂ ಹಿಂದೆ ತನ್ನ ಬಾಂಧವರು ತಮ್ಮ ದಿವ್ಯದರ್ಶನಗಳಲ್ಲಿ ಕಂಡುದನ್ನೇ ಕಾಣುತ್ತಿದ್ದ. ಆದರೆ ಅವರುಗಳೂ, ಹಾಗೆಯೇ ಕ್ರೋ ಇಂಡಿಯನ್ನರೂ ತಮ್ಮ ವ್ಯಕ್ತಿಗತ ಅನುಭವದ ಅಧಿಕಾರದಿಂದ ಬಲಕ್ಕೆ ಅಥವಾ ದೈವಿಕತೆಗೆ ಬಾಧ್ಯರಾಗುತ್ತಾರೆ. ಇಂಡಿಯನ್ನನು ತನ್ನ ದಿವ್ಯದರ್ಶನದ ಬಲದೊಂದಿಗೆ ತನ್ನ ಜನರಲ್ಲಿಗೆ ಹಿಂತಿರುಗಿದಾಗ, ಅವನು ಪಡೆದಿದ್ದ ಸೂಚನೆಗಳನ್ನು ಅವನ ಬಣವೂ ತನ್ನ ಪವಿತ್ರ, ಸುಯೋಗವೆಂದು ಬಗೆದು ಅನುಸರಣೆಗೆ ತರುತ್ತದೆ. ರೋಗ ಚಿಕಿತ್ಸೆ ನೀಡುವಲ್ಲಿ ಪ್ರತಿಯೊಬ್ಬನಿಗೂ ತನ್ನ ವ್ಯಕ್ತಿಗತ ಶಕ್ತಿಯ ಅರಿವು ಇದ್ದು, ಇತರ ಉಪಾಸಕರಿಂದ ಏನನ್ನೂ ಕೋರುವುದಿಲ್ಲ. ಮನುಷ್ಯನು ಪರಂಪರೆಯನ್ನು ನಿರ್ಲಕ್ಷಿಸಲೆಂದು ರೂಪಿಸಿರುವ ಸಂಸ್ಥೆಗಳ ಮೂಲಕವೂ ಪರಂಪರೆಯನ್ನೇ ಬಲಗೊಳಿಸುತ್ತಾನಾದ್ದರಿಂದ ಕಾರ್ಯತಃ ಈ ಸೂತ್ರವು ಸಡಿಲವಾಗುತ್ತದೆ. ಆದರೆ ಅವರ ಮತ ಧರ್ಮದ ಸೂತ್ರಗಳು ಸ್ವಾವಲಂಬನೆ ಮತ್ತು ವೈಯಕ್ತಿಕ ಅಧಿಕಾರಗಳಿಗೆ ಅಚ್ಚುಗೊಳಿಸುವಷ್ಟರ ಮಟ್ಟಿಗೆ ಸಾಂಸ್ಕೃತಿಕ ಸ್ವಾತಂತ್ರ್ಯ ನೀಡಿವೆ.

ಮೈದಾನ ಸೀಮೆಯಲ್ಲಿ ಈ ಸ್ವಾವಲಂಬನೆ ಮತ್ತು ವೈಯಕ್ತಿಕ ಮುಂದಾಳುತ್ವವು ಶ್ಯಾಮನ್ ಸಿದ್ಧಾಂತ ಮಾತ್ರವಲ್ಲದೆ, ಅವರು ಸದಾ ನಿರತರಾಗಿರುವ ಗೆರಿಲ್ಲಾ ಯುದ್ಧ ವಿಧಾನದಲ್ಲಿ ಅವರು ತೋರುವ ಉತ್ಕಟ ಉತ್ಸಾಹದಲ್ಲಿಯೂ ವ್ಯಕ್ತಗೊಂಡಿದೆ. ಸಾಧಾರಣತಃ ಅವರ ಯುದ್ಧ ತಂಡಗಳಲ್ಲಿ ಹನ್ನೆರಡಕ್ಕಿಂತ ಕಮ್ಮಿ ಜನ ಇರುತ್ತಿದ್ದರು. ಸಣ್ಣವಾದ ಕದನಗಳಲ್ಲಿ ವ್ಯಕ್ತಿಯು ತಾನೊಬ್ಬನೇ ಕೈಗೊಳ್ಳುತ್ತಿದ್ದ ಕಾರ್ಯಾಚರಣೆ

ಗಳು, ಆಧುನಿಕ ಯುದ್ಧ ವಿಧಾನದ ಬಿಗುವಾದ ಶಿಸ್ತು ಮತ್ತು ವಿಧೇಯತೆಗೆ ವಿರುದ್ಧವ. ಅವರ ಯುದ್ಧವು ಪ್ರತಿಯೊಬ್ಬ ವ್ಯಕ್ತಿಯೂ ಜಯದ ಅಂಶಗಳನ್ನು ಕೂಡಿ ಹಾಕುವ ಒಂದು ಆಟ. ಅವರ ಜಯದ ಅಂಶಗಳೆಂದರೆ ಗೂಟಕ್ಕೆ ಕಟ್ಟಿದ ಕುದುರೆಯನ್ನು ಬಿಚ್ಚುವುದು, ಶತ್ರುವನ್ನು ಮುಟ್ಟುವುದು, ತಲೆಚಿಪ್ಪನ್ನು ತೆಗೆದುಕೊಳ್ಳುವುದು ಮುಂತಾದವು. ಒಬ್ಬ ವ್ಯಕ್ತಿಯು ಸಾಧಾರಣವಾಗಿ ತನ್ನ ಧೈರ್ಯ, ಸಾಹಸಗಳಿಂದ ಸಾಧ್ಯವಾದಷ್ಟು ಜಯಾಂಶಗಳನ್ನು ಗಳಿಸಿ ಅವುಗಳನ್ನು ಸಂಘಗಳಿಗೆ ಸೇರುವುದಕ್ಕೆ, ಔತಣ ನೀಡುವುದಕ್ಕೆ, ಮುಖ್ಯಸ್ಥನಾಗಲು ತಕ್ಕ ಅರ್ಹತೆಗಳಿಸುವುದಕ್ಕೆ ಬಳಸುತ್ತಿದ್ದನು. ಮೈದಾನ ಸೀಮೆಯ ಇಂಡಿಯನ್ನನಿಗೆ ಮನುಷ್ಯನ ಹಿಗ್ಗು ವಿಕೆ. ಒಂಟಿಯಾಗಿ ಕಾರ್ಯಾಚರಣೆ ಮಾಡುವ ಸಾಮರ್ಥ್ಯ ಇಲ್ಲದಿದ್ದರೆ ಅಂತಹವನಿಗೆ ಸಮಾಜದಲ್ಲಿ ಮಾನ್ಯತೆಯಿಲ್ಲ. ಮೊದ ಮೊದಲಿನ ಅನ್ವೇಷಕರು ನೀಡಿರುವ ಸಾಕ್ಷ್ಯಾಧಾರಗಳು, ಬಿಳಿಯರೊಂದಿಗೆ ನಡೆದ ಘರ್ಷಣೆಯಲ್ಲಿ ಅವರಲ್ಲಿ ತೋರಿಬಂದ ಅಸಾಧಾರಣ ವ್ಯಕ್ತಿಗಳು, ಪ್ವೆಬ್ಲೋಗಳೊಂದಿಗೆ ತೋರಿಬರುವ ಭಿನ್ನಭಾವ ಇವೆಲ್ಲವೂ ಅವರು ತಮ್ಮ ಸಂಸ್ಥೆಗಳ ಮೂಲಕ ಪೋಷಿಸುವ ವ್ಯಕ್ತಿತ್ವವು ನೀಷೆ ದೃಷ್ಟಿಕೋನದ ಅತಿಮಾನವನ ಸರಿಸುಮಾರಿನದು ಎಂಬುದನ್ನು ತೋರುತ್ತವೆ. ಅವರು ಜೀವನವನ್ನು ಒಬ್ಬ ವ್ಯಕ್ತಿಯು ಪುರುಷರ ಸಂಘಗಳ ವಿವಿಧ ಹಂತಗಳ ಮೂಲಕ, ದೈವಿಕಶಕ್ತಿಯನ್ನು ಸಂಗ್ರಹಿಸುವುದರ ಮೂಲಕ, ಹಾಗೂ ಔತಣ ನೀಡಿಕೆ ಮತ್ತು ವಿಜಯಗಳ ಮೂಲಕ, ಪ್ರಗತಿಪಥದಲ್ಲಿ ಮುನ್ನೇರುವ ನಾಟಕವಾಗಿ ನೋಡುತ್ತಾರೆ. ಮುನ್ನೇರುವ ಸ್ವತಂತ್ರ ಸದಾ ಅವನದೇ ; ಅವನ ಸಾಹಸಕಾರ್ಯಗಳ ಹೆಗ್ಗಳಿಕೆ ವ್ಯಕ್ತಿಗತವಾಗಿ ಅವನದು ; ಸಂಸ್ಕಾರ ಸಮಾರಂಭಗಳಲ್ಲಿ ಅವುಗಳನ್ನು ಕುರಿತು ಹಾಡಿಹೊಗಳಿಕೊಳ್ಳುವ ಮತ್ತು ತನ್ನ ವೈಯಕ್ತಿಕ ಮಹತ್ವಾಕಾಂಕ್ಷೆಗಳನ್ನು ಸಾಧಿಸುವುದಕ್ಕಾಗಿ ಬಳಸಿಕೊಳ್ಳುವ ಹಕ್ಕು ಅವನದು. ಪ್ವೆಬ್ಲೋಗಳ ಆದರ್ಶ ಮನುಷ್ಯ ಬೇರೆ ಸ್ತರದ ವ್ಯಕ್ತಿ. ಜುನಿಗಳಲ್ಲಿ ವೈಯಕ್ತಿಕ ಅಧಿಕಾರವು ಪ್ರಾಯಶಃ ಅತ್ಯಂತ ಹೇಯವಾದ ಗುಣಲಕ್ಷಣ. ಅಧಿಕಾರ ಅಥವಾ ಜ್ಞಾನಕ್ಕಾಗಿ ಹಾತೊರೆಯುವ ಮನುಷ್ಯ ಮತ್ತು ಅವರು ತಿರಸ್ಕಾರದಿಂದ ಸೂಚಿಸುವಂತೆ 'ಜನರ ಮುಖಂಡ' ಆಗ ಬಯಸುವ ಮನುಷ್ಯ ತೆಗಳಿಕೆಗೆ ಗುರಿಯಾಗುವನು. ಮಾಟಗಾರನೆಂದು ಪರಿಗಣಿತನಾಗಿ ಕಿರುಕುಳಕ್ಕೊಳಗಾಗುತ್ತಾನೆ. ಹೀಗೆ ಆಗಿರುವುದುಂಟು. ಸ್ವಾಭಾವಿಕವಾದ ಅಧಿಕಾರದ ಗತ್ತಿನ ವರ್ತನೆಯು ಜುನಿಗಳಲ್ಲಿ ಒಂದು ಅನಿಷ್ಟ. ಅಂತಹವನ ಮೇಲೆ ಮಾಟಗಾರಿಕೆಯ ದೋಷಾರೋಪ ಸಿದ್ಧವಿರುತ್ತದೆ ಅವನನ್ನು 'ತಪ್ಪೊಪ್ಪಿಗೆ ನೀಡುವ ತನಕ' ಹೆಬ್ಬೆರಳಿನಿಂದ ನೇಣು ಕಟ್ಟುತ್ತಾರೆ. ಬಲಶಾಲಿ ವ್ಯಕ್ತಿತ್ವವಿರುವವನಿಗೆ ಜುನಿಗಳಲ್ಲಿ ದೊರೆಯುವ ಪ್ರತಿಕ್ರಿಯೆ ಇಷ್ಟೆ. ಜುನಿಗಳ ಆದರ್ಶ ಮನುಷ್ಯ ಸೌಜನ್ಯ ಶೀಲ, ಗೌರವಾನ್ವಿತ ವ್ಯಕ್ತಿಯಾಗಿದ್ದು, ಎಂದೂ ಮುಂದಾಳಾಗಲು

ಪ್ರಯತ್ನಿಸದೆ, ನೆರೆಹೊರೆಯವರಿಂದ ಯಾವುದೇ ರೀತಿಯ ಟೀಕೆಗೆ ಗುರಿಯಾಗದೆ ಇರುವ ವ್ಯಕ್ತಿ. ಅವನ ಪಕ್ಷವೇ ಸರಿಯಾದುದಾದರೂ ಕಲಹದಲ್ಲಿ ಸಿಕ್ಕಿಬಿದ್ದರೆ ಅದು ಅವನ ವಿರುದ್ಧವಾಗಿಯೇ ಎಣಿಸಲ್ಪಡುತ್ತದೆ. ಓಟದ ಪಂದ್ಯಗಳಂತಹ ಸಾಮರ್ಥ್ಯದ ಸ್ಪರ್ಧೆಗಳಲ್ಲಿ ಸಹ ಒಬ್ಬನೇ ಮನುಷ್ಯ ಮೇಲಿಂದ ಮೇಲೆ ಗೆಲ್ಲುವುದನ್ನೇ ರೂಢಿಮಾಡಿಕೊಂಡರೆ ಅವನನ್ನು ಓಟದಿಂದ ಹೊರಗಿಕ್ಕುತ್ತಾರೆ. ಹಲವಾರು ಮಂದಿ, ಸಮಸಮವಾಗಿ ಗೆಲ್ಲುವ ಅವಕಾಶವುಳ್ಳ ಆಟಗಳಲ್ಲಿಯೇ ಅವರು ಆಸಕ್ತರಾಗಿರುವುದರಿಂದ, ಬಹುಸಮರ್ಥ ಆಟಗಾರ ಆಟವನ್ನು ಕೆಡಿಸುತ್ತಾನೆ. ಅಂತಹವರು ಅವರಿಗೆ ಬೇಡ.

ಡಾ. ಬುನ್ಜೆಲ್ ಅವರು ಹೇಳುವಂತೆ ಒಬ್ಬ ಸಭ್ಯ ಮನುಷ್ಯನೆಂದರೆ 'ಹರ್ಷ ನೀಡುವ ಮಾತುಗಾರ, ಸುಲಭವಾಗಿ ಪ್ರತಿಪಕ್ಷವನ್ನು ಒಪ್ಪಿಕೊಳ್ಳುವವ. ಹಾಗೂ ವಿಶಾಲ ಹೃದಯಿಯಾಗಿರಬೇಕು.' ಸಭ್ಯನಾಗಿದ್ದ ಒಬ್ಬ ನಗರವಾಸಿಯನ್ನು ಕುರಿತು ಒಂದು ಮೆಚ್ಚುಗೆಯ ವಿವರಣೆ ಹೀಗಿದೆ: 'ಅವನು ಒಳ್ಳೇ ವಿನಯಿಯಾದ ಮನುಷ್ಯ. ಅವನನ್ನು ಕುರಿತು ಯಾರೂ ಏನೂ ಎತ್ತಿ ಆಡುವುದಿಲ್ಲ. ಅವನು ಎಂದೂ ತೊಂದರೆಗೆ ಸಿಕ್ಕುವವನಲ್ಲ. ಅವನು ಬ್ಯಾಡ್ಜರ್ ಕುಲದ, ಮುಂಹೇಕ್ವೆ ಕಿವಾಕ್ಕೆ ಸೇರಿದವನು. ಅವನು ಬೇಸಿಗೆಯ ನೃತ್ಯಗಳಲ್ಲಿ ಯಾವಾಗಲೂ ಭಾಗವಹಿಸುತ್ತಾನೆ' ಅವನು ಇತರರಿಗೆ ಮುಜುಗರವಾಗದಂತೆ ತುಂಬ ಮಾತನಾಡುವವನಾಗಿರಬೇಕು. ಕೃಷಿಯಲ್ಲಾಗಲಿ, ಸಂಸ್ಕಾರ ಸಮಾರಂಭಗಳಲ್ಲಾಗಲಿ ಸದಾ ಇತರರೊಂದಿಗೆ ಸಹಕಾರದಿಂದ ನಡೆದುಕೊಳ್ಳಬೇಕು. ದುರಹಂಕಾರವನ್ನಾಗಲಿ, ಬಲವತ್ತರವಾದ ಆವೇಗವನ್ನಾಗಲಿ ತೋರಬಾರದು.

ಅಂತಹವನು ಅಧಿಕಾರ ಸ್ಥಾನಗಳಿಂದ ದೂರವಿರುತ್ತಾನೆ. ಅದನ್ನು ಅವನಿಗೆ ಬಲವಂತದಿಂದ ಕಟ್ಟಬಹುದು. ಆದರೆ ಅವನಾಗಿ ಅದನ್ನು ಬಯಸುವುದಿಲ್ಲ. ಕಿವಾದ ಅಧಿಕಾರ ಪದವಿಗಳನ್ನು ಭರ್ತಿಮಾಡಬೇಕಾಗಿ ಬಂದಾಗ ಯಾರಾದರೂ ಒಬ್ಬರ ನೆಪಗಳನ್ನು ತಳ್ಳಿ ಹಾಕುವವರೆಗೆ ಕಿವಾದ ಅಗಣಿ ಹಾಕಿ ಎಲ್ಲರನ್ನು ಬಂಧಿಸುತ್ತಾರೆ. ಸಭ್ಯರು ಅಧಿಕಾರ ಪದವಿಗಳನ್ನು ಒಪ್ಪಿಕೊಳ್ಳಲು ಹಿಂತೆಗೆಯುವುದನ್ನು ಜಾನಪದ ಕತೆಗಳು ನಿರೂಪಿಸುತ್ತವೆ. ಕೊನೆಗೆ ಅವರು ಒಪ್ಪಿಕೊಂಡೇ ತೀರುತ್ತಾರೆ. ಯಾವನೂ ಮುಖಂಡತ್ವವನ್ನು ಪ್ರದರ್ಶಿಸುವುದಕ್ಕೆ ಹೋಗಬಾರದು. ಹೀಗೆ ಆಯ್ಕೆಯಾದ ಒಬ್ಬ ವ್ಯಕ್ತಿಯನ್ನು ಹೇಗೋ ಮಾಡಿ ಒಪ್ಪಿಸಿದರೂ, ನಾವು ತಿಳಿದಿರುವ ರೀತಿಯಲ್ಲಿ ಅವನಿಗೆ ಅಧಿಕಾರ ನೀಡಲ್ಪಡುವುದಿಲ್ಲ. ಅವನ ಪದವಿಗೆ ಯಾವುದೇ ರೀತಿಯ ಮುಖ್ಯ ಕಾರ್ಯಾಚರಣೆಯ ಅಧಿಕಾರವಿಲ್ಲ, ಜುನಿ ಅಧಿಕಾರ ಸಮಿತಿ ಅತ್ಯುನ್ನತ ಪುರೋಹಿತರಿಂದ ಕೂಡಿದುದು. ಪುರೋಹಿತರಿಗೆ ಜಗಳಗಳ ಅಥವಾ ಹೊಡೆದಾಟಗಳ ಬಗ್ಗೆ ತೀರ್ಪು ಕೊಡುವ ಯಾವ ಅಧಿಕಾರವೂ ಇಲ್ಲ. ಅವರು ಪೂಜ್ಯ ವ್ಯಕ್ತಿಗಳಾದ್ದರಿಂದ

ಅವರ ಮುಂದೆ ಜಗಳಗಳನ್ನು ತರುವಂತಿಲ್ಲ. ಯುದ್ಧ ಪಂಥದ ಮುಖ್ಯಸ್ಥರು ಮಾತ್ರ ಕೊಂಚಮಟ್ಟಿನ ಆಡಳಿತಾಧಿಕಾರವನ್ನು ಹೊಂದಿದ್ದಾರೆ. ಅದು ಸಹ ಯುದ್ಧಕ್ಕೆ ಸಂಬಂಧಪಟ್ಟುದಕ್ಕಿಂತ ಹೆಚ್ಚಿಗೆ ಶಾಂತಿಕಾಲದ ಪೋಲೀಸ್ ಅಧಿಕಾರಕ್ಕೆ ಸಂಬಂಧಪಟ್ಟುದು. ಅವರು ಮೊಲದ ಬೇಟೆಯನ್ನು ಅಥವಾ ನೃತ್ಯಗಳನ್ನು ಸಾರುತ್ತಾರೆ. ಪುರೋಹಿತರನ್ನು ಕೂಡಿಸುತ್ತಾರೆ. ಔಷಧ ಸಂಘಗಳೊಂದಿಗೆ ಸಹಕರಿಸುತ್ತಾರೆ. ಪರಂಪರಾಗತವಾಗಿ ಅವರು ಎದುರಿಸಬೇಕಾದ ಅಪರಾಧಗಳಲ್ಲಿ ಮಾಟಗಾರಿಕೆ ಒಂದು. ದೀಕ್ಷಿತರಾಗದ ಬಾಲಕರಿಗೆ ಕಚೀನಾಗಳ ರಹಸ್ಯವನ್ನು ತಿಳಿಸುವುದು ಇನ್ನೊಂದು ಅಪರಾಧ. ಈ ಅಪರಾಧವನ್ನು ಕಚೀನಾ ಪಂಥದ ಮುಖ್ಯಸ್ಥನಿಂದ ಆಹ್ವಾನಿತರಾದ ದೇವತೆಗಳು ಶಿಕ್ಷಿಸುತ್ತಾರೆ. ಇವಲ್ಲದೆ ಬೇರೆ ಅಪರಾಧಗಳಿಲ್ಲ. ಕಳ್ಳತನ ಬಹಳ ಅಪರೂಪವಾಗಿದ್ದು ಖಾಸಗಿ ವಿಷಯವೆಂದು ಪರಿಗಣಿತವಾಗಿದೆ. ಹಾದರವು ಅಪರಾಧವಲ್ಲ. ಅಂತಹ ಪ್ರಸಂಗದಿಂದ ಹುಟ್ಟುವ ಕ್ಷೋಭೆಯನ್ನು ಅವರ ವಿವಾಹ ಪದ್ಧತಿಗೆ ಅನುಸಾರವಾದ ಕ್ರಮಗಳಿಂದ ಸುಲಭವಾಗಿ ಬಗೆಹರಿಸಬಹುದು. ಒಂದೇ ಒಂದು ಹತ್ಯಾ ಪ್ರಸಂಗ ದಾಖಲಾಗಿದೆ. ಅದನ್ನು ಸಂಬಂಧಪಟ್ಟ ಎರಡು ಕುಟುಂಬಗಳ ನಡುವೆಯೇ ಪರಿಹಾರಧನ ನೀಡುವ ವ್ಯವಸ್ಥೆ ಮಾಡಿ ಶೀಘ್ರವಾಗಿ ತೀರ್ಮಾನಿಸಲಾಯಿತು.

ಹೀಗಾಗಿ ಉನ್ನತ ಸಮಿತಿಯ ಪುರೋಹಿತರ ಶಾಂತಿಗೆ ಭಂಗ ಬರುವುದಿಲ್ಲ. ಅವರು ಪಂಚಾಂಗದ ಪ್ರಕಾರ ಉತ್ಸವಾಚರಣೆಗಳ ಮುಖ್ಯ ಅಂಶಗಳನ್ನು ನಡೆಸಿಕೊಡುತ್ತಾರೆ. ಅವರ ಯೋಜನೆಯಂತೆ ಕಾರ್ಯ ನಡೆಯುವುದಕ್ಕೆ ಒಬ್ಬ ಸಣ್ಣ ಪುರೋಹಿತನು ಸಹ ತನ್ನ ಅಸಹಕಾರ ತೋರಿ ಅಡ್ಡಿ ಪಡಿಸಬಹುದು; ಉದಾಹರಣೆಗೆ ಅವನು ಮುನಿಸಿಕೊಂಡು ತನ್ನ ಪೂಜಾಪೀಠವನ್ನು ಅಣಿಗೊಳಿಸದೆಯೋ, ತನ್ನ ಕಚೀನಾ ಪುರೋಹಿತ ಮುಖವಾಡವನ್ನು ಸಿಂಗಾರ ಮಾಡದೆಯೋ ಇರಬಹುದು. ಆಗ ಪುರೋಹಿತ ಸಮಿತಿ ಕಾಯಲೇ ಬೇಕಾಗುತ್ತದೆ. ಉತ್ಸವವನ್ನು ಮುಂದೂಡಲೇ ಬೇಕಾಗುತ್ತದೆ. ಆದರೆ ಸಾಧಾರಣವಾಗಿ ಪ್ರತಿಯೊಬ್ಬನೂ ಸಹಕರಿಸುತ್ತಾನೆ. ಯಾವ ರೀತಿಯ ಅಧಿಕಾರದ ತೋರಿಕೆಗೂ ಅವಕಾಶ ಏಳುವುದಿಲ್ಲ.

ಮತಧರ್ಮಕ್ಕೆ ಸಂಬಂಧಪಟ್ಟಂತೆ ಇರುವಂತೆಯೇ ಕೌಟುಂಬಿಕ ಪ್ರಸಂಗಗಳಲ್ಲಿಯೂ ವ್ಯಕ್ತಿಗತ ಅಧಿಕಾರದ ಚಲಾವಣೆಗೆ ಅವಕಾಶವಿಲ್ಲದಿರುವುದೇ ಇವರ ಲಕ್ಷಣ. ಮಾತೃಆನುವಂಶಿಕ ಹಾಗೂ ಮಾತೃಸ್ಥಾನೀಯ ಕುಟುಂಬ ಪದ್ಧತಿ ಅವರಲ್ಲಿ ಪ್ರಚಲಿತವಾಗಿದೆ. ಆದ್ದರಿಂದ ನಮಗೆ ಪರಿಚಯವಾಗಿರುವ ಪದ್ಧತಿಗಿಂತ ಬೇರೆ ತೆರನಾದ ಅಧಿಕಾರ ವಿಂಗಡಣೆಯಾಗಿದೆ. ಸಾಧಾರಣವಾದ ಮಾತೃಆನುವಂಶಿಕ ಸಮಾಜಗಳಲ್ಲಿ ತಂದೆಗೆ ಅಧಿಕಾರದ ಸ್ಥಾನವಿಲ್ಲವಾದರೂ, ಗಂಡಸಿಗೆ ಅಧಿಕಾರವಿರುತ್ತದೆ;

ಮಾತೃ ಪರಂಪರೆಯ ಕುಟುಂಬದಲ್ಲಿ ತಾಯಿಯ ಸಹೋದರನು ಕುಟುಂಬದ ಗಂಡು ಯಜಮಾನನಾಗಿ ಅದರ ಜವಾಬ್ದಾರಿ ಹೊತ್ತ ನಿರ್ಣಯಾಧಿಕಾರಿ, ಆದರೆ ಜುನಿಗಳಲ್ಲಿ ತಾಯಿಯ ಸಹೋದರನಿಗೆ ಈ ಬಗೆಯ ಯಾವ ಅಧಿಕಾರವೂ ಇಲ್ಲ. ತಂದೆಗಂತೂ ಖಂಡಿತವಾಗಿ ಅಂತಹ ಅಧಿಕಾರವಿಲ್ಲ. ತಮ್ಮ ಮನೆತನದ ಮಕ್ಕಳನ್ನು ಅವರು ಕ್ರೂರವಾದ ಶಿಸ್ತಿಗೆ ಒಳಪಡಿಸುವುದಿಲ್ಲ. ಎಳೆಮಕ್ಕಳನ್ನು ಗಂಡಸರು ಬಹಳವಾಗಿ ಮುದ್ದಿಸುತ್ತಾರೆ. ಕಾಯಿಲೆಯಾದಾಗ ಅವರನ್ನು ಎತ್ತಿಕೊಂಡಿರುತ್ತಾರೆ. ಸಂಜೆ ವೇಳೆ ತಮ್ಮ ಉಡಿಯಲ್ಲಿ ಕುಳ್ಳಿರಿಸಿಕೊಳ್ಳುತ್ತಾರೆ. ಆದರೆ ಅವರನ್ನು ಶಿಸ್ತಿಗೆ ಒಳಪಡಿಸುವುದಿಲ್ಲ. ಮತ ಧಾರ್ಮಿಕ ಜೀವನದಂತೆಯೇ ಕೌಟುಂಬಿಕ ಜೀವನವೂ ಸಹಕಾರದ ವಾತಾವರಣದಿಂದಾಗಿ ಒಂದು ನಿರ್ದಿಷ್ಟ ಕ್ರಮದಲ್ಲಿ ನಡೆಯುತ್ತದೆ. ತೀವ್ರವಾಗಿ ಪರಿಗಣಿಸಬೇಕಾದ ಪ್ರಸಂಗಗಳೇ ಏಳುವುದಿಲ್ಲ. ಈ ಸಮಾಜದಲ್ಲಿ ಅಂತಹ ಪ್ರಸಂಗಗಳು ಏಳುವುದು ಹೇಗೆ ಸಾಧ್ಯ ? ಇತರ ಸಂಸ್ಕೃತಿಗಳಲ್ಲಿ ವಿವಾಹವು ಅಧಿಕಾರವನ್ನು ಚಲಾಯಿಸಬೇಕಾಗಿ ಬರುವ ಸರ್ವಮಾನ್ಯವಾದ ಒಂದು ಸಂದರ್ಭ. ಆದರೆ ಪ್ವೆಬ್ಲೋಗಳಲ್ಲಿ ವಿವಾಹವು ಯಾವುದೇ ರೀತಿಯ ಔಪಚಾರಿಕತೆಯಿಲ್ಲದೇ ಏರ್ಪಡುತ್ತದೆ. ಪ್ರಪಂಚದ ಇತರ ಭಾಗಗಳಲ್ಲಿ ಮದುವೆಯೊಂದಿಗೆ ಆಸ್ತಿಯ ಹಕ್ಕುಗಳು ಮತ್ತು ಆರ್ಥಿಕ ವಿನಿಮಯಗಳು ಹೊಸೆದುಕೊಂಡಿದ್ದು, ಆ ಸಂದರ್ಭಗಳಲ್ಲಿ ಹಿರಿಯರಿಗೆ ನಿರ್ಣಾಯಕ ಅಧಿಕಾರವಿದೆ. ಆದರೆ ಜುನಿ ವಿವಾಹಗಳಲ್ಲಾದರೋ ಹಿರಿಯರ ಆಸಕ್ತಿಯನ್ನು ಸೆಳೆಯುವಂತಹ ಹಕ್ಕುಬಾಧ್ಯತೆಗಳಾವುವೂ ಹೊಸೆದುಕೊಂಡಿಲ್ಲ. ಪ್ವೆಬ್ಲೋಗಳಲ್ಲಿ ಸೊತ್ತಿಗೆ ನೀಡಿರುವ ಅಲ್ಪ ಮಹತ್ವದಿಂದಾಗಿ ಇತರೆಡೆಗಳಲ್ಲಿ ಕಠಿಣ ಪ್ರಸಂಗಗಳಾದ ವಿವಾಹ ಮತ್ತು ಅಂತಹ ಹಲವಾರು ಸಂದರ್ಭಗಳು ಲಘು ಪ್ರಸಂಗಗಳಾಗಿವೆ. ಇತರ ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ಮದುವೆ ಮತ್ತು ಇತರ ಕೆಲ ಸಂದರ್ಭಗಳಲ್ಲಿ ಸಂಬಂಧಪಟ್ಟ ಯುವಕನಿಗಾಗಿ, ಗುಂಪಿನ ಸೊತ್ತನ್ನು ವಿನಿಯೋಗಿಸಬೇಕಾಗುವುದು. ಜುನಿಗಳಲ್ಲಿ ಅಂತಹ ಸಂದರ್ಭಗಳೇ ಇಲ್ಲ.

ಪ್ರತಿಯೊಂದು ವ್ಯವಸ್ಥೆಯೂ. ಮಗುವು ಈಡಿಪಸ್ ಮನೋಪ್ರವೃತ್ತಿಯನ್ನು ತಳೆಯದಂತೆ ತಡೆಗಟ್ಟುತ್ತದೆ. ಟ್ರೋಬ್ರಿಯಾಂಡ್ ಜನರಲ್ಲಿ ಸಮಾಜ ರಚನೆಯು ತಮ್ಮ ಸಂಸ್ಕೃತಿಯಲ್ಲಿ ತಂದೆಗೆ ನೀಡಿರುವ ಅಧಿಕಾರಗಳನ್ನು ಸೋದರ ಮಾವನಿಗೆ ನೀಡಿದೆ ಎಂಬುದನ್ನು, ಮ್ಯಾಲಿನೋವಸ್ಕಿ ತಿಳಿಸಿದ್ದಾರೆ. ಜುನಿಗಳಲ್ಲಿ ಸೋದರ ಮಾವನೂ ಈ ಅಧಿಕಾರಗಳನ್ನು ಚಲಾಯಿಸುವುದಿಲ್ಲ. ಅಂತಹ ಅಧಿಕಾರ ಚಲಾಯಿಸುವ ಸಂದರ್ಭಗಳನ್ನು ಅವರು ಸಹಿಸುವುದಿಲ್ಲ. ವಾಡಿಕೆಯಾಗಿ ಅಂತಹ ಸಂದರ್ಭಗಳಿಂದ ಮಗುವಿನಲ್ಲಿ ಅಸಮಾಧಾನ ಹುಟ್ಟುತ್ತದೆ ; ಅಥವಾ ಅದಕ್ಕೆ ಪರಿಹಾರ ರೂಪವಾಗಿ ಮಹತ್ವಾಕಾಂಕ್ಷೆಯ ಹಗಲ್ಗನಸು ಮನೋಭಾವ ತಳೆದೋರುತ್ತದೆ. ಆದರೆ

ಜುನಿಗಳಲ್ಲಿ ಈ ರೀತಿಯ ಪೀಡನೆಗಳಿಗೆ ಗುರಿಯಾಗದೇ ಮಗು ಬೆಳೆಯುತ್ತದೆ. ಆ ಹುಡುಗ ಬೆಳೆದು ದೊಡ್ಡವನಾದಾಗ ಅಧಿಕಾರ ಚಲಾವಣೆಯೇ ಸೂಕ್ತವಾದುದೆಂಬ ಸಂದರ್ಭಗಳನ್ನು ಕಲ್ಪಿಸಿಕೊಳ್ಳುವ ಮೂಲ ಪ್ರೇರಣೆಯೇ ಇರುವುದಿಲ್ಲ.

ಈ ಕಾರಣದಿಂದ ಜುನಿಗಳಲ್ಲಿ ಬಾಲಕರ ದೀಕ್ಷಾವಿಧಿಯು ಪ್ರಪಂಚದಲ್ಲಿ ಎಲ್ಲೆಲ್ಲೂ ಕಂಡುಬರುವ ರೂಢಿಗಳಿಗೆ ಹೋಲಿಸಿದರೆ ವಿಲಕ್ಷಣವಾಗಿದೆ. ಸಾಧಾರಣವಾಗಿ ದೀಕ್ಷಾವಿಧಿಯು ಈಗ ಅಧಿಕಾರದಲ್ಲಿರುವವರು ತಮ್ಮ ಹಕ್ಕು ಬಾಧ್ಯತೆಗಳನ್ನು ನಿಸ್ಸಂಕೋಚವಾಗಿ ಚಲಾಯಿಸುವ ಸಂದರ್ಭ. ಬಣದ ಸ್ಥಾನಮಾನಗಳಿಗೆ ಪ್ರವೇಶಿಸಲಿರುವವರನ್ನು ಈಗ ಅಧಿಕಾರದಲ್ಲಿರುವವರು ಗೋಳುಗುಟ್ಟಿಸುವ ಸಂದರ್ಭ. ಈ ಸಂಸ್ಕಾರ ವಿಧಿಗಳು ಆಫ್ರಿಕಾ, ದಕ್ಷಿಣಅಮೇರಿಕ,ಆಸ್ಟ್ರೇಲಿಯಾಗಳಲ್ಲೆಲ್ಲ ಒಂದೇ ತೆರನಾಗಿ ನಡೆಯುತ್ತವೆ. ದಕ್ಷಿಣ ಆಫ್ರಿಕದಲ್ಲಿ ದೊಡ್ಡ ದೊಣ್ಣೆಗಳನ್ನು ಹಿಡಿದು, ಅವನ್ನು ಧಾರಾಳವಾಗಿ ಬಳಸುವ ಹಿರಿಯರ ಬಳಿ ಬಾಲಕರನ್ನು ರೊಪ್ಪ ಹಾಕುತ್ತಾರೆ. ಬಾಲಕರು ತಮ್ಮ ಮೇಲೆ ಬೀಳುತ್ತಿರುವ ಏಟುಗಳ ಮಳೆಯಲ್ಲಿ ಓಡಬೇಕು. ತಮ್ಮ ಹಿಂದಿನಿಂದ ಕುಚೋದ್ಯ ಮತ್ತು ಹೊಡೆತಗಳನ್ನು ನಿರೀಕ್ಷಿಸಬೇಕು. ವರ್ಷದ ಅತ್ಯಂತ ಚಳಿಯ ತಿಂಗಳುಗಳಲ್ಲಿ ಕಂಬಳಿಗಳಿಲ್ಲದೆ ಬರಿಮೈಯಲ್ಲಿ ತಲೆಯನ್ನು ಉರಿಯುತ್ತ ತಿರುಗಿಸಿ ಮಲಗಿರಬೇಕು. ಅವರು ತಮ್ಮನ್ನು ರಾತ್ರಿ ವೇಳೆ ಕಚ್ಚುವ ಬಿಳಿ ಗೆದ್ದಲನ್ನು ದೂರವಿಡುವಂತೆ ನೆಲ ಸಾರಿಸಬಾರದು. ಬೆಳಕು ಹರಿಯುವ ಮುನ್ಸೂಚನೆ ಕಂಡೊಡನೆಯೇ ಎದ್ದು ಕೊಳಕ್ಕೆ ಹೋಗಿ ಸೂರ್ಯನು ಮೇಲೇರುವ ತನಕ ತಣ್ಣೀರಲ್ಲಿ ಮುಳುಗಿ ನಿಲ್ಲಬೇಕು. ಅವರು ದೀಕ್ಷಾಶಿಬಿರದಲ್ಲಿ ಇರುವ ಮೂರು ತಿಂಗಳ ಕಾಲ ಒಂದು ಹನಿ ನೀರನ್ನೂ ಕುಡಿಯುವಂತಿಲ್ಲ. ವಾಕರಿಕೆ ಬರಿಸುವ ಆಹಾರಗಳನ್ನು ತಿನ್ನಬೇಕು. ಇದಕ್ಕೆಲ್ಲಾ ಪ್ರತಿಫಲವಾಗಿ ಅವರಿಗೆ ಬಹು ಮಹತ್ವದ್ದೇನೋ ಎಂಬ ತೋರಿಕೆಯೊಂದಿಗೆ ಅರ್ಥವಾಗದ ಸೂತ್ರಗಳನ್ನೂ ಗೋಪ್ಯವಾದ ಪದಗಳನ್ನೂ ಬೋಧಿಸಲಾಗುತ್ತದೆ.

ಅಮೇರಿಕದ ಇಂಡಿಯನ್ ಬಣಗಳಲ್ಲಿ ಬಾಲಕರ ದೀಕ್ಷಾವಿಧಿಗೆ ಅಷ್ಟೊಂದು ಪ್ರಾಮುಖ್ಯತೆ ನೀಡಿಲ್ಲವಾದರೂ, ಬಹುತೇಕವಾಗಿ ಇವೇ ಭಾವನೆಗಳು ತೋರಿಬರುತ್ತವೆ. ಜುನಿಗಳೊಂದಿಗೆ ಹಲವು ರೀತಿಗಳಲ್ಲಿ ಸಂಬಂಧ ಪಡೆದಿರುವ ಅಪಾಚೆಗಳು ಬಾಲಕನನ್ನು ಪಳಗಿಸುವುದೆಂದರೆ ಕುದುರೆ ಮರಿಯನ್ನು ಪಳಗಿಸಿದಂತೆ ಎನ್ನುತ್ತಾರೆ. ಮಂಜುಗಡ್ಡೆಯಲ್ಲಿ ತೂತಿಕ್ಕಿ ಅದರಲ್ಲಿ ಬಾಲಕನು ಸ್ನಾನ ಮಾಡಬೇಕು. ಪರೀಕ್ಷಾರ್ಥವಾದ ಯುದ್ಧ ತಂಡಗಳಲ್ಲಿ ಬಾಲಕರ ತೇಜೋವಧೆಯಾಗುತ್ತದೆ ; ಅವರನ್ನು ಕಾಡಿ ಹಿಂಸಿಸುತ್ತಾರೆ. ದಕ್ಷಿಣ ಕ್ಯಾಲಿಫೋರ್ನಿಯಾದ ಇಂಡಿಯನರಲ್ಲಿ ಬಾಲಕರನ್ನು ಕಚ್ಚುವ ಇರುವೆಗಳ ಗೂಡಿನಲ್ಲಿ ಹುಗಿಯುತ್ತಾರೆ.

ಆದರೆ ಜುನಿಗಳಲ್ಲಿ ಬಾಲಕರ ದೀಕ್ಷಾವಿಧಿಯು ವಿಷಮ ಪರೀಕ್ಷೆಯಲ್ಲ. ಭಾಳ

ಕರು ಆಗ ಪಡೆಯುವ ಅಲ್ಪ ಹೊಡೆತಕ್ಕೂ ಅಳುವುದರಿಂದ ಸಂಸ್ಕಾರದ ಮಹತ್ವ ಹೆಚ್ಚಿತೆಂದೇ ಭಾವಿಸಲ್ಪಡುತ್ತದೆ. ಪ್ರತಿ ಹಂತದಲ್ಲೂ ಬಾಲಕನೊಂದಿಗೆ ಅವನ ವ್ರತ ಸಂಬಂಧಿ ತಂದೆಯು ಇರುತ್ತಾನೆ. ಆ ವೃದ್ಧನ ಬೆನ್ನ ಮೇಲೆ ಕುಳಿತೋ, ಅವನ ಮಂಡಿಗಳ ನಡುವೆ ಬಾಗಿಯೋ ಬಾಲಕ ಬಿಗಿತಗಳಿಗೆ ಗುರಿಯಾಗುತ್ತಾನೆ. ಬಾಲಕನಿಗೆ ಆ ವ್ರತ ಸಂಬಂಧಿ ತಂದೆಯಿಂದ ರಕ್ಷಣೆ ದೊರೆಯುವುದು. ಜುನಿ ಬಾಲಕ ದಕ್ಷಿಣ ಆಫ್ರಿಕದ ಬಾಲಕನಂತೆ ರಕ್ಷಣೆಯ ಆವರಣದಿಂದ ಬಲವಂತವಾಗಿ ಹೊರತಳ್ಳಲ್ಪಡುವುದಿಲ್ಲ. ದೀಕ್ಷಾವಿಧಿಯು ಕೊನೆಗೊಳ್ಳುವಾಗ ಬಾಲಕನು ಯಂಕ್ಯಾ ಚಾವಟಿಯನ್ನು ತಾನೇ ತೆಗೆದುಕೊಂಡು, ತನ್ನನ್ನು ಥಳಿಸಿದ್ದ ರೀತಿಯಲ್ಲೇ ಕಚೀನಾಗಳನ್ನು ಥಳಿಸುತ್ತಾನೆ. ದೀಕ್ಷಾವಿಧಿಯು ಮಕ್ಕಳ ಮೇಲೆ ವಯಸ್ಕರಲ್ಲಿ ಅಡಗಿರುವ ತುಚ್ಛವಾದ ಅಧಿಕಾರ ತೋರುವ ಪ್ರವೃತ್ತಿಯ ಹೊರೆಯನ್ನು ಹೇರುವ ಪ್ರಸಂಗವಲ್ಲ; ಕೆಟ್ಟದನ್ನು ಉಚ್ಚಾಟಿಸುವ ಮತ್ತು ಪವಿತ್ರಗೊಳಿಸುವ ಸಂಸ್ಕಾರ. ಅದು ಮಕ್ಕಳಿಗೆ ಗುಂಪಿನ ಸ್ಥಾನಮಾನವನ್ನು ನೀಡಿ ಅವರ ಮಹತ್ವವನ್ನು ಹೆಚ್ಚಿಸುತ್ತದೆ. ಚಾವಟಿ ಏಟನ್ನು ಹಿರಿಯರು ಒಂದು ಅನುಗ್ರಹವೆಂದೂ, ಗುಣಕಾರಿಯೆಂದೂ ಭಾವಿಸಿ ಸ್ವೀಕರಿಸುವುದನ್ನು ಬಾಲಕರು ಕಂಡಿರುತ್ತಾರೆ. ದೈವಿಕ ಪ್ರಪಂಚದಲ್ಲಿ ಅವರಿಗೆ ದೊರೆಯುವ ಗೌರವ ರಕ್ಷೆ ಅದು.

ಮತಾಚರಣೆಯ ಸಂದರ್ಭಗಳಲ್ಲಾಗಲಿ, ಕೌಟುಂಬಿಕ ಸಂಬಂಧಗಳಲ್ಲಾಗಲಿ ಅಧಿಕಾರ ಚಲಾಯಿಸಲು ಅವಕಾಶಗಳನ್ನು ನೀಡದಿರುವ ಈ ಗುಣಲಕ್ಷಣವು ಇನ್ನೊಂದು ಮೂಲಭೂತ ಗುಣಲಕ್ಷಣದೊಂದಿಗೆ ಹೊಸೆದುಕೊಂಡಿದೆ. ವ್ಯಕ್ತಿಯು ತನ್ನನ್ನು ಗುಂಪಿನಲ್ಲಿ ವಿಲೀನಗೊಳಿಸಿಕೊಳ್ಳಬೇಕೆಂಬ ಕಡ್ಡಾಯವೇ ಆ ಗುಣಲಕ್ಷಣ. ಜುನಿಗಳಲ್ಲಿ ಸರ್ವದಾ ಜವಾಬ್ದಾರಿ ಮತ್ತು ಅಧಿಕಾರಗಳು ಹಂಚಿಹೋಗಿದ್ದು ಗುಂಪೇ ಕಾರ್ಯಶೀಲ ಘಟಕ. ದೈವತ್ವವನ್ನು ಮೊರೆ ಹೋಗುವ ಸರ್ವಮಾನ್ಯವಾದ ಮಾರ್ಗವೆಂದರೆ ಸಾಂಘಿಕ ಸಂಸ್ಕಾರ. ಕುಟುಂಬದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸರ್ವಮಾನ್ಯವಾದ ಮಾರ್ಗವೆಂದರೆ ಕುಟುಂಬದಲ್ಲಿ ಸಹಕಾರ. ಮತಧರ್ಮದಲ್ಲಾಗಲಿ, ಆರ್ಥಿಕತೆಯಲ್ಲಾಗಲಿ ವ್ಯಕ್ತಿ ಸ್ವತಂತ್ರನಲ್ಲ. ದೈವದಲ್ಲಿರುವ ವಿಶ್ವಾಸಕ್ಕೆ ಸಂಬಂಧಪಟ್ಟಂತೆ ನೋಡಿದರೆ, ತನ್ನ ಪೈರಿನ ಬಗ್ಗೆ ಕಳಕಳಿ ತಳೆದ ಮನುಷ್ಯನು ಅದನ್ನು ಉಳಿಸಲು ಮಳೆ ನೀಡುವಂತೆ ದೇವತೆಗಳನ್ನು ಪ್ರಾರ್ಥಿಸುವುದಿಲ್ಲ; ಬೇಸಿಗೆಯಲ್ಲಿ ನಡೆಯುವ ಮಳೆ ನೃತ್ಯಗಳಲ್ಲಿ ಭಾಗವಹಿಸುತ್ತಾನೆ. ಕಾಯಿಲೆಯಾಗಿರುವ ತನ್ನ ಮಗನಿಗೆ ಗುಣವಾಗಲೆಂದು ಪ್ರಾರ್ಥಿಸುವುದಿಲ್ಲ. ಬೃಹತ್ ಅಗ್ನಿ ಸಂಘದ ವೈದ್ಯ ಪಂಥವನ್ನು ಚಿಕಿತ್ಸಾ ಕಾರ್ಯಕ್ಕಾಗಿ ಕರೆತರುತ್ತಾನೆ. ವೈಯಕ್ತಿಕವಾದ ಪ್ರಾರ್ಥನಾ[illegible]ಗಳನ್ನು ನೆಡುವಾಗ, ಸಂಸ್ಕಾರ ಸಂಬಂಧವಾದ ಶುದ್ಧತೆಗಾದಿ ತಲೆತೊಳೆಯುವಾಗ,

ಚಿಕಿತ್ಸಕರನ್ನೋ ಇಲ್ಲವೇ ಮೃತಸಂಬಂಧಿ ತಂದೆಯನ್ನೋ ಆಹ್ವಾನಿಸುವಾಗ, ವೈಯಕ್ತಿಕ ಪ್ರಾರ್ಥನೆ ಸಲ್ಲಿಸಲು ಅವಕಾಶವಿದೆ. ಅವು ತಮಗಿಂತ ದೊಡ್ಡದಾದ ಸಾಂಘಿಕ ಸಂಸ್ಕಾರಕ್ಕೆ ಸೇರಿದ ಅವಶ್ಯಕ ಅಂಗಾಂಶಗಳಾಗಿರುವುದರಿಂದ ಅವುಗಳಿಗೆ ಮಾನ್ಯತೆ ಇದೆ. ಒಂದು ದೀರ್ಘವಾದ ಮಂತ್ರ ಸೂತ್ರದಿಂದ ಒಂದು ಪದವನ್ನು ತೆಗೆದು ಕೊಂಡರೆ ಅದಕ್ಕೆ ಹೇಗೆ ಪೂರ್ಣ ಪ್ರಾರ್ಥನೆಯ ಬಲ ಬರುವುದಿಲ್ಲವೋ ಹಾಗೆಯೇ ಈ ಅಂಶಗಳನ್ನು ದೊಡ್ಡದರಿಂದ ಬೇರ್ಪಡಿಸಿದರೆ ಅವುಗಳ ಬಲ ನಿಲ್ಲುವುದಿಲ್ಲ.

ಪ್ರತಿಯೊಂದು ಕ್ರಿಯೆಗೂ ಪ್ರೇರಕ ಶಕ್ತಿಯು ಸಂಪ್ರದಾಯ ಬದ್ಧರಚನೆಯಿಂದ ದೊರೆಯುತ್ತದೆಯೇ ಹೊರತು ವ್ಯಕ್ತಿಯಿಂದಲ್ಲ. ನಾವು ಕಂಡಂತೆ, ಒಬ್ಬ ಮುಖ್ಯ ಪುರೋಹಿತನು ತಾನು ಮುಖ್ಯ ಪುರೋಹಿತನೆಂಬುದರಿಂದ ಮಾತ್ರ ಹಾಗೂ ತಾನೂ ಅಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿರುವ ಸಂದರ್ಭಗಳಲ್ಲಿ ಮಾತ್ರ ಪ್ರಾರ್ಥನಾದಂಡಗಳನ್ನು ನೆಡಬಹುದು. ಒಬ್ಬ ಚಿಕಿತ್ಸಕ ತಾನು ಔಷಧ ಸಂಘದ ಒಂದು ಪಂಥದ ಸದಸ್ಯ ಎಂಬುದರಿಂದ ಚಿಕಿತ್ಸೆಗೆ ಕೈಯಿಕ್ಕುತ್ತಾನೆ, ಮೈದಾನ ಸೀಮೆಗಳಲ್ಲಿರುವಂತೆ ಆ ಪಂಥದ ಸದಸ್ಯತ್ವವು ಅವನ ಶಕ್ತಿಯನ್ನು ವರ್ಧಿಸುತ್ತದೆಂಬುದು ಮಾತ್ರವಲ್ಲ, ಪಂಥವೇ ಅವನ ಶಕ್ತಿಯ ಏಕೈಕ ಮೂಲ. ನವಾಜೊಗಳನ್ನು ಕೊಲ್ಲುವುದನ್ನು ಸಹ ಇದೇ ದೃಷ್ಟಿಯಿಂದ ಪರಿಗಣಿಸಲಾಗುತ್ತದೆ. ಒಂದು ಜಾನಪದ ಕತೆಯು ಪಕ್ಕಾ ವಿಶ್ವಾಸಘಾತದ ಪ್ರಸಂಗವೊಂದನ್ನು ಈ ರೀತಿ ನಿರೂಪಿಸಿದೆ: ಒಬ್ಬ ಶ್ರೀಮಂತ ನವಾಜೊ ಮತ್ತು ಅವನ ಹೆಂಡತಿ ವ್ಯಾಪಾರಕ್ಕೆಂದು ಒಂದು ಜುನಿ ಗೃಹಕ್ಕೆ ಬಂದರು. ಅವನಲ್ಲಿದ್ದ ವೈಡೂರ್ಯವನ್ನು ಕಸಿಯಲೆಂದು ಆ ಮನೆಯ ಗಂಡಸರು ಅವನನ್ನು ಕೊಂದರು. ಆದರೆ ಅವರಿಗೆ ತಲೆ ಚಿಪ್ಪು ತೆಗೆದು ಕೊಳ್ಳುವ ಶಕ್ತಿ ಇರಲಿಲ್ಲ. ಅವರು ಯುದ್ಧ ಪಂಥಕ್ಕೆ ಸೇರಿದವರಲ್ಲ. ಹಾಗೆ ಸೇರಿದ್ದರೆ ಅವರು ತಲೆಚಿಪ್ಪು ತೆಗೆದುಕೊಳ್ಳುವುದು ಸರಿಯಾಗುತ್ತಿತ್ತು. ಜುನಿಗಳ ಭಾವನೆಯ ಪ್ರಕಾರ ಈ ಕ್ರಿಯೆಗೂ ಸಹ ಸಾಂಘಿಕವಾದ ಅನುಮತಿ ಇದೆ. ಸಾಂಘಿಕ ಅನುಮತಿಯಿಲ್ಲದ ಅಂತಹ ಕ್ರಿಯೆಯನ್ನು ಮಾತ್ರ ಅವರು ಖಂಡಿಸುತ್ತಾರೆ.

ಜುನಿ ಜನ ಸಮಾಜದ ಪರಂಪರಾಗತ ಆಚಾರಕ್ರಮಗಳಿಗೆ ತಮ್ಮನ್ನು ನಿವೇದಿಸಿ ಕೊಂಡಿದ್ದಾರೆ. ತಮ್ಮ ವೈಯಕ್ತಿಕತೆಯನ್ನು ಅವುಗಳಲ್ಲಿ ಲೀನಮಾಡಿಕೊಂಡಿದ್ದಾರೆ. ಅವರು ತಮ್ಮ ಅಧಿಕಾರ ಪದವಿಗಳನ್ನೂ, ಪವಿತ್ರಗಂಟುಗಳ ಒಡೆತನವನ್ನೂ ತಮ್ಮ ಮಹತ್ವಾಕಾಂಕ್ಷೆಯತ್ತ ಮುನ್ನೇರುವ ಪಂಥದಲ್ಲಿನ ಹಂತಗಳೆಂದು ಪರಿಗಣಿಸುವುದಿಲ್ಲ. ಶಕ್ತಿಯಿದ್ದವನು ತನಗಾಗಿ ಒಂದು ಮುಖವಾಡ ಮಾಡಿಸಬಹುದು. ಆದರೆ ಅದು ಸಹ ತನ್ನ ಮನೆವಾರ್ತೆಯಲ್ಲಿ 'ಬಾಳಿಗೆ ಅನುವಾಗುವ' ವಸ್ತುಗಳ ಸಂಖ್ಯೆಯೂ ಮತ್ತು

ತನ್ನ ಶಿವಾದ ವ್ಯಾಪ್ತಿಗೆ ಸೇರಿದ ಮುಖವಾಡಗಳ ಸಂಖ್ಯೆಯೂ ಹೆಚ್ಚಲಿ ಎಂದು ಮಾತ್ರ. ಅವನು ಪಂಚಾಂಗ ರೀತ್ಯವಾದ ಸಂಸ್ಕಾರವಿಧಿಗಳಲ್ಲಿ ಪಾಲ್ಗೊಳ್ಳುತ್ತಾನೆ. ಬೇಕಾದ ಹಾಗೆ ಖರ್ಚುಮಾಡಿ ಶಲಾಕೋ ಹಬ್ಬದಲ್ಲಿ ಕಚೀನಾ ಪುರೋಹಿತ ಪಾತ್ರಧಾರಿಗಳನ್ನು ಆಹ್ವಾನಿಸುವುದಕ್ಕೋಸ್ಕರ ಮನೆ ಕಟ್ಟುತ್ತಾನೆ. ಆದರೆ ಇತರ ಸಂಸ್ಕೃತಿಗಳಲ್ಲಿ ಸಾದೃಶ್ಯವಿಲ್ಲದ ಮಟ್ಟಿಗೆ ಅನಾಮಧೇಯನಾಗಿ ಉಳಿದು, ತನ್ನ ಸೊತ್ತೆಂಬ ಭಾವನೆಯಿಲ್ಲದೆ ಇರುತ್ತಾನೆ. ಆ ಜನರ ವೈಯಕ್ತಿಕ ಕಾರ್ಯಾಚರಣೆಯ ಇಡೀ ಸ್ಥಾನದಿಶಾವಿನ್ಯಾಸವೇ ನಮಗೆ ಅಪರಿಚಿತವಾದುದು.

ಮತಧರ್ಮಕ್ಕೆ ಸಂಬಂಧಪಟ್ಟಂತೆ ವ್ಯಕ್ತಿಯ ಕ್ರಿಯೆ ಮತ್ತು ಪ್ರೇರಣೆಗಳು ಅಹಂಭಾವದಿಂದ ದೂರವಿರುವಂತೆಯೇ ಆರ್ಥಿಕ ಜೀವನದಲ್ಲಿಯೂ ದೂರವಿವೆ. ನಾವು ಈ ಮೊದಲೇ ಕಂಡಂತೆ ಬಹು ಅಸ್ಥಿರವಾದ ಗಂಡಸರ ಗುಂಪು ಆರ್ಥಿಕ ಘಟಕ. ಮನೆತನದ ಒಳಹುರಿಯೆಂದರೆ ಪರಸ್ಪರ ಸಂಬಂಧಗೊಂಡ ಹೆಂಗಸರ ಗುಂಪು. ಹೆಂಗಸರು ಕೃಷಿ, ಪಶುಪಾಲನೆ ಅಥವಾ ವೈಡೂರ್ಯದ ಕುಶಲ ಕೆಲಸ ಮೊದಲಾದ ಮಹತ್ವದ ಆರ್ಥಿಕ ವ್ಯವಹಾರಗಳಲ್ಲಿ ಅಷ್ಟು ಕ್ರಿಯಾಶೀಲ ಪಾತ್ರವಹಿಸುವುದಿಲ್ಲ. ಮೂಲಭೂತ ವೃತ್ತಿಗಳಿಗೆ ಅವಶ್ಯಕವಾದ ಗಂಡಸರು, ನಿಕಟವಾಗಿ ಒಂದುಗೂಡದೆ ಸ್ಥಳ ಬಿಟ್ಟು ಹೋಗುವ ಗುಂಪು. ಮನೆವಾರ್ತೆಯ ಹೆಣ್ಣುಮಕ್ಕಳ ಗಂಡಂದಿರು ಯಾವುದಾದರೂ ಗೃಹಕಲಹದಿಂದಾಗಿ ತಮ್ಮ ತಾಯಂದಿರ ಮನೆಗೆ ಹಿಂತಿರುಗುತ್ತಾರೆ. ಅಲ್ಲಿಂದ ಮುಂದಕ್ಕೆ ತಮ್ಮ ಮಕ್ಕಳಿಗೆ ಅನ್ನ ಆಶ್ರಯಗಳನ್ನು ನೀಡುವ ಜವಾಬ್ದಾರಿಯಿಲ್ಲ. ಅವರಲ್ಲದೆ ಮದುವೆಯಾಗದವರು, ವಿಧುರರು, ವಿಚ್ಛೇದನ ಪಡೆದವರು ಮತ್ತು ಹೆಂಡತಿಯರ ಮನೆಗಳಲ್ಲಿ ಹೊತ್ತಿರುವ ತಾತ್ಕಾಲಿಕ ಅಸಮಾಧಾನದ ಅವಧಿಯನ್ನು ದೂಡುತ್ತಿರುವವರೇ ಮೊದಲಾದ ಆ ಮನೆವಾರ್ತೆಯ ಸಂಬಂಧಿತ ಸ್ತ್ರೀ ಗುಂಪಿನ ಹಲವಾರು ಗಂಡು ರಕ್ತಸಂಬಂಧಿಗಳೂ ಮನೆಯಲ್ಲಿರುತ್ತಾರೆ. ಕ್ಷಣಿಕವಾಗಿ ಈ ಗುಂಪಿನ ಸಂಯೋಜನೆ ಏನೇ ಆಗಿರಲಿ ಈ ಕಲಬೆರಕೆ ಗುಂಪು ಮನೆಯ ಜೋಳದ ಕಣಜವನ್ನು ತುಂಬಿಸುವುದರಲ್ಲಿ ತನ್ನ ಶ್ರಮವನ್ನು ಒಂದುಗೂಡಿಸುತ್ತದೆ. ಈ ಜೋಳ ಮನೆವಾರ್ತೆಯ ಹೆಂಗಸರ ಸಾಮೂಹಿಕ ಸೊತ್ತಾಗಿಯೇ ಉಳಿಯುತ್ತದೆ. ಅವರಲ್ಲಿ ಯಾವನಾದರೂ ಒಬ್ಬ ಗಂಡಸಿಗೆ, ತಾನು ಹೊಸದಾಗಿ ಕೃಷಿ ಮಾಡಿರುವ ಜಮೀನುಗಳು ಖಾಸಗಿ ಆಸ್ತಿಯಾಗಿ ಇರಬಹುದಾದರೂ ಎಲ್ಲ ಗಂಡಸರೂ ಒಂದುಗೂಡಿ ತಮ್ಮ ಹಿರಿಯರಿಂದ ಬಂದ ಜಮೀನುಗಳನ್ನು ಕೃಷಿ ಮಾಡಿದಂತೆಯೇ ಮನೆಯೊಟ್ಟಿನ ಜೋಳದ ಕಣಜ ತುಂಬಲು ಅವುಗಳನ್ನೂ, ಕೃಷಿ ಮಾಡುತ್ತಾರೆ.

ಮನೆಗಳ ವಿಚಾರದಲ್ಲಿಯೂ ಇದೇ ಸಂಪ್ರದಾಯ. ಗಂಡಸರು ಮನೆ ಕಟ್ಟುತ್ತಾರೆ. ಆದರೆ ಮನೆ ಹೆಂಗಸರ ಹೆಸರಿನಲ್ಲಿರುತ್ತದೆ. ಯಾವನಾದರೂ ಮಾಗಿಕಾಲ್ಲ

ದಲ್ಲಿ ತನ್ನ ಹೆಂಡತಿಯನ್ನು ಬಿಟ್ಟರೆ ಅವನು ಆ ವರ್ಷವೆಲ್ಲ ದುಡಿದು ಕಟ್ಟಿದ ಮನೆಯನ್ನೂ, ಕೃಷಿಯ ಅವಧಿಯಲ್ಲಿ ಬೆಳೆದು ತುಂಬಿದ ಕಣಜವನ್ನೂ ಸಹ ಬಿಡಬೇಕಾಗುವುದು. ಅಂದರೆ ಅವುಗಳಲ್ಲಿ ಅವನಿಗೆ ವೈಯಕ್ತಿಕ ಹಕ್ಕು ಇರುವುದಿಲ್ಲ. ಅವನು ವಂಚಿತನಾದನೆಂಬ ಭಾವನೆಯಿಲ್ಲ. ಅವನು ತನ್ನ ದುಡಿಮೆಯನ್ನು ಮನೆತನದ ಒಟ್ಟಿಗೆ ನೀಡಿದ. ಅದರ ಫಲ ಗುಂಪಿಗೆ ದಾಸ್ತಾನು. ಅವನು ಈಗ ಆ ಗುಂಪಿನ ಸದಸ್ಯನಲ್ಲವಾದರೆ ಅದು ಅವನ ಹಣೆಬರಹ. ಈಚೆಗೆ ಕುರಿಗಳು ಒಳ್ಳೇ ಆದಾಯದ ಮೂಲವಾಗಿದ್ದು ಅವುಗಳನ್ನು ಗಂಡಸರು ವೈಯಕ್ತಿಕವಾದ ಸೊತ್ತಾಗಿ ಪಡೆದಿರುತ್ತಾರೆ. ಆದರೆ ಅವುಗಳನ್ನು ಗಂಡು ಸಂಬಂಧಿಗಳ ಗುಂಪು ಸಹಕರಿಸಿ ಪಾಲಿಸುತ್ತದೆ. ಹೊಸ ಆರ್ಥಿಕ ಪ್ರೇರಣೆಗಳು ತಲೆಯೆತ್ತುವುದು ಬಹಳ ನಿಧಾನ.

ಜುನಿಗಳ ಆದರ್ಶ ವ್ಯಕ್ತಿಯು ತನ್ನ ಕಾರ್ಯಾಚರಣೆಗಳನ್ನು ಗುಂಪಿನದರಲ್ಲಿ ಲೀನಮಾಡಿ ಯಾವುದೇ ರೀತಿಯ ವೈಯಕ್ತಿಕ ಅಧಿಕಾರವನ್ನೂ ತನ್ನ ಹಕ್ಕು ಎಂದು ಸಾಧಿಸುವುದಿಲ್ಲವೋ ಅದೇರೀತಿ ಅವನು ಎಂದೂ ಆವೇಶಗೊಳ್ಳುವುದಿಲ್ಲ. ಗ್ರೀಕ್ ಪರಿಜ್ಞಾನದ ಮಾಧ್ಯಮ ಮಾರ್ಗಕ್ಕೆ ಜುನಿಗಳು ಅಪೊಲೋನಿಯನ್ ರೀತಿಯಲ್ಲಿ ಬದ್ಧರಾಗಿದ್ದಾರೆ. ಇವರು ಭಾವಾವೇಶಗಳನ್ನು ಸಾಂಸ್ಕೃತಿಕವಾಗಿ ನಿರ್ವಹಿಸುವ ರೀತಿಯು ಇದನ್ನು ಸ್ಪಷ್ಟಗೊಳಿಸುವಂತೆ ಬೇರಾವುದೂ ಸ್ಪಷ್ಟಗೊಳಿಸುವುದಿಲ್ಲ. ಕೋಪವಾಗಲಿ, ಪ್ರೇಮವಾಗಲಿ, ಈರ್ಷ್ಯೆಯಾಗಲಿ, ದುಃಖವಾಗಲಿ, ಎಲ್ಲದರಲ್ಲೂ ಇತಿಮಿತಿಯೇ ಮೊದಲ ಶೀಲ. ಅವರ ಪವಿತ್ರ ಪುರುಷರು ಅಧಿಕಾರದಲ್ಲಿರುವಾಗ ಮೂಲಭೂತವಾದ ನಿಷೇಧವೆಂದರೆ ಅವರು ಕೋಪಗೊಂಡಿರುವರೆಂಬ ಸಂಶಯಕ್ಕೆ ಎಡೆಗೊಡದಿರುವುದು. ಉತ್ಸವ ಸಂಬಂಧವಾದ ಅಥವಾ ಆರ್ಥಿಕ ಇಲ್ಲವೇ ಗಾರ್ಹಸ್ಥ್ಯವಾದ ವಿವಾದಗಳು ಇನ್ನೆಲ್ಲಿಯೂ ಕಂಡುಬರದ ಮಟ್ಟಿಗೆ ಉದ್ವೇಗರಹಿತವಾಗಿ ನಡೆಯುತ್ತವೆ.

ಜುನಿಗಳಲ್ಲಿ ಪ್ರತಿನಿತ್ಯವೂ ಆ ಜನರ ಸಾಧುಸ್ವಭಾವದ ಹೊಸ ನಿದರ್ಶನಗಳನ್ನು ಕಾಣಬಹುದು. ನನಗೆ ಚೆನ್ನಾಗಿ ಪರಿಚಯವಿದ್ದ ಒಂದು ಕುಟುಂಬದವರು ಒಂದು ಬೇಸಿಗೆಯಲ್ಲಿ ವಾಸಮಾಡಲು ನನಗೆ ಮನೆಯನ್ನು ಕೊಟ್ಟಿದ್ದರು. ಕೆಲವು ಸಂದರ್ಭಗಳಿಂದಾಗಿ ಇನ್ನೊಂದು ಕುಟುಂಬದವರು ಆ ಮನೆಯನ್ನು ಮಾರುವ ಹಕ್ಕು ತಮ್ಮದೆಂದು ಸಾಧಿಸತೊಡಗಿದರು. ಪರಿಸ್ಥಿತಿ ಉದ್ವೇಗಭರಿತವಾಗಿದ್ದಾಗ ಮನೆಯ ಒಡತಿ ಕ್ವಾಟ್ಸಿಯಾ ಮತ್ತು ಅವಳ ಗಂಡ ನನ್ನೊಂದಿಗೆ ಹಜಾರದಲ್ಲಿರುವ ಸಂದರ್ಭದಲ್ಲಿ ನನಗೆ ತಿಳಿಯದ ಒಬ್ಬ ಮನುಷ್ಯ ಬಂದು ಅಂಗಳದಲ್ಲಿ ಮಟ್ಟಮಾಡದೇ ಬೆಳೆದು ನಿಂತಿದ್ದ ಹೂ ಕಳೆಗಳನ್ನು ಕತ್ತರಿಸತೊಡಗಿದ. ಅಂಗಳದಲ್ಲಿ ಕಳೆ ಬೆಳೆಯದಂತೆ ನೋಡಿಕೊಳ್ಳುವುದು ಮನೆಯ ಮಾಲೀಕರ ಪ್ರಮುಖ ಬಾಧ್ಯತೆ. ಆದ್ದರಿಂದ ಮನೆಯನ್ನು ಮಾರುವ ಹಕ್ಕು ಇದೆಯೆಂದು ಸಾರಿಕೊಂಡ ಮನುಷ್ಯ ಈ ಸಂದರ್ಭವನ್ನು ಸಾರ್ವ

ಜನಿಕವಾಗಿ ತನ್ನ ಹಕ್ಕನ್ನು ಘೋಷಿಸಲು ಬಳಸಿಕೊಂಡ. ಅವನು ಮನೆಯ ಒಳಕ್ಕೆ ಬರಲಿಲ್ಲ. ಕ್ವಾಟ್ಸಿಯಾ ಮತ್ತು ಲಿಯೋ, ಒಳಗಿದ್ದರೂ ಅವರನ್ನು ಜಗಳಕ್ಕೆ ಕರೆಯಲಿಲ್ಲ. ಆ ಮನುಷ್ಯ ನಿಧಾನವಾಗಿ ಕಳೆ ಕೀಳುತ್ತ ಹೋದ. ಒಳಗೆ ಲಿಯೋ ಶಾಂತಚಿತ್ತನಾಗಿ ಎಲೆಯನ್ನು ಅಗಿಯುತ್ತ ಗೋಡೆಗೆ ಕಾಲು ಚಾಚಿಕೊಂಡು ಕುಳಿತಿದ್ದ. ಕ್ವಾಟ್ಸಿಯಾ ಮಾತ್ರ ತನ್ನ ಕೋಪವನ್ನು ಸ್ವಲ್ಪ ಹರಿಬಿಟ್ಟಳು. "ಇದು ಮುಖಭಂಗ. ಹೊರಗೆ ಇರುವ ಮನುಷ್ಯನಿಗೆ ಈ ವರ್ಷ ಲಿಯೋ ಪುರೋಹಿತನಾಗಿದ್ದಾನೆಂದೂ ಅವನು ಕೋಪಗೊಳ್ಳಬಾರದೆಂದೂ ಗೊತ್ತು. ನಮ್ಮ ಅಂಗಳವನ್ನು ಒಪ್ಪಮಾಡಿ ಇಡೀ ಹಳ್ಳಿಯ ಎದುರು ನಮಗೆ ಅಪಮಾನ ಮಾಡುತ್ತಿದ್ದಾನೆ." ಎಂದು ಅವಳು ಹೇಳಿದಳು. ಆ ಹೊರಗಿನಿಂದ ಬಂದವನು ತಾನು ಕಿತ್ತ ಕಳೆಯನ್ನೆಲ್ಲ ಕಟ್ಟಿ, ಒಪ್ಪವಾಗಿದ್ದ ಅಂಗಳದತ್ತ ಹೆಮ್ಮೆಯ ನೋಟ ಬೀರಿ, ಹಿಂತಿರುಗಿ ಹೋದ. ಅವರವರಲ್ಲಿ ಒಂದೇ ಒಂದು ಮಾತು ಸಹ ಆಗಲಿಲ್ಲ. ಜುನಿಗಳಲ್ಲಿ ಇದು ತೀವ್ರವಾದ ಮುಖಭಂಗ. ಆ ಬೆಳಗ್ಗೆ ಅಂಗಳದಲ್ಲಿ ತಾನು ಮಾಡಿದ ಕೆಲಸದಿಂದ ಪ್ರತಿಸ್ಪರ್ಧಿ ಹಕ್ಕುದಾರ ತನ್ನ ವಿರೋಧವನ್ನು ಸಾಕಷ್ಟು ಮಟ್ಟಿಗೆ ವ್ಯಕ್ತಪಡಿಸಿದಂತಾಯಿತು. ವಿಚಾರವನ್ನು ಅವನು ಮುಂದುವರಿಸಲಿಲ್ಲ.

ದಾಂಪತ್ಯ ವಿರಸವನ್ನೂ ಇದೇ ರೀತಿ ಸಾಧುವಾಗಿ ನಿರ್ವಹಿಸುತ್ತಾರೆ. ಹಾದರಕ್ಕೆ ವಿರುದ್ಧವಾಗಿ ಆವೇಶ ತೋರುವುದಿಲ್ಲ. ಮೈದಾನ ಸೀಮೆಯಲ್ಲಿ ಹೆಂಡತಿಯ ಹಾದರಕ್ಕೆ ಸಾಧಾರಣ ಪ್ರತಿಕ್ರಿಯೆಯೆಂದರೆ ಅವಳ ಮೂಗಿನ ಮೆತು ಭಾಗವನ್ನು ಕತ್ತರಿಸುವುದು. ಇದು ನೈಋತ್ಯ ಸೀಮೆಯ ಅಪಾಚೆಗಳಂತಹ ಪ್ಯೂಬ್ಲೋಗಳಲ್ಲದ ಬಣಗಳಲ್ಲಿ ಸಹ ರೂಢಿ. ಆದರೆ ಜುನಿಗಳಲ್ಲಿ ಹೆಂಡತಿಯ ದಾರಿ ತಪ್ಪಿದ ವರ್ತನೆ ಆವೇಶಗೊಳ್ಳಲು ಸಬೂಬಾಗಲಾರದು. ಗಂಡನು ಅದು ತನ್ನ ಹಕ್ಕುಗಳ ಉಲ್ಲಂಘನೆ ಎಂದು ಭಾವಿಸುವುದಿಲ್ಲ. ಅವಳು ದಾರಿ ತಪ್ಪಿದರೆ ಅದು ಸಾಧಾರಣ ಗಂಡದಿರನ್ನು ಬದಲಾಯಿಸುವುದರಲ್ಲಿ ಮೊದಲ ಹೆಜ್ಜೆ. ಅವರ ಸಂಸ್ಥೆಗಳು ಇದನ್ನು ಸಾಕಷ್ಟು ಸುಲಭಗೊಳಿಸಿವೆಯಾದ್ದರಿಂದ, ಕಾರ್ಯತಃ ಸಹನೀಯವಾದ ಒಂದು ಕ್ರಮವು ಏರ್ಪಟ್ಟಿದೆ. ಅವರು ಅದರಲ್ಲಿ ಆವೇಶಕ್ಕೆ ಎಡೆ ಕೊಟ್ಟಿಲ್ಲ. ಬಹುಮಟ್ಟಿಗೆ ಮನೆಯ ಹೆಂಗಸರೂ ತಮ್ಮ ಗಂಡಂದಿರು ಒಳ್ಳೆಯ ನಂಬಿಕೆಯಿಂದ ನಡೆದುಕೊಳ್ಳದಿದ್ದರೂ ಸಹ ಅದನ್ನು ಅವರು ವಿಪರೀತವಾಗಿ ತೆಗೆದುಕೊಳ್ಳದೆ ಹೇಗೋ ಸಹಿಸಿಕೊಂಡು ಹೋಗುತ್ತಾರೆ. ತಮ್ಮ ತಮ್ಮ ಸಂಬಂಧವನ್ನೇ ಮುರಿದು ಹಾಕುವಷ್ಟು ಮಟ್ಟಿಗೆ ಪರಿಸ್ಥಿತಿಯು ಕೆಡುವವರೆಗೆ ಅದನ್ನು ನಿರ್ಲಕ್ಷಿಸುತ್ತಾರೆ. ಡಾ. ಬನ್ಜೆಲರು ಜುನಿಗೆ ನೀಡಿದ ಒಂದು ಭೇಟಿಯ ಅವಧಿಗೆ ಸ್ವಲ್ಪ ಮುಂಚೆ ಮನೆಯಾಕೆಯ ಒಬ್ಬ ತರುಣ ಪತಿಯು ಹೊರಗೆ ಬೇರೆ ಒಂದು ಹೆಣ್ಣಿನೊಡನೆ ಸಂಬಂಧ ಬೆಳೆಸಿಕೊಂಡಿರುವುದು ಪ್ಯೂಬ್ಲೋವಿಗೆಲ್ಲಾ ತಿಳಿದು

ಹೋಗಿತ್ತು. ಆ ಕುಟುಂಬದವರು ವಿಚಾರವನ್ನು ಸಂಪೂರ್ಣವಾಗಿ ಅಲಕ್ಷಿಸಿದ್ದರು. ಕೊನೆಗೆ ನೀತಿಯ ಪ್ರತಿಪಾದಕನಾದ ಒಬ್ಬ ಶ್ವೇತ ವರ್ಣೀಯ ವರ್ತಕನು ಆ ಮನೆ ಯಾಕೆಯೊಂದಿಗೆ ಈ ವಿಚಾರವನ್ನೆತ್ತಿ ಚರ್ಚಿಸಿದ. ಆ ದಂಪತಿಗಳಿಗೆ ಈಗಾಗಲೇ ವಿವಾಹವಾಗಿ ಹನ್ನೆರಡು ವರ್ಷ ಕಳೆದಿದ್ದವು. ಅವರಿಗೆ ಮೂವರು ಮಕ್ಕಳು ಬೇರೆ ಇದ್ದರು. ಆಕೆ ಒಂದು ಮುಖ್ಯ ಕುಟುಂಬಕ್ಕೆ ಸೇರಿದವಳು. ವರ್ತಕನು ಬಹಳ ಕಳಕಳಿಯಿಂದ ಜಬರ್ದಸ್ತು ತೋರಿಸುವುದರ ಮತ್ತು ಅವಳ ಗಂಡನ ನಾಚಿಕೆಗೇಡಿನ ನಡತೆಯನ್ನು ತಡೆಗಟ್ಟುವುದರ ಅವಶ್ಯಕತೆಯನ್ನು ಕುರಿತು ಬೇಕಾದ ಹಾಗೆ ಆಕೆಯ ಹತ್ತಿರ ಹೇಳಿದ. ಎಲ್ಲವನ್ನು ಕೇಳುತ್ತಿದ್ದ ಆಕೆ "ಆದ್ದರಿಂದಲೇ ನಾನು ನನ್ನ ಗಂಡನ ಬಟ್ಟೆ ಒಗೆಯುವುದನ್ನು ನಿಲ್ಲಿಸಿದೆ. ಎಲ್ಲರಿಗೂ ಗೊತ್ತಿದ್ದ ಸಮಾಚಾರ ನನಗೂ ತಿಳಿದು ಹೋಗಿದೆ ಎಂದು ಅವನು ಅರಿತ. ಆ ಹುಡುಗಿಯ ಹತ್ತಿರ ಹೋಗುವುದನ್ನು ನಿಲ್ಲಿಸಿದ," ಎಂದಳು. ಒಂದೇ ಒಂದು ಮಾತು ಇಲ್ಲದೆ ಅದು ಪರಿಣಾಮಕಾರಿಯಾಯಿತು. ಜಗಳವಾಗಲಿಲ್ಲ. ಪರಸ್ಪರ ದೋಷಾರೋಪಣೆಯಾಗಲಿಲ್ಲ ; ಮನಸ್ತಾಪವಾಗಿದೆಯೆಂದು ಬಹಿರಂಗವಾಗಿ ಯಾರೂ ಒಪ್ಪಿಕೊಳ್ಳಲೂ ಇಲ್ಲ. ಆದರೂ ತನಗೆ ವಂಚನೆ ಮಾಡಿದ ಗಂಡಂದಿರಿಗೆ ಶಿಕ್ಷಿಸುವ ಒಂದು ಮಾರ್ಗ ಹೆಂಗಸರಿಗಿದೆ. ಆಕೆ ತನ್ನ ಪ್ರತಿಸ್ಪರ್ಧಿಯ ಮೇಲೆ ಬಿದ್ದು, ಅವಳನ್ನು ಸಾರ್ವಜನಿಕವಾಗಿ ಥಳಿಸಬಹುದು. ಆಗ ಅವರು ಪರಸ್ಪರ ಕೆಟ್ಟ ಬೈಗುಳ ಬೈದುಕೊಂಡು, ಗುದ್ದಾಡಿಕೊಳ್ಳುತ್ತಾರೆ. ಇದು ಯಾವ ನಿರ್ಧಾರಕ್ಕೂ ದಾರಿ ಮಾಡುವುದಿಲ್ಲ, ಅಪರೂಪಕ್ಕೆ ಅಂತಹ ಘಟನೆ ನಡೆದಾಗ, ಅದು ತಲೆಯೆತ್ತಿದಷ್ಟೇ ಬೇಗ ಬಿದ್ದು ಹೋಗುತ್ತದೆ. ಜುನಿಯಲ್ಲಿ ಮಾನ್ಯತೆ ಪಡೆದಿರುವ ಒಂದೇ ಒಂದು ಹೊಡೆದಾಟದ ಸಂದರ್ಭವಿದು. ಗಂಡನು ಮೇಲಿಂದ ಮೇಲೆ ಚೆಲ್ಲಾಟಗಳನ್ನು ನಡೆಸುತ್ತಿದ್ದರೂ ಹೆಂಡತಿಯು ಸಹಿಸಿಕೊಂಡು ಅವನೊಂದಿಗೇನೆ ಇದ್ದಳೆಂದರೆ, ಅವಳ ಕುಟುಂಬದವರು ಕೋಪಗೊಂಡು ಅವನಿಂದ ವಿಚ್ಛೇದನ ಪಡೆಯೆಂದು ಅವಳನ್ನು ಬಲವಂತಗೊಳಿಸುತ್ತಾರೆ. ಅದಾಗ್ಯೂ ಪ್ರತಿಯೊಬ್ಬರೂ ಆಕೆ ಗಂಡನೊಡನೆ ಪ್ರೇಮದಿಂದಲೇ ಇರಬೇಕೆಂದು ಅಭಿಪ್ರಾಯ ಪಡುತ್ತಾರೆ. ನಿಜಕ್ಕೂ ಇದು ನೆಂಟರಿಷ್ಟರು ತಲೆ ತಗ್ಗಿಸಬೇಕಾದ ವಿಷಯ. ಇದು ಅವಳು ತನಗಾಗಿಯೇ ಹಾಕಿದ ಕಟ್ಟಳೆಗಳನ್ನು ಉಲ್ಲಂಘಿಸಿದಂತಾಗುತ್ತದೆ.

ಇಂತಹ ಸಂದರ್ಭದಲ್ಲಿ ಪರಂಪರಾಗತ ಕ್ರಮವೆಂದರೆ ವಿಚ್ಛೇದನ. ಗಂಡಸು, ತನ್ನ ಹೆಂಡತಿಯ ಸ್ತ್ರೀ ಸಂಬಂಧಿಗಳು ತನಗೆ ಒಗ್ಗದೆ ಹೋದರೆ ಅವನು ತನ್ನ ತಾಯಿಯ ಮನೆಗೆ ಹಿಂತಿರುಗಲು ಸ್ವತಂತ್ರ. ತಾನು ಇಷ್ಟಪಡದವರೊಂದಿಗೆ ಕೌಟುಂಬಿಕ ಸಲಿಗೆಯಿಂದ ವರ್ತಿಸಲೇ ಬೇಕಾದ ಮುಜುಗರದಿಂದ ಪಾರಾಗಲು ಇದೊಂದು ಹಾದಿ. ತಾನು ವಿಶ್ವಾಸದಿಂದ ನಿರ್ವಹಿಸಲು ಕಠಿಣವಾಗಿ ತೋರಿಬಂದ ಬಾಂಧವ್ಯವನ್ನು ತೊರೆದುಹಾಕಿಬಿಡುತ್ತಾನೆ.

ಪ್ವೆಬ್ಲೋಗಳು, ಈರ್ಷ್ಯೆಯಂತಹ ಉದ್ರೇಕ ಭಾವವು ಬಹಳ ಕಡಮೆಯಾಗಿ ತಲೆದೋರುವಂತಹ ಸಂಸ್ಥೆಗಳನ್ನು ರೂಪಿಸಿರುವಂತೆಯೇ ಅದಕ್ಕಿಂತಲೂ ಮಿಗಿಲಾಗಿ ಸಾವಿನ ಸಂದರ್ಭದಲ್ಲಿ ಅಪೊಲೋನಿಯನ್ ವಿಧಾನಗಳನ್ನು ರೂಢಿಗೆ ತರಲು ಆಸಕ್ತಿ ತೋರಿದ್ದಾರೆ. ಆದರೂ ಇದರಲ್ಲಿ ಒಂದು ವ್ಯತ್ಯಾಸವಿದೆ. ವಿವಿಧ ಸಂಸ್ಕೃತಿಗಳ ರೂಢಿಗಳು ಈರ್ಷ್ಯೆಯೆಂಬುದು ಸಾಂಸ್ಕೃತಿಕ ವ್ಯವಸ್ಥೆಗಳಿಂದ ಪರಿಣಾಮಕಾರಿಯಾಗಿ ಪ್ರಚೋದಿಸಬಲ್ಲಂತಹ ಭಾವೋದ್ವೇಗಗಳಲ್ಲಿ ಒಂದು ಎಂಬುದನ್ನು ಸ್ಫುಟಗೊಳಿಸುತ್ತವೆ. ಸಾವಿನಿಂದ ಒದಗುವ ವಿಯೋಗವನ್ನು ಇಷ್ಟು ಸುಲಭವಾಗಿ ತಪ್ಪಿಸಿಕೊಳ್ಳುವಂತಿಲ್ಲ. ಹತ್ತಿರದ ನಂಟನೊಬ್ಬನ ಸಾವು ಎಂಬುದು ಬಾಳು ನಮಗೆ ನೀಡಬಲ್ಲಂತಹ ಅತ್ಯಂತ ಪ್ರಬಲ ಆಘಾತ. ಅದು ಗುಂಪಿನ ಐಕ್ಯತೆಯನ್ನು ಭಂಗಗೊಳಿಸಿ, ತೀವ್ರವಾದ ಪುನರ್‌ಸಂಯೋಜನೆಯ ಅವಶ್ಯಕತೆಯನ್ನೆಬ್ಬಿಸುತ್ತದೆ. ತೀರಿಕೊಂಡ ವ್ಯಕ್ತಿ ವಯಸ್ಕನಾದರಂತೂ ಬಹುಮಟ್ಟಿಗೆ ಉಳಿದವರಿಗೆ ಒಂಟಿತನ ಮತ್ತು ದುಃಖ ಕಟ್ಟಿಟ್ಟದ್ದು.

ಮೂಲತಃ ಪ್ವೆಬ್ಲೋಗಳು ಯಥಾರ್ಥವಾದಿಗಳು. ಅವರು ಸಾವಿನಿಂದ ದುಃಖವುಂಟಾಗುತ್ತದೆಂಬುದನ್ನು ಅಲ್ಲಗಳೆಯುವುದಿಲ್ಲ. ನಾವು ವಿವೇಚಿಸಲಿರುವ ಇತರ ಕೆಲವು ಸಂಸ್ಕೃತಿಗಳಂತೆ ಅವರು ಹತ್ತಿರದ ನಂಟನೊಬ್ಬನ ಸಾವಿನ ಶೋಕಾಚರಣೆಯನ್ನು ವೈಭವ ಪ್ರದರ್ಶನಕ್ಕೋ ಅಥವಾ ಭೀತಿಕಲಕುವ ಪ್ರಸಂಗವಾಗಿಯೋ ಪರಿವರ್ತಿಸುವುದಿಲ್ಲ. ಅವರು ಅದು ಒಂದು ಪ್ರಮುಖವಾದ ನಷ್ಟವೆಂದು ಅರಿತು ವ್ಯವಹರಿಸುತ್ತಾರೆ. ಆದರೆ ಅದರ ಪ್ರಭಾವದಿಂದ ಆದಷ್ಟು ಬೇಗ, ಆದಷ್ಟು ಕಡಮೆ ಆವೇಗದಿಂದ ಬಿಡುಗಡೆಯಾಗಲು ಅವಶ್ಯಕವಾದ ವಿವರವಾದ ಕಾರ್ಯತಂತ್ರಗಳನ್ನು ರೂಪಿಸಿಕೊಂಡಿದ್ದಾರೆ. ಶೋಕತಪ್ತನು ಶೋಕವನ್ನು ಮರೆಯುವಂತೆ ಮಾಡಲು ಪ್ರಯತ್ನಿಸುತ್ತಾರೆ. ಸತ್ತವನ ಕೇಶಗುಚ್ಛವೊಂದನ್ನು ಕತ್ತರಿಸಿ, ಅಗ್ನಿಗೆ ಆಹುತಿ ಮಾಡುವುದರ ಮೂಲಕ ದಟ್ಟ ಹೊಗೆ ಎಬ್ಬಿಸಿ ಬಹಳವಾಗಿ ದುಃಖಿಸುವವರನ್ನು ಸಾಂತ್ವನಗೊಳಿಸುತ್ತಾರೆ. ತಮಗೂ ತಮ್ಮ ದುಃಖಕ್ಕೂ ನಡುವೆ ದಾರಿ ಕಪ್ಪಾಗಲೆಂದು ಅಂದರೆ ಕತ್ತಲಾಗಲೆಂದು ಎಡಗೈಯಿಂದ ಕರಿಯ ಮುಸುಕಿನ ಜೋಳದ ಹಿಟ್ಟನ್ನು ಎರಚುತ್ತಾರೆ. ಇಸ್ಲೆಟಾದಲ್ಲಿ ಮರಣವಾದ ನಾಲ್ಕನೆಯ ದಿನ ಸಂಜೆ, ಬಂಧುಗಳು ಅಗಲುವ ಮುನ್ನ ಕಾರ್ಯ ನಿರ್ವಹಿಸುವ ಪುರೋಹಿತ ಒಂದು ಪೂಜಾಪೀಠವನ್ನು ಮಾಡುತ್ತಾನೆ. ಅದರ ಮೇಲೆ ಸತ್ತವನಿಗಾಗಿ ಪ್ರಾರ್ಥನಾದಂಡಗಳನ್ನೂ, ಸತ್ತವನ ಬಿಲ್ಲು ಬಾಣಗಳನ್ನೂ, ಸಮಾಧಿ ಮಾಡಲು ಹೆಣವನ್ನು ಸಿದ್ಧಗೊಳಿಸಿದಾಗ ಬಳಸಿದ ಕೂದಲ ಕಂಚವನ್ನೂ, ಸತ್ತವನ ಉಡುಪಿನ ವಸ್ತ್ರಗಳನ್ನೂ ಇಡುತ್ತಾರೆ. ಅವಲ್ಲದೆ, ಒಂದು ಬೋಗುಣಿಯಲ್ಲಿ ಔಷಧದ ನೀರು, ಎಲ್ಲರೂ ಕೊಡುಗೆ ನೀಡಿರುವ ಒಂದು

ಗೂಡೆ ಆಹಾರ ಪದಾರ್ಥಗಳೂ ಇರುತ್ತವೆ. ಮನೆಯ ಬಾಗಿಲಿನಿಂದ ಪೂಜಾಪೀಠದವರೆಗೆ ನೇರದ ಮೇಲೆ, ಸತ್ತವನು ಬರಲೆಂದು ಪುರೋಹಿತರು ಹಿಟ್ಟಿನ ದಾರಿಯೊಂದನ್ನು ರಚಿಸುತ್ತಾರೆ. ಸತ್ತ ವ್ಯಕ್ತಿಗೆ ಕೊನೆಯ ಬಾರಿಗೆ ಊಟ ನೀಡಿ ಕಳುಹಿಸಿಬಿಡಲು ಅವರೆಲ್ಲ ಕೂಡುತ್ತಾರೆ. ಪುರೋಹಿತನು ಬೋಗುಣಿಯ ಔಷಧದ ನೀರನ್ನು ಎಲ್ಲರ ಮೇಲೆ ಚಿಮುಕಿಸಿದ ನಂತರ ಮನೆಯ ಬಾಗಿಲನ್ನು ತೆರೆಯುತ್ತಾನೆ. ಮುಖ್ಯಸ್ಥನು ಸತ್ತವನೊಂದಿಗೆ ಮಾತನಾಡಿ ಬಂದು, ಊಟ ಮಾಡೆಂದು ಆಹ್ವಾನಿಸುತ್ತಾನೆ. ಅವರು ಹೊರಗೆ ಹೆಜ್ಜೆ ಸಪ್ಪಳವಾದುದನ್ನೂ ಬಾಗಿಲ ಬಳಿ ಅವನು ತಡಕಾಡುವುದನ್ನೂ ಕೇಳುತ್ತಾರೆ. ಅವನು ಒಳ ಬಂದು ಊಟ ಮಾಡುತ್ತಾನೆ. ಅನಂತರ ಮುಖ್ಯಸ್ಥನು ಅವನು ಹೋಗಬೇಕಾದ ದಾರಿಯಲ್ಲಿ ನೀರು ಚಿಮುಕಿಸುತ್ತಾನೆ. ಪುರೋಹಿತರು 'ಅವನನ್ನು ಗ್ರಾಮದಿಂದ ಹೊರಕ್ಕೆ ಅಟ್ಟುತ್ತಾರೆ.' ಅವರು ತಮ್ಮೊಂದಿಗೆ ಸತ್ತವನಿಗಾಗಿ ಪ್ರಾರ್ಥನಾದಂಡಗಳನ್ನೂ ಅವನ ಉಡುಪು ಮತ್ತಿತರ ಅವನ ವೈಯಕ್ತಿಕ ವಸ್ತುಗಳನ್ನೂ, ಕೂದಲ ಕುಂಚವನ್ನೂ, ಆಹಾರದ ಬೋಗುಣಿಯನ್ನೂ ಒಯ್ಯುತ್ತಾರೆ. ಅವರು ಅವುಗಳನ್ನೆಲ್ಲ ಗ್ರಾಮದ ಹೊರಕ್ಕೆ ಒಯ್ದು ಕೂದಲ ಕುಂಚ ಮತ್ತು ಬೋಗುಣಿಯನ್ನು ಒಡೆದು, ಎಲ್ಲವನ್ನೂ ಯಾರಿಗೂ ಕಾಣಿಸದಂತೆ ಹುಗಿಯುತ್ತಾರೆ. ಅವರು ಹಿಂತಿರುಗುವಾಗ ಹಿಂದಕ್ಕೆ ನೋಡದೆ ಓಡಿ ಬಂದು ಬಾಗಿಲ ಮೇಲೆ ಕತ್ತಿಯಿಂದ ಒಂದು ಕತ್ತರಿ ಗುರುತು ಹಾಕಿ ಸತ್ತವನು ಒಳಪ್ರವೇಶಿಸದಂತೆ ತಡೆಮಾಡಿ ಬಾಗಿಲನ್ನು ಮುಚ್ಚಿ ಅಗಣಿ ಹಾಕುತ್ತಾರೆ. ಅದು ಸತ್ತವನೊಂದಿಗೆ ಕ್ರಮಬದ್ಧವಾದ ಬೇರ್ಪಡೆ. ಮುಖ್ಯಸ್ಥನು ನೆರೆದ ಜನರಿಗೆ ಇನ್ನು ಮುಂದೆ ಸತ್ತವನನ್ನು ನೆನೆಯಬಾರದೆಂದು ಹೇಳುತ್ತಾನೆ. 'ಅವನು ತೀರಿಹೋಗಿ ಇಲ್ಲಿಗೆ ನಾಲ್ಕು ವರ್ಷವಾಯಿತು.' ಕರ್ಮಾಚರಣೆಯಲ್ಲಿಯೂ ಜಾನಪದ ಕತೆಗಳಲ್ಲಿಯೂ ವರ್ಷವು ದಿನವಾಯಿತು, ದಿನ ವರ್ಷವಾಯಿತು ಎಂದು ಆಗಾಗ್ಗೆ ಹೇಳಿಕೊಳ್ಳುತ್ತಾರೆ. ಅವರನ್ನು ದುಃಖದಿಂದ ಪಾರುಮಾಡಲು ಕಾಲ ಉರುಳಿದೆ. ಜನ ಚದುರುತ್ತಾರೆ; ಅಲ್ಲಿಗೆ ಶೋಕಾಚರಣೆ ಮುಗಿಯಿತು.

ಆದರೂ, ಒಂದು ಜನದ ಮಾನಸಿಕ ಸ್ಥಿತಿ ಎಂತಹುದೇ ಇರಲಿ ಸಾವು ಎಂಬುದು ಹೇಗೋ ತಪ್ಪಿಸಿಕೊಳ್ಳಲಾಗದಂತಹ ಒಂದು ಸತ್ಯ ಸಂಗತಿ. ತಮ್ಮ ಹತ್ತಿರದ ಬಂಧುಗಳ ಸಾವಿನಿಂದಾಗುವ ಬಿರುಕು ಅಪೊಲೋನಿಯನ್‌ರಿಗೆ ತಪ್ಪಿಸಲಾಗದ ಒಂದು ದುಗುಡ. ಜೂನಿ ಸಂಸ್ಥೆಗಳು ಇದನ್ನು ಬಹಳ ಸ್ಪಷ್ಟವಾಗಿ ಎದುರಿಸುತ್ತವೆ. ಸಾವಿನ ಮಹತ್ವವನ್ನು ಅವು ಸಾಧ್ಯವಾದಷ್ಟು ಕುಗ್ಗಿಸಿವೆ. ಅವರ ಸಂಸ್ಕಾರಗಳಲೆಲ್ಲಾ ಶವಸಂಸ್ಕಾರವು ಅತ್ಯಂತ ಸರಳವೂ, ಅತ್ಯಂತ ಕಡಿಮೆ ನಾಟಕೀಯವೂ ಆದುದು. ಅವರ ಪಂಚಾಂಗಾನುಸಾರವಾದ ಉತ್ಸವಗಳಲ್ಲಿ ತೋರಿಬರುವ ಪರಿಷ್ಕಾರ ಈ ಸಂದರ್ಭದಲ್ಲಿ

ತೋರಿಬರುವುದಿಲ್ಲ. ಶವವನ್ನು ಕೂಡಲೇ ಸಮಾಧಿ ಮಾಡುತ್ತಾರೆ. ಆಗ ಯಾವ ಪುರೋಹಿತನೂ ಕಾರ್ಯ ನಿರ್ವಹಿಸುವುದಿಲ್ಲ.

ಒಬ್ಬ ವ್ಯಕ್ತಿಯನ್ನು ಅತ್ಯಂತ ಪ್ರಖರವಾಗಿ ಕಲಕುವ ಸಾವನ್ನು ಜುನಿಗಳು ಸಹ ಅಷ್ಟು ಸುಲಭವಾಗಿ ತಳ್ಳಿಹಾಕಲಾರರು. ಎಡೆಬಿಡದ ದುಃಖ ಅಥವಾ ಮುಜುಗರವನ್ನು ಅವರು ಬದುಕಿ ಉಳಿದಿರುವ ಗಂಡ ಅಥವಾ ಹೆಂಡತಿಯು ದೊಡ್ಡ ಆಪತ್ತಿಗೆ ಸಿಲುಕಿದ್ದಾರೆ ಎಂಬ ನಂಬಿಕೆಯಲ್ಲಿ ಭಾವರೂಪಗೊಳಿಸಿದ್ದಾರೆ. ಸತ್ತು ಹೋದ ಹೆಂಡತಿ ಅವನನ್ನು ಎಳೆದುಕೊಳ್ಳಬಹುದು ; ಅಂದರೆ ಅವಳು ಒಂಟಿಯಾಗಿರಲಾರದೆ ಅವನನ್ನೂ ತನ್ನೊಂದಿಗೆ ಕರೆದೊಯ್ಯಬಹುದು. ಗಂಡನನ್ನು ಕಳೆದುಕೊಂಡ ಹೆಂಡತಿಯ ಬಗ್ಗೆಯೂ ಇದೇ ಭಾವನೆ. ಜೀವಂತ ಉಳಿದವರು ಶೋಕಪಟ್ಟಷ್ಟೂ ಹೆಚ್ಚಿಗೆ ಆಪತ್ತಿಗೆ ತುತ್ತಾಗುವ ಸಂಭವ ಹೆಚ್ಚು. ಆದ್ದರಿಂದ ಜೀವಹತ್ಯೆ ಮಾಡಿದವನ ಬಗ್ಗೆ ವಹಿಸುವ ಎಚ್ಚರಿಕೆಯ ಕ್ರಮಗಳನ್ನೆಲ್ಲಾ ಇವನ ಬಗ್ಗೆಯೂ ಅನುಸರಿಸುತ್ತಾರೆ. ನಾಲ್ಕು ದಿನಗಳ ಕಾಲ ನಿತ್ಯ ಜೀವನದಿಂದ ಹೊರತಾಗಿರಬೇಕು. ಅವನು ಮಾತನಾಡಬಾರದು, ಅವನನ್ನು ಯಾರೂ ಮಾತನಾಡಿಸಬಾರದು. ಪ್ರತಿ ಬೆಳಗ್ಗೆಯೂ ಶುದ್ಧನಾಗಲು ವಾಂತಿಗೆ ತೆಗೆದುಕೊಳ್ಳಬೇಕು. ತನ್ನ ಎಡಗೈಯಿಂದ ಕರಿಯ ಮುಸುಕಿನ ಜೋಳದ ಹಿಟ್ಟನ್ನು ಎರಚಲು ಗ್ರಾಮದಿಂದ ಹೊರಕ್ಕೆ ಹೋಗಬೇಕು. ಅವನು ಅದನ್ನು ತನ್ನ ತಲೆಯ ಮೇಲೆ ನಾಲ್ಕು ಸುತ್ತು ಸುತ್ತಿ "ಕೆಟ್ಟುದನ್ನೆಲ್ಲ ಕಳೆದು ಹಾಕಲು" ದೂರ ಎಸೆಯುತ್ತಾನೆ. ನಾಲ್ಕನೆಯ ದಿನ ಅವನು ಸತ್ತವಳಿಗಾಗಿ ಪ್ರಾರ್ಥನಾ ದಂಡಗಳನ್ನು ನೆಟ್ಟು, ಅವಳನ್ನು ಪ್ರಾರ್ಥಿಸುತ್ತಾನೆ. ಇದು ಜುನಿಗಳಲ್ಲಿ ಮಾನವನನ್ನಾಗಲಿ, ದೈವವನ್ನಾಗಲಿ, ತನ್ನನ್ನು ಶಾಂತನನ್ನಾಗಿ ಬಿಡಲು, ತನ್ನೊಂದಿಗೆ ಎಳೆದೊಯ್ಯದಿರಲು. ಒಬ್ಬ ವ್ಯಕ್ತಿಯನ್ನು ಸಂಬೋಧಿಸುವ ಒಂದೇ ಒಂದು ಪ್ರಾರ್ಥನೆ.

ಅವು ಯಾವುವಿದ್ದರೂ, ನಿನ್ನೆಲ್ಲ ಅದೃಷ್ಟಗಳ ನೀಡು
ಸುರಕ್ಷಿತ ಪಥದಲ್ಲಿ ನಮ್ಮ ಕ್ಷೇಮದಿಂದೊಯ್ಯಿ

ಎಂದು ಪ್ರಾರ್ಥಿಸುತ್ತಾನೆ. ಅವನಿಗೆ ಕಾದಿರುವ ಆಪತ್ತು ಒಂದು ವರ್ಷದ ತನಕ ಕಳೆದಿಲ್ಲವೆಂದೇ ಭಾವನೆ. ಆ ಅವಧಿಯಲ್ಲಿ ಅವನು ಬೇರೊಬ್ಬ ಹೆಂಗಸಿನ ಬಳಿಗೆ ಹೋದರೆ ಸತ್ತ ಹೆಂಡತಿಗೆ ಹೊಟ್ಟೆ ಕಿಚ್ಚೇಳುತ್ತದೆ. ವರ್ಷ ಕಳೆದ ಮೇಲೆ ಅವನು ಅಪರಿಚಿತಳೊಬ್ಬಳನ್ನು ಸಂಭೋಗಿಸಿ ಅವಳಿಗೆ ಒಂದು ಕಾಣಿಕೆ ನೀಡುತ್ತಾನೆ. ಅವನನ್ನು ಬೆಂಬತ್ತಿದ್ದ ಆಪತ್ತು ಆ ಕಾಣಿಕೆಯೊಂದಿಗೆ ಹೋಗುತ್ತದೆ. ಅವನು ಈಗ ಸ್ವತಂತ್ರನಾಗಿ ಇನ್ನೊಬ್ಬಳನ್ನು ಮದುವೆಯಾಗುತ್ತಾನೆ. ಗಂಡ ತೀರಿ ಹೋದ ಹೆಂಡತಿಗೂ ಇದೇ ಕ್ರಮ.

ಪಶ್ಚಿಮದ ಮೈದಾನ ಸೀಮೆಯಲ್ಲಿ ಶೋಕ ಸಂಬಂಧ ವರ್ತನೆಯು ಈ ಬಗೆಯ ಕಳವಳ ತೋರಿಕೆಗೆ ತದ್ವಿರುದ್ಧ. ಅದು ಡಯೋನೀಶಿಯನ್ ಮಾದರಿಯ ಅಡೆತಡೆಯಿಲ್ಲದ ದುಃಖತಪ್ತತೆ. ಅವರ ವರ್ತನೆಯೆಲ್ಲಾ ಸಾವಿಗೆ ಸಂಬಂಧಪಟ್ಟಂತಹ ಹತಾಶೆ ಮತ್ತು ಬಿರುಕನ್ನು ದೂರಮಾಡದೇ ಒತ್ತಿ ಒತ್ತಿ ತೋರುತ್ತದೆ. ಹೆಂಗಸರು. ತಮ್ಮ ತಲೆ, ಕಾಲುಗಳನ್ನು ಬಡಿದುಕೊಂಡು ಬೆರಳುಗಳನ್ನು ಕತ್ತರಿಸಿಕೊಳ್ಳುತ್ತಿದ್ದರು. ಒಬ್ಬ ಪ್ರಮುಖ ವ್ಯಕ್ತಿ ತೀರಿ ಹೋದಾಗ, ರಕ್ತ ಸೋರಿಸಿಕೊಳ್ಳುತ್ತಾ ಬರೀ ಕಾಲುಗಳಲ್ಲಿ ಹೆಂಗಸರು ಸಾಲುಸಾಲಾಗಿ ಶಿಬಿರದ ಮೂಲಕ ನಡೆದು ಹೋಗುತ್ತಿದ್ದರು. ತಲೆಗಳ ಹಾಗೂ ಕಾಲುಗಳ ಖಂಡಗಳ ಮೇಲಿನ ರಕ್ತವನ್ನು ಒರಸದೆ ಹೆಪ್ಪುಗಟ್ಟಲು ಬಿಡುತ್ತಿದ್ದರು. ಶವವನ್ನು ಸಮಾಧಿ ಮಾಡಲು ಒಯ್ದ ಕೂಡಲೇ ವಾಸದ ಮನೆಯ ಎಲ್ಲ ವಸ್ತುಗಳನ್ನೂ ತೆಗೆದು ಹೊರಗೆ ಎಸೆಯುತ್ತಿದ್ದರು. ಯಾರು ಏನು ಬೇಕಾದರೂ ತೆಗೆದೊಯ್ಯಬಹುದು. ಸತ್ತವನ ವಸ್ತುಗಳು ಮೈಲಿಗೆಯೆಂಬ ಭಾವನೆಯಿಲ್ಲ. ಅತಿ ದುಃಖದಿಂದಾಗಿ ಆ ಕುಟುಂಬವು ತಮ್ಮ ಒಡವೆ ವಸ್ತುಗಳ ಮೇಲಿನ ಆಸಕ್ತಿ ತೊರೆದು ಹೋಗಿ ಅದು ಅವರಿಗೆ ಪ್ರಯೋಜನವಿಲ್ಲವಾಗಿ ಇಡೀ ಮನೆವಾರ್ತೆಯ ವಸ್ತುಗಳನ್ನೆಲ್ಲಾ ತೂರಿಬಿಡುತ್ತಿದ್ದರು. ಮನೆಯನ್ನೂ ಸಹ ಕೆಡವಿ, ಬೇರೆಯವರಿಗೆ ಕೊಟ್ಟು ಬಿಡುತ್ತಿದ್ದರು. ವಿಧವೆಗೆ ತಾನು ಹೊದ್ದಿದ್ದ ಕಂಬಳಿ ಹೊರತು ಬೇರೇನೂ ಇಲ್ಲವಾಗುತ್ತಿತ್ತು. ಸತ್ತು ಹೋದವನ ಕುದುರೆಗಳನ್ನು ಸಮಾಧಿಯ ಬಳಿಗೆ ಒಯ್ದು ಎಲ್ಲ ಜನರೂ ಅಳುತ್ತಿರುವಾಗ ಅವನ್ನು ಅಲ್ಲಿ ಕೊಲ್ಲುತ್ತಿದ್ದರು.

ಅತೀವವಾದ ವ್ಯಕ್ತಿಗತ ಶೋಕಾಚರಣೆಗೆ ಅರ್ಥವಿತ್ತಲ್ಲದೆ ಅದನ್ನೇ ನಿರೀಕ್ಷಿಸುತ್ತಿದ್ದರು. ಶವವನ್ನು ಹೂಳಿದ ಮೇಲೆ ಹೆಂಡತಿಯೋ, ಮಗಳೋ ಹಠ ಹಿಡಿದು ಅನ್ನಾಹಾರಗಳನ್ನು ತ್ಯಜಿಸಿ, ಸಮಾಧಿಯ ಬಳಿಯೇ ಉಳಿದು, ಗೋಳಿಡುತ್ತ ಕುಳಿತು ಬಿಡುತ್ತಿದ್ದಳು. ಅವಳನ್ನು ಸಮಾಧಾನಗೊಳಿಸಿ ಶಿಬಿರಕ್ಕೆ ಹಿಂದಕ್ಕೆ ಕರೆದೊಯ್ಯುವ ಪ್ರಯತ್ನಗಳೆಲ್ಲಾ ವಿಫಲವಾಗುತ್ತಿತ್ತು. ವಿಶೇಷವಾಗಿ ಹೆಂಗಸರು, ಅಪರೂಪವಾಗಿ ಗಂಡಸರು ಗೋಳಿಡುತ್ತಾ ಅಪಾಯಕಾರಿ ಪ್ರದೇಶಗಳಲ್ಲಿ ಅಲೆದಾಡುತ್ತಿದ್ದರು. ಅಂತಹ ಕೆಲವು ಸಂದರ್ಭಗಳಲ್ಲಿ ಅವರಿಗೆ ದಿವ್ಯ ದರ್ಶನ ದೊರೆತು ದೈವಿಕ ಶಕ್ತಿ ಒದಗುತ್ತಿತ್ತು. ಕೆಲವು ಬಣಗಳಲ್ಲಿ ಹೆಂಗಸರು ಹಲವಾರು ವರ್ಷಗಳ ಕಾಲ ಆಗಾಗ್ಗೆ ಸಮಾಧಿಯ ಬಳಿಗೆ ಹೋಗಿ ಅಳುತ್ತಿದ್ದರು. ಎಷ್ಟೋ ವರ್ಷಗಳ ನಂತರವೂ ಸಮಾಧಿಯ ಬಳಿ ಹೋಗಿ ಅಳದೆ ಸುಮ್ಮನೆ ಕುಳಿತಿರುತ್ತಿದ್ದರು.

ಮಕ್ಕಳ ಸಾವಿಗಾಗಿ ಪಡುವ ದುಃಖವಂತೂ ವಿಶೇಷ ಲಕ್ಷಣಗಳದ್ದು. ಡಕೋಟಾ ಬಣದಲ್ಲಿ ತಂದೆ ತಾಯಿಗಳು ಗೋಳಿಡುತ್ತಾ ಬರಿಮೈಯಲ್ಲಿ ಹಳ್ಳಿಗೆ ಓಡಿಬರುವುದರಲ್ಲಿ ತಮ್ಮ ದುಃಖವನ್ನು ವ್ಯಕ್ತಪಡಿಸಬಹುದು. ಅಂತಹ ಘಟನೆ ಅದೊಂದು

ಸಂದರ್ಭದಲ್ಲಿ ಮಾತ್ರ ನಡೆಯಬಹುದು. ಒಬ್ಬ ಬರಹಗಾರ, ಇತರ ಮೈದಾನ ಸೀಮೆಯ ಬಣಗಳ ನಡುವಿನ ತನ್ನ ಅನುಭವಗಳನ್ನು ಕುರಿತು. "ಈ (ಶೋಕಾಚರಣೆಯ) ಸಂದರ್ಭದಲ್ಲಿ ಯಾವನಾದರೂ ತಂದೆಯನ್ನು ಕೆರಳಿಸಿದರೆ ಆತ ಸಾಯುವುದು ಖಂಡಿತ. ದುಃಖಿತಪ್ತನಾಗಿರುವ ಆ ಮನುಷ್ಯ ತನ್ನ ಸೇಡನ್ನು ತೀರಿಸಿಕೊಳ್ಳಲು ಏನನ್ನಾದರೂ ಹುಡುಕುತ್ತಿರುತ್ತಾನೆ. ಹಾಗಾದ ಕೂಡಲೇ ಅವನು ಕೊಲ್ಲಲು ಇಲ್ಲವೇ ಕೊಲ್ಲಿಸಿಕೊಳ್ಳಲು ಯುದ್ಧಕ್ಕೆ ಹೋಗುತ್ತಾನೆ. ಆ ಪರಿಸ್ಥಿತಿಯಲ್ಲಿ ಅವನಿಗೆ ಎರಡೂ ಲಕ್ಷ್ಯವಿರುವುದಿಲ್ಲ" ಎಂದಿದ್ದಾನೆ. ಪ್ವೆಬ್ಲೋಗಳು ಯಾವುದರ ಭಯಂಕರ ಸಾಧ್ಯತೆಯನ್ನು ತಪ್ಪಿಸೆಂದು ಪ್ರಾರ್ಥಿಸುತ್ತಾರೋ ಆ ಸಾವನ್ನು ಇವರು ಆಹ್ವಾನಿಸುತ್ತಾರೆ.

ಸಾವನ್ನು ಕುರಿತ ಈ ಎರಡು ಮನೋಭಾವಗಳು, ಪರಿಚಿತವಾದ ವಿಲಕ್ಷಣ ಮಾದರಿಯ ವರ್ತನೆಗಳು. ಬಹುತೇಕ ವ್ಯಕ್ತಿಗಳು ಒಂದಲ್ಲ ಒಂದು ಬಗೆಯತ್ತ ಒಲವು ತೋರುತ್ತಾರೆ. ಪ್ವೆಬ್ಲೋಗಳು ಒಂದು ಬಗೆಯನ್ನು ಅನುಸರಿಸಿದ್ದಾರೆ. ಮೈದಾನ ಸೀಮೆಯವರು ಇನ್ನೊಂದನ್ನು ಅನುಸರಿಸಿ ವಿಯೋಗಕ್ಕೆ ಗುರಿಯಾದ ಕುಟುಂಬದ ಪ್ರತಿ ಸದಸ್ಯನೂ ಆವೇಶದ ಮತ್ತು ಅಡೆತಡೆಯಿಲ್ಲದ ದುಃಖವನ್ನು ಪ್ರದರ್ಶಿಸಲೇ ಬೇಕೆಂದಾಗಲಿ, ಪ್ವೆಬ್ಲೋಗಳಿಗೆ ಮರೆಯಿರೆಂದು ಹೇಳಿಬಿಟ್ಟ ಮಾತ್ರಕ್ಕೆ ಅವರು ಕೂದಲ ಕುಂಚವನ್ನು ಮುರಿಯುವುದರಲ್ಲಿ ವ್ಯಕ್ತಗೊಳ್ಳುವಷ್ಟು ದುಃಖವನ್ನು ತೋರಿ ಪರಿಸ್ಥಿತಿಗೆ ಹೊಂದಿಕೊಂಡು ಬಿಡುತ್ತಾನೆಂದಾಗಲಿ ಅರ್ಥವಲ್ಲ. ವ್ಯಕ್ತಿಯ ಒಂದು ಮನೋಭಾವಕ್ಕೆ ಸೂಕ್ತವಾದ ಮಾರ್ಗ ಒಂದು ಸಂಸ್ಕೃತಿಯಲ್ಲಿ ಸಿದ್ಧಗೊಂಡಿದೆ. ಇನ್ನೊಂದು ಮನೋಭಾವಕ್ಕೆ ಸೂಕ್ತವಾದ ಮಾರ್ಗ ಇನ್ನೊಂದು ಸಂಸ್ಕೃತಿಯಲ್ಲಿ ಸಿದ್ಧಗೊಂಡಿದೆ ಎಂಬುದು ಸತ್ಯಸಂಗತಿ. ಸಿದ್ಧಗೊಂಡಿರುವ ಮಾರ್ಗವನ್ನು ಹಿಡಿದರೆ ಅದನ್ನು ವ್ಯಕ್ತಪಡಿಸಲು ಸಾಕಷ್ಟು ವಿಧಾನಗಳಿವೆ. ಹಾಗಿಲ್ಲವಾದರೆ ಅತಿರೇಕಿಗಳು ಎಲ್ಲೆಲ್ಲೂ ಅನುಭವಿಸುವ ಬವಣೆಗಳಿಗೆ ತುತ್ತಾಗುತ್ತಾರೆ.

ಒಬ್ಬ ಮನುಷ್ಯ ಇನ್ನೊಬ್ಬನನ್ನು ಹತ್ಯೆ ಮಾಡಿರುವ ಸಂದರ್ಭವು, ಈ ಸಂಸ್ಕೃತಿಗಳಲ್ಲಿ ಇನ್ನೂ ಹೆಚ್ಚು ವ್ಯಾಪ್ತಿಯ ಸಾಂಸ್ಕಾರಿಕ ತಂತ್ರಗಳನ್ನು ಹೊಂದಿಸಿ ರೂಪಿಸಿರುವ ಮತ್ತೊಂದು ಹಗಣದ ಸನ್ನಿವೇಶ. ಜುನಿಗಳಲ್ಲಿ ಹತ್ಯೆ ಮಾಡಿದವನನ್ನು, ದಂಪತಿಗಳಲ್ಲಿ ಒಬ್ಬರನ್ನು ಕಳೆದುಕೊಂಡು ಉಳಿದವರನ್ನು ನೋಡಿಕೊಳ್ಳುವಂತೆಯೇ ನೋಡಿಕೊಳ್ಳುತ್ತಾರೆ. ವ್ಯತ್ಯಾಸವೆಂದರೆ ಅವನ ಏಕಾಂತ ವಾಸವು ಕಿವಾ ಸಂಪ್ರದಾಯಕ್ಕನುಗುಣವಾಗಿ, ಪುರೋಹಿತರ ಮೇಲ್ವಿಚಾರಣೆಯಲ್ಲಿ ಏರ್ಪಟ್ಟಿರುತ್ತದೆ. ಅವನ ಮೇಲಿರುವ ಕ್ಲೇಶವನ್ನು ನಿವಾರಿಸಲು ಹೆಚ್ಚು ಪರಿಷ್ಕಾರವಾದ ಕ್ರಮಗಳನ್ನನುಸರಿಸುತ್ತಾರೆ. ಯುದ್ಧ ಸಂಘಕ್ಕೆ ದೀಕ್ಷೆ ನೀಡುವುದೇ ಈ ಕ್ರಮ. ವಿಧುರನಂತೆಯೇ ಅವನು ಸಹ ಏಕಾಂತವಾಸದಲ್ಲಿ ಚಲಿಸದೇ ಕುಳಿತಿರಬೇಕು. ಯಾರೊಂದಿಗೂ ಮಾತನಾಡಬಾರದು;

ಯಾರೂ ಅವನನ್ನು ಮಾತನಾಡಿಸಲೂಬಾರದು; ವಾಂತಿಗೆ ತೆಗೆದುಕೊಳ್ಳಬೇಕು; ಉಪವಾಸವಿರಬೇಕು. ಇದು ಅವನಿಗೆ ಸಂಘದ ದೀಕ್ಷೆ ನೀಡುವ ಏಕಾಂತವಾಸ. ಯಾವುದೇ ಸಂಘಕ್ಕೆ ದೀಕ್ಷಿತನಾಗುವವನು ಇದೇ ಬಗೆಯ ಅಡೆತಡೆಗಳನ್ನಾಚರಿಸುತ್ತಾನೆ. ಜುನಿಗಳಲ್ಲಿ ಹತ್ಯೆ ಮಾಡಿದವನಿಗೆ ವಿಧಿಸುವ ಈ ನಿಷೇಧಗಳೆಲ್ಲಾ ಈ ರೀತಿಯ ಏಕಾಂತವಾಸವೆಂದು ಪರಿಗಣಿತವಾಗಿದೆ. ಅವನು ಈ ನಿಷೇಧಗಳಿಂದ ಮುಕ್ತನಾದುದು ಅವನು ಯುದ್ಧ ಸಂಘದ ಸದಸ್ಯತ್ವದ ನೂತನ ಸಾಮಾಜಿಕ ಹೊಣೆಗಾರಿಕೆಯನ್ನು ಪಡೆದುದಕ್ಕೆ ಸೂಚನೆ. ಯುದ್ಧ ಮುಖಂಡರು ಯುದ್ಧದಲ್ಲಿ ಮಾತ್ರವಲ್ಲ ಅದಕ್ಕಿಂತ ಮುಖ್ಯವಾಗಿ ಪಹರೆಗಾರರಾಗಿ, ಉತ್ಸವ ಮತ್ತು ಸಾರ್ವಜನಿಕ ಸಮಾರಂಭಗಳಲ್ಲಿ ಅಧಿಕಾರಿಗಳಾಗಿ ಆಜೀವ ಪರ್ಯಂತ ಕಾರ್ಯ ನಿರತರಾಗಿರುತ್ತಾರೆ. ಎಲ್ಲೆಲ್ಲಿ ನಿಯಮ ಬದ್ಧವಾದ ವ್ಯವಸ್ಥೆಗಳು ಅವಶ್ಯಕವೋ ಅಲ್ಲೆಲ್ಲಾ ಅವರು ಕಾನೂನಿನ ತೋಳುಗಳಂತೆ. ಅವರು ತಲೆಚಿಪ್ಪುಗಳನ್ನು ಇಟ್ಟಿರುವ ತಲೆಚಿಪ್ಪಿನ ಗೃಹಗಳ ಹೊಣೆ ಹೊರುತ್ತಾರೆ. ಮಳೆ ತರಿಸುವುದರಲ್ಲಿ ಅವರು ವಿಶೇಷವಾಗಿ ನಿಷ್ಣಾತರು.

ದೀರ್ಘವೂ, ಪರಿಷ್ಕಾರವೂ ಆದ ಯುದ್ಧ ನೃತ್ಯದ ಉದ್ದಕ್ಕೂ ತಲೆ ಚಿಪ್ಪು ಹತನಾದವನ ಪ್ರತೀಕ. ಈ ಉತ್ಸವದ ಉದ್ದೇಶ ಯುದ್ಧ ಸಂಘಕ್ಕೆ ಹೊಸ ಸದಸ್ಯನಿಗೆ ದೀಕ್ಷೆ ನೀಡುವುದು ಹಾಗೂ ತಲೆಚಿಪ್ಪನ್ನು ಮಳೆ ನೀಡುವ ದೇವತೆಗಳಲ್ಲೊಂದನ್ನಾಗಿ ಪರಿವರ್ತಿಸುವುದು. ಅದನ್ನು ನೃತ್ಯದಿಂದ ಗೌರವಿಸಿ, ಪ್ವೆಬ್ಲೋ ದತ್ತಕ ವಿಧಿಗಳ ಪ್ರಕಾರ ದತ್ತು ಸ್ವೀಕರಿಸಬೇಕು. ದತ್ತಕ ಸ್ವೀಕಾರದಲ್ಲಾಗಲಿ, ಮದುವೆಗಳಲ್ಲಾಗಲಿ ಈ ಸಂಸ್ಕಾರದ ಮುಖ್ಯ ಅಂಶವೆಂದರೆ ತಂದೆಯ ಕುಟುಂಬದ ಹಿರಿಯ ಹೆಂಗಸರು ಹೊಸಬನ ತಲೆಯನ್ನು ತೊಳೆಯುವುದು. ಇದೇ ರೀತಿ ತಲೆಚಿಪ್ಪನ್ನು ಹಂತಕನ ಸೋದರತ್ತೆಯರು ಶುದ್ಧವಾದ ನೀರಿನಲ್ಲಿ ತೊಳೆಯುತ್ತಾರೆ. ಮದುವೆಯ ಸಂದರ್ಭದಲ್ಲಿ ಅಥವಾ ದತ್ತು ತೆಗೆದುಕೊಳ್ಳುವ ಸಂದರ್ಭದಲ್ಲಿ ಹೊಸಬನೊಬ್ಬನನ್ನು ಮನೆ ತುಂಬಿಸಿಕೊಳ್ಳುವಾಗ ಅನುಸರಿಸುವ ಕ್ರಮದಲ್ಲಿಯೇ ಆ ತಲೆಚಿಪ್ಪನ್ನೂ ಒಣಕ್ಕೆ ದತ್ತಕ ಪಡೆಯುತ್ತಾರೆ. ತಲೆಚಿಪ್ಪಿನ ನೃತ್ಯದ ಪ್ರಾರ್ಥನಾಗೀತೆಗಳು ನೇರವಾಗಿದ್ದು ಸ್ಪಷ್ಟವಾಗಿವೆ. ಅವು ನಿಷ್ಪ್ರಯೋಜಕನಾದ ಶತ್ರುವು ಜನರ ಪವಿತ್ರ ಪೂಜನೀಯ ವಸ್ತುವಾಗಿ ಮಾರ್ಪಡುವುದನ್ನೂ, ಜನರು ಈ ಹೊಸ ಅನುಗ್ರಹವನ್ನು ಕೃತಜ್ಞತೆಯಿಂದ ಸ್ವೀಕರಿಸುವುದನ್ನೂ ವಿವರಿಸುತ್ತವೆ.

> ಅವನು ಶತ್ರುವೆ ಆದರೂ
> ತಿಪ್ಪೆಯ ಮೇಲೆ ಬಾಳಿ
> ಪ್ರಾಯವಂತನಾದವನಾದರೂ
> ಧಾನ್ಯ ಪುರೋಹಿತರ ಮಳೆ ಪ್ರಾರ್ಥನೆಗಳಿಂದಾಗಿ

(ಮಹತ್ವಶಾಲಿಯಾಗುವನು)
ತಾನು ಬಾಳಿದ್ದಾಗ,
ಅವನು ಶತ್ರುವೆ ಆಗಿದ್ದರೂ,
ಸಂಳ್ಳಿಗೇ ಮೀಸಲಾದ ವ್ಯಕ್ತಿಯಾಗಿದ್ದರೂ,
ಪ್ರಪಂಚದ ಭವಿಷ್ಯವನ್ನು
ಮುಂದಿನ ದಿನಗಳ ಭವಿಷ್ಯವನ್ನು
ಈಗಲೇ ನುಡಿಯಲು ಬಲ್ಲವನಾಗಿರುವನು.
ಆಗ ಅವನು ನಿಷ್ಪ್ರಯೋಜಕನಾಗಿದ್ದರೂ
ಅವನು ಸಹ ಜಲಜೀವಿ
ಅವನು ಸಹ ಬೀಜಜೀವಿ
ಶತ್ರು ಜಲವನ್ನು ಬಯಸುತ್ತ
ಶತ್ರು ಜೀವವನ್ನು ಬಯಸುತ್ತ
ಶತ್ರು ಸಂಪತ್ತನ್ನು ಬಯಸುತ್ತ
ಅವನ ದಿನಗಳಿಗಾಗಿ (1) ಕಾತುರದಿ ಕಾಯಿರಿ.

ನಿಮ್ಮ ಶುದ್ಧ ಜಲದಲ್ಲಿ
ಶತ್ರುವನ್ನು ನೀವು ತೊಯ್ದಿರಿ (2)
ಯಾವಾಗ ಧಾನ್ಯ ಪುರೋಹಿತರ ಜಲಮಯ ಹಜಾರದಲ್ಲಿ
ಅವನನ್ನು ಪ್ರತೀಕ್ಷಿಸುವವೊ (3)
ಆಗ ಧಾನ್ಯ ಪುರೋಹಿತರ ಮಕ್ಕಳೆಲ್ಲ
ತಮ್ಮ ಪಿತೃಗಳ ಗೀತಕ್ರಮದಲ್ಲಿ
ಅವನಿಗಾಗಿ ನೃತ್ಯ ಮಾಡುವರು
ಅವನ ದಿನಗಳೆಲ್ಲ ಕಳೆದ ಮೇಲೆ
ಒಂದು ಶುಭದಿವಸ
ಒಂದು ಸುಂದರ ದಿವಸ
ಕೋಲಾಹಲದಿಂದ ತುಂಬಿದ ದಿವಸ
ದೊಡ್ಡ ನಗೆಯಿಂದ ತುಂಬಿದ
ಒಂದು ಶುಭದಿವಸ

---

(1) ತಲೆಚಿಪ್ಪಿನ ನೃತ್ಯ. (2) ತಲೆಚಿಪ್ಪು ತೊಳೆಯುವ ದತ್ತಕ ಸ್ವೀಕಾರ ಸಂಸ್ಕಾರ. (3) ಅಂಕದ ತಲೆಚಿಪ್ಪು ಸ್ತಂಭ.

ನಿನ್ನ ಮುಕ್ತಗೊಳ್ಳದ ನಮ್ಮೊಂದಿಗೆ
ನೀನೂ ಕೂಡಿ ಬರುವೆ.

ಹೀಗೆ ತಲೆಚಿಪ್ಪು ಪ್ರಾರ್ಥನೆಗೆ ಯೋಗ್ಯವಾದ ದೇವತಾ ವಸ್ತುವಾಗುತ್ತದೆ. ಹಂತಕನು ಪ್ರಮುಖವಾದ ಯುದ್ಧ ಸಂಘಕ್ಕೆ ಆಜೀವ ಸದಸ್ಯನಾಗುತ್ತಾನೆ.

ಡಯೋನೀಶಿಯನ್ ಸಂಸ್ಕೃತಿಗಳು ಇಡೀ ಸಂದರ್ಭವನ್ನು ಬೇರೆ ರೀತಿಯಲ್ಲಿ ನಿರ್ವಹಿಸುತ್ತವೆ. ಬಹುಮಟ್ಟಿಗೆ ಅದನ್ನು ಭೀಕರ ಹಾಗೂ ಅಪಾಯಕಾರಿ ಸಂಕಟವನ್ನಾಗಿ ಪರಿವರ್ತಿಸುತ್ತವೆ. ಹಂತಕನು ದೈವಿಕವಾಗಿ ಒದಗಿ ಬರುವ ಅಪಾಯ ಸ್ಥಿತಿಯಲ್ಲಿರುತ್ತಾನೆ. ತಿಮಾಗಳಲ್ಲಿ ಅವನನ್ನು ಭೂಮಿಯಲ್ಲಿ ಸಣ್ಣದಾದ ಗುಂಡು ಗುಳಿಯಲ್ಲಿ ಕುಳ್ಳಿರಿಸಿ ಇಪ್ಪತ್ತು ದಿನ ಕಾಲ ಶುದ್ಧೀಕರಿಸುತ್ತಾರೆ. ಅವನ ವೃತಸಂಬಂಧಿ ತಂದೆಯು ಆರು ಅಡಿ ಉದ್ದದ ಕೋಲಿನ ತುದಿಯಿಂದ ಅವನಿಗೆ ಆಹಾರ ನೀಡುತ್ತಾನೆ. ಅವನ ಕೈ ಕಾಲುಗಳನ್ನು ಕಟ್ಟಿ ನದಿಗೆ ಎಸೆದಾಗ ಮಾತ್ರ ಅವನು ಅಪಾಯದಿಂದ ಮುಕ್ತನಾದಂತೆ.

ಪಶ್ಚಿಮದ ಮೈದಾನ ಸೀಮೆಯಲ್ಲಿ ಜನರ ಹಿಂಸಾಪ್ರವೃತ್ತಿ ಈ ರೀತಿ ದೈವಿಕ ಮಲಿನತೆಯನ್ನು ಪ್ರಮುಖಗೊಳಿಸಿಲ್ಲ. ಹತ್ಯೆಮಾಡಿದ ವ್ಯಕ್ತಿಯು ಪಾಪ ವಿಮೋಚನೆಯ ಅವಶ್ಯಕತೆಯಿರುವ ವ್ಯಕ್ತಿಯಲ್ಲ. ಅವನು ವಿಜಯಿ; ವಿಜಯಿಗಳಲ್ಲೆಲ್ಲ ಬಹು ಹೆಚ್ಚಿನ ಮೆಚ್ಚುಗೆಗೆ ಅರ್ಹನಾದವನು. ನಿಸ್ಸಂಕೋಚವಾದ ವಿಜಯೋತ್ಸವ ನಡೆಸುವುದರಲ್ಲಿ, ಶತ್ರುವನ್ನು ನಿರ್ನಾಮಗೊಳಿಸಿದ್ದಕ್ಕೆ ತೋರುವ ಅತಿ ಹಿಗ್ಗಿನಲ್ಲಿ ಅವರು ಡಯೋನೀಶಿಯನ್ ಉದ್ವೇಗವನ್ನು ಸಾಧಿಸುತ್ತಾರೆ. ಅದು ಸಂಪೂರ್ಣವಾದ ಸಂತೋಷ ಸಂದರ್ಭ. ಹಿಂತಿರುಗುತ್ತಿರುವ ಯುದ್ಧ ತಂಡವು ವಿಜಯ ಸೂಚಿಸಲು ಮುಖಕ್ಕೆ ಮಸಿ ಬಳಿದುಕೊಂಡು ಬೆಳಗಿನ ಜಾವದಲ್ಲಿ ತಮ್ಮ ಸ್ವಂತ ಪಾಳ್ಯದ ಮೇಲೆಯೇ ಆಕಸ್ಮಿಕ ಅಣಕುದಾಳಿ ನಡೆಸುತ್ತಾರೆ.

"........ತಮ್ಮ ಬಂದೂಕಗಳಿಂದ ಗುಂಡು ಹಾರಿಸುತ್ತಾ, ತಾವು ತೆಗೆದುಕೊಂಡಿದ್ದ ತಲೆಯೋಡುಗಳನ್ನು ಕೋಲುಗಳಿಗೆ ಸಿಕ್ಕಿಸಿ ಆಡಿಸುತ್ತಾ ಇದ್ದರು. ಜನ ಭಾವಾವೇಶದಿಂದ ಚೀರುತ್ತಾ, ಕೂಗುತ್ತಾ ಅವರನ್ನು ಸ್ವಾಗತಿಸಿದರು. ಹೆಂಗಸರು ವಿಜಯ ಗೀತೆಗಳನ್ನು ಹಾಡಿದರು.

ಮೊದಲ ಪಂಕ್ತಿಯಲ್ಲಿ ತಲೆಗಳನ್ನು ರುಂಳಿಸಿ ಎಣಿಸಿದಬಳಿದ್ದಗು...... ಕೆಲವರು ವಿಜಯಿ ಯುದ್ಧವೀರರನ್ನು ತಮ್ಮ ಬಾಹುಗಳಿಂದ ಅಪ್ಪಿಕೊಂಡರು. ವೃದ್ಧರಾದ ಸ್ತ್ರೀ, ಪುರುಷರು ಅವರ ಹೆಸರುಗಳನ್ನು ಉಲ್ಲೇಖಿಸಿರುವ ಗೀತಗಳನ್ನು ಹಾಡಿದರು. ಮೊದಲ ಪಂಕ್ತಿಯಲ್ಲಿ ಸವಾರರಾಗಿದ್ದವರ ನಂಟರು ತಮ್ಮ ಮಿತ್ರರಿಗೋ

ಬಡವರಿಗೋ ಕಾಣಿಕೆಗಳನ್ನು ನೀಡಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು. ಇಡೀ ಗುಂಪು ಪರಾಕ್ರಮಶಾಲಿ ಅಥವಾ ಪರಾಕ್ರಮಶಾಲಿಯ ತಂದೆ ವಾಸಿಸುತ್ತಿದ್ದಲ್ಲಿಗೆ ಹೋಗಿ, ಅಲ್ಲಿ ಅವನ ಗೌರವಾರ್ಥವಾಗಿ ನೃತ್ಯ ಮಾಡಬಹುದು. ಅವರು ಆ ರಾತ್ರಿ ಪೂರಾ ಕುಣಿಯಲು ಸಿದ್ಧರು. ಎರಡು ಹಗಲು ಎರಡು ರಾತ್ರಿ ಕುಣಿಯುತ್ತಲೇ ಇದ್ದರೂ ಇರಬಹುದು."

ಎಲ್ಲರೂ ತಲೆಚಿಪ್ಪಿನ ನೃತ್ಯದಲ್ಲಿ ಸೇರಿಕೊಳ್ಳುತ್ತಾರೆ. ಆದರೆ ಅದು ಧಾರ್ಮಿಕ ಸಂದರ್ಭವಲ್ಲ. ಯಾವ ಔಷಧ ಸಂಘದವನೂ ಕಾರ್ಯ ನಿರ್ವಹಣೆಗೆ ನಿಲ್ಲುವುದಿಲ್ಲ. ಅದರ ಸಾಮಾಜಿಕ ಲಕ್ಷಣಕ್ಕೆ ಅನುಗುಣವಾಗಿ ಹೆಣ್ಣು ಜೀವನವನ್ನು ಅನುಸರಿಸಿದ್ದ ಗಂಡಸರು ಅಂದರೆ ನಪುಂಸಕರು, ಅದನ್ನು ನಿರ್ವಹಿಸುತ್ತಿದ್ದರು. ಈ ಬಣದಲ್ಲಿ ಅವರು ವಿವಾಹ ಸಂಬಂಧ ಕುದುರಿಸುವವರಾಗಿಯೂ, ಒಳ್ಳೆಯ ಸಂಗಾತಿಗಳಾಗಿಯೂ ಪರಿಗಣಿಸಲ್ಪಟ್ಟಿದ್ದಾರೆ. ಅವರು ನೃತ್ಯಗಳನ್ನು ಘೋಷಿಸುತ್ತಾ, ತಲೆಚಿಪ್ಪುಗಳನ್ನು ಒಯ್ಯುತ್ತಿದ್ದರು. ಮುದುಕರೂ, ಮುದುಕಿಯರೂ ಕೋಡಂಗಿ ವೇಷ ಧರಿಸುತ್ತಿದ್ದರು. ಕೆಲವರಂತೂ ಆ ಉತ್ಸವದ ಕೇಂದ್ರ ಬಿಂದುವಾದ ತಲೆ ಚಿಪ್ಪುಗಳ ಒಡೆಯರಾಗಿದ್ದ ಯುದ್ಧವೀರರ ವೇಷಗಳನ್ನೇ ಕಟ್ಟುತ್ತಿದ್ದರು.

ಎರಡೂ ನೃತ್ಯಗಳನ್ನು ಕಣ್ಣಾರೆ ಕಂಡ ಯಾರಿಗೇ ಆದರೂ ಅವು ವೈಲಕ್ಷಣ್ಯಗಳನ್ನು ಪ್ರತಿನಿಧಿಸುತ್ತವೆ ಎಂಬುದು ನಿಸ್ಸಂದೇಹ. ಪ್ವೆಬ್ಲೋಗಳ ತಲೆ ಚಿಪ್ಪಿನ ನೃತ್ಯವು ಅಲಂಕೃತವಾದ ಸಜ್ಜಾದ ನೆಲಮಟ್ಟದ ಪೂಜಾಪೀಠದ ಮೇಲೆ ಮಹತ್ವಪೂರ್ಣ ಯುದ್ಧ ಔಷಧ ಗಂಟುಗಳನ್ನಿಟ್ಟು ಅದರ ಮುಂದೆ ನಿಯಮ ಬದ್ಧವಾಗಿ ಎರಡು ತಂಡಗಳು ಒಂದಾದ ನಂತರ ಒಂದು ಬಂದು ಅಭಿನಯಿಸು ವಂತಹುದು; ಚೆಯೆನ್ನೆಗಳ ತಲೆಚಿಪ್ಪಿನ ನೃತ್ಯವು ಬಿರುಸಾದ ಅಂಗ ಚಲನೆಗಳಿಂದ ಕೂಡಿ, ವಿಜಯದ ಹೆಮ್ಮೆಯನ್ನು ತೋರ್ಪಡಿಸುತ್ತ, ಕೈ ಕೈ ಮಿಲಾವಣೆಯನ್ನು ಅನುಕರಿಸುವ ಚಲನೆಗಳಿಂದ, ತಾನು ಇತರರಿಗಿಂತ ಮೇಲಾದನೆಂಬ ಹುರುಪನ್ನು ಕಂಡುಕೊಂಡುದು. ಪ್ವೆಬ್ಲೋ ನೃತ್ಯವು ಹಂತಕನ ಮಲಿನತೆಯನ್ನು ನೀಗಿ ಅವ ನನ್ನು ಪ್ರಮುಖವಾದ ಮಹತ್ವಪೂರ್ಣ ಸಂಘವೊಂದಕ್ಕೆ ಸೇರಿಸಿಕೊಂಡ ಹಾಗೂ ಅನಾಮಧೇಯನಾದ ಶತ್ರುವೊಬ್ಬನ ತಲೆಚಿಪ್ಪನ್ನು ಮಳೆ ನೀಡುವ ದೇವತೆಗಳಲ್ಲೊಂ ದಾಗಿ ಪ್ರತಿಷ್ಠೆ ಮಾಡಿದ ಸಂದರ್ಭಕ್ಕೆ ಸರಿಹೊಂದುವಂತಹ ಗಂಭೀರವಾದ, ಸಾಮೂ ಹಿಕ ಕಾರ್ಯನಿರ್ವಹಣೆ. ಮೈದಾನ ಸೀಮೆಯ ನೃತ್ಯದಲ್ಲೂ ನೃತ್ಯಗಾರರು ಗುಂಪು ಗಳಲ್ಲಿ ಬಂದರೂ, ಪ್ರತಿಯೊಬ್ಬನೂ ತರಬೇತಿ ಪಡೆದ ತನ್ನ ದೇಹದ ಪ್ರತಿಯೊಂದು ಚಲನೆಯಲ್ಲಿಯೂ ದೈಹಿಕ ಹೋರಾಟದ ಪ್ರತಿಷ್ಠೆಯನ್ನು ಸಾಗಲು ತನ್ನ ಸ್ಫೂರ್ತಿ

ಯನ್ನು ಅನುಸರಿಸುತ್ತಿರುವ ತನಿ ನೃತ್ಯಗಾರನೂ ಆಗಿರುತ್ತಾನೆ. ಎಲ್ಲ ವೈಯಕ್ತಿಕತೆ, ಎಲ್ಲ ಉನ್ಮತ್ತತೆ, ಎಲ್ಲ ಗೆಲವೂಸಗೆ.

ಮರಣದ ಬಗ್ಗೆ ಪ್ವೆಬ್ಲೋಗಳು ತಳೆದಿರುವ ಅಪೊಲೋನಿಯನ್ ಮನೋಭಾವವು ಹತ್ತಿರದ ನಂಟರ ಸಾವನ್ನಾಗಲಿ, ಶತ್ರುಗಳನ್ನು ಕೊಲ್ಲುವುದನ್ನಾಗಲಿ ನಿಷೇಧಿಸಲಾರದು. ಆದರೆ ಆ ಸಂದರ್ಭಗಳನ್ನು ಅನುಗ್ರಹದ ಆಕರಗಳನ್ನಾಗಿ ಪರಿವರ್ತಿಸಿ, ಅತ್ಯಂತ ಕಡಮೆ ಉದ್ವೇಗದಿಂದ ಅವುಗಳಿಂದ ಪಾರಾಗುವ ಮಾರ್ಗಗಳನ್ನು ತೋರುವುದೇ ಅವುಗಳ ಅತ್ಯಂತ ಮಹತ್ವದ ಸಾಧನೆಯೆನ್ನಬಹುದು. ತಮ್ಮದೇ ಗುಂಪಿಗೆ ಸೇರಿದವರ ಹತ್ಯೆ ಅತ್ಯಂತ ಅಪರೂಪವಾಗಿದ್ದು, ಅಂತಹ ಘಟನೆಗಳ ಬಗ್ಗೆ ನೆನಪಿನಲ್ಲಿರುವ ಐತಿಹ್ಯಗಳು ಸಹ ಬಹು ಕಡಮೆ. ಆದರೆ ಅಂತಹ ಘಟನೆ ನಡೆದಾಗ, ಹೆಚ್ಚು ಸದ್ದು ಗದ್ದಲವಿಲ್ಲದೆ, ಪಕ್ಷ ಸಂಬಂಧಿ ಗುಂಪುಗಳ ನಡುವೆ ಪರಿಹಾರ ಧನ ನೀಡುವ ಏರ್ಪಾಡಾಗಿ ತೀರ್ಮಾನಕ್ಕೆ ಬರುತ್ತದೆ. ತನ್ನ ಜೀವವನ್ನೇ ತೆಗೆದುಕೊಳ್ಳುವುದು ಮಾತ್ರ ಸಂಪೂರ್ಣವಾಗಿ ನಿಷೇಧಿತವಾಗಿದೆ. ಅತಿ ಸಾಧಾರಣ ರೂಪದಲ್ಲಿಯೂ ಆತ್ಮಹತ್ಯೆಯೆಂಬುದು ಪ್ವೆಬ್ಲೋಗಳಿಗೆ ಕಲ್ಪಿಸಿಕೊಳ್ಳಲೂ ಸಹ ಸಾಧ್ಯವಾಗದಂತಹ ಹಿಂಸಾಕೃತ್ಯ. ಅದು ಏನಾಗಿರಬಹುದೆಂಬುದೂ ಅವರಿಗೆ ತಿಳಿಯದು. ಈ ಸಂಬಂಧವಾಗಿ ಕತೆಗಳನ್ನು ಹೇಳಿರೆಂದು ಒತ್ತಾಯ ಮಾಡಿದರೆ, ಜುನಿಗಳು ಸುಂದರಿಯಾದ ಸ್ತ್ರೀಯೊಂದಿಗೆ ಸಾಯಬೇಕೆಂಬ ಇಚ್ಛೆಯನ್ನು ಒಬ್ಬಾತ ವ್ಯಕ್ತಪಡಿಸಿದ್ದ ಪ್ರಸಂಗವನ್ನು ಹೇಳುತ್ತಾರೆ. ಒಂದು ದಿನ ಅವನನ್ನು ಒಬ್ಬಳು ರೋಗಿ ಹೆಂಗಸಿಗೆ ಚಿಕಿತ್ಸೆ ನೀಡಲು ಕರೆಸಲಾಯಿತು. ಅವನ ಚಿಕಿತ್ಸೆಯಲ್ಲಿ ಅವರಿಗೆ ತಿಳಿದ ಒಂದು ಕಾಡು ಮದ್ದಿನ ಗಿಡವನ್ನು ಅಗಿಯುವುದೂ ಸೇರಿತ್ತು. ಮರುದಿನ ಬೆಳಿಗ್ಗೆ ಅವನು ಸತ್ತು ಬಿದ್ದಿದ್ದ. ಆತ್ಮಹತ್ಯೆಗೆ ಅತ್ಯಂತ ಸಮೀಪಕ್ಕೆ ಬರುವ ಅವರ ಭಾವನೆ ಇದು. ಅವನು ತನ್ನ ಜೀವವನ್ನು ತಾನೇ ತೆಗೆದುಕೊಂಡಿರಬಹುದೆಂಬುದು ಅವರಿಗೆ ಹೊಳೆಯುವುದಿಲ್ಲ. ಒಬ್ಬ ಮನುಷ್ಯ ತಾನು ಇಚ್ಛೆ ಪಟ್ಟ ರೀತಿಯಲ್ಲಿಯೇ ಮರಣ ಹೊಂದಿದುದೇ ಅವರ ಕತೆ.

ನಮ್ಮಲ್ಲಿ ರೂಢಿಯಲ್ಲಿರುವ ಆತ್ಮಹತ್ಯೆಗೆ ಸಾದೃಶ್ಯವಾದ ಸಂದರ್ಭ ಜಾನಪದ ಕತೆಗಳಲ್ಲಿ ಮಾತ್ರ ಬರುತ್ತದೆ. ಈ ಕತೆಗಳಲ್ಲಿ ಗಂಡನಿಂದ ತ್ಯಜಿತಳಾದ ಹೆಂಗುಸೊಬ್ಬಳು ಅಪಾಚಿ ಬಣದವರನ್ನು ಕುರಿತು, ನಾಲ್ಕು ದಿನ ಕಳೆದು ಬಂದು ತಮ್ಮ ಪ್ವೆಬ್ಲೋವನ್ನೂ, ಅದರೊಂದಿಗೆ ತನ್ನ ಪತಿಯನ್ನೂ, ಅವನ ಪ್ರೇಯಸಿಯನ್ನೂ ನಾಶಗೊಳಿಸಿರೆಂದು ಕೇಳಿಕೊಳ್ಳುತ್ತಾಳೆ. ಅವಳು ಸಂಸ್ಕಾರ ಪೂರ್ವಕವಾಗಿ ತನ್ನನ್ನು ಶುದ್ಧಗೊಳಿಸಿಕೊಂಡು, ತನ್ನ ಅತ್ಯುತ್ತಮ ಉಡುಗೆಗಳನ್ನು ಧರಿಸುತ್ತಾಳೆ, ಗೊತ್ತಾದ ದಿನ ಬೆಳಿಗ್ಗೆ ಅವಳು ಶತ್ರುವನ್ನು ಎದುರಿಸಲು ಹೋಗಿ, ಅವರಿಗೆ ಮೊದಲ ಬಲಿಯಾಗುತ್ತಾಳೆ. ನಮ್ಮ ಪ್ರಕಾರ ಇದು ಆತ್ಮಹತ್ಯೆಯಲ್ಲಿ ಬರುತ್ತದೆ. ಅವರ ಪ್ರಕಾರ ಇದು

ಸಾಂಸ್ಕಾರಿಕ ದ್ವೇಷಸಾಧನೆ ಎಂದು ಪರಿಗಣಿತವಾಗಿದೆ. ಅವರು "ನಾವು ಈಗ ಹಾಗೆ ಮಾಡುವುದಿಲ್ಲ. ಅವಳು ಕೀಳು ಜೀವಿ" ಎನ್ನುತ್ತಾರೆ. ಅವಳ ದ್ವೇಷವನ್ನು ಬಿಟ್ಟು ಅವರಿಗೆ ಬೇರೆ ಆಲೋಚನೆ ಏಳುವುದೇ ಇಲ್ಲ. ತಾನು ಸಂತೋಷದಿಂದ ಹೊರತಾದ್ದರಿಂದ, ಗ್ರಾಮದ ಇತರರ ಸಂತೋಷವನ್ನೂ ಅವಳು ನಾಶಮಾಡ ಹೊರಟಳು. ಮುಖ್ಯವಾಗಿ ತನ್ನ ಗಂಡ ಹೊಸದಾಗಿ ಕಂಡುಕೊಂಡ ಸುಖವನ್ನು ಕೆಡಿಸ ಹೊರಟಳು ಎಂದು ಭಾವಿಸುತ್ತಾರೆ. ಉಳಿದ ಕತೆ ಜುನಿಗಳ ಕಲ್ಪನೆಯಿಂದ ಆಚೆಯೇ ಉಳಿಯಿತು. ಅಪಾಚೆಗಳಿಗೆ ತನ್ನ ಸಂದೇಶವನ್ನು ಒಯ್ಯಲು ಅವಳು ಕರೆದ ದೈವೀ ದೂತನಂತೆ ಅದೂ ಅವರ ಅನುಭವಕ್ಕೆ ಹೊರತಾದುದು. ಜುನಿ ಸಭೆಯೊಂದರಲ್ಲಿ ನಮ್ಮ ಆತ್ಮಹತ್ಯೆಯ ರೂಢಿಯನ್ನು ವಿಶೇಷವಾಗಿ ಉದಹರಿಸಿದರೆ ಅವರು ವಿನಯ ಹಾಗೂ ಅಚ್ಚರಿಯ ನಗೆ ಬೀರುತ್ತಾ ಹೋಗುತ್ತಾರೆ. ಈ ಬಿಳಿಯ ಜನರು ಮಾಡು ವುದೆಲ್ಲ ಬಲು ವಿಚಿತ್ರ. ಇದಂತೂ ಅತ್ಯಂತ ಹಾಸ್ಯಾಸ್ಪದ ವಿಷಯ.

ತದ್ವಿರುದ್ಧವಾಗಿ ಮೈದಾನ ಸೀಮೆಯ ಇಂಡಿಯನ್ನರು ಆತ್ಮಹತ್ಯೆಯ ಭಾವ ವನ್ನು ನಮಗಿಂತಲೂ ಹೆಚ್ಚು ವಿಸ್ತರಿಸಿದ್ದಾರೆ. ಹಲವಾರು ಬಣಗಳಲ್ಲಿ ತನ್ನ ಭವಿಷ್ಯ ಜೀವನದಲ್ಲಿ ಹೆಚ್ಚು ಆಕರ್ಷಣೆಯಾದುದೇನನ್ನೂ ಕಾಣದೆ ಹೋದರೆ ವ್ಯಕ್ತಿಯು ಒಂದು ವರ್ಷದ ಆತ್ಮಹತ್ಯೆಯ ಶಪಥವನ್ನು ಕೈಗೊಳ್ಳುತ್ತಾನೆ. ಅದರ ಲಾಂಛನವಾಗಿ ಎಂಟು ಅಡಿಗಳ ಉದ್ದದ ಜಿಂಕೆಯ ಚರ್ಮದ ಇಳಿಪಟ್ಟಿಯನ್ನು ಧರಿಸುತ್ತಾನೆ. ಈ ಇಳಿ ಪಟ್ಟಿಯು ನೆಲದ ಮೇಲೆ ಬೀಳುವ ಕೊನೆಯಲ್ಲಿ ಒಂದು ರಂಧ್ರವಿರುತ್ತದೆ ಶಪಥ ಕೈಗೊಂಡವನು ಅವರ ಗೆರಿಲ್ಲಾ ಯುದ್ಧ ಕಾರ್ಯಾಚರಣೆಯ ಮುಂದಿನ ಸಾಲಿನಲ್ಲಿ ತನ್ನ ಸ್ಥಾನವನ್ನು ಆಕ್ರಮಿಸಿಕೊಂಡಾಗ ಅವನ ಲಾಂಛನದ ರಂಧ್ರದ ಮೂಲಕವಾಗಿ ಅವನನ್ನು ಆ ಸ್ಥಾನಕ್ಕೆ ಕಟ್ಟಿ ಹಾಕುತ್ತಾರೆ. ಆಗ ಅವನು ಹಿಮ್ಮೆಟ್ಟಲು ಸಾಧ್ಯವಿಲ್ಲ. ಕಟ್ಟಿದ್ದರಿಂದ ಚಲನೆಗೆ ಯಾವ ತೊಂದರೆಯೂ ಇಲ್ಲವಾದ್ದರಿಂದ ಅವನು ಮುನ್ನುಗ್ಗಲು ಸಾಧ್ಯ. ಅವನ ಜೊತೆಗಾರರೆಲ್ಲ ಹಿಮ್ಮೆಟ್ಟಿದರೂ ಅವನು ಮಾತ್ರ ಆ ಮುಂದಿನ ಸ್ಥಾನದಲ್ಲಿಯೇ ಇರಬೇಕು. ಅವನು ಸತ್ತರೆ, ಅವನು ಕದನದಲ್ಲಿ ಸತ್ತಂ ತಾಯಿತು. ಈ ವರ್ಷ ಕಳೆದು ಅವನು ಉಳಿದರೆ ಸಾವನ್ನು ಎದುರಿಸಿ ಗೆದ್ದುದಕ್ಕಾಗಿ ಮೈದಾನ ಸೀಮೆಯಲ್ಲಿ ಅಮೂಲ್ಯವೆಂದು ಪರಿಗಣಿತವಾಗಿರುವ ನಾನಾ ವಿಧವಾದ ಮನ್ನಣೆಗಳಿಗೆ ಪಾತ್ರನಾಗುತ್ತಾನೆ. ಆಜೀವ ಪರ್ಯಂತ, ಆಗಾಗ್ಗೆ ಏರ್ಪಡುವ ಅಧಿ ಕೃತವಾದ ಹೆಗ್ಗಳಿಕೆಯ ಸಮಾರಂಭಗಳಲ್ಲಿ ಮಹಾನ್ ವ್ಯಕ್ತಿಗಳು ತಮ್ಮ ಸಾಹಸ ಕೃತ್ಯಗಳನ್ನು ಸಾರ್ವಜನಿಕವಾಗಿ ಹೊಗಳಿಕೊಳ್ಳುವಾಗ ಅವನೂ ತನ್ನ ಸಾಹಸ ಕಾರ್ಯ ಗಳನ್ನು ಹಾಗೂ ಶಪಥ ಕೈಗೊಂಡ ವರ್ಷವನ್ನೂ ಹೇಳಿಕೊಳ್ಳಬಹುದು. ಸಂಘ ಗಳನ್ನು ಸೇರಲು ಮತ್ತು ಮುಖ್ಯಸ್ಥನಾಗಲು ತಾನು ಗಳಿಸಿದ ಮನ್ನಣೆಯನ್ನು ಬಳಸಿ

ಕೊಳ್ಳಬಹುದು. ಜೀವನದಲ್ಲಿ ನಿರಾಶನಾಗದವನು ಸಹ ಈ ಬಗೆಯ ಶಪಥ ಕೈಗೊಂಡು ಪಡೆಯಬಹುದಾದ ಮನ್ನಣೆಗಳನ್ನೆಲ್ಲ ಪಡೆಯಬಹುದು. ಒಂದು ಸಂಘವು ಇಷ್ಟವಿಲ್ಲದ ಸದಸ್ಯನೊಬ್ಬನಿಂದ ಶಪಥ ಮಾಡಿಸಲು ಯತ್ನಿಸಬಹುದು. ವೈದಾನ ಸೀಮೆಯಲ್ಲಿ ಆತ್ಮಹತ್ಯೆಗೆ ದೊರೆತಿರುವ ಮಾನ್ಯತೆಗೆ ಈ ಯುದ್ಧವೀರನ ಶಪಥವೊಂದೇ ದಾರಿಯಲ್ಲ. ಹಲವು ಹಿಂದುಳಿದ ಪ್ರದೇಶಗಳಲ್ಲಿ ಇದು ಅಪರೂಪವಾದರೂ ಪ್ರೇಮಿಗಳ ಆತ್ಮಹತ್ಯೆಯ ಕತೆಗಳು ಆಗಾಗ್ಗೆ ಕೇಳಿಬರುತ್ತವೆ. ತನ್ನ ಸ್ವಂತ ಜೀವವನ್ನು ಕಿತ್ತೆಸೆಯುವ ಆವೇಶದ ಭರವನ್ನು ಅವರು ಚೆನ್ನಾಗಿ ಅರಿತುಕೊಳ್ಳಬಲ್ಲರು.

ಪ್ವೆಬ್ಲೋ ಸಂಸ್ಥೆಗಳಲ್ಲಿ ಅಪೊಲೋನಿಯನ್ ಆದರ್ಶವು ಇನ್ನೊಂದು ರೀತಿಯಲ್ಲಿಯೂ ವ್ಯಕ್ತಗೊಂಡಿದೆ. ಅವರು ಭಯೋದ್ರೇಕ ಮತ್ತು ಆಪತ್ತುಗಳ ವಿಷಯವಸ್ತುಗಳನ್ನು ಸಾಂಸ್ಕೃತಿಕವಾಗಿ ವಿಸ್ತಾರಗೊಳಿಸಿಕೊಂಡಿಲ್ಲ. ಮಲಿನತೆ ಮತ್ತು ಭೀತಿಯ ಸಂದರ್ಭಗಳನ್ನು ಉಂಟು ಮಾಡುವ ಡಯೋನೀಶಿಯನ್ ಇಚ್ಛೆ ಅವರಲ್ಲಿಲ್ಲ. ಪ್ರಪಂಚದಾದ್ಯಂತ ಶೋಕಾಚರಣೆಯ ಸಂದರ್ಭದಲ್ಲಿ ಅಂತಹ ತಾಳ್ಮೆ ತಪ್ಪಿದ ವರ್ತನೆ ಸಾಧಾರಣವಾದುದು. ಸಮಾಧಿ ಮಾಡುವುದು ದುಃಖ ಪ್ರಸಂಗವಲ್ಲ ; ಭಯೋದ್ರೇಕದ ಹುಚ್ಚು ಕೋಲಾಹಲ. ಆಸ್ಟ್ರೇಲಿಯದ ಬಣಗಳಲ್ಲಿ ಸತ್ತವನ ನೆಂಟರು ಅವನ ತಲೆಯೋಡಿನ ಮೇಲೆ ಬಿದ್ದು, ಅದು ತಮಗೆ ತೊಂದರೆ ಮಾಡದಿರಲೆಂದು ಅದನ್ನು ಒಡೆದು ಪುಡಿಪುಡಿ ಮಾಡುತ್ತಾರೆ. ಅವನ ಭೂತ ತಮ್ಮನ್ನು ಕಾಡದಿರಲೆಂದು ಕಾಲಿನ ಮೂಳೆಗಳನ್ನು ಮುರಿಯುತ್ತಾರೆ. ಆದರೆ ಇಸ್ಲೆಟಾದಲ್ಲಿ, ಹೆಣದ ಮೂಳೆಗಳನ್ನು ಮುರಿಯುವುದಿಲ್ಲ ; ಕೂದಲ ಕುಂಚವನ್ನು ಮುರಿಯುತ್ತಾರೆ. ಪ್ವೆಬ್ಲೋಗಳಿಗೆ ಅತಿ ಸಮೀಪದವರಾದ ನವಾಜೊಗಳಲ್ಲಿ ಸತ್ತವನ ಕುಟೀರವನ್ನು ಸಾವಿನ ಸಮಯದಲ್ಲಿ ಅದರಲ್ಲಿದ್ದ ಎಲ್ಲ ವಸ್ತುಗಳೊಂದಿಗೆ ಸುಟ್ಟು ಹಾಕುತ್ತಾರೆ. ಸತ್ತವನದಾಗಿದ್ದ ಯಾವೊಂದು ವಸ್ತುವೂ ಆಕಸ್ಮಿಕವಾಗಿಯೂ ಬೇರೊಬ್ಬನಿಗೆ ಹೋಗುವಂತಿಲ್ಲ. ಅವೆಲ್ಲ ಮಲಿನಗೊಂಡಿರುತ್ತವೆ. ಪ್ವೆಬ್ಲೋಗಳಲ್ಲಿಯಾದರೋ ಅವನ ಬಿಲ್ಲು ಬಾಣಗಳು, ಅವನ ಮುಖವಾಡ, ಔಷಧ ತಾಯತವಾದ ಕುಂದಿಲ್ಲದ ಜೋಳದ ತೆನೆಗಳನ್ನು ಮಾತ್ರ ಸತ್ತವನೊಂದಿಗೆ ಹೂಳುತ್ತಾರೆ. ಹೂಳುವ ಮುನ್ನ ಮುಖವಾಡದ ಬೆಲೆ ಬಾಳುವ ಗರಿಗಳನ್ನು ತೆಗೆದಿಟ್ಟುಕೊಳ್ಳುತ್ತಾರೆ. ಅವರು ಯಾವುದನ್ನೂ ಎಸೆಯುವುದಿಲ್ಲ. ಮರಣ ಸಂಬಂಧವಾದ ಸಂಸ್ಥೆಗಳಲ್ಲೆಲ್ಲಾ ಪ್ವೆಬ್ಲೋಗಳು ಆ ವ್ಯಕ್ತಿಯ ಜೀವನ ಕೊನೆಗೊಂಡುದನ್ನು ಸಂಕೇತಗೊಳಿಸಿದ್ದಾರೆ ; ಅವು ಅವನ ಶವದಿಂದಾಗುವ ಮಲಿನತೆಯನ್ನಾಗಲೀ, ಅವನ ಭೂತದ ಈರ್ಷ್ಯೆ ಮತ್ತು ಛಲವನ್ನಾಗಲಿ ತಡೆಯುವ ಮುನ್ನೆಚ್ಚರಿಕೆಗಳಲ್ಲ.

ಕೆಲವು ನಾಗರಿಕತೆಗಳಲ್ಲಿ ಜೀವನದ ಸಂದಿಗ್ಧ ಸಮಯಗಳನ್ನೆಲ್ಲಾ ಭಯೋದ್ರೇಕ

ಸಂದರ್ಭಗಳನ್ನಾಗಿ ಪರಿಗಣಿಸುತ್ತಾರೆ. ಹುಟ್ಟು, ಪ್ರೌಢ ನೆರೆಯುವುದು, ಮದುವೆ ಮತ್ತು ಮರಣ—ಇವು ಈ ವರ್ತನೆಗೆ ಅವಕಾಶ ನೀಡುವ, ಮೇಲಿಂದ ಮೇಲೆ ಬರುವ ಸಂದರ್ಭಗಳು. ಪ್ವೆಬ್ಲೋಗಳು ತಮ್ಮ ಶೋಕಾಚರಣೆಯ ಸಮಯದಲ್ಲಿ ಸಾವಿನ ಭಯೋದ್ರೇಕವನ್ನು ದೊಡ್ಡದು ಮಾಡದೇ ಇರುವಂತೆಯೇ ಇತರ ಸಂದರ್ಭಗಳಲ್ಲಿಯೂ ಯಾವೊಂದು ಭಯೋದ್ರೇಕ ಭಾವವನ್ನೂ ದೊಡ್ಡದಾಗಿ ವ್ಯಕ್ತಪಡಿಸುವುದಿಲ್ಲ. ಅವರ ಸುತ್ತಮುತ್ತಲೂ ಇರುವ ಬಣಗಳಲ್ಲೆಲ್ಲಾ ಪ್ರತಿಯೊಂದು ಸ್ಥಳದಲ್ಲಿಯೂ ಮುಟ್ಟಾದ ಹೆಂಗಸರಿಗಾಗಿ ಪ್ರತ್ಯೇಕವಾದ ಸಣ್ಣ ಮನೆಗಳಿರುವುದನ್ನು ನೋಡಿದರೆ ಪ್ವೆಬ್ಲೋಗಳು ಮುಟ್ಟಿನ ಕಾಲವನ್ನು ನಿರ್ವಹಿಸಿಕೊಳ್ಳುವ ರೀತಿ ವಿಶೇಷವಾಗಿ ಬೇರೆಯಾಗಿದ್ದು ಎದ್ದು ಕಾಣುತ್ತದೆ. ಆ ಸಣ್ಣ ಮನೆಯಲ್ಲಿ ಮುಟ್ಟಾದ ಹೆಂಗಸು ಇತರರಿಂದ ದೂರವಾಗಿದ್ದು, ತನ್ನದಾದ ಬೇರೆ ಪಾತ್ರೆಗಳನ್ನು ಬಳಸಿಕೊಂಡು ತನಗೆ ತಾನೇ ಅಡಿಗೆ ಮಾಡಿಕೊಳ್ಳಬೇಕು. ಮನೆಯಲ್ಲಿಯೂ ಅವಳ ಸಂಪರ್ಕವೇ ಮಲಿನತೆ ತರುವಂತಹುದಾಗಿದ್ದು, ಅವಳು ಬೇಟೆಗಾರನ ಆಯುಧಗಳನ್ನು ಮುಟ್ಟಿದರೆ ಅವು ನಿಷ್ಪ್ರಯೋಜಕವಾಗುತ್ತವೆ. ಆದರೆ ಪ್ವೆಬ್ಲೋಗಳಲ್ಲಿ ಮುಟ್ಟಾದವರಿಗಾಗಿ ಪ್ರತ್ಯೇಕ ಗುಡಿಸಲುಗಳೂ ಇಲ್ಲ. ಆ ಸಂದರ್ಭದಲ್ಲಿ ಹೆಂಗಸರು ಯಾವ ಎಚ್ಚರಿಕೆಯ ಕ್ರಮಗಳಿಗೂ ಬದ್ಧರಲ್ಲ. ಋತುಸ್ರಾವದ ಸಮಯಗಳು ಹೆಂಗಸಿನ ಜೀವನದಲ್ಲಿ ಯಾವ ವ್ಯತ್ಯಾಸವನ್ನೂ ಉಂಟು ಮಾಡುವುದಿಲ್ಲ.

ಸುತ್ತಮುತ್ತಣ ಬಣಗಳಲ್ಲಿ ಭೀತಿಯ ದೊಡ್ಡ ಸಂದರ್ಭವೆಂದರೆ ಅವರುಗಳ ಮಾಟದ ಸಂಸ್ಥೆ. ಮಾಟ ಎಂಬುದು ಸಾಧಾರಣವಾಗಿ ಆಫ್ರಿಕಾ ಮತ್ತು ಮೆಲನೇಶಿಯಾದ ಕೆಲ ರೂಢಿಗಳಿಗೆ ಬಳಸುವ ಹೆಸರಾದರೂ, ಉತ್ತರ ಅಮೇರಿಕದಲ್ಲಿ ಅಲಾಸ್ಕಾದಿಂದ, ಗ್ರೇಟ್ ಬೇಸಿನ್ನಿನ ಶಶೋನಿಯನ್ ಜನರ ಮೂಲಕ ಹಾದು, ನೈಋತ್ಯದ ಪಿಮಾಗಳವರೆಗೆ ಪೂರ್ವದಿಕ್ಕಿನ ಮಿಡೆವಿವಿನ್ ಸಮಾಜದವರೆಗೆ ವಿಸ್ತಾರವಾಗಿ ಹರಡಿಕೊಂಡಿರುವಂತಹ ಮದ್ದುಗಾರರತ್ತ ತೋರ್ಪಡಿಸುವ ಭೀತಿ, ಸಂಶಯ, ಅಡಗಿಸಿಕೊಳ್ಳಲಾಗದ ವೈರಗಳು ಸಂಪೂರ್ಣವಾಗಿ ಮಾಟಗಾರಿಕೆಯ ಲಕ್ಷಣಗಳೇ. ಯಾವುದೇ ಡಯೊನೀಶಿಯನ್ ಸಮಾಜವಾದರೂ ದೈವಿಕ ಶಕ್ತಿಯನ್ನು ಮಹತ್ವದ್ದಾಗಿ ಪರಿಗಣಿಸಲು ಕಾರಣ ಅದು ಶಕ್ತಿಶಾಲಿಯೆಂದೇ ಅಲ್ಲ; ಅದು ಅಪತ್ಕಾರಿಯೆಂದೂ ಕೂಡ. ಅಪತ್ಕಾರಿ ಅನುಭವಗಳನ್ನು ರೂಢಿಸಿಕೊಳ್ಳಲು ಅವಶ್ಯಕವಾದ ಪ್ರೇರಣೆಯು ಮದ್ದುಗಾರರತ್ತ ಬಣಗಳು ತೋರುವ ಮನೋಭಾವದಿಂದ ಪ್ರೋತ್ಸಾಹಗೊಂಡಿದೆ. ಮದ್ದುಗಾರ ಒಳಿತು ಮಾಡುವ ಶಕ್ತಿಗಿಂತ ಹೆಚ್ಚಿಗೆ ಕೇಡು ಮಾಡುವ ಶಕ್ತಿಯುಳ್ಳವನು. ಅವನತ್ತ ತೋರುವ ಮನೋಭಾವವು ಭೀತಿ, ಹಗೆತನ, ಸಂಶಯಗಳು ಒಂದುಗೂಡಿದುದು. ಅವನು ಸತ್ತರೆ ಅದಕ್ಕೆ ಪ್ರತೀಕಾರವಿಲ್ಲ. ಅವನು ನೀಡುವ

ಚಿಕಿತ್ಸೆಗಳು ವಿಫಲಗೊಂಡು, ಅವನ ಮೇಲೆ ಸಂಶಯ ನಿಂತರೆ, ಜನ ಅವನನ್ನು ಕೊಲ್ಲು ವುದು ಸಾಮಾನ್ಯ ರೂಢಿ.

ಈ ಮನೋಭಾವವನ್ನು ನೈಋತ್ಯ ಪ್ರದೇಶದ ಪ್ವೆಬ್ಲೋಯೇತರ ಬಣಗಳಲ್ಲೊಂದಾದ ಮೊಜಾವೆಗಳು ಅತ್ಯುತ್ಕಟತೆಗೆ ಒಯ್ದಿದ್ದರು. ಗಿಡುಗವು ತನ್ನ ಬದುಕಿಗಾಗಿ ಸಣ್ಣ ಹಕ್ಕಿಗಳನ್ನು ಕೊಲ್ಲುವಂತೆಯೇ ಮದ್ದುಗಾರರು ಇತರರನ್ನು ಈ ರೀತಿ ಕೊಲ್ಲುವುದು ಅವರ ಸ್ವಭಾವ ಎನ್ನುತ್ತಾರೆ ಮೊಜಾವೆಗಳು. ಮದ್ದುಗಾರನಿಂದ ಕೊಲ್ಲಲ್ಪಟ್ಟವರೆಲ್ಲ ಅವನ ಹಿಡಿತದಲ್ಲಿರುತ್ತಾರೆ. ಅವರೆಲ್ಲ ಕೂಡಿ ಅವನ ತಂಡ. ದೊಡ್ಡ, ಬಲಶಾಲಿ ತಂಡವನ್ನು ಪಡೆಯುವುದು ಅವನ ಆಶಯ. ನಾನು ಈಗಲೇ ಸಾಯಲು ಸಿದ್ಧವಿಲ್ಲ, ನನ್ನ ತಂಡ ಇನ್ನೂ ಸಾಕಷ್ಟು ದೊಡ್ಡದಾಗಿಲ್ಲ ಎಂದು ಮದ್ದುಗಾರ ಬಹಿರಂಗವಾಗಿಯೇ ಹೇಳುತ್ತಾನೆ. ಇನ್ನು ಸ್ವಲ್ಪ ಸಮಯ ದೊರೆತರೆ ಅವನು ಹೆಮ್ಮೆ ಪಟ್ಟುಕೊಳ್ಳುವಷ್ಟು ಮಟ್ಟಿನ ತಂಡವನ್ನು ಕೂಡಿಸಿಕೊಳ್ಳಬಹುದು. ಯಾವನಿಗಾದರೂ ಅವನು ಕುರುಹಾಗಿ ಒಂದು ದೊಣ್ಣೆಯನ್ನುಕೊಟ್ಟು 'ನಿನ್ನ ತಂದೆಯನ್ನು ಕೊಂದವನು ನಾನೇ ಎಂಬುದು ಗೊತ್ತಿಲ್ಲವೋ' ಎಂದು ಕೇಳುವನು ಅಥವಾ ಒಬ್ಬ ರೋಗಿಯ ಬಳಿಗೆ ಬಂದು, 'ನಾನೇ ನಿನ್ನನ್ನು ಕೊಲ್ಲುತ್ತಿರುವವನು' ಎಂದು ಹೇಳುವನು. ತಾನು ವಿಷಪ್ರಯೋಗ ಮಾಡುತ್ತಿರುವೆನೆಂದಾಗಲಿ ಅವನ, ತಂದೆಯನ್ನು ಚೂರಿಯಿಂದ ಕೊಂದೆನೆಂದಾಗಲಿ ಅವನ ಅರ್ಥವಲ್ಲ. ಅದು ಮಾಂತ್ರಿಕ ಕೊಲೆ; ಬಹಿರಂಗವಾಗಿ ಘೋಷಿತವಾದ ಆಣೆಯಿಕ್ಕಿ ಭೀತಿ ಹುಟ್ಟಿಸುವ ಸನ್ನಿವೇಶ.

ಜುನಿಗಳಲ್ಲಿ ಇಂತಹ ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳುವುದು ಸಹ ಅಸಾಧ್ಯ. ಅವರ ಪುರೋಹಿತರು ಪರೋಕ್ಷವಾಗಿ ಹಗೆತನಕ್ಕೋ ಸಂಶಯಕ್ಕೋ ಪಾತ್ರರಲ್ಲ. ಅವರು ದೈವಿಕಶಕ್ತಿಯ, ಡಯೊನೀಶಿಯನ್ ಲಾಕ್ಷಣಿಕ ದ್ವಂದ್ವ ಮುಖಗಳಾಗಿದ್ದ ಮರಣ ತರುವ ಮತ್ತು ರೋಗ ನಿವಾರಿಸುವ ಶಕ್ತಿಗಳನ್ನು ಒಂದಾಗಿಸಿ ತಮ್ಮಲ್ಲಿ ಮೈಗೂಡಿಸಿಕೊಂಡಿಲ್ಲ. ಈಗ ಪ್ವೆಬ್ಲೋಗಳಲ್ಲಿ ಸರ್ವವ್ಯಾಪಿಯಾಗಿರುವ ಮಾಟಗಾರಿಕೆಯ ಭಾವನೆಗಳು ಸಹ, ವಿಷಯ ವಿವರಗಳಲ್ಲಿ ಐರೋಪ್ಯವಾಗಿದ್ದು ಮಾಟಗಾರಿಕೆಯ ಸಾಚಾ ರೂಪವಲ್ಲ. ಜುನಿಗಳಲ್ಲಿ ಮಾಟಗಾರಿಕೆಯು ಒಬ್ಬ ಸಾಹಸಿಯು ದೈವಿಕ ಶಕ್ತಿಯನ್ನು ಪಡೆಯಲಿಚ್ಛಿಸಿ ನಡೆಸುವ ಕಾರ್ಯವಲ್ಲ. ಅವರಲ್ಲಿ ಯಾವನೇ ಆದರೂ ಒಂದು ನಿರ್ದಿಷ್ಟ ಮಾಟದ ತಂತ್ರವನ್ನು ಪಡೆದಿದ್ದು ಅದನ್ನು ಕಾರ್ಯತಃ ಬಳಸುತ್ತಿಲ್ಲ ಎಂಬುದು ನನ್ನ ಭಾವನೆ. ಮಾಟಗಾರನು ತನ್ನ ಕಣ್ಣುಗಳನ್ನು ಕಳಚಿ ಗೋಡೆಯ ಪೊಟರೆಯಲ್ಲಿಟ್ಟು ಅವಕ್ಕೆ ಬದಲಾಗಿ ಗೂಬೆಯ ಕಣ್ಣುಗಳನ್ನಿಟ್ಟುಕೊಂಡುದು ಮೊದಲಾದ ಅವರ ಮಾಟಗಾರ ವರ್ತನೆಯ ವಿವರಗಳೆಲ್ಲ ಜಾನಪದ ಕತೆಗಳ

ರೀತಿಯವು. ಅವು, ಇತರ ಪ್ರದೇಶಗಳ ಲಕ್ಷಣವಾದ, ನಿಜವಾಗಿಯೂ ಕಾರ್ಯ ಶೀಲವಾದ ದ್ವೇಷಸಾಧನೆಯ ಭಯಂಕರ ವಿವರಗಳಲ್ಲ. ಅವರಲ್ಲಿ ಒದಗಿ ಬರುವ ಇತರ ಹಲವಾರು ಸನ್ನಿವೇಶಗಳಂತೆ, ಪ್ವೆಬ್ಲೋಗಳ ಮಾಟಗಾರಿಕೆಯೂ ಕಳವಳದ ಒಂದು ಸಂಕೀರ್ಣ. ಅವರಲ್ಲಿ ಒಬ್ಬರ ಬಗ್ಗೆ ಒಬ್ಬರು ಅಸ್ಫುಟವಾಗಿ ಸಂಶಯ ತಳೆದಿದ್ದಾರೆ. ಒಬ್ಬ ಮನುಷ್ಯ ತಕ್ಕಮಟ್ಟಿಗೆ ದ್ವೇಷಕ್ಕೆ ಗುರಿಯಾದನೆಂದರೆ ಅವನ ತಲೆಗ ಮಾಟಗಾರಿಕೆಯನ್ನು ಕಟ್ಟುತ್ತಾರೆ. ಸಾಧಾರಣವಾದ ಒಂದು ವಂರಣದಲ್ಲಿ ಮಾಟಗಾರಿಕೆಯ ಆಪಾದನೆಗೆ ಸ್ಥಾನವಿಲ್ಲ. ಸಾಂಕ್ರಾಮಿಕ ರೋಗಗಳು ಹರಡಿದಾಗ, ಅವರ ಸಾರ್ವಜನಿಕ ಕಳವಳವು ವ್ಯಕ್ತವಾಗಿ, ಅವರು ಮಾಟಗಾರರ ಬೆನ್ನಟ್ಟುತ್ತಾರೆ. ತಮ್ಮ ಪವಿತ್ರವ್ಯಕ್ತಿಗಳು ಪಡೆದಿರುವ ಶಕ್ತಿಯಿಂದ, ಎಲ್ಲವನ್ನೂ ನುಂಗುವಂತಹ ಭಯೋದ್ವೇಗದ ಸನ್ನಿವೇಶಗಳನ್ನು ಹುಟ್ಟಿಸುವುದಿಲ್ಲ.

ಆದ್ದರಿಂದ ಪ್ವೆಬ್ಲೋಗಳು ಯಾವುದೇ ರೂಪದಲ್ಲಾಗಲಿ ಅತಿರೇಕವನ್ನು ಬಯಸುವುದಿಲ್ಲ, ಆವೇಶಕ್ಕೆ ಎಡೆಗೊಡುವುದಿಲ್ಲ. ಅಲ್ಲದೆ ಅವರಿಗೆ ಅಧಿಕಾರ ಚಲಾಯಿಸುವುದರಲ್ಲಿ ಮೋಹವಿಲ್ಲ ಅಥವಾ ವ್ಯಕ್ತಿಯು ಒಂಟಿಗನಾಗಿ ನಿಲ್ಲುವ ಯಾವುದೇ ಸನ್ನಿವೇಶದಲ್ಲಿಯೂ ಆನಂದವಿಲ್ಲ. ಡಯೋನೀಶಿಯನ್ ಪ್ರವೃತ್ತಿ ಯವರು ಅತ್ಯಂತ ಮಹತ್ವದ್ದನ್ನಾಗಿ ಪರಿಗಣಿಸುವಂತಹ ಸನ್ನಿವೇಶಗಳಾವುವೂ ಇಲ್ಲ. ಆದರೂ ಅವರಲ್ಲಿ ಫಲಪ್ರದತೆಯ ಧರ್ಮಾಚರಣೆಯಿದೆ. ಸೂತ್ರ ಪ್ರಕಾರವಾಗಿ ಫಲಪ್ರದತೆಯ ಪಂಥಗಳನ್ನು ನಾವು ಡಯೋನೀಶಿಯನ್ ಎಂಬುದಾಗಿ ಪರಿಗಣಿಸು ತ್ತೇವೆ. ಡಯೋನೀಸಸ್ ಫಲಪ್ರದತೆಯ ದೇವತೆ. ಪ್ರಪಂಚದ ಬಹುಭಾಗಗಳಲ್ಲಿ ಈ ಎರಡು ಗುಣಲಕ್ಷಣಗಳನ್ನೂ ಬೇರ್ಪಡಿಸಬೇಕಾದ ಅವಶ್ಯಕತೆಯೇರ್ಪಟ್ಟಿಲ್ಲ. ಪ್ರಪಂಚದ ದೂರ ದೂರ ಪ್ರದೇಶಗಳಲ್ಲಿ, ಮೇಲಿಂದ ಮೇಲೆ ಅತಿರೇಕದ ಒಲವೂ, ಸಂತಾನ ಶಕ್ತಿಯ ಪಂಥಗಳೂ ಒಂದುಗೂಡಿಯೇ ತೋರಿಬರುತ್ತವೆ. ಅಪೊಲೋ ನಿಯನ್ ಪ್ವೆಬ್ಲೋಗಳು ಇದೇ ಫಲಪ್ರದತೆಯ ಪಂಥಗಳನ್ನು ಹೇಗೆ ಅನುಸರಿಸುತ್ತಾ ರೆಂಬುದು, ಜೀವನವನ್ನು ಕುರಿತ ಅವರ ಮೂಲಭೂತ ಸಿದ್ಧಾಂತವನ್ನು ಇಮ್ಮಡಿ ಯಾಗಿ ಸ್ಪಷ್ಟಗೊಳಿಸುತ್ತದೆ.

ಅವರ ಫಲಪ್ರದತೆಯ ಸಮಾರಂಭಗಳ ಬಹು ಪಾಲಿನಲ್ಲಿ ಲೈಂಗಿಕ ಸಾಂಕೇತಿ ಕತೆಗೆ ಎಡೆಯಿಲ್ಲ. ಅವರ ನೃತ್ಯದ ಏಕತಾನದ ಪುನರಾವರ್ತನಗಳು ಆಕಾಶಕ್ಕೆ ಮೋಡ ಗಳನ್ನೊತ್ತಿ ಮಳೆಯನ್ನು ಪ್ರಚೋದಿಸುತ್ತವೆ. ಪೂಜಾಪೀಠಗಳ ಮೇಲಿಟ್ಟು ಅಥವಾ ದೈವಿಕ ವೇಷ ಕಟ್ಟಿದಾಗ ಬಳಸಿ ಶಕ್ತಿಶಾಲಿಗಳಾಗಿರುವಂತಹ ವಸ್ತುಗಳನ್ನು ಹೂಳುವುದ ರಿಂದ ಹೊಲಗಳ ಉತ್ಪಾದನಾಸಾಮರ್ಥ್ಯ ಹೆಚ್ಚುತ್ತದೆ. ಜುನಿಗಳಿಗಿಂತ ಅವರ ನೆರೆ ಯವರಾದ ಹೋಪಿ ಗ್ರಾಮಗಳಲ್ಲಿ ಲೈಂಗಿಕ ಸಾಂಕೇತಿಕತೆ ಹೆಚ್ಚಾಗಿ ಕಂಡುಬರುತ್ತದೆ.

ಹೋಪಿಗಳಲ್ಲಿ ಕರಿಯ ಬಣ್ಣದ ಸಣ್ಣ ಉರುಳೆಗಳನ್ನು ಲಾಳದ ಸಣ್ಣ ಬಳೆ ಅಥವಾ ಚಕ್ರಗಳೊಂದಿಗೆ ಸೇರಿಸಿ ಉತ್ಸವಾಚರಣೆಗಳಲ್ಲಿ ಬಳಸುವುದು ಬಹಳ ಸಾಧಾರಣ ವಾದುದು. ಉರುಳೆಗಳು ಗಂಡಿನ ಸಂಕೇತ ; ವರ್ತುಳಗಳು ಹೆಣ್ಣಿನದು. ಅವುಗಳನ್ನು ಒಟ್ಟಿಗೆ ಕಟ್ಟಿ ಪವಿತ್ರ ಚಿಲುಮೆಗೆ ಎಸೆಯುತ್ತಾರೆ.

ಕೊಳಲು ಸಂಘದ ಉತ್ಸವದಲ್ಲಿ, ಮಳೆ ತರಲು ಒಬ್ಬ ಹುಡುಗನು, ಇಬ್ಬರು ಹುಡುಗಿಯರೊಂದಿಗೆ ಬರುತ್ತಾನೆ. ಮುಂದಾಗಿಯೇ ಹುಡುಗನಿಗೆ ಒಂದು ಉರುಳೆ ಯನ್ನೂ, ಪ್ರತಿ ಹುಡುಗಿಗೂ ಲಾಳದ ಬಳೆಗಳನ್ನೂ ಕೊಟ್ಟಿರುತ್ತಾರೆ. ಉತ್ಸ ವದ ಕೊನೆಯ ದಿನ ಕೆಲವು ಪುರೋಹಿತರೊಂದಿಗೆ, ಈ ವಸ್ತುಗಳನ್ನು ಪವಿತ್ರ ಚಿಲು ಮೆಗೆ ಒಯ್ಯುತ್ತಾರೆ. ಅಲ್ಲಿ ಚಿಲುಮೆಯ ತಳದ ಫಲವತ್ತಾದ ಮಣ್ಣನ್ನು ಕೆರೆದು ಅವಕ್ಕೆ ಬಳಿಯುತ್ತಾರೆ. ಅನಂತರ ಮೆರವಣಿಗೆ ಪ್ಲೆಬೋವಿನತ್ತ ತಿರುಗುತ್ತದೆ. ಹಿಂತಿ ರುಗುವ ಹಾದಿಯಲ್ಲಿ ಪೂಜಾಪೀಠಗಳನ್ನು ರಚಿಸುವಾಗ ಬರೆಯುವಂತಹ ನಾಲ್ಕು ಹಸೆ ಗಳನ್ನು ಬರೆದಿರುತ್ತಾರೆ. ಮಕ್ಕಳು ಉಳಿದವರಿಗಿಂತ ಮುಂದಿದ್ದು, ಹುಡುಗನು ತನ್ನ ಉರುಳೆಯನ್ನೂ, ಹುಡುಗಿಯರು ತಮ್ಮ ವರ್ತುಳಗಳನ್ನೂ ಕ್ರಮವಾಗಿ ಒಂದೊಂದು ಹಸೆಯ ಮೇಲೂ ಎಸೆಯುತ್ತಾರೆ. ಕೊನೆಗೆ ಅವುಗಳನ್ನು ಗ್ರಾಮದ ಚೌಕದಲ್ಲಿರುವ ನೃತ್ಯ ಮಂದಿರದಲ್ಲಿರಿಸುತ್ತಾರೆ. ಇದು ಔಚಿತ್ಯವರಿತ, ಶಾಂತ ರೀತಿಯ ಉತ್ಸವವಾ ಗಿದ್ದು, ಕೊನೆತನಕ ಕ್ರಮಬದ್ಧವೂ, ಉದ್ವೇಗರಹಿತವೂ ಆದುದು.

ಈ ಬಗೆಯ ವಿಧಿವಿಹಿತವಾದ ಲೈಂಗಿಕ ಸಾಂಕೇತಿಕತೆಯನ್ನು ಹೋಪಿಗಳು ಆಗಾಗ್ಗೆ ಬಳಸುತ್ತಾರೆ. ಇದು ಅವರ ಸ್ತ್ರೀ ಸಂಘಗಳ ನೃತ್ಯಗಳಲ್ಲಿ ವಿಶೇಷ ಜನಾ ದರಣೆ ಗಳಿಸಿದೆ. ಜೂನಿಗಳಲ್ಲಾದರೋ ಸ್ತ್ರೀ ಸಂಘಗಳೇ ಇಲ್ಲ. ಇಂತಹ ಒಂದು ಉತ್ಸವದಲ್ಲಿ ಹುಡುಗಿಯರು ಕೈಯಲ್ಲಿ ಜೋಳದ ಗಿಡಗಳನ್ನು ಹಿಡಿದು ಒಂದು ವರ್ತು ಳಾಕಾರದ ನೃತ್ಯ ಮಾಡುತ್ತಿರುವಾಗ, ನಾಲ್ವರು ಕನ್ಯೆಯರು ಗಂಡು ಉಡುಪು ಧರಿಸಿ ಬರುತ್ತಾರೆ. ಅವರಲ್ಲಿ ಇಬ್ಬರು ಬಿಲ್ಗಾರರನ್ನೂ ಇಬ್ಬರು ಭರ್ಜಿಯವರನ್ನೂ ಪ್ರತಿ ನಿಧಿಸುತ್ತಾರೆ. ಪ್ರತಿ ಬಿಲ್ಗಾರನೂ ಒಂದು ಕಟ್ಟು ದ್ರಾಕ್ಷಿ ಬಳ್ಳಿಗಳನ್ನೂ ಬಿಲ್ಲು ಬಾಣ ಗಳನ್ನೂ ಹಿಡಿದುಕೊಂಡಿದ್ದು ತಮ್ಮ ಬಾಣಗಳನ್ನು ದ್ರಾಕ್ಷಿ ಬಳ್ಳಿಗಳ ಕಟ್ಟಿಗೆ ಹೊಡೆ ಯುತ್ತಾ ಬರುತ್ತಾರೆ. ಭರ್ಜಿಯವರಲ್ಲಿ ಪ್ರತಿಯೊಬ್ಬರಲ್ಲೂ ಒಂದು ಉದ್ದವಾದ ಕೋಲು, ಒಂದು ಬಳೆ ಇದ್ದು, ಬಳೆಯನ್ನು ಉರುಳಿ ಬಿಟ್ಟು ಅದರೊಳಕ್ಕೆ ಭರ್ಜಿಗಳನ್ನು ಎಸೆಯುತ್ತಾ ಬರುತ್ತಾರೆ. ಅವರು ನೃತ್ಯ ವರ್ತುಳದ ಬಳಿಗೆ ಬಂದ ಮೇಲೆ ತಮ್ಮ ಕೋಲು ಮತ್ತು ಬಳೆಗಳನ್ನು ನೃತ್ಯಗಾರರ ತಲೆ ಮೇಲಿನಿಂದ ವರ್ತುಳದೊಳಕ್ಕೆ ಎಸೆ ಯುತ್ತಾರೆ. ಅನಂತರ ಅವರು ನೃತ್ಯಮಾಡುತ್ತಿರುವ ಹುಡುಗಿಯರ ಮಧ್ಯಕ್ಕೆ ಹೋದಿ ಅಲ್ಲಿಂದ ತೇವವಾದ ಜೋಳದ ಹಿಟ್ಟಿನ ಸಣ್ಣ ಉಂಡೆಗಳನ್ನು ಪ್ರೇಕ್ಷಕರತ್ತ ಎಸೆಯು

ತ್ತಾರೆ. ಪ್ರೇಕ್ಷಕರು ಗಡಿಬಿಡಿಯಿಂದ ಅವುಗಳನ್ನು ಎತ್ತಿಕೊಳ್ಳಲು ಮುಂದಾಗುತ್ತಾರೆ. ಇಲ್ಲಿ, ಸಾಂಕೇತಿಕತೆ ಲೈಂಗಿಕವಾದುದು. ಉದ್ದೇಶ ಫಲಪ್ರದತೆ. ಆದರೆ ವರ್ತನೆ ಮಾತ್ರ ಡಯೋನೀಸಸ್ ಪಂಥದ ವಿರುದ್ಧ ಧ್ರುವ.

ಜುನಿಗಳಲ್ಲಿ ಈ ರೀತಿಯ ಸಾಂಕೇತಿಕತೆಬೆಳೆದುಬಂದಿಲ್ಲ. ಪ್ಯೂಬ್ಲೋಗಳಲ್ಲೆಲ್ಲ ಇರುವಂತೆ ಅವರಲ್ಲೂ ಫಲಪ್ರದತೆಯನ್ನು ಕೋರಿ ನಡೆಸುವ ನಿಯಮಪೂರ್ವಕವಾದ ಓಟದ ಪಂದ್ಯಗಳಿವೆ. ಅವುಗಳಲ್ಲಿ ಒಂದು, ಗಂಡಸರು ಮತ್ತು ಹೆಂಗಸರ ನಡುವೆ ನಡೆಯುತ್ತದೆ. ಪಂಕ್ತಿಯ ಒಂದು ಕಡೆ ಗಂಡಸರು ತಮ್ಮ ಒದೆಗೋಲುಗಳೊಂದಿಗೆ, ಇನ್ನೊಂದು ಕಡೆ ಹೆಂಗಸರು ತಮ್ಮ ದುಂಡುಕಟ್ಟುಗಳೊಂದಿಗೆ, ಎರಡನ್ನೂ ತಮ್ಮ ಕಾಲಿನ ಹೆಬ್ಬೆರಳಿನಿಂದ ಒದೆಯಬೇಕು. ಕೆಲವೊಮ್ಮೆ ಹೆಂಗಸರು ಮುಖವಾಡ ಧರಿಸಿದ ಕೋಡಂಗಿಗಳೊಂದಿಗೆ ಪಂದ್ಯ ಓಡುವುದೂ ಉಂಟು. ಹೇಗೇ ಆದರೂ ಹೆಂಗಸರೇ ಗೆಲ್ಲಬೇಕು. ಇಲ್ಲವಾದರೆ ಪಂದ್ಯ ನಿಷ್ಪ್ರಯೋಜಕ. ಇದೇ ಉದ್ದೇಶಕ್ಕಾಗಿ, ಇದೇ ರೀತಿ ಪಂದ್ಯಗಳಲ್ಲಿ ಓಡಿದಾಗ, ಪುರಾತನ ಪೆರುವಿನಲ್ಲಿ ಪ್ರತಿ ಗಂಡಸೂ ಬೆತ್ತಲೆಯಾಗಿದ್ದು, ತಾನು ಹಿಂದೆಬೀಳಿಸಿದ ಹೆಂಗಸನ್ನು ಭಂಗಗೊಳಿಸುತ್ತಿದ್ದನು. ಜುನಿಗಳಲ್ಲೂ, ಪೆರುವಿನಲ್ಲೂ ಸಂಕೇತಗೊಂಡಿರುವ ಕೋರಿಕೆ ಒಂದೇ. ಆದರೆ ಪೆರುವಿನ ಡಯೋನೀಶಿಯನ್ ಸಾಂಕೇತಿಕತೆ ಜುನಿಗಳಲ್ಲಿ ಅಪೊಲೋನಿಯನ್ ಮಾದರಿಯಲ್ಲಿ ಪುನರ್‌ರಚಿತವಾಗಿದೆ.

ಹೀಗಿದ್ದರೂ ಜುನಿಗಳಲ್ಲಿ ಸಹ ಫಲಪ್ರದತೆಯ ಉತ್ಸವಗಳಿಗೂ ಸ್ವಚ್ಛಂದಕ್ಕೂ ಇರುವ ನಂಟು ಸಂಪೂರ್ಣವಾಗಿ ಇಲ್ಲವಾಗಿಲ್ಲ. ಸಂಪ್ರದಾಯ ಬದ್ಧವಾದ ಮೊಲದ ಬೇಟೆ ಮತ್ತು ತಲೆಚಿಪ್ಪಿನ ನೃತ್ಯ, ಈ ಎರಡು ಸಂದರ್ಭಗಳಲ್ಲಿ ಸ್ವಚ್ಛಂದತೆಗೆ ಅವಕಾಶ ಎಷ್ಟರಮಟ್ಟಿಗೆ ಇದೆ ಎಂದರೆ, ಆಗ ಆ ರಾತ್ರಿಗಳಲ್ಲಿ ಗರ್ಭ ತಳೆದರೆ ಆ ಮಕ್ಕಳು ವಿಶೇಷವಾಗಿ ಕಸುವುಳ್ಳವರಾಗುವರು ಎಂದು ಹೇಳುತ್ತಾರೆ. ಆದರೆ 'ಹುಡುಗರು ಹೇಗೂ ಹುಡುಗರೇ' ಎಂಬ ಮನೋಭಾವದಿಂದ ಹುಡುಗಿಯರನ್ನು ಭದ್ರಪಡಿಸಿರುತ್ತಾರೆ. ಸಾಧಾರಣವಾಗಿ ಹುಡುಗಿಯರನ್ನು ಆ ವೇಳೆಗಳಲ್ಲಿ ಸಡಿಲ ಬಿಟ್ಟಿರುತ್ತಾರೆ. ಸ್ವೇಚ್ಛಾಚಾರವೂ ಇಲ್ಲ, ಅಥವಾ ಹುಚ್ಚು ಕಾಮಕೇಳಿಯ ಸೂಚನೆಯೂ ಇಲ್ಲ. ಇದಲ್ಲದೆ ಮಂಜು ಮತ್ತು ಶೀತ ಹವೆಯ ನಿಯಂತ್ರಣ ಪಡೆದಿರುವ ಔಷಧಗಂಟಿನ ಪಂಥವು ಹಿಂದೆ ಕೆಲವು ಆಚರಣೆಗಳನ್ನಿಟ್ಟುಕೊಂಡಿತ್ತಂತೆ. ಆಗ ಒಂದು ರಾತ್ರಿ ಗಂಟಿನ ಅರ್ಚಕಿಯರು ತಮ್ಮ ಪ್ರಿಯರನ್ನು ಆಹ್ವಾನಿಸಿ, ತಮ್ಮ ಜೊತೆಗಾರರಿಂದ ಗಂಟಿನ ಶೃಂಗಾರಕ್ಕಾಗಿ ಒಂದೊಂದು ಹೆಬ್ಬೆರಳುದ್ದದ ನೀಲ ಶಿಲೆಗಳನ್ನು ಸಂಗ್ರಹಿಸುತ್ತಿದ್ದರಂತೆ. ಈ ಆಚರಣೆ ಈಗ ರೂಢಿಯಲ್ಲಿಲ್ಲ. ಎಷ್ಟು ಮಟ್ಟಿಗೆ ಸ್ವಚ್ಛಂದತೆಗೆ ಅನುಮತಿಯಿತ್ತು ಎಂಬುದನ್ನು ಹೇಳುವುದು ಸಹ ಅಸಾಧ್ಯ.

ಪ್ಯೆಬ್ಲೋಗಳಲ್ಲಿ ಲೈಂಗಿಕ ಲಕ್ಷಣಗಳ ಅರಿವು ಕಡಮೆ. ಜುನಿಗಳ ಮಟ್ಟಿಗೆ

ಹೇಳುವುದಾದರೆ, ಅವರಿಗೆ ವಾಸ್ತವವಾಗಿ ಅದರತ್ತ ಗಮನ ಅಲ್ಪ. ನಮ್ಮ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಮಗೆ ಪರಿಚಯವಿರುವಂತೆಯೇ ಅವರಲ್ಲಿಯೂ ಲೈಂಗಿಕ ಸಾಂಕೇತಿಕತೆಯನ್ನು ವಿವರಿಸುವ ಬೇರೊಂದು ಪ್ರವೃತ್ತಿಯಿದೆ. ಹೋಪಿಗಳು ಸತತವಾಗಿ ಖಚಿತ ಲೈಂಗಿಕ ಸಾಂಕೇತಿಕತೆಯಾಗಿ ಬಳಸುವ ಚಕ್ರ ಮತ್ತು ಉರುಳೆಗಳು, ಮಳೆ ಬಿದ್ದಾಗ ಕೊಚ್ಚಿಹೋದ ಜಾಗಗಳಲ್ಲಿ ಉಂಟಾಗುವ ಮಣ್ಣಿನ ಉರುಳೆಗಳ ಪ್ರತೀಕ ಎಂದು ಹೇಳುತ್ತಾರೆ. ಹೊಟ್ಟಿನ ಗಂಟಿಗೆ ಬಾಣ ಹೊಡೆಯುವುದು ಜೋಳದ ಹೊಲಕ್ಕೆ ಸಿಡಿಲು ಹೊಡೆಯುವುದರ ಸಂಕೇತ ಎನ್ನುತ್ತಾರೆ. ಅತ್ಯಂತ ಪ್ರಾಮಾಣಿಕ ವರದಿಗಾರರು ನೀಡುವ ವಿವರಣೆಗಳಲ್ಲಿ ಸಹ ಇದಕ್ಕಿಂತ ಅತಿರೇಕದ ವಿವರಣೆಗಳು ದೊರೆಯುತ್ತವೆ. ಇದು ಅವರಿಗೇ ಅರಿವಿಲ್ಲದ ಸಮರ್ಥನೆಯಾಗಿದ್ದು ಅದನ್ನು ಅಸಂಬದ್ಧತೆಯ ಮಟ್ಟಕ್ಕೆ ಒಯ್ಯುತ್ತಾರೆ.

ಈ ಬಗೆಯ ಸಮರ್ಥನೆಯಿಂದ ಜಗತ್ತಿನ ಆರಂಭವು ಲೈಂಗಿಕ ಕ್ರಿಯೆಯಿಂದಾದದ್ದು ಎಂಬ ವಿಶ್ವ ಸೃಷ್ಟಿ ಕತೆಗಳು ಗುರುತಿಲ್ಲದಂತೆ ಅಳಿಸಿಹೋಗಿವೆ. ಈಗ್ಗೆ ಐವತ್ತು ವರ್ಷಗಳ ಹಿಂದೆ ಸಹ, ಮೂಲತಃ ನೈಋತ್ಯ ಭಾಗದ ಪ್ವೆಬ್ಲೋಯೇತರ ಬಣಗಳಲ್ಲೊಂದಾದ ಯುಮಾನ್ ಬಣದ ಮೂಲಭೂತ ವಿಶ್ವಸೃಷ್ಟಿ ಕಲ್ಪನೆಯಾಗಿದ್ದು, ಸುತ್ತುಮುತ್ತಲೆಲ್ಲಾ ಹರಡಿದ್ದ ಈ ಕತೆಗೆ ಜುನಿಗಳು ಸಹ ಮನ್ನಣೆ ನೀಡುತ್ತಿದ್ದುದನ್ನು ಕುಷಿಂಗ್ ನಿರೂಪಿಸಿದ್ದಾರೆ. ಸೂರ್ಯ ಭೂಮಿಯೊಂದಿಗೆ ಸಂಭೋಗ ಮಾಡಿದ. ಆಕೆಯ ಗರ್ಭದಿಂದ ಮನುಷ್ಯರು, ಮನುಷ್ಯರು ಬಳಸುವ ನಿರ್ಜೀವ ವಸ್ತುಗಳು, ಪ್ರಾಣಿಗಳು ಉತ್ಪತ್ತಿಯಾದವು. ಕುಷಿಂಗರ ನಂತರ ಬೇರೆ ಬೇರೆ ಸಂಘಗಳು ಬೇರೆ ಬೇರೆ ಪುರೋಹಿತ ಪಂಥಗಳು ಹಾಗೂ ಸಾಧಾರಣ ಜನರಿಂದ ಸೃಷ್ಟಿ ಆರಂಭದ ಕತೆಗಳನ್ನು ಸಂಗ್ರಹಿಸಲಾಗಿದೆ. ಈಗಲೂ ಅವರು ನಾಲ್ಕನೆಯ ಅಧೋಲೋಕದಲ್ಲಿ ಜೀವ ಹುಟ್ಟಿತು ಎಂದು ಹೇಳಿದರೂ, ಅದನ್ನು ಭೂಮಿಯ ಗರ್ಭವೆಂದಾಗಲಿ, ಆಕಾಶ ಪಿತೃವಿನಿಂದ ಅಲ್ಲಿ ಜೀವ ಪ್ರಚೋದನೆಯಾಯಿತೆಂದಾಗಲಿ ಒಪ್ಪಿಕೊಳ್ಳುವುದಿಲ್ಲ. ಅವರ ಕಲ್ಪನೆ ಆ ದಿಶೆಯಲ್ಲಿ ಸಾಗಿಲ್ಲ.

ಜುನಿಗಳು ಲೈಂಗಿಕ ಸುಖದತ್ತ ತಳೆದಿರುವ ಮನೋಭಾವವು, ನಮ್ಮ ನಾಗರಿಕತೆಗಳಲ್ಲಿ ಪ್ಯೂರಿಟನ್ (ಧರ್ಮಶುದ್ಧ) ಎಂದು ಹೇಳುವ ಮನೋಭಾವದ ಕೆಲವು ಆದರ್ಶಗಳೊಂದಿಗೆ ಸಾದೃಶ್ಯವಾಗಿದೆ. ಆದರೆ ಸಾದೃಶ್ಯತೆಯಷ್ಟೇ ವಿಭಿನ್ನತೆಯೂ ಸ್ಫುಟವಾಗಿದೆ. ಲೈಂಗಿಕ ಸುಖದತ್ತ ಪ್ಯೂರಿಟನ್ ಮನೋಭಾವವು ಅದು ಪಾಪವೆಂದು ಗಣಿಸಿರುವುದರಿಂದ ಉಗಮಗೊಂಡದು. ಜುನಿಗಳಲ್ಲಾದರೋ ಪಾಪದ ಕಲ್ಪನೆಯೇ ಇಲ್ಲ. ಲೈಂಗಿಕ ಸುಖದಲ್ಲಿ ಮಾತ್ರವಲ್ಲ ಇತರ ಯಾವುದೇ ಜೀವನಾನುಭವದಲ್ಲಿ ಪಾಪ ಎಂಬುದರ ಪರಿವೆಯೇ ಅವರಿಗಿಲ್ಲ. ಅವರು ಕಳಂಕ ಸಂಕೀರ್ಣ

ಗಳಿಂದ ಪೀಡಿತರಲ್ಲ. ಅವರು ಲೈಂಗಿಕ ಸುಖವನ್ನು ದುಷ್ಪ್ರೇರಣೆಯ ಸರಣಿಯೆಂದೂ, ಇಚ್ಛಾಶಕ್ತಿಯ ಶ್ರಮಪೂರ್ವಕ ಪ್ರಯತ್ನಗಳಿಂದ ತಡೆಹಿಡಿಯಬೇಕಾದುದೆಂದೂ, ಭಾವಿಸಿಲ್ಲ. ಜಿತೇಂದ್ರಿಯತ್ವವು ಜೀವನದ ಒಂದು ಮಾರ್ಗ ಎಂಬುದನ್ನು ಅವರು ಬಹಳವಾಗಿ ತಿರಸ್ಕರಿಸುತ್ತಾರೆ. ತಮ್ಮ ಯೌವನದಲ್ಲಿ ಮದುವೆಯಿಂದ ವಿಮುಖ ರಾಗುವ ಗರ್ವಿಷ್ಠ ಹುಡುಗಿಯರನ್ನು ಅಲ್ಲಗಳೆಯುವಷ್ಟರವರೆಗೆ, ಅವರ ಜಾನ ಪದ ಕತೆಗಳು ಬೇರಾರನ್ನೂ ಅಲ್ಲಗಳೆಯುವುದಿಲ್ಲ. ಅವರು ಮನೆಯೊಳಗೆ ಕೆಲಸ ದಲ್ಲಿ ಮಗ್ನರಾಗಿದ್ದು, ತಮ್ಮನ್ನು ತರುಣರು ಮೆಚ್ಚಿಕೊಳ್ಳುವಂತಹ ಅವಕಾಶಗಳನ್ನು ತಪ್ಪಿಸಿಕೊಳ್ಳುತ್ತಾರೆ. ಆದರೆ ದೇವತೆಗಳು ಪ್ಯೂರಿಟನ್ ನೀತಿ ನಿಯಮಗಳಲ್ಲಿ ಭಾವಿಸಿ ಕೊಳ್ಳುವಂತಹ ಕ್ರಮಗಳನ್ನು ಕೈಗೊಳ್ಳುವುದಿಲ್ಲ. ಅವರು ಹುಡುಗಿಯರ ಬಳಿಗೆ ಬಂದು ಅವರೊಂದಿಗೆ ಮಲಗಿ ಅವರಿಗೆ ಆನಂದ ಮತ್ತು ವಿನಯಗಳನ್ನು ಕಲಿಸುತ್ತಾರೆ. ಈ ಬಗೆಯ ಹಿತಕರವಾದ ಶಿಸ್ತಿನ ಕ್ರಮಗಳಿಂದ ಆ ಹುಡುಗಿಯ ಮದುವೆಯಾಗಿ, ಮಾನವರೊಂದಿಗೆ ಯೋಗ್ಯವಾದ ಸುಖವನ್ನು ಪಡೆಯುವಂತೆ ಮಾಡುತ್ತಾರೆ.

ಗಂಡಸರು ಮತ್ತು ಹೆಂಗಸರ ನಡುವಣ ಒಳ್ಳೆಯ ಸಂಬಂಧ, ಮನುಷ್ಯರಲ್ಲಿನ ಸಂತೋಷದಾಯಕ ಸಂಬಂಧಗಳ ಒಂದು ಮುಖ. ನಾವು ವಿಚಾರದಲ್ಲಿ ಮೂಲಭೂತ ವಾಗಿ ವ್ಯತ್ಯಾಸವೆಣಿಸುವಲ್ಲಿ, ಪ್ರಶಂಸಾತ್ಮಕ ಭಾವವು, ಎಲ್ಲರೂ ಅವನನ್ನು ಇಷ್ಟ ಪಡುತ್ತಾರೆ, ಅವನು ಸದಾ ಹೆಂಗಸರೊಂದಿಗೆ ಪ್ರಣಯ ಪ್ರಸಂಗದಲ್ಲಿ ತೊಡಗಿರು ತ್ತಾನೆ ಎಂದೋ ಅಥವಾ ಅವನನ್ನು ಯಾರೂ ಇಷ್ಟಪಡುವುದಿಲ್ಲ, ಅವನಿಗೆ ಹೆಂಗಸ ರಿಂದ ತೊಂದರೆ ಇಲ್ಲ, ಎಂದೋ ವ್ಯಕ್ತಗೊಳ್ಳುತ್ತದೆ. ಸಂತೋಷ ಜೀವನದಲ್ಲಿ ಲೈಂಗಿಕ ಸುಖವೂ ಒಂದು ಪ್ರಸಂಗ.

ಅವರ ವಿಶಿಷ್ಟವಾದ ಸಮಂಜಸ ಭಾವವನ್ನು ವ್ಯಕ್ತಪಡಿಸುವುದು ಇನ್ನೊಂದು ರೀತಿ. ತಮ್ಮ ವಿಶ್ವ ಶಾಸ್ತ್ರೀಯ ಭಾವನೆಗಳಿಗೆ ಅನುಸಾರವಾಗಿ ಅವರು ಈ ಪ್ರಪಂಚ ದಲ್ಲಿ ಉದ್ವೇಗ, ಸಂಘರ್ಷ, ಆಪತ್ತುಗಳಿಂದ ಹೊರತಾದ ಸಂಸ್ಥೆಗಳನ್ನು ರೂಪಿಸಿರುವಂತೆ ಅದೇ ಭಾವನೆಗಳನ್ನು ಪರಲೋಕದ ಮೇಲೆ ಸಹ ಬೀರಿದ್ದಾರೆ. ಡಾ. ಬನ್ಸೆಲ್ ಅವರು ಹೇಳುವಂತೆ ದೇವತೆಗಳಿಗೆ ಮನುಷ್ಯನ ಮೇಲೆ ಯಾವ ದ್ವೇಷ ಭಾವವೂ ಇಲ್ಲ. ಅವರು ತಮ್ಮ ಅನುಗ್ರಹವನ್ನು ತಡೆಹಿಡಿಯಲು ಕಾರಣ, ಅವರ ವರವನ್ನು ಅರ್ಪಣೆ ಪ್ರಾರ್ಥನೆ ಮತ್ತು ಮಾಂತ್ರಿಕ ಸಾಧನೆಗಳಿಂದ ಪಡೆದು ಕೊಳ್ಳಬೇಕು ಎಂಬುದು. ಆದರೆ ಅದು ದುಷ್ಟ ಶಕ್ತಿಗಳನ್ನು ಶಮನ ಮಾಡಿದಂತಲ್ಲ. ಆ ಭಾವನೆ ಅವರಿಗೆ ಪರಕೀಯ. ತದ್ವಿರುದ್ಧವಾಗಿ ಅವರು ಮನುಷ್ಯರು ಇಷ್ಟಪಡುವುದನ್ನೇ ದೇವತೆಗಳೂ ಇಷ್ಟಪಡುತ್ತಾರೆಂದು ಭಾವಿಸುತ್ತಾರೆ. ಮನುಷ್ಯರು ನೃತ್ಯವನ್ನು ಇಷ್ಟಪಟ್ಟರೆ ದೇವತೆಗಳೂ ಇಷ್ಟಪಡುತ್ತಾರೆ, ಆದ್ದರಿಂದ ದೇವತೆಗಳ

ಮುಖವಾಡ ಧರಿಸಿ ಅವರನ್ನು ಜುನಿಯಲ್ಲಿ ನೃತ್ಯಮಾಡಲು ಕರೆತರುತ್ತಾರೆ. ಔಷಧ ಗಂಟುಗಳನ್ನು ಎತ್ತಿಟ್ಟು ಅವುಗಳಿಗೆ ನೃತ್ಯ ಸೇವೆ ಸಲ್ಲಿಸುತ್ತಾರೆ. ಇದರಿಂದ ಅವರಿಗೆ ಸಂತೃಪ್ತಿ. ಕಣದಲ್ಲಿರುವ ಧಾನ್ಯಕ್ಕೆ ಸಹ ನೃತ್ಯ ಸೇವೆ ಸಲ್ಲಬೇಕು. ಮಕರ ಸಂಕ್ರಮಣದ ಕಾಲದಲ್ಲಿ ಎಲ್ಲ ಸಂಸ್ಕಾರ ತಂಡಗಳೂ ತಮ್ಮ ತಮ್ಮ ಉತ್ಸವಗಳನ್ನಾಚರಿಸುತ್ತಿರುವಾಗ, ಮನೆಗಳ ಯಜಮಾನರು ಕುಂದಿಲ್ಲದ ಆರು ಜೋಳದ ತೆನೆಗಳನ್ನು ತೆಗೆದು ಗೂಡೆಯಲ್ಲಿಟ್ಟು ಹಿಡಿದು ಹಾಡುತ್ತಾರೆ. ಇದನ್ನು 'ಜೋಳದ ನೃತ್ಯಸೇವೆ' ಎಂದು ಕರೆಯುತ್ತಾರೆ, ಉತ್ಸವಗಳ ಕಾಲವಲ್ಲಿ ತನ್ನನ್ನು ನಿರ್ಲಕ್ಷಿಸಿದರೆಂದು ಜೋಳವು ಭಾವಿಸದಿರಲೆಂದು ಈ ಸೇವೆ. ಹೀಗೆಯೇ ಈಗ ನಿಂತು ಹೋಗಿರುವ ಜೋಳದ ದೊಡ್ಡ ಕುಣಿತವೂ ಸಹ ಜೋಳದ ತೆನೆಗಳೊಂದಿಗೆ ಅವರು ಸಹ ಭಾಗಿಗಳಾಗುತ್ತಲಿದ್ದ ಆನಂದಾನುಭವದಲ್ಲಿ ಕೊನೆಗೊಳ್ಳುತ್ತಿತ್ತು.

ನಾವು ಭಾವಿಸಿರುವಂತೆ ಅವರು ಈ ವಿಶ್ವವನ್ನು ಒಳ್ಳೆಯದು ಮತ್ತು ಕೆಟ್ಟುದರ ನಡುವಿನ ಘರ್ಷಣೆಯೆಂದು ಭಾವಿಸಿಲ್ಲ. ಅವರು ದ್ವೈತವಾದಿಗಳಲ್ಲ. ಐರೋಪ್ಯರ ಮಾಟಗಾರಿಕೆಯ ಭಾವನೆಯು ಪ್ವೆಬ್ಲೋಗಳಲ್ಲಿ ಪಳಗಿ ನೆಲೆಗೊಳ್ಳುವ ಸಲುವಾಗಿ ವಿಚಿತ್ರವಾದ ಮಾರ್ಪಾಡನ್ನು ಕಾಣಬೇಕಾಯಿತು. ಅವರಲ್ಲಿ ಮಾಟಗಾರಿಕೆಯು ಒಬ್ಬ ದಯಾಮಯನಾದ ದೇವರೆದುರಿಗೆ ಹೋರಾಟಕ್ಕೆ ನಿಂತಿರುವ ಸೈತಾನ ರಾಜನಿಂದ ಉಂಟಾದುದಲ್ಲ. ಅವರು ಅದನ್ನು ತಮ್ಮ ವ್ಯವಸ್ಥೆಗೆ ಹೊಂದಿಸಿಕೊಂಡಿದ್ದಾರೆ. ಮಾಟಗಾರಿಕೆಯು ಶಕ್ತಿ ದೈವದಿಂದ ನೀಡಲ್ಪಟ್ಟುದರಿಂದ ಶಂಕೆಗೆ ಗುರಿಯಾಗಿಲ್ಲ; ಅದನ್ನು ಒಮ್ಮೆ ಪಡೆದರೆ ಅದನ್ನು ಬಿಸುವಂತಿಲ್ಲ, ಹಾಗೂ ಅದು ತನ್ನನ್ನು ಹಿಡಿದವರ ಮೇಲೆ 'ಸವಾರಿ' ಮಾಡುತ್ತದೆ, ಎಂಬ ಕಾರಣದಿಂದ ಶಂಕೆಗೆ ಗುರಿಯಾಗಿದೆ. ಬೇರೆ ಎಲ್ಲಬಗೆಯ ದೈವಿಕ ಶಕ್ತಿಗಳು ಅವಶ್ಯಕವಾದ ಸಂಧರ್ಭಕ್ಕೆ ಪಡೆಯ ಬಹುದಾದಂತಹವು. ಪ್ರಾರ್ಥನಾ ದಂಡಗಳನ್ನು ನೆಡುವುದರಿಂದ, ನಿಯಮ ನಿಷ್ಠೆಗಳನ್ನು ಪಾಲಿಸುವುದರಿಂದ ವ್ಯಕ್ತಿಯು ತಾನು ಪವಿತ್ರ ವಸ್ತುಗಳ ನಿರ್ವಹಣೆಯಲ್ಲಿ ಮಗ್ನನಾಗಿದ್ದೇನೆಂಬುದನ್ನು ತೋರಿಕೊಡುತ್ತಾನೆ. ಆ ಸಂದರ್ಭ ಕಳೆದ ನಂತರ ತನ್ನ ಸೋದರತ್ತೆಯರಲ್ಲಿಗೆ ಹೋಗಿ ತಲೆ ತೊಳೆಸಿಕೊಂಡರೆ ತೀರಿತು. ಅವನು ಮತ್ತೆ ಈ ಲೌಕಿಕ ಮಟ್ಟಕ್ಕೆ ಬಂದಂತೆ. ಹೀಗೆಯೇ ಒಬ್ಬ ಪುರೋಹಿತ ತನ್ನ ಶಕ್ತಿಯನ್ನು ಇನ್ನೊಬ್ಬ ಪುರೋಹಿತನಿಗೆ ಹಿಂತಿರುಗಿಸುತ್ತಾನೆ, ಅದರ ಅವಶ್ಯಕತೆ ಬೀಳುವವರೆಗೆ ಭದ್ರವಾಗಿರಲೆಂದು. ಮಧ್ಯ ಯುಗದಲ್ಲಿ ಶಾಪ ವಿಮೋಚನೆಯ ಕ್ರಮಗಳು ಸುಪರಿಚಿತವಾಗಿದ್ದ ರೀತಿಯಲ್ಲಿ ಪವಿತ್ರತೆಯನ್ನು ಕಳೆಯುವ ಭಾವನೆ ಮತ್ತು ತಂತ್ರಗಳೂ ಅವರಿಗೆ ಚೆನ್ನಾಗಿ ತಿಳಿದಿವೆ. ಆದರೆ ಪ್ವೆಬ್ಲೋ ಮಾಟಗಾರಿಕೆಯಲ್ಲಿ ಆ ಅಲೌಕಿಕ ಶಕ್ತಿಯಿಂದ ಬಿಡುಗಡೆ ಹೊಂದುವ ಯಾವ ತಂತ್ರಗಳೂ ಕಲ್ಪಿತ

ವಾಗಿಲ್ಲ. ಆ ಅಹಿತಕಾರಿ ಶಕ್ತಿಯನ್ನು ದೂರ ತಳ್ಳುವಂತಿಲ್ಲವಾದ್ದರಿಂದ **ಮಾಟಗಾ** ರಿಕೆಯು ಕೇಡು ಮತ್ತು ಅಪಾಯಕಾರಿ.

ನಾವು ವಿಶ್ವವನ್ನು ಕೆಟ್ಟುದು ಮತ್ತು ಒಳ್ಳೆಯದರ ನಡುವಣ ಒಂದು ಹೋರಾಟವಾಗಿ ರೂಪಿಸಿಕೊಂಡಿರುವುದನ್ನು ಒತ್ತಟ್ಟಿಗಿಟ್ಟು, ಅದನ್ನು ಪ್ಯೂಬ್ಲೋಗಳು ನೋಡುವಂತೆ ನೋಡುವುದು ದುಸ್ಸಾಧ್ಯ. ಅವರು ಋತುಗಳನ್ನಾಗಲಿ, ಮನುಷ್ಯನ ಬಾಳನ್ನಾಗಲಿ, ಜೀವನ್ಮರಣಗಳ ಒಂದು ಪಂದ್ಯಾಟದಂತೆ ನೋಡುವುದಿಲ್ಲ. ಜೀವವೂ ಸದಾ ಇದೆ; ಮರಣವೂ ನಮ್ಮೆದುರಿಗೆ ಸುರುಳಿ ಬಿಚ್ಚಿಕೊಳ್ಳುತ್ತದೆ. ಮಾನವನ ಜೀವನವೂ ಅಂತೆಯೇ. ಅವರ ಮನೋಭಾವದಲ್ಲಿ ಆತ್ಮಾರ್ಪಣೆಗೆಡೆಯಿಲ್ಲ; ಇಚ್ಛೆಯನ್ನು ಅದಕ್ಕಿಂತ ಬಲವಾದ ಒಂದು ಶಕ್ತಿಗೆ ಅಧೀನಗೊಳಿಸುವ ಮಾತಿಲ್ಲ. ಅದು ವಿಶ್ವದೊಂದಿಗೆ ಮಾನವನು ಒಂದಾಗಿರುವ ಭಾವನೆ ಮಾತ್ರ. ಅವರು ಪ್ರಾರ್ಥಿಸುವಾಗ ತಮ್ಮ ದೇವತೆಗಳನ್ನು ಕುರಿತು "ನಾವು ಒಂದೇ ವ್ಯಕ್ತಿಯಾಗೋಣ" ಎನ್ನುತ್ತಾರೆ. ಅವರು ತಮ್ಮ ದೇವತೆಗಳೊಂದಿಗೆ ಸಲಿಗೆಯ ಸಂಬಂಧ ತಳೆದು,

ನಿಮ್ಮ ದೇಶದ ಕೈ ಹಿಡಿದು
ನಿಮ್ಮ ಪ್ರಜೆಗಳ ಕೈ ಹಿಡಿದು
ನಮಗಾಗಿ ನೀವು ಶಾಂತರಾಗಿ ಕುಳ್ಳಿರಿ,
ನಾವು ಸದಾ
ಒಬ್ಬರಿಗೊಬ್ಬರು ಮಕ್ಕಳಂತೆ ಇರೋಣ.
ನನ್ನ ಮಗು (1)
ನನ್ನ ತಾಯಿ (1)
ನನ್ನ ಮಾತಿನ ಪ್ರಕಾರ
ಹಾಗೇ ಆಗಲಿ

ಎಂದು ಹೇಳುತ್ತಾರೆ. ತಮ್ಮ ದೇವತೆಗಳೊಂದಿಗೆ ಉಸಿರನ್ನು ಬದಲಾಯಿಸುವ ಪ್ರಸ್ತಾಪ ಮಾಡುತ್ತಾರೆ.

ಎಲ್ಲ ದಿಕ್ಕುಗಳಲ್ಲೂ ದೂರದೂರ,
ನನ್ನ ಪಿತೃಗಳಾದ ಜೀವದಾಯಿ ಪುರೋಹಿತ (2) ರಿದ್ದಾರೆನಗೆ,
ಅವರಿಂದ ಜೀವದಾಯಿ ಉಸಿರನ್ನು ಬೇಡುವೆ
ಅವರ ವೃದ್ಧಾಪ್ಯದ ಉಸಿರನು
ಅವರ ಜಲದ ಉಸಿರನು

(1) ಇಲ್ಲಿ ದೇವತೆಗಳನ್ನು ತಮ್ಮ ತಂದೆತಾಯಿಗಳೆಂದು ಸಂಬೋಧಿಸುವಂತೆಯೇ ಮಕ್ಕಳೆಂದೂ ಸಂಬೋಧಿಸಲಾಗಿದೆ.

(2) ದೈವಿಕ ಚೇತನಗಳು, ದೇವತೆಗಳು.

ಅವರ ಬೀಜದ ಉಸಿರನು
ಅವರ ಸಂಪತ್ತಿನ ಉಸಿರನು
ಅವರ ಸಂತಾನ ಶಕ್ತಿಯ ಉಸಿರನು
ಅವರ ಬಲಶಾಲಿ ಚೇತನದ ಉಸಿರನು
ಅವರ ಶಕ್ತಿಯ ಉಸಿರನು
ಅವರು ಪಡೆದಿರುವ ಎಲ್ಲ ರೀತಿಯ
ಒಳ್ಳೆಯ ಅದೃಷ್ಟದ ಉಸಿರನು
ಅವರ ಉಸಿರನ್ನು ಕೋರುತ್ತ
ಅವರ ಉಸಿರನು ನಮ್ಮ (3) ಬೆಚ್ಚನೆಯ ದೇಹಕ್ಕೆ ಸೆಳೆದುಕೊಳ್ಳುತ್ತ
ನಾವು ನಿಮ್ಮ (4) ಉಸಿರಿಗೆ ಕೂಡಿಸುವೆವು
ನಿಮ್ಮ ಪಿತೃಗಳ ಉಸಿರನ್ನು ಹೀನೈಸಬೇಡಿ
ನಿಮ್ಮ ದೇಹದೊಳಕ್ಕೆ ಸೆಳೆದುಕೊಳ್ಳಿ
ಅದರಿಂದ ನಾವು ಒಂದಾಗಿ ನಮ್ಮ ದಾರಿಯನ್ನು ಪೂರ್ಣಗೊಳಿಸು ವಂತಾಗಲಿ
ನನ್ನ ತಂದೆ ನಿನಗೆ ಜೀವವನ್ನನುಗ್ರಹಿಸಲಿ
ನಿನ್ನ ಮಾರ್ಗ ಕೈಗೂಡಲಿ

ದೇವತೆಗಳ ಉಸಿರು ಅವರ ಉಸಿರು ಎರಡೂ ಒಂದೇ. ಅವರ ಸಹಭಾಗಿತ್ವದಿಂದ ಎಲ್ಲ ಸಾಧನೆ.

ಮನುಷ್ಯನು ಇತರ ಮನುಷ್ಯರೊಂದಿಗೆ ಪಡೆದಿರುವ ಸಂಬಂಧದ ಜುನಿ ರೂಪಾಂತರದಂತೆಯೇ, ಮನುಷ್ಯನು ವಿಶ್ವದೊಂದಿಗೆ ಪಡೆದಿರುವ ಸಂಬಂಧದ ಜುನಿ ರೂಪಾಂತರದಲ್ಲಿಯೂ ಪರಾಕ್ರಮಾವೇಶಕ್ಕಾಗಲಿ, ಅಡೆತಡೆಗಳನ್ನು ಕಿತ್ತೊಗೆಯುವ ಮನುಷ್ಯ ಇಚ್ಛೆಗಾಗಲಿ ಎಡೆಯಿಲ್ಲ. ಅದರಲ್ಲಿ,

ಹೋರಾಡಿ, ಹೋರಾಡಿ, ಹೋರಾಡಿ
ಗೋಡೆಗೇ ಬೆನ್ನಾಗಿ ಮರಣ ಹೊಂದು

ವವರು ಹುತಾತ್ಮರಿಲ್ಲ. ಆದಕ್ಕೆ ಆದರವೇ ಆದ ಸದ್ಗುಣಗಳಿವೆ. ಅವು ಅಪೂರ್ವ ರೀತಿಯಲ್ಲಿ ಸುಸಂಗತವಾಗಿವೆ. ಅವಕ್ಕೆ ಹೊಂದದಂತಹುವನ್ನು ತಮ್ಮ ಜಗತ್ತಿನಿಂದ ಅವರು ಬಹಿಷ್ಕರಿಸಿದ್ದಾರೆ. ಅವರು ಉತ್ತರ ಅಮೆರಿಕದ ಸಣ್ಣದಾದರೂ

---

(3) ಮದ್ದುಗಾರ (ಚಿಕಿತ್ಸಕನ)
(4) ರೋಗಪೀಡಿತನ

ಬಹುಕಾಲದಿಂದ ಅಸ್ತಿತ್ವದಲ್ಲಿರುವ ಒಂದು ಸಾಂಸ್ಕೃತಿಕ ದ್ವೀಪದಲ್ಲಿ ಅಪೊಲೋನಿಯನ ವಿಶಿಷ್ಟ ಆಯ್ಕೆಯಾದ ನಿಯಮ ಬದ್ಧತೆಯಲ್ಲಿ ಆನಂದ, ಮಿತಿ ಮತ್ತು ಸ್ತಿಮಿತತೆಯ ದಾರಿಯೇ ಜೀವನದ ದಾರಿ ಎಂಬ ಸೂತ್ರಗಳಿಗನುಗುಣವಾದ ರೂಪವಿಶೇಷಗಳನ್ನು ತಳೆದಿರುವ ನಾಗರಿಕತೆಯೊಂದನ್ನು ನಿರ್ಮಿಸಿದ್ದಾರೆ.

ಅಧ್ಯಾಯ 5

ಡೋಬು

ಡೋಬು ದ್ವೀಪವು ಪೂರ್ವ ನ್ಯೂಗಿನಿಯ ದಕ್ಷಿಣ ತೀರದಿಂದ ಆಚೆಗೆ ಇರುವ ಡಿ ಎಂಟ್ರೆಕಾಸ್ಟೋ ದ್ವೀಪಸ್ತೋಮದಲ್ಲಿದೆ. ಡಾ. ಬ್ರೋನಿಸ್ಲಾ ಮ್ಯಾಲಿನೋವ್‌ಸ್ಕಿಯವರ ಹಲವು ಕೃತಿಗಳ ಮೂಲಕ ಪ್ರಸಿದ್ಧವಾಗಿರುವ ಈಶಾನ್ಯ ಮೆಲನೇಶಿಯಾ ಪ್ರದೇಶದ ಜನರಲ್ಲಿ ಅತ್ಯಂತ ದಕ್ಷಿಣಕ್ಕಿರುವವರಲ್ಲಿ ಡೋಬು ದ್ವೀಪವಾಸಿಗಳೂ ಒಬ್ಬರು. ಈ ಎರಡು ದ್ವೀಪಸ್ತೋಮಗಳೂ ಬಹಳ ಸಮೀಪದಲ್ಲಿದ್ದು ಡೋಬು ಜನ ಟ್ರೋಬ್ರಿಯಾಂಡಿಗೆ ವಾಣಿಜ್ಯಯಾತ್ರೆಗಳನ್ನು ಕೈಗೊಳ್ಳುತ್ತಾರೆ. ಆದರೆ ಅವರು ಬೇರೊಂದು ಸನ್ನಿವೇಶದ ಬೇರೊಂದು ಮನೋಭಾವದ ಜನ. ಟ್ರೋಬ್ರಿಯಾಂಡ್ ದ್ವೀಪಗಳು ತಗ್ಗಾಗಿ ಫಲವತ್ತಾಗಿದ್ದು ಸುಲಭವಾದ, ಸಮೃದ್ಧವಾದ ಜೀವನವನ್ನು ನಡೆಸಲು ಅವಕಾಶವಿದೆ. ಭೂಮಿ ಸಾರದಿಂದ ತುಂಬಿದೆ. ಶಾಂತವಾದ ಅಳಿವೆಗಳು ಮತ್ಸ್ಯಭರಿತವಾಗಿವೆ. ತದ್ವಿರುದ್ಧವಾಗಿ ಡೋಬುವನ್ ದ್ವೀಪಗಳು ಸಮುದ್ರದಿಂದ ತಲೆಯೆತ್ತಿರುವ ಜ್ವಾಲಾಮುಖಿ ಶಿಲಾ ಪ್ರದೇಶಗಳು. ಅಲ್ಲಿ ಇಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿಯಿದ್ದು, ಮೀನುಗಾರಿಕೆಗೂ ಅವಕಾಶಗಳು ಅಲ್ಪ. ದೊರೆಯಬಹುದಾದ ಸಂಪನ್ಮೂಲಗಳ ಮೇಲೆ ಜನರ ಒತ್ತಡ ಹೆಚ್ಚು. ಅಲ್ಲಿನ ಸಣ್ಣ ಗ್ರಾಮಗಳಲ್ಲಿನ ಜನಸಂಖ್ಯೆ ಅತ್ಯಂತ ಸಮೃದ್ಧ ದಿನಗಳಲ್ಲಿಯೂ ತಲಾ ಇಪ್ಪತ್ತೈದು ಇದ್ದು ಈಗ ಅದರ ಅರ್ಧಕ್ಕೆ ಇಳಿದಿದೆ. ಟ್ರೋಬ್ರಿಯಾಂಡಿನ ಅಧಿಕ ಜನಸಂಖ್ಯೆ ದೊಡ್ಡದಾದ, ನಿಕಟವಾಗಿ ವಾಸಿಸುವ ದೊಡ್ಡ ಸಮುದಾಯಗಳಲ್ಲಿ ಸುಲಭ ಜೀವನ ಸಾಗಿಸುತ್ತಾರೆ. ಕಾರ್ಮಿಕರನ್ನು ಭರ್ತಿಮಾಡಿಕೊಳ್ಳುವ ಶ್ವೇತವರ್ಣೀಯರಿಗೆ ಈ ಪ್ರದೇಶದಲ್ಲಿ ಡೋಬುವನರು ಸುಲಭವಾಗಿ ಸಿಗುತ್ತಾರೆ. ತಮ್ಮ ಸ್ವಂತ ಊರುಗಳಲ್ಲಿ ಎದುರಿಸಬೇಕಾದ ಹಸಿವಿನ ಭೀತಿಯಿಂದ ಅವರು ನಿಶ್ಚಿತಾವಧಿಯ ಕೂಲಿಗಾರರಾಗುವ ಕರಾರಿಗೆ ಸಮ್ಮತಿ

ನೀಡಲು ಸದಾ ಸಿದ್ಧರಾಗಿರುತ್ತಾರೆ. ಒರಟಾದ ಹಾಗೂ ಅಲ್ಪ ಪ್ರಮಾಣದ ಆಹಾರಕ್ಕೆ ಒಗ್ಗಿದ್ದು, ಕೂಲಿಗಾರರಾಗಿ ಅವರು ಪಡೆಯುವ ಅಲ್ಪ ಪಡಿತರ ಅವರಲ್ಲಿ ಯಾವುದೇ ದಂಗೆಗೆ ಆಸ್ಪದವೀಯುವುದಿಲ್ಲ.

ಸುತ್ತಮುತ್ತಣ ದ್ವೀಪಗಳಲ್ಲಿ ಡೋಬುವನರ ಪ್ರಖ್ಯಾತಿ ಅವರ ಈ ಬಡತನಕ್ಕೆ ಸಂಬಂಧಪಟ್ಟುದಲ್ಲ. ಅವರು ಅಪಾಯಕಾರಿ ಜನರೆಂದು ಪ್ರಖ್ಯಾತಿ ಪಡೆದಿದ್ದಾರೆ. ಅವರು ದುಷ್ಟ ಶಕ್ತಿಯುಳ್ಳ ಮಾಟಗಾರರು. ಯಾವ ವಿಶ್ವಾಸಘಾತಕ್ಕೂ ಹಿಂಜರಿಯದ ಯೋಧರೆಂದೂ ಪ್ರಖ್ಯಾತರು. ಈ ಪ್ರದೇಶದಲ್ಲಿ ಬೇರೆ ಹಲವು ಜನಾಂಗಗಳು ನರಮಾಂಸ ಭಕ್ಷಕರಲ್ಲ. ಆದರೆ ಒಂದೆರಡು ತಲೆಮಾರುಗಳ ಹಿಂದೆ, ಶ್ವೇತವರ್ಣೀಯರು ತಲೆಯಿಕ್ಕುವ ಮುನ್ನ ಡೋಬುವನರು ನರಮಾಂಸ ಭಕ್ಷಕರೂ ಕೂಡ ಆಗಿದ್ದರು. ನೆರೆ ಹೊರೆಯ ದ್ವೀಪಗಳಲ್ಲಿ ಅವರು ಭಯ ಹುಟ್ಟಿಸುವ ಹಾಗೂ ವಿಶ್ವಾಸಕ್ಕೆ ಅನರ್ಹರೂ ಅನಾಗರಿಕರೂ ಆಗಿ ಪರಿಗಣಿತರಾಗಿದ್ದಾರೆ.

ಡೋಬು ದ್ವೀಪದ ನೆರೆಹೊರೆಯ ದ್ವೀಪಗಳ ಜನರು ನೀಡಿರುವ ಈ ಗುಣಲಕ್ಷಣಗಳಿಗೆ ಡೋಬುವನರು ತಕ್ಕವರಾಗಿದ್ದಾರೆ. ಅವರು ಕಾನೂನು ಬಾಹಿರರು ಹಾಗೂ ವಿಶ್ವಾಸಘಾತಕರು. ಪ್ರತಿಯೊಬ್ಬನೂ ಇನ್ನೊಬ್ಬನ ಕತ್ತಿಗೆ ಕೈಹಾಕುತ್ತಿರುತ್ತಾನೆ, ಅಷ್ಟು ಪರಸ್ಪರ ವಿರೋಧಿಗಳು. ಟ್ರೋಬ್ರಿಯಾಂಡರಲ್ಲಿರುವಂತೆ ಗೌರವಾನ್ವಿತರಾದ ಮುಖ್ಯಸ್ಥರ ನೇತೃತ್ವದಲ್ಲಿ, ಶಾಂತಿಯನ್ನು ಪಾಲಿಸುತ್ತ, ಸರಕುಗಳು ಹಾಗೂ ಹಕ್ಕು ಬಾಧ್ಯತೆಗಳನ್ನು ನಿರಂತರವಾಗಿ ಪರಸ್ಪರವಾಗಿ ಕೈ ಬದಲಿಸಿಕೊಳ್ಳುತ್ತ ಸರಾಗವಾಗಿ ನಡೆಯುವ ವ್ಯವಸ್ಥೆ ಅವರಲ್ಲಿಲ್ಲ. ಡೋಬುವಿಗೆ ಮುಖ್ಯಸ್ಥರೆಂಬುವರಿಲ್ಲ; ರಾಜಕೀಯ ವ್ಯವಸ್ಥೆಯಿಲ್ಲ ; ನಿಷ್ಕೃಷ್ಟವಾಗಿ ನೋಡಿದರೆ ಶಾಸನಬದ್ಧ ಅಸ್ತಿತ್ವವಿಲ್ಲ. ರೂಸೋ ಹೇಳಿದಂತೆ ಡೋಬುವನರ ಈ ಜೀವನ ಸ್ಥಿತಿ 'ಅರಾಜಕತೆ' ಎಂದಾಗಲಿ ಸಾಮಾಜಿಕ ಒಡಂಬಡಿಕೆಗೆ ಇನ್ನೂ ಬಂಧಿತರಾಗದ ಸಹಜ ಮಾನವರು ಎನ್ನುವುದಾಗಲಿ ಇವಕ್ಕೆ ಕಾರಣವಲ್ಲ. ಡೋಬುಗಳ ಸಾಮಾಜಿಕ ವ್ಯವಸ್ಥೆಗಳು ವೈರ ಮತ್ತು ವಿಶ್ವಾಸಘಾತಕತನಕ್ಕೆ ಉತ್ತೇಜನ ನೀಡಿ, ಅವುಗಳನ್ನು ತಮ್ಮ ಸಮಾಜದಲ್ಲಿ ಮಾನ್ಯತೆ ಪಡೆದ ಸದ್ಗುಣಗಳನ್ನಾಗಿ ಮಾರ್ಪಡಿಸಿದೆ.

ಡೋಬುಗಳು 'ಅರಾಜಕತೆಯ' ಪರಿಸ್ಥಿತಿಯಲ್ಲಿದ್ದಾರೆ ಎಂಬುದು ಯಥಾರ್ಥವಲ್ಲ. ಡೋಬುವನ್ ಸಾಮಾಜಿಕ ವ್ಯವಸ್ಥೆಯು ಏಕಕೇಂದ್ರವುಳ್ಳ ಹಲವಾರು ವೃತ್ತಗಳಲ್ಲಿ ಅಳವಟ್ಟಿದೆ. ಅವುಗಳಲ್ಲಿ ಪ್ರತಿಯೊಂದರಲ್ಲೂ ಹಗೆತನದ ನಿರ್ದಿಷ್ಟವಾದ ಪಾರಂಪರಾಗತ ರೂಪಗಳಿಗೆ ಅವಕಾಶವುಂಟು. ಖಚಿತವಾಗಿ ಗೊತ್ತಾದ ಆ ಗುಂಪಿನೊಳಗೆ ಸಂಸ್ಕೃತಿಯಿಂದ ಮಾನ್ಯತೆ ಪಡೆದ ಹಗೆತನ ಸಾಧಿಸುವುದರ ಹೊರತು, ಯಾವನೂ ಕಾನೂನನ್ನು ತನ್ನ ಕೈವಶ ಮಾಡಿಕೊಳ್ಳುವುದಿಲ್ಲ. ಡೋಬುವನರ ಅತ್ಯಂತ ದೊಡ್ಡ

ಕಾರ್ಯಶೀಲ ಗುಂಪು ಎಂದರೆ ನಾಲ್ಕರಿಂದ ಇಪ್ಪತ್ತು ಹಳ್ಳಿಗಳನ್ನೊಳಗೊಂಡ ಒಂದು ಪ್ರದೇಶ. ಇದಕ್ಕೆ ಒಂದು ಹೆಸರಿರುತ್ತದೆ. ಇದು ಒಂದು ಯುದ್ಧ ಘಟಕ. ಅದೇ ಮಾದರಿಯ ಇತರ ಪ್ರದೇಶಗಳೊಂದಿಗೆ ಅದು ನಿರಂತರವಾಗಿ ಅಂತರರಾಷ್ಟ್ರೀಯ ಹಗೆತನದ ಗಂಭೀರ ಪರಿಸ್ಥಿತಿಯಲ್ಲಿರುತ್ತದೆ. ಶ್ವೇತವರ್ಣೀಯರ ಹತೋಟಿಗೆ ಒಳಪಡುವ ಮೊದಲು ಡೋಬುವನರು ಕೊಲ್ಲುವುದಕ್ಕೆ ಇಲ್ಲವೇ ಲೂಟಿ ಮಾಡುವುದಕ್ಕೆ ಹೊರತು ಇತರ ಕಾರ್ಯಗಳಿಗೆ ಪರಪ್ರದೇಶಗಳಿಗೆ ಕಾಲಿಕ್ಕುತ್ತಿರಲಿಲ್ಲ. ಆದರೂ ಒಂದು ವಿಚಾರದಲ್ಲಿ ಆ ಪ್ರದೇಶಗಳು ಪರಸ್ಪರ ಸೇವೆ ಪಡೆಯುತ್ತಿದ್ದುವು. ಸಾವು ಮತ್ತು ತೀವ್ರವಾದ ರೋಗದ ಸಂದರ್ಭಗಳಲ್ಲಿ ಅದಕ್ಕೆ ಹೊಣೆಗಾರರನ್ನು ಪತ್ತೆಹಚ್ಚಬೇಕಾದ ಆವಶ್ಯಕತೆಯೇರ್ಪಟ್ಟಾಗ, ಕಣಿ ಹೇಳುವವನನ್ನು ಶತ್ರು ಪ್ರದೇಶದಿಂದ ಕರೆತರುತ್ತಾರೆ. ಅದೇ ಪ್ರದೇಶಕ್ಕೆ ಸೇರಿದ ಕಣಿಗಾರನು ಅಪರಾಧಿಯನ್ನು ಪತ್ತೆ ಹಚ್ಚುವುದರಿಂದ ಒದಗಬಹುದಾದ ಆಪತ್ತುಗಳಿಗೆ ಗುರಿಯಾಗುವ ಸಂಭವವಿಲ್ಲ. ದೂರವು ಕಣಿಗಾರನಿಗೆ ರಕ್ಷಣೆ ನೀಡುತ್ತದೆ.

ನಿಜಕ್ಕೂ ಆಪತ್ತು ಆಯಾ ಪ್ರದೇಶದ ಒಳಗಡೆಯಲ್ಲಿಯೇ ಅತ್ಯಂತ ಹೆಚ್ಚಿನದಾಗಿರುತ್ತದೆ. ಒಂದೇ ತೀರ ಪ್ರದೇಶದಲ್ಲಿರುವ, ದಿನನಿತ್ಯದ ಕೆಲಸಗಳನ್ನು ಒಟ್ಟಾಗಿ ನಿರ್ವಹಿಸುವ ಮಂದಿ ತಾವೇ ಒಬ್ಬರಿಗೊಬ್ಬರು ದೈವಿಕವಾಗಿ ಹಾಗೂ ಕಾರ್ಯತಃ ಹಾನಿ ಮಾಡಿಕೊಳ್ಳುತ್ತಾರೆ. ಒಬ್ಬರು ಇನ್ನೊಬ್ಬರ ಫಸಲನ್ನು ನಾಶಮಾಡುತ್ತಾರೆ ; ಒಬ್ಬರು ಇನ್ನೊಬ್ಬರ ಆರ್ಥಿಕ ವಿನಿಮಯವನ್ನು ತಲೆಕೆಳಗು ಮಾಡುತ್ತಾರೆ : ಒಬ್ಬರು ಇನ್ನೊಬ್ಬರಿಗೆ ಮರಣ ಮತ್ತು ರೋಗಗಳನ್ನು ತರುತ್ತಾರೆ. ಪ್ರತಿಯೊಬ್ಬನೂ ಈ ಉದ್ದೇಶಗಳಿಗಾಗಿ ಮಾಟ ವಿದ್ಯೆಯನ್ನು ಪಡೆದಿರುತ್ತಾನೆ. ಎಲ್ಲ ಸಂದರ್ಭಗಳಲ್ಲೂ ಆತ ತನ್ನ ವಿದ್ಯೆಯನ್ನು ಬಳಸುತ್ತಾನೆ. ಒಂದು ಪ್ರದೇಶದೊಳಗಿನ ವ್ಯವಹಾರದಲ್ಲಿ ಮಾಟ ವಿದ್ಯೆಯಿಲ್ಲದೇ ಏನೂ ಸಾಗದು. ಆದರೆ ಅದರ ಪ್ರಭಾವವು ತನಗೆ ಪರಿಚಿತವಾದ ಹಳ್ಳಿಗಳ ಗುಂಪುಗಳ ಹೊರಗೆ ಸಾಗದೆಂದು ಅವರ ಭಾವನೆ. ಪ್ರತಿದಿನವೂ ತಾನು ಯಾರೊಂದಿಗೆ ಕೂಡಿ ಬಾಳುತ್ತಿರುವನೋ ಅವರೇ ಅವನ ವ್ಯವಹಾರಗಳಿಗೆ ಕಂಟಕ ತರುವ ಮಾಟಗಾತಿಯರು ಮತ್ತು ಮೋಡಿಗಾರರು.

ಇಂತಹ ಸ್ಥಳೀಯ ಗುಂಪಿನ, ನಡುವೆ. ಬೇರೆ ರೀತಿಯ ನಡೆವಳಿಕೆಯು ಕಡ್ಡಾಯವಾಗಿರುವ ಒಂದು ಒಳಗುಂಪಿದೆ. ಇಡೀ ಜೀವಮಾನ ಪರ್ಯಂತ ಈ ಗುಂಪಿನಿಂದ ಬೆಂಬಲವನ್ನು ನಿರೀಕ್ಷಿಸಬಹುದು. ಈ ಗುಂಪು ಕುಟುಂಬವಲ್ಲ. ಏಕೆಂದರೆ ಇದರಲ್ಲಿ ತಂದೆಯಾಗಲಿ, ಅವನ ಸಹೋದರ ಸಹೋದರಿಯರಾಗಲಿ, ವ್ಯಕ್ತಿಯ ಸ್ವಂತ ಮಕ್ಕಳಾಗಲಿ ಸೇರಿಲ್ಲ. ಇದು ತಾಯಿ ಕಡೆಯ ಶಾಶ್ವತವಾದ ಗುಂಪು. ಬದುಕಿರುವಾಗ ಇವರು ತಮ್ಮ ಸ್ವಂತ ಗ್ರಾಮದಲ್ಲಿ ತೋಟಗಳ ಮತ್ತು ಮನೆ ನಿವೇಶನಗಳ ಒಡೆತನ

ವನ್ನು ಒಟ್ಟಾಗಿ ಪಡೆದಿರುತ್ತಾರೆ. ಸತ್ತಾಗ ಪೂರ್ವೀಕರ ಭೂಮಿಯ ಒಂದು ಕೋಟಿ ನಿವೇಶನದಲ್ಲಿ ಸಮಾಧಿಯಾಗುತ್ತಾರೆ. ಪ್ರತಿಯೊಂದು ಗ್ರಾಮದ ಮಧ್ಯದಲ್ಲೂ, ಸೊಂಪಾಗಿ ಬೆಳೆದ ಕ್ರೋಟನ್ ಪೊದೆಗಳಿಂದ ಆವೃತವಾದ ಗ್ರಾಮದ ಶ್ಮಶಾನವಿರುತ್ತದೆ. ತಮ್ಮ ಜೀವಮಾನ ಕಾಲದಲ್ಲಿ ಆ ಗ್ರಾಮದ ಒಡೆಯರಾಗಿದ್ದ ತನ್ನ ತಾಯಿಯ ಕಡೆ ಸಂಬಂಧದ ಎಲ್ಲ ಗಂಡಸರೂ, ಹೆಂಗಸರೂ, ಈಗ ಅದೇ ಗ್ರಾಮದ ಮಧ್ಯೆ ಸಮಾಧಿಯಾಗಿರುತ್ತಾರೆ. ಅದರ ಸುತ್ತಲೂ ಅದೇ ತಾಯಿ ಕಡೆ ಸಂಬಂಧದ ಈಗ ಜೀವಂತರಾಗಿರುವವರೆಲ್ಲರ ಮನೆಗಳು ದಿಬ್ಬಗಳ ಮೇಲೆ ಗುಂಪು ಗುಂಪಾಗಿರುತ್ತವೆ. ಈ ಗುಂಪಿನೊಳಗೆ ವಾರಸುದಾರಿಕೆ ಹರಿಯುತ್ತದೆ ; ಸಹಕಾರ ಜೀವಾತವಾಗಿರುತ್ತದೆ. ಈ ಗುಂಪನ್ನು ಸುಸು ಎಂದರೆ 'ತಾಯಿಯ ಹಾಲು' ಎಂದು ಕರೆಯುತ್ತಾರೆ. ಅದರಲ್ಲಿ ಹೆಣ್ಣು ಕಡೆಯ ಸಂತಾನ, ಅಂದರೆ ಒಡಹುಟ್ಟಿದ ಸಹೋದರರೇ ಮೊದಲಾದವರು ಸೇರುತ್ತಾರೆ. ಆದರೆ ಈ ಸಹೋದರರ ಮಕ್ಕಳು ಅದರಲ್ಲಿ ಸೇರಿಲ್ಲ. ಅವರುಗಳು ಅವರ ತಾಯಿಯ ಹಳ್ಳಿಗೆ ಸೇರಿದವರು. ಆ ಹಳ್ಳಿಗೂ ಈ ಹಳ್ಳಿಗೂ ಸಾಧಾರಣವಾಗಿ ಹಗೆತನವೇ ಪ್ರಧಾನ.

ಸುಸು ತನ್ನ ಸ್ವಂತ ಗ್ರಾಮದಲ್ಲಿ, ಕೆಲವೊಮ್ಮೆ ಹತ್ತಿರದ ಬಂಧುತ್ವವುಳ್ಳ ಇನ್ನೊಂದು ಸುಸುವಿನೊಂದಿಗೆ ವಾಸಿಸುತ್ತದೆ. ಗ್ರಾಮದ ಗೋಪ್ಯತೆಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಡೋಬುಗಳಲ್ಲಿ ಮನಬಂದಂತೆ ಬಂದು ಹೋಗುವಂತಿಲ್ಲ. ಗ್ರಾಮದ ಸುತ್ತಲೂ ಹೊರ ವಲಯದಲ್ಲಿ ಒಂದು ದಾರಿಯಿರುತ್ತದೆ. ಅಲ್ಲಿಯವರೆಗೆ ಬರುವ ಹಕ್ಕುಳ್ಳವರು ಈ ದಾರಿಯಿಂದ ಸುತ್ತು ಬಳಸಿ ಗ್ರಾಮವನ್ನು ಸಮೀಪಿಸುತ್ತಾರೆ. ತಮ್ಮ ತಂದೆ ತೀರಿ ಹೋದ ಮೇಲೆ, ಆ ಗ್ರಾಮದ ಗಂಡಸರ ಮಕ್ಕಳಿಗೆ ಸಹ ಅಷ್ಟು ಹತ್ತಿರ ಬರುವ ಹಕ್ಕು ಇರುವುದಿಲ್ಲ ಎಂಬುದನ್ನು ಮುಂದೆ ನೋಡಲಿದ್ದೇವೆ. ತಮ್ಮ ತಂದೆ ಬದುಕಿದ್ದರೆ ಅಥವಾ ಅದು ತಮ್ಮ ಪತಿ ಇಲ್ಲವೇ ಪತ್ನಿಯ ಗ್ರಾಮವಾದರೆ ಆಹ್ವಾನದ ಮೇಲೆ ಬರಬಹುದು, ಉಳಿದವರೆಲ್ಲಾ ಆ ಹಾದಿಯಲ್ಲಿ ನಡೆದು ಹೋಗಬಹುದು. ಅಷ್ಟೆ. ಅವರು ನಿಲ್ಲಬಾರದು. ಮೃತ ಸಂಬಂಧವಾದ ಉತ್ಸವಗಳಾಗಲಿ, ಸುಗ್ಗಿ ಹಬ್ಬಗಳಾಗಲಿ, ಬಣದ ದೀಕ್ಷಾ ಸಂಸ್ಕಾರಗಳಾಗಲಿ ಜನರನ್ನು ಅನಿರ್ಬಂಧಿತವಾಗಿ ಒಂದೆಡೆ ಕೂಡಿಸುವುದಿಲ್ಲ. ಡೋಬುಗಳು ಅಂತಹ ಸಮಾರಂಭಗಳಲ್ಲಿ ವಿಶೇಷಜ್ಞರಲ್ಲ. ಟ್ರೋಬ್ರಿಯಾಂಡರ ಗ್ರಾಮದ ನಡುವೆ ಸಮುದಾಯದ ನೃತ್ಯದ ಅಂಗಳವಿರುವ ಜಾಗದಲ್ಲಿ ಇವರ ಶ್ಮಶಾನವಿರುತ್ತದೆ. ಅಪರಿಚಿತ ಪ್ರದೇಶಗಳಲ್ಲಿ ಕಾದಿರುವ ಆಪತ್ತುಗಳ ಪರಿಚಯ ಸಾಕಷ್ಟು ಇರುವುದರಿಂದ ಡೋಬುವನರು ಸಾಮಾಜಿಕ ಅಥವಾ ಧಾರ್ಮಿಕ ಸಮಾರಂಭಗಳಿಗಾಗಿ ದೂರ ಹೋಗುವುದಿಲ್ಲ. ಈರ್ಷ್ಯಾಪರನಾದ ಮಾಟಗಾರನಿಂದ ಒದಗಬಹುದಾದ ಆಪತ್ತುಗಳ ಪರಿಚಯ

ಸಾಕಷ್ಟು ಇರುವುದರಿಂದ ತಮ್ಮ ಸುಭದ್ರ ಕೋಟೆಯೊಳಕ್ಕೆ ಅಪರಿಚಯಸ್ಥರನ್ನು ಬರಗೊಡುವುದಿಲ್ಲ.

ಆದರೆ ಮದುವೆ ಮಾತ್ರ ಈ ವಿಶ್ವಸನೀಯ ವೃತ್ತದಿಂದ ಹೊರಗಿನವರೊಂದಿಗೇ ಆಗಬೇಕು. ಅದು ಆ ಪ್ರದೇಶದೊಳಗೆ ಆಗುವಂತಹುದಾಗಿ, ವೈರತ್ವದ ಪರಾಕಾಷ್ಠೆಯಲ್ಲಿರುವ ಎರಡು ಹಳ್ಳಿಗಳ ನಡುವೆ ಸಂಬಂಧ ಕಲ್ಪಿಸುತ್ತದೆ. ಮದುವೆ ಈ ದ್ವೇಷದಲ್ಲಿ ಸಂಧಾರಣೆಯೇನನ್ನೂ ಉಂಟುಮಾಡುವುದಿಲ್ಲ. ಆರಂಭದಿಂದಲೇ ವಿವಾಹವನ್ನು ಬಳಸಿಕೊಂಡಿರುವ ಸಂಸ್ಥೆಗಳು ಎರಡೂ ಗುಂಪುಗಳ ನಡುವೆ ಘರ್ಷಣೆ, ಕಹಿಭಾವಗಳಿಗೆ ಅವಕಾಶ ಮಾಡಿಕೊಡುತ್ತವೆ. ಅತ್ತೆಯ ಒಂದು ದ್ವೇಷಪೂರಿತ ಕಾರ್ಯದಿಂದಲೇ ಮದುವೆ ತೊಡಗುವುದು. ತನ್ನ ಮಗಳೊಂದಿಗೆ ಯುವಕನು ಮಲಗಿರುವ ತನ್ನ ಮನೆಯ ಬಾಗಿಲಿಗೆ ಆಕೆ ತಾನೇ ಅಡ್ಡಲಾಗಿ ನಿಂತು, ನಿಶ್ಚಿತಾರ್ಥದ ಸಾರ್ವಜನಿಕ ಸಮಾರಂಭಕ್ಕಾಗಿ ಅವನನ್ನು ಹಿಡಿದುಹಾಕುತ್ತಾಳೆ. ಇದಕ್ಕೆ ಮೊದಲು ತಾನು ಯುಕ್ತ ವಯಸ್ಕನಾದಾಗಿನಿಂದ ಆ ಯುವಕ ಪ್ರತಿರಾತ್ರಿಯೂ ಅವಿವಾಹಿತ ಕನ್ಯೆಯರ ಮನೆಗಳಲ್ಲಿ ಮಲಗಿ ಕಳೆದಿರುತ್ತಾನೆ. ಸಂಪ್ರದಾಯದ ಪ್ರಕಾರ ಅವನು ಮನೆಬಾಗಿಲು ಅವನಿಗೆ ಮುಚ್ಚಿರುತ್ತದೆ. ಹಲವು ವರ್ಷಗಳ ಕಾಲ ಅವನು ತನ್ನ ಒಲವನ್ನು ಬಹುಜನಗಳಲ್ಲಿ ಹಂಚಿ, ಬೆಳಕು ಹರಿಯುವ ಮೊದಲೇ ಜಾರಿಕೊಂಡು, ಸಿಕ್ಕಿ ಬೀಳುವುದನ್ನು ತಪ್ಪಿಸಿಕೊಂಡಿರುತ್ತಾನೆ. ಕಡೆಗೆ ಅವನು ಸಿಕ್ಕಿ ಬಿದ್ದನೆಂದರೆ ಅವನಿಗೂ ಅಲೆದು ಬೇಸರವಾಗಿ, ಸ್ಥಿರವಾದ ಸಂಗಾತಿಯೊಬ್ಬಳನ್ನು ಪಡೆಯಲು ನಿರ್ಧರಿಸಿಕೊಂಡಿರುವನೆಂದೇ ಅರ್ಥ. ಆದರಿಂದ ಬೇಗ ಏಳುವುದನ್ನು ಕ್ರಮೇಣ ಅಲಕ್ಷಿಸುತ್ತಾನೆ. ಆದರೂ ವಿವಾಹದ ಅಪಮಾನಕ್ಕೆ ಅವನು ಸಿದ್ಧನಾಗಿಲ್ಲವೆಂದು ತಿಳಿದು. ಅವನ ಭಾವಿ ಅತ್ತೆಯಾದ ಮುದಿಮಾಟಗಾತಿ ಮದುವೆಯನ್ನು ಅವನ ಮೇಲೆ ಹೇರುತ್ತಾಳೆ. ಆ ಮುದುಕಿ ತನ್ನ ಮನೆ ಬಾಗಿಲಲ್ಲಿ ಅಲ್ಲಾಡದೆ ನಿಂತಿರುವುದನ್ನು ಕಂಡು, ಆ ಹುಡುಗಿಯ ತಾಯಿಯ ಕಡೆಯ ನೆಂಟರಾದ ಗ್ರಾಮಸ್ಥರೆಲ್ಲಾ ಅಲ್ಲಿ ಕೂಡುತ್ತಾರೆ. ಆಗ ಆ ಸಾರ್ವಜನಿಕವಾದ ಬಿರುನೋಟಕ್ಕೆ ಗುರಿಯಾಗಿ ಗಂಡು, ಹೆಣ್ಣು ಹೊರಬಂದು ನೆಲದ ಮೇಲೆ ಹಾಸಿರುವ ಒಂದು ಚಾಪೆಯ ಮೇಲೆ ಕುಳಿತುಕೊಳ್ಳುತ್ತಾರೆ. ಗ್ರಾಮಸ್ಥರು ಅರ್ಧ ಗಂಟೆ ಕಾಲ ಅವರ ಮೇಲೆ ಬಿರುಗಣ್ಣಿನ ನೋಟ ಬೀರಿ, ಚದುರಿ ಹೋಗುತ್ತಾರೆ. ಮತ್ತೇನೂ ನಡೆಯುವುದಿಲ್ಲ. ಅಲ್ಲಿಗೆ ಆ ಜೋಡಿಗೆ ವಿಧಿವಿಹಿತವಾದ ನಿಶ್ಚಿತಾರ್ಥವಾದಂತೆ.

ಅಲ್ಲಿಂದ ಮುಂದೆ ಆ ಯುವಕನು ತನ್ನ ಹೆಂಡತಿಯ ಗ್ರಾಮವನ್ನೂ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಆದರೆ ಮೊದಲ ಬೇಡಿಕೆ ಅವನ ದುಡಿಮೆಯ ಮೇಲೆ. ಕೂಡಲೇ ಅವನ ಅತ್ತೆ ಅವನ ಕೈಗೆ ಒಂದು ಹಾರೆಕೋಲನ್ನು ಕೊಟ್ಟು 'ಹೂಂ, ಈಗ

ದುಡಿ' ಎಂದು ಆಜ್ಞಾಪಿಸುತ್ತಾಳೆ. ತನ್ನ ಅತ್ತೆ ಮಾವಂದಿರ ಕಣ್ಗಾವಲಿನಲ್ಲಿ ಅವನು ಒಂದು ತೋಟ ಮಾಡಬೇಕು. ಅವನು ಅವರೆದುರಿಗೆ ಊಟಮಾಡುವಂತಿಲ್ಲ. ಅವರು ಅಡಿಗೆ ಮಾಡಿ ಊಟ ಮಾಡುತ್ತಿರುವಾಗ ಅವನು ದುಡಿಯುತ್ತಿರಬೇಕು. ಅವನಿಗೆ ಎರಡು ಕೆಲಸಗಳು. ತನ್ನ ಮಾವನ ತೋಟದಲ್ಲಿ ದುಡಿದ ಮೇಲೆ ತನ್ನ ಕುಟುಂಬದ ಜಮೀನಿನಲ್ಲಿರುವ ತನ್ನ ಸ್ವಂತ ತೋಟವನ್ನೂ ಕೃಷಿ ಮಾಡಬೇಕು. ಅವನ ಮಾವನಿಗೆ ತನ್ನ ಅಧಿಕಾರ ಚಲಾವಣೆಯನ್ನು ತೋರಿಸಿ ತೃಪ್ತಿಗೊಳ್ಳಲು ಸದವಕಾಶವಿದು. ಅವನು ತನ್ನ ಅಳಿಯನ ಮೇಲಿನ ಅಧಿಕಾರದಿಂದ ಬಹಳ ಸಂತೋಷಗೊಳ್ಳುತ್ತಾನೆ. ಹೀಗೆ ಒಂದು ವರ್ಷ ಸಾಗುತ್ತದೆ. ಈ ಮದುವೆ ಪ್ರಸಂಗದಲ್ಲಿ ಸಿಕ್ಕಿ ಕಟ್ಟುಬಿದ್ದವ ಆ ಯುವಕನೊಬ್ಬನೇ ಅಲ್ಲ; ಅವನ ಬಂಧುಗಳಿಗೂ ಹಂಗುಗಳ ಭಾರವಿದೆ. ಮದುವೆಯ ಕಾಣಿಕೆಗಾಗಿ ತೋಟದ ಉತ್ಪನ್ನಗಳು ಹಾಗೂ ಒಡವೆ ವಸ್ತುಗಳನ್ನು ಒದಗಿಸಬೇಕಾದ ದೊಡ್ಡ ಭಾರ ಅವನ ಸಹೋದರರದು. ಅವರ ಹೊರೆ ಎಷ್ಟೆಂದರೆ ಈಚೆಗೆ ನಿಶ್ಚಿತಾರ್ಥವಾದ ಯುವಕರ ಸಹೋದರರು ಅದರಿಂದ ಪಾರಾಗುವ ಸಲುವಾಗಿ ಕಾರ್ಮಿಕರನ್ನು ಭರ್ತಿ ಮಾಡಿಕೊಳ್ಳುವ ಬಿಳಿಯರಲ್ಲಿಗೆ ಹೋಗಿ ನಿಶ್ಚಿತ ಕಾಲಾವಧಿಯ ಕಾರ್ಮಿಕರಾಗುವ ಕರಾರಿಗೆ ರುಜು ಹಾಕುತ್ತಾರೆ.

ಮದುವೆಗೆ ಬೇಕಾದ ಒಡವೆ ವಸ್ತುಗಳನ್ನು ಸಂಗ್ರಹಿಸಿಕೊಂಡ ನಂತರ ವರನ ಕುಸುವಿನ ಸದಸ್ಯರು ಅವುಗಳನ್ನು ವಿಧಿವಿಹಿತವಾಗಿ ವಧುವಿನ ಗ್ರಾಮಕ್ಕೆ ಒಯ್ಯುತ್ತಾರೆ. ಈ ದಿಬ್ಬಣದಲ್ಲಿ ವರನ ಸಹೋದರ ಸಹೋದರಿಯರು, ತಾಯಿ ಮತ್ತು ಆಕೆಯ ಸಹೋದರಿಯರು ಇರುತ್ತಾರೆ. ಅದರಲ್ಲಿ ವರನ ತಂದೆ, ದಿಬ್ಬಣದಲ್ಲಿರುವವರ ಗಂಡಂದಿರ ಹೆಂಡತಿಯರು, ಗಂಡಸರ ಮಕ್ಕಳು ಸೇರಿರುವುದಿಲ್ಲ. ಅವರು ವಧುವಿನ ಸಂಸುವಿಗೆ ಕಾಣಿಕೆಗಳನ್ನು ನೀಡುತ್ತಾರೆ. ಆದರೆ ಎರಡು ಪಕ್ಷಗಳು ಮೈತ್ರಿಯುತವಾಗಿ ಒಂದುಗೂಡುವುದಿಲ್ಲ. ವಧುವಿನ ಪಕ್ಷದವರು ಇವರನ್ನು ತಮ್ಮ ಹಳ್ಳಿಯ ಆಚಿನ ಅಂಚಿನಲ್ಲಿ ನಿಂತು ಎದುರು ನೋಡುತ್ತಿರುತ್ತಾರೆ. ಎರಡು ಪಕ್ಷಗಳೂ ಇತರ ಗುಂಪಿನ ಇರುವಿಕೆಯನ್ನೇ ಲಕ್ಷ್ಯಕ್ಕೆ ತಂದುಕೊಳ್ಳದೆ ನಿಂತಿರುತ್ತಾರೆ. ಈ ಎರಡೂ ಕಡೆಯ ಗುಂಪುಗಳ ನಡುವೆ ವಿಶಾಲವಾದ ಜಾಗವಿರುತ್ತದೆ. ಇನ್ನೊಂದು ಪಕ್ಷವನ್ನು ಗಮನಿಸಿದರೆ ದ್ವೇಷಪೂರ್ಣ ಉಗ್ರ ದೃಷ್ಟಿಯನ್ನು ಬೀರುತ್ತಾರೆ.

ವಿವಾಹದ ಪ್ರತಿ ಹಂತದಲ್ಲೂ ಇದೇ ಬಗೆಯ ನಿಷ್ಠುರವಾದ ಔಪಚಾರಿಕತೆಯಿಂದ ಕಾರ್ಯ ಸಾಗುತ್ತದೆ. ವಧುವಿನ ಸುಸುವಿನವರು ವರನ ಗ್ರಾಮಕ್ಕೆ ಹೋಗಿ, ಅದನ್ನು ಪೂರಾ ಗುಡಿಸಬೇಕು. ಆಗ ಕಚ್ಚಾ ಆಹಾರದ ಕಾಣಿಕೆಯನ್ನು ಸಾಕಷ್ಟು ಪ್ರಮಾಣದಲ್ಲಿ ಒಯ್ಯಬೇಕು. ಆದರ ಮರುದಿನ ವರನ ಬಂಧುಗಳು ಮುಯ್ಯಿ ಕಾಣಿಕೆಯಾಗಿ ಗೆಣಸುಗಳನ್ನು ತೆಗೆದುಕೊಂಡು ಮತ್ತೆ ಬರುತ್ತಾರೆ. ವರನು ತನ್ನ ಅತ್ತೆಯಿಂದ

ಆಕೆಯೇ ಮಾಡಿದ ಅಡುಗೆಯ ಒಂದು ತುತ್ತನ್ನು ಅವಳ ಗ್ರಾಮದಲ್ಲಿ ಸ್ವೀಕರಿಸುವುದೇ ವಿವಾಹ ಸಮಾರಂಭ. ಇದೇ ರೀತಿ ವಧು ತನ್ನ ಗಂಡನ ಗ್ರಾಮದಲ್ಲಿ ತನ್ನ ಅತ್ತೆಯಿಂದ ಆಹಾರ ಸ್ವೀಕರಿಸುತ್ತಾಳೆ. ಒಟ್ಟಿಗೆ ಊಟ ಮಾಡುವುದು ಸಂಸ್ಥೀಕೃತವಾದ ಸಲಿಗೆಗಳಲ್ಲಿ ಒಂದಾಗಿರುವ ಸಮಾಜದಲ್ಲಿ ಈ ಸಂಸ್ಕಾರವು ಅತ್ಯಂತ ಸಮಂಜಸವಾದುದು.

ವಿವಾಹವು ಒಂದು ಹೊಸ ಗುಂಪನ್ನು ನಿರ್ಮಿಸುತ್ತದೆ. ಆ ಗುಂಪಿನಲ್ಲಿ ಸಲಿಗೆ ಮತ್ತು ಸಮಾನ ಹಿತಾಸಕ್ತಿಗಳಿಗೆ ಮಾನ್ಯತೆಯುಂಟು. ಡೋಬುಗಳು ತಮ್ಮ ವಿವಾಹ ಸಮಸ್ಯೆಗಳನ್ನು ಮದುವೆ ಸಂಬಂಧಗಳನ್ನು ಕಡೆಗಣಿಸಿ ಬಗೆಹರಿಸುವುದಿಲ್ಲ. ಆದರೆ ಡೋಬುಗಳಂತೆಯೇ ಪ್ರಬಲವಾದ ಮಾತೃ ಕುಲಗಳಿರುವಂತಹ ಡಚ್ ನ್ಯೂಗಿನಿಯ ಹಲವಾರು ಬಣಗಳು ಮದುವೆಯಿಂದೇಳುವ ಸಮಸ್ಯೆಗಳನ್ನು ಬಗೆಹರಿಸಲು ವಿವಾಹ ಸಂಬಂಧವನ್ನೇ ಅಲಕ್ಷಿಸಿವೆ. ಆ ಬಣಗಳಲ್ಲಿ ತಾಯಿಕಡೆ ಸಂಬಂಧಿಗಳೆಲ್ಲ ಒಟ್ಟಾಗಿ ಕೃಷಿಯಲ್ಲಿ ಸಹಕರಿಸಿ ಫಸಲು ತೆಗೆಯುತ್ತಾ, ಆರ್ಥಿಕ ವ್ಯವಹಾರಗಳಲ್ಲಿ ಒಂದಾಗಿ ಪಾಲ್ಗೊಳ್ಳುತ್ತಾ ಒಟ್ಟಾಗಿ ವಾಸಿಸುತ್ತಾರೆ. ಗಂಡಸರು ರಹಸ್ಯವಾಗಿ ರಾತ್ರಿಯಲ್ಲೋ ಇಲ್ಲವೇ ಹಗಲು ಸಮಯಗಳಲ್ಲಿ ಪೊದೆಗಾಡಿನಲ್ಲೋ ತಮ್ಮ ತಮ್ಮ ಹೆಂಡತಿಯರನ್ನು ಭೇಟಿ ಮಾಡುತ್ತಾರೆ. ಅವರು 'ಬೇಟೆಗಾರ ಗಂಡಂದಿರಾ'ಗಿದ್ದು ತಾಯಿಕಡೆ ಸಂಬಂಧದ ಸ್ವಪರಿಪೂರ್ಣತೆಯನ್ನು, ಯಾವುದೇ ರೀತಿಯಲ್ಲಿಯೂ ಏರುಪೇರುಗೊಳಿಸುವುದಿಲ್ಲ.

ಆದರೆ ಡೋಬುಗಳಲ್ಲಿಯಾದರೋ, ಗಂಡ ಮತ್ತು ಹೆಂಡತಿಯರಿಗೆ ಒಂದಾಗಿರಲು ಒಂದು ಕೋಣೆಯ ಮನೆಯನ್ನು ಒದಗಿಸುತ್ತಾರೆ. ಅವರ ಮನೆಯಲ್ಲಿ ಅವರ ಗೌಪ್ಯತೆಯನ್ನು ಆಸ್ಥೆಯಿಂದ ಸಂರಕ್ಷಿಸುತ್ತಾರೆ ದಂಪತಿಗಳು ತಮಗಾಗಿ ಮತ್ತು ತಮ್ಮ ಮಕ್ಕಳಿಗಾಗಿ ತೋಟದ ಆಹಾರಗಳನ್ನು ಒಟ್ಟಾಗಿ ಒದಗಿಸುತ್ತಾರೆ. ಪಾಶ್ಚಿಮಾತ್ಯ ನಾಗರಿಕತೆಯಲ್ಲಿ ಬೆಳೆದವರಿಗೆ ಬಹಳ ಸಾಧಾರಣವಾಗಿ ತೋರುವ ಈ ಎರಡು ಅವಶ್ಯಕತೆಗಳನ್ನು ಒದಗಿಸುವಲ್ಲಿ ಡೋಬುಗಳು ಬಹು ತೊಡಕಿನ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅವರಲ್ಲಿ ಅತ್ಯಂತ ಪ್ರಬಲವಾದ ನಿಷ್ಠೆ ಸಲ್ಲುವುದು ಸುಸುವಿಗೆ. ಹೀಗಿರುವಾಗ ಮದುವೆಯಾದ ಜೋಡಿಗೆ ಅಲಂಘ್ಯವಾದ ಸ್ವಂತ ಮನೆಯನ್ನೂ ತೋಟವನ್ನೂ ಒದಗಿಸಿ ಬಿಟ್ಟರೆ ಅವರು ಯಾರ ಹಗೆತನದ ದೃಷ್ಟಿಗೆ ಅಡಿಯಾಳಾಗಿರಬೇಕು ? ಹೆಂಡತಿಯ ಸುಸುವಿನವರದ್ದೋ ಇಲ್ಲವೇ ಗಂಡನ ಸುಸುವಿನದದ್ದೋ ? ಈ ಸಮಸ್ಯೆಯನ್ನು ತರ್ಕಬದ್ಧವಾಗಿಯೇ ಪರಿಹರಿಸಿದ್ದಾರೆ. ಆ ಪರಿಹಾರ ನಿಜವಾಗಿಯೂ ಅಸಾಧಾರಣವಾದುದು. ಮದುವೆಯಾದಾಗಿನಿಂದ ಮರಣದವರೆಗೆ ದಂಪತಿಗಳು ಒಂದು ವರ್ಷ ತಪ್ಪಿ ಒಂದು ವರ್ಷ ಗಂಡನ ಹಳ್ಳಿಯಲ್ಲಿ ಮತ್ತು ಹೆಂಡತಿಯ ಹಳ್ಳಿಯಲ್ಲಿ ವಾಸಿಸುತ್ತಾರೆ.

ವರ್ಷ ತಪ್ಪಿ ವರ್ಷದಲ್ಲಿ ದಂಪತಿಗಳಲ್ಲೊಬ್ಬರಿಗೆ ತನ್ನದೇ ಗುಂಪಿನ ಬೆಂಬಲವಿದ್ದು, ಪರಿಸ್ಥಿತಿ ತನ್ನ ಹತೋಟಿಯಲ್ಲಿರುತ್ತದೆ. ವರ್ಷ ತಪ್ಪಿ ವರ್ಷ ಅದೇ ವ್ಯಕ್ತಿ ತನ್ನ ಹೆಂಡತಿ ಅಥವಾ ಗಂಡನ ಹಳ್ಳಿಯಲ್ಲಿ ಅಲ್ಲಿನವರನ್ನು ಹೇಗೋ ಅನುಸರಿಸಿಕೊಂಡು ಪರಕೀಯನಾಗಿ, ಆ ಗ್ರಾಮದ ಒಡೆಯರೆದುರಿಗೆ ತನ್ನನ್ನು ಕಿರಿದು ಮಾಡಿಕೊಂಡು ಬಾಳಬೇಕು. ಈ ಬಿರುಕಿನಿಂದ ಡೋಬುವನ್ ಹಳ್ಳಿಗಳಲ್ಲಿ ಸದಾ ಪರಸ್ಪರ ವಿರೋಧವಾಗಿ ಸಜ್ಜಾದ ಎರಡು ಗುಂಪುಗಳಿರುತ್ತವೆ. ಒಂದೆಡೆ ಆ ಗ್ರಾಮದ ಒಡೆಯರೆಂದು ಕರೆಯಲ್ಪಡುವ ತಾಯಿ ಕಡೆಯವರು; ಇನ್ನೊಂದೆಡೆ ಆ ಗ್ರಾಮಸ್ಥರನ್ನು ಮದುವೆಯಾದವರು ಮತ್ತು ಗಂಡು ಒಡೆಯರ ಮಕ್ಕಳು. ಮೊದಲ ಗುಂಪು ಮೇಲುಗೈಯ್ಯಾಗಿದ್ದು ವಿವಾಹಿತಜೀವನದ ಅಗತ್ಯದಿಂದ ಆ ವರ್ಷಮಾತ್ರ ಆ ಗ್ರಾಮದಲ್ಲಿ ವಾಸವಾಗಿರುವವರನ್ನು ಪ್ರತಿಕೂಲ ಪರಿಸ್ಥಿತಿಯಲ್ಲಿರಿಸಬಹುದು. ಒಡೆಯರೆಲ್ಲ ಒಂದು ಒಗ್ಗಟ್ಟಾದ ಮುಂಚೂಣಿಯಲ್ಲಿರುತ್ತಾರೆ. ಹೊರಗಿನಿಂದ ಬಂದವರ ಗುಂಪಿನಲ್ಲಿ ಹೊಂದಾಣಿಕೆ ಕಡಿಮೆ. ಹಲವಾರು ವಿವಾಹ ಪೀಠಗಳಿಂದ ಎರಡು ಗ್ರಾಮಗಳನ್ನು ಒಂದುಗೂಡಿಸುವುದಕ್ಕೆ ಡೋಬುವನ್ ತತ್ವ ಮತ್ತು ಕ್ರಿಯೆ ಎರಡೂ ವಿರೋಧ. ನಂಟಸ್ತಿಕೆಗಳು ಹಲವಾರು ಗ್ರಾಮಗಳಲ್ಲಿ ಹರಡಿಕೊಂಡಿದ್ದಷ್ಟೂ ಮಟ್ಟಿಗೆ, ಆ ಏರ್ಪಾಡಿಗೆ ಹಾರ್ದಿಕವಾಗಿ ಒಪ್ಪಿಗೆ ದೊರೆಯುತ್ತದೆ. ಹೀಗಾಗಿ ಮದುವೆಯಾಗಿ ಹಳ್ಳಿಗೆ ಬಂದಿರುವ ಗಂಡಂದಿರು, ಹೆಂಡತಿಯರಲ್ಲಿ ತಾವೆಲ್ಲ ಒಂದೇ ಗುಂಪಿಗೆ ಸೇರಿದವರೆಂಬ ನಿಷ್ಠೆಯ ಬಂಧನವಿಲ್ಲ. ಡೋಬುಗಳಲ್ಲಿ ಪ್ರದೇಶದ ಎಲ್ಲೆಯನ್ನು ಮೀರಿರುವ ಕುಲದೇವತಾಪ್ರಕಾರದ ವರ್ಗೀಕರಣವೊಂದಿದೆ. ಆದರೆ ಅದು ಕಾರ್ಯಶೀಲವೂ ಅಲ್ಲ ಅದಕ್ಕೆ ಪ್ರಾಮುಖ್ಯತೆಯೂ ಇಲ್ಲ. ಗ್ರಾಮಕ್ಕೆ ಮದುವೆಯಾಗಿ ಬಂದಿರುವ ಪರಸ್ಪರ ಹೊಂದಾಣಿಕೆ ಇಲ್ಲದ ವ್ಯಕ್ತಿಗಳನ್ನು ಕಾರ್ಯತಃ ಅದು ಒಂದುಗೂಡಿಸುವುದಿಲ್ಲವಾದ್ದರಿಂದ ಅದನ್ನು ನಾವು ಇಲ್ಲಿ ಪರಿಗಣಿಸಬೇಕಾಗಿಲ್ಲ.

ಡೋಬುವನ್ ಸಮಾಜವು ತನ್ನ ಎಲ್ಲ ಪರಂಪರಾಗತವಾದ ವಿಧಾನಗಳಿಂದಲೂ, ಪತಿ ಅಥವಾ ಪತ್ನಿಯ ಗ್ರಾಮದಲ್ಲಿ ಪರಕೀಯರಾಗಿ ಆ ವರ್ಷ ವಾಸಿಸುತ್ತಿರುವ ಪತಿ ಅಥವಾ ಪತ್ನಿಯು ಹೀನಸ್ಥಿತಿಯ ಪಾತ್ರವಹಿಸುವಂತೆ ಮಾಡುತ್ತದೆ. ಗ್ರಾಮದ ಒಡೆಯರೆಲ್ಲ ಅವನನ್ನು ಹೆಸರು ಹಿಡಿದು ಕರೆಯಬಹುದು. ಅವನು ಮಾತ್ರ ಅವರ್ಯಾರ ಹೆಸರನ್ನೂ ಹಿಡಿದು ಕರೆಯುವಂತಿಲ್ಲ. ನಮ್ಮ ನಾಗರಿಕತೆಯಲ್ಲಿರುವಂತೆ ಡೋಬುಗಳಲ್ಲಿ ವ್ಯಕ್ತಿಯ ಹೆಸರನ್ನು ಬಳಸದೆ ಇರಲು ಹಲವು ಕಾರಣಗಳಿವೆ. ಹಾಗೆ ಅದನ್ನು ಬಳಸಿದಾಗ ಬಳಸುವಾತ ಮೇಲುಗೈ ಅಧಿಕಾರವನ್ನು ಪಡೆದಿದ್ದಾನೆಂಬುದನ್ನು ಸೂಚಿಸುತ್ತದೆ. ವರ್ಷಂಪ್ರತಿಯೂ ಹಾಗೂ ಮರಣ ಸಂಭರ್ಭದಲ್ಲಿಯೂ ಗ್ರಾಮವು ಕಾಣಿಕೆಗಳನ್ನು ನೀಡುವಾಗ, ಆ ಗ್ರಾಮಕ್ಕೆ ಮದುವೆಯಾಗಿ ಆ ವರ್ಷ ಅಲ್ಲಿ ವಾಸಿಸುತ್ತಿರುವ ಪತಿ ಅಥವ ಪತ್ನಿಯು ಎದುರಿಗಿರಬಾರದು. ಅವನು ನಿರಂತರವಾಗಿ ಪರಕೀಯನೇ,

ಅವನ ಸ್ಥಾನಕ್ಕೆ ದೊರೆಯುವ ಅಗೌರವಗಳಲ್ಲಿ ಇವು ಅತ್ಯಂತ ಹಗುರವಾದುವು. ಇದಕ್ಕಿಂತ ಮುಖ್ಯವಾದ ಒಂದು ಬಿಕ್ಕಟ್ಟಿದೆ. ಸದ್ಯಕ್ಕೆ ದಂಪತಿಗಳು ವಾಸಿಸುತ್ತಿರುವ ಗ್ರಾಮದ ಜನಕ್ಕೆ ಮದುವೆಯಾಗಿ ಬಂದಿರುವ ಪತಿ ಅಥವಾ ಪತ್ನಿಯ ವರ್ತನೆಯಿಂದ ತೃಪ್ತಿಯಾಗುವ ಮಾತೇ ಇಲ್ಲ. ಮದುವೆಯಾದಾಗಿನಿಂದ ಪತಿ ಅಥವಾ ಪತ್ನಿಯು ಮರಣ ಹೊಂದುವವರೆಗೆ, ಹೆಚ್ಚು ಕಡಮೆ ಒಂದೇರೀತಿಯ ಔಪಚಾರಿಕತೆಯಿಂದ ಎರಡು ಗ್ರಾಮಗಳ ನಡುವೆ ವೈವಾಹಿಕ ಕಾಣಿಕೆಗಳ ವಿನಿಮಯ ಸಾಗುವುದರಿಂದ ಮದುವೆಯು ಸುಸುವಿನ ಮುಖ್ಯವಾದ ಆಸ್ತಿಗಳಲ್ಲೊಂದು. ಅದರಲ್ಲಿ ತಾಯಿಕಡೆ ಸಂಬಂಧದ ಗಂಡಸರಿಗೆ ಪ್ರಮುಖ ಪಾತ್ರವಹಿಸುವ ಹಕ್ಕು ಇದೆ. ಡೋಬುಗಳಲ್ಲಿ ಸದಾ ನಡೆಯುವ ವೈವಾಹಿಕ ಜಗಳಗಳಲ್ಲಿ, ತನ್ನ ಸ್ವಂತ ಜಾಗದಲ್ಲಿರುವ ಪತಿ ಅಥವಾ ಪತ್ನಿಗೆ ತನ್ನ ಸುಸುವಿನಿಂದ, ಅದರಲ್ಲೂ ಮುಖ್ಯವಾಗಿ ತನ್ನ ಸೋದರ ಮಾವನಿಂದ ಬೆಂಬಲ ಪಡೆದುಕೊಳ್ಳುವುದು ಸುಲಭ. ತಾಯಿಯ ಸಹೋದರನು, ಹೊರಗಿನಿಂದ ಬಂದವನಿಗೆ ಸಾರ್ವಜನಿಕವಾಗಿ ಉಪದೇಶ ನೀಡಲೋ, ಇಲ್ಲವೆ ಅವನು ಅಥವಾ ಅವಳನ್ನು ಹೀನಾಮಾನ ಬೈದು ಗ್ರಾಮದಿಂದ ಅಟ್ಟಲೋ ಸದಾಸಿದ್ಧ.

ಇದಕ್ಕಿಂತ ನಿಕಟರೀತಿಯ ಬಿಕ್ಕಟ್ಟೊಂದಿದೆ. ಗಂಡ ಹೆಂಡಿರ ನಡುವೆ ನಿಷ್ಠಾಪೂರ್ಣ ವರ್ತನೆಯನ್ನು ನಿರೀಕ್ಷಿಸುವುದಿಲ್ಲ. ಲೈಂಗಿಕ ಕಾರಣಗಳಿಗೆ ಹೊರತು ಬೇರೆ ರೀತಿಯಲ್ಲಿ ಒಬ್ಬ ಗಂಡಸು, ಒಬ್ಬಳು ಹೆಂಗಸು ಕೆಲಕಾಲವಾದರೂ ಒಟ್ಟಿಗೆ ಇರಬಹುದು ಎಂಬುದನ್ನು ಯಾವ ಡೋಬುವನನೂ ಒಪ್ಪುವುದಿಲ್ಲ. ಆ ವರ್ಷಕ್ಕೆ ಹೊರಗಿನಿಂದ ಬಂದ ಪತಿ ಅಥವಾ ಪತ್ನಿಯ ಮೇಲೆ ದಾರಿಗೆಟ್ಟ ವರ್ತನೆಯ ಬಗ್ಗೆ ಆರೋಪ ಹೊರಿಸುವುದರಲ್ಲಿ ಸದಾ ಮುಂದು. ಸಾಧಾರಣವಾಗಿ ಅದಕ್ಕೆ ಆಧಾರವೂ ಇರುತ್ತದೆ. ಸಂಶಯಗ್ರಸ್ತ ಡೋಬು ವಾತಾವರಣದಲ್ಲಿ ಗ್ರಾಮದ 'ಸಹೋದರ' ಅಥವಾ 'ಸಹೋದರಿ' ಯೊಂದಿಗೆ ಪ್ರಣಯ ಸಂಬಂಧವು ನಿರಪಾಯಕಾರಿ. ತನ್ನ ಸ್ವಂತ ಗ್ರಾಮದಲ್ಲಿಯೇ ಕಾಲಕಳೆಯುವ ವರ್ಷದಲ್ಲಿ ಪರಿಸ್ಥಿತಿಯು ಅನುಕೂಲಕರವಾಗಿದ್ದು, ದೈವಿಕವಾದ ಆಪತ್ತುಗಳ ಸಂಭವ ಅತ್ಯಂತ ಕಡಮೆ. ಅಂತಹ ವರ್ಗೀಕೃತ 'ಸಹೋದರ' 'ಸಹೋದರಿ' ಯರ ನಡುವೆ ಮದುವೆಯಾಗುವುದನ್ನು ಸಾರ್ವಜನಿಕ ಅಭಿಪ್ರಾಯವು ಪ್ರಬಲವಾಗಿ ವಿರೋಧಿಸುತ್ತದೆ. ಗ್ರಾಮ ನೆಲೆಯಲ್ಲಿಯೇ ವಿವಿಧ ಭಾಗಗಳ ನಡುವೆ ಕಡ್ಡಾಯವಾದ ವೈವಾಹಿಕ ವಿನಿಮಯಗಳು ನಡೆಯಬೇಕಾಗಿ ಬಂದರೆ ಗ್ರಾಮ ಜೀವನ ಶಿಥಿಲವಾಗುತ್ತದೆ. ಆದರೆ ಈ ಗುಂಪಿನೊಳಗೆ ವ್ಯಭಿಚಾರವು ಬಹುಪ್ರಿಯವಾದ ಚೆಲ್ಲಾಟ. ಅವರ ಪುರಾಣ ಕತೆಗಳಲ್ಲಿ ಅದರ ಪ್ರಸ್ತಾಪ ಬರುತ್ತದೆ. ಸಣ್ಣ ವಯಸ್ಸಿನಿಂದಲೇ ಅವರ ಪರಿಚಯ ಗ್ರಾಮದಲ್ಲಿ ಎಲ್ಲರಿಗೂ ಇರುತ್ತದೆ. ಅಪಮಾನಕ್ಕೆ ಒಳಗಾದ ಪತಿ ಅಥವಾ ಪತ್ನಿಗೆ ಅದು ಗಾಢವಾದ ಆತಂಕದ ವಿಷಯ. ಅವನು ಅಥವಾ ಅವಳು ತನ್ನ ಸ್ವಂತ ಮಕ್ಕಳಿಗೆ ಅಥವಾ ಹಳ್ಳಿಯ ಇತರ ಮಕ್ಕಳಿಗೆ ಲಾಂಛ

ಆಶೆ ಹುಟ್ಟಿಸಿ ಸಮಾಚಾರ ಪಡೆಯುತ್ತಾರೆ. ಗಂಡನಾದರೆ ಹೆಂಡತಿಯ ಅಡಿಗೆಯ ಮಡಕೆಗಳನ್ನು ಒಡೆದುಹಾಕುತ್ತಾನೆ. ಹೆಂಡತಿಯಾದರೆ ಗಂಡನ ನಾಯಿಯನ್ನು ಹಿಂಸಿಸುತ್ತಾಳೆ. ಅವನು ಅವಳೊಂದಿಗೆ ಜೋರಾಗಿ ಜಗಳ ಕಾಯುತ್ತಾನೆ. ಹತ್ತಿರ ಹತ್ತಿರವಿರುವ ಎಲೆ ಛಾವಣಿಯ ಡೋಬು ಮನೆಗಳಲ್ಲಿ ಯಾವ ಜಗಳವೂ ಇತರರಿಗೆ ಕೇಳಿಸದಿರಲು ಸಾಧ್ಯವಿಲ್ಲ. ಅವನು ರೋಷಾವೇಶದಿಂದ ಗ್ರಾಮಬಿಟ್ಟು ಹೊರ ಹೋಗುತ್ತಾನೆ. ಗತ್ಯಂತರವಿಲ್ಲದಾಗ ತನ್ನ ಅರಿವಿಲ್ಲದ ಕೋಪದಲ್ಲಿ ಪರಂಪರಾಗತ ವಾದ ಕ್ರಮಗಳಲ್ಲೊಂದರ ಮೂಲಕ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸುತ್ತಾನೆ. ಅವು ಯಾವುವೂ ನಿಜವಾಗಿ ಪ್ರಾಣಹಂತಕಗಳಲ್ಲ. ಸಾಧಾರಣವಾಗಿ ಅವನನ್ನು ರಕ್ಷಿಸಲಾಗುತ್ತದೆ, ಈ ಕ್ರಮದಿಂದ ಅವನ ಹೆಂಡತಿಯ ಸಂಸುವಿನ ಬೆಂಬಲಗಳಿಸಲು ಯತ್ನಿಸುತ್ತಾನೆ. ಅಪಮಾನಗೊಂಡ ಗಂಡ ಅಥವಾ ಹೆಂಡತಿ ಆತ್ಮಹತ್ಯೆಯ ಪ್ರಯತ್ನ ದಲ್ಲಿ ಯಶಸ್ವಿಯಾಗಿದ್ದಿದ್ದರೆ ಅವರ ಬಂಧುಗಳು ತಮಗೆ ಏನು ಮಾಡುತ್ತಿದ್ದರೋ ಎಂಬ ಹೆದರಿಕೆಯಿಂದ ಅವರು ಹೆಚ್ಚು ರಾಜಿಯ ವರ್ತನೆಯನ್ನು ತೋರುತ್ತಾರೆ. ಅವರು ಆ ವಿಚಾರದಲ್ಲಿ ಯಾವ ಮುಂದಿನ ಹೆಜ್ಜೆಯನ್ನೂ ಇಡಲು ನಿರಾಕರಿಸ ಬಹುದು. ಆಗ ದಂಪತಿಗಳು ಮುನಿಸು, ಕೋಪಗಳಿಂದ ಒಂದಾಗಿಯೇ ಇರುತ್ತಾರೆ. ಮುಂದಿನ ವರ್ಷದಲ್ಲಿ ಹೆಂಡತಿ ತನ್ನ ಹಳ್ಳಿಯಲ್ಲಿ ಅದೇರೀತಿ ಸೇಡು ತೀರಿಸಿಕೊಳ್ಳ ಬಹುದು.

ಆದ್ದರಿಂದ ಗಂಡ ಮತ್ತು ಹೆಂಡತಿ ಒಟ್ಟಿಗೆ ವಾಸಿಸಬೇಕೆಂಬ ಡೋಬುವನ್ ವಿಧಿ ನಮ್ಮ ನಾಗರಿಕತೆಯಲ್ಲಿ ಅದು ನಮಗೆ ತೋರಿಬರುವಷ್ಟು ಸರಳವಾದ ವಿಷಯ ವಲ್ಲ. ಪರಿಸ್ಥಿತಿಯು ಆ ಸಂಸ್ಥೆಯನ್ನು ಬಹು ಕಠಿಣಗೊಳಿಸಿದ್ದು ಸತತವಾಗಿ ವಿವಾಹ ವನ್ನು ಹಾನಿಗೀಡುಮಾಡಿ, ಸಾಧಾರಣವಾಗಿ ಮುರಿದಿಕ್ಕುತ್ತದೆ. ಮುರಿದ ಮದುವೆ ಗಳು ಬಹು ಸಾಮಾನ್ಯವಾಗಿದ್ದು, ಡಾ. ಫಾರ್ಚೂನ್ ಅವರು ವಿವರಿಸಿರುವ ಇನ್ನೊಂದು ಓಷ್ಯಾನಿಕ್ ಸಂಸ್ಕೃತಿಯಾದ ಮನುಸ್‌ಗಳದ್ದಕ್ಕಿಂತ ಐದರಷ್ಟು ಹೆಚ್ಚು ಪ್ರಮಾಣದಲ್ಲಿವೆ. ಡೋಬುವನ್ ವಿವಾಹಿತ ದಂಪತಿಗಳಿಗೆ ವಿಧಿಸಿರುವ ಇನ್ನೊಂದು ನಿಯಮವೂ ಸಾಂಸ್ಕೃತಿಕ ಸಂಸ್ಥೆಗಳಿಂದಾಗಿ ಇದೇರೀತಿಯ ವಿಷಮತೆಗೊಳಗಾಗಿದೆ. ಆ ನಿಯಮವೆಂದರೆ ದಂಪತಿಗಳು ತಮಗೂ ತಮ್ಮ ಮಕ್ಕಳಿಗೂ ತೋಟದ ಆಹಾರ ಗಳನ್ನು ಒಟ್ಟಾಗಿ ಒದಗಿಸಿಕೊಳ್ಳಬೇಕು ಎಂಬುದು. ಈ ನಿಯಮವು ಮೂಲಭೂತ ಹಕ್ಕು ಬಾಧ್ಯತೆಗಳಿಗೂ, ಮಾಂತ್ರಿಕ ಅನುಭೋಗಕ್ಕೂ ವಿರೋಧವಾಗಿ ಸಜ್ಜಾಗಿದೆ.

ಡೋಬುಗಳಲ್ಲಿ ಒಡೆತನದ ಉಗ್ರ ಪ್ರತ್ಯೇಕತೆಯು, ಗೆಣಸುಗಳ ಆನುವಂಶೀಯ ಒಡೆತನಕ್ಕೆ ಸಂಬಂಧಪಟ್ಟ ನಂಬಿಕೆಗಳಲ್ಲಿ ವ್ಯಕ್ತವಾಗಿರುವಷ್ಟು ಮಟ್ಟಿಗೆ ಬೇರೆಲ್ಲೂ ವ್ಯಕ್ತವಾಗಿಲ್ಲ. ಗೆಣಸುಗಳ ತಳಿಯು, ಸುಸುವಿನ ಸದಸ್ಯರ ರಕ್ತನಾಳಗಳಲ್ಲಿ ಹರಿಯುವ

ರಕ್ತದಂತೆ ಸುಸುವಿನಲ್ಲಿಯೇ ವಂಶಾನುಗತವಾಗಿ ಇಳಿಯುವುದು. ಮದುವೆಯಾದ ದಂಪತಿಗಳ ತೋಟಗಳಲ್ಲಿ ಸಹ ಬೀಜದ ಗೆಣಸುಗಳನ್ನು ಹಂಚಿಕೊಳ್ಳುವುದಿಲ್ಲ. ಪ್ರತಿಯೊಬ್ಬನೂ ತನ್ನ ತನ್ನ ತೋಟದಲ್ಲಿ ತನ್ನ ಅನುವಂಶೀಯವಾದ ತಳಿಯ ಬೀಜದ ಗೆಣಸುಗಳನ್ನು ಬಿತ್ತಿ ಕೃಷಿ ಮಾಡುತ್ತಾನೆ. ಅವುಗಳನ್ನು ತನ್ನ ಸುಸು ಪಂಕ್ತಿಯಲ್ಲಿ ಬಂದ ರಹಸ್ಯವೂ, ವೈಯಕ್ತಿಕವೂ ಆದ ಮಂತ್ರೋಚ್ಚಾರಗಳಿಂದ ಬೆಳೆಯುವಂತೆ ಮಾಡುತ್ತಾನೆ. ತನ್ನ ಸ್ವಂತ ರಕ್ತ ಸಂತಾನದ ಬೀಜದ ಗೆಣಸುಗಳು, ಆ ಬೀಜಗಳೊಂದಿಗೇ ಅನುಗತವಾಗಿ ಬಂದಿರುವ ಮಂತ್ರೋಚ್ಚಾರಗಳಿಂದ ಮಾತ್ರ ತನ್ನ ತೋಟದಲ್ಲಿ ಬೆಳೆದು ಫಲವಾಗುತ್ತವೆಂಬುದು ಅವನ ಸಮಾಜದ ಸರ್ವಮಾನ್ಯ ಸಿದ್ಧಾಂತ. ಕಾರ್ಯತಃ ಈ ಸಂಪ್ರದಾಯವು ನೀಡುವ ವಿನಾಯತಿಗಳನ್ನು ಮುಂದೆ ವಿವರಿಸುತ್ತೇವೆ. ದಂಪತಿಗಳ ತೋಟದ ಮಟ್ಟಿಗೆ ಅಂತಹ ಯಾವ ವಿನಾಯತಿಗೂ ಅವಕಾಶವಿಲ್ಲ. ಗಂಡ, ಹೆಂಡತಿ ಇಬ್ಬರೂ ಪ್ರತ್ಯೇಕವಾಗಿ, ತಮ್ಮ ಹಿಂದಿನ ಫಸಲಿನಿಂದ ಬೀಜಗಳನ್ನು ಉಳಿಸಿಕೊಂಡಿದ್ದು ತಮ್ಮ ವಂಶಕ್ರಮದ ಗೆಣಸುಗಳನ್ನು ಬಿತ್ತಿ, ಕೈಗೆ ಬರುವ ಫಸಲಿಗೆ ಹೊಣೆಗಾರಿಕೆ ವಹಿಸುತ್ತಾರೆ. ಡೋಬುಗಳಲ್ಲಿ ಯಾವಾಗಲೂ ಆಹಾರವು ಸಾಕಷ್ಟು ಇರುವುದಿಲ್ಲ. ಬೀಜಕ್ಕೆ ಅವಶ್ಯಕವಾದ ಗೆಣಸುಗಳನ್ನು ಉಳಿಸಿಕೊಳ್ಳಲು ಪ್ರತಿಯೊಬ್ಬನೂ ಬಿತ್ತನೆಯ ಹಿಂದಿನ ಕೆಲ ತಿಂಗಳುಗಳನ್ನು ಹಸಿದುಕೊಂಡೇ ದೂಡುತ್ತಾನೆ. ಬೀಜದ ಗೆಣಸುಗಳನ್ನು ತಿಂದು ಹಾಕುವುದು ಡೋಬುಗಳಲ್ಲಿ ಅತ್ಯಂತ ಹೇಯ ಅಪರಾಧ. ಆ ನಷ್ಟ ಎಂದೂ ತುಂಬಲಾಗದುದು. ತನ್ನ ತೋಟದಲ್ಲಿ ತನ್ನ ತಾಯಿ ಬಳ್ಳಿಯ ತಳಿಯ ಗೆಣಸು ಹೊರತು ಬೇರೆ ಯಾವುದೂ ಬೆಳೆಯುವುದಿಲ್ಲವಾದ್ದರಿಂದ, ಆ ನಷ್ಟವನ್ನು ಗಂಡನಾಗಲಿ ಹೆಂಡತಿಯಾಗಲಿ ತುಂಬಲು ಸಾಧ್ಯವಿಲ್ಲ. ಬೀಜವನ್ನೇ ನಷ್ಟಗೊಳಿಸಿಕೊಳ್ಳುವಂತಹ ಕುತ್ಸಿತ ದಿವಾಳಿತನವನ್ನು ಅವನ ಸ್ವಂತ ಸುಸು ಸಹ ಕ್ಷಮಿಸುವುದಿಲ್ಲ. ಬಿತ್ತನೆಗಾಗಿ ಇಟ್ಟ ಗೆಣಸುಗಳನ್ನು ತಿಂದು ಹಾಕುವಷ್ಟು ಕೀಳ್ಮೆಗೆ ಕೈಯಿಕ್ಕಿದವನು ಅವನ ಸ್ವಂತ ಕುಲಸ್ಥರಿಂದಲೂ ಬೆಂಬಲ ಗಳಿಸಲಾರದಂತಹ ಅಯೋಗ್ಯ. ಆಜೀವ ಪರ್ಯಂತ ಅವನು ಡೋಬುವನ್ ಸಮುದ್ರ ತೀರದಲ್ಲಿ ಆಯ್ದು ತಿನ್ನುವವನಾಗಿರಬೇಕಾಗುತ್ತದೆ.

ಆದ್ದರಿಂದ ಹೆಂಡತಿಯ ತೋಟ, ಗಂಡನ ತೋಟ ಎಂದು ಬೇರೆ ಬೇರೆಯೇ ಇರಬೇಕಾಗಿದೆ. ಬೀಜದ ಗೆಣಸುಗಳು ವಂಶಾನುಗತವಾಗಿ ಬೇರೆ ಬೇರೆಯೇ ; ಅವುಗಳನ್ನು ಬೆಳೆಸುವ ಮಂತ್ರೋಚ್ಚಾರಗಳೂ ಬೇರೆ ಬೇರೆಯಾಗಿಯೇ ನಡೆದು ಬಂದಂತಹವು, ಅವನ್ನು ಹಂಚಿಕೊಳ್ಳುವುದಿಲ್ಲ. ಇಬ್ಬರ ತೋಟಗಳಲ್ಲಿ ಯಾರಾದರೊಬ್ಬರ ಫಸಲು ನಷ್ಟವಾದರೆ ತೀವ್ರವಾದ ಆತಂಕವುಂಟಾಗಿ, ಅದು ವೈವಾಹಿಕ ಜಗಳಗಳಿಗೂ, ವಿಚ್ಛೇದನಕ್ಕೂ ಮೂಲವಾಗುತ್ತದೆ. ಹೀಗಿದ್ದರೂ ತೋಟಗಳ ಕೆಲಸ ಕಾರ್ಯಗಳನ್ನು ಇಬ್ಬರೂ ಹಂಚಿಕೊಳ್ಳುತ್ತಾರೆ. ಅವರ ತೋಟಗಳು ಮನೆಯಷ್ಟೇ ಮಟ್ಟಿಗೆ ಗಂಡ,

ಹೆಂಡತಿ ಮತ್ತು ಅವರ ಮಕ್ಕಳಿಗೆ ಮಾತ್ರ ಸೀಮಿತವಾದವು. ತೋಟಗಳು ನೀಡುವ ಆಹಾರಗಳನ್ನು ಅವರೆಲ್ಲ ಕೂಡಿ ಹಂಚಿಕೊಳ್ಳುತ್ತಾರೆ.

ತಂದೆಯು ತೀರಿಹೋಗಿ ಮದುವೆ ಮುರಿದರೋ ಇಲ್ಲವೇ ತಂದೆ ಮತ್ತು ತಾಯಿಯರು ಎಷ್ಟೋ ವರ್ಷಗಳ ಮೊದಲೇ ಬೇರೆಯಾಗಿದ್ದು ಅನಂತರ ತಂದೆ ಕಾಲವಾದರೋ ಆ ಕೂಡಲೇ ತಂದೆಯ ಹಳ್ಳಿಯ ಆಹಾರ, ಅಲ್ಲಿನ ಪಕ್ಷಿಗಳು, ಮೀನುಗಳು ಹಾಗೂ ಫಲಗಳೆಲ್ಲ ಅವನ ಮಕ್ಕಳಿಗೆ ನಿಷಿದ್ಧವಾಗುತ್ತವೆ. ಅವನು ಜೀವಂತವಾಗಿರುವ ತನಕ ಮಾತ್ರ ಅವರು ಆ ಆಹಾರ ತಿನ್ನುವುದರಿಂದ ಕೇಡಿಲ್ಲ. ತಂದೆತಾಯಿಯರಿಬ್ಬರೂ ಕೂಡಿ ಮಕ್ಕಳನ್ನು ಸಾಕುವ ಡೋಬು ಪದ್ಧತಿಗೆ ಇದು ಕಠಿಣವಾದ ಸೋಲು. ಇದೇ ರೀತಿ ತಂದೆ ಸತ್ತ ಮೇಲೆ ಮಕ್ಕಳಿಗೆ ಅವನ ಹಳ್ಳಿಗೆ ಪ್ರವೇಶವಿಲ್ಲ. ಅಂದರೆ ವಿವಾಹ ಸಂಬಂಧದ ತುರ್ತುಗಳನ್ನು ಲಕ್ಷಿಸಬೇಕಾದ ಸಂದರ್ಭ ತೀರಿದ ಕೂಡಲೇ, ಅವರನ್ನು ತಾಯಿಯ ಹಳ್ಳಿಯು ತನ್ನಲ್ಲಿ ಒಳಪಡಿಸಿಕೊಂಡು ಬಹಿಷ್ಕೃತ ಹಳ್ಳಿಯೊಂದಿಗಿನ ಸಂಪರ್ಕಗಳನ್ನು ಕಡಿದುಹಾಕುತ್ತದೆ. ಆ ಮಕ್ಕಳು ವಯಸ್ಕರೋ ಮುದುಕರೋ ಆದ ಮೇಲೆ ಯಾವುದಾದರೊಂದು ಸಾಂಸ್ಕಾರಿಕ ವಿನಿಮಯದ ಸಂಬಂಧವಾಗಿ ತಮ್ಮ ತಂದೆಯ ಹಳ್ಳಿಗೆ ಆಹಾರಗಳನ್ನು ಒಯ್ಯಬೇಕಾದರೆ ಅವರು ಗ್ರಾಮದ ಹೊರವಲಯದಲ್ಲಿಯೇ ತಲೆಬಾಗಿ ನಿಶ್ಚಲರಾಗಿ ನಿಲ್ಲುತ್ತಾರೆ. ಅವರ ಹೊರೆಗಳನ್ನು ಇತರರು ಹಳ್ಳಿಯೊಳಕ್ಕೆ ಒಯ್ಯುತ್ತಾರೆ. ಇತರರು ಹಿಂದಕ್ಕೆ ಬರುವ ತನಕ ಕಾದಿದ್ದು, ತಮ್ಮ ತಾಯಿಯ ಹಳ್ಳಿಗೆ ಹಿಂತಿರುಗುವ ಮೆರವಣಿಗೆಯ ಮುಂದಾಳುಗಳಾಗುತ್ತಾರೆ. ಒಬ್ಬಾತನ ತಂದೆಯ ಹಳ್ಳಿ "ತಲೆ ಬಾಗಿಸಬೇಕಾದ ಜಾಗ". ಗಂಡ ಇಲ್ಲವೇ ಹೆಂಡತಿ ತೀರಿಹೋದ ನಂತರ ಆ ಹಳ್ಳಿಗೆ ಪ್ರವೇಶಿಸುವುದರ ಮೇಲೆ ಇರುವ ತಡೆಯು ಇದಕ್ಕಿಂತ ಪ್ರಬಲವಾದುದು. ಅವನು ಇನ್ನೂ ದೂರದಲ್ಲಿಯೇ ನಿಂತುಬಿಡಬೇಕು ಇಲ್ಲವೇ ದೂರದಿಂದ ಬಳಸಿಕೊಂಡು ಹೋಗಬೇಕು. ವಿವಾಹ ಸಂಬಂಧಕ್ಕೆ ನೀಡಿದ ಭದ್ರವಲ್ಲದ ರಿಯಾಯಿತಿಗಳನ್ನು ಇಮ್ಮಡಿ ತಡೆಗಳಿಂದ ತೊಡೆದು ಹಾಕಲಾಗುತ್ತದೆ.

ಡೋಬುಗಳ ವೈಲಕ್ಷಣ್ಯಗಳಾದ ಈರ್ಷ್ಯೆ, ಸಂಶಯ ಹಾಗೂ ಒಡೆತನವನ್ನು ಕುರಿತ ಭೀಷಣ ಪ್ರತ್ಯೇಕತಾಭಾವಗಳೆಲ್ಲ ಡೋಬುವನ್ ಮದುವೆಗಳಲ್ಲಿ ಮುಂಚೂಣಿಯಲ್ಲಿವೆ. ಆದರೆ ಜೀವನ ಕ್ರಮದ ಇತರ ಮುಖಗಳನ್ನು ಅರಿತುಕೊಳ್ಳುವತನಕ ಅವುಗಳಿಗೆ ಗುರುತ್ವವನ್ನು ನೀಡಲಾಗುವುದಿಲ್ಲ. ಡೋಬುವನ್ ಬಾಳಿನ ಉದ್ದಗಲಕ್ಕೂ ವ್ಯಾಪಿಸಿರುವ ಪ್ರೇರಣೆಗಳು ಅತ್ಯಂತ ಕಿರುಮಿತಿಯವು. ಆ ಸಂಸ್ಕೃತಿಯ ಸಂಸ್ಥೆಗಳು ಅವುಗಳನ್ನು ಮೈಗೂಡಿಸಿಕೊಂಡಿರುವುದರಲ್ಲಿ ತೋರಿರುವ ನಿಷ್ಠೆ ಮತ್ತು ಅವುಗಳ ವ್ಯಾಪ್ತಿಗಳು ಅವುಗಳಿಗೆ ಸುಸ್ಪಷ್ಟತೆ ನೀಡಿವೆ. ಅವು ಉನ್ಮಾದದಂತೆ ನಿಷ್ಕಪಟ ಹಾಗೂ ಸರಳ, ಇಡೀ ಬಾಳು ಘಾತಕವಾದ ಪೈಪೋಟಿ. ಸೋತ ಎದುರಾಳಿಯನ್ನು ಹಿಂಚುಕಿ

ಪಡೆಯಬಹುದಾದ ಮೇಲ್ಮೆಯನ್ನೆಲ್ಲ ಪಡೆದು ಬಿಡುತ್ತಾರೆ. ಈ ಪೈಪೋಟಿಯು ಮುಂದೆ ನಾವು ವಿವರಿಸಲಿರುವ ಅಮೇರಿಕದ ವಾಯುವ್ಯ ತೀರದಲ್ಲಿರುವಂತಹುದಲ್ಲ. ಅಲ್ಲಿ ಮೇಲಾಟವು ಪೂರ್ಣಪ್ರಮಾಣದ ಪ್ರಚಾರದ ಬೆಳಕಿನಲ್ಲಿ ಸಾಗುತ್ತದೆ. ಅಲ್ಲಿ ಘರ್ಷಣೆಯು ಹರ್ಷ ತುಂಬಿದುದಾಗಿ, ಮುಚ್ಚುಮರೆಯಿಲ್ಲದೆ ನಡೆಯುತ್ತದೆ. ಡೋಬುಗಳಲ್ಲಿ ಅದು ರಹಸ್ಯ ಹಾಗೂ ವಿಶ್ವಾಸಘಾತುಕ. ಒಳ್ಳೆಯ ಮನುಷ್ಯ, ಯಶಸ್ವಿಮನುಷ್ಯ ಎಂದರೆ ಇನ್ನೊಬ್ಬನಿಗೆ ಮೋಸ ಮಾಡಿದವನು. ಅಂತಹ ವರ್ತನೆಗೆ ಅವರ ಸಂಸ್ಕೃತಿಯು ವಿಪರೀತವಾದ ತಂತ್ರವಿಧಾನಗಳನ್ನೂ, ವಿಸ್ತಾರವಾದ ಅವಕಾಶಗಳನ್ನೂ ಒದಗಿಸಿದೆ. ಅಂತಿಮವಾಗಿ ಡೋಬು ಜೀವನವೆಲ್ಲ ಈ ಉದ್ದೇಶ್ಯಗಳ ಅಡಿಯಾಳಾಗಿ ಸಾಗುತ್ತಿದೆ.

ಡೋಬುವನರು ಒಡೆತನವನ್ನು ಪರಿಗಣಿಸುವ ರಭಸ, ಅದರಿಂದ ಇತರರು ಹಿಂಸೆಗೊಳಗಾಗುವ ಮಟ್ಟ ಮತ್ತು ಇದಕ್ಕೆ ಪರ್ಯಾಯವಾಗಿ ಇತರರಲ್ಲಿ ಉಂಟಾಗುವ ಸಂಶಯ ಹಾಗೂ ದ್ವೇಷಭಾವಗಳು ಅವರ ಮತಧರ್ಮದಲ್ಲಿ ಅತಿ ಸ್ಪಷ್ಟವಾಗಿ ಪ್ರತಿಫಲಿತವಾಗಿವೆ. ಡೋಬುವಿಗೆ ನೆರೆಹೊರೆಯಲ್ಲಿರುವ ಇಡೀ ಓಷ್ಯೇನಿಯಾ ಪ್ರದೇಶವು ಪ್ರಪಂಚದಲ್ಲಿ ಮಾಂತ್ರಿಕ ರೂಢಿಗಳ ಪ್ರಬಲ ನೆಲೆಗಳಲ್ಲೊಂದು, ಮತಧರ್ಮ ಮತ್ತು ಮಾಂತ್ರಿಕತೆಗಳು ಪರಸ್ಪರ ಪ್ರತ್ಯೇಕವೂ, ವಿರೋಧವೂ ಆದುವು ಎಂದು ಸೂತ್ರೀಕರಿಸುವ ವಿದ್ವಾಂಸರು ಡೋಬುವನರಲ್ಲಿ ಮತಧರ್ಮವಿದೆಯೆಂಬುದನ್ನೇ ಅಲ್ಲಗಳೆಯುತ್ತಾರೆ. ಮಾನವಶಾಸ್ತ್ರದ ದೃಷ್ಟಿಯಿಂದ ಹೇಳುವುದಾದರೆ ಮತಧರ್ಮ ಮತ್ತು ಮಾಂತ್ರಿಕತೆಗಳೆರಡೂ ದೈವಿಕತೆಯನ್ನು ನಿರ್ವಹಿಸಲು ಏರ್ಪಟ್ಟಿರುವ ಪೂರಕ ವಿಧಾನಗಳು. ಮತಧರ್ಮವು ದೈವಿಕ ಜಗತ್ತಿನೊಂದಿಗೆ ಹಿತವಾದ ವೈಯಕ್ತಿಕ ಸಂಬಂಧಗಳನ್ನು ರೂಢಿಸಿಕೊಳ್ಳುವುದರ ಮೇಲೆ ಆಧಾರಗೊಂಡಿದೆ. ಮಾಂತ್ರಿಕತೆಯು ದೈವಿಕ ಜಗತ್ತನ್ನು ಯಂತ್ರ ಸದೃಶವಾಗಿ ನಿಯಂತ್ರಣದಲ್ಲಿಟ್ಟುಕೊಳ್ಳಲು ತಂತ್ರವಿಧಾನಗಳನ್ನು ಬಳಸುತ್ತದೆ. ಡೋಬುಗಳಲ್ಲಿ ದೇವತೆಗಳನ್ನು ಪ್ರಸನ್ನಗೊಳಿಸುವುದು ಎಂಬುದಿಲ್ಲ. ದೇವತೆಗಳು ಮತ್ತು ಭಕ್ತರ ನಡುವಣ ಬಾಂಧವ್ಯವನ್ನು ಬಲಗೊಳಿಸಲು ಕಾಣಿಕೆ ಅಥವಾ ಬಲಿಗಳು ಇಲ್ಲ. ಡೋಬುಗಳಿಗೆ ತಿಳಿದಿರುವ ದೇವತೆಗಳೆಂದರೆ ಕೆಲವು ರಹಸ್ಯವಾದ ಮಾಂತ್ರಿಕನಾಮಗಳು ಮಾತ್ರ. ಜಾನಪದ ಕತೆಗಳಲ್ಲಿ ಬರುವ 'ರಂಪೆಲ್‌ಸ್ಟಿಲ್ಟ್‌ಸ್ಕಿನ್' ಎಂಬ ಹೆಸರನ್ನು ಕಂಡುಹಿಡಿದಾಗ ದೊರೆತ ಮಾಹಿತಿಯ ಪ್ರಕಾರ ಮಾಂತ್ರಿಕ ನಾಮಗಳ ಜ್ಞಾನವು ಅಧಿಷ್ಠಾನ ಶಕ್ತಿಯನ್ನು ನೀಡುತ್ತದೆ. ಆದ್ದರಿಂದ ಬಹುಪಾಲು ಡೋಬುವನರಿಗೆ ದೇವತೆಗಳ ಹೆಸರುಗಳು ತಿಳಿದಿಲ್ಲ. ಯಾವನಿಗೂ ತಾನು ಬೆಲೆ ನೀಡಿ ಪಡೆದಿರುವ ಅಥವಾ ಉತ್ತರಾಧಿಕಾರದಿಂದ ಬಂದಿರುವ ಹೆಸರುಗಳು ಹೊರತು ಬೇರೆ ಯಾವುದೂ ತಿಳಿದಿರುವುದಿಲ್ಲ. ಮುಖ್ಯವಾದ ಹೆಸರುಗಳನ್ನು ಗಟ್ಟಿಯಾಗಿ ಸಹ ಹೇಳುವುದಿಲ್ಲ. ಉಸಿರು ಹಿಡಿದು ಯಾರಿಗೂ ಕೇಳಿಸದಂತೆ ಒಳಧ್ವನಿಯಲ್ಲಿ ಹೇಳಿಕೊಳ್ಳು

ತ್ತಾರೆ. ಇವುಗಳಿಗೆ ಸಂಬಂಧಪಟ್ಟ ನಂಬಿಕೆಗಳೆಲ್ಲ ನಾಮ ಮಾಂತ್ರಿಕತೆಗೆ ಸಂಬಂಧ ಪಟ್ಟವೇ ಹೊರತು ಮತಧರ್ಮರೀತ್ಯಾ ದೈವವನ್ನು ಪ್ರಸನ್ನಗೊಳಿಸಿಕೊಳ್ಳುವುದಕ್ಕಲ್ಲ.

ಪ್ರತಿಯೊಂದು ಕಾರ್ಯಕ್ಕೂ ಅದಕ್ಕೆ ಸಂಬಂಧಪಟ್ಟ ಮಂತ್ರವಿದೆ. ಡೋಬು ವನ್ ನಂಬಿಕೆಗಳಲ್ಲೆಲ್ಲ ಅತ್ಯಂತ ಗಮನಾರ್ಹವಾದುದೆಂದರೆ, ಜೀವನದ ಯಾವ ಕ್ಷೇತ್ರ ದಲ್ಲಿಯೂ ಮಾಟ ಪ್ರಯೋಗವಿಲ್ಲದೇ ಫಲ ದೊರೆಯುವುದಿಲ್ಲ ಎಂಬುದು. ಈಗಾ ಗಲೇ ನಾವು ಜುನಿ ಜೀವನದ ಬಹಳಷ್ಟು ಭಾಗ, ಅವರ ಮತಧರ್ಮದ ಗಮನದಲ್ಲಿ ಇಲ್ಲ ಎಂಬುದನ್ನು ಕಂಡಿದ್ದೇವೆ. ಅವರಲ್ಲಿ ಮತಧರ್ಮಾಚರಣೆಯೆಲ್ಲ ಮಳೆಗಾಗಿ ಎಂದು ಹೇಳುತ್ತಾರೆ. ಪರಂಪರಾಗತ ಸಿದ್ಧಾಂತವು ಉತ್ಪ್ರೇಕ್ಷೆಗೊಂಡಿದೆ ಎನ್ನಬಹುದಾದರೂ ಜೀವನದ ವಿಶಾಲಕ್ಷೇತ್ರಗಳಿಗೆ ಮತಧಾರ್ಮಿಕವಾದ ತಂತ್ರವಿಧಾನಗಳು ನಿರೂಪಿತ ವಾಗಿಲ್ಲ. ಮುಂದೆ ನಾವು ನೋಡುವ ವಾಯವ್ಯ ತೀರಪ್ರದೇಶದಲ್ಲಿ ಅವರ ಜೀವನದ ಪ್ರಧಾನ ಕ್ರಿಯೆಯಾದ ಸ್ಥಾನಮಾನವನ್ನು ಬಲಪಡಿಸಿಕೊಳ್ಳುವುದರಲ್ಲಿ ಮತಧರ್ಮಾ ಚರಣೆಯ ಪಾತ್ರ ಬಹು ಸ್ವಲ್ಪ. ಡೋಬುಗಳಲ್ಲಿ ಪರಿಸ್ಥಿತಿ ಇದಕ್ಕೆ ತದ್ವಿರುದ್ಧ. ಪ್ರತಿಯೊಬ್ಬನೂ, ಯಾವುದೇ ರೀತಿಯ ಫಲಪ್ರಾಪ್ತಿಗೂ ತನಗೆ ತಿಳಿದಿರುವ ಮಾಂತ್ರಿಕ ವಿಧಿಗಳನ್ನೇ ಆಶ್ರಯಿಸಿದ್ದಾನೆ. ಸೂಕ್ತ ಮಂತ್ರ ಪಠಣವಿಲ್ಲದೇ ಗೆಣಸುಗಳು ಬೆಳೆಯ ಲಾರವು. ಪ್ರಣಯಮೋಡಿ–ಮಂತ್ರವಿಲ್ಲದೇ ಲೈಂಗಿಕ ಇಚ್ಛೆ ಹುಟ್ಟಲಾರದು. ಆರ್ಥಿಕ ವ್ಯವಹಾರಗಳಲ್ಲಿ ಬೆಲೆಯುಳ್ಳ ವಸ್ತುಗಳ ವಿನಿಮಯ ಮಾಂತ್ರಿಕತೆಯಿಂದ ಏರ್ಪಡುತ್ತದೆ. ಕೇಡುಂಟರುವ ಮಂತ್ರದ ರಕ್ಷೆಯಿಲ್ಲದೆ ಯಾವ ಮರವನ್ನೂ ಕಳ್ಳತನ ದಿಂದ ಕಾಪಾಡಲು ಸಾಧ್ಯವಿಲ್ಲ. ಮಂತ್ರೋಚ್ಚಾರದಿಂದ ಆಹ್ವಾನಿಸದಲ್ಲದೆ ಗಾಳಿ ಬೀಸದು. ಮೋಡಿ ಅಥವಾ ಮಾಟಗಾರಿಕೆಯ ಒಳಸಂಚಿಲ್ಲದೆ ರೋಗವಾಗಲಿ, ಮರಣ ವಾಗಲಿ ಬರುವುದಿಲ್ಲ,

ಆದ್ದರಿಂದ ಮಂತ್ರಪಠಣಗಳು ಅಸದೃಶ ಪ್ರಾಮುಖ್ಯತೆಯುಳ್ಳವು. ಯಶ ಸ್ಸನ್ನು ಬಯಸುವುದರ ತೀವ್ರತೆಯು, ಸೂಕ್ತವಾದ ಮಾಂತ್ರಿಕ ಸೂತ್ರಕ್ಕೆ ಇರುವ ತೀಕ್ಷ್ಣ ಪೈಪೋಟಿಯಲ್ಲಿ ಕರಾಗುವಾಕ್ಕಾಗಿ ಪ್ರತಿ ಫಲಿತವಾಗುತ್ತದೆ. ಅವುಗಳ ಒಡೆ ತನ ಸಾಮೂಹಿಕವಾದುದಲ್ಲ. ಅವುಗಳ ಪ್ರಧಾನ ಹಕ್ಕು ಪಡೆದಿರುವ ರಹಸ್ಯ ಸಂಘ ಗಳಿಲ್ಲ. ಅವನ್ನು ವಂಶಾನುಕ್ರಮದಲ್ಲಿ ಎಲ್ಲ ಸಹೋದರರೂ ಪಡೆಯಬಹುದಾದ ಸಹೋದರ ಗುಂಪುಗಳಿಲ್ಲ. ಸುಸುವಿನ ಸಹಕಾರವು ಅದರ ಸದಸ್ಯರೆಲ್ಲ ಒಂದಾಗಿ ಒಂದು ಮಂತ್ರದ ಶಕ್ತಿಯ ಪ್ರಯೋಜನ ಪಡೆಯುವಷ್ಟು ಮಟ್ಟಿಗೆ ಮುಂದುವರಿದಿಲ್ಲ. ಸುಸು ಕಟ್ಟುನಿಟ್ಟಾಗಿ ವೈಯಕ್ತಿಕವಾದ ಮಾಂತ್ರಿಕ ಉತ್ತರಾಧಿಕಾರತ್ವವನ್ನು ಸರಿಯಾದ ದಾರಿಯಲ್ಲಿ ಒಯ್ಯುತ್ತದೆ, ಅಷ್ಟೆ. ಒಬ್ಬಾತನಿಗೆ ತಾಯಿಯ ಸಹೋದರನಲ್ಲಿರುವ ಸೂತ್ರಗಳ ಮೇಲೆ ಹಕ್ಕು ಇರುತ್ತದೆ. ಆದರೆ ಒಂದು ಮಂತ್ರವನ್ನು ಕುಲದಲ್ಲಿ ಒಬ್ಬ

ನಿಗೆ ಮಾತ್ರ ಉಪದೇಶಿಸಬಹುದು. ಮಂತ್ರಗಳ ಒಡೆಯನು ತನ್ನ ಸಹೋದರಿಯ ಇಬ್ಬರು ಮಕ್ಕಳಿಗೆ ಇದನ್ನು ಕಲಿಸಲಾಗುವುದಿಲ್ಲವಾದ್ದರಿಂದ ಅವನು ಬಾಧ್ಯಸ್ಥರಲ್ಲಿ ತನಗೆ ಬೇಕಾದವರನ್ನು ಆಯ್ದುಕೊಳ್ಳುತ್ತಾನೆ. ಬಹುಮಟ್ಟಿಗೆ ಹಿರಿಯ ಮಗ ಆಯ್ಕೆಯಾಗುವವನಾದರೂ, ಇನ್ನೊಬ್ಬ ಮಗನು ಅವನಿಗೆ ಪ್ರಿಯನಾದವನಾದರೆ ಅಥವಾ ಹೆಚ್ಚು ಸಹಾಯಕನಾದವನಾದರೆ, ಹಿರಿಯ ಮಗನನ್ನು ತಪ್ಪಿಸಬಹುದು. ಅವನಿಗೆ ಯಾವ ಪರಿಹಾರ ಮಾರ್ಗವೂ ಇಲ್ಲ. ಜೀವಮಾನ ಪರ್ಯಂತ ಅವನು ಗೆಣಸುಗಳಿಗೆ ಮತ್ತು ಆರ್ಥಿಕ ವಿನಿಮಯಗಳಿಗೆ ಬಳಸಬಹುದಾದಂತಹ ಮುಖ್ಯವಾದ ಸೂತ್ರಗಳಿಲ್ಲದೆ ಇರಬೇಕಾಗಬಹುದು. ಅದು ಎತ್ತಿ ಆಡಿದರೆ ಅವಮಾನವಾಗುವಂತಹ ಒಂದು ಪ್ರಸಂಗ. ಸಾಧಾರಣವಾಗಿ ಅದನ್ನು ಮೇಲುಪಡಿಸುವ ಯಾವ ಕ್ರಮವೂ ಇಲ್ಲ. ಹೀಗಿದ್ದರೂ ಪ್ರತಿಯೊಬ್ಬ ಗಂಡಸೂ, ಹೆಂಗಸೂ ಕೆಲವು ದೈವಿಕಶಕ್ತಿಯುಳ್ಳ ಶಬ್ದಗಳನ್ನು ತಿಳಿದುಕೊಂಡಿರುತ್ತಾರೆ. ಮಂತ್ರಗಳು ಹಾಗೂ ಪ್ರಣಯ ಯಕ್ಷಿಣಿಗಳು ಬಹು ಪ್ರಚಾರದಲ್ಲಿವೆ. ಇಂದು ತಮ್ಮ ತಾಯ್ನೆಲದಿಂದ ದೂರವಿರುವ ಕೆಲಸಗಾರ ಯುವಕರು ವಾರಸುದಾರಿಕೆಯನ್ನು ಎಣಿಸದೇ ಯಾವುದಾದರೊಂದು ರಕ್ಷಾಮಂತ್ರವನ್ನು ಮಾರಬಹುದು. ಅಂತಹ ಸಂದರ್ಭದಲ್ಲಿ ವ್ಯವಹಾರಕ್ಕೆ ಸಂಬಂಧಪಟ್ಟ ಇಬ್ಬರೂ ಬಿಳಿಯವನೊಬ್ಬನ ಸೇವಕರಾಗಿದ್ದು ಕೆಲಮಟ್ಟಿಗೆ ತಮ್ಮ ಹುಟ್ಟು ಸಂಸ್ಕೃತಿಯಿಂದ ದೂರವಾಗಿದ್ದರೂ ಸಹ ಒಂದು ಮಂತ್ರ ಶಬ್ದಕ್ಕೆ ಪ್ರತಿಯಾಗಿ ನಾಲ್ಕು ತಿಂಗಳ ಕರಾರು ಕೂಲಿಗಾರನ ಸಂಬಳವು ಕೈ ಬಿಡುತ್ತದೆ. ಈ ಬೆಲೆಯ ಪ್ರಮಾಣವು ಅವುಗಳ ಮಹತ್ವವನ್ನು ಸ್ವಲ್ಪವಾದರೂ ಸೂಚಿಸೀತು.

ಡಾ. ಫಾರ್ಚೂನ್ ಅವರು ವಾಸಿಸುತ್ತಿದ್ದ ಟೆವಾರಾ ಎಂಬ ಸಣ್ಣದ್ವೀಪದ ಡೋಬುವನ್ನರು ಡೋಬುದ್ವೀಪಗಳಿಗೆ ಬಂದಿದ್ದ ಶ್ವೇತವರ್ಣೀಯರಾಗಲಿ, ಮಿಷನ್ನುಗಳ ಸ್ಥಳೀಯ ಪಾಲಿನೇಷಿಯನ್ ಉಪಾಧ್ಯಾಯರುಗಳಾಗಲಿ ತೋಟಗಳನ್ನು ನಿರ್ವಹಿಸಬಲ್ಲವರಾಗಿದ್ದರೆಂಬುದನ್ನು ದಿಟ್ಟವಾಗಿ ಅಲ್ಲಗಳೆದರು. ಮಂತ್ರವಿದ್ಯೆಯಿಲ್ಲದೆ ಅದು ಅಸಾಧ್ಯ ಎಂದು ಅವರ ಅಭಿಪ್ರಾಯ. ಸ್ಥಳೀಯ ನಿಯಮಗಳು ಸ್ಥಳೀಯರಿಗೆ ಮಾತ್ರ ಸರಿಹೊಂದುವುದು ಎಂಬ ಸರ್ವವ್ಯಾಪಿ ಆದಿವಾಸಿ ಸಬೂಬನ್ನು ಅವರು ಉಲ್ಲೇಖಿಸಲಿಲ್ಲ. ಮಂತ್ರದ ಮೇಲೆ, ಡೋಬುವನರ ವಿಶ್ವಾಸ ಅತಿ ಪ್ರಬಲವಾಗಿದೆ. ಬಿಳಿಯರು ಅಥವಾ ಪಾಲಿನೇಷಿಯನರು ಆ ಕಡ್ಡಾಯದಿಂದ ಮುಕ್ತರಾಗಿರುವರೆಂದು ಒಪ್ಪಿಕೊಳ್ಳಲು ಅವಕಾಶ ನೀಡುವುದಿಲ್ಲ.

ಹಕ್ಕಿನ ಆಧಾರದ ಮೇಲೆ ತಮ್ಮ ತಾಯಿಯ ಸಹೋದರನಿಂದ ಮಂತ್ರವಾಕ್ಯಗಳ ಒಡೆತನವನ್ನು ಪಡೆದುಕೊಳ್ಳುವ ಅಧಿಕಾರವನ್ನು ಸಹೋದರಿಯ ಗಂಡುಮಕ್ಕಳು ಹೊಂದಿದ್ದಾರೆ. ತಂದೆಯೊಂದಿಗೆ ಅವನ ಸ್ವಂತ ಮಕ್ಕಳು ಕುಟುಂಬ ಜೀವನದಲ್ಲಿ

ಸಮೀಪ ಬಾಂಧವ್ಯ ಹಾಗೂ ತೋಟದ ಕೆಲಸಗಳಲ್ಲಿ ಬೆರೆತು ಸಾಮರಸ್ಯವನ್ನು ಬೆಳೆಸಿ ಕೊಂಡಿರುತ್ತಾರೆ. ಈ ಎರಡು ಗುಂಪುಗಳಿಗೂ ಮಂತ್ರವಾಕ್ಯಗಳ ಒಡೆತನಕ್ಕಾಗಿ ತೀವ್ರವಾದ ಪೈಪೋಟಿ ನಡೆಯುತ್ತದೆ. ಅವನ ಸ್ವಂತ ಮಕ್ಕಳು ಸಾಧಿಸಬಹುದಾದ ಪ್ರತಿಹಕ್ಕು ಕಾರ್ಯತಃ ಡೋಬುವನರಲ್ಲಿ ಮಾನ್ಯತೆ ಪಡೆಯುವಷ್ಟು ಬಲಶಾಲಿಯಾಗಿದೆ. ಡೋಬುವನ್ ಸಿದ್ಧಾಂತದ ಪ್ರಕಾರ ವಂಶಾನುಗತವಾದ ಮಂತ್ರದ ಸಹಾಯವಿಲ್ಲದೆ ಗೆಣಸಿನ ಬೀಜವು ಬೆಳೆಯಲಾರದು. ಬೀಜವನ್ನು ಕುಲದಿಂದ ಬೇರ್ಪಡಿಸುವಂತಿಲ್ಲ ಎಂಬುದನ್ನು ಈ ಮೊದಲೇ ಕಂಡಿದ್ದೇವೆ. ಆದರೂ ಪ್ರತಿಯೊಬ್ಬನೂ ತೋಟಗಾರಿಕೆಯ ಮಂತ್ರಗಳನ್ನು ತನ್ನ ಮಕ್ಕಳಿಗೂ ಕಲಿಸುತ್ತಾನೆ. ವಿವಾಹದಿಂದ ರೂಪಗೊಂಡ ಗುಂಪಿನ ಬಲಕ್ಕೆ ಮಣಿದು ನೀಡಿರುವ ಇನ್ನೊಂದು ಮುಚ್ಚುಮರೆಯ ರಿಯಾಯಿತಿಯಿದು. ಇದರಿಂದಾಗಿ ಪ್ರತಿಯೊಬ್ಬವ್ಯಕ್ತಿ ಬೇರಾರಿಗೂ ಪಾಲಿಲ್ಲದಂತೆ ಮಂತ್ರದ ಒಡೆತನದ ಹಕ್ಕನ್ನು ನೀಡುವ ಡೋಬುವನ್ ಸಿದ್ಧಾಂತವನ್ನು ತೀವ್ರವಾಗಿ ಅಲ್ಲಗಳೆದಂತಾಗುತ್ತದೆ.

ಈ ಮಂತ್ರಗಳು, 'ವೈದ್ಯರ ವೃತ್ತಿ, ವ್ಯಾಪಾರದ ಜಾಗದ ಅಥವಾ ಅಂಗಡಿಯ ಖ್ಯಾತಿ, ಇಲ್ಲವೇ ಶ್ರೀಮಂತ ಪದವಿಯ ಬಿರುದು ಹಾಗೂ ಭೂಮಿಗಳ ರೀತಿಯವು. ತಾನು ಒಂದೆಡೆಯಲ್ಲಿ ನಡೆಸುತ್ತಿರುವ ವೃತ್ತಿಯನ್ನು ಒಬ್ಬ ವೈದ್ಯನು, ವ್ಯವಹಾರದಲ್ಲಿ ಪಾಲುಗಾರರಾಗಿರದೇ ವಿರೋಧಿಗಳಾಗಿರುವ ಇಬ್ಬರಿಗೆ ಮಾರಿದರೆ ಇಲ್ಲವೇ ಬರೆದು ಕೊಟ್ಟರೆ, ಆ ವ್ಯವಹಾರವನ್ನು ಕಾನೂನು ಎತ್ತಿ ಹಿಡಿಯುವುದಿಲ್ಲ. ಅಂಗಡಿಯ ಖ್ಯಾತಿಯ ವಿಚಾರವೂ ಹೀಗೆಯೇ. ಪಾಳೇಗಾರಿಕೆಯ ಕಾಲದಲ್ಲಿ ಒಂದೇ ಬಿರುದು ಹಾಗೂ ಸಂಬಂಧಪಟ್ಟ ಭೂಮಿಗಳನ್ನು ಇಬ್ಬರಿಗೆ ನೀಡಿದ ರಾಜ ತನ್ನ ಮನೆಯ ಮುಂದೆ ದಂಗೆಯೇಳಲು ಆಹ್ವಾನ ನೀಡಿದಂತಾಗುತ್ತಿತ್ತು. ಆದರೆ ಡೋಬುಗಳಲ್ಲಿ (ಇಬ್ಬರು ಉತ್ತರಾಧಿಕಾರಿಗಳು) ಪಾಲುಗಾರರಲ್ಲದೆ, ಪ್ರಿಯರಾದ ಮಿತ್ರರಲ್ಲದೆ, ಒಟ್ಟು ಆಸ್ತಿಯಲ್ಲಿ ಪಾಲಿರುವವರಲ್ಲದೆ, ಪರಸ್ಪರ ವಿರೋಧಿಗಳಾಗಿರುವಾಗಲೂ ಈ ರೂಢಿಯನ್ನು ಸಾಕಷ್ಟು ಮಟ್ಟಿಗೆ ವಿಧಿಬದ್ಧವಾಗಿ ಪರಿಗಣಿಸಲಾಗಿದೆ. ಒಂದೇ ಒಂದು ಹಕ್ಕನ್ನು ಇಬ್ಬರಿಗೆ ನೀಡಲಾಗುತ್ತದೆ. ಹೀಗಿದ್ದರೂ ತಂದೆ ತೀರಿ ಹೋಗುವಾಗ್ಗೆ ಸಹೋದರಿಯ ಮಗನಿಗಿಂತ ಸ್ವಂತ ಮಗನು ಅವನ ಮಂತ್ರ ವಿದ್ಯೆಯ ಹೆಚ್ಚು ಪಾಲನ್ನು ಪಡೆದುಕೊಂಡಿದ್ದರೆ ಡೋಬುವನ್ ಸಂಪ್ರದಾಯದ ಆದೇಶದಂತೆ, ಸಹೋದರಿಯ ಮಗನು ಸ್ವಂತ ಮಗನಿಂದ ತನ್ನ ಹಕ್ಕನ್ನು ಸಾಧಿಸಿಕೊಳ್ಳುತ್ತಾನೆ. ಅವನಿಗೆ ಪ್ರತಿಫಲವೂ ಇಲ್ಲದೆ ಮಂತ್ರವಿದ್ಯೆ ಕಲಿಸಬೇಕು. ಪರಿಸ್ಥಿತಿ ಇದಕ್ಕೆ ವಿರುದ್ಧವಾಗಿದ್ದರೆ ಸ್ವಂತ ಮಗನಿಗೆ ಅಂತಹ ಯಾವ ಹಕ್ಕೂ ಇರುವುದಿಲ್ಲ.

ಡೋಬುಗಳ ಮಂತ್ರ, ಪೂರ್ಣ ಪರಿಣಾಮಕಾರಿಯಾಗಬೇಕಾದರೆ ಪದಶುದ್ಧ

ವಾಗಿರಬೇಕು. ಬಹಳ ವೇಳೆ ಅವುಗಳೊಂದಿಗೆ ನಿರ್ದಿಷ್ಟವಾದ ಎಲೆಗಳನ್ನೋ, ಮರಗಳನ್ನೋ ಸೂಕ್ಷ್ಮವಾದ ಸಾಂಕೇತಿಕ ಕ್ರಿಯೆಗಳ ಸಹಿತ ಬಳಸುತ್ತಾರೆ. ಅವುಗಳಲ್ಲಿ ಬಹುಭಾಗವು ಅನುಕಂಪನ ಮಾಂತ್ರಿಕತೆಗೆ ನಿದರ್ಶನಗಳು. ಹುಲುಸಾಗಿ ಬೆಳೆಯುವ ಜಲಸಸ್ಯಗಳನ್ನು ಕುರಿತು ಹೊಸದಾಗಿ ಎಲೆ ಚಿಗುರಿರುವ ಗೆಣಸಿನ ಬಳಿ ಹೇಳಿ ಅದು ಸಹ ಹಾಗೇ ಹುಲುಸಾಗಿ ಬೆಳೆಯುವುದನ್ನು ಅನುಕರಿಸುವಂತೆ ಮಾಡುವುದು, ಇಲ್ಲವೇ ಮರ ಕುಟುಕವು ಮರದ ಕಾಂಡವನ್ನು ಕೊರೆಯುವುದನ್ನು ವಿವರಿಸಿ ಏಡಿಹುಣ್ಣು ಅದೇ ರೀತಿ ಕಾಡುವಂತೆ ಮಾಡುವುದು ಮೊದಲಾದ ತಂತ್ರವಿಧಾನಗಳು ಅದರ ಆಧಾರ. ಈ ಮಂತ್ರಗಳು ಉಪದ್ರವಕಾರಿಗಳಾಗಿರುವುದರಿಂದಲೂ, ಒಬ್ಬನ ಲಾಭ ಇನ್ನೊಬ್ಬನ ನಷ್ಟ ಎಂಬ ಜೋಬುವನ್ ನಂಬಿಕೆಯನ್ನು ಎಷ್ಟೊಂದು ಮಟ್ಟಿಗೆ ಮೈಗೂಡಿಸಿಕೊಂಡಿವೆಯೆಂಬುದರಿಂದಲೂ ಗಮನಾರ್ಹವಾದುವು.

ತೋಟದ ಸಂಸ್ಕಾರವು ಭೂಮಿಯನ್ನು ಗೆಣಸು ಬೀಜಗಳನ್ನು ಬಿತ್ತಲು ಸಿದ್ಧಪಡಿಸುವಾಗ ತೊಡಗಿ, ಸುಗ್ಗಿಯವರೆಗೆ ಮುಂದುವರಿಯುತ್ತದೆ. ಬಿತ್ತನೆಯ ಮಂತ್ರಗಳು ಆಗ ತಾನೇ ಬಿತ್ತಿದ ಗೆಣಸುಗಳನ್ನು ಬಹು ದೊಡ್ಡದಾದ ಜಾತಿಯವೆಂದೂ, ಆಗಲೇ ಬೆಳೆದು ನಿಂತಿರುವುದೆಂದೂ ವರ್ಣನೆ ಮಾಡುತ್ತವೆ. ಚಿಗುರೊಡೆಯುವ ಕಾಲದ ಮಂತ್ರಗಳು ಸುತ್ತಿಕೊಳ್ಳುತ್ತಿರುವ ಬಳ್ಳಿಗಳನ್ನು ಬಲೆ ನೇಯುವ ದೊಡ್ಡ ಜೇಡವಾದ ಕಪಾಲಿಯು ಚಿತ್ರಣದಂತೆ ನಿರೂಪಿಸುತ್ತವೆ

ಕಪಾಲಿ, ಕಪಾಲಿ
ಸುತ್ತು, ಸುರುಳಿ ಸುತ್ತಿಕೊಳ್ಳುತ
ಸಂತೋಷದಿಂದ ನಗುವನು
ನಾನು ಎಲೆ ಗುಂಪುಗಳಿಂದ ಕೂಡಿದ ನನ್ನ ತೋಟದೊಂದಿಗೆ
ನಾನು ನನ್ನ ಎಲೆಗಳೊಂದಿಗೆ
ಕಪಾಲಿ, ಕಪಾಲಿ
ಸುತ್ತು ಸುರುಳಿ ಸುತ್ತಿಕೊಳ್ಳುತ
ಸಂತೋಷದಿಂದ ನಗುವನು.

ಅದುವರೆಗೆ ಗೆಣಸುಗಳಿಗೆ ಮಾಂತ್ರಿಕ ಕಾವಲನ್ನು ನಿಯಮಿಸಿಲ್ಲ. ಮಾಂತ್ರಿಕ ಕಳ್ಳತನ ಆರಂಭವಾಗಿಲ್ಲ. ಈಗ ಅವು ಸ್ವಲ್ಪ ಬೆಳೆದು ಅವುಗಳನ್ನು ತಮ್ಮ ಸ್ವಂತ ಸ್ಥಳದಲ್ಲಿಯೇ ಬೇರು ಬಿಟ್ಟು ಭದ್ರವಾಗಿ ನಿಲ್ಲುವಂತೆ ಮಾಡುವ ಅವಶ್ಯಕತೆಯೇರ್ಪಟ್ಟಿದೆ. ಗೆಣಸುಗಳು ಸಹ ವ್ಯಕ್ತಿಗಳಂತೆ ಪರಿಗಣಿತವಾಗಿದ್ದು, ಅವು ರಾತ್ರಿ ವೇಳೆ ತೋಟದಿಂದ ತೋಟಕ್ಕೆ ಅಡ್ಡಾಡುತ್ತವೆಂದು ನಂಬಿಕೆಯಿದೆ. ಬಳ್ಳಿಗಳು ಹಿಂದೆಯೇ ನಿಲ್ಲುತ್ತವೆ; ಆದರೆ ಗೆಡ್ಡೆಗಳು ಹೊರಟು ಹೋಗುತ್ತವೆ. ಪ್ರಾತಃಕಾಲದ ನಡುವಿನ

ವೇಳೆಗೆ ಅವು ಹಿಂತಿರುಗುತ್ತವೆ. ಈ ಕಾರಣದಿಂದ ಸಾಧಾರಣವಾಗಿ ತೋಟದ ಕೆಲಸ ಮಾಡುವ ಕಾಲವಾದ, ಬೆಳಗಿನ ಹೊತ್ತು ಗೆಣಸುಗಳನ್ನು ಅಗೆಯುವುದಿಲ್ಲ. ಹಾಗೆ ಮಾಡುವುದು ವ್ಯಥಾಶ್ರಮ. ಅವು ಹಿಂತಿರುಗುವುದನ್ನು ನಮ್ರತೆಯಿಂದ ಕಾಯುತ್ತ ಇರಬೇಕಾಗುತ್ತದೆ. ಅಲ್ಲದೆ ಬೆಳೆಯುತ್ತಿರುವ ಗೆಣಸುಗಳು ಬಹುಬೇಗ ತಮ್ಮ ಸ್ವತಂತ್ರಕ್ಕೆ ಅಡ್ಡಿ ಬರುವುದನ್ನು ಇಷ್ಟಪಡುವುದಿಲ್ಲ. ಆದ್ದರಿಂದ ಗಿಡಗಳು ಒಂದು ಮಟ್ಟಕ್ಕೆ ಬೆಳೆಯುವವರೆಗೆ ಫಲ ಕೊಡುವ ಮಂತ್ರ ಪಠಣಗಳನ್ನು ಮಾಡುವುದಿಲ್ಲ. ಈ ಮಂತ್ರಗಳು ಅಲೆಮಾರಿ ಗೆಣಸುಗಳನ್ನು, ಅವುಗಳನ್ನು ನೆಟ್ಟ ತೋಟವನ್ನು ಬಿಟ್ಟು ತನ್ನ ಸ್ವಂತ ತೋಟದಲ್ಲಿ ನೆಲೆಸುವಂತೆ ಆಕರ್ಶಿಸುತ್ತವೆ. ಉತ್ತರಾಧಿಕಾರಕ್ಕೆ ಇರುವ ಸೆಣಸಾಟದಂತೆಯೇ ಡೋಬುಗಳಲ್ಲಿ ತೋಟಗಾರಿಕೆಯೂ ಒಂದು ಪೈಪೋಟಿ. ಯಾವನಿಗೂ ಸಹ ಇನ್ನೊಬ್ಬ ತೋಟಗಾರ ತನಗಿಂತ ಹೆಚ್ಚಿಗೆ ಗೆಣಸುಗಳನ್ನು ನೆಡಬಹುದು ಅಥವಾ ತನ್ನ ಬೀಜದ ಗೆಡ್ಡೆಗಳಿಂದ ಹೆಚ್ಚಿನ ಗೆಣಸುಗಳನ್ನು ಬೆಳೆಸಬಹುದು ಎಂಬ ಭಾವನೆಯೇ ಇರುವುದಿಲ್ಲ. ತನ್ನ ನೆರೆಯುವನು ತನಗಿಂತ ಹೆಚ್ಚಿನ ಫಸಲು ಪಡೆದನೆಂದರೆ ಅದು ತನ್ನ ತೋಟದಿಂದಲೋ, ಇಲ್ಲವೇ ಇನ್ನಾರ ತೋಟದಿಂದಲೋ ಮಾಂತ್ರಿಕವಾಗಿ ಕದ್ದುದೇ ಎಂದು ಪರಿಗಣಿತವಾಗುತ್ತದೆ. ಆದ್ದರಿಂದ ಈ ಕಾಲದಿಂದ ಕೊಯ್ಲು ಮುಗಿಯುವವರೆಗೆ ತನ್ನ ತೋಟಕ್ಕೆ ಕಾವಲು ಹಾಕುತ್ತಾನೆ; ನೆರೆಯುವನ ತೋಟದ ಗೆಣಸುಗಳನ್ನು ಸೆಳೆಯಲು ತನಗೆ ತಿಳಿದ ಮಂತ್ರಗಳನ್ನು ಮಾಡುತ್ತಾನೆ. ತನ್ನ ನೆರೆಯುವರು ಮಾಡಿರುವ ಮಂತ್ರಗಳ ತಡೆಗಾಗಿ ಪ್ರತಿ ಮಂತ್ರಗಳನ್ನು ಪ್ರಯೋಗಿಸುತ್ತಾನೆ. ಈ ಪ್ರತಿಮಂತ್ರಗಳು ಗೆಣಸಿನ ಗೆಡ್ಡೆಯನ್ನು ನೆಟ್ಟ ಭೂಮಿಗೆ ಭದ್ರವಾದ ಬೇರಿನಿಂದ ಅಂಟಿಸಿ, ಸ್ವಂತದವನ ಕೊಯ್ಲು ಮುಗಿಯುವವರೆಗೆ ರಕ್ಷಿಸುತ್ತವೆ.

* ಕಪಿಯೂರ ಮರವು ಎಲ್ಲಿ ನಿಂತಿದೆ.
ನನ್ನ ತೋಟದ ಗರ್ಭದಲ್ಲಿ,
ನನ್ನ ಮನೆಯ ಜಗಲಿಯ ಬುಡದಲ್ಲಿ
ನಿಂತಿರುವವನು
ಭದ್ರವಾಗಿ, ಬಾಗದೆ, ನಿಂತಿರುವವನು
ನಿಶ್ಚಲವಾಗಿ ನಿಂತಿರುವವನು
ಕಟ್ಟಿಗೆ ಒಡೆಯುವವರು ಒಡೆಯುವರು
ಕಲ್ಲೊಗೆಯುವವರು ಒಗೆಯುವರು

---

* ಪೊದೆಗಾಡಿನ ಅತಿ ಗಟ್ಟಿಯಾದ ಮರ. ಎಲ್ಲ ಮರಗಳನ್ನು ಬಗ್ಗಿಸುವ ಬಿರುಗಾಳಿ ಬೀಸಿದಾಗ ಇದು ಮಾತ್ರ ತಲೆಯೆತ್ತಿ ನಿಂತಿರುತ್ತದೆ.

ಅವು ನಿಶ್ಚಲವಾಗಿ ನಿಂತಿರುವುವು
ಜೋರಿಂದ ನೆಲ ತುಳಿಯುವವರು, ತುಳಿಯುವವರು
ಅವು ನಿಶ್ಚಲವಾಗಿ ನಿಂತಿರುವುವು
ಬಾಗದೆ ಭದ್ರವಾಗಿ
ಅವನು ಹಾಗೆ ಇರುವ, ಅವನು ಹಾಗೆ ಇರುವ
ಕುಲಿಯಾ* ಗೆಣಸು
ಅವನು ಭದ್ರವಾಗಿ ಬಾಗದೆ ಇರುವ
ಅವನು ಹಾಗೇ ಇರುವ ನಿಶ್ಚಲವಾಗಿರುವ
ನನ್ನ ತೋಟದ ಗರ್ಭದಲ್ಲಿ

ತೋಟದ ಗೋಪ್ಯತೆಗೆ ಎಷ್ಟೊಂದು ಮಟ್ಟದ ಮಾನ್ಯತೆಯಿದೆಯೆಂದರೆ ರೂಢಿಯ ಪ್ರಕಾರ ಗಂಡ ಹೆಂಡತಿ ಅದರಲ್ಲಿ ಸಂಭೋಗ ಮಾಡುತ್ತಾರೆ. ಒಳ್ಳೆಯ ಫಸಲು ಕಳ್ಳತನ ಮಾಡಿದ್ದಾರ ಕುರುಹು. ಆ ಒಳ್ಳೆಯ ಫಸಲು ಅಪಾಯಕಾರಿ ಮಾಟದಿಂದ ತನ್ನ ಸುಸೇವಿನವರದೂ ಸೇರಿದಂತೆ ಇತರರ ತೋಟಗಳಿಂದ ಎತ್ತಿಹಾಕಿದುದು ಎಂದು ಪರಿಗಣಿತವಾಗುತ್ತದೆ. ಫಸಲು ಎಷ್ಟು ಎಂಬುದು ಬಹು ರಹಸ್ಯವಾದ ವಿಷಯ. ಅದನ್ನು ಪ್ರಸ್ತಾಪಿಸುವುದು ಮಾನ ಕಳೆದಂತೆ. ನೆರೆಯ ಓಷ್ಯೇನಿಯೂ ದ್ವೀಪಗಳಲ್ಲಿ ಸುಗ್ಗಿಯು, ಗೆಣಸುಗಳ ವಿಧಿ ವಿಹಿತವಾದ ಪ್ರದರ್ಶನಕ್ಕೆ ಸಂದರ್ಭ; ವರ್ಷದ ಉತ್ಸವಾಚರಣೆಗಳ ಸಾಲಿನಲ್ಲಿ ಪ್ರಧಾನವಾದ ವೈಭವ ಪೂರ್ಣ ಮೆರೆತ; ಡೋಬುಗಳಲ್ಲಿ ಅದು ಕಳ್ಳತನದಷ್ಟು ರಹಸ್ಯ. ಗಂಡನೂ, ಹೆಂಡತಿಯೂ ಫಸಲನ್ನು ಸ್ವಲ್ಪ ಸ್ವಲ್ಪವಾಗಿ ಉಗ್ರಾಣಕ್ಕೆ ಒಯ್ಯುತ್ತಾರೆ. ತಮ್ಮ ಫಸಲು ಉತ್ತಮವಾದುದಾದರೆ ಇತರರು ತಮ್ಮ ಮೇಲೆ ಹೊಂಚು ಹಾಕುವರೆಂದು ಭೀತಿಗೊಳ್ಳಲು ಕಾರಣಗಳಿವೆ. ರೋಗ ಅಥವಾ ಮರಣದ ಸಂದರ್ಭದಲ್ಲಿ ಕಣಿಗಾರನು ಆ ದುರಂತಕ್ಕೆ ಒಳ್ಳೆಯ ಫಸಲೇ ಕಾರಣ ಎಂದು ಹೇಳುತ್ತಾನೆ ಯಾವನೋ ಒಬ್ಬ ಒಳ್ಳೆಯ ಬೆಳೆಯನ್ನು ಕಂಡು ಕರುಬಿ, ಯಶಸ್ವಿ ತೋಟಗಾರನ ಮೇಲೆ ಮೋಡಿ ಮಾಡಿದ್ದಾನೆಂದು ನಂಬಲಾಗುತ್ತದೆ.

ರೋಗಕಾರಕ ಮಂತ್ರಗಳು ವಿಶೇಷವಾದ ಕೇಡು ಮಾಡುವ ಶಕ್ತಿಯನ್ನು ಪಡೆದಿವೆ. ಟೆವಾರಾ ಗ್ರಾಮದ ಪ್ರತಿಯೊಬ್ಬ ಗಂಡಸೂ, ಪ್ರತಿಯೊಬ್ಬ ಹೆಂಗಸೂ ಒಂದರಿಂದ ಐದರವರೆಗೆ ಅಂತಹ ಮಂತ್ರಗಳನ್ನು ಕಲಿತಿರುತ್ತಾರೆ. ಪ್ರತಿಯೊಂದೂ ಒಂದು ನಿರ್ದಿಷ್ಟ ರೋಗವನ್ನು ತರುವ ಸಿದ್ಧ ಮಂತ್ರ. ಆ ಮಂತ್ರವನ್ನು ಪಡೆದಿರುವವನು ಆ ರೋಗವನ್ನು ಗುಣಪಡಿಸುವ ಮಂತ್ರವನ್ನೂ ಪಡೆದಿರುತ್ತಾನೆ. ಕೆಲವು ವ್ಯಕ್ತಿಗಳು

* ಗೆಣಸಿನ ಒಂದು ಜಾತಿ, ಇಡೀ ವಚನವನ್ನು ಎಲ್ಲ ಜಾತಿಗಳಿಗೂ ಪುನರುಚ್ಚರಿಸುವರು

ನಿರ್ದಿಷ್ಟವಾದ ರೋಗಗಳ ಏಕಸ್ವಾಮ್ಯ ಪಡೆದಿರುತ್ತಾರೆ. ಆ ಕಾರಣದಿಂದ ಆ ರೋಗವನ್ನು ಉಂಟುಮಾಡಲೂ, ಗುಣಪಡಿಸಲೂ, ಬೇಕಾದ ಶಕ್ತಿಯ ಸಂಪೂರ್ಣ ಒಡೆತನ ಅವರದಾಗಿರುತ್ತದೆ. ಉದಾಹರಣೆಗೆ ಈ ಪ್ರದೇಶದಲ್ಲಿ ಆನೆಕಾಲು ಅಥವಾ ಗಂಡಮಾಲೆ ಆಯಿತೆಂದರೆ ಅದಕ್ಕೆ ಯಾರು ಕಾರಣ ಎಂಬುದು ಅವರಿಗೆ ಗೊತ್ತು. ಈ ಮಂತ್ರಗಳು ತಮ್ಮ ಒಡೆಯರನ್ನು ಬಲಶಾಲಿಗಳನ್ನಾಗಿ ಮಾಡುತ್ತವೆ. ಅವುಗಳ ಒಡೆತನ ತೀವ್ರವಾಗಿ ಬಯಸತಕ್ಕಂತಹುದು.

ಈ ಮಂತ್ರಗಳು ತಮ್ಮ ಒಡೆಯರಿಗೆ ಈ ಸಂಸ್ಕೃತಿಯಲ್ಲಿ ಪ್ರದರ್ಶಿಸಬಹುದಾದ ಅತ್ಯುಗ್ರ ಭಾವವನ್ನು ತೋರಲು ಅವಕಾಶ ನೀಡುತ್ತವೆ. ಸಾಧಾರಣವಾಗಿ ಅಂತಹ ತೋರಿಕೆಯು ನಿಷಿದ್ಧ. ಡೋಬುವನರಲ್ಲಿ ಒಬ್ಬನು ಇನ್ನೊಬ್ಬನಿಗೆ ಕೇಡು ಮಾಡಲು ಬಯಸಿದರೆ ಅವನು ಅದನ್ನು ಘೋಷಿಸಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಅವನು ಅತಿ ವಿನಯದಿಂದ ನಡೆದುಕೊಂಡು ಇಮ್ಮಡಿ ಸ್ನೇಹವನ್ನು ತೋರುತ್ತಾನೆ. ಸಲಿಗೆಯಿಂದ ಮೋಡಿ ಬಲವಾಗುತ್ತದೆಂದು ಆತನು ನಂಬಿದ್ದು ದ್ರೋಹ ಬಗೆಯಲು ಸೂಕ್ತ ಸಮಯಕ್ಕಾಗಿ ಹೊಂಚು ಹಾಕುತ್ತಾನೆ. ಆದರೆ ರೋಗಕಾರಕ ಮಂತ್ರವನ್ನು ತನ್ನ ವೈರಿಯ ಮೇಲೆ ಪ್ರಯೋಗಿಸುವಾಗಲೂ, ತನ್ನ ಸಹೋದರಿಯ ಮಗನಿಗೆ ಅದನ್ನು ಉಪದೇಶಿಸುವಾಗಲೂ ಅವನಿಗೆ ತನ್ನ ಕೇಡಿಗತನವನ್ನು ಬಹಿರಂಗವಾಗಿ ತೋರಲು ಅನುಮತಿಯಿದೆ. ಅದು ತನ್ನ ವೈರಿಯ ದೃಷ್ಟಿಯಿಂದ ಶ್ರವಣದಿಂದ ದೂರವಾದ ಸಂದರ್ಭ. ಆದರಿಂದ ಅವನು ತನ್ನ ನಟನೆಯನ್ನೆಲ್ಲಾ ಒತ್ತಟ್ಟಿಗಿಡುತ್ತಾನೆ. ಅವನು ಮಂತ್ರವನ್ನು ತನ್ನ ವೈರಿಯ ಮಲಮೂತ್ರಗಳಿಗೆ ಇಲ್ಲವೇ ಅವನು ಬರುವ ದಾರಿಯಲ್ಲಿರುವ ಯಾವುದಾದರೂ ಬಳ್ಳಿಗೆ ಊದುತ್ತಾನೆ. ಬಳಿಕ ವೈರಿ ಅದನ್ನು ಉಜ್ಜಿಕೊಂಡು ಹೋಗುವನೇ ಎಂಬುದನ್ನು ನೋಡಲು ಅವಿತುಕೊಂಡು ಕಾಯುತ್ತಾನೆ. ಮೋಡಿಯನ್ನು ಊರುಬುವಾಗ ಮೋಡಿಗಾರನು ಮಹೋನ್ನತ ಚೇತನೆಯಾಗಿ ತಾನು ಪ್ರಯೋಗಿಸುತ್ತಿರುವ ರೋಗದ ಕೊನೆಯ ಹಂತದ ವೇದನೆಯನ್ನು ಅನುಕರಿಸುತ್ತಾನೆ. ನೆಲದ ಮೇಲೆ ಬಿದ್ದು ವಿಲಿ ವಿಲಿ ಒದ್ದಾಡುತ್ತ, ಸೆಳೆದು ಸೆಳೆದು ಅರಚುತ್ತಾನೆ. ಹೀಗೆ ಕರಾರುವಾಕ್ಕಾಗಿ ಅದರ ಪರಿಣಾಮಗಳನ್ನು ಅನುಕರಿಸಿದರೆ ಮಾತ್ರ ಮಂತ್ರವು ತನ್ನ ಕೆಲಸವನ್ನು ಮಾಡುತ್ತದೆ. ಆಗ ಮೋಡಿಗಾರನಿಗೆ ತೃಪ್ತಿ. ವೈರಿಯು ಉಜ್ಜಿಕೊಂಡು ಹೋದ ಬಳ್ಳಿಯ ಒಂದು ತುಂಡನ್ನು ತೆಗೆದುಕೊಂಡು ತನ್ನ ಮನೆಗೆ ಹಿಂತಿರುಗುತ್ತಾನೆ. ಅದು ಅವನ ಗುಡಿಸಲಲ್ಲಿ ಒಣಗುತ್ತದೆ. ವೈರಿಯು ಮರಣಕ್ಕೆ ಇವನು ಸಿದ್ಧನಾದಾಗ ಅದನ್ನು ಬೆಂಕಿಗೆ ಹಾಕಿ ಉರಿಸುತ್ತಾನೆ.

ಮಂತ್ರಗಳು ಅವುಗಳೊಂದಿಗೆ ತೋರ್ಪಡಿಸುವ ಕ್ರಿಯೆಗಳಂತೆಯೇ ಸುಸ್ಪಷ್ಟ. ಪ್ರತಿ ಸಾಲು ಹೇಳಿದ ನಂತರವೂ, ಮೋಡಿಯನ್ನು ಒಯ್ಯುವ ವಸ್ತುವಿನ ಮೇಲೆ

ದ್ವೇಷಪೂರಿತವಾಗಿ ಶುಂಠಿ ಅಗಿದು ಎಂಜಲನ್ನು ಉಗುಳುತ್ತಾನೆ. ಈ ಕೆಳಗಿನದು ಏಡಿ ಹುಣ್ಣನ್ನು ತರುವ ಮಂತ್ರ. ಈ ರೋಗವು ಅದರ ಪೋಷಕ ಪ್ರಾಣಿಯಾದ ಕೊಂಬು ಕೊಕ್ಕಿನ ಹಕ್ಕಿಯ ಹೆಸರನ್ನೇ ಪಡೆದಿದ್ದು, ಅದು ತನ್ನ ದೊಡ್ಡದಾದ ಸೀಳು ಕೊಕ್ಕಿನಿಂದ ಮರಗಳ ಕಾಂಡವನ್ನು ತಿನ್ನುವಂತೆ, ಮಾಂಸಖಂಡಗಳನ್ನು ಕಿತ್ತು ಹಾಕುವ ದಾರುಣವಾದ ರೋಗ.

ಸಿಗಾಸಿಗಾದಲ್ಲಿರುವ ಕೊಕ್ಕು ಕೊಂಬಿನ ಹಕ್ಕಿ
ಲೊವಾನಾ ಮರದ ತುದಿಯಲ್ಲಿ
ಕತ್ತರಿಸುತ್ತಾನೆ, ಕತ್ತರಿಸುತ್ತಾನೆ,
ಹರಿದು ತೆಗೆಯುತ್ತಾನೆ ಅವನು
ಮೂಗಿನಿಂದ,
ಕಣತಲೆಯಿಂದ,
ಗಂಟಲಿನಿಂದ,
ಸೊಂಟದಿಂದ,
ನಾಲಿಗೆಯ ಬುಡದಿಂದ,
ಕೊರಳ ಹಿಂಬದಿಯಿಂದ,
ಹೊಕ್ಕುಳಿಂದ,
ಬೆನ್ನ ಬುಡದಿಂದ,
ಮೂತ್ರ ಪಿಂಡಗಳಿಂದ,
ಕರುಳುಗಳಿಂದ.
ಹರಿದು ತೆಗೆಯುತ್ತಾನೆ ಅವನು
ನಿಂತು ಹರಿಯುತ್ತಾನೆ ಅವನು.
ಟೋಕುಕುವಿನಲ್ಲಿರುವ ಕೊಕ್ಕು ಕೊಂಬಿನ ಹಕ್ಕಿ,
ಲೊವಾನಾ ಮರದ ತುದಿಯಲ್ಲಿ.
ಅವನು (1) ಬಾಗಿ ಕುಗ್ಗಿ ನಿಲ್ಲುತ್ತಾನೆ,
ಅವನು ಬೆನ್ನು ಹಿಡಿದು ಕುಗ್ಗಿ ನಿಲ್ಲುತ್ತಾನೆ,

(1) ರೋಗಕ್ಕೆ ಗುರಿಯಾದವ

ಅವನು ತನ್ನ ಮುಂದೆ ಕೈ ತಿರುಚಿಕೊಂಡು ಕುಗ್ಗಿ ನಿಲ್ಲುತ್ತಾನೆ,
ಅವನು ತನ್ನ ಮೂತ್ರಪಿಂಡದ ಮೇಲೆ ಕೈಯಿಟ್ಟು ಕುಗ್ಗಿ ನಿಲ್ಲುತ್ತಾನೆ,
ಅವನು ತನ್ನ ಕೈಗಳನ್ನು ತಿರುಚಿ ಅದರಲ್ಲಿ ತಲೆ ಹೊತ್ತು ಕುಗ್ಗಿ ನಿಲ್ಲುತ್ತಾನೆ,
ಅವನು ಇಮ್ಮಡಿ ತಿರುಚಿ ಕುಗ್ಗಿ ನಿಲ್ಲುತ್ತಾನೆ,
ಅಳುತ್ತ, ಅರಚುತ್ತ,
ಅದು (1) ಅಲ್ಲಿಗೆ ಹಾರಿಬರಲಿದೆ,
ಅದು ಬೇಗ ಅಲ್ಲಿಗೆ ಹಾರಿಬರಲಿದೆ.

ಒಬ್ಬ ವ್ಯಕ್ತಿಯು ರೋಗ ಪೀಡಿತನಾದಾಗ, ಆ ರೋಗವನ್ನು ತನ್ನ ಮೇಲೆ ಪ್ರಯೋಗ ಮಾಡಿರುವಾತನಿಗೆ ಹೇಳಿ ಕಳುಹಿಸುತ್ತಾನೆ. ಸಾವಿನಿಂದ ಪಾರಾಗಲು ಬೇರೆ ಯಾವ ಮಾರ್ಗವೂ ಇಲ್ಲ. ಅದೇ ಮೋಡಿಗಾರ ವಶಪಡಿಸಿಕೊಂಡಿರುವ ಸೂಕ್ತವಾದ ಉಚ್ಚಾಟನಾ ಮಂತ್ರಗಳಿಂದ ರೋಗವನ್ನು ಗುಣಪಡಿಸಬಹುದು. ಇಲ್ಲವೇ ಮೇಲು ಮಾಡಬಹುದು. ಆ ಮೋಡಿಗಾರನು ರೋಗವನ್ನು ಗುಣಪಡಿಸಲು ಒಪ್ಪಿದರೂ ತಾನೇ ರೋಗಿಯಲ್ಲಿಗೆ ಬರುವುದಿಲ್ಲ. ರೋಗಿಯ ನೆಂಟನೊಬ್ಬ ತರುವ ನೀರಿನ ಪಾತ್ರೆಗೆ, ಉಚ್ಚಾಟನಾ ಮಂತ್ರವನ್ನು ಉರುಬುತ್ತಾನೆ. ಅದನ್ನು ಭದ್ರವಾಗಿ ಮೊಹರು ಮಾಡಿ ಒಯ್ದು ರೋಗಿಯ ಮನೆಯಲ್ಲಿ ಆ ನೀರಿನಲ್ಲಿ ಅವನಿಗೆ ಸ್ನಾನ ಮಾಡಿಸುತ್ತಾರೆ. ಉಚ್ಚಾಟನೆಯು ಸಾವನ್ನು ತಪ್ಪಿಸಿ ವಿರೂಪಗೊಳಿಸುವದೆಂದು ಸಾಧಾರಣ ಭಾವನೆ. ಸಾಮಾನ್ಯವಾದ ಹಲವು ಸ್ಥಳೀಯ ರೋಗಗಳು ಮರಣ ತರದೆ, ವಿರೂಪಗೊಳಿಸುತ್ತವೆ ಎಂಬುದನ್ನು ಇದು ಸೂಚಿಸುತ್ತದೆ. ಹೊರಗಿನಿಂದ ಬಂದ ರೋಗಗಳಾದ ಕ್ಷಯ, ದಡಾರ, ಇನ್‌ಫ್ಲುಯೆಂಜ ಮತ್ತು ಆಮಶಂಕೆಗಳು ಈಗ ಐವತ್ತು ವರ್ಷಗಳಿಂದ ಡೋಬು ದ್ವೀಪದಲ್ಲಿ ಹರಡಿ, ಅಪತ್ಕಾರಿಗಳಾಗಿದ್ದರೂ ಅವುಗಳಿಗೆ ಸಂಬಂಧಪಟ್ಟ ಮಂತ್ರಗಳಾವುವೂ ಇಲ್ಲ.

ಡೋಬುವನರು ಈ ರೋಗಕಾರಕ ಮಂತ್ರಗಳನ್ನು ಕೆಲವು ವಿಲಕ್ಷಣ ಉದ್ದೇಶಗಳಿಗೆ ಸ್ವತಂತ್ರವಾಗಿ ಬಳಸುತ್ತಾರೆ. ಸರಕುಗಳ ಅಥವಾ ಮರಗಳ ಮೇಲೆ ಸರಳವಾದ ಆಸ್ತಿ ಗುರುತು ಮಾಡಲು ಅವರು ತಮ್ಮ ವಶದಲ್ಲಿರುವ ರೋಗದಿಂದ ಅದನ್ನು ಮಂತ್ರಿಸಿ ಮಲಿನಗೊಳಿಸುತ್ತಾರೆ. ಈ ಜನ 'ಅದು ಅಲೋವಿನಮರ' ಅಥವಾ 'ಅದು ನಾಡನಮರ' ಎಂದು ಹೇಳಿದರೆ 'ಆ ಮರವನ್ನು ಅಲೋ, ಮೂರರ ಚಳಿಯಿಂದ ಮಂತ್ರಿಸಿದ್ದಾನೆ' ಅಥವಾ 'ಆ ಮರದ ಮೇಲೆ ನಾಡನು ಪಾರ್ಶ್ವವಾಯುವನ್ನು ಆವಾಹಿಸಿದ್ದಾನೆ.' ಎಂದು ಅರ್ಥ. ಈ ರೋಗಕಾರಕ ಮಂತ್ರಗಳ ಸ್ವಂತದವರು ಯಾರು

(1) ಮಂತ್ರದ ಅಮೂರ್ತ ಶಕ್ತಿ.

ಎಂಬುದು ಎಲ್ಲರಿಗೂ ಗೊತ್ತು. ಆ ಸ್ವಂತದವರು ಅವುಗಳನ್ನು ಆಸ್ತಿ ಗುರುತಾಗಿ ಬಳಸುತ್ತಾರೆ. ತನ್ನ ಮರದಿಂದಲೇ ಫಲ ತೆಗೆಯಬೇಕಾದರೆ ಮೊದಲು ಆ ರೋಗವನ್ನು ಉಚ್ಚಾಟನೆ ಮಾಡಬೇಕು. ಯಾವಾಗಲೂ ಉಚ್ಚಾಟನಾ ಮಂತ್ರದ ಒಡೆತನವು, ರೋಗಕಾರಕ ಮಂತ್ರದ ಒಡೆತನದಿಂದ ಬೇರ್ಪಡಲು ಸಾಧ್ಯವಿಲ್ಲವಾದ್ದರಿಂದ ಮೊದಲು ಮರದ ಮೇಲೆ ಆವಾಹಿಸಿದ ರೋಗದಿಂದ ರಕ್ಷಣೆ ಪಡೆಯುವುದು ಕಷ್ಟವಲ್ಲ. ರೋಗಕಾರಕ ಮಂತ್ರದಿಂದ ಆವಾಹಿತವಾದ ಮರದಿಂದ ಕಳ್ಳತನವಾಗದಂತೆ ನೋಡಿಕೊಳ್ಳುವುದು ಕಠಿಣ. ಕಳ್ಳರು ಅದರಮೇಲೆ ಇನ್ನೊಂದು ರೋಗವನ್ನು ಆವಾಹಿಸಿರಬಹುದು. ಅವನು ತನ್ನ ರೋಗಕಾರಕ ಮಂತ್ರದಿಂದ ಮೊದಲ ರೋಗವನ್ನು ಉಚ್ಚಾಟಿಸುವ ಗೋಜಿಗೆ ಹೋಗಿಲ್ಲ. ಅವನ ಮಂತ್ರವು ಮೂಲತಃ ಮರವು ಈಡಾಗಿದ್ದ ರೋಗಕ್ಕೆ ಸೂಕ್ತವಾದ ತಡೆಯಲ್ಲದಿರಬಹುದು. ಅವನು ತನಗೆ ವಂಶಪಾರಂಪರ್ಯವಾಗಿ ಬಂದ ಉಚ್ಚಾಟನಾ ಮಂತ್ರಕ್ಕೆ ತಾನು ಈಗ ತೆಗೆದು ಹಾಕಬೇಕೆಂದಿರುವ ರೋಗದ ಹೆಸರು ಸೇರಿಸಿ ಪಠಿಸಿ, ಅನಂತರ ತನಗೆ ವಂಶಪಾರಂಪರ್ಯವಾಗಿ ಬಂದ ರೋಗಕಾರಕ ಮಂತ್ರವನ್ನು ಆ ಮರದ ಮೇಲೆ ಪ್ರಯೋಗಿಸುತ್ತಾನೆ. ಆದ್ದರಿಂದ ಮರದ ಒಡೆಯನು ತನ್ನ ಮರದ ಫಲ ಕೂಡಿಸಲು ಬಂದಾಗ, ಆ ಫಲದೊಂದಿಗೆ ಅವನು ಇನ್ನೊಂದು ರೋಗವನ್ನು ಕೂಡಿಸಿಕೊಳ್ಳುವ ಸಂಭವವುಂಟು. ಅವನು ಬಳಸುವ ಉಚ್ಚಾಟನಾ ಮಂತ್ರವು ರಕ್ಷಣೆಯ ದೃಷ್ಟಿಯಿಂದ ಬಹುವಚನದಲ್ಲಿರುತ್ತದೆ, ಆ ಸೂತ್ರವು ಕೆಳಗೆ ಕಂಡಂತಿರುತ್ತದೆ.

ಅವು ಹಾರಿ ಹೋಗುವುವು,

ಅವು ಹೋಗುವುವು.

ಡೋಬುಗಳಲ್ಲಿ ಸಂಶಯುವೆಂಬುದು ಹುತ್ತು ಹೊಳೆಯಂತೆ ಹರಿಯುತ್ತದೆ. ಸದಾ ಅವರು ಪ್ರತಿ ಮಂತ್ರ ಪ್ರಯೋಗವಾಗಿದೆಯೋ ಎಂದು ಸಂದೇಹ ಪಡುತ್ತಾರೆ. ರೋಗವನ್ನು ಆವಾಹಿಸಿರುವುದರ ಹೆದರಿಕೆ ಎಷ್ಟಿದೆಯೆಂದರೆ, ಕ್ಷಾಮದ ಕಾಲದಲ್ಲಿ ಹೊರತು ಇತರ ಕಾಲಗಳಲ್ಲಿ ಹಸಿದುಕೊಂಡು ಜೀವಿಸಿರುತ್ತಾರೆಯೇ ಹೊರತು ಕಳ್ಳತನಕ್ಕೆ ಕೈ ಹಾಕುವ ಗೋಜಿಗೆ ಹೋಗುವುದಿಲ್ಲ. ಆಸ್ತಿಯ ಮೇಲೆ ರೋಗದ ಆಣೆಯಿಕ್ಕುವುದರ ಬಗ್ಗೆ ಅವರ ಭೀತಿ ಬಹು ಪ್ರಬಲವಾದುದು. ಈ ಮಂತ್ರಗಳು ಗ್ರಾಮದ ಹೊರ ಆವರಣದಲ್ಲಿರುವ ಮರಗಳಿಗೆ ಮೀಸಲು. ಗ್ರಾಮದ ಒಳಗಿನ ಮರಗಳ ಮೇಲೆ ಆಣೆಯಿಕ್ಕಿದರೆ ಅದು ಇಡೀ ಗ್ರಾಮವನ್ನೇ ನಾಶಮಾಡುತ್ತದೆ. ಗ್ರಾಮಕ್ಕೆ ಸಮೀಪವಾಗಿರುವ ಯಾವುದಾದರೂ ಮರದ ಮೇಲೆ ಆಣೆ ಇಟ್ಟಿರುವುದರ ಗುರುತಾಗಿ ಒಣಗಿದ ತೆಂಗಿನ ಗರಿಯನ್ನು ಕಟ್ಟಿರುವುದು ಕಂಡುಬಂದರೆ ಎಲ್ಲರೂ ಆ ಜಾಗದಿಂದ ದೂರ ಹೋಗಿ ಬಿಡುತ್ತಾರೆ. ಡಾ. ಫಾರ್ಚ್ಯೂನ್ ಅವರು ಏಡಿ ಹುಣ್ಣಿನ ಮಂತ್ರವನ್ನು

ಕಲಿಯುವ ಮುಂಚೆ, ಒಂದು ಅಪರಿಚಿತ ಗ್ರಾಮದಲ್ಲಿ ತಾವು ಭಗ್ನಪಡಿಸದೆ ಇಡಬೇಕಾಗಿ ಬಂದ ವಸ್ತುಗಳ ಮೇಲೆ ರಕ್ಷಣೆಗಾಗಿ ಒಣಗಿದ ತೆಂಗಿನ ಗರಿಯನ್ನಿಟ್ಟಾಗ ಆ ಮನೆಯ ಹುಡುಗರು ಕತ್ತಲ ರಾತ್ರಿಯಾಗಿದ್ದರೂ ಸಹ ಭಯ ಭೀತರಾಗಿ ಓಡಿಹೋದರು. ಬಳಿಕ ಐವತ್ತು, ನೂರು ಗಜ ದೂರದಲ್ಲಿದ್ದ ಕುಟುಂಬಗಳು ಸಹ ತಮ್ಮ ಮನೆಗಳನ್ನು ಬಿಟ್ಟು ಗುಡ್ಡಗಳಲ್ಲಿದ್ದ ಮನೆಗಳಿಗೆ ಹೋಗಿಬಿಟ್ಟಿದ್ದುದನ್ನು ಅವರು ಗಮನಿಸಿದರು.

ರೋಗ ಪ್ರಯೋಗದ ಶಕ್ತಿಯು ಎಲ್ಲರೂ ವಶಪಡಿಸಿಕೊಂಡಿರುವ ನಿರ್ದಿಷ್ಟ ರೋಗಕಾರಕ ಮೋಡಿಗೆ ಸೀಮಿತವಾಗಿಲ್ಲ. ಶಕ್ತಿಶಾಲಿ ಮೋಡಿಗಾರರನ್ನು ಶಕ್ತಿಶಾಲಿ ವ್ಯಕ್ತಿಗಳು ಎಂದರೇ ಸರಿ. ಏಕೆಂದರೆ ಇಲ್ಲಿ ಇರುವವರೆಲ್ಲರೂ ಮೋಡಿಗಾರರೇ. ಶಕ್ತಿಶಾಲಿ ಮೋಡಿಗಾರರಿಗೆ ವಿಪರೀತವಾದ ದಾರಿಯೊಂದಿದೆ. ಅದು ವಡ. ಅವರು ತಮ್ಮ ವೈರಿಗಳನ್ನು ನೇರವಾಗಿ ಎದುರಿಸುತ್ತಾರೆ. ಮೋಡಿಗಾರನ ಶಾಪದಬಗ್ಗೆ ಎಷ್ಟು ಭೀತಿಯೆಂದರೆ, ವೈರಿಯು ಒದ್ದಾಡುತ್ತಾ ನೆಲದ ಮೇಲೆ ಬೀಳುತ್ತಾನೆ. ಹಾಗೆ ಬಿದ್ದವನು ಪುನಃ ಚೇತರಿಸಿಕೊಳ್ಳಲಾಗದೆ, ಸವೆಂದು ಸವೆಂದು ಸಾಯುತ್ತಾನೆ. ಈ ರೀತಿಯ ಶಾಪವನ್ನಿಕ್ಕಲು ಮೋಡಿಗಾರ ತಕ್ಕ ಸಮಯಕ್ಕಾಗಿ ಕಾಯುತ್ತಾನೆ. ಅವನು ತನ್ನ ಕಾರ್ಯಕ್ಕೆ ಸಿದ್ಧನಾದಾಗ ತನ್ನ ಮೋಡಿ ಶಕ್ತಿಯು ತಕ್ಕ ಮಟ್ಟಕ್ಕೆ ಏರಲು ಬೇಕಾದಷ್ಟು ಶಾಖವನ್ನು ಹುಟ್ಟಿಸಿಕೊಳ್ಳಲು ದೊಡ್ಡ ಪ್ರಮಾಣದಲ್ಲಿ ಶುಂಠಿಯನ್ನು ಅಗಿಯುತ್ತಾನೆ. ಲೈಂಗಿಕ ಸಂಭೋಗದಿಂದ ದೂರವಾಗುತ್ತಾನೆ. ತನ್ನ ದುಷ್ಟ ಮಂತ್ರ ಶಕ್ತಿಯನ್ನು ತನ್ನ ಉಗುಳಿನೊಂದಿಗೆ ತಾನೇ ನುಂಗದಂತಿರಲು, ಬೇಕಾದ ಹಾಗೆ ಸಮುದ್ರದ ನೀರನ್ನು ಕುಡಿದು ಗಂಟಲನ್ನು ಒಣಗಿಸಿಕೊಳ್ಳುತ್ತಾನೆ. ಅನಂತರ ತನ್ನ ವೈರಿಯು ನಿರಾತಂಕವಾಗಿ ಕೆಲಸಮಾಡುತ್ತಾ ಒಂಟಿಯಾಗಿರುವ ಅವನ ತೋಟದ ಬಳಿಯ ಮರವನ್ನೇರಿ ಕಾವಲು ಕಾಯಲು ನಂಬಿಕಸ್ಥನಾದ ನಂಟನೊಬ್ಬನ ಸಹಾಯವನ್ನು ಕೋರುತ್ತಾನೆ. ಅವರಿಬ್ಬರೂ ಮಂತ್ರ ಪಠಣ ಮಾಡಿ ಅದೃಶ್ಯರಾಗುತ್ತಾರೆ. ಕಾವಲಿನವನು, ಯಾರಾದರೂ ಅತ್ತಕಡೆ ಬಂದರೆ ಸೂಚನೆ ನೀಡುವ ಸಲುವಾಗಿ ಮರವನ್ನೇರಿ ಸರಿಯಾದ ಜಾಗದಲ್ಲಿ ಕುಳಿತುಕೊಳ್ಳುತ್ತಾನೆ. ಮೋಡಿಗಾರ ತನ್ನ ವೈರಿಯನ್ನು ಎದುರಿಗೇ ಕಾಣುವವರೆಗೆ ನಿಶಬ್ದವಾಗಿ ತೆವಳಿಕೊಂಡು ಸಾಗುತ್ತಾನೆ. ಮೋಡಿಗಾರರ ರೂಢಿಯಂತೆ ರಕ್ತ ಹೆಪ್ಪುಗಿಸುವಂಥ ಚೀತ್ಕಾರಮಾಡುತ್ತಾನೆ. ವೈರಿ ನೆಲಕ್ಕೆ ಬೀಳುತ್ತಾನೆ. ಮಂತ್ರವತ್ತಾದ ಸುಣ್ಣಕಲ್ಲಿನ ಕಲಸು ಚಾಕುವಿನಿಂದ ಮೋಡಿಗಾರನು ಅವನ ದೇಹದ ಅಂಗಗಳನ್ನು ಕೊಯ್ದು ತೆಗೆದು, ಗುರುತು ಕಾಣದಂತೆ ಮುಚ್ಚಿಬಿಡುತ್ತಾನೆಂದು ಜನ ಹೇಳುತ್ತಾರೆ. ಅನಂತರ ಆಹುತಿಯಾದವನನ್ನು ಪರೀಕ್ಷಿಸಲು ಮೂರು ಬಾರಿ 'ನನ್ನ ಹೆಸರೇನು' ಎಂದು ಕೇಳುತ್ತಾನೆ. ಆ ಮನುಷ್ಯ ಯಾರನ್ನೂ

ಗುರುತಿಸುವ, ಹೆಸರಿಸುವ ಶಕ್ತಿ ಕಳೆದುಕೊಂಡಿರುವುದು ಮೋಡಿಗಾರನ ಕೆಲಸ ಕೈಗೂಡಿದುದಕ್ಕೆ ಒಂದು ಸಾಕ್ಷಿ. ಆ ಮನುಷ್ಯ ಅರ್ಥಹೀನವಾಗಿ ಪಿಟಿಪಿಟಿಗುಟ್ಟಿ, ಉನ್ಮಾದದಿಂದ ಕೂಗುತ್ತಾ ಓಡುತ್ತಾನೆ. ಅಂದಿನಿಂದ ಅವನು ಊಟ ಮಾಡುವುದಿಲ್ಲ. ಅವನು ಮೂತ್ರವನ್ನು ತಡೆಹಿಡಿಯಲಾರ, ಹೊಟ್ಟೆಯೂ ಕೆಡುತ್ತದೆ. ಅವನು ಶಕ್ತಿಗುಂದಿ ಸಾಯುತ್ತಾನೆ.

ಈ ಘಟನಾವಳಿಯ ವಿವರವನ್ನು ನಂಬಿಕಸ್ತರೂ, ಪರಿಚಿತರೂ ಆದ ಸ್ಥಳೀಯರು ನೀಡಿದರು. ಮೋಡಿಗೆ ಗುರಿಯಾದ ಮೇಲೆ ಸಾಯುತ್ತ ಬಿದ್ದವರ ಪ್ರಸಂಗಗಳಲ್ಲಿ ಈ ಜನರ ನಂಬಿಕೆಗಳ ನಿದರ್ಶನವನ್ನು ಕಾಣಬಹುದು. ಡೋಬುವನ್ ರೂಢಿಗಳಲ್ಲಿ ಅಡಗಿರುವ ಕೇಡಿನ ವೈಪರೀತ್ಯವನ್ನು ವಡ ಎತ್ತಿ ತೋರುತ್ತದೆ. ಭೀತಿಯು ಅದರ ಅಂತಿಮ ಪರಿಣಾಮಗಳಿಗೆ ದಾರಿಮಾಡಿಕೊಡುತ್ತದೆ.

ಡೋಬುವನ್ ಆರ್ಥಿಕ ವಿನಿಮಯವನ್ನು ಕುರಿತು ನಾವು ಇನ್ನೂ ಪ್ರಸ್ತಾಪಿಸಿಲ್ಲ, ಮೆಲನೇಷಿಯಾದಲ್ಲಿ ವ್ಯಾಪಿಸಿರುವ ಸತತವಾದ ಪರಸ್ಪರ ವಾಣಿಜ್ಯ ವ್ಯವಹಾರಗಳ ಒಲವು ಡೋಬುವಿನಲ್ಲೂ ಇದೆ. ಪ್ರತಿಯೊಬ್ಬ ಡೋಬುವನನ ಹೃದಯಕ್ಕೆ ಅತಿ ಹತ್ತಿರವಾದಂತಹ, ಅತ್ಯಂತ ಭಾವೋದ್ರೇಕದಿಂದ ಬಯಸುವ ಹಾಗೂ ಈರ್ಷ್ಯೆಗೊಳ್ಳುವ ಯಶಸ್ಸು ಪ್ರಧಾನವಾಗಿ ಎರಡು ಕ್ಷೇತ್ರಗಳಿಗೆ ಸಂಬಂಧಪಟ್ಟುದು. ಒಂದು, ಭೋಗವಸ್ತುಗಳ ಒಡೆತನ. ಇನ್ನೊಂದು ಲೈಂಗಿಕ ಸುಖ, ಮೋಡಿಗಾರಿಕೆಯೂ ಇನ್ನೊಂದು ಕ್ಷೇತ್ರವೆನ್ನಬಹುದಾದರೂ ಅದು ದಾರಿಯೇ ಹೊರತು ಗುರಿಯಲ್ಲ. ಪ್ರಧಾನ ಕಾರ್ಯಕ್ಷೇತ್ರಗಳಲ್ಲಿ ಯಶಸ್ಸನ್ನು ಪಡೆಯಲು ಹಾಗೂ ಉಳಿಸಿಕೊಳ್ಳಲು ಅದು ಒಂದು ದಾರಿ.

ಸಂಶಯ ಹಾಗೂ ದ್ರೋಹಗಳಿಂದ ಪೀಡಿತವಾದ ಡೋಬುವಿನಂತಹ ಜಾನಪದದಲ್ಲಿ ಲೌಕಿಕ ಯಶಸ್ಸು ಎಂಬುದನ್ನು ನಮ್ಮ ನಾಗರಿಕತೆಯಲ್ಲಿ ಮಾನ್ಯತೆ ನೀಡಿರುವ ಆರ್ಥಿಕ ಗುರಿಗಳೊಂದಿಗೆ ಹೋಲಿಸಿ ನೋಡಿದರೆ ಹಲವಾರು ವೈದೃಶ್ಯಗಳು ಸಹಜವಾಗಿ ತೋರಿಬರುತ್ತವೆ. ಮೊದಲನೆಯದಾಗಿ ವಸ್ತುಗಳನ್ನು ಸಂಗ್ರಹಿಸಿಕೊಳ್ಳುವ ಮಾತೇ ಇಲ್ಲ. ಒಳ್ಳೆಯ ಫಸಲು ಸಹ ಇತರರ ಈರ್ಷ್ಯೆಗೆ ಗುರಿಯಾಗುವುದರಿಂದ ತೋಟಗಾರನು ಅದರ ಬಗ್ಗೆ ಹೇಳಿಕೊಳ್ಳಲು ಹೆದರುತ್ತಾನೆ. ಅಪತ್ಕಾರಿಯಾದ ಮೋಡಿಯ ಪ್ರಭಾವಕ್ಕೆ ಈ ಉದಾಹರಣೆ ಸಾಕು. ಹೀಗಾಗಿ ವೈಭವ ಪ್ರದರ್ಶನ ಎಂಬುದಕ್ಕೆ ಅವಕಾಶವೇ ಇಲ್ಲ. ಇಂತಹ ಸನ್ನಿವೇಶದಲ್ಲಿ ಯಾವನಲ್ಲಿಯೂ ಶಾಶ್ವತ ಆಸ್ತಿಯಾಗಿ ನಿಲ್ಲದೆ, ಹಾದುಹೋಗುವಂತಹ ಕೃತಕನಾಣ್ಯ ಪದ್ಧತಿಯು ಆದರ್ಶವಾದ ವಾಣಿಜ್ಯ ವಿಧಾನವಾಗುತ್ತದೆ. ಡೋಬುವಿನಲ್ಲಿರುವ ಪದ್ಧತಿಯು ಇಂತಹುದೇ. ನೂರೈವತ್ತು ಮೈಲಿ ವ್ಯಾಸವಿದ್ದು ಸರಿಸುಮಾರಾಗಿ ವೃತ್ತಾಕಾರದಲ್ಲಿ ಅಳವಟ್ಟಿರುವ

ಒಂದು ಡಜನ್ ದ್ವೀಪಗಳಲ್ಲಿ ನಡೆಯುವ ಅಂತರಾಷ್ಟ್ರೀಯ ವಿನಿಮಯವು ಇಲ್ಲಿಯ ಜೀವನದ ಉನ್ನತ ಬಿಂದು. ಡೋಬುಗಳಿಗೆ ಉತ್ತರದ ನೆರೆಯುವರಾದ ಟ್ರೋಬ್ರಿಯಾಂಡ್ ದ್ವೀಪವಾಸಿಗಳನ್ನು ಕುರಿತು ಬರೆಯುವಾಗ ಡಾ. ಮ್ಯಾಲಿನೋವ್‌ಸ್ಕಿಯರು ವರ್ಣಿಸಿರುವ 'ಕುಲಾ' ವೃತ್ತದ ದ್ವೀಪಗಳೇ ಇವು.

ಈ ಕುಲಾ ವೃತ್ತವು ಡೋಬುವನ್ ಸಂಸ್ಕೃತಿ ವಿನ್ಯಾಸವನ್ನು ಮೀರಿ ಹೊರ ಚಾಚಿಕೊಂಡಿರುವಂತಹುದು. ಅದರಲ್ಲಿ ಭಾಗವಹಿಸುವ ಇತರ ಸಂಸ್ಕೃತಿಗಳು ಅದರ ಪ್ರಕ್ರಿಯೆಗಳಿಗೆ ವಿಭಿನ್ನವಾದ ಪ್ರೇರಣೆಗಳನ್ನೂ, ಗುರಿಗಳನ್ನೂ ನೀಡಿವೆ. ಡೋಬುಗಳು ತಮ್ಮ ಇನ್ನಿತರ ಸಂಸ್ಕೃತಿ ವಿನ್ಯಾಸಕ್ಕೆ ಹೊಂದಿಕೊಳ್ಳುವಂತೆ ಕುಲಾ ಪದ್ಧತಿಯ ಕೆಲವು ವಿಶಿಷ್ಟ ಅಂಶಗಳನ್ನು ಅಳವಡಿಸಿಕೊಂಡಿದ್ದಾರೆ. ಅವು, ಈ ವಿನ್ಯಾಸಗಳಲ್ಲಾಗಲಿ ಅಥವಾ ಡೋಬುಗಳು ಅವುಗಳೊಂದಿಗೆ ಒಡಗೂಡಿಸಿರುವ ಪ್ರೇರಣೆಗಳಲ್ಲಾಗಲಿ ಹುಟ್ಟಿದುವಲ್ಲ. ಈಗ ನಾವು ಡೋಬುವನ್ ವಿನಿಮಯುವನ್ನು ಮಾತ್ರ ಪರಿಶೀಲಿಸಲಿದ್ದೇವೆ. ಟ್ರೋಬ್ರಿಯಾಂಡರ ಹೊರತು, ಇತರ ದ್ವೀಪಗಳವರ ಕುಲಾ ಸಂಪ್ರದಾಯಗಳು ನಮಗೆ ತಿಳಿದುಬಂದಿಲ್ಲ.

ಕುಲಾ ವೃತ್ತವು ಒಂದು ದ್ವೀಪಮಾಲೆ. ಅವುಗಳ ಸುತ್ತ ಒಂದು ದಿಕ್ಕಿನಲ್ಲಿ ಒಂದು ಬಗೆಯ ಒಡವೆವಸ್ತುಗಳೂ ಇನ್ನೊಂದು ದಿಕ್ಕಿನಲ್ಲಿ ಇನ್ನೊಂದು ಬಗೆಯವೂ ಅರ್ಧವಾರ್ಷಿಕ ವಿನಿಮಯವಾಗಿ ಸಾಗುತ್ತಿರುತ್ತವೆ. ಪ್ರತಿ ದ್ವೀಪದ ಜನರೂ ಸಮುದ್ರದಲ್ಲಿ ದೂರ ಪ್ರಯಾಣ ಕೈಗೊಂಡು ಚಿಪ್ಪಿನ ಅಡ್ಡಿಕೆಗಳನ್ನು ಪ್ರದಕ್ಷಿಣವಾದಿ ಒಯ್ಯುತ್ತಾರೆ. ಹಿಂದಕ್ಕೆ ಹೋಗುವಾಗ ಚಿಪ್ಪಿನ ತೋಳುಬಳೆಗಳನ್ನು ಒಯ್ಯುತ್ತಾರೆ. ಪ್ರತಿ ದಿಕ್ಕಿನಲ್ಲಿಯೂ ವಿನಿಮಯ ನಡೆಯುವ ದ್ವೀಪಗಳಲ್ಲಿ ಪ್ರತಿಯೊಬ್ಬನಿಗೂ ಒಬ್ಬ ಪಾಲುಗಾರನಿರುತ್ತಾನೆ. ಪ್ರತಿಯೊಬ್ಬನೂ ತಮ್ಮ ಸಾಮರ್ಥ್ಯವಿದ್ದಷ್ಟು ಮಟ್ಟಿಗೆ ತನಗೆ ಲಾಭವಾಗುವಂತೆ ವ್ಯವಹರಿಸುತ್ತಾನೆ. ಅಂತಿಮವಾಗಿ ಒಡವೆವಸ್ತುಗಳು ಪೂರಾ ಒಂದು ಸುತ್ತು ಬರುತ್ತವೆ; ಅವುಗಳ ಮೊತ್ತಕ್ಕೆ ಹೊಸವೂ ಸೇರಬಹುದು. ತೋಳು ಬಳೆಗಳಿಗೂ, ಅಡ್ಡಿಕೆಗಳಿಗೂ ವೈಯಕ್ತಿಕವಾದ ಹೆಸರುಗಳಿವೆ. ಅವುಗಳಲ್ಲಿ ಕೆಲವು ತಮ್ಮ ಖ್ಯಾತಿಗೆ ತಕ್ಕಂತೆ ಹೆಚ್ಚಿನ ಮೌಲ್ಯವನ್ನು ಪಡೆದಿವೆ.

ಈ ಕುಲಾ ವಾಣಿಜ್ಯದ ಕಾರ್ಯ ವಿಧಾನ ಹಾಗೂ ವಿಧಿವಿಹಿತ ರೂಪವಿನ್ಯಾಸವನ್ನು ಕಂಡು ನಾವು ಆಶ್ಚರ್ಯ ಪಡಬಹುದಾದರೂ ನಿಜವಾಗಿಯೂ ಅದು ಅಷ್ಟು ವಿಸ್ಮಯಕಾರಿಯಾದುದಲ್ಲ. ಮಲೇನೇಷಿಯಾ ಮತ್ತು ಪಾಪುವಾಗಳ ಬಹು ಭಾಗಗಳು ಸ್ಥಳೀಯವಾಗಿ ವಿಶೇಷವಾದ ಕೈಗಾರಿಕೆಗಳಿಂದ ಸಿಬಿಡವಾಗಿವೆ. ಕುಲಾವೃತ್ತದಲ್ಲಿ ಒಂದು ದ್ವೀಪದ ಜನ ಹಸುರು ಶಿಲೆಗಳನ್ನು ಮೆರಗು ಮಾಡುತ್ತಾರೆ. ಒಬ್ಬರು ತೋಡುದೋಣಿಗಳನ್ನು ಮಾಡುತ್ತಾರೆ. ಇನ್ನೊಬ್ಬರು ಮಡಕೆಗಳನ್ನು

ಮಾಡುತ್ತಾರೆ. ಮತ್ತೊಬ್ಬರು ಮರ ಕೊರೆಯುತ್ತಾರೆ; ಇನ್ನೊಬ್ಬರು ಬಣ್ಣ ಬೆರೆಸುತ್ತಾರೆ. ಇವೆಲ್ಲ ವಸ್ತುಗಳ ವಿನಿಮಯವು ಪ್ರಧಾನ ಮೌಲ್ಯ ಮಾಪಕಗಳ ಸಂಸ್ಕಾರಿಕ ವ್ಯಾಪಾರದ ಮರೆಯಲ್ಲಿ ನಡೆಯುತ್ತದೆ. ಕುಲಾದಲ್ಲಿ ಶಿಷ್ಟಾಚಾರ ಪೂರ್ಣ ವಿನಿಮಯ ಪದ್ಧತಿ ಸಂಸ್ಥೀಕರಣಗೊಂಡಿದೆ. ಈ ಪದ್ಧತಿ ಪರಸ್ಪರ ವಿನಿಮಯ ಗಳ ಬಗ್ಗೆ ಒಲವನ್ನು ಚೆನ್ನಾಗಿ ಬೇರೂರಿಕೊಂಡಿರುವ ಪ್ರದೇಶಗಳವರೆಗೆ ತೋರಿಬರು ವಂತೆ ಅಂತಹ ಕ್ರಮಗಳಿಗೆ ಪರ್ಯಾಯವಾದ ತಳಹದಿಯಿಲ್ಲದ ಸಂಸ್ಕೃತಿಗಳವರೆಗೆ ತೋರಿಬರುವುದಿಲ್ಲ. ತೋಳು ಬಳೆಗಳು ಮತ್ತು ಅಡ್ಡಿಕೆಗಳು ಸಾಗುವ ದಿಕ್ಕುಗಳು ಸಹ ಮೇಲ್ನೋಟಕ್ಕೆ ತೋರುವಂತೆ ಮನಸೋ ಇಚ್ಛೆಯಾಗಿರದೆ ಪರಿಸ್ಥಿತಿಯ ಅವ ಶ್ಯಕತೆಗಳಿಂದಲೇ ನಿರ್ಧರಿತವಾದುವು. ತೋಳುಬಳೆಗಳನ್ನು ಟ್ರೋಕಸ್ ಚಿಪ್ಪಿನಿಂದ ಮಾಡುತ್ತಾರೆ. ಅದು ಕುಲಾವೃತ್ತದ ಉತ್ತರ ಭಾಗಗಳಲ್ಲಿ ದೊರೆಯುತ್ತದೆ. ಅಡ್ಡಿಕೆಗಳನ್ನು ಸ್ಪಾಂಡಿಲಸ್ ಚಿಪ್ಪುಗಳಿಂದ ತಯಾರಿಸುತ್ತಾರೆ. ಅದನ್ನು ಈ ಗುಂಪಿನ ದಕ್ಷಿಣದ ದ್ವೀಪಗಳು ಇನ್ನೂ ದಕ್ಷಿಣದಿಂದ ಆಮದು ಮಾಡಿಕೊಳ್ಳುತ್ತವೆ. ಆದ್ದ ರಿಂದ ಪೂರ್ವಭಾಗದಲ್ಲಿನ ದ್ವೀಪಗಳಿಗಿಂತ ಪಶ್ಚಿಮ ದ್ವೀಪಗಳ ವಾಣಿಜ್ಯದಲ್ಲಿ ಉತ್ತರದ ಒಡವೆ ವಸ್ತುಗಳು ದಕ್ಷಿಣಕ್ಕೂ, ದಕ್ಷಿಣದವು ಉತ್ತರಕ್ಕೂ ಹೋಗುತ್ತವೆ. ಈಗ ಈ ಒಡವೆ ವಸ್ತುಗಳು ಹಳೆಯವೂ, ದೀರ್ಘ ಪರಂಪರೆಯವೂ ಆಗಿ ಹೋಗಿವೆ. ಹೊಸ ಆಮದುಗಳು ಅಷ್ಟು ಪ್ರಮುಖವಾಗಿಲ್ಲ. ಆದರೆ ರೂಪಿಕೆಯು ಹಾಗೇ ಉಳಿದುಕೊಂಡು ಬಂದಿದೆ.

ಪ್ರತಿ ವರ್ಷವೂ ಗೆಣಸುಗಳನ್ನು ಬಿತ್ತಿದ ಮೇಲೆ ಅವು ತನ್ನ ತೋಟದಲ್ಲಿಯೇ ನಿಲ್ಲಲು ಮಾಂತ್ರಿಕ ತಡೆಗಳನ್ನು ಮಾಡಬೇಕಾಗುತ್ತದೆ. ಬಿತ್ತಿದ್ದಕ್ಕೂ ಈ ಹಂತಕ್ಕೂ ನಡುವೆ ತೋಟದ ಕೆಲಸಗಳಲ್ಲಿ ಬಿಡುವಿರುತ್ತದೆ. ಆಗ ಡೋಬುಗಳ ತೋಡು ದೋಣಿಗಳು ಉತ್ತರಕ್ಕೂ, ದಕ್ಷಿಣಕ್ಕೂ ಕುಲಾ ಸಮುದ್ರಯಾತ್ರೆ ಕೈಗೊಳ್ಳುತ್ತವೆ. ಪ್ರತಿಯೊಬ್ಬನೂ ತಾನು ಉತ್ತರದಲ್ಲಿ ಪಡೆಯಲಿರುವ ಕುಲಾ ಮೌಲ್ಯಗಳಿಗೆ ವಿನಿ ಮಯವಾಗಿ ದಕ್ಷಿಣದ ಕುಲಾ ಮೌಲ್ಯಗಳನ್ನು ನೀಡುವ ಆಶ್ವಾಸನೆ ಕೊಡುವ ಸ್ಥಿತಿಯಲ್ಲಿರುತ್ತಾನೆ.

ಕುಲಾ ವಿನಿಮಯದ ವಿಶಿಷ್ಟ ಲಕ್ಷಣವು ಪ್ರತಿ ದ್ವೀಪದವರೂ ಮೌಲ್ಯವಸ್ತುಗಳನ್ನು ಪಡೆಯಲು ತಮ್ಮ ಪಾಲುದಾರರ ದ್ವೀಪಗಳಿಗೆ ಹೋಗುತ್ತಾರೆ ಎಂಬುದರ ಆಧಾ ರದ ಮೇಲೆ ನಿಂತಿದೆ. ಪ್ರಯಾಣ ಬೆಳೆಸುವ ದ್ವೀಪದವರು ಮನವಿ ಕಾಣಿಕೆಗಳನ್ನು ಒಯ್ದು, ಒಡವೆಗಳನ್ನು ಪಡೆದು, ತಮ್ಮಲ್ಲಿರುವ ಒಡವೆಗಳನ್ನು, ಅತಿಥೇಯರು ತಮ್ಮ ದ್ವೀಪಕ್ಕೆ ಭೇಟಿ ನೀಡಿದಾಗ ಕೊಡುವುದಾಗಿ ವಾಗ್ದಾನ ಮಾಡುತ್ತಾರೆ. ಆದ್ದರಿಂದ ಕುಲಾ ವಿನಿಮಯವು ಪ್ರತಿಯೊಬ್ಬನೂ ತನ್ನಲ್ಲಿರುವ ಒಡವೆಗಳನ್ನು

ಸಜ್ಜುಗೊಳಿಸಿ ಒಪ್ಪಿಗೆಯಾಗುವ ವಿನಿಮಯಕ್ಕೆ ವ್ಯವಸ್ಥೆ ಮಾಡುವ ಮಾರುಕಟ್ಟೆಯ ವ್ಯವಹಾರವಲ್ಲ. ಪ್ರತಿಯೊಬ್ಬನೂ ತನ್ನ ಮನವಿ ಕಾಣಿಕೆ ಮತ್ತು ವಾಗ್ದಾನದ ಆಧಾರದ ಮೇಲೆ ತನ್ನ ಬಹುಮಾನವನ್ನು ಪಡೆಯುತ್ತಾನೆ. ಈ ವಾಗ್ದಾನವು ಈಗಾಗಲೇ ತನ್ನ ವಶದಲ್ಲಿದ್ದು, ಸೂಕ್ತ ಸಮಯದಲ್ಲಿ ನೀಡಲು ಸಿದ್ಧವಾಗಿ ತನ್ನ ಮನೆಯಲ್ಲಿ ಇಟ್ಟು ಬಂದಿರುವುದಾಗಿ ಹೇಳಲಾಗುವ ಒಡವೆಗೆ ಸಂಬಂಧಪಟ್ಟಿದು.

ಕುಲಾ, ಗುಂಪುಗಳ ನಡುವಣ ವಿನಿಮಯವಲ್ಲ. ಪ್ರತಿಯೊಬ್ಬನೂ ವೈಯಕ್ತಿಕವಾಗಿ, ಬೇರೆ ಬೇರೆ ಪಾಲುಗಾರರೊಂದಿಗೆ, ಎಲ್ಲ ವಿಧದ ಅನುನಯಗಳೊಂದಿಗೆ ವಿನಿಮಯ ಮಾಡಿಕೊಳ್ಳುತ್ತಾನೆ. ಕುಲಾದಲ್ಲಿ ಯಶಸ್ಸು ತರುವ ಮಂತ್ರಗಳೆಲ್ಲ ಪ್ರಣಯ ಮಂತ್ರಗಳು. ಪಾಲುಗಾರನು, ಮನವಿಗಾರನ ಬಯಕೆಗಳನ್ನು ಒಲವಿನ ದೃಷ್ಟಿಯಿಂದ ನೋಡುವಂತೆ ಮಾಂತ್ರಿಕವಾಗಿ ಮನ ಒಲಿಸುತ್ತಾರೆ. ಮನವಿಗಾರನು ತನ್ನ ಚರ್ಮವನ್ನು ನಯಮಾಡಿ, ಹುಳಕಡ್ಡಿಯ ಕಲೆಗಳನ್ನು ಒರೆಸಿ, ಬಾಯಿಗೆ ಕೆಂಪು ಬಣ್ಣ ಹಚ್ಚಿ, ದೇಹವನ್ನು ಸುಗಂಧ ಮತ್ತು ಲೇಪನಗಳಿಂದ ಸುವಾಸಿತಗೊಳಿಸಿ, ತನ್ನ ದೇಹ ಸೌಂದರ್ಯವನ್ನು ಅತಿಶಯಗೊಳಿಸಿಕೊಳ್ಳುತ್ತಾನೆ. ಡೋಬುಗಳ ವಿಪರೀತ ಸಿದ್ಧಾಂತದಲ್ಲಿ ವಿಷಯಾಸಕ್ತಿಗೆ ಪರ್ಯಾಯವಾದ ಭಾವದಿಂದ ಮಾತ್ರ ಸಮಾಧಾನದಿಂದ ಲಾಭಕಾರಿಯಾಗಿ ಒಡವೆಗಳ ವಿನಿಮಯದಂತಹ ಕೌತುಕವನ್ನು ನಿಭಾಯಿಸಬಹುದು.

ಪ್ರತಿಯೊಂದು ದೋಣಿಯಲ್ಲಿ ಪ್ರಯಾಣ ಬೆಳೆಸುವವರೆಲ್ಲಾ ಮನವಿ ಕಾಣಿಕೆಗಾಗಿ ಆಹಾರ ವಸ್ತುಗಳನ್ನೂ, ತಯಾರಿಸಿದ ವಸ್ತುಗಳನ್ನೂ ಸಂಗ್ರಹಿಸಿಕೊಳ್ಳುತ್ತಾರೆ. ಪ್ರಯಾಣಕ್ಕೆ ಮೊದಲು ದೋಣಿಯ ಮಾಲೀಕನೂ, ಅವನ ಹೆಂಡತಿಯೂ ಮಾತ್ರ ಮಂತ್ರ ಪಠಣ ಮಾಡಿರುತ್ತಾರೆ. ಉಳಿದ ಮಾಂತ್ರಿಕತೆಯೆಲ್ಲಾ ಕುಲಾ ಆರಂಭವಾದ ಮೇಲೆ ಬಳಸಲು ಮೀಸಲು. ದೋಣಿಯ ಮಾಲೀಕನು ಮುಂಜಾನೆಯಲ್ಲಿಯೇ ಎದ್ದು ಮರು ಪ್ರಯಾಣದಲ್ಲಿ ಒಡವೆಗಳನ್ನು ಮುಚ್ಚಲು ಬಳಸಲು ಚಾಪೆಗಳನ್ನು ಅಣಿ ಮಾಡಿಕೊಳ್ಳುತ್ತಾನೆ. ಈ ಚಾಪೆಗಳನ್ನು ದೊಡ್ಡ ಸಂಪದ್ರಾಶಿಯನ್ನೇ ಮಾಂತ್ರಿಕವಾಗಿ ಮುಚ್ಚಲು ಯೋಗ್ಯವಾದವುಗಳನ್ನಾಗಿ ಮಾಡುತ್ತಾನೆ. ಅವನ ಹೆಂಡತಿಯೂ ತನ್ನ ಪತಿಯ ಯಾತ್ರೆಯು ಸರಾಗವಾಗಿ ಸಾಗಲು ಅವನು ಸಮುದ್ರದ ಮೇಲೆ ಸಿಡಿಲಿನಂತೆ ಬರುವಂತಾಗಲು, ಅವನು ತನ್ನ ಪಾಲುಗಾರನಲ್ಲಿ ಮಾತ್ರವಲ್ಲದೆ ಅವನ ಹೆಂಡತಿ ಮಕ್ಕಳಲ್ಲಿ ಹರ್ಷಾತಿರೇಕದ ತವಕವನ್ನುಂಟುಮಾಡುವಂತಾಗಲು, ಅವರ ಕನಸುಗಳಲ್ಲಿ ತನ್ನ ಗಂಡ ಮಹಾವ್ಯಕ್ತಿಯಂತೆ ತೋರಿಬರಲು ಒಂದು ಮಂತ್ರ ಪಠಣ ಮಾಡಬೇಕು. ಎಲ್ಲ ಸಿದ್ಧತೆಗಳೂ ಮುಗಿದನಂತರ ಗಾಳಿಯು ಎಷ್ಟೇ ಅನುಕೂಲಕರವಾಗಿದ್ದರೂ, ಆ ದಿನದ ಉಳಿದ ಪಾಲನ್ನು

ವಿಧಿಪೂರ್ವಕವಾದ ತಡೆಯನ್ನಾಗಿ ಆಚರಿಸಬೇಕು. ಈ ತಡೆಯನ್ನು ಶೂನ್ಯವಾದಿ ನಿರ್ಜನವಾದ ತೀರವೊಂದರಲ್ಲಿ ಹೆಂಗಸರು, ಮಕ್ಕಳು ಮತ್ತು ನಾಯಿಗಳ ವ್ಯಾಲಿಗೆ ಯಿಂದ, ದಿನನಿತ್ಯದ ತೊಡಕುಗಳಿಂದ ದೂರವಾಗಿ ಆಚರಿಸಬೇಕು. ಆದರೆ ದೋಣಿ ಗಳು ದಕ್ಷಿಣ ದಿಕ್ಕಿಗೆ ಪ್ರಯಾಣ ಹೊರಟಾಗ ಅಂತಹ ಜಾಗವಾವುದೂ ಇಲ್ಲದಿರುವುದ ರಿಂದ ವಿಧಿಪೂರ್ವಕ ತಡೆಯನ್ನು ಸಮುದ್ರದ ಕರೆಯಲ್ಲಿ ಆಚರಿಸುತ್ತಾರೆ. ರಾತ್ರಿ ಯಾದಾಗ ಪ್ರತಿಯೊಬ್ಬನೂ, ನಿಜಸ್ಥಿತಿ ಹೇಗೇ ಇರಲಿ ಗಾಳಿ ಅಸಾಧ್ಯವಾಗಿತ್ತೆಂದು ಗೊಣಗಿಕೊಳ್ಳುತ್ತ ತನ್ನ ಗ್ರಾಮಕ್ಕೆ ಹಿಂತಿರುಗುತ್ತಾನೆ. ಇದು ಕೈ ಬಿಡಲಾಗದಂತಹ ವಿಧಿಬದ್ಧವಾದ ಸಂಶಯದ ಒಂದು ರೂಪ. ಮರುದಿನ ಬೆಳಿಗ್ಗೆ ದೋಣಿಯ ಮಾಲೀ ಕನು ದೋಣಿಗೆ ಸರಕುಗಳನ್ನು ಹೇರಿ ಎಲ್ಲರಿಗೂ, ಸಮಷ್ಟಿಯಾಗಿ ಅನ್ವಯವಾಗು ವಂತಹ ಕೊನೆಯ ಹಾಗೂ ಎರಡನೆಯ ಮಂತ್ರ ಪಠಣ ಮಾಡುತ್ತಾನೆ. ಇದರ ಲ್ಲಿಯೂ ಅವನ ಹೆಂಡತಿಯ ಮಂತ್ರ ಪಠಣದಂತೆ ತನ್ನ ಹೆಸರನ್ನೇ ಮುಂದಾಗಿಸು ತ್ತಾನೆ. ಮನವಿ ಕಾಣಿಕೆಯಾಗಿ ತಾನು ಒಯ್ಯುತ್ತಿರುವ ಆಹಾರ ಪದಾರ್ಥಗಳನ್ನು ಮಂತ್ರದಿಂದ ಕುಲಾ ಒಡವೆಗಳನ್ನಾಗಿಯೇ ಪರಿವರ್ತಿಸುತ್ತಾನೆ. ಅವು ಸಲ್ಲಲಿರುವ ತನ್ನ ಪಾಲುಗಾರರು ಬಿದಿಗೆಯ ಚಂದ್ರನನ್ನು ಎದುರು ನೋಡುವಂತೆ ಅವುಗಳಿಗಾಗಿ ನಿರೀಕ್ಷಣೆ ಮಾಡುತ್ತಿರುತ್ತಾರೆ; ಅಲ್ಲದೆ ಪಾಲುಗಾರರು ತಮ್ಮ ಮನೆಯ ಜಗಲಿಗಳ ಅಂಚಿನಲ್ಲಿ ನಿಂತು ದೋಣಿಯ ಒಡೆಯನಾದ ತನಗಾಗಿ ಕಾಯುತ್ತಿರುವುದಾಗಿಯೂ ವರ್ಣಿಸುತ್ತಾನೆ.

ಡೋಬುವನರು ಒಳ್ಳೆಯ ನಾವಿಕರಲ್ಲ. ಸದಾ ಮರಳು ದಿಬ್ಬಗಳಿಗೆ ಅಂಟಿ ಕೊಳ್ಳುತ್ತ, ರಾತ್ರಿಗೆ ತೀರದಲ್ಲಿ ತಂಗುತ್ತಾ ಸಾಗುತ್ತಾರೆ. ಕುಲಾ ಯಾತ್ರೆ ಕೈಗೊಳ್ಳುವ ಕಾಲ, ಸಮುದ್ರವು ಹೆಚ್ಚು ಶಾಂತವಾಗಿರುವ ಕಾಲ. ಅವರು ಗಾಳಿ ಮಂತ್ರಗಳನ್ನು ಪಠಿಸಿ, ತಾವು ಬಯಸುವ ವಾಯುವ್ಯ ಮಾರುತವನ್ನು ಬರಿಸಿಕೊಳ್ಳುತ್ತಾರೆ. ಮಾರು ತವು ಬೀಸಿ ಪಾಂಡನಸ್ ಎಲೆಗಳಿಂದ ಮಾಡಿದ ಹಾಯಿಯನ್ನು ತುಂಬಿ, ತಂಟೆ ಮಾಡುವ ಅವಳ ಮಗುವನ್ನು ಹಿಡಿದುಕೊಂಡು, ಅವಳ ಗಂಡನನ್ನು ಬೇರೊಬ್ಬರು ಬಂದು ಕದಿಯದಂತೆ ತಡೆಯಲು ಬೇಗ ಬಾರೆಂದು ಕೇಳಿಕೊಳ್ಳುತ್ತಾರೆ. ಜೀವನದ ಇತರ ಘಟನೆಗಳ ಬಗ್ಗೆ ಅವರು ನಂಬಿಕೆ ತಾಳಿರುವಂತೆಯೇ ಮಾರುತವೂ ಸಹ ಮಾಂತ್ರಿ ಕತೆಯ ಹೊರತು ಬೇರೆ ಮೂಲಗಳಿಂದ ಜನಿಸುವಂತಹುದಲ್ಲ ಎಂದು ನಂಬಿದ್ದಾರೆ.

ಅಂತೂ ಕೊನೆಗೆ ದೋಣಿಗಳು ತಾವು ತಲುಪಬೇಕಾದ ದ್ವೀಪಗಳನ್ನು ತಲುಪಿ ನಿರ್ಜನವಾದ ಒಂದು ಹವಳ ದ್ವೀಪವನ್ನು ಆಯ್ದು, ಮಹತ್ವಪೂರ್ಣವಾದ ಕುಲಾ ಪೀಠಿಕಾ ಸಂಸ್ಕಾರಗಳನ್ನು ಕೈಗೊಳ್ಳಲು ಅವರು ಇಳಿಯುತ್ತಾರೆ. ಪ್ರತಿಯೊಬ್ಬನೂ ಮಂತ್ರ ವಿಧಿಗಳಿಂದ ಮತ್ತು ಅಲಂಕಾರಗಳಿಂದ ತನ್ನನ್ನು ಸಾಧ್ಯವಿದ್ದಷ್ಟು ಸುಂದರ

ಗೊಳಿಸಿಕೊಳ್ಳುತ್ತಾನೆ. ಈ ಸಂದರ್ಭಕ್ಕೆ ಬಳಸುವ ಮಂತ್ರಗಳು ಸಹ ಡೋಬುವನ್ ಮಾದರಿಯಂತೆಯೇ ವ್ಯಕ್ತಿಗಳ ಆಸ್ತಿ. ಪ್ರತಿಯೊಬ್ಬನೂ ತನ್ನ ಮಂತ್ರಗಳನ್ನು ತನ್ನ ಸ್ವಂತ ಲಾಭಕ್ಕಾಗಿ ಮಾತ್ರ ಬಳಸುತ್ತಾನೆ. ಮಂತ್ರಗಳೇ ಬಾರದವರಿಗೆ ಇದು ಬಹಳ ಅನನುಕೂಲ ಪ್ರಸಂಗ. ಅವರು ತಮಗೆ ತಾವೇ ಅವುಗಳನ್ನು ಸೂಚಿಸಿಕೊಳ್ಳುವುದರಂತಹ ಕ್ರಮಗಳನ್ನು ಹಿಡಿದು ಅನುಸರಿಸಿಕೊಳ್ಳಬೇಕು. ಈ ಮಂತ್ರಗಳ ಒಡೆತನವು ಅತ್ಯಂತ ರಹಸ್ಯವಾದುದು. ಪ್ರತಿಯೊಂದು ದೋಣಿಯಲ್ಲಿಯೂ ಇರುವ ಜನಕ್ಕೆ ತಮ್ಮಲ್ಲಿ ಯಾರಿಗೆ ಮಂತ್ರಸಿದ್ಧಿಯಿದೆಯೆಂಬುದು ತಿಳಿದಿರುವುದಿಲ್ಲ. ಆದರೆ, ಭಾರಿ ಕುಲಾ ವಿನಿಮಯಗಳನ್ನು ಕೈಗೊಳ್ಳುವವರು ಶಕ್ತಿಶಾಲಿಯಾದ ಮಂತ್ರಗಳನ್ನು ಪಡೆದಿರುತ್ತಾರೆಂಬುದು ಕಂಡರಿಯಬಹುದಾದ ಸಂಗತಿ, ಅವರ ಆತ್ಮವಿಶ್ವಾಸ, ಅವರನ್ನು ತಮ್ಮ ಸಂಗಡಿಗರಿಗಿಂತ ಮೇಲುಗೈ ಮಾಡುತ್ತದೆ. ಮಂತ್ರಸಿದ್ಧಿ ಇರುವವರೂ, ಇಲ್ಲದವರೂ ಏಕರೀತಿಯಾಗಿ ಕುಲಾ ಆಗಮನಕ್ಕೆ ಸಿದ್ಧರಾಗಲು ಆಸ್ಥೆವಹಿಸುತ್ತಾರೆ. ಪ್ರಣಯದಲ್ಲಿ ಬಳಸುವ ಸುಗಂಧಿತ ಎಲೆಯಿಂದ ಪೂಸಿಕೊಳ್ಳುತ್ತಾರೆ; ಹೊಸದಾದ ಎಲೆಯ ಹೊರ ಉಡುಪು ಧರಿಸುತ್ತಾರೆ. ಮುಖಕ್ಕೂ, ಹಲ್ಲುಗಳಿಗೂ ಬಣ್ಣ ಬಳಿದುಕೊಳ್ಳುತ್ತಾರೆ; ದೇಹಕ್ಕೆ ತೆಂಗಿನೆಣ್ಣೆ ಬಳಿದು ಕೊಳ್ಳುತ್ತಾರೆ; ಆಗ ಮಾತ್ರ ಅವರು ತಮ್ಮ ಪಾಲುಗಾರರ ಎದುರಿಗೆ ನಿಲ್ಲಲು ಸಿದ್ಧ.

ಪ್ರತಿಯೊಬ್ಬನ ವ್ಯವಹಾರವೂ ವೈಯಕ್ತಿಕ ವ್ಯಾಪಾರದಂತೆ ಸಾಗುತ್ತದೆ. ಚಾಲಾಕಿನ ವ್ಯಾಪಾರವು ಮುಖ್ಯವಾಗಿದ್ದು, ಅದಕ್ಕೆ ಪ್ರತಿಷ್ಠೆಯಿದೆ. ಡೋಬುವನ್ ಸಿದ್ಧಾಂತಕ್ಕೆ ಅನುಗುಣವಾಗಿ ಯಶಸ್ವಿಯಾದ ಕುಲಾ ವ್ಯವಹಾರಗಾರನಿಗೆ ಅವನೊಂದಿಗೆ ಬಹಳವಾಗಿ ಕೂಡಿಕೊಂಡಿರುವ ವ್ಯಕ್ತಿಯಿಂದಲೇ ಪ್ರಾಣಾಪತ್ತು ಒದಗುತ್ತದೆ. ಅದು ಜನಾಂಗಗಳ ನಡುವೆ ತೀರ್ಮಾನವಾಗತಕ್ಕ ವಿಷಯವಲ್ಲ. ಹೋಮರನು ಹೇಳಿರುವಂತೆ "ಅವಕ್ಕಾಗಿ ಹಲವರು ಪ್ರಾಣ ನೀಡಿದ್ದಾರೆ" ಎಂಬ ವಾಕ್ಯವನ್ನು ಕುಲಾ ಒಡವೆಗಳ ಬಗ್ಗೆಯೂ ಹೇಳಬಹುದು. ಆದರೆ ಆ ಮರಣಗಳಿಗೆ ಕಾರಣ, ವಿನಿಮಯದಲ್ಲಿ ಮೋಸಕ್ಕೊಳಗಾದ ಪಾಲುಗಾರನ ಕೋಪವಲ್ಲ; ಟ್ರೋಬ್ರಿಯಾಂಡರನು ಡೋಬುವನಿಗೆ ವಿರೋಧವಾಗಿ, ಡೋಬುವನಿಗೆ ಎದುರಾಗಿ ಟುಬೆಟುಬೆಯ ಮನುಷ್ಯ ನಡೆಸಿದ ಕಾರ್ಯವಲ್ಲ. ಯಾವಾಗಲೂ ಯಶಸ್ವಿಯಾದ ಡೋಬುವನಿಗೆ ವಿರೋಧವಾಗುವವನು ಅದೇ ಪ್ರದೇಶದ ಅಯಶಸ್ವಿ ವ್ಯಕ್ತಿ.

ಈ ರೀತಿ ವೈರಭಾವವನ್ನು ಪ್ರಚೋದಿಸುವ ಮೂಲಗಳಲ್ಲಿ ವಾಬುವಾಬು ಎಂದು ಹೆಸರಾದ ವಂಚನೆ ಮುಖ್ಯವಾದುದು.

'ವಾಬುವಾಬು ಮಾಡುವುದೆಂದರೆ' ಉತ್ತರ ಭಾಗದ ತನ್ನ ಮನೆಯಲ್ಲಿ ಇಟ್ಟಿರುವ ಚಿಪ್ಪಿನ ತೋಳು ಬಳೆಯೊಂದರ ಆಧಾರದ ಮೇಲೆ ದಕ್ಷಿಣದ ವಿವಿಧ ಭಾಗಗಳಿಂದ

ಹಲವಾರು ಸ್ಪಾಂಡಿಲಸ್ ಚಿಪ್ಪಿನ ಅಡ್ಡಿಕೆಗಳನ್ನು ಪಡೆದುಕೊಳ್ಳುವುದು ಅಥವಾ ವಿಪರ್ಯಯವಾಗಿ ತಾನು ನಿರ್ವಹಿಸಲಾಗದ ಆಧಾರದ ಮೇಲೆ ಉತ್ತರದಿಂದ ಹಲವಾರು ಚಿಪ್ಪಿನ ತೋಳುಬಳೆಗಳನ್ನು ಪಡೆದುಕೊಳ್ಳುವುದು. ಅಂದರೆ ತನ್ನಲ್ಲಿರುವ ಒಂದು ಒಡವೆಯನ್ನು ಹಲವಾರು ಮಂದಿಗೆ ಅವರಿಂದ ಕೇಳಿಕೊಳ್ಳುವ ಕಾಣಿಕೆಗಳಿಗೆ ಪ್ರತಿಯಾಗಿ ವಾಗ್ದಾನ ಮಾಡುವುದು. ಅದು ಚಾಲಾಕಿನ ಕೆಲಸ. ಆದರೆ ನಂಬಿಸಿ ಸಂಪೂರ್ಣವಾಗಿ ಮೋಸ ಮಾಡುವುದಿಲ್ಲ.

"ಒಂದು ವೇಳೆ ಟೆವಾರಾದ ಕಿಸಿಯನನಾದ ನಾನು ಟ್ರೋಬ್ರಿಯಾಂಡಿಗೆ ಹೋಗುತ್ತೇನೆ, ಅಲ್ಲಿಂದ ಮಾನಿಟರ್ ಲಿಜಾರ್ಡ್ ಎಂಬ ಚಿಪ್ಪಿನ ತೋಳುಬಳೆಯೊಂದನ್ನು ಪಡೆಯುತ್ತೇನೆ ಎಂದಿಟ್ಟುಕೊಳ್ಳಿ. ಅಲ್ಲಿಂದ ನಾನು ಸನರೋಪಾವಿಗೆ ಹೋಗಿ ಅಲ್ಲಿನ ನಾಲ್ಕು ಬೇರೆ ಬೇರೆ ಗ್ರಾಮಗಳಿಂದ ನಾಲ್ಕು ಚಿಪ್ಪಿನ ಅಡ್ಡಿಕೆಗಳನ್ನು ಪಡೆದು, ಅಡ್ಡಿಕೆಗಳನ್ನು ನೀಡಿದ ಪ್ರತಿಯೊಬ್ಬನಿಗೂ ಮಾನಿಟರ್ ಲಿಜಾರ್ಡನ್ನು ಅವರು ನಮ್ಮಲ್ಲಿಗೆ ಭೇಟಿಯಿತ್ತಾಗ ಕೊಡುವುದಾಗಿ ವಾಗ್ದಾನ ನೀಡುತ್ತೇನೆ. ನಾನು ಕಿಸಿಯನ್, ನನ್ನ ವಾಗ್ದಾನದಲ್ಲಿ ಅಷ್ಟು ಖಚಿತವಾಗಿರಬೇಕಾಗಿಲ್ಲ. ಮುಂದೆ ಆ ನಾಲ್ವರೂ ಮಾನಿಟರ್ ಲಿಜಾರ್ಡನ್ನು ನಿರೀಕ್ಷಿಸಿಕೊಂಡು ನನ್ನ ಗ್ರಾಮವಾದ ಟೆವಾರಾವಿಗೆ ಬರುತ್ತಾರೆ. ಅವರಲ್ಲಿ ಒಬ್ಬನಿಗೆ ಮಾತ್ರ ಅದು ಸಿಕ್ಕುತ್ತದೆ. ಏನೇ ಆದರೂ ಇತರ ಮೂವರು ಶಾಶ್ವತವಾಗಿ ವಂಚಿತರಾದಂತಲ್ಲ. ನಿಜವಾಗಿಯೂ ಅವರಿಗೆ ಬಹಳ ರೋಷ ಬರುತ್ತದೆ. ಅವರ ವಿನಿಮಯಕ್ಕೆ ಒಂದು ವರ್ಷ ತಡೆಯಾಗುತ್ತದೆ. ಮುಂದಿನ ವರ್ಷ ನಾನು, ಟ್ರೋಬ್ರಿಯಾಂಡಿಗೆ ಹೋದಾಗ ನನಗೆ ನಾಲ್ಕು ತೋಳುಬಳೆಗಳನ್ನು ನೀಡುವವರಿಗೆ ನನ್ನ ಮನೆಯಲ್ಲಿ ನಾಲ್ಕು ಅಡ್ಡಿಕೆಗಳನ್ನು ಸಿದ್ಧವಾಗಿ ಇಟ್ಟಿರುವುದಾಗಿ ಹೇಳುತ್ತೇನೆ. ಹಿಂದಿನ ವರ್ಷ ನಾನು ಪಡೆದ ಚಿಪ್ಪಿನ ತೋಳುಬಳೆಗಳಿಗಿಂತ ಹೆಚ್ಚಿಗೆ ಪಡೆದಂತಾಯಿತು. ನನ್ನ ಸಾಲವನ್ನು ಒಂದು ವರ್ಷ ತಡವಾಗಿ ತೀರಿಸುತ್ತೇನೆ.

ನನ್ನಿಂದ ಮಾನಿಟರ್ ಲಿಜಾರ್ಡ್‌ನ್ನು ಪಡೆಯದೇ ಹೋದ ಮೂವರು ನನ್ನ ಸ್ವಂತ ಸ್ಥಳವಾದ ಟೆವಾರಾದಲ್ಲಿ ಪ್ರತಿಕೂಲ ಪರಿಸ್ಥಿತಿಯಲ್ಲಿರುತ್ತಾರೆ. ಅವರು ತಮ್ಮ ಊರಿಗೆ ಹಿಂತಿರುಗಿದ ಮೇಲೆ ನನಗೆ ತೊಂದರೆಯುಂಟುಮಾಡುವ ಸ್ಥಿತಿಯಲ್ಲಿರುವುದಿಲ್ಲ. ಬಹುಮಟ್ಟಿಗೆ, ಅವರು ತೋಳುಬಳೆ ಮಾನಿಟರ್ ಲಿಜಾರ್ಡನ್ನು ಪಡೆದ ತಮ್ಮ ಯಶಸ್ವಿ ಪ್ರತಿಸ್ಪರ್ಧಿಯನ್ನು ಕೊಲ್ಲಲು ಉದ್ದೇಶಿಸಿ ಮಾಟ ಮಾಡಬಹುದು. ಅದೇನೋ ನಿಜ. ಆದರೆ ಅದು ಅವರಿಗೆ ಸೇರಿದ ವಿಷಯ. ನಾನು ಅವರ ವಿನಿಮಯಗಳನ್ನು ಒಂದುವರ್ಷ ತಡೆದು ನನ್ನದನ್ನು ಬೆಳೆಸಿಕೊಂಡ ದೊಡ್ಡ ಮನುಷ್ಯನಾದೆ. ಅವರ ವಿನಿಮಯವನ್ನು ಬಹಳ ಕಾಲ ತಡೆಹಿಡಿದಿಡಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ನನ್ನ ವಿನಿಮಯಗಳನ್ನು ಯಾರೂ ನಂಬದಂತಾಗುತ್ತದೆ ಕೊನೆಗೆ ನೋಡಿದರೆ ನಾನು ಪ್ರಾಮಾಣಿಕ".

ಯಶಸ್ವಿಯಾದ ವಾಬುವಾಬು ಒಂದು ಮಹತ್ಸಾಧನೆ. ಅಂತಹವನನ್ನು ಕಂಡರೆ ಡೋಬುಗಳು ಕರುಬುತ್ತಾರೆ. ಕುಲಾದ ಪ್ರಸಿದ್ಧ ಪೌರಾಣಿಕ ನಾಯಕ ಅದರಲ್ಲಿ ಬಹಳ ಚತುರ. ಉಳಿದೆಲ್ಲ ಡೋಬುವನ್ ಕಾರ್ಯಾಚರಣೆಯಂತೆ ಇದರಲ್ಲೂ ಉಳಿದವರಿಗೆ ನಷ್ಟವುಂಟುಮಾಡಿ ತನಗೆ ಲಾಭ ಮಾಡಿಕೊಳ್ಳುವುದಕ್ಕೇ ಪ್ರಾಧಾನ್ಯತೆ.

ಇತರರನ್ನು ತೊಂದರೆಗೆ ಸಿಕ್ಕಿ ಬೀಳಿಸುವ ಸಂದರ್ಭದಲ್ಲಿ ವೈಯಕ್ತಿಕವಾದ ಅನುಕೂಲವನ್ನು ಸಾಧಿಸಿಕೊಳ್ಳಲು ಇದು ಅವಕಾಶ ಮಾಡಿಕೊಡುತ್ತದೆ. ಒಬ್ಬ ಮನುಷ್ಯ ವಾಬುವಾಬುವಿಗೆ ಕೈಯಿಕ್ಕುವ ಸಾಹಸ ಮಾಡುವುದು ಕುಲಾ ಕಾರ್ಯಾಚರಣೆ ಒಂದರಲ್ಲಿ ಮಾತ್ರವಲ್ಲ. ವಿವಾಹ ವಿನಿಮಯದಲ್ಲಿ ಇತರರನ್ನು, ತನ್ನ ದುರಾಶೆಗೆ ಬಲಿ ಮಾಡುವುದಕ್ಕೂ ಸಹ ಇದೇ ಹೆಸರು ಅನ್ವಯಿಸುತ್ತದೆ. ನಿಶ್ಚಿತಾರ್ಥವಾದ ಮೇಲೆ ಎರಡೂ ಹಳ್ಳಿಗಳ ನಡುವೆ ಆರಂಭವಾಗುವ ಕಾಣಿಕೆಗಳ ಮಾಲೆಯು ಗಮನಾರ್ಹವಾದ ಪ್ರಮಾಣದ ಆಸ್ತಿಗಳನ್ನು ಒಳಗೊಂಡುದು. ಧೈರ್ಯವಿರುವವನು ತನಗೆ ಆರ್ಥಿಕವಾಗಿ ಲಾಭವಾಗಲೆಂದೇ ಒಂದು ನಿಶ್ಚಿತಾರ್ಥಕ್ಕೆ ಸಿಕ್ಕಿಬೀಳಬಹುದು. ವಿನಿಮಯದ ತಕ್ಕಡಿ ತನ್ನ ಕಡೆಗೆ ಜೋರಾಗಿ ವಾಲಿದಾಗ ಅವನು ನಿಶ್ಚಿತಾರ್ಥವನ್ನು ಮುರಿದು ಹಾಕಬಹುದು. ಅದಕ್ಕೆ ಪರಿಹಾರವಿಲ್ಲ. ಹಾಗೆ ಮಾಡುವ ಒಬ್ಬ ವ್ಯಕ್ತಿ ತನ್ನಿಂದ ವಂಚಿತವಾದ ಗ್ರಾಮದ ಮಂತ್ರಶಕ್ತಿಗಿಂತ ತನ್ನ ಮಂತ್ರಶಕ್ತಿ ಮಿಗಿಲಾದುದು ಎಂದು ತೋರಿಕೊಟ್ಟಂತೆ. ಆ ಹಳ್ಳಿಯವರು ಅವನನ್ನು ಕೊಲ್ಲಲು ಯತ್ನಿಸುತ್ತಾರೆ. ಅವನು ಇತರರ ಈರ್ಷ್ಯೆಗೆ ಗುರಿಯಾಗುತ್ತಾನೆ.

ಈ ಎರಡನೆಯ ವಿನಿಮಯವು ಒಂದು ಪ್ರದೇಶದ ಒಳಗೇ ನಡೆಯುವುದರಿಂದಾಗಿ ಇದು, ಕುಲಾದ ವಾಬುವಾಬುವಿಗಿಂತ ಭಿನ್ನವಾದುದು. ಒಂದು ಪ್ರದೇಶದ ಹಲವು ಗುಂಪುಗಳ ಪರಸ್ಪರ ಸಂಬಂಧಗಳಲ್ಲಿ ವೈರತ್ವವೂ ಪ್ರಧಾನವಾದುದ್ದಾದುದರಿಂದ ಈ ಸಂದರ್ಭದಲ್ಲಿ ವಿನಿಮಯದ ಎರಡು ಪಕ್ಷಗಳು ಒಂದಕ್ಕೊಂದು ವಿರೋಧವಾಗಿ ನಿಲ್ಲುತ್ತವೆ. ಕುಲಾದಲ್ಲಿಯಾದರೋ ಈ ದ್ವೇಷ ತನ್ನೊಂದಿಗೆ ದೋಣಿಯಲ್ಲಿ ಪ್ರಯಾಣ ಬೆಳೆಸುವ ವಾಣಿಜ್ಯ ಸಹೋದ್ಯಮಿಗಳ ಮೇಲೆ ತಿರುಗುತ್ತದೆ. ತನ್ನದೇ ಪ್ರದೇಶಕ್ಕೆ ಸೇರದ ಇನ್ನೊಬ್ಬ ವ್ಯಕ್ತಿಯನ್ನು ತುಳಿದು ಮೇಲುಗೈಯಾಗುವುದು ಎರಡೂ ವಾಬು-ವಾಬು ಸಂದರ್ಭಗಳಿಗೂ ಸಮಾನವಾದ ಅಂಶ.

ವಿವಾಹ, ಮಾಂತ್ರಿಕತೆ, ತೋಟಗಾರಿಕೆ ಮತ್ತು ಆರ್ಥಿಕ ವಿನಿಮಯಗಳಲ್ಲಿ ವ್ಯಕ್ತಗೊಳ್ಳುವ, ಈಗ ನಾವು ವರ್ಣಿಸಿರುವ ಮನೋಭಾವಗಳು ಮರಣ ಕಾಲದ ವರ್ತನೆಯಲ್ಲಿ ಪ್ರಬಲತಮ ರೂಪದಲ್ಲಿ ವ್ಯಕ್ತಗೊಳ್ಳುತ್ತವೆ. ಡಾ|| ಫಾರ್ಚ್ಯೂನರು ಹೇಳುವಂತೆ ಡೋಬುಗಳು, 'ಚಾವಟಿಯೇಟು ತಿಂದಾಗ ತತ್ತರಿಸಿ ಕುಸಿಯುವಂತೆ' ಮರಣ ಸಂದರ್ಭದಲ್ಲಿಯೂ ತತ್ತರಿಸಿ ಕುಸಿಯುತ್ತಾರೆ. ಕೂಡಲೇ ತಪ್ಪು ಹೊರಿಸಲು ಒಬ್ಬ

ನನ್ನು ಹುಡುಕುತ್ತಾರೆ. ಡೋಬುವನ್ ಸಿದ್ಧಾಂತಕ್ಕೆ ಅನುಗುಣವಾಗಿ ಆ ತಪ್ಪಿತಸ್ಥ ಸತ್ತವನಿಗೆ ಅತಿ ಸಮೀಪವಾಗಿದ್ದ ವ್ಯಕ್ತಿ ; ಎಂದರೆ ಗಂಡ ಅಥವಾ ಹೆಂಡತಿ. ಅವರ ನಂಬಿಕೆಯ ಪ್ರಕಾರ ಒಬ್ಬನು ಯಾರೊಂದಿಗೆ ಮಲಗುವನೋ ಅವನೇ ಮರಣಾಂತಕ ರೋಗ ಬಂದುದಕ್ಕೆ ಹೊಣೆ. ಗಂಡನಾದರೆ ತನ್ನ ರೋಗಕಾರಕ ಮಂತ್ರಗಳನ್ನು ಪ್ರಯೋಗಿಸಿದ್ದಾನೆ. ಹೆಂಡತಿಯಾದರೆ ಮಾಟ ಮಾಡಿದ್ದಾಳೆ. ಹೆಂಗಸರಿಗೂ ರೋಗ ಕಾರಕ ಮಂತ್ರಗಳು ತಿಳಿದಿರಬಹುದಾದರೂ, ಅವರಿಗೆ ಒಂದು ವಿಶೇಷ ರೀತಿಯ ಶಕ್ತಿ ಯಿದೆಯೆಂದು ಗಂಡಸರು ಆರೋಪಿಸುತ್ತಾರೆ. ರೂಢಿಯಲ್ಲಿರುವ ಮಾತಿನ ಪ್ರಕಾರ ಮರಣ ಮತ್ತು ನಿರ್ಗತಿಕತೆಗೆ ಹೊಣೆಯನ್ನು ಸರ್ವಸಾಮಾನ್ಯವಾಗಿ ಹೆಂಗಸರ ಮೇಲೆ ಹೊರಿಸುತ್ತಾರೆ. ಆದರೆ ಕಣಿಗಾರನನ್ನು ಕರೆದು ಕೊಲೆಗಾರರನ್ನು ನಿರ್ಧರಿಸೆಂದು ಕೇಳಿ ದಾಗ ಅವನು ಈ ಸಂಪ್ರದಾಯಕ್ಕೆ ಬದ್ಧನಲ್ಲವಾದ್ದರಿಂದ, ಮರಣದ ಹೊಣೆಯನ್ನು ಗಂಡಸಿನ ಮೇಲೂ ಹೊರಿಸಬಹುದು, ಹೆಂಗಸಿನ ಮೇಲೂ ಹೊರಿಸಬಹುದು. ಈ ಸಂಪ್ರದಾಯವು ಬಹುಶಃ ಕೊಲೆಯ ಪ್ರಯತ್ನವನ್ನು ಕುರಿತು ತಿಳಿಸುವುದಕ್ಕಿಂತ ಲೈಂಗಿಕ ವಿರೋಧವನ್ನು, ಪ್ರಾಮಾಣಿಕವಾಗಿ ಪ್ರತಿಫಲಿಸುತ್ತದೆಂದು ಹೇಳಬಹುದು. ಅದು ಹೇಗೇ ಇದ್ದರೂ, ಗಂಡಸರು ಹೆಂಗಸರ ಮೇಲೆ ಒಂದು ವಿಶೇಷವಾದ ತಂತ್ರವುಳ್ಳ ಕೇಡಿಗತನದ ಆರೋಪಣೆ ಮಾಡುತ್ತಾರೆ. ಅದು ಯೂರೋಪಿಯನ್ ಸಂಪ್ರದಾ ಯದ ಪ್ರಕಾರ ಬರುವ ಪೊರಕೆಯ ಮೇಲೆ ಕುಳಿತ ಮಾಟಗಾತಿಯರನ್ನು ಹೋಲು ತ್ತದೆ. ಡೋಬುವನ್ ಮಾಟಗಾತಿಯರು ತಮ್ಮ ಗಂಡಂದಿರ ಪಕ್ಕದಲ್ಲಿ ಮಲಗಿರುವ ತಮ್ಮ ದೇಹಗಳನ್ನು ಬಿಟ್ಟು ಗಾಳಿಯಲ್ಲಿ ಹಾರುತ್ತ ಯಾರನ್ನಾದರೂ ಮರದಿಂದ ಬೀಳಿಸುವುದೋ, ಕಟ್ಟಿದ ದೋಣಿಯನ್ನು ಕಿತ್ತು ಕೊಚ್ಚಿಹೋಗಲು ಬಿಡುವುದೋ ಮುಂತಾದ ಅಪಘಾತಗಳನ್ನುಂಟು ಮಾಡುತ್ತಾರೆ. ಶತ್ರುವಿನಿಂದ ಅವನ ಆತ್ಮವನ್ನು ಸೆಳೆದುಕೊಂಡು ಅವನು ನವೆದು ಸಾಯುವಂತೆ ಮಾಡುತ್ತಾರೆ. ಇಲ್ಲಿನ ಗಂಡಸರು ಈ ಕುತಂತ್ರಗಳಿಗೆ ಅತಿಯಾಗಿ ಹೆದರುತ್ತಾರೆ. ಆದರೆ ಟ್ರೋಬ್ರಿಯಾಂಡ್ ಹೆಂಗ ಸರು ಮಾಟಗಾರಿಕೆಯಲ್ಲಿ ತೊಡಗಿಲ್ಲವೆಂದು ನಂಬಿದ್ದು ಟ್ರೋಬ್ರಿಯಾಂಡಿಗೆ ಹೋದಾಗ ಆತ್ಮವಿಶ್ವಾಸದ ಭಾವ ತಳೆಯುತ್ತಾರೆ. ತಂತಮ್ಮ ಮನೆಗಳಲ್ಲಿ ಅವರು ಹಾಗಿರು ವಂತಿಲ್ಲ. ಡೋಬುಗಳಲ್ಲಿ ಹೆಂಡತಿಗೆ ಗಂಡನನ್ನು ಕುರಿತು ಇರುವಷ್ಟೇ ಭಯ ಗಂಡ ನಿಗೆ ಹೆಂಡತಿಯನ್ನು ಕುರಿತೂ ಇದೆ.

ಮದುವೆಯಾದ ದಂಪತಿಗಳಲ್ಲಿ ಯಾರಿಗಾದರೂ ತೀವ್ರವಾಗಿ ಕಾಯಿಲೆಯಾದರೆ ಆ ವರ್ಷಕ್ಕೆ ಅವರು ಇನ್ನೊಬ್ಬರ ಹಳ್ಳಿಯಲ್ಲಿ ವಾಸಮಾಡುತ್ತಿದ್ದರೂ, ಕೂಡಲೇ ಇಬ್ಬರೂ ಕಾಯಿಲೆಯಾದವರ ಹಳ್ಳಿಗೆ ಹೋಗಿ ಬಿಡಬೇಕು. ಸಾಧ್ಯವಾದಷ್ಟೂ ಘಟ್ಟಿಗೆ ಮರಣ ಅಲ್ಲಿ ಸಂಭವಿಸಬೇಕು. ಅಲ್ಲಿ ಮಾತ್ರ ವಿಯೋಗಕ್ಕೆ ಗುರಿಯಾದ

ಸುಸುವಿನ ಹಿಡಿತದಲ್ಲಿರುವಂತೆ ಉಳಿದ ಪತಿಯೋ ಪತ್ನಿಯೋ ಇರುವುದು ಸಾಧ್ಯ. ಅವನು ಅಥವಾ ಅವಳು ವಿರೋಧಿಗಳ ಪಂಕ್ತಿಯನ್ನು ಮುರಿದ ಮೋಡಿಗಾರ ಅಥವಾ ಮಾಟಗಾತಿ. ಶಿಬಿರದಲ್ಲಿಯೇ ಇರುವ ಶತ್ರು. ಸತ್ತವನ ದೇಹದ ಸುತ್ತಲೂ ಅವನ ಸುಸುವಿನ ಬಂಧುಗಳು ಕೋಟೆಗಟ್ಟಿ ನಿಲ್ಲುತ್ತಾರೆ. ಅವರು ಮಾತ್ರ ಶವವನ್ನು ಮುಟ್ಟಬಹುದು, ಶವ ಸಮಾಧಿಗೆ ಸಂಬಂಧಪಟ್ಟ ಕಾರ್ಯಗಳಿಗೆ ಕೈಯಿಕ್ಕಬಹುದು. ಅವರು ಮಾತ್ರ ದುಃಖದ ಅಬ್ಬರ ಮಾಡಬಹುದು. ಇವೆಲ್ಲ ನಡೆಯುತ್ತಿರುವಾಗ ಸತ್ತವರ ಪತಿ ಅಥವಾ ಪತ್ನಿ ನೋಡಬಾರದು. ಶವವನ್ನು ಮನೆಯ ಜಗಲಿಯ ಮೇಲೆ ಇಟ್ಟು ತೋರುತ್ತಾರೆ. ಅವನು ಶ್ರೀಮಂತನಾಗಿದ್ದರೆ ಒಡವೆಗಳಿಂದ ಅಲಂಕಾರ ಮಾಡುತ್ತಾರೆ. ಒಳ್ಳೆಯ ತೋಟಗಾರನಾಗಿದ್ದರೆ ಶವದ ಮೇಲೆ ದೊಡ್ಡ ಗೆಣಸುಗಳನ್ನು ಸಜ್ಜು ಮಾಡುತ್ತಾರೆ. ತಾಯಿ ಕಡೆ ಸಂಬಂಧದ ನೆಂಟರೆಲ್ಲ ತಮ್ಮ ಧ್ವನಿಯೆತ್ತಿ ಸಾಂಪ್ರದಾಯಿಕವಾದ ಗೋಳಾಟದ ಗಾನ ಮಾಡುತ್ತಾರೆ. ಆ ರಾತ್ರಿ ಇಲ್ಲವೇ ಮರುದಿನ ಸತ್ತವನ ಸಹೋದರಿಯ ಮಕ್ಕಳು ಶವವನ್ನು ಒಯ್ದು ಸಮಾಧಿ ಮಾಡುತ್ತಾರೆ.

ಸತ್ತ ಮನೆಯನ್ನು ಖಾಲಿ ಮಾಡಿ ಬಿಟ್ಟು ಬಿಡುತ್ತಾರೆ. ಅದನ್ನು ಪುನಃ ವಾಸಕ್ಕೆ ಬಳಸುವುದಿಲ್ಲ. ಮನೆಯ ಕೆಳಗಿನ ಜಗಲಿಯ ಮೇಲೆ ಹೆಣೆದ ಚಾಪೆಗಳಿಂದ ಒಂದು ಕೋಣೆ ಮಾಡಿ. ಹಳ್ಳಿಯವರು ಸತ್ತವರ ಪತ್ನಿ ಅಥವಾ ಪತಿಯನ್ನು ಅಲ್ಲಿಗೆ ಕರೆತರುತ್ತಾರೆ. ಅವನ ದೇಹವನ್ನು ಉರಿಯಿಂದ ತೆಗೆದ ಇದ್ದಿಲಿನಿಂದ ಕರಿ ಬಳಿದು ಕಪ್ಪು ಮಾಡುತ್ತಾರೆ. ಅವನ ಕೊರಳಿಗೆ ಕರಿಯ ಹೆಣೆದ ಹಗ್ಗದ ಮಾಲೆಯನ್ನು ಹಾಕುತ್ತಾರೆ. ಅದು ದುಃಖದ ಸಂಕೇತ ಚಿಹ್ನೆ. ಆ ಕತ್ತಲು ಕೋಣೆಯಲ್ಲಿ ಕುಳಿತು ಒಂದೆರಡು ತಿಂಗಳು ಕಾಲ ಕಳೆಯಬೇಕು. ಅನಂತರ ತನ್ನ ಅತ್ತೆ ಮಾವಂದಿರ ಕಣ್ಗಾವಲಿನಲ್ಲಿ ಅವರ ತೋಟದಲ್ಲಿ ನಿಶ್ಚಿತಾರ್ಥದ ಕಾಲದಲ್ಲಿ ದುಡಿದಂತೆಯೇ ದುಡಿಯಬೇಕು. ಸತ್ತು ಹೋದ ತನ್ನ ಪತ್ನಿ ಮತ್ತು ಅವಳ ಸಹೋದರ ಸಹೋದರಿಯರ ತೋಟಗಳಲ್ಲಿಯೂ ಗಂಡನು ದುಡಿಯಬೇಕು. ಅದಕ್ಕೆ ಅವನಿಗೆ ಯಾವ ಬಗೆಯ ಪ್ರತಿಫಲವೂ ದೊರೆಯುವುದಿಲ್ಲ. ಅವನ ತೋಟವನ್ನು ಅವನ ಸಹೋದರ ಸಹೋದರಿಯರು ರೂಢಿಸುತ್ತಾರೆ. ಅವನು ನಗಬಾರದು. ಆಹಾರ ವಿನಿಮಯದಲ್ಲಿ ಪಾಲ್ಗೊಳ್ಳಬಾರದು. ತಲೆಯೋಡನ್ನು ಸಮಾಧಿಯಿಂದ ತೆಗೆದು, ಸತ್ತವರ ಸಹೋದರಿಯ ಮಕ್ಕಳು ನೃತ್ಯ ಮಾಡುವಾಗ ಅವನು ನೃತ್ಯಗಾರರನ್ನು ನೋಡಬಾರದು. ತಲೆಯೋಡನ್ನು ಸಹೋದರಿಯ ಮಗನು ಇಟ್ಟುಕೊಂಡು, ಜೀವವನ್ನು ಸಂಪ್ರದಾಯ ರೀತ್ಯಾ ಸತ್ತವರ ನಾಡಿಗೆ ಬೀಳ್ಕೊಡುತ್ತಾರೆ.

ಅವನ ನಂಟರು, ಈ ಶೋಕ ಕಾಲದಲ್ಲಿ ಅವನ ತೋಟವನ್ನು ಕೃಷಿ ಮಾಡುವುದು ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚಿಗೆ ಹೊರೆ ಅವರ ಮೇಲಿದೆ. ಸಮಾಧಿಯಾದ ಬಳಿಕ ಅವರು ಸತ್ತವನ ಗ್ರಾಮಕ್ಕೆ ಅದಕ್ಕಾಗಿ ವೆಚ್ಚ ಸಲ್ಲಿಸಬೇಕು. ಕ್ರಿಯೆಗಳನ್ನು ಆಚರಿಸಿದ ಸಹೋದರಿಯ ಮಕ್ಕಳಿಗೆ ಬೇಯಿಸಿದ ಗೆಣಸುಗಳ ಕಾಣಿಕೆ ನೀಡಬೇಕು. ಭಾರಿ ಪ್ರಮಾಣದಲ್ಲಿ ಹಸಿ ಗೆಣಸನ್ನು ಕಾಣಿಕೆಯಾಗಿ ತರಬೇಕು. ಅವು ಗಳನ್ನು ಸತ್ತವನ ಗ್ರಾಮದಲ್ಲಿ ಪ್ರದರ್ಶನ ಮಾಡಿ ಗ್ರಾಮದಲ್ಲಿರುವ ಸತ್ತವನ ನಂಟರಿಗೆ ಹಂಚುತ್ತಾರೆ. ಅವನ ಸುಸುವಿನ ಸದಸ್ಯರಿಗೆ ಹೆಚ್ಚಿನ ಪಾಲು ಸಲ್ಲುತ್ತದೆ.

ಹೀಗೆಯೇ ವಿಧವೆಯಾದವಳೂ ಸಹ ಸತ್ತ ಗಂಡನ ಬಂಧುಗಳ ಹಿಡಿತಕ್ಕೆ ಸಿಕ್ಕುತ್ತಾಳೆ. ಅವಳ ಮಕ್ಕಳಿಗೆ ವಿಶೇಷವಾದ ಜವಾಬ್ದಾರಿಗಳಿರುತ್ತವೆ. ವರ್ಷ ಪೂರಾ, ಅವರು ಬಾಳೆಹಣ್ಣು ಮತ್ತು ಕೆಸವಿನ ಗಂಜಿಯನ್ನು ಮಾಡಿ "ತಮ್ಮ ತಂದೆಗೆ ನೀಡಲು" ಸತ್ತವನ ಸುಸುವಿಗೆ, ಸಲ್ಲಿಸಬೇಕು ಅದಕ್ಕೆ ಕಾರಣ 'ಅವನು ನಮ್ಮನ್ನು ಎತ್ತಿ ಆಡಿಸಿದ್ದು'. ತಮ್ಮ ತಂದೆಯ ಸಮೀಪ ಬಂಧುಗಳ ಗುಂಪಿನಲ್ಲಿ ಅವರು ಸೇರಿಲ್ಲ. ಆ ಗುಂಪಿಗೆ ಸೇರಿದ ಒಬ್ಬನಾದ ತಮ್ಮ ತಂದೆಯು ತಮಗೆ ಒಳಿತು ಮಾಡಿದ್ದಕ್ಕಾಗಿ ಇದು ಹೊರಗಿನವರು ನೀಡುತ್ತಿರುವ ಕಾಣಿಕೆ. ಅವರು ಒಂದು ಹಂಗನ್ನು ತೀರಿಸುತ್ತಿದ್ದಾರೆ. ಅವರ ಕಾರ್ಯಗಳಿಗೆ ಯಾವ ರೀತಿಯ ಮರುಪಾವತಿಯೂ ಇಲ್ಲ.

ಶೋಕವನ್ನು ಆಚರಿಸುತ್ತಿರುವವನು ಬಂಧನದಿಂದ ಮುಕ್ತನಾಗಲು ಅವನ ಕುಲದವರು ಸತ್ತವನ ಕುಲಕ್ಕೆ ನೀಡಬೇಕಾದ ಕಾಣಿಕೆಗಳು ಇನ್ನೂ ಇವೆ. ಹಿಂದಿ ನಂತೆಯೇ ಆಗಲೂ ಅವರು ಹಸಿ ಗೆಣಸುಗಳ ಕಾಣಿಕೆ ತರುತ್ತಾರೆ. ಸತ್ತವನ ಕುಲಸ್ಥರು ಆಗ ಶೋಕಾಚರಣೆಯ ಸಂಕೇತವಾದ ಹಗ್ಗವನ್ನು ಕತ್ತರಿಸಿ, ಇದ್ದಿಲು ಮಸಿಯನ್ನು ತೊಳೆದು ಬಿಡುತ್ತಾರೆ. ಅನಂತರ ಕುಣಿತವಿರುತ್ತದೆ. ಆಗ ಶೋಕಿ ತನನ್ನು ಅವನ ನಂಟರು ತಮ್ಮ ಗ್ರಾಮಕ್ಕೆ ಕರೆದೊಯ್ಯುತ್ತಾರೆ. ಅಲ್ಲಿಗೆ ಶೋಕ ವರ್ಷ ಮುಗಿಯಿತು. ಅಲ್ಲಿಂದ ಮುಂದಕ್ಕೆ ಆ ವ್ಯಕ್ತಿಗೆ ತನ್ನ ಪತಿ ಅಥವಾ ಪತ್ನಿ ಯಾಗಿದ್ದವರ ಗ್ರಾಮಕ್ಕೆ ಪ್ರವೇಶವಿಲ್ಲ. ಆ ವ್ಯಕ್ತಿ ಶೋಕದಿಂದ ಬಿಡುಗಡೆಯಾದ ವಿಧುರನಾದರೆ ಅವನ ಮಕ್ಕಳು ಅವನಿಗೆ ಇನ್ನು ಮುಂದೆ ಪ್ರವೇಶವಿಲ್ಲದ ತಮ್ಮ ಕುಲಸ್ಥರ ಗ್ರಾಮದಲ್ಲಿಯೇ ಉಳಿದುಕೊಳ್ಳುತ್ತಾರೆ. ಶೋಕದ ಅವಧಿಯ ಕೊನೆ ಯಲ್ಲಿ, ಹಾಡುವ ಹಾಡು ಅವರವರ ಬೀಳ್ಕೊಡುಗೆಯನ್ನು ಕುರಿತದ್ದಾಗಿರುತ್ತದೆ. ಅದು ಶೋಕಾವಧಿಯ ಕೊನೆಯ ದಿನದಂದು ತಂದೆಯನ್ನು ಸಂಬೋಧಿಸುವ ಹಾಡು.

ಈ ಮಧ್ಯರಾತ್ರಿಯಲ್ಲಿ
ನೀನು ಎದ್ದಿರು, ಎದ್ದಿರು, ಮಾತನಾಡು
ಮೊದಲು ಎದ್ದಿರು, ಮಾತನಾಡು
ಎದ್ದಿರು, ಮಾತನಾಡು
ನೆಲದೊಳಿರುವ ಮ್ಯಾನಿವಾರಳಿಗಾಗಿ
ಮೈವೊರ್ತು ನಿನ್ನ ದೇಹಕ್ಕೆ ಬಳಿದಿರುವ ಮಸಿ.
ರಾತ್ರಿಯ ಮಸಿ, ಬೆಳಕು ಹರಿದಾಗ ತೊಳೆವುದು
ಮೊದಲು ನೀನು ಎದ್ದಿರು, ಮಾತನಾಡು.

ವಿಧುರನಾಗಿರುವ ಮೈವೊರ್ತುವಿಗೆ ತನ್ನ ಮಕ್ಕಳೊಂದಿಗೆ ಮಾತನಾಡಲು ಆ ಒಂದು ಕೊನೆಯ ರಾತ್ರಿ ಉಳಿದಿದೆ. ಮರುದಿನ ಅವನಿಗೆ ಬಳಿದಿರುವ ಇದ್ದಿಲು ಮಸಿ ತೊಳೆದು ಹೋಗುತ್ತದೆ. "ರಾತ್ರಿಯ ಕತ್ತಲನ್ನು ಬೆಳಕು ಮುರಿಯುವಂತೆ" ಅವನ ದೇಹ ಮತ್ತೊಮ್ಮೆ ಮಸಿಯಿಲ್ಲದಂತೆ ಬೆಳಗಲಿದೆ. ಇನ್ನು ಮುಂದೆ ಆ ತಂದೆ, ಮಕ್ಕಳು ಒಟ್ಟಿಗೆ ಕುಳಿತು ಮಾತನಾಡುವಂತಿಲ್ಲ.

ಶೋಕಾಚರಣೆಯ ಕಾಲದಲ್ಲಿ ಪರಸ್ಪರ ಆರೋಪ, ಪ್ರತ್ಯಾರೋಪಗಳಿಗೆ ಗುರಿಯಾಗುವವರು ಆ ಪತಿ, ಪತ್ನಿಯರಿಗೆ ಸಂಬಂಧಪಟ್ಟ ಕುಲಗಳವರು ಮಾತ್ರವಲ್ಲ. ಬದುಕಿ ಉಳಿದಿರುವ ಪತಿ ಅಥವಾ ಪತ್ನಿಯು ಪರಂಪರಾಗತವಾದ ಸೂತ್ರದಂತೆ ಸತ್ತವರ ಕೊಲೆಯ ಆರೋಪಕ್ಕೆ ಗುರಿಯಾಗುವಂತಹ ವೈರಿಹಳ್ಳಿಯ ಪ್ರತಿನಿಧಿ ಮಾತ್ರವಲ್ಲ. ಸೇರಿಕೊಂಡವರ ಹಳ್ಳಿಗೆ ಮದುವೆಯಾಗಿ ಬಂದಿರುವ ಹೊರ ಬಳ್ಳಿಗಳವರ ಪ್ರತಿನಿಧಿಯೆಂದೂ ಪರಿಗಣಿತನಾಗುತ್ತಾನೆ. ಈಗಾಗಲೇ ನಾವು ಕಂಡಿರುವಂತೆ ಈ ಗುಂಪು ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯ ಗ್ರಾಮಗಳಿಂದ ಬಂದ ವ್ಯಕ್ತಿಗಳದ್ದು. ಒಂದೇ ಹಳ್ಳಿಯೊಂದಿಗೆ ಹಲವು ವಿವಾಹ ಸಂಬಂಧಗಳನ್ನು ಬೆಳೆಸಿಕೊಳ್ಳುವುದು ಅಸಾಧು ನೀತಿಯೆಂದು ಪರಿಗಣಿತವಾಗಿರುವುದು ಇದಕ್ಕೆ ಕಾರಣ. ಆ ಗ್ರಾಮದ ಒಡೆಯರ ಪತಿ, ಪತ್ನಿಯರಾದ ಇವರು ತಮ್ಮ ವಿವಾಹ ಸಂಬಂಧ ಮುಂದುವರಿದುಕೊಂಡು ಒಂದಲ್ಲ ಒಂದಲ್ಲ ಒಂದು ದಿನ ಈಗ ಶೋಕಾಚರಣೆಗೆ ಗುರಿಯಾಗಿರುವ ಪತಿ ಅಥವಾ ಪತ್ನಿಯಂತಹ ಪರಿಸ್ಥಿತಿಗೆ ಗುರಿಯಾಗುತ್ತಾರೆ. ಶೋಕಾಚರಣೆಯ ಆರಂಭದಲ್ಲಿ ಇವರು ಗ್ರಾಮದ ಒಡೆಯರಿಗೆ ಸೇರಿದ ಹಣ್ಣಿನ ಮರಗಳ ಮೇಲೆ ತಡೆ ವಿಧಿಸುವ ಹಾಗೂ ಕೆಲವೊಮ್ಮೆ ಕೋಪೋದ್ರೇಕದಿಂದ ಅವನ್ನು ಕಡಿದು ಹಾಕುವ ಹಕ್ಕು ಪಡೆದಿದ್ದಾರೆ. ಈ ತಡೆಯ ನಿವಾರಣೆಗಾಗಿ, ಕೆಲವು ವಾರಗಳ ಬಳಿಕ ಅವರು ಈಟಿಗಳಿಂದ ಸಜ್ಜಾಗಿ, ಆ ಗ್ರಾಮದ ಮೇಲೆ ಯುದ್ಧ ಹೂಡಿ ಸೋಲಿಸಲು ಬಂದರೋ ಎಂಬಂತೆ, ಧಾಳಿ ಮಾಡುತ್ತಾರೆ, ಅವರು ತಮ್ಮೊಂದಿಗೆ

ದೊಡ್ಡದೊಂದು ಹಂದಿಯನ್ನು ಹೊತ್ತು ತಂದು ಸತ್ತವನ ಅತಿ ಹತ್ತಿರದ ಬಂಧುವಿನ ಮನೆಯ ಮುಂದೆ ತಿರಸ್ಕಾರದಿಂದ ಎಸೆಯುತ್ತಾರೆ. ಗ್ರಾಮದ ಅಡಿಕೆ ಮರಗಳನ್ನು ಸರಸರನೆ ಏರಿ, ಕಾಯಿಗಳನ್ನೆಲ್ಲ ಕಿತ್ತೆಸೆದು, ಇತರರು ಏನಾಗುತ್ತಿದೆಯೆಂಬುದನ್ನು ಅರಿತುಕೊಳ್ಳಲೂ ಅವಕಾಶವಿಲ್ಲದಷ್ಟು ಬೇಗ ಓಡಿ ಹೋಗುತ್ತಾರೆ. ಈ ಎರಡು ಧಾಳಿಗಳೂ ಮುಂದೆ ಶೋಕಾಚರಣೆಯ ಸಂದರ್ಭದಲ್ಲಿ ತಮಗೆ ಪ್ರಾಯಶ್ಚಿತ್ತವನ್ನು ವಿಧಿಸಬಲ್ಲ ಗುಂಪಿನ ಮೇಲೆ ಸಾಂಸ್ಕಾರಿಕವಾಗಿ ವ್ಯಕ್ತವಾಗುವ ಅಸಮಾಧಾನ. ಸಂಪ್ರದಾಯದಂತೆ ಕೊಬ್ಬಿದ ಹಂದಿಗೆ ಬದಲು ಮನುಷ್ಯನೇ ಬಲಿಯಾಗಿರುತ್ತಿದ್ದ. ಅದು ಹೇಗೇ ಇರಲಿ, ಈ ಧಾಳಿಕಾರರು ಓಡಿಹೋದ ಮೇಲೆ ಗ್ರಾಮಸ್ಥರು ಹಂದಿಯನ್ನು ಕಂಡು ರೋಷಾವೇಶಗೊಳ್ಳುತ್ತಾರೆ. ಆ ಹಂದಿಯನ್ನು ಬೇಯಿಸಿ, ಅದರಿಂದ ತಮ್ಮ ಗ್ರಾಮದೊಂದಿಗೆ ವಿವಾಹ ಸಂಬಂಧ ಬೆಳೆಸಿಕೊಂಡಿರುವ ಗ್ರಾಮಗಳಿಗೆ ನೀಡುವ ಔತಣ ಸಾಲು ಆರಂಭವಾಗುತ್ತದೆ. ಈ ಔತಣವನ್ನು ಅತ್ಯಂತ ಅಪಮಾನಕಾರಿ ರೀತಿಯಲ್ಲಿ ನೀಡುತ್ತಾರೆ ನೀಡುವವರು ಹಂದಿಯ ಕೊಬ್ಬನ್ನು ಒಯ್ದು ಔತಣ ಪಡೆಯುವ ಗ್ರಾಮದ ಗೌರವಾನ್ವಿತ ವೃದ್ಧನೊಬ್ಬನ ಮೇಲೆ ಸುರಿಯುತ್ತಾರೆ. ಅವನ ಮೈಗೆಲ್ಲ ಸವರಿ ತಟ್ಟುತ್ತಾರೆ. ಕೂಡಲೇ ಆ ವೃದ್ಧ ಮುಂದಕ್ಕೆ ಹಾರಿ ಕೋಪಾವೇಶವನ್ನು ಸೂಚಿಸುತ್ತ, ಕಾಲ್ಪನಿಕವಾದ ಈಟಿಯೊಂದನ್ನು ಹಿಡಿದು, ಈ ಆತಿಥೇಯರನ್ನು ರೂಢಿಯ ಪ್ರಕಾರ ಬೈಯುತ್ತಾ ಕುಣಿಯುತ್ತಾನೆ. ಹಿಂದೆ ಮರಗಳನ್ನೇರಿ ಧಾಳಿ ಮಾಡಿದಾಗಿನ ಸಂದರ್ಭದಂತೆಯೇ,ಈಗ ಅವನಿಗೆ ಶೋಕಾಚರಣೆಯ ಸಂದರ್ಭದಲ್ಲಿ ತಮಗೆ ಪ್ರಾಯಶ್ಚಿತ್ತ ವಿಧಿಸಬಲ್ಲ ಸತ್ತವರ ಕುಲದ ವಿರೋಧವಾಗಿ ಅವರೊಂದಿಗೆ ಮದುವೆಯಾದ ಪತಿ ಅಥವಾ ಪತ್ನಿಯರ ಕುಲಗಳ ಅಸಮಾಧಾನವನ್ನು ವ್ಯಕ್ತಪಡಿಸಲು ಅವಕಾಶವುಂಟು. ಸತ್ತವನ ಗುಂಪಿನ ಒಬ್ಬ ವ್ಯಕ್ತಿಯು ಆ ವೃದ್ಧನ ವಿರೋಧವಾಗಿ ಕೋಪಾವೇಶ ತೋರುತ್ತಾನಾದರೂ ಬಹಳ ಅಪಮಾನಕಾರಿಯಾದುದೇನನ್ನೂ ಹೇಳುವುದಿಲ್ಲ. ಕೊನೆಗೆ ವೃದ್ಧ ಮೈ ತೊಳೆದುಕೊಂಡು ಸಂತೋಷದಿಂದ ಊಟ ಮಾಡುತ್ತಾನೆ. ಹಂದಿಗೆ ಬದಲು ಸತ್ತವನ ಹಳ್ಳಿಯವರು ಕೂಳನ್ನು ತೆಗೆದುಕೊಂಡು ಹೋದರೆ ಅದನ್ನೂ ಸಹ ಹೀಗೆಯೇ ಸುರಿಯುತ್ತಾರೆ. ಅದೇ ರೀತಿ ಅದಕ್ಕೂ ಅಸಮಾಧಾನ ಸಾರ್ವಜನಿಕವಾದ ನೃತ್ಯರೂಪದಲ್ಲಿ ವ್ಯಕ್ತಗೊಳ್ಳುತ್ತದೆ. ಈ ಎರಡು ಗುಂಪುಗಳ ನಡುವಣ ಬಿಕ್ಕಟ್ಟು, ಸತ್ತವನ ಹಳ್ಳಿಯವರು ನೀಡುವ ದೊಡ್ಡ ಔತಣದಲ್ಲಿ ಕೊನೆಗೊಳ್ಳುತ್ತದೆ. ಇದು ಡೋಬುಗಳ ಅತ್ಯಂತ ದೊಡ್ಡ ಔತಣಗಳಲ್ಲೊಂದು. ಅದು ಸತ್ತವನ ಹಳ್ಳಿಯಲ್ಲಿ ಏರ್ಪಾಡಾಗುತ್ತದೆ. ಮದುವೆಯಿಂದ ಸಂಬಂಧಗೊಂಡ ಹಳ್ಳಿಗಳಿಂದ ಬಂದ ಅತಿಥಿಗಳಿಗೆ ಮುಖಭಂಗ ಮಾಡಿ ಊಟ ನೀಡುತ್ತಾರೆ.

"ಭಾವಾ, ಇದೋ ನಿನ್ನ ಪಾಲು ! ಸತ್ತವನ ಬಳಿ ಹಲವಾರು ಹಂದಿಗಳಿದ್ದುವು,

ನಿನ್ನ ಹೆಣ್ಣು ಹಂದಿಗಳಾದರೋ ಗೊಡ್ಡು', 'ಟೋಗೋ, ಇದೋ ನಿನ್ನ ಪಾಲು, ಸತ್ತವನು ಮೀನು ಬಲೆಗಳ ರಾಜನಾಗಿದ್ದ. ನೀನು ಮೀನು ಹಿಡಿಯುವುದು ಹೀಗೆ!' 'ಕೋಪು, ಇದೋ ನಿನ್ನ ಪಾಲು ! ಸತ್ತವನು ಒಳ್ಳೆಯ ತೋಟಗಾರನಾಗಿದ್ದ. ಅವನು ಮುಸ್ಸಂಜೆಗೆ ಮನೆಗೆ ಕೆಲಸದಿಂದ ಹಿಂತಿರುಗುತ್ತಿದ್ದ. ನೀನೋ ಮಧ್ಯಾಹ್ನಕ್ಕೇ ಸುಸ್ತಾಗಿ ಹಿಂತಿರುಗುತ್ತಿ' ಡಾ. ಫಾರ್ಚ್ಯೂನ್‌ಸರು ಹೇಳುವಂತೆ "ಸಾವು ಬಡಿದಾಗ, ಆ ಪ್ರದೇಶದ ಜನ ಈ ರೀತಿ ಸಂತೋಷದಲ್ಲಿ ಶಕ್ತಿ ಗೂಡಿ ಮುಂದುವರಿಯುತ್ತಾರೆ."

ಸತ್ತವನ ಹಳ್ಳಿಗೂ, ಉಳಿದವರ ಹಳ್ಳಿಗೂ ನಡುವೆ ಸಂಪ್ರದಾಯಾನುಸಾರವಾಗಿ ಸಂಶಯವಿದೆಯೆಂದ ಮಾತ್ರಕ್ಕೆ, ಉಳಿದಿರುವ ಪತಿ ಅಥವಾ ಪತ್ನಿಯೋ ನಿರ್ದಿಷ್ಟವಾಗಿ ಕೊಲೆಗಾರ ಎಂದು ಪರಿಗಣಿಸಿದಂತಲ್ಲ. ಅವನು ಕೊಲೆಗಾರನಾಗಿರಬಹುದು, ಅಥವಾ ಅಲ್ಲದೆಯೂ ಇರಬಹುದು. ಆದರೆ ಕಣಿಗಾರರು ಸತ್ತವನಿಗೆ ಯಾವುದಾದರೂ ಕಾರ್ಯ ಕ್ಷೇತ್ರದಲ್ಲಿ ದೊರೆತ ವಿಶೇಷ ಯಶಸ್ಸನ್ನು, ಬೆಟ್ಟು ಮಾಡಿ ತೋರಿ, ಅದರಿಂದ ಉಂಟಾದ ಈರ್ಷ್ಯೆಯಿಂದ ಸಾವು ಬಂದಿತು ಎಂದು ಆಪಾದಿಸಲು ಮುಂದಾಗುತ್ತಾರೆ. ಹೇಗೇ ಆದರೂ ಶೋಕಾಚರಣೆಯು ಬರಿಯ ಸಂಸ್ಕಾರ ಕ್ರಿಯೆಯಲ್ಲ. ಬಹುಮಟ್ಟಿಗೆ ಒಂದು ಪಕ್ಷದ ಆಳವಾದ ಸಂಶಯವನ್ನೂ, ಇನ್ನೊಂದು ಪಕ್ಷವು ಆ ಸಂಶಯವನು ಅಲ್ಲಗಳೆಯುವುದನ್ನೂ ಅದು ಸ್ಪಷ್ಟಗೊಳಿಸುತ್ತದೆ. ಇದು ಡೋಬುಗಳಲ್ಲಿ ಆವೇಗ ದಿಂದ ಹರಿಯುವ ವಿಶೇಷ ಮನೋಭಾವಗಳ ಪ್ರಲಂಬನ.

ಮಾಂತ್ರಿಕವಾಗಿಯೂ, ಮಾಂತ್ರಿಕವಲ್ಲದ ರೀತಿಯಲ್ಲೂ, ಕೊಲೆ ಮಾಡಬಹುದು. ಮೋಡಿ ಅಥವಾ ಮಾಟದಂತೆ ವಿಷ ಪ್ರಯೋಗವೂ ಸಹ ಸಾಮಾನ್ಯವಾಗಿ ಸಂಶಯ ಪಡುವಂತಹ ಒಂದು ಸಂಗತಿ. ಯಾವ ಹೆಂಗಸೂ ಸಹ ತನ್ನ ಅಡುಗೆಯ ಪಾತ್ರೆಗಳನ್ನು ಯಾರಾದರೂ ಬಳಿ ಸುಳಿದಾರೆಂಬ ಕಾರಣಕ್ಕೆ ಒಂದು ಕ್ಷಣವೂ ಬಿಡದೆ ಗಮನಿಸುತ್ತಾಳೆ. ವ್ಯಕ್ತಿಗಳು ಹಲವಾರು ವಿಷಗಳ ಒಡೆತನ ಪಡೆದಿದ್ದು ತಮ್ಮ ಮಂತ್ರಗಳನ್ನು ಬಳಸುವಂತೆಯೇ ಬಳಸುತ್ತಾರೆ. ಈ ವಿಷಗಳು ಕೊಲ್ಲುತ್ತವೆಂಬುದು ಖಚಿತವಾದ ಮೇಲೆ, ಅವು ತೀವ್ರವಾದ ಘರ್ಷಣೆಗಳಲ್ಲಿ ಬಳಕೆಗೆ ಬರುತ್ತವೆ.

'ನನ್ನ ತಂದೆ ಅದರ ವಿಚಾರ ತಿಳಿಸಿದ. ಅದು ಬುಡೋ ಬುಡೋ. ಅದು ಸಮುದ್ರದಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಅದನ್ನು ಪರೀಕ್ಷೆಮಾಡಲು ಮನಸ್ಸಾಯಿತು. ಅದರ ರಸ ತೆಗೆದೆವು. ನಾನು ಒಂದು ಎಳನೀರನ್ನು ತೆಗೆದು ಅದರಲ್ಲಿನ ನೀರು ಕುಡಿದೆ. ಉಳಿದುದಕ್ಕೆ ಈ ರಸವನ್ನು ಹುಯ್ದು ಮತ್ತೆ ಮುಚ್ಚಿದೆ. ಮಾರನೆಯ ದಿನ ಆ ಮಗುವನ್ನು ಕರೆದು "ನಾನು ಇದನ್ನು ಕುಡಿದಿದ್ದೇನೆ. ನೀನು ಕುಡಿ" ಎಂದು ಕುಡಿಸಿದೆ. ಅವಳು ಮಧ್ಯಾಹ್ನದ ವೇಳೆಗೆ ಕಾಯಿಲೆಯಾದಳು. ಆ ರಾತ್ರಿ ಸತ್ತಳು. ಅವಳು ನನ್ನ ತಂದೆಯ ಗ್ರಾಮದ ಸಹೋದರಿಯ ಮಗಳು. ನನ್ನ

ತಂದೆ ಅವಳ ತಾಯಿಯನ್ನು ಬುಡೋ ಬುಡೋವಿಷ ಪ್ರಯೋಗ ಮಾಡಿ ಕೊಂದ. ಆಮೇಲೆ ನಾನು ಆ ತಬ್ಬಲಿಯನ್ನು ವಿಷಕ್ಕೆ ಗುರಿಮಾಡಿದೆ.'

"ಏನು ತೊಂದರೆಯಾಗಿತ್ತು ?"

"ಅವಳು ನನ್ನ ತಂದೆಯನ್ನು ಮರುಳು ಮಾಡಿದ್ದಳು. ಅವನು ಬಲಹೀನನಾದ. ಅವನು ಅವಳನ್ನು ಕೊಂದ ಮೇಲೆ ಪುನಃ ಶಕ್ತಿ ತುಂಬಿಕೊಂಡ".

ನಾವು ಕಾಣಿಕೆಯನ್ನು ಸ್ವೀಕರಿಸಿ ಧನ್ಯವಾದ ಅರ್ಪಿಸುವುದಕ್ಕೆ ಸಮವಾದ ಡೋಬು ಸೂತ್ರವಿದು. 'ಈಗ ನೀನು ನನಗೆ ವಿಷ ಪ್ರಯೋಗ ಮಾಡಿದರೆ ನಾನು ನಿನಗೆ ಅದನ್ನು ಹೇಗೆ ಹಿಂತಿರುಗಿಸಬೇಕು ?' ಅಂದರೆ ಸಂದರ್ಭ ಸಾಧಿಸಿ ಈ ಸೂತ್ರವನ್ನು ಹೇಳಿ, ಅವರು ತಾನು ಯಾರಿಗೆ ಹಂಗಂಗೊಂಡಿರುವನೋ ಅವರ ಮೇಲೆ ಎಲ್ಲರ ಮೇಲೂ ಬಳಸುವ ಅಸ್ತ್ರವನ್ನೇ ಪ್ರಯೋಗಿಸುವುದರಿಂದ ಲಾಭವಾಗದು ಎಂಬುದನ್ನು ಮನವರಿಕೆ ಮಾಡಿಕೊಡುತ್ತಾರೆ.

ಡೋಬುವನ್ ಸಂಪ್ರದಾಯಗಳು ನಗೆಯನ್ನು ದೂರೀಕರಿಸಿ, ನಿಷ್ಠುರ ಭಾವವನ್ನು ಒಂದು ಸದ್ಗುಣವನ್ನಾಗಿ ಮಾಡಿದೆ. ಕಡಮೆ ಕೇಡಿಗರಾದ ತಮ್ಮ ನೆರೆಯವರನ್ನು ಕುರಿತು ಅವರು ತಿರಸ್ಕಾರದಿಂದ 'ಅವರೇ ! ನಗುವಿನ ಬೇರುಗಳು' ಎನ್ನುತ್ತಾರೆ. ತೋಟಗಾರಿಕೆ, ಕುಲಾ ಮೊದಲಾದ ಪ್ರಮುಖವಾದ ಕಾರ್ಯಾಚರಣೆಗಳಲ್ಲಿ ಸಂತೋಷಕಾರಿ ಕ್ರಿಯೆಗಳಿಂದ ದೂರವಾಗಿ, ಸಂತೋಷವನ್ನು ವ್ಯಕ್ತಪಡಿಸದೆ ಇರಬೇಕಾದುದು ಮುಖ್ಯವಾದ ಹೊಣೆಗಾರಿಕೆ. 'ನಾವು ತೋಟಗಳಲ್ಲಿ ಆಟವಾಡುವುದಿಲ್ಲ, ಹಾಡು ಹೇಳುವುದಿಲ್ಲ, ಕಿರುಚಾಡುವುದಿಲ್ಲ, ಕತೆ ಹೇಳುವುದಿಲ್ಲ, ನಾವು ತೋಟದಲ್ಲಿ ಹಾಗೇನಾದರೂ ಮಾಡಿದರೆ ಬೀಜದ ಗೆಣಸುಗಳು 'ಇದೇನು ಮಂತ್ರರಕ್ಷೆ ? ಹಿಂದೆ ಮಂತ್ರರಕ್ಷೆ ಚೆನ್ನಾಗಿರುತ್ತಿತ್ತು. ಆದರೆ ಇದು ಏನು ?' ಎನ್ನುತ್ತವೆ. ಬೀಜದ ಗೆಣಸುಗಳು ನಮ್ಮ ಮಾತನ್ನು ತಪ್ಪು ತಿಳಿದುಕೊಳ್ಳುತ್ತವೆ. ಅವು ಬೆಳೆಯುವುದಿಲ್ಲ'. ಇದೇ ನಿಷೇಧ ಕುಲಾ ನಡೆಯುವ ಕಾಲದಲ್ಲಿಯೂ ಇದೆ. ಅಂಫ್ಲೆಟ್ಸ್ ದ್ವೀಪದ ಒಂದು ಗ್ರಾಮದಲ್ಲಿ ಜನರು ನೃತ್ಯ ಮಾಡುತ್ತಿರುವಾಗ ಡೋಬುವನನೊಬ್ಬ ಊರ ಹೊರಗೆ ಬಿದ್ದುಕೊಂಡಿದ್ದ. ಅವನೂ ನೃತ್ಯದಲ್ಲಿ ಸೇರಿಕೊಳ್ಳಬಹುದು ಎಂದು ಸೂಚಿಸಿದಾಗ ಅವನು ರೇಗಿ ಆ ಸೂಚನೆಯನ್ನು ತಳ್ಳಿ ಹಾಕಿ, 'ನಾನು ಸಂತೋಷಪಟ್ಟೆನೆಂದು ನನ್ನ ಹೆಂಡತಿ ಹೇಳುವುದಿಲ್ಲವೆ ?' ಎಂದ. ಅದು ಪರಮೋಚ್ಚ ನಿಷೇಧ.

ಮಹತ್ವದ ಸದ್ಗುಣವಾಗಿರುವ ಈ ನಿಷ್ಠುರ ಭಾವವು ಡೋಬುಗಳಲ್ಲಿ ವ್ಯಾಪಿಸಿರುವ ಈರ್ಷ್ಯೆ ಮತ್ತು ಸಂಶಯಗಳ ಮೇಲೆ ಪ್ರಭಾವ ಬೀರಿದೆ. ನಾವು ಈಗಾಗಲೇ ಕಂಡಂತೆ ನೆರೆಯುವನ ಮನೆಗೋ, ತೋಟಕ್ಕೋ ಅನುಮತಿಯಿಲ್ಲದೆ ಪ್ರವೇಶಿಸುವುದು ನಿಷಿದ್ಧ. ಪ್ರತಿ ವ್ಯಕ್ತಿಗೂ ಅವನದ್ದು ಅವನಿಗೆ, ಗಂಡಸು ಅಥವಾ

ಹೆಂಗಸಿನೊಂದಿಗೆ ಯಾವುದೇ ರೀತಿಯ ಭೇಟಿಯು ನಿಷಿದ್ಧವೆಂದೇ ಎಣಿಕೆ. ಅಲ್ಲದೇ ರೂಢಿಯ ಪ್ರಕಾರ ತನ್ನನ್ನು ಕಂಡು ಓಡಿ ಹೋಗದ ಯಾವ ಹೆಂಗಸನ್ನಾದರೂ ಗಂಡಸು ಬಳಸಿಕೊಳ್ಳುತ್ತಾನೆ. ಅವಳು ಒಂಟಿಯಾಗಿರುವುದೇ ತನಗೆ ಅನುಮತಿ ಯಿತ್ತಂತೆ ಎಂಬುದು ಅವನ ಭಾವನೆ. ಸಾಧಾರಣವಾಗಿ ಹೆಂಗಸು ರಕ್ಷಕರನ್ನು ತನ್ನೊಂದಿಗೆ ಕರೆದೊಯ್ಯುತ್ತಾಳೆ. ಅದು ಬಹುಶಃ ಸಣ್ಣ ಮಗು. ಈ ಜೊತೆಯು ಅವಳನ್ನು ಆಪಾದನೆಗಳಿಂದಲೂ, ದೈವಿಕವಾದ ಅಪಾಯಗಳಿಂದಲೂ, ಪಾರು ಮಾಡುತ್ತದೆ. ಹೆಂಗಸರೇ ತೋಟಗಳಲ್ಲಿ ಕೆಲಸ ಮಾಡುವ ಕಾಲದಲ್ಲಿ ಗಂಡನು ತನ್ನ ತೋಟದ ಪ್ರವೇಶ ಮಾರ್ಗದಲ್ಲಿ ಕಾವಲಿರುತ್ತಾನೆ. ಅವನು ಮಗುವೊಂದ ರೊಂದಿಗೆ ಆಟವಾಡುತ್ತಿರಬಹುದಾದರೂ ತನ್ನ ಹೆಂಡತಿಯು ಬೇರೆ ಯಾರೊಂದಿಗೂ ಮಾತನಾಡದಂತೆ ನೋಡಿಕೊಳ್ಳುತ್ತಾನೆ. ಅವಳು ನೈಸರ್ಗಿಕ ಕಾರ್ಯಗಳಿಗಾಗಿ ಪೊದೆಯಲ್ಲಿ ಹೋದಾಗ ಎಷ್ಟು ಕಾಲ ತೆಗೆದುಕೊಂಡಳು ಎಂಬುದನ್ನು ಗಮನಿಸು ತ್ತಾನೆ. ಮೀರಿದ ಸಂದರ್ಭಗಳಲ್ಲಿ ಡೋಬುಗಳ ಅತಿ ಶಿಷ್ಟತೆಯನ್ನು ತಳ್ಳಿ ಅವ ಳೊಂದಿಗೆ ತಾನೂ ಹೋಗುತ್ತಾನೆ. ಡೋಬುಗಳ ಶಿಷ್ಟತನವು ನಮ್ಮ ಪ್ಯೂರಿಟನ್ ಪೂರ್ವಜರದರಷ್ಟೇ ಅತಿ ಎಂಬುದು ಗಮನಾರ್ಹವಾದದ್ದು. ಯಾವನೂ ಇನ್ನೊಬ್ಬ ನೆದುರಿಗೆ ಬತ್ತಲೆಯಾಗುವುದಿಲ್ಲ. ತೋಡುದೋಣಿಯಲ್ಲಿ ಬರಿಯ ಗಂಡಸರೇ ಪ್ರಯಾಣ ಮಾಡುವಾಗಲೂ ಮೂತ್ರವಿಸರ್ಜನೆಗೆ ಸಹ ದೋಣಿಯ ಹಿಂಭಾಗದಲ್ಲಿ ಯಾರಿಗೂ ಕಾಣದ ಜಾಗಕ್ಕೆ ಹೋಗುತ್ತಾರೆ. ತನ್ನ ಲೈಂಗಿಕ ಜೀವನವನ್ನು ಬಹಿ ರಂಗಗೊಳಿಸುವುದು ನಿಷಿದ್ಧ. ಬೈಗುಳದಲ್ಲಿ ಹೊರತು ಇತರ ಸಂದರ್ಭಗಳಲ್ಲಿ ಅದರಪ್ರಸ್ತಾಪ ಕೂಡದು. ಆದ್ದರಿಂದ ವಿವಾಹಪೂರ್ವ ಪ್ರಣಯಾಚರಣೆಯು ಶೀಲವಂತ ವಾದುದು ಎಂಬ ಮಾತು ರೂಢಿಯಲ್ಲಿದೆ. ಅದನ್ನು ಚಿತ್ರಿಸುವ ನೃತ್ಯಗೀತೆಗಳು ಸ್ಪಷ್ಟ ವಾದ ರಾಗಭಾವಗಳಿಂದ ತುಂಬಿವೆ. ನಿಜಸಂಗತಿಯು ಪ್ರತಿಯೊಬ್ಬ ವಯಸ್ಕನಿಗೂ ಈಗಾಗಲೇ ಅನುಭವಕ್ಕೆ ಬಂದಿರುವಂತಹುದು.

ಡೋಬುಗಳಲ್ಲಿ ಆಳವಾಗಿ ಬೇರೂರಿದ ಅತಿಶಿಷ್ಟತೆಯು ನಮಗೆ ನಮ್ಮ ಸಾಂಸ್ಕೃತಿಕ ಹಿನ್ನೆಲೆಯಲ್ಲಿಯೂ ಪರಿಚಿತವಾದುದೇ. ಇದರೊಂದಿಗೆ ಕೂಡಿ ಬಂದಿ ರುವ ಡೋಬುಗಳ ನಿಷ್ಠುರ ಭಾವವು ಸಹ ಪ್ಯೂರಿಟನರ ಅತಿಶಿಷ್ಟತೆಯೊಂದಿಗೂ ಕೂಡಿಕೊಂಡಿದೆ. ಆದರೆ ಅವುಗಳ ನಡುವೆ ವ್ಯತ್ಯಾಸಗಳಿವೆ. ಈ ಎರಡು ಭಾವ ಗಳನ್ನು ಭಾವೋದ್ರೇಕದ ನಿರಾಕರಣೆ ಮತ್ತು ಲೈಂಗಿಕತೆಗೆ ನೀಡುವ ಗಡವ° ಪ್ರಾಶಸ್ತ್ಯಗಳೊಂದಿಗೆ ಜೊತೆಗೂಡಿಸುವುದು ನಮ್ಮ ರೂಢಿ. ಈ ರೀತಿಯ ಜೋಡಣೆ ಕಡ್ಡಾಯವಾದುದೇನೂ ಅಲ್ಲ. ಡೋಬುಗಳಲ್ಲಿ ನಿಷ್ಠುರತೆ ಮತ್ತು ಅತಿಶಿಷ್ಟತೆಗಳು ವಿವಾಹಪೂರ್ವ ಸ್ವೇಚ್ಛಾ ಸಂಪರ್ಕ ಮತ್ತು ಲೈಂಗಿಕ ಭಾವಕ್ಕೆ ಹಾಗೂ ಕ್ರಿಯಾವಿಧಾನಗಳಿಗೆ ನೀಡಿರುವ ಉನ್ನತ ಸ್ಥಾನಗಳೊಂದಿಗೆ ಕೂಡಿಕೊಂಡಿವೆ,

ಗಂಡಸರು ಮತ್ತು ಹೆಂಗಸರು ಏಕರೀತ್ಯಾ ಲೈಂಗಿಕ ತೃಪ್ತಿಯನ್ನು ಉನ್ನತವಾದುದನ್ನಾಗಿ ಭಾವಿಸಿ, ಅದನ್ನು ಸಾಧಿಸುವುದಕ್ಕೆ ಆಸ್ಥೆ ವಹಿಸುತ್ತಾರೆ. ತನ್ನ ಹೆಂಡತಿಯು ತನಗೆ ದ್ರೋಹ ಮಾಡಿದಳೆಂದು ಸಂಶಯಪಡುವ ಗಂಡಸನ್ನು ಬೆಂಬಲಿಸಲು ಉಪೇಕ್ಷೆಯನ್ನು ತಳೆಯುವ ಸಂಪ್ರದಾಯವಾಗಲಿ, ಗಂಡಸರ ಜಗತ್ತಿನಲ್ಲಿಯೇ ಮಗ್ನನಾಗುವ ಅವಕಾಶವಾಗಲಿ ಇಲ್ಲ. ಭಾವೋದ್ರೇಕದ ವಿಪರ್ಯಯವನ್ನು ಸ್ವಪ್ರಯೋಜನಕ್ಕೆ ಬಳಸಿಕೊಳ್ಳುತ್ತಾರೆ. ಜುನಿಗಳಲ್ಲಿ ಬಣದ ಸಂಸ್ಥೆಗಳು ಈ ಭಾವೋದ್ರೇಕವನ್ನು ಹಿತಮಿತಕ್ಕೆ ತರುತ್ತವೆ. ಡೋಬುಗಳಲ್ಲಿ ಹೆಂಗಸರು ಮದುವೆಯಾಗುವ ಮುನ್ನ ಪಡೆಯುವ ಲೈಂಗಿಕ ಶಿಕ್ಷಣವು ತನ್ನ ಗಂಡನನ್ನು ಹಿಡಿತದಲ್ಲಿಟ್ಟುಕೊಳ್ಳಲು ಅವನನ್ನು ಸಾಧ್ಯವಾದಷ್ಟೂ ಸುಸ್ತುಗೊಳಿಸಬೇಕು ಎಂದು ಬೋಧಿಸುತ್ತದೆ. ಲೈಂಗಿಕತೆಯ ದೈಹಿಕ ಅಂಶವನ್ನು ಕಡೆಗಣಿಸುವುದಿಲ್ಲ.

ಆದ್ದರಿಂದ ಡೋಬುವನ್ ವ್ಯಕ್ತಿ ಅತಿನಿಷ್ಠುರ, ಅತಿಶಿಷ್ಟ ಹಾಗೂ ಅತಿಕಾಮಿ. ಈರ್ಷ್ಯೆ, ಸಂಶಯ, ಅಸಮಾಧಾನಗಳು ಅವನಲ್ಲಿ ತುಂಬಿವೆ. ತನಗೆ ದೊರೆಯುವ ಸಾಫಲ್ಯತೆಯ ಪ್ರತಿಕ್ಷಣವನ್ನೂ ಅವನು ತಾನು ಈ ಕೇಡಿಗ ಜಗತ್ತಿನಲ್ಲಿ ತನ್ನ ವಿರೋಧಿಯ ಬಗ್ಗು ಬಡಿದು ಸಾಧಿಸಿದುದಾಗಿ ಭಾವಿಸುತ್ತಾನೆ. ಉತ್ತಮ ವ್ಯಕ್ತಿಯೆಂದರೆ ಇಂತಹ ಹಲವಾರು ಘರ್ಷಣೆಗಳಲ್ಲಿ ಯಶಸ್ವಿಯಾದವನು. ಒಂದು ಮಟ್ಟದ ಸಮೃದ್ಧ ಸ್ಥಿತಿಯಲ್ಲಿ ಅವನು ಉಳಿದುಕೊಂಡಿರುವುದೇ ಅದಕ್ಕೆ ಸಾಕ್ಷಿ. ಅವನು ಕಳ್ಳತನ ಮಾಡಿದ್ದಾನೆ. ಮಕ್ಕಳನ್ನೂ, ಸಂಗಡಿಗರನ್ನೂ ತನ್ನ ಮೋಡಿಯಿಂದ ಕೊಂದಿದ್ದಾನೆ ಸಾಧ್ಯವಾದಾಗಲೆಲ್ಲಾ ವಂಚಿಸಿದ್ದಾನೆ ಎಂಬುದು ಸರ್ವವಿದಿತ. ಆದರೆ ಈಗಾಗಲೇ ನಾವು ಕಂಡಿರುವಂತೆ ಕಳ್ಳತನ ಹಾಗೂ ವ್ಯಭಿಚಾರಗಳು ಜನಪದದ ಮಹತ್ವದ ವ್ಯಕ್ತಿಗಳ, ಮಹಾನ್ ಮಾಂತ್ರಿಕತೆಯ ಗುರಿಗಳು. ಈ ದ್ವೀಪದ ಗೌರವಾನ್ವಿತ ವ್ಯಕ್ತಿಗಳಲ್ಲೊಬ್ಬನು ಡಾ. ಫಾರ್ಚ್ಯೂನರಿಗೆ ವಶೀಕರಣದಿಂದ ಅದೃಶ್ಯರಾಗಬಲ್ಲ ಒಂದು ಮಂತ್ರವನ್ನು ಉಪದೇಶಿಸಿ ಈ ರೀತಿ ಸೂಚನೆಯಿತ್ತ. 'ಈಗ ನೀನು ನಗರದ ಅಂಗಡಿಗಳಿಗೆ ಹೋಗಿ ನಿನಗೆ ಬೇಕಾದುದನ್ನು ಕದ್ದು, ಯಾರಿಗೂ ಕಾಣದಂತೆ ಹೊರಟು ಬರಬಹುದು. ನಾನು ಇತರರಿಗೆ ಸೇರಿದ ಹಂದಿಯ ಮಾಂಸವನ್ನು ಎಷ್ಟೋ ವೇಳೆ ತೆಗೆದುಕೊಂಡಿದ್ದೇನೆ. ಅದೃಶ್ಯವಾಗಿ ನಾನು ಅವರ ರಾಶಿಗೆ ಸೇರುತ್ತಿದ್ದೆ. ನನಗೆ ಬೇಕಾದ ತುಂಡನ್ನು ತೆಗೆದುಕೊಂಡು ಅದೃಶ್ಯನಾಗಿಯೇ ಹೊರಟು ಹೋಗುತ್ತಿದ್ದೆ'. ಮೋಡಿ ಮತ್ತು ಮಾಟಗಳು ಯಾವ ದೃಷ್ಟಿಯಿಂದಲೂ ಅಪರಾಧವಲ್ಲ. ಅವಿಲ್ಲದೇ ಮಹತ್ವದ ವ್ಯಕ್ತಿಗೆ ಇರುವಿಕೆಯಿಲ್ಲ. ತದ್ವಿರುದ್ಧವಾಗಿ ಕೆಟ್ಟ ವ್ಯಕ್ತಿ ಎಂದರೆ ಇತರರೊಂದಿಗೆ ನಡೆದ ಘರ್ಷಣೆಗಳಲ್ಲಿ ಇತರರದೇ ಮೇಲುಗೈಯಾಗಿ ಅದೃಷ್ಟದಲ್ಲಿಯೋ ದೈಹಿಕವಾಗಿಯೋ ಏಟು ತಿಂದವನು. ಅಂಗಹೀನನಾದವನೆಂದರೆ ಖಂಡಿತವಾಗಿ ಕೆಟ್ಟ

ವ್ಯಕ್ತಿ. ಎಲ್ಲರೂ ಕಾಣುವಂತೆ, ಅವನು ತನ್ನ ದೇಹದಲ್ಲಿಯೇ ಸೋಲಿನ ಲಾಂಛನವನ್ನು ಒಯ್ಯುತ್ತಿರುವವನು.

ಈ ಕೊರಳು ಕೊಯ್ಯುವ ಹೋರಾಟದ ಮುಂದಿನ ಒಂದು ಅಸಾಧಾರಣ ಪರಿಣಾಮವೆಂದರೆ ಡೋಬುಗಳಲ್ಲಿ ಸಾಧಾರಣ ರೂಪದ ಶಾಸನ ಬದ್ಧತೆಯೇ ಇಲ್ಲದಿರುವುದು. ವಿವಿಧ ಸಂಸ್ಕೃತಿಗಳಲ್ಲಿ ಶಾಸನ ಬದ್ಧತೆಯು ಮಾನ್ಯತೆ ಪಡೆಯುವಲ್ಲಿ ವಿವಿಧ ಮಾರ್ಗಗಳಿವೆ. ನಾವು ಮುಂದೆ ನೋಡುವಂತೆ ಅಮೆರಿಕದ ವಾಯುವ್ಯ ತೀರ ಪ್ರದೇಶದಲ್ಲಿ ಪದಶುದ್ಧವಾದ ಮಂತ್ರ ಸಂಸ್ಕಾರಗಳ ಜ್ಞಾನವೋ ಇಲ್ಲವೇ ಸಂಬಂಧಪಟ್ಟ ಕ್ರಿಯಾ ಸಂಸ್ಕಾರಗಳ ಕೂಲಂಕಶ ಪರಿಜ್ಞಾನವೋ ಶಾಸನ ಬದ್ಧತೆಯನ್ನು ನೀಡುವುದಿಲ್ಲ. ಆದರೆ ಒಡೆಯನನ್ನು ಕೊಲ್ಲುವುದರಿಂದ ಆಗಿಂದಾಗಲೇ ಶಾಸನಬದ್ಧ ಒಡೆತನ ಪ್ರಾಪ್ತವಾಗುತ್ತದೆ. ಅದನ್ನು ಪಡೆಯಲು ಬೇರೆ ವಿಧಾನಗಳಿಲ್ಲ. ಒಂದು ಮಂತ್ರವನ್ನು ಕದ್ದು ಕೇಳಿ ಕಲಿತು ಬಿಡುವಂತಿಲ್ಲ. ನಮ್ಮ ನಾಗರಿಕತೆಯಲ್ಲಿ ನಾವು ಸಂಪೂರ್ಣವಾಗಿ ಕಾನೂನು ಬಾಹಿರವೆಂದು ಪರಿಗಣಿಸುವ ಒಂದು ಕಾರ್ಯವು ಅದನ್ನು ಕಾನೂನು ಬದ್ಧಗೊಳಿಸುತ್ತದೆ. ಆದರೆ ಶಾಸನ ಬದ್ಧತೆ ಗೊಳಿಸುವ ಕ್ರಿಯೆಯೊಂದು ಇದೆ ಎಂಬುದು ಪ್ರಸ್ತುತ ವಿಚಾರ. ಡೋಬುಗಳಲ್ಲಿ ಅಂತಹ ಯಾವ ಕ್ರಿಯೆಯೂ ಇಲ್ಲ. ಕದ್ದು ಕೇಳಿ ಕಲಿತ ಮಂತ್ರವೂ ಸಹ ಇತರ ರೀತಿಗಳಲ್ಲಿ ಕಲಿತುದರಷ್ಟೇ ಪರಿಣಾಮಕಾರಿಯಾಗಿರುವುದರಿಂದ ಕದ್ದು ಕೇಳಿಯಾರೇನೋ ಎಂಬ ಹೆದರಿಕೆ ಸದಾ ಇರುವಂತಹುದು. ಗಳಿಸಿ ಉಳಿಸಿಕೊಳ್ಳಬಹುದಾದುದಕ್ಕಲ್ಲ ಗೌರವವಿದೆ. ವಾಬುವಾಬುವೇನೋ ಸಂಸ್ಥೀಕರಣಗೊಂಡಿರುವ ಒಂದು ರೂಢಿ. ಆದರೆ ರೂಢಿಯು ಮಾನ್ಯತೆಯಿಲ್ಲದಿರುವ ವಂಚನೆಗಳಿಗೂ ಡೋಬುಗಳಲ್ಲಿ ಯಾವ ಸಾಮಾಜಿಕ ಪರಿಹಾರವೂ ಇಲ್ಲ. ಕೆಲವೊಮ್ಮೆ ಮೊಂಡು ವ್ಯಕ್ತಿಗಳು ತಮ್ಮ ಪತಿ ಅಥವಾ ಪತ್ನಿಗಾಗಿ ಶೋಕಾಚರಣೆಗೆ ಒಳಪಡಲು ಒಪ್ಪುವುದಿಲ್ಲ. ಹೆಂಗಸಾದರೆ, ಅವಳೊಂದಿಗೆ ಓಡಿಹೋಗಲು, ಯಾವನಾದರೂ ಸಿದ್ಧನಾಗಿದ್ದರೆ ತಪ್ಪಿಸಿಕೊಳ್ಳಬಹುದು. ಅಂತಹ ಪ್ರಸಂಗದಲ್ಲಿ ಸತ್ತ ಗಂಡನ ನೆಳ್ಳೆಯವರು ಅವಳು ತಪ್ಪಿಸಿಕೊಂಡು ಹೋಗಿರುವ ಹಳ್ಳಿಗೆ ಬಂದು ಆ ಹಳ್ಳಿಯನ್ನು ಎಲೆಗಳು, ಮುರಿದ ರೆಂಬೆಗಳಿಂದ ಗಲೀಜು ಮಾಡಿ ಹೋಗುತ್ತಾರೆ. ಅವನು ಗಂಡಸಾದರೆ ಏನೂ ಮಾಡುವುದಿಲ್ಲ. ಅವನು ಬಹಿರಂಗವಾಗಿ ತನ್ನ ಮಾಂತ್ರಿಕತೆಯು ಪ್ರಬಲವಾದುದರಿಂದ ತಾನು ಮದುವೆಯಾಗಿದ್ದ ಹಳ್ಳಿಯು ತನ್ನ ವಿರುದ್ಧವಾಗಿ ಏನೂ ಮಾಡಲಾರದೆಂದು ಹೇಳಿಕೊಂಡು ತಿರುಗುತ್ತಾನೆ.

ಈ ಶಾಸನ ಬದ್ಧತೆಯಿಲ್ಲದಿರುವುದೇ ಅವರುಗಳಲ್ಲಿ ನಾಯಕ ಪದವಿಯಿಲ್ಲದಿರುವುದಕ್ಕೂ ಅಥವಾ ಯಾವನೇ ಒಬ್ಬ ವ್ಯಕ್ತಿಗೆ ಖಚಿತವಾದ ಅಧಿಕಾರ ನಿರ್ವಹಣೆಯನ್ನು ವಹಿಸಿಕೊಡದೆ ಇರುವುದಕ್ಕೂ ಕಾರಣ. ಒಂದು ಗ್ರಾಮದಲ್ಲಿ ಅಲೋ ಎಂಬಾತನಿಗೆ

ಹಲವು ಕಾರಣಗಳು ಕೂಡಿಬಂದು ಒಂದು ಮಟ್ಟದ ಅಧಿಕಾರ ಮಾನ್ಯತೆ ಪ್ರಾಪ್ತ ವಾಯಿತು. 'ಅಲೋವಿನ ಅಧಿಕಾರಕ್ಕೆ ಅವನ ವ್ಯಕ್ತಿತ್ವದ ಬಲ ಮತ್ತು ಅವನು ಚೊಚ್ಚಲಾಗಿ ಹುಟ್ಟಿದ್ದರಿಂದ ವಂಶಾನುಕ್ರಮದಲ್ಲಿ ಪಡೆದ ಮಾಂತ್ರಿಕತೆಗಳು ಮಾತ್ರ ಕಾರಣವಲ್ಲ. ಅವನ ತಾಯಿ, ಅವಳಿಗೆ ಮೊದಲು ಅಜ್ಜಿ ಬಹು ಸಂತಾನ ಪಡೆದವರಾಗಿದ್ದುದೂ ಸಹ ಒಂದು ಮುಖ್ಯಕಾರಣ. ಅವನು ಚೊಚ್ಚಲಲ್ಲಿ ಚೊಚ್ಚಲ ಸಾಲಿಗೆ ಸೇರಿದವನು. ಅವನ ರಕ್ತ ಸಹೋದರ, ಸಹೋದರಿಯರು ಗ್ರಾಮದ ಬಹು ಸಂಖ್ಯಾತರು. ಅಂತಹ ಅಪರೂಪದ ಸನ್ನಿವೇಶಗಳಲ್ಲಿ ಬಲಶಾಲಿ ವ್ಯಕ್ತಿತ್ವವೂ ಕೂಡಿ ಬಂದು, ಮಾಂತ್ರಿಕ ಪರಿಜ್ಞಾನಕ್ಕೆ ಹೆಸರಾದ ಕುಟುಂಬದಿಂದಾಗಿ ಮಾಂತ್ರಿಕತೆಯನ್ನು ವಂಶಾನುಕ್ರಮದಿಂದ ಪಡೆದು, ಅದೇ ಕುಟುಂಬ ಬಹು ಸಂತಾನ ಪಡೆದುದೂ ಆಗಿದ್ದರೆ ಡೋಬು ಗಳಲ್ಲಿ ಶಾಸನ ಬದ್ಧತೆಯೆಂಬುದು ಅಲ್ಪಸ್ವಲ್ಪವಾದರೂ ತಲೆಯೆತ್ತಲು ಅವಕಾಶ ವಾಗುತ್ತದೆ'.

ಡೋಬುಗಳ ನೈತಿಕ ಆದರ್ಶವಾದ ದ್ರೋಹಪೂರ್ಣ ಹೋರಾಟವು ಯಾವುದೇ ಬಗೆಯ ಶಾಸನಬದ್ಧತೆಯ ಆಧಾರವಾಗಬಲ್ಲ ಸಾಮಾಜಿಕ ಸಂಪ್ರದಾಯಗಳಿಂದ ಉಪಶಮನಗೊಂಡಿಲ್ಲ. ದಯೆ ಅಥವಾ ಕನಿಕರದ ಆದರ್ಶಗಳಿಂದ ಉತ್ತಮಗೊಂಡಿಲ್ಲ. ಆದ್ದರಿಂದ ಅವರು ತಮ್ಮ ಮಾತನ್ನು ವ್ಯರ್ಥವಾಗಿ ಬಳಸಿ, ಸವಾಲು ಹಾಕಿ, ಅಪಮಾನ ಮಾಡಿ ತಮ್ಮ ಯೋಜನೆಗಳನ್ನು ಕೆಡಿಸಿಕೊಳ್ಳಲು ಅವಕಾಶ ಮಾಡಿಕೊಡುವುದಿಲ್ಲ. ನಾವು ಪ್ರಸ್ತಾಪಿಸಿರುವಂತೆ ಒಂದೇ ಒಂದು ಸಂಸ್ಕಾರ ಸಂಬಂಧವಾದ ಔತಣದಲ್ಲಿ ಅಪಮಾನಗೊಳಿಸುವುದು ಸಾಂಪ್ರದಾಯಿಕವಾಗಿ ಬಂದಿದೆ.ಡೋಬುವನನು ಸಾಧಾರಣ ಸಂಭಾಷಣೆಯಲ್ಲಿ ನಯಸ್ಥ ಹಾಗೂ ಕೃತಕ ವಿನಯಿ. 'ನಾವು ಒಬ್ಬ ಮನುಷ್ಯನನ್ನು ಕೊಲ್ಲಲೆಳಸಿದರೆ ಅವನ ಬಳಿಗೆ ಹೋಗಿ ಅವನೊಂದಿಗೆ ಉಂಡು, ಕುಡಿದು, ಮಲಗಿ, ದುಡಿದು, ವಿಶ್ರಮಿಸಿಕೊಳ್ಳುತ್ತ ಹತ್ತಿರದವರಾಗುತ್ತೇವೆ. ಅದು ಹಲವಾರು ತಿಂಗಳು ಕಾಲ ನಡೆಯಬಹುದು. ನಾವು ನಮ್ಮ ಸಮಯಕ್ಕೆ ಕಾಯುತ್ತೇವೆ. ಅವನನ್ನು ಮಿತ್ರನೆಂದು ಕರೆಯುತ್ತೇವೆ'. ಆದ್ದರಿಂದ ಕಣಿಗಾರನು ಕೊಲೆಗಾರನು ಯಾರೆಂದು ನಿರ್ಧರಿಸಲು ಸಾಕ್ಷ್ಯಾಧಾರಗಳನ್ನು ತೂಗಿ ನೋಡುವಾಗ, ಸಂಶಯವು ಸತ್ತವನ ಸಂಗವನ್ನು ಬಯಸುತ್ತಿದ್ದವನ ಮೇಲೆ ಹರಿಯುತ್ತದೆ. ಅವರು ಒಟ್ಟಿಗೆ ಇದ್ದುದಕ್ಕೆ ರೂಢಿಯಿಂದ ಬಂದ ಕಾರಣವೂ ಇರದಿದ್ದರೆ ಆಪಾದನೆ ರುಜುವಾತಾದಂತೆಯೇ ಸರಿ. ಡಾ. ಫಾರ್ಚ್ಯೂನರು ಹೇಳುವಂತೆ 'ಡೋಬುವನರು ಅತ್ಯಂತ ಕೇಡಿಗರಾಗಿ ಇಲ್ಲವೇ ಕೇಡಿಗತನದ ಸೆಲೆಯೂ ಇಲ್ಲದವರಂತೆ ಇರಲು ಬಯಸುತ್ತಾರೆ'.

ಡೋಬುವನನು ಜೀವನದ ಪ್ರತಿಯೊಂದು ರಂಗದಲ್ಲಿಯೂ ಸ್ನೇಹದ ತೋರಿಕೆಯ ಹಿಂದೆ, ಸಹಕಾರದ ನಿದರ್ಶನಗಳ ಹಿಂದೆ, ದ್ರೋಹವನ್ನು ಮಾತ್ರ ನಿರೀಕ್ಷಿಸಬೇಕು ಎಂದು

ನಂಬಿದ್ದಾನೆ. ಅವರ ಸಂಸ್ಥೆಗಳಿಗನುಗುಣವಾಗಿ ಇತರ ಎಲ್ಲರ ಪ್ರಯತ್ನಗಳೂ ತನ್ನ ಯೋಜನೆಗಳನ್ನು ಅಸ್ತವ್ಯಸ್ತಗೊಳಿಸಿ, ನಾಶಗೊಳಿಸುವುದರತ್ತಲೇ ತಿರುಗಿವೆ. ಆದ್ದರಿಂದ ಕುಲಾಕ್ಕೆ ಹೊರಡುವಾಗ ಅವನು "ಊರಲ್ಲೇ ಉಳಿದವರ ಬಾಯಿ ಮುಚ್ಚಿಸಲು" ಒಂದು ಮಂತ್ರರಕ್ಷೆಯನ್ನು ಬಳಸುತ್ತಾನೆ. ಹಿಂದೆ ಉಳಿದವರೂ ತನ್ನ ವಿರೋಧವಾಗಿಯೇ ಸಂಚು ನಡೆಸಿದ್ದಾರೆಂದು ಭಾವನೆ. ಅಸಮಾಧಾನವು ಏನನ್ನಾದರೂ ಮಾಡಿಸಬಹುದಾದಂತಹ ಒಂದು ಪ್ರೇರಕ ಶಕ್ತಿಯೆಂದು ಆಗಾಗ್ಗೆ ಪ್ರಸ್ತಾಪಿಸುತ್ತಾರೆ. ಹಲವಾರು ಸಂದರ್ಭಗಳಲ್ಲಿ ಅವರ ಮಾಂತ್ರಿಕ ವಿಧಾನವು ಒಂದು ವಿನ್ಯಾಸವನ್ನು ಅನುಸರಿಸುತ್ತದೆ. ಅದರ ಪ್ರಕಾರ ಒಂದು ಮಂತ್ರವನ್ನು ಮೊದಲು ಬಿತ್ತಿದ ಗೆಣಸಿಗೆ ಅಥವಾ ಕುಲಾಕ್ಕಾಗಿ ದೋಣಿಗಳಲ್ಲಿ ಮೊದಲು ಸಜ್ಜುಮಾಡಿದ ಆಹಾರ ಮತ್ತು ಮಾನವಿಕಾಣಿಕೆಗಳಿಗೆ ಮಾತ್ರ ಸಂಬೋಧಿಸುತ್ತಾರೆ. ಡಾ॥ ಫಾಚ್ರ್ಯೂನರು ಅದು ಹಾಗೇಕೆಂದು ಒಬ್ಬ ಮಾಂತ್ರಿಕನನ್ನು ಕೇಳಲು ಅವನು 'ಗೆಣಸುಗಳು ಮನುಷ್ಯರಂತೆಯೇ, ಇದನ್ನು ಅರ್ಥಮಾಡಿಕೊಂಡಿವೆ. ಅವನು ಆ ಗೆಣಸಿಗೆ ಮಂತ್ರ ಹೇಳಿದ, ನನಗೆ ಹೇಳಲಿಲ್ಲ ಎಂದುಕೊಳ್ಳುತ್ತದೆ, ಇನ್ನೊಂದು ಗೆಣಸು. ಆಗ ಅದಕ್ಕೆ ಕೋಪಬಂದು ಬಿರುಸಾಗಿ ಬೆಳೆಯುತ್ತದೆ.' ಎಂದು ವಿವರಣೆ ನೀಡಿದ. ಮನುಷ್ಯರೊಂದಿಗಿನ ವ್ಯವಹಾರಕ್ಕೆ ಯಾವುದು ಆಧಾರವೋ, ದೈವಶಕ್ತಿಗಳೊಂದಿಗೆ ನಡೆಸುವ ವ್ಯವಹಾರಕ್ಕೂ ಅದೇ ಆಧಾರ.

ಆದರೆ ಅಸಮಾಧಾನಕ್ಕೆ ತುತ್ತಾದ ಮನುಷ್ಯನಿಗೆ. ದೈವಶಕ್ತಿಗಳಿಗೆ ಮೊರೆಹೋಗುವವರು ನೀಡಬಲ್ಲ ಒಂದು ಮಾರ್ಗವಿದೆ. ಅವನು ಆತ್ಮಹತ್ಯೆಗೆ ಯತ್ನಿಸಬಹುದು; ಇಲ್ಲವೇ ಹಣ್ಣುಗಳು ಕದಿಯಲ್ಪಟ್ಟಿರುವ ಮರವನ್ನು ಕಡಿದು ಹಾಕಬಹುದು. ಈ ಅಂತಿಮ ಮಾರ್ಗವು ಅಪಮಾನಗೊಂಡವನ ಮಾನ ಉಳಿಸಿ. ಅವನ ಸ್ವಂತ ಸುಸುವಿನವರನ್ನು ಅವನ ಬೆಂಬಲಕ್ಕೆ ಬರುವಂತೆ ಮಾಡುತ್ತದೆಂದು ಭಾವಿಸಿದ್ದಾರೆ. ನಾವು ಈಗಾಗಲೇ ಕಂಡಂತೆ ಆತ್ಮಹತ್ಯೆಯ ಪ್ರಯತ್ನವು ಗಂಡಹೆಂಡಿರ ಜಗಳದ ಸಂದರ್ಭದಲ್ಲಿ ನಡೆದು ಅಸಮಾಧಾನಗೊಂಡ ಪತಿ ಅಥವಾ ಪತ್ನಿಯ ಬೆಂಬಲಕ್ಕೆ ಅವನ ಕುಲದವರು ಮುಂಬರುವಂತೆ ಪ್ರಚೋದನೆ ನೀಡುತ್ತದೆ. ಆದರೆ ಹಣ್ಣಿನ ಮರದಿಂದ ಹಣ್ಣು ಕದ್ದರೆಂದು ತನ್ನ ಮರವನ್ನೇ ತಾನು ಕಡಿದು ಹಾಕುವ ರೂಢಿಯ ಉದ್ದೇಶ ಸ್ಪಷ್ಟವಾಗಿಲ್ಲ. ಮರಗಳ ಮೇಲೆ ಬಳಸಲು ರೋಗಕಾರಕ ಮಂತ್ರಗಳನ್ನು ಅರಿಯದೆ ಇರುವವರು, ಆ ಮರದ ಮೇಲೆ ಹತ್ತಿದವನು ಪ್ರಾಣಾಂತಕವಾದ ಅಪಘಾತಕ್ಕೆ ಗುರಿಯಾಗಲೆಂದೋ, ಅವನ ಹತ್ತಿರದ ನಂಟರು ಯಾರಾದರೂ ತೀವ್ರವಾಗಿ ರೋಗಪೀಡಿತರಾಗಲೆಂದೋ ಹೇಳಿ ಆಣೆಯಿಕ್ಕುತ್ತಾರೆ. ಅಂತಹ ಮರದಿಂದ ಕಳ್ಳತನ ಮಾಡುವ ವ್ಯಕ್ತಿ ಆ ರೀತಿಯ ದುರಂತಗಳಿಗೆ ಬಾಧ್ಯನಾಗುತ್ತಾನೆ. ಯಾವನಾದರೂ ಆ ಆಣೆಯನ್ನು ಮೀರಿ ಕದ್ದರೆ, ಮರದ ಒಡೆಯನು ರೋಷಾವೇಶದಿಂದ ಬಂದು

ಮರವನ್ನು ಕಡಿದು ಹಾಕುತ್ತಾನೆ. ಇದು ಆತ್ಮಹತ್ಯೆಗೆ ಪ್ರಯತ್ನ ಮಾಡುವ ಸಂದರ್ಭದಲ್ಲಿನ ವರ್ತನೆಗೆ ಸಮೀಪ ಸಾದೃಶ್ಯವುಳ್ಳ ಮತ್ತೊಂದು ವರ್ತನೆ. ಎರಡು ಸಂದರ್ಭಗಳಲ್ಲೂ ತನ್ನ ನಂಟರ ಹಾಗೂ ಇತರರ ಅನುಕಂಪ ಮತ್ತು ಬೆಂಬಲವನ್ನು ಕೋರುವುದಿಲ್ಲವೆಂಬುದು ಸುಸ್ಪಷ್ಟ. ಡೋಬುವನ್ ಸಂಸ್ಥೆಗಳಲ್ಲಿ ಮೈಗೂಡಿಕೊಂಡಿರುವ ಮತ್ಸರ ಮತ್ತು ನಾಶ ಬುದ್ಧಿಗಳನ್ನು, ಅತ್ಯಂತ ತೇಜೋವಧೆಗೆ ಗುರಿಯಾದ ವ್ಯಕ್ತಿಯು ತನ್ನ ಮತ್ತು ತನ್ನ ಆಸ್ತಿಯ ಮೇಲೆ ತಿರುಗಿಸಿಕೊಳ್ಳುತ್ತಾನೆ ಎಂಬುದನ್ನು ಈ ಸಂದರ್ಭಗಳು ಸ್ಪಷ್ಟಗೊಳಿಸುತ್ತವೆ. ಅವನಿಗೆ ತಿಳಿದಿರುವ ಪರಿಹಾರ ಸೂತ್ರ ಒಂದೇ; ಅದನ್ನು ತನ್ನ ಮೇಲೆಯೇ ಪ್ರಯೋಗಿಸಿಕೊಳ್ಳಬೇಕಾಗಿ ಬರುವ ಪ್ರಸಂಗಗಳಿವು.

ಬಹುತೇಕ ಸಮಾಜಗಳು ತಮ್ಮ ಸಂಸ್ಥೆಗಳಲ್ಲಿ ಕನಿಷ್ಠಕ್ಕೆ ಅದುಮಿ ಇಟ್ಟಿರುವ ಬದ್ಧವೈರ ಮತ್ತು ಕೇಡಿಗತನಗಳ ಅತ್ಯುಗ್ರ ರೂಪಗಳನ್ನು ಡೋಬು ಜೀವನ ಪೋಷಿಸುತ್ತದೆ. ಮಾತ್ರವಲ್ಲ ಅತ್ಯುಚ್ಚ ಮಟ್ಟಕ್ಕೆ ಎತ್ತುತ್ತದೆ. ಪ್ರಪಂಚದ ಹಗೆತನವನ್ನು ಕುರಿತ ಘೋರದುಃಸ್ವಪ್ನಗಳನ್ನು ಡೋಬುವನನು ದಮನ ಮಾಡುವುದಿಲ್ಲ; ಬಾಳಿನಲ್ಲಿ ಅನುಷ್ಠಾನಕ್ಕೆ ತರುತ್ತಾನೆ. ಅವನ ಜೀವನ ದೃಷ್ಟಿಯ ಪ್ರಕಾರ ಮಾನವ ಸಮಾಜ ಮತ್ತು ಪ್ರಕೃತಿ ಶಕ್ತಿಗಳು ಬದ್ಧವೈರದ ಆಗರಗಳು; ವಿವೇಕ ಮಾರ್ಗವೆಂದರೆ, ತನ್ನ ಬದ್ಧ ವೈರವನ್ನು ಸಾಧಿಸಿಕೊಳ್ಳಲು ಯಾವನಾದರೂ ಬಲಿಪಶುವನ್ನು ಆಯ್ದುಕೊಳ್ಳುವುದು. ಬಾಳೆಲ್ಲ, ಪರಸ್ಪರ ವಿರೋಧಿಗಳು ಜೀವನ ಸೌಲಭ್ಯಗಳನ್ನು ಪಡೆದುಕೊಳ್ಳುವ ಮೇಲಾಟದಲ್ಲಿ ಒಬ್ಬರೊಂದಿಗೊಬ್ಬರು ನಡೆಸುತ್ತಿರುವ ಕೊಲೆಗೇಡಿ ಹೋರಾಟವಾಗಿ ಅವನಿಗೆ ತೋರಿಬರುತ್ತದೆ. ಸಂಶಯ ಮತ್ತು ಕ್ರೌರ್ಯಗಳು ಈ ಹೋರಾಟದಲ್ಲಿ ಅವನ ವಿಶ್ವಾಸಾರ್ಹ ಅಸ್ತ್ರಗಳು. ಅವನು ಯಾರಿಗೂ ದಯೆ ತೋರುವುದಿಲ್ಲ; ಯಾರಿಂದಲೂ ನಿರೀಕ್ಷಿಸುವುದಿಲ್ಲ.

ಅಧ್ಯಾಯ 6

ಅಮೆರಿಕದ ವಾಯುವ್ಯ ತೀರಪ್ರದೇಶ

ಅಲಾಸ್ಕಾದಿಂದ ಪ್ಯೂಗೆಟ್ ಸೌಂಡಿನವರೆಗೆ ವ್ಯಾಪಿಸಿರುವ ಕಿರಿದಾದ ಪೆಸಿಫಿಕ್ ತೀರಪ್ರದೇಶದಲ್ಲಿ ವಾಸಿಸುತ್ತಿದ್ದ ಇಂಡಿಯನ್ನರು ಓಜಸ್ವಿಗಳೂ, ಪ್ರಬಲರೂ ಆಗಿದ್ದ ಜನ. ಅವರ ಸಂಸ್ಕೃತಿ ಸಾಧಾರಣ ಮಟ್ಟದ್ದಲ್ಲ. ಸುತ್ತುಮುತ್ತಿನ ಜನಗಳ ಸಂಸ್ಕೃತಿಯಿಂದ ತೀವ್ರತರವಾಗಿ ಅದು ಬೇರ್ಪಟ್ಟಿತ್ತು. ಅವರಲ್ಲಿದ್ದ ಹುರುಪನ್ನು ಇತರ ಜನರಲ್ಲಿ ಕಾಣುವುದು ಕಷ್ಟ. ಆ ಸಂಸ್ಕೃತಿಯ ಮೌಲ್ಯಗಳು ಸಾಧಾರಣವಾಗಿ ಮಾನ್ಯತೆ ಪಡೆದಂತಹವಲ್ಲ; ಅದರ ಪ್ರೇರಣೆಗಳು ಸಾಧಾರಣವಾಗಿ ಘನತೆ ಪಡೆದಂತಹವಲ್ಲ.

ಆದಿವಾಸಿ ಜನರ ಹೋಲಿಕೆಯಲ್ಲಿ ನೋಡಿದರೆ ಅವರು ಸಂಪದ್ಭರಿತ ಜನ. ಅವರ ನಾಗರಿಕತೆಯು ಅಕ್ಷಯವಾದ ಹಾಗೂ ಅತಿಯಾದ ಶ್ರಮವಿಲ್ಲದೆ ಪಡೆದ ಜೀವನಾವಶ್ಯಕ ಸಾಮಗ್ರಿಗಳ ಸಮೃದ್ಧ ಸರಬರಾಜಿನ ಆಧಾರದ ಮೇಲೆ ನಿರ್ಮಿತವಾಗಿತ್ತು. ಅವರು ಆಹಾರಕ್ಕಾಗಿ ನಂಬಿದ್ದ ಮೀನುಗಳು, ಸಮುದ್ರದಲ್ಲಿ ರಾಶಿ ರಾಶಿಯಾಗಿ ದೊರೆಯುತ್ತಿದ್ದುವು. ಸಾಲಮನ್, ಕಾಡ್, ಹ್ಯಾಲಿಬಟ್, ಕ್ಯಾಂಡಲ್ ಮುಂತಾದ ಮೀನುಗಳನ್ನು ಒಣಗಿಸಿ ಸಂಗ್ರಹಿಸುತ್ತಿದ್ದರು. ಇಲ್ಲವೇ ಎಣ್ಣೆ ತೆಗೆಯಲು ಬಳಸುತ್ತಿದ್ದರು. ದಾರಿತಪ್ಪಿ ಬಂದ ತಿಮಿಂಗಿಲಗಳನ್ನು ಬಳಸಿಕೊಳ್ಳುತ್ತಿದ್ದರು. ದಕ್ಷಿಣದ ಬಣಗಳ ಜನರು ತಿಮಿಂಗಿಲದ ಬೇಟೆಗೆ ಸಹ ಹೋಗುತ್ತಿದ್ದರು. ಸಮುದ್ರವಿಲ್ಲದೆ ಅವರ ಜೀವನ ಸಾಗುವುದು ಅಸಾಧ್ಯವಾಗುತ್ತಿತ್ತು. ಪರ್ವತಗಳು ಅವರ ತೀರಪ್ರದೇಶಕ್ಕೆ ಸೇರಿಕೊಂಡಂತಿದ್ದುವು. ಅವರು ಸಮುದ್ರದ ಕರೆಯಲ್ಲಿ ಮನೆಕಟ್ಟಿಕೊಳ್ಳುತ್ತಿದ್ದರು. ಅವರ ಜೀವನ ಕ್ರಮಕ್ಕೆ ಸೊಗಸಾಗಿ ಹೊಂದುತ್ತಿತ್ತು.

ಆ ದೇಶ. ತೀರವು ಒಳ ಚಾಚಿಕೊಂಡಿದ್ದು. ಅಸಂಖ್ಯಾತ ದ್ವೀಪಗಳಿಂದ ಆವೃತ ವಾಗಿತ್ತು. ಇದರಿಂದ ತೀರವು. ಒಂದಕ್ಕೆ ಮೂರರಷ್ಟು ಹೆಚ್ಚಿದ್ದುದಲ್ಲದೆ, ವಿಶಾಲವಾದ ಸುರಕ್ಷಿತ ಜಲಪ್ರದೇಶವನ್ನು ನಿರ್ಮಿಸಿ. ಜಲಯಾನವನ್ನು ವಿಶಾಲ ವಾದ ಫೆಸಿಫಿಕ್ ಸಾಗರದಿಂದ ಕಾಪಾಡುತ್ತಿತ್ತು. ಈ ತೀರದ ಸಮುದ್ರ ಜೀವನದ ರೀತಿ ಪ್ರಖ್ಯಾತವಾದುದು. ಇಂದಿಗೂ ಇದು ಪ್ರಪಂಚದ ಅತ್ಯಂತ ಫಲವತ್ತಾದ ಮತ್ಸ್ಯ ಕ್ಷೇತ್ರಗಳಲ್ಲೊಂದು. ಇತರ ಜನರಿಗೆ ಕರಡಿಯ ಹವ್ಯಾಸಗಳೋ, ಭೂಮಿಯನ್ನು ಬಿತ್ತಬೇಕಾದ ಕಾಲಗಳೋ ಸುಪರಿಚಿತವಾಗಿರುವಂತೆ ಈ ವಾಯುವ್ಯ ತೀರದ ಜನರಿಗೆ ಮೀನುಗಳ ಕಾಲಕ್ರಮವು ಸುಪರಿಚಿತವಾಗಿತ್ತು. ಅಪರೂಪಕ್ಕೆ ಅವರು ಭೂಮಿಯ ಉತ್ಪನ್ನಗಳನ್ನು ನಂಬಿಕೊಳ್ಳಬೇಕಾದ ಸಂದರ್ಭಗಳು ಒದಗುತ್ತಿದ್ದುವು. ತಮ್ಮ ಮನೆಗಳನ್ನು ಕಟ್ಟಲು ಹಲಗೆಗಳಿಗಾಗಿ ಅಥವಾ ಬೆಂಕಿಯಿಂದ ಸುಟ್ಟು, ಕೊಡಲಿಗಳಿಂದ ಕೆತ್ತಿ ಟೊಳ್ಳು ಮಾಡಿ ದೋಣಿಗಳನ್ನು ನಿರ್ಮಿಸುವ ಸಲುವಾಗಿ ದೊಡ್ಡ ಮರಗಳನ್ನು ಉರುಳಿಸಬೇಕಾಗಿ ಬಂದಾಗ ಸಹ ಅವರು ಜಲ ಮಾರ್ಗಗಳಿಗೇ ಹತ್ತಿಕೊಂಡಿರುತ್ತಿದ್ದರು. ಅವರಿಗೆ ಜಲಯಾನ ಹೊರತು ಬೇರೆ ಸಾಗಣೆ ಕ್ರಮಗಳು ತಿಳಿದಿರಲಿಲ್ಲ. ಯಾವುದಾದರೂ ಪ್ರವಾಹಕ್ಕೋ ಸಮುದ್ರದ ಸೆರಗಿಗೋ ಹೊಂದಿಕೊಂಡಿದ್ದ ಮರಗಳನ್ನೇ ಕಡಿದು, ತಮ್ಮ ಗ್ರಾಮಗಳಿಗೆ ತೇಲಿ ಬಿಡುತ್ತಿದ್ದರು.

ಸಮುದ್ರಯಾನ ಮಾಡುತ್ತಿದ್ದ ದೋಣಿಗಳಿಂದ ಅವರು ತಮ್ಮ ತಮ್ಮಲ್ಲಿ ನಿರಂತರವಾದ ಪರಸ್ಪರ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಅವರು ಸಾಹಸ ಜೀವಿಗಳು. ಉತ್ತರಕ್ಕೂ ದಕ್ಷಿಣಕ್ಕೂ ದೂರ ದೂರ ಸಮುದ್ರಯಾನ ಕೈಗೊಳ್ಳುತ್ತಿದ್ದರು. ಪ್ರತಿಷ್ಠಿತ ವ್ಯಕ್ತಿಗಳಿಗೆ ಇತರ ಬಣಗಳ ಪ್ರಭುವರ್ಗದ ವ್ಯಕ್ತಿಗಳೊಂದಿಗೆ ಮದುವೆ ಏರ್ಪಡುತ್ತಿತ್ತು. ಅಂತಹ ಮದುವೆಗಳಿಗೆ, ದೊಡ್ಡ ಹಬ್ಬಗಳಿಗೆ, ಪೊಟ್ಲಾಚ್‌ಗಳಿಗೆ ಸಮುದ್ರ ತೀರದಲ್ಲಿ ನೂರಾರು ಮೈಲಿಗಳವರೆಗೆ ಆಹ್ವಾನ ಹೋಗುತ್ತಿತ್ತು. ಆಮಂತ್ರಣವನ್ನು ಮನ್ನಿಸಿ ದೂರದ ಬಣಗಳಿಂದ ದೋಣಿಗಟ್ಟಲೆ ಜನ ಬರುತ್ತಿದ್ದರು. ಈ ಜನರ ಭಾಷೆಗಳು ಬೇರೆ ಬೇರೆ ಮೂಲಕ್ಕೆ ಸೇರಿದವು. ಇದರಿಂದ ಬಹಳ ಜನ ಪರಸ್ಪರ ಸಂಬಂಧವಿಲ್ಲದ ಹಲವಾರು ಭಾಷೆಗಳನ್ನು ಆಡಬೇಕಾಗಿ ಬರುತ್ತಿತ್ತು. ಆದರೆ ಈ ವಿಭಿನ್ನ ಭಾಷೆಗಳು, ಸಂಸ್ಕಾರ ಸಂಬಂಧವಾದ ವಿವರ ವಿಶೇಷಗಳ ಮತ್ತು ಇಡೀ ಜಾನಪದಗಳ ಪ್ರಸರಣಕ್ಕೆ ಅಡ್ಡಿಯಾಗಿರಲಿಲ್ಲ. ಆದರೆ ಇಂಥ ಸಂಸ್ಕಾರ ಮತ್ತು ಜಾನಪದಗಳ ಮೂಲಾಂಶಗಳಲ್ಲಿ ಮಾತ್ರ ಎಲ್ಲರೂ ಭಾಗಿಗಳಾಗಿರುತ್ತಿದ್ದರು.

ಅವರು ಕೃಷಿ ಮಾಡಿ ತಮ್ಮ ಆಹಾರ ಸರಬರಾಜನ್ನು ಹೆಚ್ಚಿಸಿಕೊಳ್ಳುತ್ತಿರ

ಲಿಲ್ಲ. ಸಣ್ಣ ಜಮೀನುಗಳಲ್ಲಿ ಕುದುರೆ ಮಸಾಲೆಸೊಪ್ಪನ್ನು ಮಾತ್ರ ಬೆಳೆಸುತ್ತಿದ್ದರು ಅಷ್ಟೆ. ಬೇಟೆ, ಮೀನುಗಾರಿಕೆಗಳನ್ನು ಬಿಟ್ಟರೆ, ಗಂಡಸರ ಪ್ರಮುಖ ವೃತ್ತಿಯೆಂದರೆ ಮರಗೆಲಸ. ಅವರು ಹಲಗೆಗಳಿಂದ ಮನೆಗಳನ್ನು ಕಟ್ಟುತ್ತಿದ್ದರು. ದೊಡ್ಡದಾದ ಕುಲದೇವತಾ ಸ್ತಂಭಗಳನ್ನು ಕಡೆಯುತ್ತಿದ್ದರು. ಒಂದೇ ಹಲಗೆಯಿಂದ ಪೆಟ್ಟಿಗೆಗಳನ್ನು ರೂಪಿಸಿ, ಅದರ ಪಾರ್ಶ್ವಗಳನ್ನು ಕೆತ್ತನೆ ಕೆಲಸದಿಂದ ಅಲಂಕರಿಸುತ್ತಿದ್ದರು. ಸಮುದ್ರಯಾನಕ್ಕೆ ಯೋಗ್ಯವಾದ ದೋಣಿಗಳನ್ನು ತೋಡುತ್ತಿದ್ದರು. ಮರದ ಮುಖವಾಡಗಳನ್ನೂ ತಯಾರಿಸುತ್ತಿದ್ದರು. ಲೋಹದ ಕೊಡಲಿಗಳು ಅಥವಾ ಗರಗಸಗಳಿಲ್ಲದೆ ದೊಡ್ಡ ದೇವದಾರು ಮರಗಳನ್ನು ಉರುಳಿಸುತ್ತಿದ್ದರು. ಹಲಗೆಗಳಾಗಿ ಕೊಯ್ಯುತ್ತಿದ್ದರು. ಚಕ್ರವಾಹನಗಳಿಲ್ಲದೆ ಅವುಗಳನ್ನು ಸಮುದ್ರ ಮಾರ್ಗದಲ್ಲಿ ತಮ್ಮ ಹಳ್ಳಿಗಳಿಗೆ ಸಾಗಿಸಿ, ಹಲವಾರು ಕುಟುಂಬಗಳು ವಾಸಿಸಬಲ್ಲ ದೊಡ್ಡ ಮನೆಗಳನ್ನು ನಿರ್ಮಿಸುತ್ತಿದ್ದರು. ಅವರ ನಿರ್ಮಾಣ ತಂತ್ರಗಳು ಚಮತ್ಕಾರ ಪೂರ್ಣವಾಗಿದ್ದು ಕರಾರುವಾಕ್ಕಾದ ಲೆಕ್ಕಾಚಾರದಿಂದ ಕೂಡಿದ್ದುವು. ದಿಮ್ಮಿಗಳ ಬಿರುಕುಗಳನ್ನು ಜಾಣ್ಮೆಯಿಂದ, ಸರಿಯಾಗಿ ಸೀಳಿ ಹಲಗೆಗಳನ್ನು ತೆಗೆಯುತ್ತಿದ್ದರು. ಭಾರಿ ಮರಗಳ ಕಾಂಡಗಳನ್ನು ಮನೆಗಳ ಕಂಭಗಳಾಗಿ, ತೊಲೆಗಳಾಗಿ ತಯಾರಿಸಿ ಸರಿಯಾದ ಸ್ಥಾನಗಳಲ್ಲಿ ಕೂರಿಸುತ್ತಿದ್ದರು. ಓರೆಯಾದ ದಬ್ಬಳರಂಧ್ರಗಳನ್ನು ರೂಪಿಸಿ, ಜೋಡಣೆಯಿಂದ ಕೂಡಿಸಿದ ಗುರುತು ಸ್ವಲ್ಪವೂ ಮೇಲೆ ಕಾಣದಂತೆ ಹಲಗೆಗಳನ್ನು ಕೂಡಿಸುತ್ತಿದ್ದರು. ಒಂದೇ ಭಾರಿ ದೇವದಾರು ಕಾಂಡ ಬಳಸಿ ಐವತ್ತು ಅರವತ್ತು ಮಂದಿಯನ್ನು ಹೊತ್ತು ಸಮುದ್ರಯಾನ ಮಾಡಬಲ್ಲ ದೋಣಿಗಳನ್ನು ನಿರ್ಮಿಸುತ್ತಿದ್ದರು. ಅವರ ಕಲೆ ಸ್ಫುಟ ಹಾಗೂ ಬಹುಮುಖವಾಗಿದ್ದು ಇತರ ಆದಿವಾಸಿಗಳ ಸಾಧನೆಗಳೊಂದಿಗೆ ಸರಿಗಟ್ಟಿ ನಿಲ್ಲಬಹುದಾದಂತಹುದಾಗಿತ್ತು.

ಈ ವಾಯುವ್ಯ ತೀರದ ಸಂಸ್ಕೃತಿಯು ಹಿಂದಿನ ಶತಮಾನದ ಉತ್ತರಾರ್ಧದಲ್ಲಿ ಶಿಥಿಲವಾಯಿತು. ಆದ್ದರಿಂದ ಕಾರ್ಯಪ್ರವೃತ್ತ ನಾಗರಿಕತೆಯಾಗಿ ಅದರ ನೇರ ಪರಿಚಯವು ಒಂದು ತಲೆಮಾರಿನ ಹಿಂದೆ ವಿವರವಾಗಿ ಚಿತ್ರಣಗೊಂಡಿರುವ ಬಣಗಳಿಗೆ ಮಾತ್ರ ಸೀಮಿತವಾಗಿದೆ. ಅದರಲ್ಲಿಯೂ ವಾಂಕುವರ್ ದ್ವೀಪದ ಕ್ವಾಕಿಯುಟಲ್ ಜನರ ಸಂಸ್ಕೃತಿಯನ್ನು ಕುರಿತು ಮಾತ್ರ ಹೆಚ್ಚು ವಿವರಣೆ ಲಭ್ಯವಾಗಿದೆ ಆದ್ದರಿಂದ ಈ ಸಂಸ್ಕೃತಿಯ ವಿವರಣೆ ಬಹುಮಟ್ಟಿಗೆ ಕ್ವಾಕಿಯುಟಲ್ ಸಂಸ್ಕೃತಿಯ ಚಿತ್ರಣ. ಇತರ ಬಣಗಳಿಂದ ದೊರೆತ ವಿಲಕ್ಷಣ ವಿವರಣೆಗಳು ಮತ್ತು ಅಳಿದು ಹೋದ ಆ ನಾಗರಿಕತೆಯಲ್ಲಿ ಪಾಲ್ಗೊಂಡಿದ್ದ ವೃದ್ಧರ ಸ್ಮರಣೆಗಳು ಇದಕ್ಕೆ ಪೂರಕ

ನೈಋತ್ಯ ಪ್ರದೇಶದ ಪ್ಲೆಬ್ಲೋಗಳ ಹೊರತು ವಾಯುವ್ಯ ತೀರದ ಬಣಗಳು

ಸಹ ಬಹುತೇಕ ಅಮೆರಿಕನ್ ಇಂಡಿಯನ್ನರಂತೆ ಡಯೋನೀಶಿಯನ್ ಪ್ರವೃತ್ತಿಯವು. ಅವರು ಮತಧರ್ಮ ಸಮಾರಂಭಗಳಲ್ಲಿ ಉನ್ಮತ್ತತೆಯನ್ನು ಗಳಿಸಲು ಹೆಣಗುತ್ತಿದ್ದರು. ಮುಖ್ಯ ನೃತ್ಯಗಾರನು, ತನ್ನ ಕುಣಿತದ ಅತ್ಯುಚ್ಚ ಸ್ವರದಲ್ಲಿ ತನ್ನ ಮೇಲಿನ ಹಿಡಿತದಿಂದ ಪಾರಾಗಿ, ಇರುವಿಕೆಯ ಬೇರೊಂದು ಮಟ್ಟವನ್ನು ಮುಟ್ಟಬೇಕಾಗಿತ್ತು. ಅವನು ಬಾಯಿಂದ ನೊರೆ ಕಾರುತ್ತಾ, ವಿಪರೀತವಾಗಿ ಹಾಗೂ ಆವೇಶಪೂರ್ಣವಾಗಿ ಬಡಬಡಿಸಬೇಕು. ಸಾಧಾರಣ ಸ್ಥಿತಿಯಲ್ಲಿ ಭಯೋತ್ಪಾದಕವೆನ್ನಿಸುವ ಕೃತ್ಯಗಳನ್ನೆಸಗಬೇಕು. ಕೆಲವು ನೃತ್ಯಗಾರರನ್ನಂತೂ, ಅವರು ಆ ಉನ್ಮಾದದಲ್ಲಿ ಹೆಚ್ಚು ಅಪಾಯಕ್ಕೊಳಗಾಗದಂತೆ ತಡೆಯಲು ನಾಲ್ಕು ಹಗ್ಗಗಳಿಂದ ಬಿಗಿದು ಸಹಾಯಕರು ಅವರನ್ನು ಹಿಡಿದಿರುತ್ತಿದ್ದರು. ಈ ಉನ್ಮಾದವು ದೈವಿಕವಾದ ಶುಭ ಶಕುನವೆಂದು ಅವರ ನೃತ್ಯಗೀತಗಳು ಸಾರಿ ಹೊಗಳುತ್ತಿದ್ದುವು.

ಮಾನವನ ವಿವೇಚನೆಯು ಕಳೆವ ಆ ಶಕ್ತಿಯು ಕೊಡುಗೆ,
ಓ ಸತ್ಯ ದೈವಿಕ ಮಿತ್ರಾ (1), ಜನರಲ್ಲಿ ಭೀತಿ ಹುಟ್ಟಿಸಿದೆ.
ಮಾನವನ ವಿವೇಚನೆಯು ಕಳೆವ ಆ ಶಕ್ತಿಯು ಕೊಡುಗೆ,
ಓ ಸತ್ಯ ದೈವಿಕ ಮಿತ್ರಾ. ಮನೆಯಲ್ಲಿಹ ಜನರನು ಚದರಿಸುತ್ತಿದೆ (2)

ಈ ಹಾಡು ಹಾಡುವಾಗ ನೃತ್ಯಗಾರ ತನ್ನ ಕೈಗಳಲ್ಲಿ ಯುಗ ಯುಗಿಸುವ ಕೆಂಡಗಳನ್ನು ಹಿಡಿದು ಕುಣಿಯುತ್ತಾನೆ. ಅವುಗಳೊಂದಿಗೆ ನಿರ್ಲಕ್ಷ್ಯದಿಂದ ಆಡುತ್ತಾನೆ. ಕೆಲವನ್ನು ತನ್ನ ಬಾಯಿಗೆ ಎಸೆದುಕೊಳ್ಳುತ್ತಾನೆ. ಉಳಿದವನ್ನು ನೆರೆದಿರುವ ಜನರ ಮೇಲೆ ಎಸೆಯುತ್ತಾನೆ. ಆವು ಅವರನ್ನು ಸುಡುತ್ತದೆ. ಅವರ ದೇವದಾರು ಪಟ್ಟೆಯ ಉಡುಗೆಗಳು ಹೊತ್ತಿಕೊಳ್ಳುತ್ತವೆ. ಕರಡಿ ಕುಣಿತಗಾರರು ಕುಣಿಯುವಾಗ ಮೇಳ ಹೀಗೆ ಹಾಡುತ್ತದೆ.

ಆ ಮಹಾನ್ ದೈವಿಕ ಶಕ್ತಿಯು ಕೋಪ ಅಸದೃಶ,
ತೋಳ್ಗಳಲ್ಲಿ ಮನುಷ್ಯರನ್ನು ಹಿಡಿದು ಹಿಂಸಿಸುವನವನು,
ಹಲ್ಗಳಿಂದ ಮಾಂಸ ಎಲುಬುಗಳನು ಜಜ್ಜಿ,
ಚರ್ಮ ಮೂಳೆ ಸಹಿತ ನುಂಗುವನವನು.

ನೃತ್ಯದಲ್ಲಿ ತಪ್ಪು ಮಾಡಿದ ನೃತ್ಯಗಾರರು ಸತ್ತವರಂತೆ ಬಿದ್ದುಕೊಂಡು ಬಿಡಬೇಕು. ಕರಡಿ ವೇಷಧಾರಿಗಳು ಅವರ ಮೇಲೆ ಬಿದ್ದು, ಅವರನ್ನು ತುಂಡು ತುಂಡಾಗಿ ಸಿಗಿಯುತ್ತಾರೆ. ಹಲವು ಬಾರಿ ಇದು ಬರಿಯ ನಟನೆಯಾದರೂ, ಅವರ ಸಂಪ್ರದಾ

(1) ಜಗತ್ತಿನ ಉತ್ತರದ ಕೊನೆಯಲ್ಲಿರುವ ಕ್ಯಾನಿಬಲ್ ನಕ್ಷತ್ರ. ನೃತ್ಯಗಾರನ ದೈವಿಕ ಆಶ್ರಯದಾತ. ಅವನ ಬಲದಿಂದಲೇ ನೃತ್ಯಗಾರ ಕುಣಿಯುವುದು. (2) ಅಂದರೆ ಅವರು ಹೆದರಿ ಓಡುತ್ತಾರೆ.

ಯದ ನಿಯಮಂಗಳಿಗನುಸಾರವಾಗಿ ಕೆಲವೊಂದು ತಪ್ಪುಗಳಿಗೆ ಇದು ಹೊರತು ಬೇರೆ ಯಾವ ಪರಿಹಾರ ಮಾರ್ಗವೂ ಇಲ್ಲ. ದೊಡ್ಡ ಸಮಾರಂಭಗಳಿಗೆ ಕರಡಿ ವೇಷಧಾರಿಗಳು ಕಪ್ಪು ಕರಡಿ ಚರ್ಮಗಳಿಂದ ತಮ್ಮ ಪೂರ್ಣವೇಷ ಧರಿಸುತ್ತಿದ್ದರು. ಸಾಧಾರಣ ಸಂದರ್ಭಗಳಲ್ಲಿಯೂ ತಮ್ಮ ತೋಳುಗಳ ಮೇಲೆ ಉಗುರು ಸಹಿತವಾದ ಕರಡಿಯ ಮುಂಗಾಲಿನ ಚರ್ಮವನ್ನು ಧರಿಸುತ್ತಿದ್ದರು. ಕರಡಿ ವೇಷಧಾರಿಗಳು ಉರಿಯುತ್ತಲೂ ನೆಲವನ್ನು ಬಗಿಯುಂತಪ್ಪ. ಕೋಪಗೊಂಡ ಕರಡಿಗಳನ್ನು ಅನುಕರಿಸುತ್ತಿರುವಾಗ, ಜನ ಕರಡಿ ನೃತ್ಯದ ಗೀತವನ್ನು ಹಾಡುತ್ತಿದ್ದರು.

> ಜಗತ್ತಿನಲ್ಲೆಲ್ಲ ಅಡ್ಡಾಡುತ್ತಿರುವ ಈ ಕರಡಿಯಿಂದೆಂತು ಪಾರಾಗುವ ?
> ಭೂಮಿಯ ಒಳಕ್ಕೆ ತೆವಳುವ. ಜಗತ್ತಿನುತ್ತರದಿಂದ ಬರುವ
> ಆ ಕರಡಿಗೆ ಕಾಣದಂತಿರಲು ಬೆನ್ನ ಮೇಲೆ ತಿಪ್ಪೆ ಎಳೆದುಕೊಳ್ಳುವ.

ವಾಯವ್ಯ ತೀರಪ್ರದೇಶದ ಈ ನೃತ್ಯಗಳು ಮತಧರ್ಮ ಸಂಘಗಳು ನಡೆಸುತ್ತಿದ್ದ ಸಮಾರಂಭಗಳು. ಈ ಸಂಘಗಳ ದೈವಿಕ ಆಶ್ರಯದಾತರು ವ್ಯಕ್ತಿಗಳಿಗೆ ಪ್ರವೇಶ ದೀಕ್ಷೆ ನೀಡುತ್ತಾರೆ. ಉತ್ತರಅಮೆರಿಕದ ಬಹುಭಾಗಗಳಲ್ಲಿ ಏಕಾಂತದಲ್ಲಿ ಉಪವಾಸ ಮಾಡಿ, ಹಲವು ಬಾರಿ ತನ್ನನ್ನು ತಾನು ಚಿತ್ರಹಿಂಸೆಗೆ ಒಳಪಡಿಸಿಕೊಂಡ ಭಕ್ತನಿಗೆ, ದೈವಿಕ ಭೂತದೊಂದಿಗೆ ದೊರೆಯುವ ಸಮಾಗಮದ ಅನುಭವವು ಅವನಿಗೆ ಆಜೀವ ಪರ್ಯಂತ ನೆರವು ನೀಡುವ ರಕ್ಷಕ ಭೂತವನ್ನು ತೋರುತ್ತದೆ. ಈ ಅನುಭವವು ದಿವ್ಯದರ್ಶನದೊಂದಿಗೆ ಹೊಸೆದುಕೊಂಡಿದೆ. ಆದರೆ ವಾಯುವ್ಯ ತೀರದಲ್ಲಿ ದೈವಿಕ ಭೂತದೊಂದಿಗೆ ದೊರೆಯುವ ಸಮಾಗಮು ಔಪಚಾರಿಕತೆಯನ್ನು ತಳೆದಿದೆ. ಆಶಾರ್ಹವಾದ ರಹಸ್ಯ ಸಂಘಕ್ಕೆ ಸೇರಿಕೊಳ್ಳಲು ದೊರೆತ ಅನುಮತಿ, ವಾಕ್ಯ ಮಾತ್ರವಾಗಿ ಉಳಿದಿದೆ. ಹೀಗೆ ದಿವ್ಯದರ್ಶನವು ಬರಿಯ ರೂಪಮಾತ್ರವಾಗಿ ಉಳಿದಿರುವುದರಿಂದ, ದೈವಿಕ ಶಕ್ತಿಗೆ ಹಕ್ಕು ಸಾಧಿಸಿಕೊಳ್ಳುವ ಅಭ್ಯರ್ಥಿಯ ಮೈಮೇಲೆ ಬರುವ ದೈವಿಕ ಉನ್ಮಾದದ ಪ್ರಾಮುಖ್ಯತೆ ಅಷ್ಟೇ ಮಟ್ಟಿಗೆ ಏರಿದೆ. ಮತಧರ್ಮ ಸಂಘಕ್ಕೆ ಸೇರಬೇಕಾಗಿದ್ದ ಕ್ವಾಕಿಯೂಟಲ್ ಯುವಕನನ್ನು ಭೂತಗಳು ಎಳೆದೊಯ್ಯುತ್ತಿದ್ದವು. ಅವನು ಕಾಡಿನಲ್ಲಿ ಒಂಟಿಯಾಗಿ ದೇವತೆಗಳಿಂದ ಕೆಲಕಾಲ ಬಂಧಿತನಾಗಿರುತ್ತಿದ್ದ. ನವೆದು ಹೋದಂತೆ ಕಾಣಲು ಅವನು ಉಪವಾಸ ಮಾಡುತ್ತಿದ್ದ. ತಾನು ಹಿಂತಿರುಗಿದ ನಂತರ ತೋರಬೇಕಾಗಿ ಬರುವ ಉನ್ಮಾದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದ. ಕ್ವಾಕಿಯೂಟಲ್‌ಗಳ ಮಹತ್ವಪೂರ್ಣ ಮತಧಾರ್ಮಿಕ ಸಂಸ್ಕಾರ ಸರಣಿಯಾದ ಮಾಗಿಯ ಹಬ್ಬವು ಮಾನವನವಿವೇಚನೆಯನ್ನು ಕಳೆಯುವ 'ಶಕ್ತಿಯಿಂದ ಮೈದುಂಬಿ ನಿಂತಿರುವ' ದೀಕ್ಷಾರ್ಥಿಗಳನ್ನು ಪಳಗಿಸಲೋಸುಗವೇ ಮೀಸಲಾಗಿತ್ತು. ಅವರನ್ನು ಲೌಕಿಕ ಬಾಳಿನ ಮಟ್ಟಕ್ಕೆ ಮರಳಿ ತರುವುದು ಅತ್ಯಾವಶ್ಯಕವಾಗಿತ್ತು.

ಕ್ಯಾನಿಬಲ್ (ಮಾನವ ಭಕ್ಷಕ) ನೃತ್ಯಗಾರನ ಈ ದೀಕ್ಷಾ ಸಮಾರಂಭವು ವಾಯುವ್ಯ ತೀರ ಪ್ರದೇಶದ ಸಂಸ್ಕೃತಿಯ ಡಯೋನೀಶಿಯನ್ ಪ್ರವೃತ್ತಿಯನ್ನು ವಿಶಿಷ್ಟವಾಗಿ ವ್ಯಕ್ತಪಡಿಸುವಂತೆ ರೂಪಿತವಾಗಿತ್ತು. ಕ್ವಾಕಿಯುಟಲ್ ಜನರಲ್ಲಿ ಕ್ಯಾನಿಬಲ್ ಸಂಘದ ಸ್ಥಾನ ಅತ್ಯುಚ್ಚವಾಗಿತ್ತು. ಹಾಗಿಯೂ ನೃತ್ಯಗಳಲ್ಲಿ ಆ ಸಂಘದ ಸದಸ್ಯರಿಗೆ ಅತ್ಯಂತ ಹೆಚ್ಚಿನ ಗೌರವದ ಆಸನಗಳು ದೊರೆಯುತ್ತಿದ್ದುವು. ಕ್ಯಾನಿಬಲ್‌ಗಳು ಊಟ ಮಾಡಲು ಆರಂಭಿಸುವವರೆಗೆ ಇತರರು ಊಟಕ್ಕೆ ಕೈಯಿಕ್ಕದೆ ತಡೆಯಬೇಕಾಗಿತ್ತು. ಕ್ಯಾನಿಬಲ್‌ನನ್ನು ಇತರ ಮತಧಾರ್ಮಿಕ ಸಂಘಗಳ ಸದಸ್ಯರಿಂದ ಪ್ರತ್ಯೇಕಿಸಿದ್ದ ಅಂಶವೆಂದರೆ ಅವನಿಗಿದ್ದ ಮನುಷ್ಯಮಾಂಸದ ಮೇಲಿನ ಉತ್ಕಟೇಚ್ಛೆ. ಅವನು ಸಭಿಕರ ಮೇಲೆ ಬಿದ್ದು ಅವರ ತೋಳುಗಳಿಂದ ಒಮ್ಮೆಗೆ ಒಂದು ಬಾಯಿ ತುಂಬ ಮಾಂಸವನ್ನು ಕಚ್ಚುತ್ತಿದ್ದ. ಅವನ ನೃತ್ಯವೆಂದರೆ ಅವನ ಮುಂದೆ ಒಬ್ಬಳು ಹೆಂಗಸು ತನ್ನ ತೋಳುಗಳ ಮೇಲೆ ಎತ್ತಿ ತರುತ್ತಿದ್ದ ಅವನ 'ಆಹಾರ'ವಾದ, ಶವವನ್ನು ಕಂಡು ಚಟ ಹಿಡಿದವನ ಉನ್ಮಾದ ತೋರುತ್ತ ಕುಣಿಯುವುದು. ದೊಡ್ಡ ಸಮಾರಂಭಗಳಲ್ಲಿ ಕ್ಯಾನಿಬಲ್ ಅದೇ ಉದ್ದೇಶಕ್ಕಾಗಿ ಕೊಂದ ಗುಲಾಮರ ದೇಹಗಳನ್ನು ತಿನ್ನುತ್ತಿದ್ದ.

ಓಷ್ಯೇನಿಯಾದ ಹಲವು ಬಣಗಳ, ಮನುಷ್ಯ ಮಾಂಸ ಭಕ್ಷಣೆಯ ರೀತಿ ಅಥವಾ ಆಫ್ರಿಕಾದ ಹಲವು ಬಣಗಳಲ್ಲಿರುವಂತಹ ಆಹಾರಕ್ಕಾಗಿ ಮನುಷ್ಯ ಮಾಂಸ ಬಳಸುವ ಪದ್ಧತಿಯು ಕ್ವಾಕಿಯುಟಲ್ ಮನುಷ್ಯ ಮಾಂಸ ಭಕ್ಷಣೆಯ ರೀತಿಗಿಂತ ಭಿನ್ನವಾದುದು. ಮನುಷ್ಯ ಮಾಂಸ ಭಕ್ಷಣೆಗೆ ಕ್ವಾಕಿಯುಟಲ್‌ಗಳು ಅತ್ಯಂತ ಅಸಹ್ಯ ಭಾವವನ್ನು ವ್ಯಕ್ತಪಡಿಸುತ್ತಿದ್ದರು. ತಾನು ತಿನ್ನಲಿರುವ ಮಾಂಸದ ಎದುರಿಗೆ ಕ್ಯಾನಿಬಲ್ ಕಂಪಿಸುತ್ತಾ ನೃತ್ಯಮಾಡುತ್ತಿದ್ದಾಗ ಮೇಳ ಈ ಹಾಡು ಹಾಡುತ್ತಿತ್ತು.

ಈಗ ನಾನು ತಿನ್ನಲಿರುವೆ.
ನನ್ನ ಮುಖವು ಹೆಣಮೋರೆಯಂತೆ ಬಿಳಿಚಿಕೊಂಡಿದೆ.
ಜಗತ್ತಿನುತ್ತರದ ಅಂಚಿನಲ್ಲಿರುವ ಕ್ಯಾನಿಬಲನು ನೀಡಿದುದನು
ಈಗ ನಾನು ತಿನ್ನಲಿರುವೆ.

ಸಭಿಕರ ತೋಳುಗಳಿಂದ ಕ್ಯಾನಿಬಲ್ ಎಷ್ಟು ಬಾರಿ ಚರ್ಮ ಕಚ್ಚಿದ ಎಂಬುದರ ಲೆಕ್ಕವಿಟ್ಟುಕೊಂಡು, ಅವೆಲ್ಲ ವಾಂತಿಯಾಗುವವರೆಗೆ ವಾಂತಿಮದ್ದು ತೆಗೆದುಕೊಳ್ಳುತ್ತಿದ್ದ. ಎಷ್ಟೋ ವೇಳೆ ಅವನು ಅವುಗಳನ್ನು ನುಂಗುತ್ತಲೇ ಇರಲಿಲ್ಲ.

ಜೀವಂತ ಮನುಷ್ಯರ ತೋಳುಗಳಿಂದ ಕಡಿದ ಮಾಂಸಕ್ಕಿಂತ, ಸಿದ್ಧಪಡಿಸಿದ ಶವದ ಮತ್ತು ಮನುಷ್ಯ ಮಾಂಸ ಭಕ್ಷಣ ಸಮಾರಂಭಗಳಿಗೆಂದೇ ಕೊಲ್ಲಲ್ಪಟ್ಟ ಗುಲಾಮರ ಮಾಂಸಗಳು, ಹೆಚ್ಚು ಮಲಿನವೆಂದು ಭಾವಿಸಲ್ಪಟ್ಟಿದ್ದುವು. ಅಂತಹ ಮಾಂಸ ತಿಂದು ಮಲಿನವಾದ ಕ್ಯಾನಿಬಲ್ ನಾಲ್ಕು ತಿಂಗಳ ಕಾಲ ಮುಟ್ಟಬಾರದವನಾಗು

ತ್ತಿದ್ದ. ಅವನು ಒಬ್ಬಂಟಿಗನಾಗಿ ಸಣ್ಣದಾದ ತನ್ನ ಮಲಗುವ ಕೋಣೆಯಲ್ಲಿರುತ್ತಿದ್ದ. ಅದರ ಬಾಗಿಲನ್ನು ಕರಡಿ ಕುಣಿತದವನೊಬ್ಬ ಪಹರೆ ಕಾಯುತ್ತಿದ್ದ. ಅವನು ಊಟಕ್ಕೆ ಪ್ರತ್ಯೇಕ ಪಾತ್ರೆಗಳನ್ನು ಬಳಸುತ್ತಿದ್ದು, ಮಲಿನತೆಯ ಅವಧಿಯ ಕೊನೆಯಲ್ಲಿ ಅವನ್ನು ನಾಶಗೊಳಿಸಲಾಗುತ್ತಿತ್ತು. ಅವನು ನೀರು ಕುಡಿಯುವಾಗೆಲ್ಲ ನಿಷ್ಠನಾಗಿದ್ದು, ಒಮ್ಮೆಗೆ ನಾಲ್ಕು ಗಂಟುಕು ಮಾತ್ರ ತೆಗೆದುಕೊಳ್ಳಬಹುದಿತ್ತು. ಬಟ್ಟಲನ್ನು ತುಟಿಗೆ ಸೋಕಗೊಡುತ್ತಿರಲಿಲ್ಲ. ಅವನು ನೀರು ಕುಡಿಯಲು ಹೀರುಗೊಳವೆಯನ್ನು ಬಳಸುತ್ತಿದ್ದ. ಸ್ವಲ್ಪ ಕಾಲವಂತೂ ಬಿಸಿಯಾದ ಆಹಾರ ನಿಷೇಧಿತವಾಗುತ್ತಿತ್ತು. ಅವನ ಒಂಟಿತನದ ಅವಧಿ ಮುಗಿದು ಹೊರಬಂದು ಇತರ ಮನುಷ್ಯರೊಂದಿಗೆ ಸೇರುವಾಗ್ಯ ಅವನು ಸಾಧಾರಣ ಜೀವನದ ರೀತಿಗಳನ್ನೆಲ್ಲಾ ಮರೆತು ಬಿಟ್ಟಿರುವಂತೆ ತೋರ್ಪಡಿಸಿಕೊಳ್ಳುತ್ತಿದ್ದ. ಅವನಿಗೆ ನಡೆಯುವುದನ್ನು, ನುಡಿಯುವುದನ್ನು. ತಿನ್ನುವುದನ್ನು ಕಲಿಸಬೇಕಾಗುತ್ತಿತ್ತು. ಈ ಜೀವನ ರೀತಿಗಳೆಲ್ಲಾ ಅಪರಿಚಿತವಾಗುವಷ್ಟು ದೂರ ಅವನು ಸರಿದು ಹೋಗಿದ್ದಾನೆಂದು ಭಾವಿಸಲ್ಪಡುತ್ತಿತ್ತು. ನಾಲ್ಕು ತಿಂಗಳ ಒಂಟಿತನ ಮುಗಿದ ನಂತರವೂ ಅವನು ಮೈಲಿಗೆಯಾಗಬಾರದವನಾಗಿಯೇ ಉಳಿಯುತ್ತಿದ್ದ. ಒಂದು ವರ್ಷಕಾಲ ತನ್ನ ಹೆಂಡತಿಯಲ್ಲಿಗೆ ಹೋಗುವಂತಿರಲಿಲ್ಲ. ಪದ್ಧತಿಯ ಪ್ರಕಾರ ಅವನು ನಾಲ್ಕು ವರ್ಷ ಕಾಲ ದೂರವಾಗಿರಬೇಕಾಗಿತ್ತು. ಕ್ವಾಕಿಯುಟಲ್‌ಗಳು ಮನುಷ್ಯ ಮಾಂಸವನ್ನು ತಿನ್ನುವುದರ ಬಗ್ಗೆ ಅಸಹ್ಯ ಭಾವ ತಳೆಯುತ್ತಿದ್ದರು. ಆ ಅಸಹ್ಯ ಭಾವವೇ ಅದನ್ನು ಭೀಕರ ಹಾಗೂ ನಿಷಿದ್ಧವಾದ ಅನುಭವದಲ್ಲಿ ಅಡಗಿರುವ ಡಯೋನೀಶಿಯನ್ ಸದ್ಗುಣವನ್ನು ವ್ಯಕ್ತಪಡಿಸುವುದಕ್ಕೆ ಯೋಗ್ಯ ಸಂದರ್ಭವನ್ನಾಗಿ ಮಾರ್ಪಡಿಸಿದೆ.

ಕ್ಯಾನಿಬಲ್ ದೀಕ್ಷಾರ್ಥಿಯು ಕಾಡಿನಲ್ಲಿ ಒಂಟಿಯಾಗಿದ್ದ ಸಮಯದಲ್ಲಿ ಮರದ ಮೇಲೆ ಸಜ್ಜುಗೊಳಿಸಿದ್ದ ಶವವೊಂದನ್ನು ಪಡೆದುಕೊಳ್ಳುತ್ತಿದ್ದ. ತೆರೆದಿಟ್ಟುದರಿಂದ ಅವರ ಚರ್ಮ ಒಣಗಿರುತ್ತಿತ್ತು. ಅವನು ಅದನ್ನು ತನ್ನ ನೃತ್ಯಕಾಲದ 'ಆಹಾರ'ಕ್ಕಾಗಿ ವಿಶೇಷವಾಗಿ ಸಿದ್ಧಪಡಿಸುತ್ತಿದ್ದ. ಈ ನಡುವೆ ಅವನ ಒಂಟಿತನದ ಅವಧಿ ಕೊನೆಗೊಳ್ಳುತ್ತ ಬಂದಿದ್ದು, ಬಣದವರು ಮಾಗಿ ನೃತ್ಯಕ್ಕೆ ಬೇಕಾದ ಸಿದ್ಧತೆಗಳಲ್ಲಿ ತೊಡಗಿರುತ್ತಿದ್ದರು. ಆ ಸಮಾರಂಭ ಮುಖ್ಯವಾಗಿ ಅವನಿಗೆ ಕ್ಯಾನಿಬಲ್ ಸಂಘದ ಸದಸ್ಯತ್ವದ ದೀಕ್ಷೆ ನೀಡಲೆಂದೇ ಏರ್ಪಡುತ್ತಿದ್ದುದು. ಬಣದ ಜನ ತಮ್ಮ ತಮ್ಮ ಸಾಂಸ್ಕಾರಿಕ ಹಕ್ಕು ಬಾಧ್ಯತೆಗಳಿಗೆ ಅನುಗುಣವಾಗಿ ತಮ್ಮ ತಮ್ಮನ್ನು ಪವಿತ್ರಗೊಳಿಸಿಕೊಳ್ಳುತ್ತಿದ್ದರು. ಮಾಗಿ ನೃತ್ಯದ ಭೂತಗಳನ್ನು ತಮ್ಮಲ್ಲಿಗೆ ಬರಮಾಡಿಕೊಳ್ಳುತ್ತಿದ್ದರು. ದೈವಿಕ ಉನ್ಮಾದದ ಪ್ರದರ್ಶನ ನೀಡಲು ಹಕ್ಕುಳ್ಳವರು ಅದನ್ನು ಪ್ರದರ್ಶಿಸುತ್ತಿದ್ದರು. ಹೆಚ್ಚಿನ ಶ್ರಮ, ಕರಾರುವಾಕ್ಕಾದ ಆಚರಣೆ ಇದಕ್ಕೆ ಅವಶ್ಯಕವಾದಿತ್ತು. ಏಕೆಂದರೆ ಅವರ ಬಲವು ಕ್ಯಾನಿಬಲ್ ನಿವಾಸಸ್ಥಾನದಿಂದ ಅವನನ್ನೂ, ಅವನು ಪಡೆ

ದಿದ್ದ ಬಲಗಳ ದೇವತೆಗಳನ್ನೂ ಮರಳಿ ಕರೆಯುವಷ್ಟು ಶಕ್ತಿಶಾಲಿಯಾಗಿರಬೇಕಾಗಿತ್ತು. ಮೊದ ಮೊದಲು ಅವರ ಪ್ರಯತ್ನಗಳೆಲ್ಲ ವ್ಯರ್ಥಗೊಳ್ಳುತ್ತಿದ್ದವು.

ಕಟ್ಟ ಕಡೆಗೆ ಕ್ಯಾನಿಬಲ್ ಸಂಘದವರೆಲ್ಲ ತಮ್ಮ ಏಕೀಕೃತ ಉನ್ಮಾದದಿಂದ ಹೊಸ ದೀಕ್ಷಾರ್ಥಿಯನ್ನು ಉದ್ರೇಕಿಸುತ್ತಿದ್ದರು. ತಟಕ್ಕನೆ ಅವನು ಮನೆಯ ಛಾವಣಿಯ ಮೇಲಿದ್ದುದು ಕೇಳಿಬರುತ್ತಿತ್ತು. ಅವನು ತನ್ಮಯನಾಗಿರುತ್ತಿದ್ದ. ಛಾವಣಿಯ ಹಲಗೆಗಳನ್ನು ಕಿತ್ತೆಸೆದು ಅವನನ್ನು ಹಿಡಿಯಲು ನಿಷ್ಫಲ ಪ್ರಯತ್ನ ಮಾಡು ತ್ತಿದ್ದರು. ಅವನು ಊರಿಯ ಸುತ್ತಲೂ ಓಡುತ್ತ ಒಂದು ರಹಸ್ಯ ದ್ವಾರದ ಮೂಲಕ ಓಡುತ್ತಿದ್ದ. ಅವನು ಧರಿಸಿದ್ದ ಪವಿತ್ರ ಹೆಮ್‌ಲಾಕ್ ಟೊಂಗೆಗಳು ಮಾತ್ರ ಅಲ್ಲಿ ಬೀಳುತ್ತಿದ್ದುವು. ಆಗ ಸಂಘಗಳವರೆಲ್ಲ ಕಾಡಿನತ್ತ ಅವನ ಬೆನ್ನಟ್ಟಿ ಹೋಗುತ್ತಿದ್ದರು. ಅವನು ಮತ್ತೆ ಕಂಡು ಬರುತ್ತಿದ್ದ. ಹೀಗೆ ಮೂರು ಬಾರಿ ಅವನು ತಪ್ಪಿಸಿಕೊಂಡ ನಂತರ. ಒಬ್ಬ ವೃದ್ಧ ಎಲ್ಲರಿಗಿಂತ ಮುಂದಾಗಿ ಹೋಗುತ್ತಿದ್ದ. ಅವನನ್ನು 'ಎರೆ' ಎಂದೇ ಕರೆಯುತ್ತಿದ್ದರು. ಕ್ಯಾನಿಬಲ್ ಅವನ ಮೇಲೆ ಎರಗಿ, ಅವನ ತೋಳು ಹಿಡಿದು ಕಚ್ಚುತ್ತಿದ್ದ. ಆ ಕಾರ್ಯದಲ್ಲಿದ್ದಾಗ ಇತರರು ಅವನನ್ನು ಹಿಡಿದು, ಸಂಸ್ಕಾರ ನಡೆಯಬೇಕಾಗಿದ್ದ ಮನೆಗೆ ಕರೆತರುತ್ತಿದ್ದರು. ಅವನ ಬುದ್ಧಿ ನೆಟ್ಟಗಿರು ತ್ತಿರಲಿಲ್ಲ. ಹಿಡಿದುಕೊಳ್ಳಬಹುದಾದವರನ್ನೆಲ್ಲಾ ಹಿಡಿದು ಕಚ್ಚುತ್ತಿದ್ದ. ಅವನನ್ನು ಸಂಸ್ಕಾರ ಗೃಹದವರೆಗೆ ಕರೆ ತಂದಾಗ ಅವನನ್ನು ಒಳಕ್ಕೆ ಹೋಗುವಂತೆ ಮಾಡಲಾಗು ತ್ತಿರಲಿಲ್ಲ. ಕೊನೆಗೆ ಸಿದ್ಧಪಡಿಸಿದ್ದ ದೇಹವನ್ನು ತನ್ನ ತೋಳುಗಳ ಮೇಲೆ ಹೊತ್ತು ತರಲು ನಿಯಮಿತಳಾಗಿದ್ದ ಅವನ ಸಹ ದೀಕ್ಷಾರ್ಥಿಯು ಆ ದೇಹ ಹೊತ್ತು ನಗ್ನಳಾಗಿ ಬರುತ್ತಿದ್ದಳು. ಅವಳು ಕ್ಯಾನಿಬಲನ ಎದುರಿಗೆ ನಿಂತು, ಹಿಂದು ಹಿಂದಕ್ಕೆ ಸರಿಯುತ್ತಾ ನೃತ್ಯಮಾಡಿ ಅವನು ಮನೆಯೊಳಕ್ಕೆ ಬರುವಂತೆ ಮಾಡುತ್ತಿದ್ದಳು. ಇಷ್ಟಾದರೂ ಅವನು ಸಗ್ಗುತ್ತಿರಲಿಲ್ಲ. ಮತ್ತೆ ಛಾವಣಿಯನ್ನೇರಿ ಹಲಗೆ ಕಿತ್ತು ಒಳಕ್ಕೆ ಧುಮುಕುತ್ತಿದ್ದ. ಆಗ ಅವನು ಮೈಮೇಲೆ ಎಚ್ಚರವಿಲ್ಲದೆ ಕುಣಿಯುತ್ತಿದ್ದ. ಕ್ವಾಕಿಯೂಟಲ್‌ಗಳು ಇದು ಉನ್ಮಾದವೆಂದು ಭಾವಿಸುವ ರೀತಿಯಲ್ಲಿ ಅವನ ಮಾಂಸ ಖಂಡಗಳು ವಿಲಕ್ಷಣ ವಾಗಿ ಕಂಪಿಸುತ್ತಿದ್ದುವು.

ಶವಸಹಿತ ನೃತ್ಯವು ಕ್ಯಾನಿಬಲನ ಉನ್ಮಾದದ ಸಮಯದಲ್ಲೂ ಪುನರಾವರ್ತನೆ ಯಾಗುತ್ತಿತ್ತು. (ಪ್ರಾಯಶಃ ಡಯೋನೀಶಿಯನ್‌ರ ಮಾಗಿ ಹಬ್ಬದ ಅತ್ಯಂತ ಸ್ಫುಟ ವಾದ ತಂತ್ರವೆಂದರೆ ಕ್ಯಾನಿಬಲ್‌ನನ್ನು ಅಂತಿಮವಾಗಿ ದಮನ ಮಾಡಿ ನಾಲ್ಕು ತಿಂಗಳ ನಿಷೇಧಾವಧಿಯಲ್ಲಿ ತೊಡಗಿಸುವುದು ಎಂದು ತೋರುತ್ತದೆ.) ಭೀಕರ ಹಾಗೂ ನಿಷಿದ್ಧವಾದುದರಲ್ಲಿ ಅಡಗಿರುವ ದೈವಿಕ ಬಲವನ್ನು ಕುರಿತು ಅವರ ಸಂಸ್ಕೃತಿಯು ತಳೆದಿರುವ ಭಾವನೆಗಳನ್ನು ಇವು ಅತ್ಯಂತ ಸ್ಪಷ್ಟ ರೂಪದಲ್ಲಿ ವ್ಯಕ್ತಪಡಿಸುತ್ತವೆ.

ಕ್ಯಾನಿಬಲನನ್ನು ದಮನಮಾಡುವ ದೈವಿಕ ಶಕ್ತಿಯನ್ನು ವಂಶಾನುಗತವಾಗಿ ಪಡೆದಿರುವ ನಾಲ್ವರು ಪುರೋಹಿತರು ಮುಂದಾಳುತ್ವ ವಹಿಸಿ ಈ ಸಂಸ್ಕಾರವನ್ನು ನಡೆಸಿಕೊಡುತ್ತಿದ್ದರು. ದೀಕ್ಷಾರ್ಥಿಯು ಮೈಮರೆತೇ ಇರುತ್ತಿದ್ದ. ಸಹಾಯಕರು ಅವನನ್ನು ಹಿಡಿದುಕೊಳ್ಳಲು ಯತ್ನಿಸುತ್ತಿರುವಾಗ ಅವನು ಹುಚ್ಚಾಪಟ್ಟೆ ಓಡಾಡುತ್ತಿದ್ದನು. ಆಗ ಬೇರೆ ಬೇರೆ ಉಚ್ಚಾಟನಾ ಕ್ರಮಗಳಿಂದ, ಉನ್ಮಾದಗೊಂಡ ಕ್ಯಾನಿಬಲನನ್ನು 'ಮಟ್ಟಲು' ಪ್ರಯತ್ನಿಸುತ್ತಿದ್ದರು. ಮೊದಲನೆಯದು ಬೆಂಕಿಯಿಂದ ಉಚ್ಚಾಟನೆ. ಉರಿಯುತ್ತಿರುವ ದೇವದಾರು ತೊಗಟೆಗಳನ್ನು ಎತ್ತಿ ಅವನು ಬೀಳುವ ತನಕ ಅವನ ತಲೆಯ ಸುತ್ತ ಸುತ್ತಿಸುತ್ತಿದ್ದರು. ಅನಂತರ ನೀರಿನಿಂದ ಉಚ್ಚಾಟನೆಗೆ ಪ್ರಯತ್ನ. ಮಂತ್ರಪೂರ್ವಕವಾಗಿ ಉರಿಯಲ್ಲಿ ಕಲ್ಲುಗಳನ್ನು ಕಾಯಿಸಿ, ಅವುಗಳಿಂದ ಒಂದು ಬಾನಿಯಲ್ಲಿ ನೀರು ಬಿಸಿ ಮಾಡುತ್ತಿದ್ದರು. ಆ ನೀರನ್ನು ಸಂಸ್ಕಾರ ವಿಧಿಯ ಪ್ರಕಾರ ದೀಕ್ಷಾರ್ಥಿಯ ತಲೆಯ ಮೇಲೆ ಸುರಿಯುತ್ತಿದ್ದರು. ಆದಾದ ಬಳಿಕ ದೇವದಾರು ತೊಗಟೆಯಲ್ಲಿ ಉನ್ಮಾದಗೊಂಡ ಕ್ಯಾನಿಬಲನ ಪ್ರತಿಮೆಯನ್ನು ಮಾಡಿ, ಉರಿಯಲ್ಲಿ ಹಾಕಿ ಸುಡುತ್ತಿದ್ದರು.

ಕೊನೆಯ ಉಚ್ಚಾಟನೆ ಮಾತ್ರ ಋತುಸ್ರಾವದ ರಕ್ತದಿಂದ ನಡೆಯುತ್ತಿತ್ತು. ವಾಯುವ್ಯ ತೀರ ಪ್ರದೇಶದಲ್ಲಿ ಋತುಸ್ರಾವದ ರಕ್ತವು ಜಗತ್ತಿನಲ್ಲಿ ಇನ್ನಾವ ಭಾಗದಲ್ಲೂ ಸಾಟಿಯಿಲ್ಲದ ಮಟ್ಟದಲ್ಲಿ ಮೈಲಿಗೆಯೆಂದು ಭಾವಿಸಲ್ಪಟ್ಟಿತ್ತು. ಋತುಸ್ರಾವದ ಸಮಯದಲ್ಲಿ ಹೆಂಗಸರನ್ನು ಪ್ರತ್ಯೇಕಿಸಿಡುತ್ತಿದ್ದರು. ಅವರು ಯಾವುದಾದರೂ ಪ್ರವಾಹ ಅಥವಾ ಸಮುದ್ರದ ಬಳಿ ಹೋದರೆ ಸಾಲಮನ್ ಮೀನಿಗೆ ಕೋಪ ಬರುತ್ತದೆಂದು ಭಾವನೆಯಿತ್ತು. ಘಾತ ಚಿಕಿತ್ಸೆ ಪಡೆದ ನಂತರವೂ ಯಾವನಾದರೂ ತೀರಿ ಹೋದರೆ, ಆ ಮನೆಯಲ್ಲಿ ಯಾರಿಗೂ ತಿಳಿಯದಂತೆ ಋತುಸ್ರಾವದ ರಕ್ತ ಕಲೆಯಿರುವ ದೇವದಾರು ತೊಗಟೆಯಿದ್ದಿರಬೇಕು ಎಂದು ಹೇಳಿ, ಆ ಸಾವಿಗೆ ಅದನ್ನು ಹೊಣೆಯಾಗಿ ತೋರುತ್ತಾ ಇದ್ದರು ಆದ್ದರಿಂದ ಕ್ಯಾನಿಬಲನ ಅಂತಿಮ ಉಚ್ಚಾಟನೆಗೆ ಪುರೋಹಿತರು ಉಚ್ಚವರ್ಗದ ನಾಲ್ವರು ಹೆಂಗಸರ ಋತುಸ್ರಾವದ ರಕ್ತ ಕಲೆ ಇರುವ ದೇವದಾರು ತೊಗಟೆಯನ್ನು ತೆಗೆದುಕೊಂಡು ಕ್ಯಾನಿಬಲನ ಮುಖಕ್ಕೆ ಅದರ ಹೊಗೆ ಹಾಕುತ್ತಿದ್ದರು. ಈ ಉಚ್ಚಾಟನಾ ಸಂಸ್ಕಾರಗಳು ಪರಿಣಾಮಕಾರಿಯಾಗುತ್ತ ಹೋದಂತೆ ಕ್ಯಾನಿಬಲನ ನೃತ್ಯ ಶಾಂತವಾಗುತ್ತ ಬಂದು, ನಾಲ್ಕನೆಯ ನೃತ್ಯದ ವೇಳೆಗೆ ಅವನು ಕುಗ್ಗಿ ತೆಪ್ಪಗಾಗುತ್ತಿದ್ದ. ಉನ್ಮಾದ ಇಳಿಯುತ್ತಿತ್ತು.

ವಾಯುವ್ಯ ತೀರ ಪ್ರದೇಶದ ಬಣಗಳ ಈ ಡಯೋನೀಶಿಯನ್ ಪ್ರವೃತ್ತಿಯು ಅವರ ದೀಕ್ಷಾ ಸಮಾರಂಭಗಳಲ್ಲಿ ಮತ್ತು ಕರ್ಮಾಚರಣೆಯ ನೃತ್ಯಗಳಲ್ಲಿ ವ್ಯಕ್ತಗೊಂಡಿರುವಷ್ಟೇ ಪ್ರಖರವಾಗಿ ಅವರ ಆರ್ಥಿಕ ಜೀವನ, ಯುದ್ಧಕಾರ್ಯ ಹಾಗೂ

ಶೋಕಾಚರಣೆಗಳಲ್ಲೂ ತೋರಿಬರುತ್ತದೆ. ಅವರು ಅಪೊಲೋನಿಯನರಾದ ಪ್ವೆಬ್ಲೋಗಳ ವಿರುದ್ಧ ಧ್ರುವ. ಈ ವಿಚಾರದಲ್ಲಿ ಅವರು ಉತ್ತರ ಅಮೆರಿಕದ ಇತರ ಆದಿವಾಸಿಗಳನ್ನು ಹೋಲುತ್ತಾರೆ. ಅವರಿಗೇ ವಿಶಿಷ್ಟವಾಗಿದ್ದ ಸಂಸ್ಕೃತಿಯ ರೂಪಿಕೆಯು ಆಸ್ತಿ ಮತ್ತು ಸಂಪತ್ತಿನ ನಿರ್ವಹಣೆಗಳನ್ನು ಕುರಿತು ಪ್ರಚಲಿತವಾಗಿದ್ದ ವಿಶೇಷ ಭಾವನೆಗಳೊಂದಿಗೆ ಅತಿ ಕ್ಲಿಷ್ಟವಾಗಿ ಹೆಣೆದುಕೊಂಡಿತ್ತು.

ವಾಯವ್ಯ ತೀರಪ್ರದೇಶದ ಬಣಗಳಲ್ಲಿ ಬಹಳ ಸಂಪತ್ತಿತ್ತು. ಸಂಪತ್ತಿನ ಒಡೆತನ, ಕಟ್ಟುನಿಟ್ಟಾಗಿತ್ತು. ಅವು ಕುಲಧನದ ರೂಪದ ಆಸ್ತಿಗಳು. ಆದರೆ ಅವರಲ್ಲಿ ಕುಲಧನವೇ ಸಮಾಜದ ಆಧಾರವಾಗಿತ್ತು. ಸಂಪತ್ತಿನಲ್ಲಿ ಎರಡು ವಿಧ. ಭೂಮಿ ಮತ್ತು ಸಮುದ್ರಭಾಗಗಳನ್ನು ಬಂಧುಗಳ ಗುಂಪು ಒಟ್ಟಾಗಿ ಹಿಡುವಳಿ ಪಡೆದಿರುತ್ತಿದ್ದು, ಆ ಗುಂಪಿನ ಸದಸ್ಯರಿಗೆಲ್ಲ ವಂಶಪರಂಪರೆಯಿಂದ ಬರುತ್ತಿತ್ತು. ಕೃಷಿಯ ಭೂಮಿಯಂತೂ ಇರಲೇ ಇಲ್ಲ. ಈ ಬಂಧುಗಳ ಗುಂಪು ಬೇಟೆಯ ಪ್ರದೇಶಗಳನ್ನೂ, ವನ್ಯ ಫಲಗಳು ಮತ್ತು ಗೆಡ್ಡೆಗೆಣಸುಗಳ ಪ್ರದೇಶಗಳನ್ನೂ ಸ್ವಂತವಾಗಿ ಪಡೆದಿರುತ್ತಿದ್ದರು. ಕುಟುಂಬದ ಆಸ್ತಿಯನ್ನು ಯಾರೂ ಅತಿಕ್ರಮಣ ಮಾಡುವಂತಿರಲಿಲ್ಲ. ಅದೇ ರೀತಿಯಲ್ಲಿ ಮೀನುಗಾರಿಕೆಯ ಪ್ರದೇಶಗಳ ಒಡೆತನವೂ ಕಟ್ಟುನಿಟ್ಟು. ಒಂದು ಸ್ಥಳದ ಗುಂಪು ತಾವು ಚಿಪ್ಪು ಮೀನುಗಳನ್ನು ಆಗೆಯಬಲ್ಲ ತೀರಪ್ರದೇಶಗಳಿಗೆ ಬಹಳ ದೂರ ಹೋಗಬೇಕಾಗಿಯೂ ಇರುತ್ತಿತ್ತು. ಅವರ ಗ್ರಾಮದ ಬಳಿಯ ತೀರವು ಬೇರೆ ಯಾವುದೋ ಸಂತತಿಗೆ ಸೇರಿದ್ದಾಗಿರುತ್ತಿತ್ತು. ಈ ತೀರ ಪ್ರದೇಶಗಳ ಒಡೆತನ ಬಹುಕಾಲದಿಂದ ನಡೆದು ಬಂದಿದ್ದು ಗ್ರಾಮ ಠಾಣಗಳು ಬದಲಾಗಿದ್ದರೂ. ಈ ಚಿಪ್ಪು ಮೀನುಗಳ ನೆಲೆಯ ಒಡೆತನ ಮಾತ್ರ ಬದಲಾಗಿರಲಿಲ್ಲ. ತೀರಪ್ರದೇಶ ಮಾತ್ರವಲ್ಲ ಆಳವಾದ ಸಮುದ್ರ ಪ್ರದೇಶವೂ ಸಹ ನಿರ್ದಿಷ್ಟವಾದ ಆಸ್ತಿಯಾಗಿರುತ್ತಿತ್ತು. ಒಂದು ಕುಟುಂಬಕ್ಕೆ ಸೇರಿದ ಹ್ಯಾಲಿಬಟ್ ಮೀನುಗಳನ್ನು ಹಿಡಿಯಲಿರುವ ಪ್ರದೇಶವು, ಸ್ಪಷ್ಟವಾದ ಎರಡು ಹೆಗ್ಗುರುತುಗಳಿಂದ ಎಲ್ಲೆ ಕಟ್ಟಲ್ಪಟ್ಟಿರುತ್ತಿತ್ತು. ವಸಂತಕಾಲವಲ್ಲಿ ಕ್ಯಾಂಡಲ್ ಮೀನುಗಳನ್ನು ಹಿಡಿಯಲು ನದಿಗಳನ್ನೂ ಸಹ ವಿಭಾಗಗಳನ್ನಾಗಿ ವಿಂಗಡಿಸಿರುತ್ತಿದ್ದರು. ನದಿಯ ತಮ್ಮ ವಿಭಾಗದಲ್ಲಿ ಮೀನು ಹಿಡಿಯಲು ಕುಟುಂಬಗಳು ದೂರದೂರದಿಂದ ಬರುತ್ತಿದ್ದುವು.

ಆದರೆ ಬೇರೆ ರೀತಿಯಲ್ಲಿ ಒಡೆತನವಿರುವ, ಅದಕ್ಕಿಂತ ಮೌಲ್ಯವುಳ್ಳ ಆಸ್ತಿ ಬೇರೆ ಇರುತ್ತಿತ್ತು. ಕ್ವಾಕಿಯುಟಲ್ ಒಡೆತನದ ಪದ್ಧತಿಯು ಈ ಬಗೆಯ ಜೀವನೋಪಾಯದ ಸಾಧನಗಳ ಒಡೆತನದಲ್ಲಿ ಎಷ್ಟು ಮಟ್ಟಿಗೆ ವ್ಯಾಪ್ತಿಗೊಂಡಿದ್ದರೂ, ಅದು ಮುಖ್ಯವಾಗಿ ವ್ಯಕ್ತವಾಗಿದ್ದುದು ಅದರಲ್ಲಲ್ಲ. ಅಂತಹ ಒಡೆತನಕ್ಕೆ ಒಳಗಾಗಿದ್ದ ವಸ್ತುಗಳು ಐಹಿಕ ಸೌಖ್ಯಕ್ಕಿಂತ ಹೆಚ್ಚಿನ ಗೌರವ ಸ್ಥಾನ ಪಡೆದಿದ್ದಂತಹವು. ಅವುಗಳಲ್ಲಿ

ಕೆಲವು ಹೆಸರು ಹೊತ್ತಂತಹ ಮನೆ ಕಂಭಗಳು ಮತ್ತು ವಂಶಲಾಂಛನಗಳನ್ನು ಕೆತ್ತಿದ್ದ ತುರಾಯಿಗಳಂತಹ ಪ್ರಾಪಂಚಿಕ ವಸ್ತುಗಳು. ಆದರೆ ಅವುಗಳ ಬಹುಪಾಲು, ಶ್ರೀಮಂತನೆನ್ನಿಸಿಕೊಂಡವನು ಹೆಮ್ಮೆಯಿಂದ ಹೊಗಳಿಕೊಳ್ಳಬಹುದಾದ ಹೆಸರುಗಳು, ಐತಿಹ್ಯಗಳು, ಹಾಡುಗಳು ಮತ್ತು ಹಕ್ಕುಬಾಧ್ಯತೆಗಳು ಮೊದಲಾದ ಅಭೌತ ವಸ್ತುಗಳು. ಈ ವಿಶೇಷಾಧಿಕಾರಗಳು ಒಂದು ರಕ್ತ ಸಂತತಿಯಲ್ಲಿಯೇ ಉಳಿದುಬಂದರೂ ಸಹ ಅವುಗಳ ಒಡೆತನ ಒಂದೊಟ್ಟಿನದಲ್ಲ. ಅವು ಸದಕ್ಕೆ ಒಬ್ಬ ವ್ಯಕ್ತಿಯ ಏಕೈಕ ಒಡೆತನಕ್ಕೆ ಒಳಪಟ್ಟಿದ್ದು, ಅವನೊಬ್ಬನು ಮಾತ್ರ ಅವು ಪ್ರತಿನಿಧಿಸುತ್ತಿದ್ದ ಹಕ್ಕುಗಳನ್ನು ಚಲಾಯಿಸಬಹುದಾಗಿತ್ತು.

ಗೌರವ ಬಿರುದುಗಳು ಈ ವಿಶೇಷ ಅಧಿಕಾರಗಳಲ್ಲಿ ಪ್ರಧಾನವಾದುದಾಗಿ, ಇತರ ಅಧಿಕಾರಗಳಿಗೆ ಆಧಾರವಾಗಿದ್ದುವು. ಪ್ರತಿಯೊಂದು ಕುಟುಂಬದಲ್ಲಿಯೂ, ಪ್ರತಿಯೊಂದು ಮತಧಾರ್ಮಿಕ ಸಂಘದಲ್ಲೂ ಬಿರುದಾವಳಿಗಳ ಒಂದೊಂದು ಸರಣಿಯೇ ಇರುತ್ತಿತ್ತು. ವ್ಯಕ್ತಿಗಳು ಅವುಗಳನ್ನು ತಮ್ಮ ವಂಶಪರಂಪರೆ ಮತ್ತು ಆರ್ಥಿಕ ಸುಭದ್ರತೆಗಳಿಗನುಸಾರವಾಗಿ, ತಮ್ಮ ತಮ್ಮದನ್ನಾಗಿ ಮಾಡಿಕೊಳ್ಳುತ್ತಿದ್ದರು. ಈ ಬಿರುದುಗಳು ಅವರಿಗೆ ತಮ್ಮ ಬಣದಲ್ಲಿ ಪ್ರಭುತ್ವ ಸ್ಥಾನಗಳನ್ನು ನೀಡುತ್ತಿದ್ದುವು. ಅವುಗಳನ್ನು ಸ್ವಂತ ಹೆಸರುಗಳಂತೆಯೇ ಬಳಸುತ್ತಿದ್ದರು. ಆದರೆ ಪರಂಪರಾಗತ ಹೇಳಿಕೆಯ ಪ್ರಕಾರ ಆ ಹೆಸರುಗಳ ರಾಶಿ ಪ್ರಪಂಚ ಹುಟ್ಟಿದಾಗಿನಿಂದ ಇದ್ದುಬಂದಂತಹವಾಗಿದ್ದು ಅವಕ್ಕೆ ಹೊಸದಾಗಿ ಹೆಸರುಗಳನ್ನು ಸೇರಿಸಿರಲೂ ಇಲ್ಲ, ಅವುಗಳಿಂದ ಕಳೆದೂ ಇರಲಿಲ್ಲ. ಒಬ್ಬ ವ್ಯಕ್ತಿ ಅಂತಹ ಹೆಸರನ್ನು ತನ್ನದಾಗಿ ವಹಿಸಿದಾಗ, ಅವನು ತನ್ನ ವ್ಯಕ್ತಿತ್ವದಲ್ಲಿ ಒಂದೆ ಆ ಹೆಸರನ್ನು ತಮ್ಮ ಜೀವಮಾನದಲ್ಲಿ ತಳೆದಿದ್ದ ತನ್ನ ಪೂರ್ವಿಕರೆಲ್ಲರ ಮಹಾನ್ ಗುಣಗಳನ್ನೂ ಸೇರಿಸಿಕೊಂಡಂತೆ ಆಗುತ್ತಿತ್ತು. ಅವನು ಅದನ್ನು ತನ್ನ ಉತ್ತರಾಧಿಕಾರಿಗೆ ವಹಿಸಿಕೊಟ್ಟನೆಂದರೆ, ತಾನು ಅದನ್ನು ಬಳಸುವ ಅಧಿಕಾರವನ್ನೂ ಬಿಟ್ಟುಕೊಟ್ಟಂತೆಯೇ ಆಗುತ್ತಿತ್ತು.

ಅಂತಹ ಒಂದು ಬಿರುದನ್ನು ಪಡೆಯುವುದು ಬರಿಯ ರಕ್ತಸಂಬಂಧವನ್ನು ಆಧಾರಗೊಂಡಿರುತ್ತಿರಲಿಲ್ಲ. ಮೊದಲನೆಯದಾಗಿ ಈ ಬಿರುದುಗಳಿಗೆ ಚೊಚ್ಚಲ ಮಕ್ಕಳು ಮಾತ್ರ ಹಕ್ಕುದಾರರು. ಕಿರಿಯ ಮಕ್ಕಳಿಗೆ ಸ್ಥಾನಮಾನಗಳಿಲ್ಲ, ಅವರು ತಿರಸ್ಕಾರ ಯೋಗ್ಯರಾದ ಸಾಮಾನ್ಯರು. ಎರಡನೆಯದಾಗಿ ಬಿರುದಿನ ಹಕ್ಕು ಪಡೆದುದರ ಕುರುಹಾಗಿ ಅಧಿಕವಾದ ಸಂಪತ್ತನ್ನು ಹಂಚಬೇಕಾಗಿತ್ತು. ಹೆಂಗಸರು ದಿನನಿತ್ಯದ ಗೃಹಕೃತ್ಯಗಳಲ್ಲಿ ಮಗ್ನರಾಗಿರುತ್ತಿರಲಿಲ್ಲ. ಅವರು ತಲ್ಲೀನರಾಗುತ್ತಿದ್ದ ಕಸುಬೆಂದರೆ ಅಪಾರ ಸಂಖ್ಯೆಯಲ್ಲಿ ಚಾಪೆಗಳು, ಕುಕ್ಕೆಗಳು ಮತ್ತು ದೇವದಾರು ತೊಗಟೆಯ ಕಂಬಳಿಗಳನ್ನು ತಯಾರಿಸುವುದು. ಇವುಗಳನ್ನು ಗಂಡಸರು ಅದೇ ಉದ್ದೇಶ

ಕ್ಕಾಗಿ ತಯಾರಿಸುತ್ತಿದ್ದ ಪೆಠಾರಿಗಳಲ್ಲಿ ಎತ್ತಿಡುತ್ತಿದ್ದರು. ಇದೇ ರೀತಿ ಗಂಡಸರು ದೋಣಿಗಳನ್ನೂ, ತಾವುಗಳು ನಾಣ್ಯವಾಗಿ ಬಳಸುತ್ತಿದ್ದ ಚಿಪ್ಪುಗಳು ಅಥವಾ ದಂತಗಳನ್ನೂ ಸಂಗ್ರಹಿಸುತ್ತಿದ್ದರು. ಗೌರವದ ವ್ಯಕ್ತಿಗಳು ಅಪಾರ ಪ್ರಮಾಣದಲ್ಲಿ ಈ ವಸ್ತುಗಳನ್ನು ಸ್ವಂತದಲ್ಲಿಟ್ಟುಕೊಂಡು ಇಲ್ಲವೇ ಬಡ್ಡಿಗೆ ಕೊಟ್ಟುಕೊಂಡು ಇರುತ್ತಿದ್ದರು. ಇವು ವಿಶೇಷಾಧಿಕಾರಗಳನ್ನು ವಹಿಸಿಕೊಂಡಾಗ, ಅದಕ್ಕೆ ಮಾನ್ಯತೆ ದೊರಕಿಸಿಕೊಳ್ಳಲು, ಬ್ಯಾಂಕಿನ ನೋಟುಗಳಂತೆ ಕೈಯಿಂದ ಕೈಗೆ ಹಾಯುತ್ತಿದ್ದುವು.

ಈ ಚರಸ್ವತ್ತುಗಳು ಒಂದು ಜಟಿಲವಾದ ಹಣ ವ್ಯವಸ್ಥೆಯಲ್ಲಿ ನಾಣ್ಯಗಳಾಗಿ ಚಲಾವಣೆಯಾಗುತ್ತಿದ್ದವು. ಈ ಹಣ ವ್ಯವಸ್ಥೆಯು ಅಸಾಮಾನ್ಯವಾದ ಬಡ್ಡಿಯ ದರವನ್ನು ವಿಧಿಸುವುದರ ಮೂಲಕ ಕಾರ್ಯರೂಪಗೊಂಡಿತ್ತು. ಒಂದು ವರ್ಷದ ಸಾಲಕ್ಕೆ ಶೇಕಡಾ ನೂರರ ಬಡ್ಡಿ ಸಾಧಾರಣವಾದುದಾಗಿತ್ತು. ಸಂಪತ್ತನ್ನು ಲೆಕ್ಕ ಹಿಡಿಯುವಾಗ ಆ ವ್ಯಕ್ತಿಯು ಬಡ್ಡಿಗಾಗಿ ಎಷ್ಟು ಸ್ವತ್ತನ್ನು ಬಿಟ್ಟಿದ್ದಾನೆಂಬುದೇ ಪರಿಗಣಿತವಾಗುತ್ತಿತ್ತು. ಸಮುದ್ರದಿಂದ ಆಹಾರವು ಹೆಚ್ಚು ಹೆಚ್ಚಿನ ಪ್ರಮಾಣದಲ್ಲಿ ಸುಲಭವಾಗಿ ದೊರೆಯುತ್ತಿತ್ತು. ಅವರು ಹಣವಾಗಿ ಬಳಸುತ್ತಿದ್ದ ಚಿಪ್ಪುಗಳನ್ನು ಆಗಾಗ್ಗೆ ಸಮುದ್ರದಿಂದ ಧಾರಾಳವಾಗಿ ಪಡೆದು ತುಂಬಬಹುದಾಗಿತ್ತು. ಹಾಗಿಲ್ಲದಿದ್ದಲ್ಲಿ ಅಷ್ಟು ದರದ ಬಡ್ಡಿಯ ಕ್ರಮ ಅಸಾಧ್ಯವಾಗುತ್ತಿತ್ತು. ದೊಡ್ಡ ಮೌಲ್ಯಗಳಿಗೆ 'ತಾಮ್ರ ಫಲಕ' ಎಂದು ಕರೆಯುತ್ತಿದ್ದ ಕಾಲ್ಪನಿಕ ಮಾನವನ್ನು ಬಳಸುತ್ತಿದ್ದರು. ಇವು ಸ್ಥಳೀಯ ತಾಮ್ರದ ತಗಡುಗಳು. ಅವನ್ನು ಕೊರೆದಿದ್ದು, ಅವುಗಳ ಬೆಲೆ ಹತ್ತು ಸಾವಿರಕ್ಕಿಂತಲೂ ಹೆಚ್ಚಿನ ಕಂಬಳಿಗಳಾಗಿರುತ್ತಿದ್ದುವು. ಅವುಗಳ ನಿಜವಾದ ಬೆಲೆ ಸಣ್ಣದೇ ಆದರೂ ಅವುಗಳ ಮೌಲ್ಯ ಆ ಹಿಂದೆ ಕಟ್ಟಕಡೆಯ ಬಾರಿ ಅವು ಕೈ ಬದಲಾದಾಗ ಪಡೆದಿದ್ದ ಬೆಲೆಯಾಗಿ ಪರಿಗಣಿತವಾಗುತ್ತಿತ್ತು. ಅಲ್ಲದೇ ಯಾವುದೇ ದೊಡ್ಡ ವಿನಿಮಯದಲ್ಲಿಯೂ ಮರುಪಾವತಿಗಾಗಿ ವಸ್ತುಗಳನ್ನು ಸಂಗ್ರಹಿಸುವುದು ಒಬ್ಬ ವ್ಯಕ್ತಿಯ ಕೆಲಸವಾಗಿರುತ್ತಿರಲಿಲ್ಲ. ವ್ಯವಹಾರಸ್ಥರು ತಮ್ಮ ಸ್ಥಳೀಯ ಗುಂಪಿನ ಮುಖಂಡರಾಗಿ, ಬಣಬಣಗಳ ನಡುವಣ ವಿನಿಮಯದಲ್ಲಿ ಇಡೀ ಬಣದ ಮುಖಂಡರಾಗಿ ಇರುತ್ತಿದ್ದರು. ಆ ಸಂದರ್ಭಕ್ಕೆ ತಮ್ಮ ಗುಂಪಿನ ಎಲ್ಲ ವ್ಯಕ್ತಿಗಳ ಸರಕುಗಳೂ ಅವರ ನಿಯಂತ್ರಣದಲ್ಲಿರುತ್ತಿದ್ದುವು.

ಮುಂದೆ ಮಹತ್ವದ ಸ್ಥಾನ ಗಳಿಸುವ ಸಾಧ್ಯತೆಯಿದ್ದ ವ್ಯಕ್ತಿ ಗಂಡಸಾಗಲಿ. ಹೆಂಗಸಾಗಲಿ, ಈ ಆರ್ಥಿಕ ಸ್ಪರ್ಧೆಗೆ ಸಣ್ಣ ಮಗುವಾಗಿದ್ದಾಗಲೇ ಪ್ರವೇಶಿಸುತ್ತಿದ್ದರು. ಕೂಸಾಗಿರುವಾಗ ಅವನಿಗೆ ಅವನು ಹುಟ್ಟಿದ ಜಾಗವನ್ನು ಮಾತ್ರ ಸೂಚಿಸುವ ಒಂದು ಹೆಸರನ್ನಿಡುತ್ತಿದ್ದರು. ಆ ಹೆಸರಿಗಿಂತ ಮುಖ್ಯವಾದ ಹೆಸರನ್ನು ತಳೆಯಬೇಕಾದ ಸಮಯ ಬಂದಾಗ, ಹಿರಿಯರು ಅವನಿಗೆ ಹಲವು ಕಂಬಳಿಗಳನ್ನು ಹಂಚಲು

ನೀಡುತ್ತಿದ್ದರು. ಹೊಸ ಹೆಸರನ್ನು ಇರಿಸಿಕೊಂಡಾಗ ಈ ಕಂಬಳಿಗಳನ್ನು ಅವನು ತನ್ನ ನೆಂಟರಲ್ಲಿ ಹಂಚುತ್ತಿದ್ದನು. ಮಗುವಿನಿಂದ ಕಾಣಿಕೆಗಳನ್ನು ಸ್ವೀಕರಿಸಿದ ನೆಂಟರು ಹೆಚ್ಚಿನ ದರದ ಬಡ್ಡಿ ಸೇರಿಸಿ ಸರಿಯಾದ ಸಮಯದಲ್ಲಿ ಅದನ್ನು ಹಿಂತಿರುಗಿಸುತ್ತಿದ್ದರು. ಕಾಣಿಕೆ ಸ್ವೀಕರಿಸಿದವರಲ್ಲಿ ಯಾವನಾದರೂ ಯಜಮಾನ ಅಥವಾ ಮುಖಂಡ ಇದ್ದರೆ, ಅವನು ಹಾಗೆ ಸ್ವೀಕರಿಸಿದ ಸ್ವಲ್ಪ ಕಾಲದ ನಂತರ ಸಾರ್ವಜನಿಕ ವಿನಿಮಯದಲ್ಲಿ ಸ್ವತ್ತನ್ನು ಹಂಚುವ ಸಂದರ್ಭ ಬಂದರೆ, ಆಗ ಅವನು ತಾನು ಸ್ವೀಕರಿಸಿದ ಮೂರರಷ್ಟನ್ನು ಹಿಂತಿರುಗಿಸುತ್ತಿದ್ದನು. ಒಂದು ವರ್ಷದ ಕೊನೆಯಲ್ಲಿ ಆ ಮಗುವು ತನಗೆ ಮೂಲ ಸಂಪತ್ತನ್ನು ನೀಡಿದವರಿಗೆ ಆ ಮೂಲ ಧನವನ್ನು ಶೇಕಡಾ ನೂರರಷ್ಟು ಬಡ್ಡಿಯೊಂದಿಗೆ ಹಿಂತಿರುಗಿಸಬೇಕಾಗಿತ್ತು. ಬಾಕಿ ಉಳಿದುದು ಅವನ ಸ್ವಂತ ಹೆಸರಿನಲ್ಲಿ ನಿಲ್ಲುತ್ತಿತ್ತು. ಅದು ಮೊದಲು ತೊಡಗಿಸಿದಷ್ಟೇ ಕಂಬಳಿಗಳಾಗಿರುತ್ತಿತ್ತು. ಕೆಲವರ್ಷಗಳ ಕಾಲ, ಅವನು ತನ್ನ ಪರಂಪರಾಗತವಾದ ಮೊದಲ ಪೊಟ್ಲಾಚ್ ನಾಮವನ್ನು ಸ್ವೀಕರಿಸಲು ಸಿದ್ಧನಾಗುವವರೆಗೆ, ಇವನ್ನು ಹಂಚಿ ಬಡ್ಡಿ ಪಡೆಯುತ್ತಿದ್ದನು. ಆ ಕಾರ್ಯಕ್ಕೆ ಅವನು ಸಿದ್ಧನಾದಾಗ ಬಣದ ಹಿರಿಯರು ಮತ್ತು ಅವನ ನೆಂಟರೆಲ್ಲ ಕೂಡುತ್ತಿದ್ದರು ಆಗ ಎಲ್ಲ ಜನರೆದುರಿಗೆ ಬಣದ ಹಿರಿಯರು ಮತ್ತು ಯಜಮಾನನ ಸಮ್ಮುಖದಲ್ಲಿ, ಆ ಮಗುವಿಗೆ ಅವನ ತಂದೆಯು ಆ ಬಣದಲ್ಲಿ ಅವನ ಸ್ಥಾನವನ್ನು ಸೂಚಿಸುವ ಒಂದು ಹೆಸರನ್ನು ಇಡುತ್ತಿದ್ದನು.

ಅದರಿಂದ ಮುಂದೆ ಆ ಬಾಲಕನು ತನ್ನ ಬಣದ ಬಿರುದಾಂಕಿತ ಮಂದಿಯಲ್ಲಿ ಒಂದು ಪರಂಪರಾಗತ ಸ್ಥಾನವನ್ನು ಪಡೆಯುತ್ತಿದ್ದನು. ಇದಾದ ನಂತರ ಅವನು ತಾನು ನೀಡಿದ ಇಲ್ಲವೇ ಭಾಗವಹಿಸಿದ ಪೊಟ್ಲಾಚ್‌ಗಳಲ್ಲಿ ಇನ್ನೂ ಮಹತ್ವದ ಹೆಸರುಗಳನ್ನು ತಳೆಯುತ್ತಿದ್ದನು. ಮುಖ್ಯವಾದ ಯಾವನೇ ವ್ಯಕ್ತಿಯಾದರೂ ಹಾವು ಹೊಸಪೊರೆ ಪಡೆಯುವಂತೆ, ಹೆಸರುಗಳನ್ನು ಬದಲಾಯಿಸಿಕೊಳ್ಳುತ್ತಿದ್ದನು. ಈ ಹೆಸರುಗಳು ಅವನ ಕುಟುಂಬದ ಸಂಬಂಧ ಅವನ ಸಂಪತ್ತು, ಬಣದ ರಚನೆಯಲ್ಲಿ ಅವನ ಸ್ಥಾನ ಇವುಗಳನ್ನು ಸೂಚಿಸುತ್ತಿದ್ದುವು. ಮದುವೆಯ ಸಂದರ್ಭವಾಗಲಿ, ಮೊಮ್ಮಗು ವಯಸ್ಸಿಗೆ ಬಂದ ಹಬ್ಬವಾಗಲಿ, ಇಲ್ಲವೇ ವಿರೋಧಿ ಬಣದ ಯಜಮಾನ ಘೋಷಿಸಿದ ಅಂತರ ಬಣಗಳ ಸವಾಲಾಗಲಿ. ಪೊಟ್ಲಾಚ್ ನಡೆಯುವ ಸಂದರ್ಭ ಯಾವುದೇ ಇದ್ದರೂ ಅದನ್ನು ನೀಡಿದ ಯಜಮಾನನು ಆ ಸಂದರ್ಭವನ್ನು ತನಗಾಗಲಿ ಅಥವಾ ತನ್ನ ಉತ್ತರಾಧಿಕಾರಿಗಾಗಲಿ ಹೊಸ ಹೆಸರನ್ನೂ ಮತ್ತು ಅದರ ಸಂಬಂಧವಾದ ವಿಶೇಷಾಧಿಕಾರಗಳನ್ನೂ ತಳೆಯಲು ಬಳಸಿಕೊಳ್ಳುತ್ತಿದ್ದನು.

ಮದುವೆಯು ಕ್ವಾಕಿಯುಟಲ್‌ಗಳಲ್ಲಿ ಸಾಮಾಜಿಕ ಸ್ಥಾನ ಪಡೆಯುವುದರಲ್ಲಿ

ಪ್ರಮುಖ[1] ಪಾತ್ರವಹಿಸುತ್ತಿತ್ತು; ವಾಯುವ್ಯ ತೀರದಲ್ಲಿ ಅವರಿಗಿಂತ ಉತ್ತರಕ್ಕೆ ಇದ್ದ ಬಣಗಳು ಮಾತೃಸಂತತಿ ಪದ್ಧತಿಯಿದ್ದಂತಹವು. ಸದ್ಯಕ್ಕೆ ಅನುಭವವು ಗಂಡಸರಲ್ಲಿ ಇದ್ದರೂ ಸ್ಥಾನಮಾನಗಳು ಸ್ತ್ರೀ ಸಂತಾನದಲ್ಲಿ ಅನುಕ್ರಮಗೊಂಡಿದ್ದುವು. ಇದಕ್ಕೆ ಪ್ರತಿಯಾಗಿ ಕ್ವಾಕಿಯುಟಲ್‌ಗಳು ಮೂಲತಃ ಸ್ಥಳೀಯ ಗುಂಪುಗಳಲ್ಲಿ ವ್ಯವಸ್ಥೆಗೊಂಡಿದ್ದು, ಗಂಡಸರು ತಮ್ಮ ಮನೆತನವನ್ನು ತಮ್ಮ ತಂದೆಯ ಬಳ್ಳಿಯಲ್ಲಿ ನೆಲೆಗೊಳಿಸುತ್ತಿದ್ದರು. ತಮ್ಮ ಸಮಾಜದ ಈ ಹಳೆಯ ನೆಲೆಗಟ್ಟನ್ನು ಬಹಳವಾಗಿ ಸುಧಾರಿಸಿದ್ದರೂ ಸಹ ಅವರು ಅದನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟಿರಲಿಲ್ಲ. ಅವರು ಸಮನ್ವಯ ಮಾರ್ಗವನ್ನನುಸರಿಸಿದ್ದರು. ಅಂದರೆ ಒಬ್ಬಾತ ತನ್ನ ಹಕ್ಕುಬಾಧ್ಯತೆಗಳನ್ನು ತನ್ನ ಮಗಳನ್ನು ಮದುವೆಯಾದವನಿಗೆ ನೀಡುತ್ತಿದ್ದ. ಆದರೆ ಅವು ಅವನಿಗೆ ಹೆಸರಿಗೆ ಮಾತ್ರ ಇರುತ್ತಿದ್ದವೇ ಹೊರತು, ಸ್ವಂತ ಆಸ್ತಿಯಾಗುತ್ತಿರಲಿಲ್ಲ. ಅವು ಅವನ ನಂತರಿಗಾಗಿ. ಅವರಲ್ಲೂ ಮುಖ್ಯವಾಗಿ ಅವುಗಳನ್ನು ನೀಡಿದಾತನ ಮಗಳ ಮಕ್ಕಳಿಗಾಗಿ ವಿಶ್ವಸ್ಥವಾಗಿರುತ್ತಿದ್ದವು. ಹೀಗಾಗಿ ಮಾತೃ ಸಂತತಿಯ ಗುಂಪುಗಳಿರಲಿಲ್ಲವಾದರೂ, ಉತ್ತರಾಧಿಕಾರ ಮಾತೃಸಂತತಿಯಲ್ಲಿಯೇ ಉಳಿದಿತ್ತು,

ಅಳಿಯನ ಕುಟುಂಬದವರು ಕನ್ಯಾ ಶುಲ್ಕವಾಗಿ ನೀಡಿದ್ದ ಸ್ವತ್ತುಗಳಿಗೆ ಬದಲಾಗಿ, ಅವನಿಗೆ ಮಕ್ಕಳಾದಾಗ ಅಥವಾ ಮಕ್ಕಳು ವಯಸ್ಸಿಗೆ ಬಂದಾಗ ವಿಶೇಷಾಧಿಕಾರಗಳು ಮತ್ತು ಆಸ್ತಿ ವರ್ಗಾವಣೆಯಾಗುತ್ತಿದ್ದವು. ಅಂದರೆ ಹೆಂಡತಿಯನ್ನು ಸಹ ತಾಮ್ರ ಫಲಕವನ್ನು ಪಡೆಯುವ ರೀತಿಯಲ್ಲಿಯೇ ಪಡೆಯುತ್ತಿದ್ದರು. ಇತರ ಆರ್ಥಿಕ ವಿನಿಮಯಗಳಂತೆಯೇ ಮದುವೆಯ ವಿಷಯದಲ್ಲಿ ವ್ಯವಹಾರ ನಡೆಯುತ್ತಿತ್ತು. ಮದುವೆಯ ಸಮಯದಲ್ಲಿ ಹೆಚ್ಚು ಕನ್ಯಾ ಶುಲ್ಕ ನೀಡಿದಷ್ಟು, ವರನ ಕುಲವು ಹೆಚ್ಚು ಹೆಮ್ಮೆ ಪಟ್ಟುಕೊಳ್ಳಬಹುದಾಗಿತ್ತು. ಈ ನೀಡಿಕೆಗೆ ಬಹಳಷ್ಟು ಬಡ್ಡಿ ಸೇರಿಸಿ, ಸಾಧಾರಣವಾಗಿ ಅವನಿಗೆ ಚೊಚ್ಚಲು ಮಗು ಹುಟ್ಟಿದ ಸಂದರ್ಭದಲ್ಲಿ ಏರ್ಪಡುತ್ತಿದ್ದ ಮರು ಪ್ರೊಟ್ಲಾಚಿನಲ್ಲಿ ಮರುಪಾವತಿ ಮಾಡಬೇಕಾಗುತ್ತಿತ್ತು. ಈ ಮರುಪಾವತಿಯಿಂದ ಕೂಡಲೇ ಹೆಂಡತಿಯನ್ನು ಅವಳ ಕುಟುಂಬದವರು ಮರಳಿ ಪಡೆದಂತಾಗಿ ಅವಳ ಮದುವೆಯನ್ನು "ಗಂಡನ ಮನೆಯಲ್ಲಿ ಬಿಟ್ಟಿಯಾಗಿ ಇರುವುದು" ಎಂದು ಕರೆಯುತ್ತಿದ್ದರು. ಆದ್ದರಿಂದ ಅವಳನ್ನು ತನ್ನವಳನ್ನಾಗಿ ಉಳಿಸಿಕೊಳ್ಳಲು ಗಂಡಸು ಮತ್ತೊಮ್ಮೆ ಕನ್ಯಾಶುಲ್ಕವನ್ನು ನೀಡುತ್ತಿದ್ದ. ಹೀಗೆ ಬಾಳಿನುದ್ದಕ್ಕೂ, ಮಕ್ಕಳು ಹುಟ್ಟಿದಾಗ ಅಥವಾ ವಯಸ್ಸಿಗೆ ಬಂದಾಗ ಮಾವನು ತನ್ನ ವಿಶೇಷಾಧಿಕಾರಗಳನ್ನೂ, ಸಂಪತ್ತನ್ನೂ, ತನ್ನ ಮಗಳ ಗಂಡನಿಗೆ ವರ್ಗಾಯಿಸುತ್ತಿದ್ದ. ಅವೆಲ್ಲ ಆ ವಿವಾಹದಿಂದ ಹುಟ್ಟಲಿದ್ದ ಸಂತಾನಕ್ಕೆ ಸೇರುತ್ತಿತ್ತು.

ಕ್ವಾಕಿಯುಟಲ್‌ಗಳ ಮತಧರ್ಮ ವ್ಯವಸ್ಥೆಯು ಲೌಕಿಕ ವ್ಯವಸ್ಥೆಯ ಪ್ರತಿರೂಪವ

ವಾಗಿತ್ತು. ಬಣವು, ತಮ್ಮ ತಮ್ಮದೇ ಆದ ಪ್ರಭುತ್ವ ಸೂಚಕ ಬಿರುದಾವಳಿಗಳನ್ನು ಪಡೆದ ಸಂತತಿಗಳಲ್ಲಿ ವ್ಯವಸ್ಥೆಗೊಂಡಿತ್ತು. ಅದೇ ರೀತಿಯಲ್ಲಿ ಮತಧರ್ಮ ವ್ಯವಸ್ಥೆ ಸಹ ಕ್ಯಾನಿಬಲ್, ಕರಡಿ, ಕೋಡಂಗಿ ಮತ್ತಿತರ ದೈವಿಕ ಬಲಗಳನ್ನು ಪಡೆದಿದ್ದ ಸಂಘಗಳಲ್ಲಿ ವ್ಯವಸ್ಥೆಗೊಂಡಿತ್ತು. ಕುಟುಂಬಗಳಲ್ಲಿದ್ದಂತೆಯೇ ಇವುಗಳಲ್ಲಿಯೂ ಸ್ಥಾನಮಾನ ಸೂಚಕವಾದ ಬಿರುದುಗಳಿದ್ದವು. ಯಾವುದೇ ವ್ಯಕ್ತಿಯಾದರೂ ಲೌಕಿಕ ಶ್ರೇಣಿಯಲ್ಲಿರುವಂತೆಯೇ. ಮತಧಾರ್ಮಿಕ ಶ್ರೇಣಿಯಲ್ಲಿಯೂ ಒಂದು ಪ್ರಮುಖ ಸ್ಥಾನ ಪಡೆಯದೇ ಮಹತ್ವದ ವ್ಯಕ್ತಿಯಾಗಲು ಸಾಧ್ಯವಿರಲಿಲ್ಲ. ವರ್ಷವನ್ನು ಅವರು ಎರಡು ಭಾಗಗಳಾಗಿ ವಿಂಗಡಿಸಿದ್ದರು. ಬೇಸಿಗೆಯಲ್ಲಿ ಬಣದ ಲೌಕಿಕ ವ್ಯವಸ್ಥೆ ಜಾರಿಯಲ್ಲಿರುತ್ತಿತ್ತು. ಆಗ ಪ್ರತಿಯೊಬ್ಬನೂ ಪ್ರಭುತ್ವ ಬಿರುದಾಂಕಿತರ ಶ್ರೇಣಿಯಲ್ಲಿ ತನ್ನ ಸ್ಥಾನಕ್ಕೆ ಅನುಗುಣವಾಗಿ ಆದ್ಯತೆ ಪಡೆಯುತ್ತಿದ್ದನು. ಚಳಿಗಾಲದಲ್ಲಿ ಇದೆಲ್ಲವನ್ನೂ ಒತ್ತಟ್ಟಿಗಿಡಲಾಗುತ್ತಿತ್ತು. ಮಾಗಿಯ ಹಬ್ಬದ ದೇವತಾ ಶಕ್ತಿಗಳ ಸಿಳ್ಳು ಕೇಳಿ ಬಂದ ಕ್ಷಣದಿಂದ. ಯಾವನನ್ನಾದರೂ ಅವನ ಲೌಕಿಕ ಹೆಸರಿನಿಂದ ಕರೆಯುವುದು ನಿಷಿದ್ಧವಾಗುತ್ತಿತ್ತು. ಈ ಲೌಕಿಕ ಬಿರುದುಗಳ ಸುತ್ತಿನಲ್ಲಿಯೇ ರಚಿತವಾಗಿದ್ದ ಇಡೀ ಸಮಾಜ ವ್ಯವಸ್ಥೆ ಆಚೆ ಸರಿಯುತ್ತಿತ್ತು. ಚಳಿಗಾಲಕ್ಕೆ ಬಣದ ಜನರು ತಮ್ಮನ್ನು ದೈವಿಕ ಸಂಘಗಳಿಗೆ ದೀಕ್ಷೆಗೊಳಿಸಿದ್ದ ಭೂತಗಳಿಗೆ ಅನುಗುಣವಾಗಿ ಗುಂಪುಗಳಲ್ಲಿ ಅಣಿಯಾಗುತ್ತಿದ್ದರು. ಮಾಗಿ ಹಬ್ಬದ ಕಾಲಕ್ಕೆ ಒಬ್ಬ ವ್ಯಕ್ತಿ ಕ್ಯಾನಿಬಲ್, ಕರಡಿ, ಕೋಡಂಗಿ, ಮತ್ತಿತರ ಸಂಘಗಳಲ್ಲಿ ತಾನು ಪಡೆದಿದ್ದ ಬಿರುದಿನ ಮಹತ್ವಕ್ಕೆ ಅನುಗುಣವಾಗಿ ಸ್ಥಾನ ಪಡೆಯುತ್ತಿದ್ದನು.

ಇದರಲ್ಲಿ ನಾವು ಭಾವಿಸಿಕೊಳ್ಳಬಹುದಾದಷ್ಟು ಭಿನ್ನಭಾವವೇನೂ ಇರಲಿಲ್ಲ. ಲೌಕಿಕವಾದ ಪ್ರಭುತ್ವ ಬಿರುದುಗಳು ಒಂದು ಸಂತತಿಯಲ್ಲಿ ವಂಶಾನುಕ್ರಮದಲ್ಲಿ ಬಂದಂತೆಯೇ, ಮತಧಾರ್ಮಿಕ ಸಂಘಗಳ ಉನ್ನತ ಬಿರುದುಗಳೂ ಬರುತ್ತಿದ್ದುವು. ಮದುವೆಯ ಸಮಯದಲ್ಲಿ ಭರವಸೆ ನೀಡುತ್ತಿದ್ದ ಬಳುವಳಿಯ ಪ್ರಮುಖ ಅಂಶಗಳಲ್ಲಿ ಇದೂ ಒಂದು. ಕ್ಯಾನಿಬಲ್ ಅಥವಾ ಕೋಡಂಗಿ ಸಂಘದ ಸದಸ್ಯತ್ವಕ್ಕೆ ದೀಕ್ಷೆ ಪಡೆಯುವುದು, ಹುಟ್ಟಿನಿಂದ ಅಥವಾ ಮದುವೆಯಿಂದ ದೊರೆಯಬಹುದಾದಂತಹ ವಿಶೇಷಾಧಿಕಾರವಾಗಿತ್ತು. ಅವುಗಳನ್ನು ಊರ್ಜಿತಪಡಿಸಿಕೊಳ್ಳಲು ಸ್ವತ್ತನ್ನು ಹಂಚಬೇಕಾಗಿ ಬರುತ್ತಿತ್ತು. ಆದ್ದರಿಂದ ಬಣವು ಮತಧಾರ್ಮಿಕ ಕರ್ತೃತ್ವದ ಪ್ರಕಾರ ವ್ಯವಸ್ಥೆಗೊಂಡ ಕಾಲದಲ್ಲಿ ದೊಡ್ಡ ಕುಟುಂಬಗಳು ತಮ್ಮ ವಂಶಾನುಗತ ಸ್ಥಾನಗಳನ್ನು ಬಿಟ್ಟುಕೊಟ್ಟಂತಾಗುತ್ತಿರಲಿಲ್ಲ. ಅವರು ತಮ್ಮ ಬಣದ ಲೌಕಿಕ ವ್ಯವಸ್ಥೆಯಲ್ಲಿ ಪಡೆದಿದ್ದ ವಿಶೇಷಾಧಿಕಾರಗಳಿಗೆ ಸಾದೃಶ್ಯವಾದ, ವಿಶೇಷಾಧಿಕಾರಗಳ ಎರಡನೆಯ ತಂಡವನ್ನು ಎತ್ತಿ ತೋರಿಸುತ್ತಿದ್ದರು, ಎಂದಷ್ಟೆ ಆಗುತ್ತಿತ್ತು.

ತಾವು ತಮ್ಮ ಪೂರ್ವಜರಿಂದಾಗಲೀ, ವಿವಾಹ ಸಂಬಂಧವಾದ ಬಳುವಳಿಯಿಂದಾಗಲೀ ಪಡೆಯಬಹುದಾದ ವಿಶೇಷಾಧಿಕಾರಗಳು ಮತ್ತು ಬಿರುದುಗಳನ್ನು ಊರ್ಜಿತಪಡಿಸಿಕೊಂಡು ಚಲಾಯಿಸುವ ಈ ಆಟದಲ್ಲಿ ವಾಯುವ್ಯ ತೀರ ಪ್ರದೇಶದ ಇಂಡಿಯನ್ನರು ತಲ್ಲೀನರಾಗಿರುತ್ತಿದ್ದರು. ಪ್ರತಿಯೊಬ್ಬನೂ ತನ್ನ ತನ್ನ ಮಟ್ಟದಲ್ಲಿ ಈ ಆಟದಲ್ಲಿ ಭಾಗವಹಿಸುತ್ತಿದ್ದನು. ಗುಲಾಮನಿಗೆ ಈ ಆಟದಲ್ಲಿ ಪ್ರವೇಶವಿಲ್ಲ. ಈ ಸಂಸ್ಕೃತಿಯಲ್ಲಿ ಸಂಪತ್ತಿನ ನಿರ್ವಹಣೆಯು ಯಾವುದೇ ಬಗೆಯ ವಾಸ್ತವಿಕವಾದ ಆರ್ಥಿಕ ಅವಶ್ಯಕತೆಗಳು ಮತ್ತು ಆ ಅವಶ್ಯಕತೆಗಳ ಪೂರೈಕೆಗಳ ನಿರೂಪಣೆಯ ಸೀಮೆಯನ್ನು ದಾಟಿ, ಬಹುದೂರ ಸಾಗಿತ್ತು. ಮೂಲಧನ, ಬಡ್ಡಿ ಮತ್ತು ದುಂದುವೆಚ್ಚ ಇವು ಸಂಪತ್ತಿನ ನಿರ್ವಹಣೆಯಲ್ಲಿ ಅಡಗಿದ್ದುವು. ಇದರಲ್ಲಿ ಸಂಪತ್ತು ಎಂಬುದು ಆರ್ಥಿಕ ದೃಷ್ಟಿಯ ಸರಕುಗಳು ಮಾತ್ರವಲ್ಲ. ಪೊಟ್ಲಾಚ್‌ಗಳಿಗಾಗಿ ಮಾತ್ರ ಮೀಸಲಾಗಿದ್ದು, ವಿನಿಮಯದಲ್ಲಿ ಹೊರತು ಬೇರಾವ ಬಗೆಯಲ್ಲಿಯೂ ಬಳಕೆಗೇ ಬಾರದ ಸರಕುಗಳೂ, ಅದಕ್ಕಿಂತ ಮಿಗಿಲಾಗಿ ಯಾವುದೇ ರೀತಿಯಲ್ಲಿ ಆರ್ಥಿಕ ಕ್ರಿಯೆಯೇ ಇಲ್ಲದ ವಿಶೇಷಾಧಿಕಾರಗಳೂ ಸೇರಿಕೊಂಡಿದ್ದುವು. ಹಾಡುಗಳು, ಐತಿಹ್ಯಗಳು, ಯಜಮಾನರ ಮನೆಗಳ ಹೆಸರು ಹೊತ್ತ ಕಂಭಗಳು, ಅವರ ನಾಯಿಗಳು, ದೋಣಿಗಳು ಇವೆಲ್ಲ ಸಂಪತ್ತೆಂದು ಪರಿಗಣಿತವಾಗಿದ್ದುವು. ನೃತ್ಯಗಾರನನ್ನು ಕಂಭಕ್ಕೆ ಕಟ್ಟುವ ಅಧಿಕಾರ ಇಲ್ಲವೇ ನೃತ್ಯಗಾರರು ತಮ್ಮ ಮುಖಕ್ಕೆ ಬಳಿದುಕೊಳ್ಳುವ ಸಲುವಾಗಿ ಕೊಬ್ಬನ್ನು ಒದಗಿಸುವ ಹಕ್ಕು ಅಥವಾ ಅವರು ಅದನ್ನು ಒರೆಸಿ ಹಾಕಲು ದೇವದಾರು ತೊಗಟೆಯ ತುರಿಯನ್ನು ನೀಡುವುದು ಮುಂತಾದ ಮಹತ್ವಪೂರ್ಣ ವಿಶೇಷಾಧಿಕಾರಗಳು ಸಂಪತ್ತಾಗಿ ಪರಿಗಣಿತವಾಗಿದ್ದು ಕುಟುಂಬ ಪಂಕ್ತಿಗಳಲ್ಲಿ ತಲೆಯಿಂದ ತಲೆಗೆ ಬರುತ್ತಿದ್ದುವು. ಕ್ವಾಕಿಯುಟಲ್‌ಗಳ ಹತ್ತಿರದ ಬಣವಾದ ಬೆಲ್ಲಾಕೂಲಾಗಳಲ್ಲಿಯಂತೂ ಕೌಟುಂಬಿಕ ಐತಿಹ್ಯಗಳು ಬಹು ಬೆಲೆ ಬಾಳುವ ಹಾಗೂ ಅಪೇಕ್ಷಣೀಯವಾದ ಸಂಪತ್ತೆಂದು ಪರಿಗಣಿತವಾಗಿತ್ತು. ಅದರ ಪರಿಣಾಮವಾಗಿ ಅಂತಹ ಸಂಪತ್ತನ್ನು ಹುಟ್ಟಿನಿಂದ ಅದನ್ನು ಪಡೆಯಬಲ್ಲ ಹಕ್ಕು ಇಲ್ಲದವರಿಗೆ ಅದನ್ನು ಹಂಚಿ ಪೋಲು ಮಾಡಬಾರದು ಎಂಬ ದೃಷ್ಟಿಯಿಂದ ಗೌರವದ ವರ್ಗದವರು ತಮ್ಮ ತಮ್ಮ ಕುಟುಂಬಗಳ ಒಳಗೇ ವಿವಾಹ ಸಂಬಂಧ ಬೆಳೆಸುವ ಸಂಪ್ರದಾಯ ಬೆಳೆದು ಬಂದಿತ್ತು.

ವಾಯುವ್ಯ ತೀರ ಪ್ರದೇಶದಲ್ಲಿನ ಸಂಪತ್ತಿನ ನಿರ್ವಹಣೆಯು ಹಲವಾರು ರೀತಿಗಳಲ್ಲಿ ನಮ್ಮಲ್ಲಿ ರೂಢಿಯಲ್ಲಿರುವ ಆರ್ಥಿಕ ಏರ್ಪಾಡುಗಳ ವಿಡಂಬನೆಯಿದ್ದಂತೆ ಇದೆ. ಈ ಬಣಗಳು ಸಂಪತ್ತನ್ನು ಹಾಗೂ ಅದಕ್ಕೆ ಸಮಾನವಾದ ಆರ್ಥಿಕ ಸರಕುಗಳನ್ನು ಅವಶ್ಯಕ ವಸ್ತುಗಳಿಗಾಗಿ ಬಳಸುತ್ತಿರಲಿಲ್ಲ. ಅದಕ್ಕೆ ಬದಲಾಗಿ ಗೆಲ್ಲುವ ಛಲದಿಂದ

ಆಡುತ್ತಿದ್ದ ಜೂಜಿನಲ್ಲಿ ಸಂಪತ್ತನ್ನು ಪೋಲುಮಾಡುತ್ತಿದ್ದರು. ಅವರು ಜೀವನ ವನ್ನು ವಿಶೇಷಾಧಿಕಾರಗಳನ್ನು ತಮ್ಮಲ್ಲಿ ಅಳವಡಿಸಿಕೊಂಡಿದ್ದ ಬಿರುದಾವಳಿಗಳನ್ನೇ ಮೆಟ್ಟಿಲುಗಳಾಗಿ ಉಳ್ಳ ಒಂದು ಏಣಿಯಂತೆ ಭಾವಿಸಿದ್ದರು. ಆ ಏಣಿಯಲ್ಲಿ ಒಂದೊಂದು ಮೆಟ್ಟಿಲನ್ನು ಏರಿದಾಗಲೂ ಸಂಪತ್ತನ್ನು ಧಾರಾಳವಾಗಿ ವಿನಿಯೋಗಿಸಬೇಕಾಗಿತ್ತು. ಆದರೆ ಅದೇ ಸಂಪತ್ತು ಬಡ್ಡಿಯೊಂದಿಗೆ ಇಮ್ಮಡಿ ಮುಮ್ಮಡಿಯಾಗಿ ಹಿಂದಿರುಗಿ ಬಂದು ಆತ ಬಯಸುತ್ತಿದ್ದ ಮುಂದಿನ ಮೆಟ್ಟಿಲಿಗೆ ಏರಲು ಅನುವಾಗುತ್ತಿತ್ತು.

ಹೀಗೆ ಸಂಪತ್ತು ಘನತೆಯ ಬಿರುದುಗಳನ್ನು ಊರ್ಜಿತ ಗೊಳಿಸಿಕೊಳ್ಳುವುದ ರೊಂದಿಗೆ ಸಂಯೋಜಿತವಾಗಿದೆಯೆಂಬುದು ಚಿತ್ರದ ಒಂದು ಅಂಶಮಾತ್ರ. ಸ್ವತ್ತಿನ ಹಂಚಿಕೆ ಇಷ್ಟು ಸರಳ ರೂಪದಲ್ಲಿಲ್ಲ. ವಾಯುವ್ಯ ತೀರಪ್ರದೇಶದ ವ್ಯಕ್ತಿಯೊಬ್ಬ ಘನತೆಯ ಬಿರುದುಗಳನ್ನು, ಸಂಪತ್ತನ್ನು, ಲಾಂಛನಗಳನ್ನು ಮತ್ತು ವಿಶೇಷಾಧಿಕಾರ ಗಳನ್ನು ಇಷ್ಟು ಮಟ್ಟಿಗೆ ಬಯಸುತ್ತಿದ್ದುದರ ಹಿಂದೆ ಇದ್ದ ಅಂತಿಮಗುರಿಯು ಅವರ ಸಂಸ್ಕೃತಿಯ ಮುಖ್ಯ ಪ್ರೇರಕವನ್ನು ಎತ್ತಿ ತೋರುತ್ತದೆ. ಅವರು ಅವುಗಳನ್ನೆಲ್ಲಾ ತಮ್ಮ ವಿರೋಧಿಗಳನ್ನು ಅಪಮಾನಗೊಳಿಸಲೋಸ್ಕರ ನಡೆಸುತ್ತಿದ್ದ ಸ್ಪರ್ಧೆಯಲ್ಲಿ ಬಳಸಿಕೊಳ್ಳುತ್ತಿದ್ದರು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ತನ್ನ ಶಕ್ತಿಗನುಗುಣವಾಗಿ, ಸ್ವತ್ತಿನ ಹಂಚಿಕೆಯಲ್ಲಿ ತನ್ನ ವಿರೋಧಿಗಳನ್ನು ಹಿಂದೆ ಬೀಳಿಸಲು ಸದಾ ಹೆಣಗುತ್ತಿ ದ್ದನು. ಆಗ ತಾನೇ ಪ್ರಥಮ ಬಾರಿಗೆ ಸ್ವತ್ತನ್ನು ಕೊಡುಗೆಯಾಗಿ ಸ್ವೀಕರಿಸಿದ ಹುಡು ಗನು, ತನ್ನಿಂದ ಕೊಡುಗೆಯನ್ನು ಪಡೆದುಕೊಳ್ಳಲು ಮತ್ತೊಬ್ಬ ಯುವಕನನ್ನು ಆರಿಸು ತ್ತಿದ್ದನು. ಹಾಗೆ ಆಯ್ಕೆಯಾದ ಯುವಕನು ಆರಂಭದಲ್ಲಿಯೇ ಸೋಲನ್ನೊಪ್ಪಿ ಕೊಳ್ಳದೆ ಆ ಕೊಡುಗೆಯನ್ನು ನಿರಾಕರಿಸಲಾಗುತ್ತಿರಲಿಲ್ಲ. ಆದ್ದರಿಂದ ಅವನು ಆ ಕೊಡುಗೆಗೆ ಅದಕ್ಕೆ ಸಮನಾಗುವಷ್ಟು ಸ್ವತ್ತನ್ನು ಸೇರಿಸಬೇಕಾಗಿ ಬರುತ್ತಿತ್ತು. ಮರು ಪಾವತಿಯ ಸಮಯ ಬಂದಾಗ ಅವನಲ್ಲಿ ಮೊದಲ ಕೊಡುಗೆಯ ಎರಡರಷ್ಟನ್ನು ಬಡ್ಡಿಯಾಗಿ ಕೊಡುವ ಶಕ್ತಿಯಿಲ್ಲವಾದರೆ ಅವನು ಅಪಮಾನಿತನಾಗಿ, ಕೀಳುದರ್ಜೆಗೆ ಇಳಿಯುತ್ತಿದ್ದ. ಅವನ ವಿರೋಧಿಯ ಪ್ರತಿಷ್ಠೆ ಅಷ್ಟರ ಮಟ್ಟಿಗೆ ಏರುತ್ತಿತ್ತು. ಹೀಗೆ ಆರಂಭಗೊಂಡ ಸ್ಪರ್ಧೆ ಬಾಳಿನುದ್ದಕ್ಕೂ ನಡೆಯುತ್ತಿತ್ತು. ಅವನು ಯಶಸ್ವಿಯಾದ ನೆಂದರೆ ಹೆಚ್ಚು ಹೆಚ್ಚು ಬಲಶಾಲಿಗಳಾದ ವಿರೋಧಿಗಳೊಂದಿಗೆ, ಹೆಚ್ಚು ಹೆಚ್ಚು ಸ್ವತ್ತನ್ನು ಹೂಡಿ ಆಡುತ್ತಿದ್ದ. ಅದು ಒಂದು ಹೋರಾಟ. 'ನಾವು ಆಯುಧಗಳಿಂದ ಹೋರಾಡುವುದಿಲ್ಲ, ಸ್ವತ್ತಿನಿಂದ ಹೋರಾಡುತ್ತೇವೆ.' ಎಂದುಹೇಳುತ್ತಿದ್ದರು ಅವರು. ತಾಮ್ರ ಫಲಕವೊಂದನ್ನು ನೀಡಿದ ಒಬ್ಬ ವ್ಯಕ್ತಿ, ತನ್ನ ವಿರೋಧಿಯನ್ನು ಹೋರಾಟದಲ್ಲಿ ಸೋಲಿಸಿದಷ್ಟೇ ಮಟ್ಟಿಗೆ ಸೋಲಿಸಿದಂತಾಗುತ್ತಿತ್ತು. ಕ್ವಾಕಿಯೂಟಲ್‌ಗಳು ಎರ ಡನ್ನೂ ಸಮನಾಗಿ ಭಾವಿಸಿದ್ದರು ಅವರಲ್ಲಿ 'ರಕ್ತವನ್ನು ಮನೆಗೆ ತರುವುದು' ಎಂಬ

ನೃತ್ಯವೊಂದಿತ್ತು. ಆಗ ನೃತ್ಯಗಾರರು ಒಯ್ಯುತ್ತಿದ್ದ ಹೆವ್‌ಲಾಕ್ ಸಿಂಬಿಗಳು ಯುದ್ಧದಲ್ಲಿ ತೆಗೆದ ಶತ್ರುಗಳ ರುಂಡಗಳ ಪ್ರತೀಕಗಳೆಂದು ಭಾವಿಸಲಾಗುತ್ತಿತ್ತು. ಅವುಗಳನ್ನು ಅವು ಪ್ರತಿನಿಧಿಸುತ್ತಿದ್ದ ಶತ್ರುಗಳ ಹೆಸರು ಹೇಳುತ್ತಾ ಉರಿಗೆ ಎಸೆಯುತ್ತಿದ್ದರು. ಉರಿಯು ಎದ್ದು ಅವುಗಳನ್ನು ಸುಟ್ಟಾಗ ಕೋಲಾಹಲ ಮಾಡುತ್ತಿದ್ದರು. ವಾಸ್ತವವಾಗಿ ಆ ಸಿಂಬಿಗಳು ಅವರು ಕೊಟ್ಟಿದ್ದ ತಾಮ್ರ ಫಲಕವನ್ನು ಪ್ರತಿನಿಧಿಸುತ್ತಿದ್ದವು. ಅವರು ಹೇಳುತ್ತಿದ್ದ ಶತೃಗಳ ಹೆಸರುಗಳು, ಸ್ವತ್ತಿನ ವಿತರಣೆಯಲ್ಲಿ ಅವರು ಸೋಲಿಸಿದ್ದ ವಿರೋಧಿಗಳ ಹೆಸರುಗಳು.

ಎಲ್ಲ ಕ್ವಾಕಿಯೂಟಲ್ ಸಾಹಸಕಾರ್ಯಗಳ ಗುರಿ, ವಿರೋಧಿಗಳ ಎದುರು ತನ್ನ ಹಿರಿಮೆಯನ್ನು ತೋರಿಕೆ ಇಳ್ಳುವುದೇ ಆಗಿತ್ತು. ಈ ಶ್ರೇಷ್ಠತೆಯ ಆಕಾಂಕ್ಷೆಯನ್ನು ಅವರು ಅತ್ಯಂತ ನಿಸ್ಸಂಕೋಚವಾದ ರೀತಿಯಲ್ಲಿ ಪ್ರದರ್ಶಿಸುತ್ತಿದ್ದರು. ಇತಿಮಿತಿಯಿಲ್ಲದ ಆತ್ಮ ಪ್ರಶಂಸೆ ಮತ್ತು ಬಂದಿದ್ದವರೆಲ್ಲರ ಹೀಗಳಿಕೆಗಳಲ್ಲಿ ಇದು ವ್ಯಕ್ತಗೊಳ್ಳುತ್ತಲಿತ್ತು. ಇತರ ಸಂಸ್ಕೃತಿಗಳ ಮೌಲ್ಯ ಮಾಪನದಂತೆ ವಿವೇಚಿಸಿದರೆ, ಪೊಟ್ಲಾಚ್‌ಗಳಲ್ಲಿ ಅವರ ಯಜಮಾನರುಗಳು ಮಾಡುತ್ತಿದ್ದ ಭಾಷಣಗಳು ಲಜ್ಜೆಗೆಟ್ಟ ಮಹತ್ವೋನ್ಮಾದವಾಗಿ ತೋರುತ್ತದೆ.

ಇತರರನ್ನು ಅಪಮಾನಗೊಳಿಸುವ ಮಹಾ ಯಜಮಾನ ನಾನು.
ಇತರರನ್ನು ಅಪಮಾನಗೊಳಿಸುವ ಮಹಾ ಯಜಮಾನ ನಾನು.
ನಮ್ಮ ಯಜಮಾನ ಇತರರ ಮುಖಕ್ಕೆ ಅಪಮಾನವ ತರುವ.
ನಮ್ಮ ಯಜಮಾನ ಇತರರ ಮುಖಕ್ಕೆ ಈರ್ಷ್ಯೆಯ ತರುವ.
ನಮ್ಮ ಯಜಮಾನ ಈ ಜಗತ್ತಿನಲ್ಲಿ ಸದಾ ಮಾಡುತ್ತಿರುವ
ಕಾರ್ಯಗಳಿಂದ
ಇತರ ಜನರ ಮುಖಗಳನ್ನು ಮುಚ್ಚುತ್ತಿರುವನು.
ಇತರ ಎಲ್ಲ ಬಣಗಳಿಗೂ ಮೇಲಿಂದ ಮೇಲೆ ತೈಲದೌತಣ ನೀಡುತ.

o o o o

ನಾನೊಬ್ಬನೆ ಮಹಾವೃಕ್ಷ ನಾನೊಬ್ಬನೆ ಯಜಮಾನ!
ನಾನೊಬ್ಬನೆ ಮಹಾವೃಕ್ಷ ನಾನೊಬ್ಬನೆ ಯಜಮಾನ!
ಬಣಗಳೇ, ನೀವು ನನ್ನ ಅಧೀನರು.
ಬಣಗಳೇ ಮನೆಯ ಹಿತ್ತಲ ನಡುವೆ ಕುಳಿತಿರಿ.
ಬಣಗಳೇ, ಮೊದಲು ನಾನು ನಿಮಗ ಸ್ವತ್ತು ನೀಡುವೆ.
ಬಣಗಳೇ, ನಿಮ್ಮ ಹದ್ದು ನಾನು!

o o o o

ಬಣಗಳೇ, ನಿಮ್ಮ ಸ್ವತ್ತುಗಳ ಅಳತೆಗೋಲನ್ನು ತನ್ನಿರಿ. ತಾಮ್ರ ಫಲಕಗಳ ವಂಶಾ ನಿರ್ಮಾಪಕನಾದ ನಮ್ಮ ಯಜಮಾನ ನೀಡಲಿರುವ ಸ್ವತ್ತುಗಳನ್ನು ಎಣಿಸುವ ವ್ಯರ್ಥ ಯತ್ನವನ್ನವನು ಮಾಡಲಿ. ಹೊರಡಿ, ಅಲಭ್ಯ ಪೊಟ್ಲಾಚ್ ಕಂಭವನ್ನು ಎಬ್ಬಿಸಿ. ಇದೊಂದೇ ದಪ್ಪ ಮರ, ಬಣಗಳ ದಪ್ಪ ಬೇರು ಇದೊಂದೇ, ಈಗ ನಿಮ್ಮ ಯಜಮಾನ ಕೋಪಗೊಳ್ಳುವನು ಮನೆಯೊಳಗೆ.

ಅವನು ರೋಷದ ನರ್ತನ ಮಾಡುವನು,
ಆವೇಶದ ಕುಣಿತವ ಕುಣಿಯುವನು.

o o o o

ನಾನು ಯಾಕ್ವಾಟ್ಲೆನ್ಲಿಸ್, ನಾನು ಕ್ಲಾಡಿ. ನಾನು ಸೆವಿಡ್ ಕೂಡ; ನಾನೇ ಏಕೈಕ ಮಹಾವ್ಯಕ್ತಿ. ನಾನು ಹೊಗೆಯ ಒಡೆಯ. ನಾನು ಮಹಾ ಅತಿಥೇಯ. ಈ ಹೆಸರುಗಳನ್ನೆಲ್ಲ ನಾನು ಹೋದ ಹೋದಲ್ಲಿ ಅಲ್ಲಲ್ಲಿನ ಯಜಮಾನರುಗಳು ಮಗಳಂದಿರನ್ನು ಮದುವೆಯಾದಾಗ ಬಳುವಳಿಯಾಗಿ ಪಡೆದೆ. ಆದ್ದರಿಂದ ಕೀಳು ಯಜಮಾನರುಗಳು ಆಡುವ ಮಾತು ಕೇಳಿ ನನಗೆ ನಗು ಬರುತ್ತದೆ. ನನ್ನ ಹೆಸರನ್ನು ವಿರೋಧಿಸಿ ನನ್ನನ್ನು ಕೆಳಗಿಳಿಸಲು ಅವರು ವ್ಯರ್ಥ ಯತ್ನ ಮಾಡುತ್ತಿದ್ದಾರೆ. ನನ್ನ ಪೂರ್ವಜರಾದ ಯಜಮಾನರು ಮಾಡಿದುದನ್ನು ಯಾರು ತಾನೇ ಸರಿಗಟ್ಟುವರು? ಆದ್ದರಿಂದಲೇ ಪ್ರಪಂಚದ ಎಲ್ಲ ಬಣಗಳವರಿಗೂ ನಾನು ಗೊತ್ತು. ನನ್ನ ಪೂರ್ವಜನಾದ ಯಜಮಾನ ಮಾತ್ರ ದೊಡ್ಡ ಹಬ್ಬದಲ್ಲಿ ಸ್ವತ್ತುಗಳನ್ನು ನೀಡಿದ. ಇತರರು ಅವನನ್ನು ಅನುಕರಿಸಲು ಪ್ರಯತ್ನಿಸಬಲ್ಲರು ಅಷ್ಟೆ. ನಮ್ಮ ಕುಟುಂಬದ ಬೇರಾದ, ಯಜಮಾನನಾದ, ನಮ್ಮ ತಾತನನ್ನು ಅನುಕರಿಸಲು ಅವರು ಯತ್ನಿಸುತ್ತಾರೆ.

o o o o

ಬಣಗಳಲ್ಲಿ ಮೊದಲಿಗ ನಾನು,
ಬಣಗಳಲ್ಲಿ ಏಕೈಕ ನಾನು,
ಬಣಗಳ ಯಜಮಾನರು ಸ್ಥಳ, ಗ್ರಾಮದ ಯಜಮಾನರು ಮಾತ್ರ;
ಬಣಗಳಲ್ಲಿ ಏಕೈಕ ನಾನು,
ಆಹ್ವಾನಿತ ಯಜಮಾನರ ನಡುವೆ ನನಗೆ ಸಾಟಿಯಾದ
ಮಹತ್ವವನ್ನರಸುವೆ.
ಈ ಅತಿಥಿಗಳಲ್ಲಿಂತಹ ಒಬ್ಬರನೂ ನಾಕಾಣೆ,
ಮರು ಔತಣ ನೀಡರು ಅವರು,
ಪಾಪ ! ಈ ಬಣಗಳ ಯಜಮಾನರು, ಅನಾಥರು, ಬಡವರು
ತಾವೇ ತಮ್ಮನು ಹೀನೈಸಿಕೊಳ್ಳುವರು.

ಅತಿಥಿ ಮುಖ್ಯರಿಗೆ, ಬಣಗಳ ಯಜಮಾನರಿಗೆ ಈ ನೀರು ನಾಯಿಗಳ
ನೀಡುವವನು ನಾನು,
ಅತಿಥಿ ಮುಖ್ಯರಿಗೆ, ಬಣಗಳ ಯಜಮಾನರಿಗೆ ಈ ದೋಣಿಗಳ
ನೀಡುವವನು ನಾನು.

o o o o

ಈ ಆತ್ಮ ಪ್ರಶಂಸೆಯ ಗೀತೆಗಳನ್ನು ಯಜಮಾನನ ಪರಿವಾರದವರು ಎಲ್ಲ ದೊಡ್ಡ ಸಮಾರಂಭಗಳಲ್ಲೂ ಹಾಡುತ್ತಿದ್ದರು. ಇವು ಅವರ ಸಂಸ್ಕೃತಿಯ ಅತ್ಯಂತ ಪ್ರಮುಖ ಲಕ್ಷಣವನ್ನು ವ್ಯಕ್ತಗೊಳಿಸುತ್ತವೆ. ಅವರಲ್ಲಿ ಮನ್ನಣೆಗಳಿಸಿದ್ದ ಪ್ರೇರಣೆಗಳೆಲ್ಲ, ಹಿರಿಯ ಶ್ರೇಷ್ಠತೆಗಳನ್ನು ಗಳಿಸುವ ಇಚ್ಛೆಯ ಸುತ್ತ ಹೆಣೆದುಕೊಂಡಿದ್ದುವು. ಅವರ ಸಮಾಜ ವ್ಯವಸ್ಥೆ, ಅವರ ಆರ್ಥಿಕ ಸಂಸ್ಥೆಗಳು, ಮತ ಧರ್ಮ, ಹುಟ್ಟು ಸಾವು ಎಲ್ಲವೂ ಇದನ್ನು ವ್ಯಕ್ತಗೊಳಿಸುವ ಮಾರ್ಗಗಳಾಗಿದ್ದುವು. ಅವರು ಗೆಲುವನ್ನು ಭಾವಿಸಿದ್ದ ರೀತಿಯಲ್ಲಿ ಒಬ್ಬಾತನ ವಿರೋಧಿಗಳನ್ನು ಹತ್ತು ಜನರೆದುರಿಗೆ ಕಂಚೋದ್ಯ ಮಾಡಿ, ಧಿಕ್ಕರಿಸುವುದು ಒಂದು ಪ್ರಮುಖ ಅಂಗವಾಗಿತ್ತು. ಅವರ ಸಂಪ್ರದಾಯಕ್ಕೆ ಅನುಗುಣವಾಗಿ ಈ ವಿರೋಧಿಗಳು ಆಹ್ವಾನಿತರಾದ ಅತಿಥಿಗಳೂ ಆಗಿರುತ್ತಿದ್ದರು. ಪೊಟ್ಲಾಚ್‌ಗಳಲ್ಲಿ ಆತಿಥೇಯನ ಪಕ್ಷದವರು, ತಾಮ್ರಫಲಕವನ್ನು ಪಡೆಯಲಿರುವ ಯಜಮಾನನ ಆಳೆತ್ತರದ ಅಣಕಬೊಂಬೆಯನ್ನು ಕೊರೆದು ಇಡುತ್ತಿದ್ದರು. ಅದರಲ್ಲಿ ಮೇಲೆದ್ದು ಕಾಣುತ್ತಿದ್ದ ಎದೆಯ ಎಲುಬುಗಳು ಅವನ ದಾರಿದ್ರ್ಯವನ್ನೂ, ಮಂತ್ಯಾವುದಾದರೂ ಅಗೌರವಾತ್ಮಕವಾದ ಭಂಗಿಯು ಅವನ ಅಲ್ಪತನವನ್ನೂ ಸೂಚಿಸುತ್ತಿದ್ದುವು. ತನ್ನ ಅತಿಥಿಗಳನ್ನು ಧಿಕ್ಕರಿಸುವ ಹಾಡುಗಳನ್ನು ಆತಿಥೇಯ ಯಜಮಾನನು ಹಾಡುತ್ತಿದ್ದನು.

ವಾ, ತೊಲಗಾಚೆ,
ವಾ, ತೊಲಗಾಚೆ,
ನನ್ನ ಜೊತೆ ಯಜಮಾನರ ಬಡಿದು ನನ್ನ ಕೋಪವ ತೋರುವ
ಮುನ್ನ ಮುಖ ತಿರುಗಿಸು ಆಚೆ,
ಅವರದು ಬರಿ ಸೋಗು, ಒಂದೇ ತಾಮ್ರಪಲಕವನ್ನು ಮತ್ತೆ ಮತ್ತೆ
ಮಾರುವರು, ಬಣಗಳ ಕಿರಿಯಜಮಾನರಿಗೆ ನೀಡುವರದನು,
ಏಯ್ ಕರುಣೆಯನ್ನು ಕೋರಬೇಡಿ,
ಏಯ್ ಕರುಣೆಯನ್ನು ಕೋರಿ ವಿಫಲರಾಗಬೇಡಿ,
ಜೋಲು ನಾಲಗೆಯವರೆ, ಕೈಯೆತ್ತಿ ನೀವು
ನಮ್ಮನ್ನು ಹಸಿಸಿ, ತನ್ನ ಮನೆಯಲ್ಲಿ, ಪೊಟ್ಲಾಚ್ ಮನೆಯಲ್ಲಿ

ಅತಿಥೇಯ ಗೃಹದಲ್ಲಿ (ಸ್ವತ್ತುಗಳ ಪೆಟ್ಟಿಗೆಗಳನ್ನು)
ಬರಿದು ಮಾಡುವವನನ್ನು ಕಂಡು ನಾನು ನಗುವೆನು.
ಅವಹೇಳನ ಮಾಡುವೆನು.

○ ○ ○ ○

ನನ್ನ ನಗೆಗೆ ಕಾರಣವಿದು
ತೋಪವರೆಗೀತಾಗಿರುವವರನು ಕಂಡು ನನ್ನ ನಗೆಗೆ ಕಾರಣವಿದು,
ತನ್ನ ಪೂರ್ವಜರು ಯಜಮಾನರೆಂದು ಹೇಳಿಕೊಳ್ಳುವನು,
ಈ ಅಲ್ಪರಿಗೆ ಯಜಮಾನರಾಗಿದ್ದ ಪೂರ್ವಜರಿಲ್ಲ.
ಈ ಅಲ್ಪರಿಗೆ ತಾತನಿಂದ ಬಂದ ಹೆಸರಿಲ್ಲ.
ಈ ಅಲ್ಪರು ದುಡಿಯುವವರು,
ಈ ಅಲ್ಪರು ಶ್ರಮದಿಂದ ದುಡಿಯುವವರು.
ತಪ್ಪು ಮಾಡುವವರು, ಜಗತ್ತಿನ ಅಸಾಮರ್ಥ್ಯ ಜಾಗಗಳಿಂದ
ಬರುವವರಿವರು,
ಇದೇ ನನ್ನ ನಗೆಗೆ ಕಾರಣ.

○ ○ ○ ○

ಅಪಜಯಗೊಳಿಸುವ ಮಹಾ ಯಜಮಾನ ನಾನು
ಅಪಜಯಗೊಳಿಸುವ ಮಹಾ ಯಜಮಾನ ನಾನು
ಓ, ಇದುವರೆಗಿನ ರೀತಿಯಲ್ಲೇ ಮುಂದೆಯೂ ಹೋಗಿ,
ಈ ಜಗತ್ತಿನಲ್ಲಿ ತಿರತಿರ ತಿರುಗುವವರತ್ತ
ಶ್ರಮಪಟ್ಟು ದುಡಿದು, (ಸಾಲವನ್ನಿನಂತೆ) ತಮ್ಮ ಬಾಲ
ಕಳೆದುಕೊಳ್ಳುವವರನು ಮಾತ್ರ ಅವಹೇಳನ ಮಾಡುವೆನು
ನಿಜವಾದ ಮಹಾಯಜಮಾನನ ಅಡಿಯಲ್ಲಿರುವ ಯಜಮಾನರನು,
ಹಾ ! ಅವರ ಮೇಲೆ ಕರುಣೆ ಬೀರಿ ! ಒಣಗಿ ಹಿಂಜಿದ ಕೂದಲುಳ್ಳ
ಅವರ ತಲೆಯ ಮೇಲೆ ಇಷ್ಟು ಎಣ್ಣೆಯಿಕ್ಕಿ,
ಬಾಚದಿರುವ ಅವರ ತಲೆಯ ಮೇಲೆ,
ನಿಜವಾದ ಮಹಾಯಜಮಾನನ ಅಡಿಯಲ್ಲಿರುವ ಯಜಮಾನರನು
ಅವಹೇಳನ ಮಾಡುವೆನು,
ಇತರ ಜನರನು ಅವಮಾನ ಪಡಿಸುವ ಮಹಾ ಯಜಮಾನ ನಾನು.

ವಾಯುವ್ಯ ತೀರಪ್ರದೇಶದ ಇಡೀ ಆರ್ಥಿಕ ವ್ಯವಸ್ಥೆಯು ಈ ಗೀಳನ್ನು ಪೂರೈಸಲು ಅಳವಟ್ಟಿತ್ತು. ಒಬ್ಬ ಯಜಮಾನನು ತಾನು ಬಯಸಿದ ಗೆಲುವನ್ನು

ಸಾಧಿಸಲು ಎರಡು ಮಾರ್ಗಗಳಿದ್ದುವು. ತನ್ನ ವಿರೋಧಿಯು, ನಿಗದಿಯಾದ ಬಡ್ಡಿಯೊಂದಿಗೆ ಹಿಂತಿರುಗಿಸಲು ಸಾಧ್ಯವಾಗದಷ್ಟು ಸ್ವತ್ತನ್ನು ಅವನಿಗೆ ಕೊಡುಗೆಯಾಗಿ ನೀಡುವುದು ಒಂದು ದಾರಿ. ಸ್ವತ್ತನ್ನು ನಾಶಮಾಡುವುದು ಇನ್ನೊಂದು ದಾರಿ. ಎರಡು ವಿಧಾನಗಳಲ್ಲೂ ಕೊಡುಗೆಯನ್ನು ಮರುಪಾವತಿ ಮಾಡಬೇಕಾಗಿತ್ತು. ಮೊದಲ ಸಂದರ್ಭದಲ್ಲಿ ನೀಡಿದವನ ಸಂಪತ್ತು ಹೆಚ್ಚುತ್ತಿತ್ತು. ಎರಡನೆಯದರಲ್ಲಿ ಅವನು ತನ್ನ ಸರಕುಗಳನ್ನು ಕಳೆದುಕೊಳ್ಳುತ್ತಿದ್ದನು. ನಮಗೆ ಈ ಎರಡು ಕ್ರಮಗಳ ಪರಿಣಾಮ ಪರಸ್ಪರ ವಿರೋಧ ಧ್ರುವಗಳಾಗಿ ತೋರಿಬರುತ್ತದೆ. ಆದರೆ ಕ್ವಾಕಿಯುಟಲ್‌ರಿಗೆ ಅವೆರಡೂ ಸಹ ವಿರೋಧಿಗಳ ಬಗ್ಗು ಬಡಿಯುವ ಎರಡು ಪೂರಕ ಮಾರ್ಗಗಳಾಗಿದ್ದುವು. ಸಂಪೂರ್ಣವಾಗಿ ನಾಶಗೊಳಿಸುವುದು ಇಡೀ ಬಾಳಿನ ಅತ್ಯಂತ ಉಚ್ಚವಾದ ಹೆಮ್ಮೆಯ ಸಾಧನೆ. ತಾಮ್ರಫಲಕವನ್ನು ಮಾರಿದಂತೆ ಅದು ಸಹ ಒಂದು ಸವಾಲಾಗಿರುತ್ತಿತ್ತು. ಅದು ಯಾವಾಗಲೂ ಒಬ್ಬ ವಿರೋಧಿಯನ್ನು ಗುರಿಯಾಗಿಟ್ಟುಕೊಂಡಿರುತ್ತಿತ್ತು. ಅವನು ತನ್ನ ಮರ್ಯಾದೆಯನ್ನು ಉಳಿಸಿಕೊಳ್ಳಬೇಕಾದರೆ ಅಷ್ಟೇ ಬೆಲೆ ಬಾಳುತ್ತಿದ್ದ ಸರಕುಗಳನ್ನು ನಾಶಮಾಡಬೇಕಾಗಿ ಬರುತ್ತಿತ್ತು.

ಈ ಸರಕುಗಳ ನಾಶ ಹಲವು ರೂಪಗಳನ್ನು ತಳೆಯುತ್ತಿತ್ತು. ಭಾರೀ ಪ್ರಮಾಣದಲ್ಲಿ ಕ್ಯಾಂಡಲ್ ಮೀನಿನ ಎಣ್ಣೆಯನ್ನು ವ್ಯಯಗೊಳಿಸುತ್ತಿದ್ದ ದೊಡ್ಡ ಪೊಟ್ಲಾಚ್ ಹಬ್ಬಗಳು ನಾಶದ ಪೈಪೋಟಿಯೆಂದು ಪರಿಗಣಿತವಾಗಿದ್ದುವು. ಅತಿಥಿಗಳಿಗೆ ಈ ಎಣ್ಣೆಯನ್ನು ಪುಷ್ಕಳವಾಗಿ ಬಡಿಸುತ್ತಿದ್ದರು. ಉರಿಗೆ ಸುರಿಯುತ್ತಲೂ ಇದ್ದರು. ಅತಿಥಿಗಳು ಉರಿಯ ಬಳಿ ಕುಳಿತಿರುತ್ತಿದ್ದುದರಿಂದ ಎಣ್ಣೆ ಉರಿಯುವಾಗ ಬಹಳ ಮುಜುಗರ ಉಂಟುಮಾಡುತ್ತಿತ್ತು. ಅಂದರೆ ಅದು ಸಹ ಪೈಪೋಟಿಯ ಒಂದು ಭಾಗ. ಉರಿಯು ಧಗಧಗನೆ ಎದ್ದರೂ, ಮನೆಯ ತೊಲೆಗಳು ಹೊತ್ತಿಕೊಂಡರೂ, ಅತಿಥಿಗಳು ತಮ್ಮ ಮಾನ ಉಳಿಸಿಕೊಳ್ಳಬೇಕಾದರೆ ತಮ್ಮ ತಮ್ಮ ಜಾಗಗಳಲ್ಲಿ ಮಿಸುಕಾಡದೇ ಕುಳಿತಿರಬೇಕಾಗುತ್ತಿತ್ತು. ಆತಿಥೇಯನೂ ಸಹ ತನ್ನ ಮನೆಯು ನಾಶವಾಗುತ್ತಿದ್ದರೂ ಅತ್ಯಂತ ಅಲಕ್ಷ್ಯವನ್ನೇ ತೋರಬೇಕಾಗಿತ್ತು. ದೊಡ್ಡ ದೊಡ್ಡ ಯಜಮಾನರುಗಳು ತಮ್ಮ ಮನೆಯ ಛಾವಣಿಯಲ್ಲಿ ಒಬ್ಬ ಮನುಷ್ಯನ ಬೊಂಬೆಯನ್ನು ಕೊರೆಸಿರುತ್ತಿದ್ದರು. ಅದನ್ನು ವಮನಕಾರಿಯೆಂದು ಕರೆಯುತ್ತಿದ್ದರು. ಒಂದು ಬಾನಿಯನ್ನು ಸೂಕ್ತ ರೀತಿಯಲ್ಲಿ ಅಳವಡಿಸಿದ್ದು, ಆ ಬೊಂಬೆಯ ತೆರೆದ ಬಾಯಿನಿಂದ ಬೆಲೆಬಾಳುವ ಕ್ಯಾಂಡಲ್ ಮೀನೆಣ್ಣೆಯು ಧಾರಾಕಾರವಾಗಿ ಕೆಳಗೆ ಉರಿಯುತ್ತಿದ್ದ ಉರಿಗೆ ಸುರಿಯುತ್ತಿತ್ತು. ಅತಿಥಿಯಾಗಿ ಬಂದಿದ್ದ ಯಜಮಾನನು ತಾನು ಅದುವರೆಗೆ ನೀಡಿದ್ದ ಎಣ್ಣೆ ಔತಣಗಳನ್ನು ಅದು ಮೀರಿ

ದ್ದರೆ, ಆ ಕೂಡಲೇ ಆತಿಥೇಯಂ ಗೃಹವನ್ನು ಬಿಟ್ಟು ಹೊರಟುಬಿಡಬೇಕಾಗಿತ್ತು. ತನ್ನ ವಿರೋಧಿಯು ನೀಡಿದ ಔತಣಕ್ಕಿಂತ ಮಿಗಿಲೆನ್ನಿಸುವ ಮರು ಔತಣ ನೀಡಲು ಸಿದ್ಧತೆ ಮಾಡಿಕೊಳ್ಳಬೇಕಾಗಿತ್ತು; ಅವನು ತಾನು ಹಿಂದೆ ನೀಡಿದ್ದ ಔತಣಗಳಿಗೆ ಅದು ಸಾಟಿಯಾಗಿರಲಿಲ್ಲವೆಂದು ಭಾವಿಸಿದ್ದರೆ, ತನ್ನ ಆತಿಥೇಯನನ್ನು ಕುರಿತು ಧಿಕ್ಕಾರಗಳ ಮಳೆಗರೆದು ಬಿಡುತ್ತಿದ್ದ. ಆಗ ಆತಿಥೇಯನು ತನ್ನ ಶ್ರೇಷ್ಠತೆಯನ್ನು ನೆಲೆಗೊಳಿಸಿಕೊಳ್ಳಲು ಇತರ ಕ್ರಮಗಳನ್ನು ಕೈಗೊಳ್ಳಬೇಕಾಗಿ ಬರುತ್ತಿತ್ತು.

ಈ ಉದ್ದೇಶವನ್ನು ಸಾಧಿಸಲು ಆತಿಥೇಯನು, ನಾಲ್ಕು ದೋಣಿಗಳನ್ನು ಒಡೆದು ತರಲು ತನ್ನ ಚಾರರನ್ನು ಕಳುಹಿಸುತ್ತಿದ್ದನು. ಆ ತುಂಡುಗಳನ್ನು ಉರಿಗೆ ಒಟ್ಟುತ್ತಿದ್ದನು ಅಥವಾ ಒಬ್ಬ ಗುಲಾಮನನ್ನು ಕೊಲ್ಲುತ್ತಿದ್ದನು, ಇಲ್ಲವೇ ಒಂದು ತಾಮ್ರ ಫಲಕವನ್ನು ಮುರಿಯುತ್ತಿದ್ದನು. ಹೀಗೆ ಪೊಟ್ಲಾಚ್‌ಗಳಲ್ಲಿ ಮುರಿದ ತಾಮ್ರ ಫಲಕಗಳಿಂದ, ಅವುಗಳ ಒಡೆಯರಿಗೆ ಸಂಪತ್ತು ನಷ್ಟವಾದಂತೆ ಆಗುತ್ತಿರಲಿಲ್ಲ. ತಾಮ್ರ ಫಲಕಗಳ ನಾಶನದಲ್ಲಿ ಹಲವಾರು ಮಟ್ಟಗಳಿದ್ದವು. ಬಹಳ ಬೆಲೆ ಬಾಳುತ್ತಿದ್ದ ತನ್ನ ತಾಮ್ರ ಫಲಕವನ್ನು ಕೊಡುಗೆಯಾಗಿ ನೀಡಬೇಕಾದಂತಹ ಸಂದರ್ಭವಲ್ಲವೆಂದು ಆ ಯಜಮಾನ ಭಾವಿಸಿದರೆ ಅವನು ಆ ತಾಮ್ರ ಫಲಕದ ಒಂದು ತುಂಡನ್ನು ಕತ್ತರಿಸು ತ್ತಿದ್ದನು. ಆಗ ಅವನ ವಿರೋಧಿಯೂ ಅಷ್ಟೇ ಬೆಲೆ ಬಾಳುತ್ತಿದ್ದ ಇನ್ನೊಂದು ತಾಮ್ರಫಲಕದ ಸಮಭಾಗವನ್ನು ಮುರಿಯಬೇಕಾಗುತ್ತಿತ್ತು. ಸರಕುಗಳ ಮರು ಪಾವತಿಯು ಇಡೀ ತಾಮ್ರ ಫಲಕವನ್ನು ನೀಡಿದ್ದರೆ ಯಾವ ಕ್ರಮದಲ್ಲಿ ಜರುಗುತ್ತಿತ್ತೋ ಅದೇ ಕ್ರಮದಲ್ಲಿ ಜರುಗುತ್ತಿತ್ತು. ಹಲವಾರು ವಿರೋಧಿಗಳೊಂದಿಗಿನ ಪೈಪೋಟಿ ಯಲ್ಲಿ ಒಂದು ತಾಮ್ರ ಫಲಕದ ತುಂಡುಗಳು ತೀರದ ನೂರಾರು ಮೈಲಿಗಳ ದೂರದಲ್ಲಿ ಹಂಚಿ ಹೋಗಿರಬಹುದಾಗಿ ಬರುತ್ತಿತ್ತು. ಯಾವನಾದರೂ ಒಬ್ಬ ದೊಡ್ಡ ಯಜಮಾ ನನು ಹಾಗೆ ಹಂಚಿ ಹೋಗಿದ್ದ ತುಂಡುಗಳನ್ನು ಒಂದುಗೂಡಿಸುವಲ್ಲಿ ಯಶಸ್ವಿಯಾದರೆ ಅವನು ಆ ತುಂಡುಗಳನ್ನು ಬೆಸೆಸುತ್ತಿದ್ದ. ಆಗ ಆ ತಾಮ್ರಫಲಕದ ಮೌಲ್ಯ ಹಲ ವಾರು ಪಟ್ಟು ಹೆಚ್ಚುತ್ತಿತ್ತು.

ಕ್ವಾಕಿಯುಟಲ್ ಸಿದ್ಧಾಂತದ ಪ್ರಕಾರ, ತಾಮ್ರಫಲಕವನ್ನು ನಿಜವಾಗಿಯೂ ನಾಶ ಮಾಡುವುದು ಇದೇ ರೂಢಿಯ ರೂಪಾಂತರ ಮಾತ್ರ. ಹಿರಿಯ ಮುಖಂಡನು ತನ್ನ ಬಣವನ್ನು ಸಭೆ ಸೇರಿಸಿ, ಪೊಟ್ಲಾಚನ್ನು ಸಾರುತ್ತಿದ್ದನು. "ಮೇಲಾಗಿ ನನ್ನ ಪ್ರತಿಷ್ಠೆ ಎಷ್ಟೆಂದರೆ, ಈಗ ನಾನು ನನ್ನ ಮನೆಯಲ್ಲಿ ನರಳುತ್ತಿರುವ ಈ ನನ್ನ ತಾಮ್ರಫಲಕ ದಂಡಲಾಯುವನ್ನು ಉರಿಗೆ ಎಸೆದು ತೀರಿಸುತ್ತೇನೆ. ಇವಕ್ಕೆ ನಾನು ಎಷ್ಟೊಂದು ವೆಚ್ಚ ಮಾಡಿದ್ದೇನೆಂಬುದು ನಿಮಗೆಲ್ಲ ಗೊತ್ತು. ನಾಲ್ಕು ಸಾವಿರ ಕಂಬಳಿಗಳಿಗೆ ನಾನು ಇದನ್ನು ಕೊಂಡೆ. ನನ್ನ ವಿರೋಧಿಯನ್ನು ತುಳಿಯಲು ಈಗ ನಾನು ಇದನ್ನು ಮುರಿ

ಯುತ್ತೇನೆ. ನನ್ನ ಬಣದ ಜನರೇ, ಈ ನನ್ನ ಮನೆಯನ್ನು ನಿಮ್ಮ ಹೋರಾಟದ ಕಣವಾಗಿ ಮಾರ್ಪಡಿಸುತ್ತೇನೆ. ಮುಖ್ಯಸ್ಥರೇ, ಇಂತಹ ದೊಡ್ಡ ಪೊಟ್ಲಾಚ್ ನಡೆಯುತ್ತಿರುವುದು ಇದೇ ಮೊದಲು. ಸಂತೋಷಗೊಳ್ಳಿ, ಆನಂದ ಪಡೆಯಿರಿ." ಆ ಯಜಮಾನ ತನ್ನ ತಾಮ್ರ ಫಲಕವನ್ನು ಉರಿಗೆ ಒಪ್ಪಿಸುತ್ತಿದ್ದ; ಅದು ಬೂದಿಯಾಗುತ್ತಿತ್ತು. ಇಲ್ಲವೇ ಎತ್ತರವಾದ ಬೆಟ್ಟದ ಶಿಖರದಿಂದ ಸಮುದ್ರಕ್ಕೆ ಎಸೆಯುತ್ತಿದ್ದ. ಆಗ ಅವನ ಸಂಪತ್ತೆಲ್ಲ ದೋಚಿ ಹೋಗುತ್ತಿತ್ತು. ಆದರೆ ಅವನು ಎಣೆಯಿಲ್ಲದ ಪ್ರತಿಷ್ಠೆಯನ್ನು ಗಳಿಸಿದಂತಾಗುತ್ತಿತ್ತು. ಅವನು ವಿರೋಧಿಯೆದುರು ನಿರ್ಣಾಯಕವಾದ ಮೇಲುಗೈಯನ್ನು ಪಡೆಯುತ್ತಿದ್ದ. ಆ ವಿರೋಧಿಯೂ ಅಷ್ಟೇ ಬೆಲೆ ಬಾಳುವ ತಾಮ್ರಫಲಕವನ್ನು ನಾಶಮಾಡಬೇಕಾಗಿ ಬರುತ್ತಿತ್ತು. ಇಲ್ಲವೇ ಸೋಲೊಪ್ಪಿ ಪೈಪೋಟಿಯಿಂದ ಹಿಂತೆಗೆಯಬೇಕಾಗುತ್ತಿತ್ತು.

ಮುಖಂಡನ ವರ್ತನೆ ಒಂದು ಮಟ್ಟದ ಹೆಮ್ಮೆಯದೂ ನಿರಂಕುಶವಾದುದೂ ಆಗಿರಬೇಕೆಂದು ನಿರೀಕ್ಷಿಸಲಾಗುತ್ತಿತ್ತು. ಆದ್ದರಿಂದ ಮುಖಂಡನ ಪಾತ್ರವನ್ನು ಪೂರಾ ದಬ್ಬಾಳಿಕೆಯದಾಗಿ ಪರಿವರ್ತಿಸುವುದಕ್ಕೆ ಪ್ರತಿಯಾಗಿ ಸಾಂಸ್ಕೃತಿಕ ತಡೆಗಳ ಅವಶ್ಯಕತೆಯೂ ಇತ್ತು. ಅವನು ತನ್ನ ಜನರನ್ನು ದಟ್ಟ ದರಿದ್ರರನ್ನಾಗಿ ಮಾಡುವಂತಹ ರೀತಿಯಲ್ಲಿ ಸ್ವತ್ತನ್ನು ನಾಶಮಾಡುವ ಸ್ವತಂತ್ರವನ್ನು ಪಡೆದಿರಲಿಲ್ಲ. ಅವರನ್ನು ಹಾಳುಮಾಡುವಂತಹ ಪೈಪೋಟಿಗಳಲ್ಲಿ ಕೈಯಿಕ್ಕಲು ಸ್ವತಂತ್ರನಾಗಿರಲಿಲ್ಲ. ಅವನ ಕಾರ್ಯನಿರ್ವಹಣೆಯನ್ನು ಒಂದು ಮಿತಿಗೆ ಒಳಪಡಿಸಲು ರೂಪಿತವಾಗಿದ್ದ ಪರಿಣಾಮಕಾರಿ ಸಾಮಾಜಿಕ ನಿಯಂತ್ರಣವನ್ನು ಅವರು ನೈತಿಕ ನಿಷೇಧವೆಂದು ಹೆಸರಿಸುತ್ತಿದ್ದರು. ಆ ನಿಷೇಧವು ಏನೆಂದರೆ ಮಿತಿಮೀರಿ ಹೋಗಬಾರದೆಂಬುದು. ಮಿತಿ ಮೀರಿ ಹೋಗುವುದು ಯಾವಾಗಲೂ ಅಪಾಯಕಾರಿ. ಮುಖಂಡನು ತನ್ನ ಮಿತಿಯೊಳಗೆ ಇರಬೇಕಾಗಿತ್ತು. ಸಂಪ್ರದಾಯವು ವಿಧಿಸಿದ್ದ ಮಿತಿಯು, ನಾವು ಮುಂದೆ ನೋಡುವಂತೆ, ಹಲವು ವಿಪರೀತ ಮಾರ್ಗಗಳಿಗೂ ಅನುಮತಿ ನೀಡಿತ್ತು. ಆದರೆ ಮುಖಂಡನೊಬ್ಬ ತನ್ನ ಬಣದ ಬೆಂಬಲದ ಮೇಲಿನ ತನ್ನ ಅಧಿಕಾರವನ್ನು ಮಿತಿಮೀರಿ ಬಳಸದಂತೆ ಮಾಡಲು ತಡೆಗಳು ಸದಾ ಸಿದ್ಧವಾಗಿಯೇ ಇರುತ್ತಿದ್ದುವು. ಮೀರಿ ಹೋದವನನ್ನು ಅದೃಷ್ಟ ದೇವತೆಯು ತೊರೆದು ಬಿಡುವಳೆಂದು ಅವರು ನಂಬಿದ್ದರು. ಅಂತಹವನಿಗೆ ಅವನ ಅನುಯಾಯಿಗಳ ಬೆಂಬಲ ತಪ್ಪುತ್ತಿತ್ತು. ನಮಗೆ ಆ ಮಿತಿಗಳು ವಿಲಕ್ಷಣವಾಗಿ ತೋರಬಹುದಾದರೂ, ಸಮಾಜವು ಮಿತಿಗಳನ್ನು ವಿಧಿಸಿತ್ತು ಎಂಬುದು ಮುಖ್ಯ.

ವಾಯುವ್ಯ ತೀರ ಪ್ರದೇಶದಲ್ಲಿ ಮಹದವಕಾಶ ಪಡೆದಿದ್ದ ಮೇಲುಗೈಯಾಗಬೇಕೆಂಬ ಈ ಆಕಾಂಕ್ಷೆಯು ಅವರ ಪೊಟ್ಲಾಚ್ ವಿನಿಮಯಗಳಲ್ಲಿ ಅತ್ಯಂತ ವಿಶದವಾಗಿ ವ್ಯಕ್ತಗೊಂಡಿತ್ತು. ದೊಡ್ಡ ದೊಡ್ಡ ಪೊಟ್ಲಾಚ್‌ಗಳಿಗೆ ಒಂದು ವರ್ಷ ಅಥವಾ

ಆದಕ್ಕಿಂತ ಮುಂದಾಗಿಯೇ ಆಹ್ವಾನಗಳು ಕಳುಹಲ್ಪಡುತ್ತಿದ್ದವು. ದೂರದೂರದ ಬಣಗಳಿಂದ ದೋಣಿಗಟ್ಟಲೆ ಶ್ರೀಮಂತ ವರ್ಗದವರು ಬರುತ್ತಿದ್ದರು. ಅತಿಥೇಯನು ಆತ್ಮಪ್ರಶಂಸಾ ಭಾಷಣಗಳನ್ನು ನೀಡಿ ತನ್ನ ಹೆಸರಿನ ಮತ್ತು ತನ್ನಲ್ಲಿದ್ದ ತಾಮ್ರ ಫಲಕದ ಮಹತ್ವವನ್ನು ಸಾರಿ ತಾಮ್ರ ಫಲಕದ ಮಾರಾಟವನ್ನು ಆರಂಭಿಸುತ್ತಿದ್ದನು. ಪ್ರತಿ ಕೊಡುಗೆಯಾಗಿ ಸಿದ್ಧಪಡಿಸಿಕೊಂಡಿದ್ದ ಸ್ವತ್ತುಗಳನ್ನು ಹೊರತನ್ನಿರೆಂದು ತನ್ನ ಅಥಿತಿಗಳಿಗೆ ಸವಾಲು ಹಾಕುತ್ತಿದ್ದನು. ಆತಿಥಿಗಳು ಹೆಚ್ಚು ಆಡಂಬರ ತೋರದೆ, ಮೊದಲಿಗೆ ಅದರ ನಿಜವಾದ ಬೆಲೆಯ ಬಹುಕಡಿಮೆ ಅಂಶದಿಂದ ತೊಡಗಿ, ಕ್ರಮೇಣ ಏರಿಸುತ್ತ ಹೋಗುತ್ತಿದ್ದರು. ಮಾರುವವನ ಪಕ್ಷದವರು ಹೆಚ್ಚಿನ ಬೆಲೆಯ ಪ್ರತಿ ಪ್ರಸ್ತಾಪವನ್ನೂ ಹೀಗಳೆಯುತ್ತಿದ್ದರು. 'ಮುಗಿಸಿಬಿಟ್ಟೆ ಎಂದು ತಿಳಿದೆಯೋ ?. ಈ ಮಹಾ ತಾಮ್ರಫಲಕವನ್ನು ಕೊಳ್ಳಲು ನಿಶ್ಚಯಿಸಿದಾಗ ನೀನು ಮುಂಜಾಗರೂಕತೆ ವಹಿಸಲಿಲ್ಲ. ನೀನು ಇನ್ನೂ ಮುಗಿಸಿಲ್ಲ. ಹೆಚ್ಚಿಗೆ ಕೊಡುತ್ತಿ. ಇದರ ಬೆಲೆ ನನ್ನ ಪ್ರತಿಷ್ಠೆಗೆ ಅನುಗುಣವಾಗಿರುತ್ತದೆ. ನಾನು ನಾಲ್ಕು ನೂರು ಹೆಚ್ಚಿಗೆ ಕೇಳುತ್ತೇನೆ.' 'ಕೊಳ್ಳುವವನು 'ಸರಿ ಯಜಮಾನ. ನಿನಗೆ ದಯೆಯಿಲ್ಲ' ಎಂದು ಉತ್ತರ ನೀಡಿ, ತನ್ನಿಂದ ಕೇಳಿದ್ದಷ್ಟು ಕಂಬಳಿಗಳನ್ನು ತರಲು ಜನ ಕಳುಹಿಸುತ್ತಿದ್ದನು. ಅವನ ಕಡೆಯ ಕಂಬಳಿಗಳ ಎಣಿಕೆಗಾರನು ಗಟ್ಟಿಯಾಗಿ ಅವುಗಳನ್ನು ಎಣಿಸುತ್ತಾ ನೆರೆದಿದ್ದ ಬಣಗಳನ್ನು ಕುರಿತು 'ಓ ಬಣಗಳೇ, ನೀವು ಕಂಬಳಿಕೊಳ್ಳುವ ಬಗೆಯನ್ನು ಕಂಡಿರಾ ? ತಾಮ್ರ ಫಲಕಗಳನ್ನು ಕೊಳ್ಳುವುದರಲ್ಲಿ ನಮ್ಮ ಜನ ಗಟ್ಟಿಗರು. ನಿಮ್ಮ ಹಾಗಲ್ಲ. ನಾನು ಇಲ್ಲಿ ತಂದಿರುವ ರಾಶಿಯಲ್ಲಿ ಸಾವಿರದ ಆರುನೂರು ಕಂಬಳಿಗಳಿವೆ. ಕ್ವಾಕಿ ಯೂಟಲ್ ಮುಖಂಡರೇ, ತಾಮ್ರಫಲಕಗಳನ್ನು ಕೊಳ್ಳಲು ಅರಿಯದವರಿಗೆ ನಾನು ಹೇಳುತ್ತಿರುವುದು.' ಅವನು ಮಾತು ಮುಗಿಸಿದ ಕೂಡಲೇ ಅವನ ಯಜಮಾನ ಎದ್ದು ನಿಂತು ಜನರನ್ನು ಕುರಿತು ಹೀಗೆ ಹೇಳುತ್ತಿದ್ದ. "ಈಗ ನೀವು ನನ್ನ ಹೆಸರನ್ನು ಕಂಡಿರಿ. ಇದು ನನ್ನ ಹೆಸರು. ಇದು ನನ್ನ ಹೆಸರಿನ ತೂಕ, ಕಂಬಳಿಗಳ ಈ ಬೆಟ್ಟ ನಮ್ಮ ಸ್ವರ್ಗವನ್ನೇ ತಾಗುತ್ತದೆ. ನನ್ನ ಹೆಸರು ಕ್ವಾಕಿಯೂಟಲ್ ಹೆಸರು. ಬಣಗಳೇ, ನೀವು ನಮ್ಮಂತೆ ನಡೆಯಲಾರಿರಿ. ನೋಡುತ್ತಾ ಇರಿ, ಮುಂದೆ ನನ್ನಿಂದ ಕೊಂಡು ಕೊಳ್ಳಿ ಎಂದು ನಿಮ್ಮನ್ನು ಕೇಳುವ ದಿನ ಬರುತ್ತದೆ. ಆದರೆ ಬಣಗಳೇ, ನೀವು ನನ್ನಿಂದ ಕೊಳ್ಳುವ ದಿನ ಬರುತ್ತದೆಂದು ನಾನು ಭಾವಿಸಿಲ್ಲ".

ಇಷ್ಟಾದರೂ ತಾಮ್ರಫಲಕದ ಮಾರಾಟ ಆಗತಾನೇ ಆರಂಭವಾಗಿದ್ದಂತೆ. ಮಾರುವ ಪಕ್ಷದ ಒಬ್ಬ ಯಜಮಾನ ಎದ್ದು ನಿಂತು ತನ್ನ ಪ್ರತಿಷ್ಠೆ, ತನ್ನ ವಿಶೇಷಾಧಿಕಾರಗಳನ್ನು ಕುರಿತು ಹೊಗಳಿ ಕೊಳ್ಳುತ್ತಿದ್ದನು. ತನ್ನ ಪೌರಾಣಿಕ ಪೀಳಿಗೆಯನ್ನು ಕುರಿತು ಹೇಳಿ, "ತಾಮ್ರಫಲಕಗಳನ್ನು ಹೇಗೆ ಕೊಳ್ಳುವುದು ಎಂಬುದು ನನಗೆ

ಗೊತ್ತು. ಯಜಮಾನ, ನೀನು ಶ್ರೀಮಂತನೆಂದು ಸದಾ ಹೇಳಿಕೊಳ್ಳುತ್ತಿರುವೆ. ಈ ತಾಮ್ರಫಲಕದ ಬೆಲೆ ಏನು ಎಂದು ತಿಳಿದೆ ? ಒಂದು ಸಾವಿರ ಕಂಬಳಿ ಹೆಚ್ಚಿಗೆ ಕೊಡು ಯಜಮಾನ" ಎಂದು ಕೇಳುತ್ತಿದ್ದನು. ಈ ರೀತಿಯಲ್ಲಿ ತಾಮ್ರಫಲಕದ ಬೆಲೆ ಏರುತ್ತಾ ಹೋಗುತ್ತಿತ್ತು. ಅದರ ಬೆಲೆಯೆಂದು ಮೂರು ಸಾವಿರದ ಇನ್ನೂರು ಕಂಬಳಿಗಳನ್ನು ನೀಡುವವರೆಗೆ ಹೋಗುತ್ತಿತ್ತು. ಅನಂತರ ಕೊಂಡವನಿಂದ ಆ ಕಂಬಳಿಗಳನ್ನು ಇಡಲು ಬೇಕಾಗುವ ಪೆಟಾರಿಗಳನ್ನು ಕೇಳುತ್ತಿದ್ದರು. ಅವುಗಳನ್ನೂ ತಂದು ನೀಡುತ್ತಿದ್ದರು. ಆ ಬಳಿಕ 'ತಾಮ್ರಫಲಕದ ಮಾಲೀಕನಿಗೆ ಭೂಷಣವಾಗಿ' ಹೆಚ್ಚಿನ ಕೊಡುಗೆಗಳನ್ನು ನೀಡಬೇಕಾಗುತ್ತಿತ್ತು. ಕೊಂಡವನು ಅದಕ್ಕೆ ಒಪ್ಪಿ, ಹೀಗೆ ಹೇಳಿ ಕೊಡುತ್ತಿದ್ದನು. "ಮುಖಂಡರೇ ಕೇಳಿ. ಐವತ್ತು ಕಂಬಳಿಗಳ ಬೆಲೆ ಬಾಳುವ ಈ ದೋಣಿ ಐವತ್ತು ಕಂಬಳಿಗಳ ಬೆಲೆ ಬಾಳುವ ಈ ದೋಣಿ, ಐವತ್ತು ಕಂಬಳಿಗಳ ಬೆಲೆ ಬಾಳುವ ಈ ದೋಣಿ, ಐವತ್ತು ಕಂಬಳಿಗಳ ಬೆಲೆ ಬಾಳುವ ಈ ದೋಣಿ, ಮತ್ತು ಈ ಇನ್ನೂರು ಕಂಬಳಿಗಳು ನಿಮ್ಮ ಭೂಷಣಕ್ಕೆ. ಈಗ ಒಟ್ಟು ನಾಲ್ಕು ಸಾವಿರದ ಕಂಬಳಿಗಳಾದುವು. ಮುಗಿಯಿತು." ಅನಂತರ ಅದಕ್ಕೆ ತಾಮ್ರಫಲಕದ ಒಡೆಯ, " ಈ ಬೆಲೆಯನ್ನು ನಾನು ಒಪ್ಪುತ್ತೇನೆ." ಎಂದು ಉತ್ತರ ಕೊಡುತ್ತಿದ್ದ. ಆದರೆ ಅದು ಇನ್ನೂ ಮುಗಿದಿರುತ್ತಿರಲಿಲ್ಲ. ಈಗ ಕೊಂಡವನು ತಾಮ್ರಫಲಕದ ಮಾಲೀಕನನ್ನು ಕುರಿತು, "ಆಹಾ ಮುಖಂಡನೇ ಈ ಬೆಲೆಯನ್ನು ನೀನು ಒಪ್ಪುವೆಯಾ ? ನೀನು ಬಲುಬೇಗ ಬೆಲೆ ಒಪ್ಪಿಬಿಟ್ಟೆ. ನಾವು ಬಹಳ ಬಡವರಾಗಿರಬೇಕು ನಿನ್ನ ದೃಷ್ಟಿಯಲ್ಲಿ. ನಾನು ಕ್ವಾಕಿಯೂಟಲ್. ಪ್ರಪಂಚದ ನಿಮ್ಮ ಎಲ್ಲ ಬಣಗಳೂ ಯಾರಿಂದ ಹೆಸರು ಪಡೆದುಕೊಂಡುವೋ ಅವರಿಗೆ ಸೇರಿದವನು ನಾನು. ನಾನು ನಿನ್ನೊಂದಿಗೆ ವ್ಯಾಪಾರ ಮುಗಿಸುವ ಮೊದಲೇ ಬಿಟ್ಟು ಕೊಡುತ್ತೀಯಲ್ಲ. ನೀನು ಸದಾ ನಮ್ಮ ಕೆಳಗೆ ಇರಬೇಕು." ಎಂದು ಹೇಳುತ್ತಿದ್ದನು. ತನ್ನ ಚಾರರನ್ನು ಕಳುಹಿಸಿ ತನ್ನ ಸಹೋದರಿಯನ್ನೂ ರಾಜಕುಮಾರಿಯನ್ನೂ ಕರೆಸುತ್ತಿದ್ದನು. ಹೆಚ್ಚುವರಿಯಾಗಿ ಇನ್ನೂರು ಕಂಬಳಿಗಳನ್ನು "ನಮ್ಮ ರಾಜಕುಮಾರಿಯ ಬಟ್ಟೆಗಳು." ಎಂದು ಕೊಡುತ್ತಿದ್ದನು. ಇವು ಐದನೆಯ ಸಾವಿರದಲ್ಲಿ ಸೇರಿದ ಮೊದಲ ಇನ್ನೂರು ಕಂಬಳಿಗಳು.

ತಾಮ್ರಫಲಕಗಳನ್ನು ಕೊಳ್ಳುತ್ತಿದ್ದುದೂ ಹೆಚ್ಚು ಕಡಮೆ ಇದೆ ಕ್ರಮದಲ್ಲಿ. ದೊಡ್ಡ ದೊಡ್ಡ ಮುಖಂಡರುಗಳ ನಡುವಣ ಸ್ಪರ್ಧೆಯಲ್ಲಿ ಕಂಡುಬರುತ್ತಿದ್ದ ಆವೇಗ ಮತ್ತು ತೀವ್ರ ಪೈಪೋಟಿಗಳಲ್ಲಿ ಆ ಸಂಸ್ಕೃತಿಯ ತಿರುಳು ಸ್ಪಷ್ಟವಾಗುತ್ತಿತ್ತು. ಕ್ವಾಕಿಯೂಟಲ್‌ಗಳ ಮುಖಂಡರಾಗಿದ್ದ ಫಾಸ್ಟ್‌ರನ್ನರ್ ಮತ್ತು ತ್ರೋ–ಅವೇ ಅವರುಗಳ ನಡುವಿನ ಘರ್ಷಣೆಯ ಕತೆ ಇಂತಹ ಪೈಪೋಟಿಗಳು ಹೇಗೆ ಬಹಿರಂಗ ಹಗೆತನವಾಗುತ್ತಿದ್ದುವು ಎಂಬುದನ್ನು ತೋರಿಸುತ್ತದೆ. ಆ ಇಬ್ಬರು ಯಜಮಾನರು ಸ್ನೇಹಿತರಾಗಿ

ದ್ದರು. ತ್ರೋ–ಅವೇಯು ಒಮ್ಮೆ ತನ್ನ ಮಿತ್ರನ ಕುಲವನ್ನು ಸಾಲಮನ್ ಪೊಟ್ಟೆಗಳ ಔತಣಕ್ಕೆ ಆಹ್ವಾನಿಸಿದನು. ಕೊಬ್ಬು ಮತ್ತು ಪೊಟ್ಟೆಗಳನ್ನು ಸಾಕಷ್ಟು ಚೊಕ್ಕಟ ಮಾಡದ ದೋಣಿಯಲ್ಲಿ ಬಡಿಸಲಾಗಿತ್ತು. ಅತಿಥಿಗಳ ಗೌರವಕ್ಕೆ ಇದು ಕಡಮೆಯಾಯಿತು. ತಿಂಡಿಯೂ ಶುದ್ಧವಾಗಿರಲಿಲ್ಲ. ಫಾಸ್ಟ್–ರನ್ನರ್ ಇದು ದೊಡ್ಡ ಅಪಮಾನವೆಂದು ಬಗೆದ. ಅವನು ಊಟವನ್ನು ಮುಟ್ಟದೇ, ತನ್ನ ಮುಖಕ್ಕೆ ಕಪ್ಪು ಕರಡಿಯ ಕಂಬಳಿ ಎಳೆದುಕೊಂಡು ಬಿದ್ದುಕೊಂಡ. ಅವನು ಅಸಮಾಧಾನಗೊಂಡುದನ್ನು ಕಂಡ ಅವನ ನಂಟರು ತಾವೂ ಅವನಂತೆಯೇ ಮಾಡಿದರು. ಆತಿಥೇಯನು ಬಂದು ಊಟ ಮಾಡಿರೆಂದು ಕೇಳಿಕೊಂಡನು. ಆಗ ಫಾಸ್ಟ್–ರನ್ನರ್ ತನ್ನ ಮಾತುಗಾರನ ಮೂಲಕ ತಮಗಾದ ಅಪಚಾರದ ಬಗ್ಗೆ ದೂರು ಹೇಳಿದ. 'ಅಯ್ಯಾ ಕೊಳಕು ಮನುಷ್ಯ, ನಮ್ಮ ಮುಖಂಡನು ನೀನು ನೀಡಿರುವ ಈ ಅಶುದ್ಧ ವಸ್ತುಗಳನ್ನು ತಿನ್ನುವುದಿಲ್ಲ.' ತ್ರೋ–ಅವೇ ತಿರಸ್ಕಾರದಿಂದ ಉತ್ತರವಿತ್ತ. 'ನೀನು ಹೇಳಿದ ಹಾಗೇ ಆಗಲಿ. ನೀನೇನೋ ಮಹಾ ಸಂಪತ್ತುಳ್ಳವನಂತೆ ಮಾತನಾಡುತ್ತಿರುವೆ.' ಆದಕ್ಕೆ ಫಾಸ್ಟ್–ರನ್ನರ್ 'ಹೌದೇ ಹೌದು. ನಾನು ಬಹಳ ಸಂಪತ್ತುಳ್ಳವನೇ ಹೌದು' ಎಂದು ಪ್ರತಿಉತ್ತರ ನೀಡಿದ. ಅವನು ತನ್ನ ಚಾರರನ್ನು ಕಳುಹಿ ಸಮುದ್ರ ರಾಕ್ಷಸ (ಸೀಮಾನ್ಸ್ಟರ್) ಎಂಬ ತನ್ನ ತಾಮ್ರಫಲಕವನ್ನು ತರ ಹೇಳಿದ. ಅವರು ಅದನ್ನು ತಂದುಕೊಟ್ಟರು. 'ತನ್ನ ವಿರೋಧಿಯ ಉರಿಯನ್ನು ಆರಿಸಲು' ಅವನು ಅದನ್ನು ಉರಿಗೆ ತಳ್ಳಿದ. ತ್ರೋಅವೇಯು ತನ್ನ ತಾಮ್ರಫಲಕವನ್ನು ತರಲು ಜನರನ್ನು ಕಳುಹಿಸಿದ. ಚಾರರು ಓರೆ ನೋಟ (ಲುಕ್ಡ್ ಅಟ್ ಅಸ್ಕನ್ಸ್) ಎಂಬ ತಾಮ್ರಫಲಕವನ್ನು ತಂದಿತ್ತರು. ಅವನು 'ಉರಿಯನ್ನು ಉರಿಸುತ್ತಲೇ ಇರಲು' ಅದನ್ನು ಔತಣದ ಮನೆಯ ಉರಿಗೆ ಎಸೆದ. ಆದರೆ ಫಾಸ್ಟ್–ರನ್ನರನ ಬಳಿ ಕೊಕ್ಕರೆ (ಕ್ರೇನ್) ಎಂಬ ಇನ್ನೊಂದು ತಾಮ್ರಫಲಕವಿತ್ತು. ಅವನು ಅದನ್ನೂ ತರಿಸಿ ಉರಿಯನ್ನು 'ಬೂದಿಮಾಡಲು' ಅದನ್ನು ಉರಿಗೆ ಇಟ್ಟ. ತ್ರೋ–ಅವೇಯ ಬಳಿ ಇನ್ನೊಂದು ತಾಮ್ರಫಲಕವಿರಲಿಲ್ಲ. ಅವನು ಉರಿಯನ್ನು ಉರಿಸುತ್ತ ಇರಲು ಇಂಧನ ಒದಗಿಸಲಾಗಲಿಲ್ಲ. ಅವನು ಮೊದಲ ಸುತ್ತಿನಲ್ಲಿ ಸೋತು ಹೋದ.

ಮೂರನೆಯ ದಿನ ಫಾಸ್ಟ್ರನ್ನರನು ಮರು ಔತಣ ಏರ್ಪಡಿಸಿ, ತ್ರೋ–ಅವೇಯನ್ನು ಆಹ್ವಾನಿಸಿಸಲು ತನ್ನ ಚಾರರನ್ನು ಕಳುಹಿಸಿದನು. ಈ ನಡುವೆ ತ್ರೋ–ಅವೇಯು ಮತ್ತೊಂದು ತಾಮ್ರಫಲಕವನ್ನು ಎರವು ಪಡೆಯುವಷ್ಟು ಆಸ್ತಿಯನ್ನು ಅಡವು ಇಟ್ಟಿದ್ದನು. ಆದ್ದರಿಂದ ಅವರಿಗೆ ಏಡಿಕಾಯಿ ಮತ್ತು ಕೊಬ್ಬಿನ ಊಟ ಬಡಿಸಿದಾಗ, ಹಿಂದಿನ ದಿನ ಫಾಸ್ಟ್ ರನ್ನರನು ಹೇಳಿದ್ದ ಮಾತುಗಳನ್ನೇ ಹೇಳಿ ಊಟ ಮಾಡಲು ನಿರಾಕರಿಸಿ, ಹಗಲು ಮುಖ (ಡೇ ಫೇಸ್) ಎಂಬ ತಾಮ್ರ ಫಲ

ಕವನ್ನು ತರಲು ತನ್ನ ಜನರನ್ನು ಕಳುಹಿದನು. ಅದರಿಂದ ತನ್ನ ಶತ್ರುವಿನ ಉರಿಯನ್ನು ಆರಿಸಿದನು. ಆಗ ಫಾಸ್ಟ್ ರನ್ನರನು ಎದ್ದು ನಿಂತು 'ಈಗ ನನ್ನ ಉರಿ ಆರಿತು. ಆದರೆ ತಾಳಿ, ಕುಳಿತುಕೊಳ್ಳಿ, ಈಗ ನಾನು ಏನು ಮಾಡುತ್ತೇನೋ ನೋಡಿ' ಎಂದು ಹೇಳಿದನು. ಅವನು ಕೋಡಂಗಿ ನೃತ್ಯದ ಆವೇಶವನ್ನು ತಳೆದನು. ಕಾರಣ ಅವನು ಆ ಸಂಘದ ಸದಸ್ಯ. ತನ್ನ ಮಾವನ ನಾಲ್ಕು ದೋಣಿಗಳನ್ನು ನಾಶಮಾಡಿದನು. ಅವನ ಭಟರು ಅವುಗಳನ್ನು ಔತಣ ಗೃಹಕ್ಕೆ ತಂದು, ಉರಿಗೆ ಒಟ್ಟಿದರು. ತ್ರೊ-ಅವೇಯು ತಾಮ್ರಫಲಕದಿಂದ ತಮ್ಮ ಉರಿ ಆರಿದ ಅಪಮಾನವನ್ನು ತೊಳೆದುಕೊಂಡರು. ಏನೇ ಆದರೂ ತಡೆದುಕೊಂಡು ಅವನ ಅತಿಥಿಗಳು ಕುಳಿತಿರಲೇಬೇಕಾಗಿತ್ತು; ಇಲ್ಲವೋ ಸೋತೆವೆಂದು ಒಪ್ಪಿಕೊಳ್ಳಬೇಕಾಗಿ ಬರುತ್ತಿತ್ತು. ತ್ರೋ-ಅವೇಯ ಕರಿಯ ಕರಡಿಯ ಕಂಬಳಿ ಸುಟ್ಟಿತು. ಕಾಲ ಬಳಿ ಕಂಬಳಿಗೆ ಅಂಟಿಕೊಂಡಿದ್ದ ಚರ್ಮ ಬೊಬ್ಬೆಯೆದ್ದಿತು. ಆದರೆ ಅವನು ಪಟ್ಟು ಬಿಡಲಿಲ್ಲ. ಉರಿ ಇಳಿಮುಖವಾದಾಗ, ಏನೂ ಆಗಲಿಲ್ಲವೇನೋ ಎಂಬಂತೆ ಅವನು ಎದ್ದು ತನ್ನ ವಿರೋಧಿಯ ಅತಿರೇಕದತ್ತ ಪೂರಾ ಅಲಕ್ಷ್ಯ ತೋರಿಸಲು ಊಟಮಾಡತೊಡಗಿದನು.

ಈಗ ತ್ರೋ-ಅವೇ ಮತ್ತು ಫಾಸ್ಟ್-ರನ್ನರ್‌ಗಳ ನಡುವೆ ಬಹಿರಂಗ ದ್ವೇಷ ತೊಡಗಿತು. ಅವರು ತಮ್ಮ ಲೌಕಿಕ ಅಧಿಕಾರಗಳಿಗೆ ಬದಲು ಮತಧರ್ಮೀಯ ವಿಶೇಷಾಧಿಕಾರಗಳನ್ನು ಪ್ರಯೋಗಿಸಿ, ರಹಸ್ಯ ಸಂಘಗಳಿಗೆ ಪರಸ್ಪರ ವಿರೋಧವಾದಿ ದೀಕ್ಷೆ ನೀಡಲು ನಿರ್ಧರಿಸಿಕೊಂಡರು. ತ್ರೊ-ಅವೇಯು ಮಾಗಿ ಹಬ್ಬವನ್ನೇರ್ಪಡಿಸಲು ರಹಸ್ಯ ಯೋಜನೆ ಹಾಕಿದ. ಅದನ್ನು ತನ್ನ ಆಟಗಾರರ ಮೂಲಕ ತಿಳಿದು ಫಾಸ್ಟ್-ರನ್ನರನು ಅವನನ್ನು ಮೀರಿಸಲು ನಿರ್ಧರಿಸಿದ. ತ್ರೋ-ಅವೇ ಒಬ್ಬ ಮಗ ಹಾಗೂ ಒಬ್ಬ ಮಗಳಿಗೆ ದೀಕ್ಷೆ ನೀಡಿಸಿದರೆ, ಫಾಸ್ಟ್-ರನ್ನರ್ ಇಬ್ಬರು ಗಂಡುಮಕ್ಕಳಿಗೆ, ಇಬ್ಬರು ಮಗಳಂದಿರಿಗೆ ದೀಕ್ಷೆ ನೀಡಿಸಿದನು. ಈಗ ಫಾಸ್ಟ್-ರನ್ನರನು ತನ್ನ ವಿರೋಧಿಯನ್ನು ಹಿಂದೆ ಬೀಳಿಸಿದಂತಾಗಿತ್ತು. ಅವನ ನಾಲ್ವರು ಮಕ್ಕಳನ್ನೂ ಏಕಾಂತದಿಂದ ಕರೆತಂದಾಗ, ನೃತ್ಯದ ಭರಾಟೆ ಜೋರಿನಲ್ಲಿತ್ತು. ಆಗ ಕೋಡಂಗಿ ನೃತ್ಯಗಾರರು ಮತ್ತು ಬೂದು ಕರಡಿ ಸಂಘದವರಿಂದ ಒಬ್ಬ ಗುಲಾಮನನ್ನು ಕಡಿಸಿ, ನೆತ್ತಿಯ ಓಡನ್ನು ಕೀಳಿಸಿದನು. ಮಾಂಸವನ್ನು ಕ್ಯಾನಿಬಲರಿಗೆ ತಿನ್ನಿಸಿ, ನೆತ್ತಿಯ ಓಡನ್ನು ತ್ರೋ-ಅವೇಗೆ ನೀಡಿದನು. ತ್ರೋ-ಅವೇಗೆ ಈ ಸಾಹಸ ಕೃತ್ಯವನ್ನು ಸರಿಗಟ್ಟಲು ಆಗಲಿಲ್ಲ.

ಫಾಸ್ಟ್-ರನ್ನರನು ಇನ್ನೂ ಒಂದು ವಿಜಯವನ್ನು ಗಳಿಸಿದನು. ಅವನ ಮಗಳಂದಿರನ್ನು ಯುದ್ಧ ನೃತ್ಯಗಾರರಾಗಿ ಮಾಡಲು ದೀಕ್ಷೆ ನೀಡುತ್ತಿದ್ದರು. ಅವ

ರಿಬ್ಬರೂ ತಮ್ಮನ್ನು ಉರಿಗೆ ಹಾಕಲು ಕೇಳಿಕೊಂಡರು. ಉರಿಯ ಮೇಲೆ ಕಟ್ಟಿಗೆಗಳ ಗೋಡೆಯೊಂದನ್ನು ಎಬ್ಬಿಸಿದರು; ಮಂಗಳೇದಿರನ್ನು ಹಲಗೆಗಳಿಗೆ ಕಟ್ಟಿ ಉರಿಗೆ ಎಸೆಯಲು ಸಿದ್ಧಪಡಿಸಿದರು. ಆದರೆ ಅವರಿಗೆ ಬದಲು ನಿಜವಾದ ಯುದ್ಧ ನೃತ್ಯಗಾರರಂತೆ ವೇಷ ಹಾಕಿ, ಹಲಗೆಗಳಿಗೆ ಕಟ್ಟಿದ್ದ ಇಬ್ಬರು ಗುಲಾಮರನ್ನು ಉರಿಗೆ ತಳ್ಳಿದರು. ಫಾಸ್ಟ್‌ರನ್ನರನ ಹೆಣ್ಣುಮಕ್ಕಳು ನಾಲ್ಕು ದಿನ ಗಂಟ್ಟಾಗಿ ಅಡಗಿದ್ದರು. ಅನಂತರ ಭದ್ರವಾಗಿ ಇಟ್ಟಿದ್ದ ಗುಲಾಮರ ಬೂದಿಯಿಂದ, ಜೀವ ತಳೆದವರಂತೆ ಎದ್ದರು. ಇಷ್ಟು ದೊಡ್ಡ ಸಂಯೋಗದ ಪ್ರದರ್ಶನಕ್ಕೆ ಸರಿಗಟ್ಟುವ ಯಾವ ಪಟ್ಲ್ಯಾಚ್‌-ಅವೇಯಲ್ಲಿರಲಿಲ್ಲ. ಅವನೂ, ಅವನ ಪರಿವಾರದವರೂ ನೂಟ್ಕನೊಂದಿಗೆ ಯುದ್ಧ ಮಾಡಲು ಹೋದರು. ಆ ಯುದ್ಧ ತಂಡದ ಸೋಲು ಮತ್ತು ಸಾವಿನ ಸುದ್ದಿ ಹೇಳಲು ಒಬ್ಬನೇ ಒಬ್ಬ ಹಿಂತಿರುಗಿ ಬಂದ.

ಇದನ್ನು ನಿಜವಾಗಿ ನಡೆದ ಕತೆಯಂತೆ ಹೇಳುತ್ತಾ ಇದ್ದರು. ಇಂತಹ ಇತರ ಪೈಪೋಟಿಗಳಲ್ಲಿ ವಿರೋಧಿಗಳಾಗಿ ನಿಂತ ಯಜಮಾನರುಗಳು ತಮ್ಮ ತಮ್ಮ ಪ್ರತಿಷ್ಠೆಯನ್ನು ತೋರಿಸಿಕೊಳ್ಳಲು ಅನುಸರಿಸುತ್ತಿದ್ದ ಕಾರ್ಯವಿಧಾನಗಳನ್ನು ಕಂಡ ಪ್ರತ್ಯಕ್ಷದರ್ಶಿಗಳಿದ್ದಾರೆ. ಅವು ಇವರಿಂದ ಸ್ವಲ್ಪ ಅತ್ತ ಇತ್ತ ಅಷ್ಟೆ. ಈಗ ಜೀವಂತರಾಗಿರುವ ವ್ಯಕ್ತಿಗಳು ಕಂಡಂತೆಯೇ ಒಂದು ಸಂದರ್ಭದಲ್ಲಿ ಒಬ್ಬ ಯಜಮಾನನು ತನ್ನ ವಿರೋಧಿಯ ಉರಿಯನ್ನು 'ಆರಿಸಲು' ಏಳು ದೋಣಿಗಳನ್ನೂ, ನಾಲ್ಕುನೂರು ಕಂಬಳಿಗಳನ್ನೂ ತಂದನು. ಅವಕ್ಕೆ ಎದುರಾಗಿ ಆತಿಥೇಯನು ಉರಿಯ ಮೇಲೆ ಎಣ್ಣೆಯನ್ನು ಸುರಿಯುತ್ತಲೇ ಇದ್ದನು. ಮನೆಯ ಛಾವಣಿಗೆ ಉರಿ ತಗುಲಿ ಹೊತ್ತಿಕೊಂಡು, ಇಡೀ ಮನೆಯೇ ಬೂದಿಯಾಗುವುದರಲ್ಲಿದ್ದರೂ ಎರಡು ಪಕ್ಷದವರೂ ಅತ್ಯಂತ ನಿರ್ಲಕ್ಷ್ಯವನ್ನು ತೋರುತ್ತಾ ಉರಿಗೆ ಒಟ್ಟಲು ಹೆಚ್ಚು ಹೆಚ್ಚು ಸ್ವತ್ತುಗಳನ್ನು ತರಿಸುತ್ತಲೇ ಇದ್ದರು. 'ಇನ್ನೂರು ಕಂಬಳಿಗಳನ್ನು ತರಲು ಹೋದವರು ಅದನ್ನು ತಂದು ಉರಿಯ ಮೇಲೆ ಒಟ್ಟಿದರು. ಆಗ ಅವರು ಉರಿಯನ್ನು 'ಆರಿಸಿ' ದಂತಾಯಿತು. ಅದನ್ನು ಕಂಡು ಆತಿಥೇಯನು ಇನ್ನೂ ಹೆಚ್ಚಿಗೆ ಸಲಾಲ್ ಮೀನಿನ ಮೊಟ್ಟೆಗಳನ್ನೂ, ಏಡಿಕಾಯಿಗಳನ್ನೂ ತನ್ನ ಮಂಗಳು ನೃತ್ಯ ಮಾಡುವಾಗ ಹಿಡಿದುಕೊಳ್ಳುತ್ತಿದ್ದ ತಾಮ್ರಫಲಕವನ್ನೂ ಎತ್ತಿಕೊಂಡು ಅವುಗಳನ್ನು ಔತಣಗೃಹದ ಉರಿಯೊಳಕ್ಕೆ ಎಸೆದನು. ಎಣ್ಣೆ ಹುಯ್ಯುತ್ತಿದ್ದ ನಾಲ್ವರು ಯುವಕರು ಸೌಟು ಸೌಟುಗಳಲ್ಲಿ ಎಣ್ಣೆ ತೆಗೆದು ತೆಗೆದು ಉರಿಗೆ ಸುರಿದರು. ಎಣ್ಣೆ ಕಂಬಳಿಗಳು ಎಲ್ಲ ಸೇರಿ ಭಗಭಗನೆ ಉರಿಯುತ್ತಿದ್ದುವು. ಆತಿಥೇಯನು ಎಣ್ಣೆಯನ್ನು ಎತ್ತಿ ತನ್ನ ವಿರೋಧಿಗಳ ನಡುವೆ ಸುರಿದಾಡುತ್ತಿದ್ದ.

ಅಂತಹ ಪೈಪೋಟಿಗಳು ಮಹತ್ವಾಕಾಂಕ್ಷೆಯ ಅತ್ಯುನ್ನತ ಶಿಖರಗಳು. ಅವರ

ದೃಷ್ಟಿಯಲ್ಲಿ ಆದರ್ಶ ವ್ಯಕ್ತಿಯು ಇಂತಹ ಪೈಪೋಟಿಗಳಲ್ಲಿನ ಜಯಶಾಲಿ. ಅವಕ್ಕೆ ಅನಂವಾದ ಎಲ್ಲ ಪ್ರೇರಣೆಗಳನ್ನು ಸದ್ಗುಣಗಳೆಂದೇ ಭಾವಿಸುತ್ತಿದ್ದರು. ಒಂದು ಪೊಟ್ಲಾಚಿನಲ್ಲಿ ವೃದ್ಧಳಾದ ಯಜಮಾನತಿಯೊಬ್ಬಳು, ತನ್ನ ಮಗನಿಗೆ ಬುದ್ಧಿ ಹೇಳುತ್ತ, 'ನನ್ನ ಬಣದ ಮಹಾಜನರೇ, ನಾನು ಮುಖ್ಯವಾಗಿ ನನ್ನ ಮಗನಿಗೆ ಹೇಳುತ್ತಿರುವೆನು. ಸ್ನೇಹಿತರೇ, ನಿಮಗೆಲ್ಲ ನನ್ನ ಹೆಸರು ಗೊತ್ತು. ನಿಮಗೆಲ್ಲಾ ನನ್ನ ತಂದೆಯೂ ಗೊತ್ತು. ಅವನು ತನ್ನ ಸ್ವತ್ತನ್ನು, ಏನು ಮಾಡಿದ ಎಂಬುದೂ ಗೊತ್ತು. ಅವನು ಯಾವುದಕ್ಕೂ ಲಕ್ಷಿಸುತ್ತಿರಲಿಲ್ಲ. ತಾನು ಏನು ಮಾಡುತ್ತಿರುವೆನೆಂಬುದರ ಬಗ್ಗೆ ಅವನು ಪರಿವೆಯಿಟ್ಟವನಲ್ಲ. ಅವನು ಔತಣ ಗೃಹದ ಉರಿಯಲ್ಲಿ ತನ್ನ ದೋಣಿಗಳನ್ನು ಸುಡುತ್ತಿದ್ದ ಇಲ್ಲವೇ ಬೇರೆಯವರಿಗೆ ನೀಡುತ್ತಿದ್ದ. ಅವನು ನೀರು ನಾಯಿಯ ಚರ್ಮಗಳನ್ನು ತನ್ನ ಬಣದಲ್ಲಿಯೋ ಇದ್ದ ತನ್ನ ವಿರೋಧಿಗಳಿಗೋ, ಇಲ್ಲವೇ ಬೇರೆ ಬಣಗಳ ಯಜಮಾನರುಗಳಿಗೋ ನೀಡುತ್ತಿದ್ದ, ಇಲ್ಲವೇ ಹರಿದು ಎಸೆಯುತ್ತಿದ್ದ. ನಾನು ಹೇಳುತ್ತಿರುವುದು ನಿಜವೆಂದು ನಿಮಗೆ ಗೊತ್ತು. ಮಗನೇ, ನಿನ್ನ ತಂದೆ ನಿನಗೆ ಹಾಕಿಕೊಟ್ಟಿರುವ ದಾರಿ ಇದು. ನೀನು ಅದೇ ದಾರಿಯಲ್ಲಿ ನಡೆಯಬೇಕು. ನಿನ್ನ ತಂದೆ ಸಾಧಾರಣ ಮನುಷ್ಯನಲ್ಲ. ಅವನು ಕೋಸ್ಕಿಮೋ ಜನರಲ್ಲಿ ನಿಜವಾಗಿ ಯಜಮಾನನಾಗಿದ್ದವನು. ನಿನ್ನ ತಂದೆಯಂತೆ ನೀನೂ ಇರು. ಈ ಮೊಗ್ಗಿನ ಕಂಬಳಿಗಳನ್ನು ಹರಿದು ಹಾಕು, ಇಲ್ಲವೇ ನಮ್ಮ ವಿರೋಧಿಗಳಾದ ಬಣಗಳಿಗೆ ನೀಡು, ಅಷ್ಟೇ ನಾನು ಹೇಳುವುದು." ಅವಳ ಮಗ ಉತ್ತರ ನೀಡಿದ." ನನ್ನ ತಂದೆ ನನಗಾಗಿ ಹಾಕಿಕೊಟ್ಟಿರುವ ದಾರಿಯನ್ನು ಮುರಿಯುವುದಿಲ್ಲ. ನನ್ನ ಯಜಮಾನ ನನಗೆ ನೀಡಿದ ಆಣತಿಯನ್ನು ಮೀರುವುದಿಲ್ಲ. ಈ ಕಂಬಳಿಗಳನ್ನು ನನ್ನ ವಿರೋಧಿಗಳಿಗೆ ಕೊಡುವೆನು. ಈಗ ನಾವು ಈಡಾಗಿರುವ ಈ ಸಮರ ಬಲವಾಗಿದೆ. ಮಧುರವಾಗಿದೆ." ಅವನು ಆ ಕಂಬಳಿಗಳನ್ನು ಹಂಚಿದನು.

ವಾಯುವ್ಯ ತೀರ ಪ್ರದೇಶದಲ್ಲಿ ಸ್ವತ್ತಿನ ವಿತರಣೆಯ ಈ ರೂಪ ತಳೆಯುವ ಸಂದರ್ಭಗಳು ಹಲವು. ಅಂತಹವುಗಳಲ್ಲಿ ಅನೇಕ ಸಂದರ್ಭಗಳು ಆರ್ಥಿಕ ವಿನಿಮಯದಿಂದ ಬಹಳ ದೂರ ಇರುವಂತಹುವು. ಮದುವೆ, ಸಾವು ಅಥವಾ ಒಂದು ಅಪಘಾತದಂತಹ ಸಂದರ್ಭಗಳಲ್ಲಿ ಕ್ವಾಕಿಯೂಟಲ್‌ಗಳ ವರ್ತನೆಯನ್ನು ಆ ವರ್ತನೆಯ ಅಡಿಪಾಯದಲ್ಲಿರುವ ವಿಶಿಷ್ಟ ಮನೋಭಾವವನ್ನು ಅರಿತುಕೊಳ್ಳದೇ, ಅರ್ಥಮಾಡಿಕೊಳ್ಳುವುದು ಅಸಾಧ್ಯ. ಈ ಸಂಸ್ಕೃತಿಯಲ್ಲಿ ಗಂಡು ಹೆಣ್ಣಿನ ಸಂಬಂಧ, ಮತಧರ್ಮ ಹಾಗೂ ದುರದೃಷ್ಟವೂ ಸಹ ಸ್ವತ್ತನ್ನು ವಿತರಣೆ ಅಥವಾ ನಾಶಮಾಡುವುದರಲ್ಲಿ ಹೆಗ್ಗಳಿಕೆ ತೋರಿಸಿಕೊಳ್ಳಲು ಅವಕಾಶಗಳಾಗುತ್ತಿದ್ದವು. ಅಂತಹ ಪ್ರಮುಖ ಸಂದರ್ಭಗಳೆಂದರೆ ಉತ್ತರಾಧಿಕಾರದ ಪಟ್ಟ, ಮದುವೆ, ದೈವಿಕಬಲ ಸ್ವೀಕಾರ ಮತ್ತು ಪ್ರದರ್ಶನ, ಶೋಕಾಚರಣೆ, ಯುದ್ಧ ಹಾಗೂ ಅಪಘಾತಗಳು.

ಉತ್ತರಾಧಿಕಾರಿಗೆ ಪಟ್ಟ ಕಟ್ಟುವುದು, ಸಹಜವಾಗಿಯೇ ಪ್ರತಿಷ್ಠೆಯ ಸಂದರ್ಭಗಳಾಗಿದ್ದವು. ಪ್ರತಿಯೊಂದು ಹೆಸರನ್ನೂ, ಪ್ರತಿಯೊಂದು ವಿಶೇಷಾಧಿಕಾರವನ್ನೂ ತನ್ನ ಉತ್ತರಾಧಿಕಾರಿಗೆ ನೀಡಬೇಕಾಗಿತ್ತು. ಆ ನೀಡಿಕೆಯನ್ನು ಅದಕ್ಕದಕ್ಕೆ ಯೋಗ್ಯವಾದಂತೆ ಸ್ವತ್ತಿನ ವಿತರಣೆ ಮತ್ತು ವಿನಾಶದಿಂದ ಊರ್ಜಿತಗೊಳಿಸಬೇಕಾಗಿತ್ತು. ಹೊಸ ಅಧಿಕಾರಿಗೆ 'ಸಂಪತ್ತಿನ ಕವಚವೊಂದನ್ನು' ತೊಡಿಸಬೇಕಾಗಿತ್ತು. ಈ ಬಗೆಯ ಪೊಟ್ಲಾಚ್‌ಗಳು ಪ್ರಮುಖವಾದ ಮತ್ತು ವಿಸ್ತಾರವಾದ ಸಮಾರಂಭಗಳಾಗಿದ್ದರೂ ಕಾರ್ಯವಿಧಾನದ ಮುಖ್ಯ ಲಕ್ಷಣಗಳೆಲ್ಲ ಸಾಕಷ್ಟು ಸರಳವಾಗಿಯೇ ಇದ್ದುವು. ಮುಂದೆ ನಿರೂಪಿಸುವ ತನ್ನ ರಾಜಕುಮಾರನ ಟ್ಲಾಸೋಟಿವಾಲಿಸ್ ಎಂಬ ಹೆಸರಿನ ಪ್ರತಿಷ್ಠೆಗಾಗಿ ನಡೆದ ಪೊಟ್ಲಾಚ್ ಅವುಗಳ ಮುಖ್ಯ ಲಕ್ಷಣಗಳನ್ನು ಸೂಚಿಸುವಂತಹುದು. ಅದು ಆ ಸಂತತಿಗೆ ಸೇರಿದ್ದ ಎಲ್ಲ ಬಣಗಳ ದೊಡ್ಡ ಸಮಾರಂಭ. ಎಲ್ಲರೂ ಕೂಡಿದ್ದಾಗ, ಯಜಮಾನನಾದ, ಟ್ಲಾಸೋಟಿವಾಲಿಸನ ತಂದೆಯು, ತನ್ನ ಕುಟುಂಬದ ಐತಿಹ್ಯಕ್ಕೆ ಅನ್ವಯವಾಗಿ, ತನಗೆ ಲಭ್ಯವಾಗಿದ್ದ ವಿಶೇಷಾಧಿಕಾರಗಳನ್ನು ನಾಟಕೀಯವಾಗಿ ನಿರೂಪಿಸಿ, ತನ್ನ ಮಗನ ಹೆಸರಿನ ಬದಲಾವಣೆಯನ್ನು ಘೋಷಿಸುತ್ತಾನೆ. ಆ ಉತ್ತರಾಧಿಕಾರಿಯು ಪರಂಪರಾಗತವಾದ ರಾಜಕುಮಾರರುಗಳ ಹೆಸರಿನಲ್ಲಿ ಒಂದು ಹೆಸರನ್ನು ತಳೆಯಬೇಕಾಗಿತ್ತು. ಅವನ ಗೌರವಾರ್ಥವಾಗಿ ವಿತರಣೆ ಮಾಡಲು ಸ್ವತ್ತು ಸಿದ್ಧವಾಗಿರುತ್ತಿತ್ತು. ನೃತ್ಯವು ಪರಾಕಾಷ್ಠೆಯಲ್ಲಿದ್ದಾಗ ಮೇಳದವರು, ಅವನ ತಂದೆಗಾಗಿ ರಚಿತವಾಗಿದ್ದ ಹಾಡನ್ನು ಹಾಡುತ್ತಿದ್ದರು.

> ದಾರಿ ಬಿಡಿ, ನನ್ನ ಎದುರಾಳಿ ಯಜಮಾನರನ್ನು ಬಡಿಯಲು ನಾನು
> ಸದಾ ಬಳಸುತ್ತಿರುವ ಈ ತಾಮ್ರ ಫಲಕವನ್ನು, ಅವನು ಪಡೆಯಲಿ,
> ಬಣಗಳೇ, ನಿಮ್ಮ ನಾಲಗೆಯನು ಉದ್ದ ಚಾಚಿ, ನಿಮ್ಮ ಕೈಗಳನು
> ಹಿಂಗಟ್ಟಿ ಹಿಸುಕುತ್ತ ದಯೆಗಾಗಿ ಯಾಚಿಸಬೇಡಿ.

ಆಗ ಆ ತರುಣ ರಾಜಕುಮಾರನು ಒಂದು ಕೋಣೆಯಿಂದ ಡೆಂಟಲಾಯು ಎಂಬ ತಾಮ್ರ ಫಲಕವನ್ನು ಹಿಡಿದು ಬರುತ್ತಾನೆ. ಅವನ ತಂದೆಯು ಮಗನಿಗೆ ಹುರಿದುಂಬಿಸುವಂತಹ ರೀತಿಯಲ್ಲಿ 'ಆಹಾ! ಯಜಮಾನ ಟ್ಲಾಸೋಟಿವಾಲಿಸ್, ನೀನು ಮಹಾಪುರುಷ! ನಿಜವಾಗಿ ನಿನ್ನ ಬಯಕೆ ಅದೇಯೋ? ಇಂತಹ ದೊಡ್ಡ ಹೆಸರುಳ್ಳ ಈ ತಾಮ್ರಫಲಕ ಡೆಂಟಲಾಯುವನ್ನು ಉರಿಯ ಬದಿಯಲ್ಲಿ ಸಾಯುತ್ತ ಬೀಳಿಸುವುದು ನಿನ್ನ ದೊಡ್ಡ ಬಯಕೆಯೋ? ನಿನ್ನ ವಿಶೇಷಾಧಿಕಾರಗಳಿಗೆ ತಕ್ಕಂತೆ ಬಾಳು! ನೀನು ಪ್ರಖ್ಯಾತವಾದ ಹೆಸರುಗಳಿದ್ದ ತಾಮ್ರಫಲಕಗಳನ್ನು ಹೀಗೆ ಮಾಡಿದ (ಮುರಿದು ಹಂಚಿದ) ಸ್ವಚ್ಛಂದ ಯಜಮಾನರ ಸಂತತಿಯಲ್ಲಿ ಜನಿಸಿದವನೆಂಬುದನ್ನು ಮರೆಯದಿರು' ಎಂದು ಬುದ್ಧಿವಾದ ಹೇಳುತ್ತಾನೆ. ಆಗ ಮಗನು ಸಂಬಂಧಪಟ್ಟ ಸಂಸ್ಕಾರಗಳ ಸಹಿತ ತಾಮ್ರ

ಫಲಕವನ್ನು ಮುರಿದು ಅದರ ತುಂಡುಗಳನ್ನು ತನ್ನ ಎದುರಾಳಿಗಳಿಗೆ ಹಂಚಿ ಅತಿಥಿಗಳನ್ನು ಕುರಿತು 'ನಾನು ಹಿರಿಯರಾದ ನನ್ನ ತಂದೆಯ ದಾರಿಯನ್ನು ಅನುಸರಿಸುತ್ತೇನೆ. ಆ ದಾರಿ ಹಿಡಿದು ನಾನು ಸ್ವಚ್ಛಂದನಾದ, ದಯಾರಹಿತನಾದ, ಯಾವುದಕ್ಕೂ ಹೆದರದ ಮುಖ್ಯಸ್ಥನಾಗುತ್ತೇನೆ. ಹಿರಿಯರೆ ಇದು ಸತ್ಯ; ಬಣಗಳೇ ನಿಮಗಾಗಿ ಈ ಡೆಂಟಲಾಯುವನ್ನು ಕುಣಿಯುತ್ತ ಮುರಿದಿದ್ದೇನೆ'. ಎಂಬುದಾಗಿ ಹೇಳುತ್ತಾನೆ. ನಂತರ ಅವನು ಉಳಿದ ತನ್ನ ಸ್ವತ್ತುಗಳನ್ನೆಲ್ಲ ವಿತರಣೆ ಮಾಡಿ. ತನ್ನ ತಂದೆಯ ಯಜಮಾನಿಕೆಯನ್ನು ವಹಿಸಿಕೊಳ್ಳುತ್ತಾನೆ.

ಒಬ್ಬ ಯಜಮಾನನ ಕುಟುಂಬದಲ್ಲಿ ಉನ್ನತ ಸ್ಥಾನಕ್ಕೆ ಅರ್ಹನಾದ ಅವನ ಮಗಳೋ, ತಂಗಿಯೋ ವಯಸ್ಕಳಾದಾಗ, ಇದೇ ಬಗೆಯ ಪ್ರೊಟ್ಲಾಚಿನ ಒಂದು ರೂಪಾಂತರವು ಏರ್ಪಡುತ್ತಿತ್ತು. ಉತ್ತರಾಧಿಕಾರಿಯು ಪಟ್ಟಕ್ಕೆ ಬಂದಾಗಿನಂತೆಯೇ, ಆದರೆ ಸ್ವಲ್ಪ ಕಡಮೆ ಆಡಂಬರದೊಂದಿಗೆ, ಪಡೆಯುತ್ತಿದ್ದ ಹೆಸರುಗಳ ಶ್ರೇಷ್ಠತೆಯನ್ನು ಊರ್ಜಿತಗೊಳಿಸಬೇಕಾಗುತ್ತಿತ್ತು. ಕಂಬಳಿಗಳು ಮತ್ತು ತಾಮ್ರಫಲಕಗಳನ್ನು ಬಿಟ್ಟು ವಿತರಣೆಗಾಗಿ ಅಪಾರ ಪ್ರಮಾಣದ ಸ್ವತ್ತುಗಳನ್ನು ಕೂಡಿಸಿಕೊಳ್ಳುತ್ತಿದ್ದರು. ಹೆಂಗಸರ ಉಡುಗೆಗಳು. ಹೆಂಗಸರು ಚಿಪ್ಪುಮೀನುಗಳನ್ನು ಅಗೆಯಲು ಬಳಸುವ ದೋಣಿಗಳು, ಚಿನ್ನ ಹಾಗೂ ಬೆಳ್ಳಿಯ ಕಡಗಗಳು ಮತ್ತು ಬೆಂಡೋಲೆಗಳು. ಬುಟ್ಟಿಯ ಟೊಪ್ಪಿಗೆಗಳು ಹಾಗೂ ಚಿಪ್ಪಿನ ಒಡವೆಗಳು ಇರುತ್ತಿದ್ದುವು. ಈ ವಿತರಣೆಯು ಯಜಮಾನನಿಗೆ ತಾನು ಪರಿಪೂರ್ಣನಾದ ಯಜಮಾನನಾಗುವುದರತ್ತ ಇನ್ನೊಂದು ಮೆಟ್ಟಲನ್ನೇರಿದೆನೆಂದು ಹೇಳಿಕೊಳ್ಳುವ. ಅವರ ಮಾತಿನ ಪ್ರಕಾರ 'ದಾರಿ ಪೂರೈಸಿದ ಯಜಮಾನ' ಎಂದುಕೊಳ್ಳುವ ಹಕ್ಕನ್ನು ನೀಡುತ್ತಿತ್ತು.

ಆತ್ಮ ಪ್ರಶಂಸೆಗೂ, ವೈಭವ ಪ್ರದರ್ಶನಕ್ಕೂ ಸಾಕಷ್ಟು ಅವಕಾಶ ನೀಡಿದ್ದರೂ ಸಹ, ವಾಯವ್ಯ ತೀರ ಪ್ರದೇಶದಲ್ಲಿ ಉತ್ತರಾಧಿಕಾರದ ಪಟ್ಟಕಟ್ಟುವ ಸಂದರ್ಭದ ಪ್ರೊಟ್ಲಾಚ್, ಪ್ರತ್ಯಕ್ಷವಾಗಿ ಒಬ್ಬ ಎದುರಾಳಿಯೊಂದಿಗೆ ನಡೆಯುವ ಪೈಪೋಟಿಯಾಗಿರಲಿಲ್ಲ. ಆದ್ದರಿಂದ ಅದು ಮದುವೆಯ ಸಂದರ್ಭದ ಪೊಟ್ಲಾಚುಗಳಂತೆ ಆ ಜನರ ಸಂಸ್ಕೃತಿಯ ಸಂಪೂರ್ಣ ಹಾಗೂ ಸಮರಸವಾದ ಅಭಿವ್ಯಕ್ತಿಯಾಗಿರಲಿಲ್ಲ. ಮದುವೆಯು, ತಾಮ್ರಫಲಕದ ಕೊಳ್ಳುವಿಕೆಯಂತೆಯೇ ಒಂದು ಹೋರಾಟದಂತೆ ಕೌತುಕಪೂರ್ಣವಾಗಿರುತ್ತಿತ್ತು. ಮದುವೆಯಾಗಹೊರಟ ಒಬ್ಬ ಪ್ರಮುಖ ವ್ಯಕ್ತಿಯು ತನ್ನ ಬಂಧುಗಳನ್ನೂ, ಅನುಚರರನ್ನೂ ಯುದ್ಧಕಾರ್ಯಕ್ಕೆ ಕೂಡಿಸಿದಂತೆ ಕೂಡಿಸಿ ಹೀಗೆ ಘೋಷಿಸುತ್ತಿದ್ದನು. 'ನಾವು ಈಗ ಆ ಬಣಗಳ

ಮೇಲೆ ಯುದ್ಧ ಹೂಡಲಿದ್ದೇವೆ. ನನ್ನ ಹೆಂಡತಿಯನ್ನು ಮನೆಗೆ ಕರೆತರಲು ನೆರವು ನೀಡಿ.' ಕೂಡಲೇ ಸಿದ್ಧತೆಗಳು ತೊಡಗುತ್ತಿದ್ದುವು. ಆದರೆ ಅವರ ಯುದ್ಧದ ಅಸ್ತ್ರಗಳೆಂದರೆ ಅವರಲ್ಲಿದ್ದ ಕಂಬಳಿಗಳು ಮತ್ತು ತಾಮ್ರಫಲಕಗಳು. ಅವರ ಯುದ್ಧ ಎಂದರೆ ಮುಖ್ಯವಾಗಿ ಸರಕುಗಳ ಕೈ ಬದಲಿಕೆಯೇ ಆಗಿತ್ತು.

ತಾಮ್ರಫಲಕದ ಮಾರಾಟದಂತೆಯೇ ವರನು ವಧುವಿಗಾಗಿ ಸಲ್ಲಿಸಬೇಕಾಗಿದ್ದ ಕನ್ಯಾಶುಲ್ಕವೂ ಸಹ ಏರುತ್ತ ಏರುತ್ತ ಹೋಗುತ್ತಿತ್ತು. ವರನೂ, ಅವನ ಅನುಯಾಯಿಗಳೂ ಒಂದು ತಂಡವಾಗಿ ಕನ್ಯೆಯ ತಂದೆಯ ಮನೆಗೆ ಹೋಗುತ್ತಿದ್ದರು. ಪ್ರತಿಯೊಬ್ಬ ಪ್ರಭುವೂ "ವಧುವನ್ನು ನೆಲದಿಂದ ಏಳಿಸಲು" ಮತ್ತು ವಧುವಿಗೆ ಒಂದು ಸ್ಥಾನ ಮಾಡಿಕೊಡಲು ತನ್ನ ಆಸ್ತಿಯ ಒಂದೊಂದು ಭಾಗವನ್ನು ತಂದಿರುತ್ತಿದ್ದನು. ಮಾವನ ಕುಟುಂಬವನ್ನು ಕೆಳಗೆ ಹಾಕಲು ಹಾಗೂ ವರನ ಪ್ರತಿಷ್ಠೆಯನ್ನು ಮೆರೆಸಲು ಹೆಚ್ಚು ಹೆಚ್ಚಾಗಿ ಕಂಬಳಿಗಳನ್ನು ಎಣಿಸಿ ನೀಡುತ್ತಿದ್ದರು. ಎರಡು ಗುಂಪುಗಳ ನಡುವಣ ಘರ್ಷಣೆಯು ಇತರ ರೂಪಗಳನ್ನೂ ತಳೆಯುತ್ತಿತ್ತು. ವರನ ತಂಡದವರು ಆಯುಧಗಳನ್ನು ಹಿಡಿದು, ವಧುವಿನ ಗ್ರಾಮದ ಮೇಲೆ ಧಾಳಿಮಾಡಬಹುದಾಗಿತ್ತು. ಆಗ ವಧುವಿನ ಗ್ರಾಮದವರು ತಾವೂ ಸಜ್ಜಾಗಿ ಧಾಳಿಕಾರರ ಮೇಲೆ ಎರಗುತ್ತಿದ್ದರು. ಹೋರಾಟವು ಕೈ ಮೀರಿ, ಹೊಡೆದಾಟದಲ್ಲಿ ಜನ ಸಾಯುತ್ತಿದ್ದುದೂ ಉಂಟು; ಅಥವಾ ಮಾವನು ತನ್ನ ಜನರನ್ನು ಆಯುಧಪಾಣಿಗಳಾಗಿ, ಉರಿಯುವ ಪಂಜುಗಳನ್ನು ಒಳಮುಖವಾಗಿ ಹಿಡಿದ ಎರಡು ಸಾಲುಗಳಲ್ಲಿ ನಿಲ್ಲಿಸುತ್ತಿದ್ದನು. ಅಳಿಯನ ತಂಡದವರು ಆ ಸಾಲುಗಳ ನಡುವೆ ಓಡಬೇಕಾಗುತ್ತಿತ್ತು. ಇನ್ನು ಕೆಲವು ಕುಟುಂಬಗಳು ಔತಣ ಗೃಹದಲ್ಲಿ ಭಾರಿ ಉರಿಯುನ್ನು ಎಬ್ಬಿಸುವ ವಿಶೇಷಾಧಿಕಾರ ಪಡೆದಿದ್ದರು. ಆ ಉರಿಯ ಬದಿಯಲ್ಲಿ ವರನ ಪಕ್ಷದವರು ಸುಡಿಸಿಕೊಳ್ಳುತ್ತಿದ್ದರೂ ಮಿಸುಕಾಡದೇ ಕುಳಿತಿರಬೇಕಾಗಿ ಬರುತ್ತಿತ್ತು. ಆಗ ವಧುವಿನ ಕುಟುಂಬದ ಇನ್ನೊಂದು ವಿಶೇಷಾಧಿಕಾರದ ಲಾಂಛನವಾಗಿರಬಹುದಾಗಿದ್ದ ಸಮುದ್ರರಾಕ್ಷಸನ ಕೆತ್ತನೆ ಬೊಂಬೆಯು ತನ್ನ ಬಾಯಿಂದ ಏಳು ರುಂಡಗಳನ್ನು ಉಗುಳುತ್ತಿತ್ತು. ವಧುವಿನ ತಂದೆಯು ವರನ ತಂಡವನ್ನು ಅಣಕಿಸುತ್ತ, 'ಗ್ವಾಟ್ಸೆನಾಕ್ಸ್! ಎಚ್ಚರಿಕೆ! ಇವು ನನ್ನ ಮಗಳಿಂದಿರನ್ನು ಮದುವೆಯಾಗ ಬಯಸಿ, ಉರಿತಾಣದಿಂದ ಓಡಿಹೋದ ವಿವಾಹಾರ್ಥಿಗಳ ಸುರುಳಿಗಳು.' ಎಂದು ಹೇಳುತ್ತಿದ್ದನು.

ನಾವು ಮೊದಲೇ ಕಂಡುತೆ. ಈ ಸಂದರ್ಭದಲ್ಲಿ ಕೊಳ್ಳುತ್ತಿದ್ದುದು ವಧುವನ್ನಲ್ಲ. ಅವಳು ತನ್ನ ಮಕ್ಕಳಿಗೆ ನೀಡಲು ಅಧಿಕಾರ ಪಡೆದಿದ್ದಂತಹ ವಿಶೇಷಾಧಿಕಾರಗಳನ್ನು. ವಾಯುವ್ಯ ತೀರಪ್ರದೇಶದ ಇತರ ವ್ಯವಹಾರಗಳಂತೆಯೇ, ಕನ್ಯಾ ಶುಲ್ಕವೂ ಸಹ, ಮಾವನು ಹಲವಾರು ಮಡಿಗಳಷ್ಟು ಹೆಚ್ಚಿಸಿ ಹಿಂತಿರುಗಿಸಬೇಕಾಗಿದ್ದ ಹೊಣೆ. ಈ

ಮರುಪಾವತಿಗಳಿಗೆ ಮಕ್ಕಳ ಜನನ ಮತ್ತು ಅವರು ಪ್ರಾಪ್ತ ವಯಸ್ಕರಾಗುವುದು ತಕ್ಕ ಸಂದರ್ಭಗಳು. ಆ ಸಮಯಗಳಲ್ಲಿ ಹೆಂಡತಿಯ ತಂದೆಯು ತನ್ನ ಅಳಿಯನಿಗೆ, ತಾನು ಹಿಂದೆ ಪಡೆದಿದ್ದ ಐಹಿಕ ಸ್ವತ್ತುಗಳನ್ನು ಹಲವಾರು ಮಡಿ ಹೆಚ್ಚಿಸಿ ನೀಡುತ್ತಿದ್ದನು. ಅಷ್ಟು ಮಾತ್ರವಲ್ಲ, ಅದಕ್ಕಿಂತ ಮುಖ್ಯವಾಗಿ ತಾನು ತನ್ನ ಮಗಳ ಮಕ್ಕಳಿಗೆ ಚಲಾಯಿಸಲು ಬಾಧ್ಯತೆ ಪಡೆದಿದ್ದ ಹೆಸರುಗಳು ಮತ್ತು ವಿಶೇಷಾಧಿಕಾರಗಳನ್ನೂ ನೀಡುತ್ತಿದ್ದನು. ಅವು ಅಳಿಯನ ಸ್ವತ್ತುಗಳಾಗುತ್ತಿದ್ದುವು, ಆದರೆ ಅವನಿಗೆ ಅವುಗಳ ಮೇಲಿದ್ದ ಭೋಗವು ಅವನು ತನ್ನ ಉತ್ತರಾಧಿಕಾರಿಗಳಲ್ಲಿ ಯಾರನ್ನಾದರೂ ಆಯ್ದು ನೀಡುವಷ್ಟಕ್ಕೆ ಮಿತವಾಗಿರುತ್ತಿತ್ತು. ಕೆಲವೊಮ್ಮೆ ಹಾಗೆ ಆಯಲ್ಪಟ್ಟವರು ಆ ಬಳುವಳಿಯನ್ನು ತಂದಾಕೆಯ ಮಕ್ಕಳಲ್ಲದೆಯೂ ಹೋಗಬಹುದಾಗಿತ್ತು. ಆ ಹೆಸರುಗಳು ಮತ್ತು ವಿಶೇಷಾಧಿಕಾರಗಳು ಅವನು ತನ್ನ ಪೊಟ್ಲಾಚ್ ಪೈಪೋಟಿಗಳಲ್ಲಿ, ತಾನು ಉಪಯೋಗಿಸಿಕೊಳ್ಳಬಹುದಾಗಿದ್ದಂತಹ ಸ್ವತ್ತುಗಳಲ್ಲ. ಹಲವಾರು ದೊಡ್ಡ ಕುಟುಂಬಗಳಲ್ಲಿ ಕನ್ಯಾಶುಲ್ಕದ ಮರುಪಾವತಿಯನ್ನು ಮದುವೆಯಾದ ನಂತರ ಹಲವಾರು ವರ್ಷಗಳ ಕಾಲ, ಆ ವಿವಾಹದಿಂದ ಜನಿಸಿದ ಹಿರಿಯ ಮಗನೋ ಇಲ್ಲವೇ ಮಗಳೋ ಅವರಲ್ಲಿ ವಿಶೇಷ ಮನ್ನಣೆ ಪಡೆದಿದ್ದ ಕ್ಯಾನಿಬಲ್ ಸಂಘಕ್ಕೆ ದೀಕ್ಷೆಪಡೆಯುವ ವಯಸ್ಸಿಗೆ ಬರುವವರೆಗೆ ತಡೆ ಹಿಡಿದಿರುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಆಗ ಮಾವನಿಂದ ಮರುಪಾವತಿಯನ್ನು ಪಡೆಯಲಿದ್ದ ಅಳಿಯನು ಮಾಗಿ ಹಬ್ಬವನ್ನು ಏರ್ಪಡಿಸಿ, ಹಾಗೆ ಏರ್ಪಡಿಸಿದ್ದರಿಂದ ಅಪಾರ ಪ್ರಮಾಣದ ಸ್ವತ್ತುಗಳನ್ನು ತಾನು ವಿತರಣೆ ಮಾಡಬೇಕಾಗಿದ್ದ ಜವಾಬ್ದಾರಿಯನ್ನು ಹೊರುತ್ತಿದ್ದನು. ಮಾವನ ಮರುಪಾವತಿಯು ಈ ವೆಚ್ಚವನ್ನು ಭರಿಸುತ್ತಿತ್ತು. ಈ ಸಮಾರಂಭವು ಮುಖ್ಯವಾಗಿ ಅಳಿಯನ ಮಗ ಅಥವಾ ಮಗಳನ್ನು ಕ್ಯಾನಿಬಲ್ ಸಂಘಕ್ಕೆ ದೀಕ್ಷೆಗೊಳಿಸುತ್ತಿದ್ದ ಸಂದರ್ಭ. ಆಗ ಆ ತರುಣ ಅಥವಾ ತರುಣಿಯು ತಳೆಯುತ್ತಿದ್ದ ಹೆಸರು ಮತ್ತು ಸಂಬಂಧಪಟ್ಟ ವಿಶೇಷಾಧಿಕಾರಗಳು ಅವರ ತಂದೆಯು ನೀಡಿದ್ದ ವಿವಾಹ ಶುಲ್ಕದ ಮೇಲಿನ ಲಾಭಾಂಶವಾಗಿದ್ದು, ವಿವಾಹ ವ್ಯವಹಾರದಲ್ಲಿ ಅತ್ಯಂತ ಹೆಚ್ಚಿನ ಮೌಲ್ಯವಾಗಿ ಪರಿಗಣಿತವಾದಿತ್ತು.

ಮರುಪಾವತಿಯ ಮೊತ್ತ ಮತ್ತು ಅದನ್ನು ಎಷ್ಟುಬಾರಿ ನೀಡಬೇಕೆಂಬುದು ಆ ವಿವಾಹಕ್ಕೆ ಸಂಬಂಧಪಟ್ಟ ಕುಟುಂಬಗಳ ಮಹತ್ವ, ಹುಟ್ಟಿದ ಮಕ್ಕಳ ಸಂಖ್ಯೆ ಮತ್ತು ಇಂತಹ ಇತರ ಅಂಶಗಳ ಆಧಾರದ ಮೇಲೆ ಮದುವೆಯಿಂದ ಮದುವೆಗೆ ವ್ಯತ್ಯಾಸವಾಗುತ್ತಿತ್ತು. ಮಾವನು ಇದಕ್ಕಾಗಿ ಹಲವಾರು ವರ್ಷಗಳ ಮೊದಲಿಂದಲೇ ಸಿದ್ಧನಾಗುತ್ತಿದ್ದನು. ಆದರೆ ಸಮಾರಂಭವು ಮಾತ್ರ ಕಡ್ಡಾಯವಾಗಿದ್ದು, ಕೌತುಕ ಭರಿತವಾಗಿರುತ್ತಿತ್ತು. ಮರುಪಾವತಿಯ ಸಮಯಬಂದಾಗ ಅವನು ತಾನು ನೀಡಿದ್ದ ಕಡಗಳನ್ನು ಹಿಂದಕ್ಕೆ ಪಡೆಯುತ್ತಿದ್ದನು. ಅಧಿಕ ಪ್ರಮಾಣದಲ್ಲಿ ಆಹಾರ, ಕಂಬಳಿ,

ಪೆಠಾರಿ. ಪಾತ್ರೆ. ಚಮಚ, ಗಿಂಡಿ. ಕಡಗ ಮತ್ತು ತಾಮ್ರಫಲಕಗಳನ್ನು ಕೂಡಿಸಿಕೊಳ್ಳುತ್ತಿದ್ದನು. ಕಡಗಗಳನ್ನು ಪ್ರತಿ ಕೋಲಿಗೆ ಹತ್ತರಂತೆ ಕಟ್ಟುತ್ತಿದ್ದರು. ಪಾತ್ರೆ ಚಮಚಗಳನ್ನು ಹಗ್ಗಗಳಿಗೆ ದೋಣಿಯ ಲಂಗರು ಹಗ್ಗಗಳಂತೆ ಕಟ್ಟುತ್ತಿದ್ದರು. ಮಾವನ ಸಂಬಂಧೀಕರೆಲ್ಲ ಅವನಿಗೆ ಬೆಂಬಲವಾಗಲು ಹಾಗೂ ವೈಭವ ಪ್ರದರ್ಶನದಲ್ಲಿ ಭಾಗ ವಹಿಸಲು ಕೂಡುತ್ತಿದ್ದರು. ಅಳಿಯನ ಸಂಬಧೀಕರೆಲ್ಲ ಹಬ್ಬದ ಸಜ್ಜಿನಲ್ಲಿ, ಸಮುದ್ರದತ್ತ ಮುಖವಾಗಿದ್ದ ಅಳಿಯನ ಮನೆಯ ಜಗಲಿಯ ಮೇಲೆ ಸೇರುತ್ತಿದ್ದರು. ಮಾವನ ಪಕ್ಷವು ಕಡಲಕರೆಯಲ್ಲಿ 'ದೋಣಿ' ರಚಿಸುತ್ತಿದ್ದರು. ಅದು ಮರಳಿನ ಮೇಲೆ ನೂರು ಅಡಿ ಉದ್ದಗಲದ ಚದರ. ಅದನ್ನು ಪ್ರಾಣಿಗಳ ಮುಖಗಳ ಚಿತ್ರ ಬಿಡಿಸಿದ್ದ ಕುಲಧನದ ಪವಿತ್ರ ಪೆಟ್ಟಿಗೆಗಳಿಂದ ರಚಿಸಿ, ಅಲ್ಲಲ್ಲಿ ನೀರು ನಾಯಿಯ ಹಲ್ಲುಗಳನ್ನು ಮೆಟ್ಟಿರುತ್ತಿದ್ದರು. ಈ ದೋಣಿಗೆ ಮಾವನು ಸಂಗ್ರಹಿಸಿದ್ದ ವಸ್ತುಗಳನ್ನೆಲ್ಲ ತಂದು ಸೇರಿಸುತ್ತಿದ್ದರು. ದೋಣಿಯ ಮುಂದಿನ ಕೊನೆಯಿಂದ, ಅಳಿಯನ ಮನೆಯ ಜಗಲಿಯವರೆಗೆ ಲಂಗರು ಹಗ್ಗಗಳನ್ನೂ ಅವಕ್ಕೆ ಮರದ ಪಾತ್ರೆಗಳನ್ನೂ ಮಲೆ ಹೋತದ ಕೊಂಬಿನಿಂದ ಮಾಡಿದ ಬೆಲೆಬಾಳುವ ಚಮಚಗಳನ್ನೂ ಕೂಡಿಸಿ ಕಟ್ಟುತ್ತಿದ್ದರು. ಮಾವನ ಸಂಬಂಧೀಕರೆಲ್ಲ ದೋಣಿಯೊಳಕ್ಕೆ ಪ್ರವೇಶಿಸುತ್ತಿದ್ದರು. ಅವರೂ, ಅಳಿಯನ ಕಡೆಯವರೂ ಒಬ್ಬರಾದ ನಂತರ ಒಬ್ಬರು ತಮ್ಮ ತಮ್ಮ ಅಮೂಲ್ಯ ಗೀತೆಗಳನ್ನು ಹಾಡುತ್ತಿದ್ದರು. ಆ ದಿನ ಯಾವ ಹೆಂಗಸಿನ ಕನ್ಯಾಶುಲ್ಕದ ಮರುಪಾವತಿಯಾಗುತ್ತಿತ್ತೋ ಅಳಿಯನ ಆ ಹೆಂಡತಿಯು ತನ್ನ ತಂದೆ ತಾಯಿಯರೊಂದಿಗೆ ದೋಣಿಯಲ್ಲಿರುತ್ತಿದ್ದಳು. ಅವಳು ತನ್ನ ಗಂಡನಿಗಾಗಿ ಒಯ್ಯುತ್ತಿದ್ದ ಭಾರಿ ತೂಕದ ಆಭರಣಗಳನ್ನು ಧರಿಸಿರುತ್ತಿದ್ದಳು. ಆ ಸಂದರ್ಭದ ಪ್ರಮುಖ ನೃತ್ಯ ಅವಳದು. ಆಗ ಅವಳು ತನ್ನ ಆಭರಣಗಳನ್ನೆಲ್ಲ ಪ್ರದರ್ಶಿಸುತ್ತಿದ್ದಳು. ಅವಳು ಧರಿಸಿರುತ್ತಿದ್ದ ಚಿಪ್ಪಿನ ಮೂಗುತಿ ಎಷ್ಟು ದೊಡ್ಡದಾಗಿರುತ್ತಿತ್ತೆಂದರೆ, ಅದನ್ನು ಕಿವಿಗೆ ಕಟ್ಟಿ ಭದ್ರಪಡಿಸಿರುತ್ತಿದ್ದರು. ಅವಳ ಬೆಂಡೋಲೆಗಳು ಭಾರವಾಗಿದ್ದುದರಿಂದ ಕೂದಲಿಗೆ ಕಟ್ಟಿರುತ್ತಿದ್ದರು. ಅವಳ ನೃತ್ಯ ಮುಗಿದ ನಂತರ. ಮಾವನು ಎದ್ದು ದೋಣಿಯಲ್ಲಿದ್ದ ಎಲ್ಲ ಸ್ವತ್ತುಗಳ ಒಡೆತನವನ್ನು ತನ್ನ ಅಳಿಯನಿಗೆ ನೀಡುತ್ತಿದ್ದನು. ಮುಖ್ಯವಾದ ಸ್ವತ್ತು ಒಂದು ಸಣ್ಣ ಪೆಟ್ಟಿಗೆಯಲ್ಲಿರುತ್ತಿತ್ತು. ಮತಧರ್ಮೀಯ ಸಂಘಗಳ ಸದಸ್ಯತ್ವದ ವಿಶೇಷಾಧಿಕಾರದ ಲಾಂಛನಗಳು ಮತ್ತು ಹೆಸರುಗಳು ಅದರಲ್ಲಿದ್ದು ಅಳಿಯನ ಮಕ್ಕಳ ಉಪಯೋಗಕ್ಕಾಗಿ ಅಳಿಯನಿಗೆ ವರ್ಗಾವಣೆಯಾಗುತ್ತಿದ್ದುವು.

ಎಲ್ಲ ಸ್ವತ್ತುಗಳ ಒಡೆತನವೂ ಅಳಿಯನಿಗೆ ವರ್ಗಾವಣೆಯಾದ ಕೂಡಲೇ, ಅವನ ಸ್ನೇಹಿತರು ಕೊಡಲಿಗಳನ್ನು ಹಿಡಿದು ದೋಣಿಯ ಮೇಲೆ ಧಾಳಿಯಿಟ್ಟು

'ಭರ್ತಿಯಾಗಿದ್ದ ನಮ್ಮ ದೋಣಿ ಈಗ ಒಡೆಯಿತು' ಎಂದು ಕೂಗುತ್ತಾ ದೋಣಿಯನ್ನು ರಚಿಸಿದ್ದ ಒಂದು ಪೆಟ್ಟಿಗೆಯ ಮುಚ್ಚಳವನ್ನು ಒಡೆಯುತ್ತಿದ್ದರು. ಅದಕ್ಕೆ ಉತ್ತರವಾಗಿ ಅಳಿಯನು 'ನಾವು ಸಂತೋಷ ಪಡೋಣ' ಎಂದು ಹೇಳುತ್ತಿದ್ದನು. ಈ ಕಾರ್ಯಕ್ಕೆ 'ದೋಣಿ ಮುಳುಗಿಸುವುದು' ಎಂದು ಹೆಸರಿತ್ತು. ಅಳಿಯನು ದೋಣಿಯಲ್ಲಿದ್ದ ಸ್ವತ್ತನ್ನೆಲ್ಲಾ ಆ ಕೂಡಲೇ ತನ್ನ ಬಣದವರ ನಡುವೆ ಹಂಚುವನು ಎಂಬುದರ ಸೂಚನೆ ಅದು. ಅಂದರೆ ಅದನ್ನೆಲ್ಲ ಅವನು ಬಡ್ಡಿಗೆ ನೀಡಿ ತನ್ನ ಸಂಪತ್ತನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುತ್ತಿದ್ದನು. ಯಾವುದೇ ವ್ಯಕ್ತಿಯ ಜೀವಮಾನದಲ್ಲಿಯಾದರೂ ಅದೊಂದು ಪರಾಕಾಷ್ಠೆ. ಆ ಸಂದರ್ಭದ ಅಳಿಯನ ಸ್ವಂತವಾದ ಹಾಡು ಯಜಮಾನನೊಬ್ಬನು ತನ್ನ ಅಧಿಕಾರ ಬಲದ ತುತ್ತ ತುದಿಯನ್ನು ಮುಟ್ಟಿದ ವಿಜಯಗೀತೆ.

ನಾನು ಈಗ ಹೋಗಿ, ಸ್ಟೀವನ್ಸ್ ಬೆಟ್ಟವನ್ನು ಸೀಳುವೆ,
ಅದರ ತುಂಡುಗಳನು ನನ್ನ ಉರಿಗೆ ಬಳಸುವೆ.
ನಾನು ಈಗ ಹೋಗಿ, ಕಾಟ್ಸ್‌ಟೈಪ್ ಬೆಟ್ಟವನ್ನು ಸೀಳುವೆ.
ಅದರ ತುಂಡುಗಳನು ನನ್ನ ಉರಿಗೆ ಬಳಸುವೆ.

ಮಹತ್ವಾಕಾಂಕ್ಷೆಯಿದ್ದ ವ್ಯಕ್ತಿಯು ನಾಲ್ಕು ಮದುವೆಗಳನ್ನು ಮಾಡಿಕೊಂಡು ಹೆಚ್ಚು ಹೆಚ್ಚು ಬೆಲೆಬಾಳುವ ವಿಶೇಷಾಧಿಕಾರಗಳನ್ನು ಕೂಡಿಸಿಕೊಂಡು, ಕನ್ಯಾಶುಲ್ಕದ ಮೇಲಿನ ಮರುಪಾವತಿಯನ್ನು ವಸೂಲಿ ಮಾಡಿಕೊಳ್ಳುತ್ತಿದ್ದನು. ಅಂತಹ ಒಂದು ನಂಟನ್ನು ಬೆಳೆಸುವುದು ಅವಶ್ಯಕವೆಂದು ತೋರಿಬಂದು, ಮದುವೆಗೆ ಅರ್ಹಳಾದ ಮಗಳಿಲ್ಲದೇ ಹೋದಾಗ, ಸ್ವತ್ತುಗಳ ವರ್ಗಾವಣೆ ನಡೆಯಲು ಮತ್ತೊಂದು ಮಾರ್ಗವಿತ್ತು. ಅಳಿಯನು, ತನ್ನ ಮಾವನ 'ಎಡಗಾಲ'ನ್ನೋ, 'ಬಲಗೈಯ್ಯ'ನ್ನೋ, ಇಲ್ಲವೇ ಅವನ ದೇಹದ ಇನ್ನಾವುದಾದರೂ ಅಂಗವನ್ನೋ ಮದುವೆಯಾಗುತ್ತಿದ್ದನು. ಅಂದರೆ ನಿಜವಾದ ವಿವಾಹ ಸಂಬಂಧ ಸಂಸ್ಕಾರಗಳೊಂದಿಗೆ ಅಂತಹ ಕೃತಕ ಮದುವೆಯೊಂದನ್ನು ನಡೆಸುತ್ತಿದ್ದರು. ಅದರಿಂದ ಹಕ್ಕು ಬಾಧ್ಯತೆಗಳ ವರ್ಗಾವಣೆಗೆ ದಾರಿಯಾಗುತ್ತಿತ್ತು. ಈ ಸಂಗತಿಗಳಿಂದ ವಾಯುವ್ಯ ತೀರಪ್ರದೇಶದಲ್ಲಿ ವಿವಾಹವೆಂಬುದು ಹಕ್ಕುಬಾಧ್ಯತೆಗಳ ವರ್ಗಾವಣೆಗೆ ಒಂದು ವಿಧಿಬದ್ಧ ಮಾರ್ಗವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಈ ವಿಚಾರವು ಭೀಕರ ಹೋರಾಟಗಳಲ್ಲಿ ಪರ್ಯವಸಾನಗೊಳ್ಳುತ್ತಿದ್ದ ಅಂತರಬಣ ವಿವಾಹಗಳ ಸಂಗತಿಗಳಿಂದ ಇನ್ನೂ ಸ್ಪಷ್ಟಗೊಂಡು ಎದ್ದು ನಿಲ್ಲುತ್ತದೆ. ಶ್ರೀಮಂತ ಕನ್ಯೆಯೊಬ್ಬಳ ವಿವಾಹದ ಮೂಲಕ, ಅವಳ ಬಣದ ಜನರು ಬಿಟ್ಟು ಕೊಡಲು ಬಯಸದ ನೃತ್ಯಗಳು ಮತ್ತು ವಿಶೇಷಾಧಿಕಾರಗಳನ್ನು ತೊರೆಯಬೇಕಾಗಿ ಬರುತ್ತಿತ್ತು. ಅಂತಹ ಒಂದು ಪ್ರಸಂಗದಲ್ಲಿ ಮಾವನು ಮೂಲತಃ ನೃತ್ಯವನ್ನು ಯಾರಿಂದ ಪಡೆದಿದ್ದನೋ, ಆ

ಬಣದವರು ಅಂತಹ ಒಂದು ಮದುವೆಯ ಮೂಲಕ ಅವು ಎದುರಾಳಿಯ ಯಜಮಾನನೊಬ್ಬನಿಗೆ ಹೋಗುತ್ತವೆಂದು ಅರಿತು ಕ್ರುದ್ಧರಾಗುತ್ತಿದ್ದರು. ಅವರು ಒಂದು ಔತಣ ನೀಡುವ ಸೋಗುಹಾಕಿ, ಮಾವನನ್ನೂ ಅವನ ಬಣದವರನ್ನೂ ಆಹ್ವಾನಿಸುತ್ತಿದ್ದರು. ಎಲ್ಲರೂ ಬಂದು ಸೇರಿದ್ದಾಗ ಅವರುಗಳ ಮೇಲೆ ಬಿದ್ದು ಮಾವನನ್ನೂ ಅವನ ಹಲವು ಬಂಧು ಮಿತ್ರರನ್ನೂ ಕೊಂದು ಹಾಕುತ್ತಿದ್ದರು. ಈ ರೀತಿಯಾಗಿ ಅವರು ಆ ಮದುವೆಯಾಗಿದ್ದ ಎದುರಾಳಿ ಯಜಮಾನನು ತನ್ನ ಕನ್ಯಾಶುಲ್ಕದ ಮರುಪಾವತಿಯಾದಾಗ ಪಡೆದುಕೊಳ್ಳುತ್ತಿದ್ದ ನೃತ್ಯದ ಒಡೆತನವು ಅವನ ಕೈಗೆ ಹೋಗದಂತೆ ತಡೆಯುತ್ತಿದ್ದರು. ಆದರೆ ತಾನು ಬಯಸುತ್ತಿದ್ದ ನೃತ್ಯದ ಮೇಲಿನ ಹಕ್ಕನ್ನು ತನ್ನ ಮಾವನ ಮರಣದಿಂದಾಗಿ ಕಳೆದುಕೊಂಡ ಆ ಮುಖಂಡ ಅಷ್ಟು ಸುಲಭಕ್ಕೆ ತಣ್ಣಗಾಗುವವನಾಗಿರಲಿಲ್ಲ. ಅವನು ತನ್ನ ಮಾವನನ್ನು ಕೊಂದಿದ್ದವನ ಮಗಳನ್ನೇ ಮದುವೆಯಾಗಿ, ಆ ನೃತ್ಯವು ತನ್ನದಾಗುವಂತೆ ಮಾಡಿಕೊಳ್ಳುತ್ತಿದ್ದ. ಹೀಗೆ ಮೊದಲ ಮದುವೆಯಿಂದ ಅವನು ತನ್ನದಾಗಿ ಮಾಡಿಕೊಳ್ಳಬೇಕೆಂದು ಬಯಸಿದ್ದ ನೃತ್ಯವನ್ನು ಹೇಗೋ ತನ್ನದಾಗಿ ಪಡೆಯುತ್ತಿದ್ದನು.

ವಾಯುವ್ಯ ತೀರಪ್ರದೇಶದಲ್ಲಿ ವಿವಾಹವು ಸಕಲ ರೀತಿಗಳಲ್ಲಿಯೂ ಒಂದು ವಾಣಿಜ್ಯ ವ್ಯವಹಾರವೇ ಆಗಿತ್ತು. ಅದೇ ವಿಶಿಷ್ಟ ನಿಯಮಗಳನ್ನು ಅನುಸರಿಸುತ್ತಿತ್ತು. ಒಂದು ಮಗುವನ್ನು ಹೆತ್ತು, ಆ ಮೂಲಕ ಕನ್ಯಾಶುಲ್ಕದ ಮರುಪಾವತಿಯನ್ನು ಸ್ವತ್ತುಗಳ ರೂಪದಲ್ಲಿ ಸಲ್ಲುವಂತೆ ಮಾಡಿದ ಹೆಂಗಸು, ಮತ್ತೆ ಅವಳ ರಕ್ತಬಂಧುಗಳ ಗುಂಪಿಗೆ ಸೇರಿದವಳಾಗಿ ಪರಿಗಣಿತಳಾಗುತ್ತಿದ್ದಳು. ಅವಳನ್ನು 'ಯಾವ ತೆರವನ್ನೂ ನೀಡದೆ ತನ್ನ ಮನೆಯಲ್ಲಿ ಉಳಿಸಿಕೊಳ್ಳುವುದು' ಅವಳ ಗಂಡನ ಗೌರವಕ್ಕೆ ಕುಂದಾಗುತ್ತಿತ್ತು. ಅದರಿಂದ ಆತನು ಯಾವ ಸವಲತ್ತನ್ನೂ ಬಿಟ್ಟಿ ಪಡೆಯದಂತಾಗಲು ತನ್ನ ಮಾವನಿಗೆ ಹೊಸದಾಗಿ ಶುಲ್ಕ ತೆರುತ್ತಿದ್ದನು.

ವಿವಾಹ ಸಂಬಂಧದ ಎರಡು ಪಕ್ಷಗಳ ನಡುವೆ ಅಸಮಾಧಾನವಿದ್ದರೆ ಮಾವ, ಅಳಿಯಂದಿರಲ್ಲಿ ಬಹಿರಂಗವಾಗಿ ಘರ್ಷಣೆ ಏರ್ಪಡುತ್ತಿತ್ತು. ಅಂತಹ ಒಂದು ಪ್ರಸಂಗದಲ್ಲಿ ಮಾವನು ತನ್ನ ಅಳಿಯನಿಗೆ ಕಂಬಳಿಗಳನ್ನೂ, ಅವನ ಕೊನೆಯ ಮಗುವಿಗೆ ದೀಕ್ಷೆ ನೀಡಲು ಒಂದು ಹೆಸರನ್ನೂ ಕೊಡುವನು. ಅಳಿಯನು ಕಂಬಳಿಗಳನ್ನು ಸ್ಥಳೀಯವಾದ ತನ್ನ ಎದುರಾಳಿ ಗುಂಪುಗಳಲ್ಲಿ ಹಂಚದೆ, ತನ್ನ ನೆಂಟರಿಗೆ ಕೊಟ್ಟುಬಿಡುವನು. ಇದು ಕೊಡುಗೆಯು ತನ್ನ ಹೆಸರಿನ ಪ್ರತಿಷ್ಠೆಗೆ ಸೂಕ್ತವಾದುದಲ್ಲವೆಂಬುದನ್ನು ಸೂಚಿಸುವಂತಹ ಪರಮ ಅವಹೇಳನ. ಮಾವನು ತನಗಾದ ಅಪಮಾನಕ್ಕೆ ಪ್ರತೀಕಾರವಾಗಿ ತನ್ನ ಮಗಳನ್ನೂ, ಅವಳ ಇಬ್ಬರು ಮಕ್ಕಳನ್ನೂ ತನ್ನ ಗ್ರಾಮಕ್ಕೆ ಕರೆದೊಯ್ಯುವನು. ಮಾವನು ಇದರಿಂದ ಅಳಿಯನಿಗೆ ತಲೆಯೆತ್ತದಂತಹ ಏಟಾಗುತ್ತದೆಂದು ಭಾವಿಸುವನು.

ಆದರೆ ಅಳಿಯನು ಅಲಕ್ಷ್ಯ ತಳೆದು ತನ್ನ ಹೆಂಡತಿ ಮತ್ತು ಮಕ್ಕಳನ್ನು ತ್ಯಜಿಸಿ ಪ್ರಸಂಗವು ಮಾವನ ಮೇಲೆ ಬರುವಂತೆ ಮಾಡುವನು. 'ಆಗ ತನ್ನ ಅಳಿಯನು ಮಕ್ಕಳನ್ನು ನೋಡಲು ಸಹ ಏನೂ ನೀಡಲಿಲ್ಲವೆಂದು ಮಾವನಿಗೆ ಅವಮಾನವಾಯಿತು'. ಅಳಿಯನು ಇನ್ನೊಂದು ಮದುವೆಯಾಗಿ, ತನ್ನ ಜೀವನ ಪಥವನ್ನು ಮುಂದುವರಿಸಿದನು.

ಇನ್ನೊಂದು ಪ್ರಸಂಗದಲ್ಲಿ ಒಬ್ಬ ಯಜಮಾನನು, ತನ್ನ ಮಾವನು ಮರುಪಾವತಿ ಕೊಡುಗೆಯನ್ನು ಬಹಳ ತಡಮಾಡಿದನೆಂದು ಅಸಮಾಧಾನಗೊಂಡಿದ್ದನು. ಅವನು ತನ್ನ ಹೆಂಡತಿಯನ್ನು ಪ್ರತಿನಿಧಿಸಲು ಒಂದು ಬೊಂಬೆಯನ್ನು ಕೊರೆಸಿ, ತನ್ನ ಬಳಗದವರಿಗೆಲ್ಲ ಒಂದು ಔತಣ ನೀಡಿದನು. ಎಲ್ಲರೆದುರಿನಲ್ಲಿ ಹೆಂಡತಿಯ ಪ್ರತಿಮೆಯ ಕೊರಳಿಗೆ ಒಂದು ಕಲ್ಲು ಕಟ್ಟಿ, ಅದನ್ನು ಸಮುದ್ರಕ್ಕೆ ಎಸೆದನು. ಅಷ್ಟೊಂದು ಮಹತ್ತರವಾದ ಅಪಮಾನವನ್ನು ತೊಡೆಯಬೇಕಾದರೆ, ಮಾವನು ತನ್ನಲ್ಲಿದ್ದ ಸ್ವತ್ತುಗಳಿಗಿಂತ ಬಹು ಹೆಚ್ಚು ಪ್ರಮಾಣದ್ದನ್ನು ವಿತರಣೆ ಮಾಡಬೇಕಾಗಿತ್ತು ಹಾಗೂ ನಾಶಗೊಳಿಸಬೇಕಾಗುತ್ತಿತ್ತು. ಈ ರೀತಿಯಲ್ಲಿ ಆ ಅಳಿಯನು ತನ್ನ ಹೆಂಡತಿಯ ಮತ್ತು ಅವಳ ಮೂಲಕ ತನ್ನ ಮಾವನ ಉನ್ನತ ಸ್ಥಾನವನ್ನು ಮುರಿದನು. ಮದುವೆಯ ಸಂಬಂಧವೂ ಬಿಟ್ಟು ಹೋಯಿತು.

ಘನತೆಯ ಹಕ್ಕುಗಳನ್ನು ಹುಟ್ಟಿನಿಂದ ಪಡೆಯದೇ ಹೋದವರು ಉನ್ನತ ಸ್ಥಾನದ ಹೆಂಗಸನ್ನು ಮದುವೆಯಾಗುವುದರ ಮೂಲಕ ಅವುಗಳನ್ನು ಪಡೆಯಬಹುದಾಗಿತ್ತು. ಅಂತಹ ವ್ಯಕ್ತಿಯು ಸಾಧಾರಣ ಜ್ಯೇಷ್ಠಾಧಿಕಾರದ ರೂಢಿಯಿಂದಾಗಿ ಉನ್ನತ ಸ್ಥಾನವನ್ನು ಪಡೆಯಲು ತಡೆಯಾಗಿದ್ದಂತಹ ಕಿರಿಯ ಮಗನಾಗಿರುತ್ತಿದ್ದನು. ಅಂತಹವನು ಒಳ್ಳೆಯ ಸ್ಥಾನದವಳೊಂದಿಗೆ ಮದುವೆಯಾಗಿ, ತಾನು ವಿತರಣೆಗೊಳಿಸಿದ ಸಾಲಗಳಿಂದಾಗಿ ಸಂಪತ್ತನ್ನು ಗಳಿಸುವುದರಲ್ಲಿ ಯಶಸ್ವಿಯಾದರೆ ಬಣದ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬನಾಗಿ ಸ್ಥಾನಗಳಿಸಬಹುದಾಗಿತ್ತು. ಆದರೆ ಈ ಮಾರ್ಗ ಕಠಿಣವಾದುದು. ಹೆಂಗಸಿನ ಕುಟುಂಬದವರಿಗೆ ಅವಳು, ಸಾಧಾರಣ ವ್ಯಕ್ತಿಯನ್ನು ಮದುವೆಯಾಗುವುದೆಂದರೆ ಅಗೌರವದ ಸಂಗತಿಯಾಗಿರುತ್ತಿತ್ತು. ವರನು ಸಾಕಷ್ಟು ಪ್ರಮಾಣದ ಕೊಡುಗೆ ವಸ್ತುಗಳನ್ನು ಸಂಗ್ರಹಿಸಿಕೊಳ್ಳುವುದು ಕಠಿಣವಾಗಿದ್ದುದರಿಂದ ಮದುವೆಯ ಸಂದರ್ಭದಲ್ಲಿನ ರೂಢಮೂಲವಾದ ಸ್ವತ್ತುಗಳ ವಿನಿಮಯವು ಅಸಾಧ್ಯವಾಗುತ್ತಿತ್ತು. ಪೊಟ್ಲಾಚ್‌ನಿಂದ ಊರ್ಜಿತವಾಗದ ಮದುವೆಯನ್ನು 'ನಾಯಿಗಳಂತೆ ಒಟ್ಟಿಗಿರುವುದು' ಎಂದು ಕರೆಯುತ್ತಿದ್ದರು. ಅಂತಹ ವಿವಾಹದ ಮಕ್ಕಳು ಜಾರಜರಾಗಿ ಪರಿಗಣಿತರಾಗುತ್ತಿದ್ದರು. ಹೆಂಡತಿಯು ತನ್ನ ವಶದಲ್ಲಿದ್ದ ಪ್ರಭುತ್ವದ ಬಿರುದುಗಳನ್ನು ಗಂಡನಿಗೆ ನೀಡಿದರೆ ಅವುಗಳನ್ನು ಅವನು ಬಿಟ್ಟಿ ಪಡೆದಂತಾಗಿ ಅವನ ಕುಟುಂಬದವರಿಗೆ ನಾಚಿಕೆಗೇಡಿನ ಪ್ರಸಂಗವಾಗುತ್ತಿತ್ತು. "ಅವಳು ಕೆಳಮಟ್ಟದವನನ್ನು ಮದುವೆಯಾಗಿದ್ದ

ರಿಂದ ಅವರ ಹೆಸರಿಗೆ ಕಳಂಕ ಹತ್ತಿ, ಅದು ಕೆಟ್ಟ ಹೆಸರಾಯಿತು." ಅಂತಹವನು ಸಾಕಷ್ಟು ಪ್ರಮಾಣದಲ್ಲಿ ಸ್ವತ್ತನ್ನು ಕೂಡಿಸಿಕೊಂಡು, ತನ್ನ ಹೆಸರುಗಳ ಹಕ್ಕನ್ನು ಊರ್ಜಿತಗೊಳಿಸಿಕೊಂಡರೂ ಸಹ ಆರಂಭದ ಅವಮಾನವನ್ನು ಬಣಗಳು ಮರೆಯುತ್ತಿರಲಿಲ್ಲ. ಹಲವು ಯಜಮಾನರುಗಳು ಅವನ ವಿರುದ್ಧವಾಗಿ ಒಂದುಗೂಡಿ, ಒಂದು ಪೊಟ್ಲಾಚಿನಲ್ಲಿ ಅವನನ್ನು ಸೋಲಿಸಿ ಅವನ ಆಡಂಬರವನ್ನು ಮುರಿಯುತ್ತಿದ್ದರು. ಒಬ್ಬಳು ಶ್ರೀಮಂತ ಹೆಂಗಸಿನ, ಸಾಮಾನ್ಯ ದರ್ಜೆಯ ಗಂಡನು ಶ್ವೇತವರ್ಣೀಯರೊಂದಿಗೆ ವ್ಯವಹಾರದಲ್ಲಿ ಗಳಿಸಿದ ಹಣದಿಂದ ಉನ್ನತ ಸ್ಥಾನವನ್ನು ಗಳಿಸಿದ್ದನು. ಹಲವು ಯಜಮಾನರುಗಳು ತಮ್ಮ ತಾಮ್ರ ಫಲಕಗಳನ್ನು ಒಂದುಗೂಡಿಸಿಕೊಂಡು ಅವನನ್ನು ಸೋಲಿಸಿದರು. ಅವನಿಗಾದ ಅವಮಾನವನ್ನು ನೆನಪು ಮಾಡುವ ಕತೆಯ ಪ್ರಕಾರ ಅವರು ಒಂದು ಹನ್ನೆರಡು ಸಾವಿರ ಕಂಬಳಿಗಳ ಬೆಲೆಯ, ಒಂದು ಒಂಬತ್ತು ಸಾವಿರದ ಬೆಲೆಯ, ಒಂದು ಹದಿನೆಂಟು ಸಾವಿರದ ಬೆಲೆಯ ಮೂರು ತಾಮ್ರಫಲಕಗಳನ್ನು ಮುರಿದರು. ಉನ್ನತ ಸ್ಥಾನ ಹೇಳಿಕೊಳ್ಳುತ್ತಿದ್ದ ಆ ಸಾಧಾರಣ ವ್ಯಕ್ತಿಯು ಆ ಮೂರು ತಾಮ್ರಫಲಕಗಳಿಗೆ ಸರಿಗಟ್ಟುವಷ್ಟು ಬೆಲೆಯ ತಾಮ್ರಫಲಕಗಳನ್ನು ಕೊಳ್ಳಲು ಮೂವತ್ತೊಂಬತ್ತು ಸಾವಿರ ಕಂಬಳಿಗಳನ್ನು ಕೂಡಿಸಿಕೊಳ್ಳಲಾಗಲಿಲ್ಲ. ಅವನು ಸೋತನು. ಅವನ ಮಕ್ಕಳು ಅರ್ಧ ಕುಲೀನರಾಗಿದ್ದರಿಂದ ಅವನ ಅಪಮಾನದಲ್ಲಿ ಪಾಲ್ಗೊಳ್ಳದಿರಲು ಅವರನ್ನು ಬೇರೆ ಕುಟುಂಬಗಳಿಗೆ ವರ್ಗಾಯಿಸಿಬಿಟ್ಟರು.

ವಿಶೇಷಾಧಿಕಾರಿಗಳನ್ನು ಪಡೆಯಲು ಮದುವೆಯೊಂದೇ ಮಾರ್ಗವಾಗಿರಲಿಲ್ಲ. ಅವುಗಳ ಒಡೆಯನನ್ನು ಕೊಲೆಮಾಡುವುದು ಅತ್ಯಂತ ಗೌರವಾನ್ವಿತವಾದ ಮಾರ್ಗವಾಗಿತ್ತು. ಅವನನ್ನು ಕೊಂದವನು ಅವನ ಹೆಸರು, ನೃತ್ಯಗಳು, ಲಾಂಛನಗಳನ್ನೆಲ್ಲ ಪಡೆಯುತ್ತಿದ್ದನು. ತಾವು ಆಸೆ ಪಡುತ್ತಿದ್ದ ನೃತ್ಯಗಳು ಮತ್ತು ಮುಖವಾಡಗಳ ಅಧಿಕಾರವನ್ನು ಅವುಗಳ ಒಡೆಯರ ವೈರದಿಂದಾಗಿ ಪಡೆದುಕೊಳ್ಳಲಾಗದ ಬಣಗಳು ಹೀಗೆ ಮಾಡುತ್ತಿದ್ದವು. ಆ ಸಂಸ್ಕಾರಗಳ ಒಡೆಯನಾದವನೊಬ್ಬನು ಪ್ರಯಾಣ ಮಾಡುತ್ತಿದ್ದ ದೋಣಿಯನ್ನು ಅವರು ಹೊಂಚು ಹಾಕಿ ತಡೆಯುತ್ತಿದ್ದರು. ಕೊಂದವನಿಗೆ ಆ ನೃತ್ಯದ ಹಕ್ಕು ಸಲ್ಲುತ್ತಿತ್ತು. ಅವನು ಆ ಹಕ್ಕನ್ನು ತನ್ನ ಯಜಮಾನ ಅಥವಾ ಹಿರಿಯ ಅಣ್ಣನಿಗೆ ಒಪ್ಪಿಸುತ್ತಿದ್ದನು. ಅದನ್ನು ಪಡೆದುಕೊಂಡವನು ತನ್ನ ಮಗನಿಗೋ ಇಲ್ಲವೇ ಸೋದರಳಿಯನಿಗೋ ದೀಕ್ಷೆ ಕೊಡಿಸಲು ಏರ್ಪಡಿಸಿ, ಆ ದೀಕ್ಷಾರ್ಥಿಗೆ ಸತ್ತವನ ಹೆಸರನ್ನಿಟ್ಟು, ನೃತ್ಯದ ಹಕ್ಕುಗಳನ್ನು ವರ್ಗಾಯಿಸುತ್ತಿದ್ದನು. ಇಡೀ ಸಮಾರಂಭದ ಕಾರ್ಯವಿಧಾನ, ಹಾಡುಗಳು, ನೃತ್ಯದ ಗತಿ, ಸಂಬಂಧಪಟ್ಟ ಪವಿತ್ರ ವಸ್ತುಗಳ ಬಳಕೆಯ ವಿಧಾನ, ಇವೆಲ್ಲವೂ ಅವುಗಳ ಮೊದಲ ಮಾಲೀಕನನ್ನು ಕೊಲ್ಲುವುದಕ್ಕೆ ಮುಂಚಿತವಾಗಿಯೇ ಈ ಹೊಸ ಒಡೆಯನಿಗೆ ತಿಳಿದಿರಬೇಕಾ

ಗಿತ್ತು ಎಂಬುದು ಈ ವರ್ಗಾವಣೆಯ ರೀತಿಯಿಂದ ಸ್ಪಷ್ಟವಾಗುತ್ತದೆ. ಅವನು ಹೊಸದಾಗಿ ಪಡೆದುದು ಸಮಾರಂಭದ ಪರಿಜ್ಞಾನ ಮೊದಲಾದವುಗಳನ್ನಲ್ಲ. ಅವನು ಪಡೆದುದು ಸ್ವತ್ತಾಗಿ ಅವುಗಳ ಮೇಲಿನ ಹಕ್ಕು. ಹೋರಾಟದಲ್ಲಿ ಹತನಾದವನ ವಿಶೇಷಾಧಿಕಾರಗಳನ್ನು ಕೊಂದವನು ಪಡೆಯುತ್ತಿದ್ದನೆಂಬ ಈ ಸಂಗತಿಯು ಪೂರ್ವ ಕಾಲದ ಐತಿಹಾಸಿಕ ಪರಿಸ್ಥಿತಿಗಳ ಬಗ್ಗೆ ಮಾಹಿತಿ ನೀಡುತ್ತದೆ. ಒಂದು ಕಾಲದಲ್ಲಿ ವಾಯುವ್ಯ ತೀರಪ್ರದೇಶದ ವೈಶಿಷ್ಟ್ಯವಾದ ಪ್ರತಿಷ್ಠೆಗಾಗಿ ನಡೆಸುವ ಹೋರಾಟವು ಮುಖ್ಯವಾಗಿ ಯುದ್ಧದ ಮೂಲಕ ಸಾಗುತ್ತಿದ್ದು, ಸ್ವತ್ತುಗಳ ಸಂಬಂಧವಾದ ಪೈಪೋಟಿಯ ಪ್ರಾಮುಖ್ಯತೆ ಕಡಮೆಯಾಗಿತ್ತು.

ವಾಯುವ್ಯ ತೀರ ಪ್ರದೇಶದಲ್ಲಿ ವಿಶೇಷಾಧಿಕಾರಗಳನ್ನು ಪಡೆಯಲೋಸುಗ ಕೊಲೆಮಾಡಬಹುದು ಎಂಬ ಭಾವನೆ ಮನುಷ್ಯ - ಮನುಷ್ಯ ಸಂಬಂಧಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅದು ದೇವತೆಗಳಿಂದ ವರವನ್ನು ಪಡೆಯಲೂ ಸಹ ಅನುಸರಿಸುತ್ತಿದ್ದ ಅಚ್ಚುಮೆಚ್ಚಿನ ದಾರಿ. ಒಂದು ದೇವತೆಯನ್ನು ಭೇಟಿಯಾಗಿ ಅದನ್ನು ಕೊಂದವನು ಆಯಾ ದೇವತೆಗೆ ಸಂಬಂಧಿಸಿದ ಸಂಸ್ಕಾರವಿಧಿ ಮತ್ತು ಮುಖವಾಡಗಳನ್ನು ಪಡೆಯುತ್ತಿದ್ದನು. ಎಲ್ಲ ಜನರೂ ತಾವು ಮಾನವೀಯ ಸಂಬಂಧಗಳನ್ನು ಕುದುರಿಸಿಕೊಳ್ಳುವಲ್ಲಿ ಯಾವ ವರ್ತನೆಯ ಮೇಲೆ ಹೆಚ್ಚಿನ ವಿಶ್ವಾಸವಿಟ್ಟಿರುತ್ತಾರೋ ಅದನ್ನೇ ದೇವತೆಗಳತ್ತಲೂ ತೋರುವುದು ಸಹಜವಾಗಿರಬಹುದು. ಆದರೆ ಭಕ್ತಿಯೆಂಬುದು ಅತ್ಯಲ್ಪವಾದುದಾಗಿ, ಭಯದಿಂದ ಅತಿದೂರವಾಗಿ, ದೇವತೆಗಳನ್ನು ಅಪಮಾನಗೊಳಿಸುವುದು, ಇಲ್ಲವೇ ಕೊಲೆ ಮಾಡುವುದು ಅತ್ಯಂತ ಫಲಪ್ರದವಾದ ವರ್ತನೆಯಾಗಿರುವುದು ಅತ್ಯಪರೂಪ. ಆದರೆ ವಾಯುವ್ಯ ತೀರಪ್ರದೇಶದಲ್ಲಿ ಅದು ಮಾನ್ಯತೆ ಪಡೆದ ಮಾರ್ಗವಾಗಿತ್ತು.

ವಂಶಾನುಗತವಾಗಿಯೂ ಪಡೆಯದೆ, ಕೊಂಡುಕೊಳ್ಳುವುದರ ಮೂಲಕವೂ ಪಡೆಯದೆ ಕೆಲವು ವಿಶೇಷಾಧಿಕಾರಗಳನ್ನು ಒಬ್ಬ ವ್ಯಕ್ತಿಯು ತನ್ನದಾಗಿ ಮಾಡಿಕೊಳ್ಳಲು ಇನ್ನೂ ಒಂದು ದಾರಿಯಿತ್ತು. ಅದೆಂದರೆ ಮತಧಾರ್ಮಿಕ ವೃತ್ತಿಯನ್ನು ಹಿಡಿಯುವುದು. ಶ್ಯಾಮನನಾಗಲಿ, ತಂದೆಯಾಗಲಿ, ಸೋದರಮಾವನಾಗಲಿ ದೀಕ್ಷೆ ನೀಡುತ್ತಿರಲಿಲ್ಲ; ದೇವತೆಗಳೇ ನೀಡುತ್ತಿದ್ದರು. ವ್ಯಕ್ತಿಯು ತಾನು ಕಂಡ ದೇವತೆಯಿಂದ ಹೆಸರುಗಳನ್ನೂ ವಿಶೇಷಾಧಿಕಾರಗಳನ್ನೂ ಪಡೆಯುತ್ತಿದ್ದನು. ಶ್ಯಾಮನರು 'ಭೂತಗಳ ಸ್ತರಕ್ಕೆ ಅನುಗುಣವಾಗಿ' ವಿಶೇಷಾಧಿಕಾರಗಳ ಒಡೆತನವನ್ನು ಪಡೆದು, ಚಲಾಯಿಸುತ್ತಿದ್ದರು. ಅವರ ಹಕ್ಕು ಬಾಧ್ಯತೆಗಳೂ ವಂಶಪಾರಂಪರ್ಯವಾಗಿ ಪಡೆದವುಗಳಂತೆಯೇ ಬಳಕೆಯಾಗುತ್ತಿದ್ದುವು.

ರೂಢಿಗತ ಕ್ರಮದಂತೆ, ತೀವ್ರವಾದ ಕಾಯಿಲೆಯಾಗಿ ಗುಣವಾಗುವುದರ ಮೂಲಕ ಒಬ್ಬ ವ್ಯಕ್ತಿಯು ಶ್ಯಾಮನನಾಗುತ್ತಿದ್ದನು. ಹಾಗೆಂದ ಮಾತ್ರಕ್ಕೆ ಕಾಯಿಲೆಯಿಂದ ಗುಣರಾದವರೆಲ್ಲರೂ ಹಾಗೆ ಗುಣವಾದ ನಂತರ ಶ್ಯಾಮನರಾಗುತ್ತಿದ್ದರೆಂದು ಅರ್ಥವಲ್ಲ. ತಮ್ಮನ್ನು ಭೂತಗಳು ವಾಸಿ ಮಾಡಲಿ ಎಂದು ಬಯಸಿ ಅಡವಿಯಲ್ಲಿರುತ್ತಿದ್ದ ಮನೆಯೊಂದರಲ್ಲಿ ತಮ್ಮನ್ನು ತಾವೇ ಏಕಾಂತವಾಸಕ್ಕೆ ಗುರಿಪಡಿಸಿಕೊಂಡವರು ಮಾತ್ರ ಶ್ಯಾಮನರಾಗಬಹುದಿತ್ತು. ಅಲ್ಲಿ ಭೂತಗಳು ಆ ಮನುಷ್ಯನಲ್ಲಿಗೆ ಬಂದು ಅವನಿಗೆ ಒಂದು ಹೆಸರು ಹಾಗೂ ಹಕ್ಕು ಬಾಧ್ಯತೆಗಳನ್ನು ನೀಡಿದರೆ, ಅವನು ವಿಶೇಷಾಧಿಕಾರಗಳನ್ನು ಪಡೆಯುವ ದೀಕ್ಷೆಯನ್ನು ಇತರರು ಅನುಸರಿಸುತ್ತಿದ್ದ ಕ್ರಮಗಳ ಪ್ರಕಾರವಾಗಿಯೇ ಪಡೆಯುತ್ತಿದ್ದನು. ಅಂದರೆ ಅವನು ಭೂತಗಳ ಬಲ ತುಂಬಿಕೊಂಡು ಹಿಂದಿರುಗಿ ಬಂದು, ತಾನು ಹೊಸದಾಗಿ ಪಡೆದ ವಿಶೇಷಾಧಿಕಾರಗಳನ್ನು ಪ್ರದರ್ಶಿಸುತ್ತಿದ್ದನು. ಅವನು ತನ್ನ ಹೆಸರನ್ನು ಘೋಷಿಸಿಕೊಂಡು. ಕಾಯಿಲೆಯಾಗಿದ್ದ ಯಾರನ್ನಾದರೂ ಗುಣಪಡಿಸಿ ತನ್ನ ಶಕ್ತಿಯನ್ನು ತೋರುತ್ತಿದ್ದನು. ಅನಂತರ ಅವನು ತನ್ನ ಹೊಸ ಹೆಸರನ್ನು ಊರ್ಜಿತ ಪಡಿಸಿಕೊಳ್ಳಲು ಸ್ವತ್ತುಗಳನ್ನು ವಿತರಣೆಮಾಡಿ ಶ್ಯಾಮನನ ವೃತ್ತಿಯನ್ನು ಅನುಸರಿಸುತ್ತಿದ್ದನು.

ಯಜಮಾನರು ಮತ್ತು ಪ್ರಭುಗಳು ತಮ್ಮ ವಿಶೇಷಾಧಿಕಾರಗಳನ್ನು ಪ್ರತಿಷ್ಠೆಯ ಪೈಪೋಟಿಯಲ್ಲಿ ಬಳಸುತ್ತಿದ್ದ ರೀತಿಯಲ್ಲಿಯೇ ಶ್ಯಾಮನರೂ ತಮ್ಮ ವಿಶೇಷಾಧಿಕಾರಗಳನ್ನೂ ಬಳಸುತ್ತಿದ್ದರು. ಶ್ಯಾಮನರು ತಮ್ಮ ಎದುರಾಳಿಗಳು ಹೇಳಿಕೊಳ್ಳುತ್ತಿದ್ದ ದೈವಿಕ ಶಕ್ತಿಗಳನ್ನು ಅವಹೇಳನೆ ಮಾಡಿ ತಮ್ಮ ಶಕ್ತಿ ಹೆಚ್ಚೆಂದು ತೋರಿಸಿಕೊಳ್ಳುವುದಕ್ಕಾಗಿ ಸ್ಪರ್ಧೆ ನಡೆಸುತ್ತಿದ್ದರು. ಪ್ರತಿ ಶ್ಯಾಮನನೂ ತನ್ನ ವಿರೋಧಿಗಳದ್ದಕ್ಕಿಂತ ಅಲ್ಪ ವ್ಯತ್ಯಾಸವಾದ ಯಾವುದಾದರೊಂದು ಕಣ್ಣುಕಟ್ಟನ್ನು ಇಟ್ಟುಕೊಂಡಿರುತ್ತಿದ್ದನು. ಅವನ ಬೆಂಬಲಿಗರು ಅವನ ಕ್ರಮಗಳನ್ನೇ ಎತ್ತಿಕಟ್ಟಿ ಇತರ ಶ್ಯಾಮನರ ಕ್ರಮಗಳನ್ನು ಹೀಗಳೆಯುತ್ತಿದ್ದರು. ಕೆಲವು ಶ್ಯಾಮನರು ಕಾಯಿಲೆಗಳನ್ನು ಹೀರಿಕೊಳ್ಳುತ್ತಿದ್ದರು, ಕೆಲವರು ಉಜ್ಜಿ ಬಿಡುತ್ತಿದ್ದರು, ಮತ್ತೆ ಕೆಲವರು ಕಳೆದು ಹೋದ ಆತ್ಮಗಳನ್ನು ಹಿಂದಕ್ಕೆ ತರುತ್ತಿದ್ದರು. ಅತ್ಯಂತ ಅಚ್ಚುಮೆಚ್ಚಾದ ವಿಧಾನವೆಂದರೆ ರೋಗಿಯ ದೇಹದಿಂದ ಕಾಯಿಲೆಯನ್ನು ಒಂದು ಸಣ್ಣ 'ಹುಳು' ವಿನ ರೂಪದಲ್ಲಿ ತೆಗೆಯುವುದು. ಇಂತಹ ಪ್ರದರ್ಶನಕ್ಕೆ ಸಿದ್ಧನಾಗಿರಲು, ಶ್ಯಾಮನನು ತನ್ನ ಹಲ್ಲು ಸಾಲು ಹಾಗೂ ಮೇಲ್ತುಟಿಗಳ ನಡುವೆ ಹಕ್ಕಿಯ ಹೊಟ್ಟೆಯ ಭಾಗದ ಸಣ್ಣ ಪುಕ್ಕವನ್ನು ಸುಲಿದು ಇಟ್ಟುಕೊಂಡಿರುತ್ತಿದ್ದನು. ಕಾಯಿಲೆಯನ್ನು ಗುಣಪಡಿಸೆಂದು ಅವನನ್ನು ಆಹ್ವಾನಿಸಿದರೆ, ಮೊದಲು ಅವನು ತನ್ನ ಬಾಯನ್ನು ನೀರಿನಿಂದ ಮುಕ್ಕಳಿಸುತ್ತಿದ್ದನು. ಹೀಗೆ ಮಾಡಿ ತನ್ನ ಬಾಯಲ್ಲಿ ಏನೂ ಇಲ್ಲವೆಂದು ತೋರಿದ ನಂತರ

ಅವನು ನೃತ್ಯಮಾಡಿ ಕಾಯಿಲೆಯನ್ನು ಹೀರುತ್ತಿದ್ದನು. ಕೊನೆಗೆ ರೋಗಿಯ ಕೆನ್ನೆಯನ್ನು ಕಚ್ಚಿ ತನ್ನ ಬಾಯಿ ತುಂಬಾ ರಕ್ತಬೆರೆತ ಉಗುಳನ್ನು ತುಂಬಿಕೊಳ್ಳುತ್ತಿದ್ದನು. ಅನಂತರ ಒಂದು ಬೋಗುಣಿಗೆ ತಾನು ರೋಗ ಸ್ಥಾನದಿಂದ ಹೀರಿದೆನೆಂದು ಹೇಳಿಕೊಳ್ಳುತ್ತಿದ್ದ ರಕ್ತದೊಂದಿಗೆ ನುಲಿದ ಆ ಪುಕ್ಕವನ್ನೂ ಉಗುಳುತ್ತಿದ್ದನು. ಬಳಿಕ ಆ 'ಹುಳು'ವನ್ನು ತೋರಿಸಿ ತಾನು ರೋಗದ ಮತ್ತು ನೋವಿನ ಬೇರನ್ನೇ ತೆಗೆದು ಹಾಕಿದ್ದೇನೆಂಬುದಕ್ಕೆ ರುಜುವಾತಾಗಿ ತೋರುತ್ತಿದ್ದನು. ಕೆಲವೊಮ್ಮೆ, ಹಲವಾರು ಶ್ಯಾಮನರು ಒಂದೇ ರೋಗವನ್ನು ಗುಣಪಡಿಸುವುದರಲ್ಲಿ ತಮ್ಮ ತಮ್ಮ ಶಕ್ತಿಯನ್ನು ಪ್ರದರ್ಶಿಸುತ್ತಿದ್ದರು. ಯಾರ ಯಾರ ಕರಾಮತ್ತು ಫಲಿಸಲಿಲ್ಲವೋ ಅವರು ತಾವು ಫಲಕಗಳ ಪೈಪೋಟಿಯಲ್ಲಿ ಸೋತ ಯಜಮಾನನಂತೆಯೇ ಮುಖ ಮುರಿಸಿಕೊಳ್ಳುತ್ತಿದ್ದರು. ಅವರು ಸೋತು ಅವಮಾನದಿಂದ ಸಾಯುತ್ತಿದ್ದರು. ಇಲ್ಲವೇ ಒಂದುಗೂಡಿ ಯಶಸ್ವಿಯಾದ ಸ್ಪರ್ಧಿಯನ್ನು ಕೊಲ್ಲುತ್ತಿದ್ದರು. ಶ್ಯಾಮನೀಯ ವೃತ್ತಿಯಲ್ಲಿ ಯಶಸ್ಸುಗಳಿಸಿದವನನ್ನು ಸೋತ ಅವನ ವಿರೋಧಿಗಳು ಕೊಲ್ಲುವರೆಂಬುದು ಸಾಧಾರಣವಾದ ನಿರೀಕ್ಷಣೆಯಾಗಿತ್ತು. ಶ್ಯಾಮನನ ಸಾವಿಗೆ ಪ್ರತೀಕಾರವಿರಲಿಲ್ಲ. ಅವನ ಶಕ್ತಿಯು ರೋಗ ನಿವಾರಣೆಗೆ ಉಪಯೋಗವಾದಂತೆಯೇ ಕೆಡುಕಿಗೆ ಬರುವುದೆಂದು ಪರಿಗಣಿತವಾಗಿತ್ತು. ಮಾಟಗಾರನಾದಿದ್ದುದರಿಂದ ಅವನಿಗೆ ರಕ್ಷಣೆಯನ್ನು ಪಡೆಯುವ ಹಕ್ಕಿರಲಿಲ್ಲ.

ಕ್ವಾಕಿಯುಟಲ್‌ಗಳಲ್ಲಿ ಇನ್ನೊಂದು ರೀತಿಯಲ್ಲಿ ಶ್ಯಾಮನ್ ವೃತ್ತಿಯು, ಲಾಂಛನಗಳು ಮತ್ತು ಘನತೆಯ ಬಿರುದುಗಳನ್ನು ಊರ್ಜಿತಪಡಿಸಿಕೊಳ್ಳುವುದರ ಸುತ್ತ ಹೆಣೆದುಕೊಂಡಿದ್ದ ಲೌಕಿಕ ಪೈಪೋಟಿಗಳನ್ನು ಹೋಲುತ್ತಿತ್ತು. ಕ್ಯಾನಿಬಲ್ ಸಂಘಕ್ಕೆ ದೀಕ್ಷೆಗೊಳ್ಳುವುದು ಆ ಸಂದರ್ಭಕ್ಕಾಗಿಯೇ ಏರ್ಪಟ್ಟ ಕೌತುಕಕಾರಿ ಉತ್ಸವ. ಇತರ ಪ್ರದೇಶಗಳಲ್ಲಿ ದೈವಿಕತೆಯೊಂದಿಗೆ ಪಡೆದ ವ್ಯಕ್ತಿಗತ ಸಂಪರ್ಕದ ಅನುಭವವೆಂದು ಪರಿಗಣಿತವಾಗಿದ್ದುದು ಇಲ್ಲಿ ಬರಿಯ ಔಪಚಾರಿಕ ಮತ ತತ್ವವಾಗಿಬಿಟ್ಟಿತ್ತು. ಅದೇ ರೀತಿಯಲ್ಲಿ ಶ್ಯಾಮನ್ ವೃತ್ತಿಯಲ್ಲಿಯೂ ಭೂತಗಳನ್ನು ವ್ಯಕ್ತಿಗತವಾಗಿ ಪ್ರಸನ್ನಗೊಳಿಸಿಕೊಳ್ಳುವುದೆಂಬುದು ಅತ್ತ ಸರಿದು ಕರಾಮತ್ತುಗಳನ್ನು ಸಾಧಿಸಿಕೊಳ್ಳುವುದು ಹಾಗೂ ಚಿಕಿತ್ಸಕನಾಗಿ ತನ್ನ ಸ್ಥಾನಗಳಿಕೆಗೆ ಅನುಯಾಯಿಗಳಿಗೆ ಕೌತುಕಪೂರ್ಣವಾದ ರುಜುವಾತುಗಳನ್ನೊದಗಿಸುವುದಕ್ಕೆ ತರಪೇತಿ ನೀಡುವುದು ಪ್ರಾಮುಖ್ಯತೆಗಳಿಸಿಕೊಂಡಿದ್ದುವು. ಪ್ರತಿಯೊಬ್ಬ ಶ್ಯಾಮನನಿಗೂ ಒಬ್ಬ ಸಹಾಯಕನಿರುತ್ತಿದ್ದನು. ನಿಜಕ್ಕೂ ಆ ಸಹಾಯಕ ಅವನ ಬೇಹುಗಾರ. ಜನಗಳೊಂದಿಗೆ ಬೆರೆತು ಓಡಾಡುತ್ತಾ, ಯಾವ ಯಾವ ರೋಗಿಗೆ ಯಾವ ಯಾವ ಭಾಗದಲ್ಲಿ ನೋವು ಇದೆ ಎಂಬುದನ್ನು ತಿಳಿಯುವುದು ಅವನ ಕರ್ತವ್ಯವಾಗಿತ್ತು. ಅನಂತರ ಶ್ಯಾಮನನನ್ನು ಚಿಕಿತ್ಸೆಗೆಂದು ಕರೆದಾಗ,

ಅವನು ತನ್ನ ಗಮನವನ್ನೆಲ್ಲ ರೋಗಿಯ ಮೇಲೆ ಹರಿಸಿ ತನ್ನ ದೈವಿಕ ಶಕ್ತಿಯನ್ನು ತೋರುತ್ತಿದ್ದನು. ಅದೇರೀತಿಯಲ್ಲಿ ಆ ಬೇಹುಗಾರನು ಯಾರಾದರೂ ನಿರುತ್ಸಾಹ ದಿಂದಿದ್ದರೆ ಅದನ್ನೂ ವರದಿ ಮಾಡುತ್ತಿದ್ದನು. ಆ ಬಳಿಕ ಯಾವುದಾದರೂ ಸಾರ್ವ ಜನಿಕ ಚಿಕಿತ್ಸಾ ಸಮಾರಂಭ ನಡೆದಾಗ, ಆ ವ್ಯಕ್ತಿಗಳ ಆತ್ಮಗಳನ್ನು ಪುನಶ್ಚೇತನಗೊಳಿಸ ಬೇಕೆಂದು ಕಂಡುಹಿಡಿದು ಶ್ಯಾಮನರು ತಮ್ಮ ಕಣಿಗಾರಿಕೆ ಶಕ್ತಿಯನ್ನು ತೋರುತ್ತಿದ್ದರು. ಈ ಬೇಹುಗಾರರು ದೋಣಿಗಳಲ್ಲಿ ದೂರ ದೂರದ ಪ್ರಯಾಣ ಕೈಗೊಂಡು ಭೂತಗಳಿಂದ ಸ್ಫೂರ್ತಿಗೊಂಡೆವೆಂದು ಹೇಳುತ್ತಾ ಸಂದೇಶಗಳನ್ನು ಸಾರುತ್ತಿದ್ದರು.

ಶ್ಯಾಮನರು ಮತ್ತು ಅವರ ಬೇಹುಗಾರರ ಮೋಸಗಾರಿಕೆಗಳು ಅವರಿಗೇ ಆಗಲಿ, ಜನರಿಗೇ ಆಗಲಿ, ಅಲಕ್ಷ್ಯದ ವಿಚಾರವಾಗಿರಲಿಲ್ಲ. ಹಲವಾರು ಜನಾಂಗ ಗಳಲ್ಲಿ ದೈವಿಕ ಶಕ್ತಿಯು ಸಹಜವಾಗಿಯೇ ಮನುಷ್ಯನ ಕರಾಮತ್ತುಗಳಲ್ಲಿ ವ್ಯಕ್ತಗೊಳ್ಳುತ್ತದೆಂಬ ಭಾವನೆಯಿದೆ. ಆದರೆ ಕ್ವಾಕಿಯೂಟಲ್‌ಗಳಲ್ಲಿ ಹಾಗಿಲ್ಲ. 'ಜಗತ್ತಿಗೆಲ್ಲಾ ಒಳ್ಳೆಯವ' (ಗುಡ್-ಓವರ್-ಆಲ್-ದಿ-ಅರ್ತ್) ಎಂಬ ಶ್ಯಾಮನನ ಹಾಗೆ ಹತಾಶನಾದವನು ಮಾತ್ರ ತನ್ನ ಡೊಂಬ ಕಾಗೆಯು ಕೈ ಕಟ್ಟುವಂತೆ ಮಾಡಿದುದು ಕಣ್ಕಟ್ಟು ಎಂದು ಒಪ್ಪಿಕೊಳ್ಳುತ್ತಾನೆ. ಆಗ ಜನರು, 'ಅವನು ಸಾಮಾನ್ಯ. ಅವನು ತೋರಿದ ಶ್ಯಾಮನ್ ತಂತ್ರಗಳೆಲ್ಲ ಬರೀ ಕಣ್ಕಟ್ಟು' ಎಂದು ತಿಳಿದುಕೊಂಡು ಬಿಡುತ್ತಿದ್ದರು. ಅವಮಾನಗೊಂಡ ಅವನು ಆ ವೃತ್ತಿಯಿಂದ ಹಿಂದಾದ. ಒಂದು ವರ್ಷದೊಳಗೆ ಹುಚ್ಚನಾದ. ಹಾಗೆಯೇ ತಂತ್ರ ಬಯಲಾದ ಶ್ಯಾಮನನು ಸೋತಂತೆ ಆಗುತ್ತಿತ್ತು. ಒಬ್ಬ ಮದ್ದುಗಾರನು ತನ್ನ ಕೊರಳು ಪಟ್ಟಿಯಿಂದ ಚಿಂದಿ ತುಂಬಿದ ಅಳಿಲೊಂದನ್ನು ತೆಗೆದು, ಅದು ತನ್ನ ತೋಳಿನ ಮೇಲೆ ಓಡಿಯಾಡುವಂತೆ ಮಾಡುತ್ತಿದ್ದನು. ಅವನು ಅದನ್ನು ಹಿಡಿದು ನೃತ್ಯಮಾಡಿ, ತಾನು ಅದು ಜೀವಂತವಾಗುವಂತೆ ಮಾಡಬಲ್ಲೆನೆಂದು ತೋರಿದ ನಂತರ ಅವನ ರಹಸ್ಯ ಸಹಾಯಕನೊಬ್ಬನು ಛಾವಣಿಯಿಂದ ಒಂದು ಹಲಗೆಯನ್ನು ಸರಿಸಿ ಒಂದು ದಾರವನ್ನು ಇಳಿಬಿಡುತ್ತಿದ್ದನು. ಶ್ಯಾಮನನು ಆ ದಾರದ ಕುಣಿಕೆಯನ್ನು ಅಳಿಲಿಗೆ ತೊಡಿಸಿ, ಅದು ಛಾವಣಿಯ ತನಕ ಹಾರುವಂತೆ ಮಾಡುತ್ತಿದ್ದನು. ಅದನ್ನು ಮತ್ತೆ ತನ್ನಲ್ಲಿಗೆ ಕರೆಯುತ್ತಿದ್ದನು. ಪ್ರೇಕ್ಷಕರು ಅವನು ಅಳಿಲನ್ನು ಕರೆಯುವಾಗಲೆಲ್ಲ ಮನೆಯ ಒಂದೇ ಜಾಗದಲ್ಲಿ ನಿಲ್ಲುವುದನ್ನು ಗಮನಿಸಿದರು. ಅವರಲ್ಲಿ ಒಬ್ಬನು ಛಾವಣಿಗೆ ಏರಿ ಒಂದು ಜಾಗದಿಂದ ದಾರ ಇಳಿಬಿಟ್ಟಿದ್ದುದನ್ನು ಕಂಡುಹಿಡಿದನು. ಶ್ಯಾಮನನು ತನ್ನ ವೃತ್ತಿಯನ್ನು ಬಿಟ್ಟನು. ತಿರುಗಾಡುವುದನ್ನು ನಿಲ್ಲಿಸಿದನು. 'ಜಗತ್ತಿಗೆಲ್ಲಾ ಒಳ್ಳೆಯವ' ನಂತೆ ಅವನೂ ಅಪಮಾನದಿಂದ ಕೀರಿಕೊಂಡನು. ಹೀಗೆ ಕ್ವಾಕಿಯೂಟಲ್‌ಗಳಲ್ಲಿ ಶ್ಯಾಮನರು ತಮ್ಮ ಆಟಗಳನ್ನು ತೋರುವಾಗ ರಹಸ್ಯವಿಧಾನಗಳನ್ನೂ ಅನುಸರಿಸುವುದು ರೂಢಿಯಾಗಿತ್ತು. ಅದು ಹೊರ

ಬಿದ್ದರೆ, ಆಗ ಪೊಟ್ಲಾಚ್ ಪೈಪೋಟಿಯಲ್ಲಿ ಸೋತುದಕ್ಕೆ ಸಮನಾಗಿ ಪರಿಗಣಿತವಾಗಿತ್ತು.

ಲೌಕಿಕನಾದ ಯಜಮಾನನಂತೆಯೇ ಶ್ಯಾಮನನೂ ಸಹ ತನ್ನ ವಿಶೇಷಾಧಿಕಾರಗಳನ್ನು ಸ್ವತ್ತುಗಳ ವಿತರಣೆಯಿಂದ ಊರ್ಜಿತಗೊಳಿಸಿಕೊಳ್ಳಬೇಕಾಗಿತ್ತು. ಆವನು ಚಿಕಿತ್ಸೆ ನಡೆಸಿದಾಗ ರೋಗಿಯ ಕುಟುಂಬದ ಸಂಪತ್ತು ಹಾಗೂ ಸ್ಥಾನಗಳಿಗನುಗುಣವಾಗಿ ಪ್ರತಿಫಲ ಪಡೆಯುತ್ತಿದ್ದನು. ಇದು ಸ್ವತ್ತುಗಳ ವಿತರಣೆಯ ಇತರ ಸಂಬಂಧಗಳಂತೆಯೇ ಇರುತ್ತಿತ್ತು. ಕ್ವಾಕಿಯುಟಲ್‌ಗಳು ಶ್ಯಾಮನ್ ವೃತ್ತಿಯನ್ನು 'ಸುಲಭದಲ್ಲಿ ಸ್ವತ್ತುಗಳಿಸುವ ವಿಧಾನ' ಎಂದೇ ಕರೆಯುತ್ತಿದ್ದರು. ವಂಶಾನುಗತವಾಗಿ ಪಡೆಯದೇ ಇಲ್ಲವೇ ಕೊಂಡು ಕೊಳ್ಳದೆ ಬೆಲೆಬಾಳುವ ವಿಶೇಷಾಧಿಕಾರಗಳನ್ನು ಪಡೆಯಲು ಅದು ಒಂದು ಮಾರ್ಗವಾಗಿತ್ತು. ಅವುಗಳಿಂದ ಆ ವ್ಯಕ್ತಿಯ ಸ್ಥಾನ ಉನ್ನತವಾಗುತ್ತಿತ್ತು.

ಕ್ವಾಕಿಯುಟಲ್ ರೂಢಿಯಂತೆ, ಇತರ ಎಲ್ಲ ವಿಶೇಷಾಧಿಕಾರಗಳಂತೆ ಶ್ಯಾಮನ್ ವೃತ್ತಿಯ ವಿಶೇಷಾಧಿಕಾರಗಳನ್ನೂ ಸಹ ವಂಶಾನುಗತವಾಗಿಯೂ ಪಡೆಯಬಹುದಾಗಿತ್ತು, ಕೊಂಡುಕೊಳ್ಳಲೂ ಬಹುದಿತ್ತು. ಆದರೆ ಶ್ಯಾಮನ್ ವೃತ್ತಿಯ ಕರಾಮತ್ತುಗಳನ್ನು ಯಾರಿಂದಲಾದರೂ ಕಲಿಯಲೇ ಬೇಕಾಗುತ್ತಿತ್ತು. ಅನನುಭವಿಗಳು ತಮಗೆ ಅವುಗಳನ್ನು ಕಲಿಸಿದ ಶ್ಯಾಮನನಿಗೆ ಶುಲ್ಕ ತೆರಬೇಕಾಗುತ್ತಿತ್ತು. ದೈವಿಕ ಶಕ್ತಿಗಳನ್ನು ವಂಶಾನುಕ್ರಮದಲ್ಲಿ ಪಡೆಯುವುದು ಎಷ್ಟು ಮಟ್ಟಿಗೆ ವ್ಯಾಪ್ತವಾಗಿತ್ತು ಎಂಬುದನ್ನು ಹೇಳುವುದು ಕಷ್ಟ. ಕ್ಯಾನಿಬಲ್ ನೃತ್ಯಗಾರರಂತೆಯೇ, ತಮ್ಮ ಮಕ್ಕಳು ಅರಣ್ಯದಲ್ಲಿ ಕೆಲ ಕಾಲ ಕಳೆದು ಬಂದ ನಂತರ ಅವರನ್ನು ಶ್ಯಾಮನ್ ವೃತ್ತಿಗೆ ದೀಕ್ಷೆಗೊಳಿಸುತ್ತಿದ್ದುದೂ ಉಂಟು. ಕೋಡಾಗಿ ಎಂಬ ಹೆಸರಾಂತ ಶ್ಯಾಮನನು ತನ್ನ ದೇಹದಿಂದ ತನ್ನ ಶಕ್ತಿಯ ಕಲ್ಲು ಹರಳನ್ನು ವಮನ ಮಾಡಿ ತೆಗೆದು ತನ್ನ ಮಗನ ದೇಹದೊಳಕ್ಕೆ ಎಸೆದನು. ಅದರಿಂದ ಆ ಮಗನು ಅತ್ಯುನ್ನತ ಮಟ್ಟದ ಶ್ಯಾಮನನಾದನು, ಈ ಕಾರ್ಯದಿಂದ ತಂದೆಯು ಶ್ಯಾಮನ್ ವೃತ್ತಿಯನ್ನು ನಡೆಸುವ ತನ್ನ ಎಲ್ಲ ಹಕ್ಕುಗಳನ್ನೂ ಕಳೆದುಕೊಂಡನು.

ವಾಯುವ್ಯ ತೀರಪ್ರದೇಶದಲ್ಲಿ ಪ್ರತಿ ಮಟ್ಟದಲ್ಲಿಯೂ ವರ್ತನೆಯು ವ್ಯಕ್ತಿಯು ತನ್ನ ಪ್ರತಿಷ್ಠೆಯನ್ನೂ, ತನ್ನ ವಿರೋಧಿಗಳ ಕೀಳ್ಮೆಯನ್ನೂ ಪ್ರದರ್ಶಿಸುವ ಆಕಾಂಕ್ಷೆಯಿಂದ ಪ್ರಭಾವಿತಗೊಂಡಿತ್ತು. ಬಹಿರಂಗವಾದ ಆತ್ಮ ಪ್ರಶಂಸೆ, ವಿರೋಧಿಗಳತ್ತ ಕುಹಕ ಮತ್ತು ನಿಂದನೆಗಳ ಸುರಿಮಳೆಯ ಮೂಲಕ ಇದು ಸಾಗುತ್ತಿತ್ತು. ಈ ಚಿತ್ರಣಕ್ಕೆ ಇನ್ನೂ ಒಂದು ಮುಖವಿದೆ. ಕ್ವಾಕಿಯುಟಲ್‌ಗಳು ಅವಹೇಳನೆಯುತ್ತ ಭೀತಿಯನ್ನೂ ಅಷ್ಟೇ ಮಟ್ಟಿಗೆ ಸಂವೇದನೆಯನ್ನು ನಿಂದನೆಯ ರೂಪದಲ್ಲಿ ಅರ್ಥೈ

ಸುವುದನ್ನೂ ಒತ್ತಿ ಹೇಳುತ್ತಿದ್ದರು. ಅವರಲ್ಲಿ ವಿಜಯ ಮತ್ತು ಅಪಮಾನಗಳ ನಡುವೆ ಜೋಕಾಲಿಯಾಡುತ್ತಿದ್ದ ಒಂದೇ ಒಂದು ಆವೇಗ ಶ್ರೇಣಿಗೆ ಪುರಸ್ಕಾರ ವಿತ್ತು. ಆರ್ಥಿಕ ವಿನಿಮಯ, ವಿವಾಹ, ರಾಜಕೀಯ ಜೀವನ ಹಾಗೂ ಮತಧರ್ಮದ ಆಚರಣೆ ಇವೆಲ್ಲವೂ ಮುಖಭಂಗ ಮಾಡುವುದು ಇಲ್ಲವೇ ಮಾಡಿಸಿಕೊಳ್ಳುವುದರ ಮೂಲಕವಾಗಿಯೇ ಸಾಗುತ್ತಿದ್ದವು. ಇದು ಅವರ ವರ್ತನೆಯು ಎಷ್ಟು ಮಟ್ಟಿಗೆ ಅಪಮಾನಕ್ಕೆ ಗುರಿಯಾಗುವುದರ ಭೀತಿಗೆ ಅಡಿಯಾಳಾಗಿತ್ತು ಎಂಬುದರ ಭಾಗಶಃ ಚಿತ್ರಣ ಮಾತ್ರ. ವಾಯುವ್ಯ ತೀರಪ್ರದೇಶದ ಜನ ಹೊರ ಜಗತ್ತಿನೊಂದಿಗೆ, ಪ್ರಕೃತಿಯ ಶಕ್ತಿಗಳೊಂದಿಗೆ ಪಡೆದಿದ್ದ ಸಂಬಂಧಗಳಲ್ಲಿಯೂ ವರ್ತನೆಯ ಇದೇ ರೂಪಿಕೆಯನ್ನು ಕಾಣಬಹುದಿತ್ತು. ಅಪಘಾತಗಳೆಲ್ಲ ವ್ಯಕ್ತಿಯ ಅಪಮಾನಕ್ಕೀಡಾಗುವ ಪ್ರಸಂಗಗಳು. ಕೈಯಿಂದ ಕೊಡಲಿ ಜಾರಿ ಕಾಲು ಗಾಯವಾದರೆ, ಆ ಮನುಷ್ಯನು ತನಗಾದ ಅಪಮಾನವನ್ನು ತೊಡೆದು ಹಾಕಬೇಕಾಗುತ್ತಿತ್ತು. ಒಂದು ದೋಣಿ ತಲೆಕೆಳಕಾದರೆ, ಅದರ ಒಡೆಯನು ತನ್ನ 'ದೇಹದಿಂದ' ಅಪಮಾನವನ್ನು 'ಒರೆಸಿ ತೆಗೆಯಬೇಕಾಗುತ್ತಿತ್ತು.' ಈ ಘಟನೆಗಳನ್ನು ಕಂಡು ಇತರರು ನಗುವುದನ್ನು ಹೇಗಾದರೂ ತಡೆಗಟ್ಟಲೇಬೇಕಾಗಿತ್ತು. ಇದಕ್ಕೆ ಅವರು ಅನುಸರಿಸುತ್ತಿದ್ದ ಸರ್ವಮಾನ್ಯವಾದ ಕ್ರಮವೆಂದರೆ ಸ್ವತ್ತಿನ ವಿತರಣೆ. ಅದು ಅಪಮಾನವನ್ನು ತೊಡೆದು ಹಾಕುತ್ತಿತ್ತು. ಅಂದರೆ ಇದು ಅವರ ಸಂಸ್ಕೃತಿಯು ಪೊಟ್ಲಾಚ್ ನಡೆಸುವುದರೊಂದಿಗೆ ಮೇಳೈಸಿದ್ದ ಸ್ವಪ್ರತಿಷ್ಠೆಯ ಮನೋಭಾವವನ್ನು ಪುನಃ ನೆಲೆಗೊಳಿಸುತ್ತಿತ್ತು. ಸಣ್ಣ ಪುಟ್ಟ ಅಕಸ್ಮಿಕಗಳನ್ನು ಈ ರೀತಿ ಬಗೆಹರಿಸುತ್ತಿದ್ದರು. ದೊಡ್ಡವುಗಳಾದರೆ ಮಾಗಿ ಹಬ್ಬವನ್ನು ಏರ್ಪಡಿಸಿಯೋ, ರುಂಡ ಬೇಟೆಗೆ ಹೋಗಿಯೋ ಇಲ್ಲವೇ ಆತ್ಮಹತ್ಯೆ ಮಾಡಿಕೊಂಡೋ ಬಗೆಹರಿಸಬೇಕಾಗುತ್ತಿತ್ತು. ಕ್ಯಾನಿಬಲ್ ಸಂಘದ ಮುಖವಾಡವೊಂದು ಮುರಿದು ಹೋದರೆ, ಆ ಅಪಮಾನವನ್ನು ತೊಡೆಯಲು ಒಂದು ಮಾಗಿ ಹಬ್ಬವನ್ನು ಏರ್ಪಡಿಸಿ, ತನ್ನ ಮಗನೊಬ್ಬನಿಗೆ ಕ್ಯಾನಿಬಲ್ ದೀಕ್ಷೆ ಕೊಡಿಸಬೇಕಾಗುತ್ತಿತ್ತು. ತನ್ನ ಸ್ನೇಹಿತನೊಂದಿಗೆ ಜೂಜಾಡಿ. ಆಸ್ತಿಯನ್ನೆಲ್ಲ ನೀಗಿಕೊಂಡರೆ ಅಂತಹವನಿಗೆ ಆತ್ಮಹತ್ಯೆಯೇ ದಾರಿ.

ಇದೇ ರೀತಿಯಲ್ಲಿ ಅವರು ವ್ಯವಹರಿಸುತ್ತಿದ್ದ ಮಹತ್ವದ ಪ್ರಸಂಗವೆಂದರೆ ಸಾವು. ವಾಯುವ್ಯ ತೀರ ಪ್ರದೇಶದಲ್ಲಿ ರೂಢಿಯಲ್ಲಿದ್ದ ಶೋಕಾಚರಣೆಯನ್ನು, ಅರಿತುಕೊಳ್ಳಬೇಕಾದರೆ, ಅಲ್ಲಿನ ಸಂಸ್ಕೃತಿಯು ಸಂಸ್ಥೀಕರಣ ಮಾಡಿದ್ದ ವರ್ತನೆಯ ವಿಲಕ್ಷಣ ಖಂಡವೃತ್ತವನ್ನು ಕುರಿತು ಕೂಲಂಕುಶವಾದ ಪರಿಜ್ಞಾನವು ಅತ್ಯವಶ್ಯಕ, ಅವರ ದೃಷ್ಟಿಯಲ್ಲಿ ಸಾವು ಅತಿ ಪ್ರಖರವಾದ ಮುಖಭಂಗ. ಇತರ ಪ್ರಮುಖ ಅಪಘಾತಗಳನ್ನು ಎದುರಿಸಿದಂತೆಯೇ ಸಾವಿನ ಪ್ರಸಂಗವನ್ನೂ ಸಹ ಅವರು ಸ್ವತ್ತಿನ ವಿತರಣೆ ಮತ್ತು

ವಿನಾಶ, ರುಂಡಬೇಟೆ ಮತ್ತು ಆತ್ಮಹತ್ಯೆಗಳ ಮೂಲಕ ಎದುರಿಸುತ್ತಿದ್ದರು. ತಮಗಾದ ಅಪಮಾನವನ್ನು ತೊಡೆದು ಹಾಕಲು ಅವರು ರೂಢಿಗತ ಮಾರ್ಗಗಳನ್ನು ಅನುಸರಿಸುತ್ತಿದ್ದರು. ಮುಖಂಡನೊಬ್ಬನ ಸಮೀಪ ಬಂಧುವು ತೀರಿ ಹೋದರೆ ಅವನು ತನ್ನ ಮನೆಯನ್ನ ವಿತರಣೆ ಮಾಡುತ್ತಿದ್ದ. ಮನೆಯ ಚೌಕಟ್ಟಿನಿಂದ ಗೋಡೆಗಳ ಮತ್ತು ಛಾವಣಿಯ ಹಲಗೆಗಳನ್ನು ಹರಿದು ತೆಗೆದು, ಕೈಲಾದವರು ಒಯ್ದು ಬಿಡಬಹುದಾಗಿತ್ತು, ಆದರೆ ಅದೂ ಸಹ ಸಾಧಾರಣ ವ್ಯಾಪ್ತಿಯ ಪೊಟ್ಲಾಚಿನ ರೀತಿಯಲ್ಲಿಯೇ ಇದ್ದು ಒಯ್ದ ಪ್ರತಿ ಹಲಗೆಯನ್ನೂ ಬಡ್ಡಿಯೊಂದಿಗೆ ಹಿಂತಿರುಗಿಸಬೇಕಾಗಿತ್ತು. ಇದನ್ನು "ಪ್ರಿಯರಾದವರು ತೀರಿಹೋದುದರಿಂದ ಹಿಡಿದ ಹುಚ್ಚು", ಎಂದು ಕರೆಯುತ್ತಿದ್ದರು. ಈ ರೀತಿಯಲ್ಲಿ ಕ್ವಾಕಿಯುಟಲ್‌ಗಳು ವಿವಾಹ, ದೈವಿಕ ಶಕ್ತಿಯ ಗಳಿಕೆ, ಇಲ್ಲವೇ ಜಗಳಗಳ ಸಂದರ್ಭದಲ್ಲಿ ವ್ಯವಹರಿಸುತ್ತಿದ್ದ ರೀತಿಯಲ್ಲಿಯೇ ಶೋಕಾಚರಣೆಯಲ್ಲಿಯೂ ವ್ಯವಹರಿಸುತ್ತಿದ್ದರು.

ಸಾವಿನಿಂದ ಆದ ಮುಖಭಂಗವನ್ನು ಎದುರಿಸಲು ಇದಕ್ಕಿಂತ ತೀವ್ರವಾದ ಮಾರ್ಗವೊಂದಿತ್ತು. ಅದು ರುಂಡಬೇಟೆ. ಯಾವರೀತಿಯಲ್ಲೂ ಅದು ಸತ್ತು ಹೋದ ವ್ಯಕ್ತಿಯನ್ನು ಕೊಂದ ಗುಂಪಿನ ಮೇಲೆ ಸಾಧಿಸುತ್ತಿದ್ದ ಪ್ರತೀಕಾರವಲ್ಲ. ಸತ್ತು ಹೋದ ಆ ನೆಂಟ ಕಾಯಿಲೆಯಾಗಿ ಹಾಸಿಗೆಯಲ್ಲಿ ಮರಣ ಹೊಂದಿದ್ದಿರಬಹುದು ಅಥವಾ ಶತ್ರುವಿನಿಂದ ಹತವಾಗಿದ್ದಿರಬಹುದು. ಈ ರುಂಡ ಬೇಟೆಯನು 'ಕಣ್ಣೀರನ್ನೊರೆಸಿಕೊಳ್ಳಲು ಕೊಲ್ಲುವುದು.' ಎಂದು ಕರೆಯುತ್ತಿದ್ದರು. ಇದು ತನಗೆ ಬದಲು ಇನ್ನೊಂದು ಕುಟುಂಬದವರು ಶೋಕತಪ್ತರಾಗುವಂತೆ ಮಾಡುವುದರ ಮೂಲಕ ಪೂರ್ವಸ್ಥಿತಿಯನ್ನು ಗಳಿಸುವ ವಿಧಾನ. ಯಜಮಾನನೊಬ್ಬನ ಮಗ ತೀರಿಹೋದರೆ, ಅವನು ದೋಣಿಯಲ್ಲಿ ಕುಳಿತು ಹೊರಡುತ್ತಿದ್ದನು. ನೆರೆಯ ಮುಖಂಡನೊಬ್ಬನು ಅವನನ್ನು ತನ್ನ ಮನೆಗೆ ಬರಮಾಡಿಕೊಳ್ಳುತ್ತಿದ್ದನು. ಔಪಚಾರಿಕ ಸ್ವಾಗತದ ನಂತರ ಆಗಂತುಕನು ಆತಿಥೇಯನನ್ನು ಕುರಿತು, 'ಈವತ್ತು ನನ್ನ ರಾಜಕುಮಾರ ತೀರಿಹೋದ. ನೀನೂ ಅವನೊಂದಿಗೆ ಹೋಗು.' ಎಂದು ಹೇಳಿ ಅವನನ್ನು ಕೊಲ್ಲುತ್ತಿದ್ದನು. ಅವರ ದೃಷ್ಟಿಯಲ್ಲಿ ಮಗನನ್ನು ಕಳೆದುಕೊಂಡ ಮುಖಂಡನು ತನಗಾದ ಅಪಮಾನದಿಂದ ಎದೆಗುಂದದೇ ಪ್ರತಿಧಾಳಿ ಮಾಡಿದ್ದರಿಂದ ಘನಕಾರ್ಯ ಮಾಡಿದಂತಾಗುತ್ತಿತ್ತು. ಸಾವಿನಿಂದಾದ ಅಗಲಿಕೆಯನ್ನು ಮೂಲಭೂತವಾಗಿ ವಿಕಲ್ಪದೃಷ್ಟಿಯಿಂದ ಆ ಜನ ಅರ್ಥೈಸುತ್ತಿದ್ದರೆಂಬುದನ್ನು ಮರೆತರೆ ಈ ಇಡೀ ಕಾರ್ಯವಿಧಾನ ಅರ್ಥಹೀನವಾಗಿ ತೋರುವುದು. ಬಾಳಿನ ಇತರ ದುರದೃಷ್ಟದ ಘಟನೆಗಳಂತೆ ಸಾವು ಸಹ ವ್ಯಕ್ತಿಯ ಪ್ರತಿಷ್ಠೆಗೆ ಧಕ್ಕೆಯುಂಟುಮಾಡುತ್ತಿತ್ತು. ಅದು ತಮಗಾದ ಅಪಮಾನವೆಂದು ಬಗೆದು ಆ ಜನ ವ್ಯವಹರಿಸುತ್ತಿದ್ದರು.

ಸಾವಿನ ಸಂದರ್ಭದಲ್ಲಿ ಇಂತಹ ವರ್ತನೆಯನ್ನು ತೋರಿದ ಕತೆಗಳು ಹಲವಾರಿವೆ. ಒಬ್ಬ ಮುಖಂಡನ ಸಹೋದರಿಯೂ, ಅವಳ ಮಗಳೂ ವಿಕ್ಟೋರಿಯಾಕ್ಕೆ ಹೋಗಿದ್ದರು. ಅವರು ಅಲ್ಲಿ ಕೆಟ್ಟ ವಿಸ್ಕಿಯನ್ನು ಕುಡಿದರೋ, ಇಲ್ಲವೇ ಅವರ ದೋಣಿ ಮುಳುಗಿತೋ ಅಂತೂ ಅವರು ಹಿಂತಿರುಗಿ ಬರಲಿಲ್ಲ. ಆಗ ಮುಖಂಡನು ತನ್ನ ಭಟರನ್ನು ಕರೆದನು. 'ಬಣದ ಮಹಾ ಜನರೇ. ನಾನು ಈಗ ನಿಮ್ಮನ್ನು ಕೇಳುತ್ತಿದ್ದೇನೆ. ಈಗ ಯಾರು ಅಳಬೇಕು ? ನಾನೇ ಅಳಲೋ ಇಲ್ಲವೇ ಬೇರೆಯವರೋ ?' ಎಂದು ಕೇಳಿದನು. ಆ ತಂಡದ ಪರವಾಗಿ ಮಾತನಾಡುವವನು ಹೇಳಿದ 'ಯಜಮಾನ, ನೀನು ಅಳಬೇಡ. ಬೇರೆ ಬಣದವರು ಅಳಲಿ' ಎಂದು. ಅವರು ಕೂಡಲೆ ಯುದ್ಧ ಸ್ತಂಭವನ್ನು ನೆಟ್ಟರು. ಆ ಮೂಲಕ ತಮಗಾದ ನಷ್ಟವನ್ನು ತೊಡೆದು ಹಾಕುವ ನಿರ್ಧಾರವನ್ನು ಸಾರಿ, ಯುದ್ಧ ತಂಡವನ್ನು ಕೂಡಿಸಿದರು. ಅವರು ಹೊರಟು ಏಳು ಗಂಡಸರು ಮತ್ತು ಇಬ್ಬರು ಮಕ್ಕಳು ಮಲಗಿದ್ದುದನ್ನು ಕಂಡು ಅವರನ್ನು ಕೊಂದು ಹಾಕಿದರು. ಆಗ ಅವರಿಗೆ ಸಮಾಧಾನವಾಗಿ, ಸಂಜೆಯ ವೇಳೆಗೆ ಅವರು ಸೆಬಾವಿಗೆ ಹಿಂತಿರುಗಿದರು.

ಈಗ ಜೀವಂತವಾಗಿರುವ ಒಬ್ಬಾತನು 1870ರ ದಶಕದಲ್ಲಿ ಚಿಪ್ಪು ಮೀನುಗಳನ್ನು ತರಲು ಹೋಗಿದ್ದಾಗ ಪಡೆದ ಅನುಭವವನ್ನು ಹೀಗೆ ಹೇಳಿದನು. ಅವನು ತನ್ನ ಬಣದ ಇಬ್ಬರು ಯಜಮಾನರಲ್ಲಿ ಒಬ್ಬನಾದ ಟ್ಲಾಬಿಡನ ಜೊತೆಗೆ ಇರುತ್ತಿದ್ದನು. ಒಂದು ರಾತ್ರಿ ಅವನು ಸಮುದ್ರದ ಕರೆಯಲ್ಲಿ ಛಾವಣಿಯೊಂದರ ಕೆಳಗೆ ಮಲಗಿ ನಿದ್ರಿಸುತ್ತಿರುವಾಗ ಯಾರೋ ಇಬ್ಬರು ಬಂದು ಎಬ್ಬಿಸಿ ಹೀಗೆ ಹೇಳಿದರು; "ನಮ್ಮ ಯಜಮಾನ ಗಾಗಹೆಮೆಯ ರಾಜಕುಮಾರಿಯು ತೀರಿಹೋದುದರಿಂದ ಯಜಮಾನ ಟ್ಲಾಬಿಡನನ್ನು ಕೊಲ್ಲಲು ನಾವು ಬಂದಿದ್ದೇವೆ. ನಾವು ಅರವತ್ತು ಮಂದಿ, ಮೂರು ದೊಡ್ಡ ದೋಣಿಗಳಲ್ಲಿ ಬಂದಿದ್ದೇವೆ. ಟ್ಲಾಬಿಡನ ತಲೆಯನ್ನು ಪಡೆಯದೆ ನಾವು ನಮ್ಮ ದೇಶಕ್ಕೆ ಹಿಂತಿರುಗುವಂತಿಲ್ಲ." ಬೆಳಗಿನ ಊಟಕ್ಕೆ ಕುಳಿತಿದ್ದಾಗ ಟ್ಲಾಬಿಡನಿಗೆ ಈ ವಿಷಯವನ್ನು ಅವನು ತಿಳಿಸಿದನು. ಆದರೆ ಟ್ಲಾಬಿಡನು "ಅಯ್ಯೋ ದೇವರೆ, ಗಾಗಹೆಮೆ ನನ್ನ ಸ್ವಂತ ಸೋದರಮಾವನಾಗಬೇಕು. ಅವನ ತಂದೆಯ ತಾಯಿ, ನನ್ನ ತಾಯಿಯ ತಾಯಿ ಒಬ್ಬಳೇ. ಆದ್ದರಿಂದ ಅವನು ನನಗೆ ಏನೂ ಕೇಡು ಮಾಡಲಾರ." ಎಂದು ಹೇಳಿಬಿಟ್ಟನು. ಅವರು ಊಟ ಮಾಡಿದರು. ಊಟದ ನಂತರ ಟ್ಲಾಬಿಡನು ಹೊರಡಲು ಸಿದ್ಧನಾಗಿ, ಹಳ್ಳಿಗೆ ಸ್ವಲ್ಪವೇ ದೂರದಲ್ಲಿದ್ದ ಒಂದು ದ್ವೀಪದಲ್ಲಿ ಜೋಡು ಚಿಪ್ಪಿನ ಮೀನುಗಳನ್ನು ಹಿಡಿಯಲು ಹೋಗುವುದಾಗಿ ಹೇಳಿದನು. ಇಡೀ ಬಣವು ಒಂದಾಗಿ ತಮ್ಮ ಮುಖಂಡನು ಹೋಗದಂತೆ ಅಡ್ಡಿ ಮಾಡಿದರು. ಆದರೆ ಟ್ಲಾಬಿಡನು ತನ್ನ ಜನ ಹೇಳಿದುದನ್ನು ಕೇಳಿ ನಕ್ಕನು. ತನ್ನ ಟೊಪ್ಪಿಗೆಯನ್ನೂ, ಹುಟ್ಟನ್ನೂ

ತೆಗೆದುಕೊಂಡು ಮನೆಯಿಂದ ಆಚೆ ಹೋದನು. ಅವನು ಕೋಪಗೊಂಡಿದ್ದುದರಿಂದ ಜನರು ಯಾರೂ ಮಾತನಾಡಲಿಲ್ಲ. ಅವನು ತನ್ನ ದೋಣಿಯನ್ನು ಹೊರಡಿಸಿದನು. ದೋಣಿ ನೀರಿಗೆ ಇಳಿದು ತೇಲತೊಡಗಿದಾಗ, ಅವನ ಕಿರಿಯ ಮಗನು ದೋಣಿಗೆ ಹೋಗಿ, ಅದರ ಮೂತಿಯಲ್ಲಿ ತನ್ನ ತಂದೆಯೊಂದಿಗೆ ಕುಳಿತನು. ಟ್ಲಾಬಿಡನು ಹುಟ್ಟು ಹಾಕುತ್ತ ದೋಣಿಯನ್ನು, ಜೋಡು ಚಿಪ್ಪಿನ ಮೀನುಗಳು ರಾಶಿ ರಾಶಿಯಾಗಿದ್ದ ಆ ದ್ವೀಪದತ್ತ ನಡೆಸಿದನು. ಅವನ ದೋಣಿ ಅರ್ಧ ದಾರಿಯಲ್ಲಿದ್ದಾಗ, ಜನ ತುಂಬಿದ್ದ ಮೂರು ದೋಣಿಗಳು ಕಂಡು ಬಂದುವು. ಟ್ಲಾಬಿಡನು ತನ್ನ ದೋಣಿಯನ್ನು ಅವುಗಳ ಕಡೆಗೆ ತಿರುಗಿಸಿದನು. ಅವನು ಹುಟ್ಟು ಹಾಕುವುದನ್ನು ನಿಲ್ಲಿಸಿದನು. ಎರಡು ದೋಣಿಗಳು ಅವನಿಗೂ ದ್ವೀಪಕ್ಕೂ ನಡುವೆ, ಒಂದು ದೋಣಿ ಅವನಿಗೂ ಸಮುದ್ರಕ್ಕೂ ನಡುವೆ ಸಾಗಿದವು. ಮೂರು ದೋಣಿಗಳ ಮೂತಿ ಒಂದೇ ರೇಖೆಯಲ್ಲಿದ್ದವು. ಅವು ನಿಲ್ಲಲೇ ಇಲ್ಲ. ಟ್ಲಾಬಿಡನ ತಲೆಯಿಲ್ಲದ ದೇಹ ನಿಂತಿದ್ದುದು ಮಾತ್ರ ಕಂಡುಬಂದಿತು. ಯುದ್ಧ ಭಟರಿದ್ದ ದೋಣಿಗಳು ದೂರ ಸರಿದವು. ಅವು ದೃಷ್ಟಿಯಿಂದಾಚೆ ಸಾಗಿದ ನಂತರ ಬಣದ ಜನರು ಒಂದು ಸಣ್ಣ ದೋಣಿಯನ್ನು ಹೊರಡಿಸಿಕೊಂಡು, ಟ್ಲಾಬಿಡನು ಸತ್ತುಬಿದ್ದಿದ್ದ ದೋಣಿಯನ್ನು ಎಳೆದು ತರಲು ಹೋದರು. ಆ ಹುಡುಗ ಅಳಲೇ ಇಲ್ಲ. ಅದಕ್ಕೆ ಅವರು ನೀಡುವ ಕಾರಣ 'ತನ್ನ ತಂದೆಗೆ ಒದಗಿದ ಆಪತ್ತನ್ನು ಕಂಡು ಅವನ ಹೃದಯ ನಿಂತು ಹೋಗಿತ್ತು.' ಅವರು ಸಮುದ್ರ ತಡಿಗೆ ಬಂದ ಮೇಲೆ ಆ ದೊಡ್ಡ ಮುಖಂಡನನ್ನು ಸಮಾಧಿ ಮಾಡಿದರು.

ಒಂದು ಸಾವಿನ ಆಘಾತವನ್ನು ತೊಡೆದು ಹಾಕಲು, ಯಾರನ್ನು ಕೊಲ್ಲಬೇಕು ಎಂಬುದನ್ನು ನಿರ್ಧರಿಸುವಲ್ಲಿ ಒಂದು ನಿಮಿತ್ತವಿರುತ್ತಿತ್ತು. ಅವನ ಸ್ಥಾನಮಾನ ಸತ್ತವನ ಸ್ಥಾನಮಾನಕ್ಕೆ ಸಮನಾದುದಾಗಿರಬೇಕಾಗಿತ್ತು. ಸಾಮಾನ್ಯನ ಸಾವನ್ನು ಸಾಮಾನ್ಯನ ಹತ್ಯೆ, ರಾಜಕುಮಾರಿಯ ಸಾವನ್ನು ರಾಜಕುಮಾರನ ಹತ್ಯೆ ತೊಡೆದು ಹಾಕುತ್ತಿತ್ತು. ಸಾವಿನಿಂದಾಗಿ ಅಗಲಿಕೆಗೆ ಗುರಿಯಾದವನು ಸತ್ತವನ ಸಮಾನ ಸ್ಥಾನೀಯನನ್ನು ಉರುಳಿಸಿ ಬಿಟ್ಟರೆ, ಅವನು ತನಗೆ ಆಘಾತವಾಗಿದ್ದರೂ ತನ್ನ ಸ್ಥಾನಮಾನವನ್ನು ಉಳಿಸಿಕೊಂಡಂತಾಗುತ್ತಿತ್ತು.

ದುಮ್ಮಾನ ತಳೆದು, ಹುಚ್ಚು ಸಾಹಸದ ಕಾರ್ಯಗಳಲ್ಲಿ ತೊಡಗುವುದು ಕ್ವಾಕಿಯುಟಲ್‌ಗಳು ಹತಾಶೆಗೊಂಡಾಗ ತೋರುತ್ತಿದ್ದ ವಿಶಿಷ್ಟ ಪ್ರತಿಕ್ರಿಯೆ. ಒಬ್ಬ ಹುಡುಗನನ್ನು ಅವನ ತಂದೆ ಹೊಡೆದರೆ ಅಥವಾ ಒಬ್ಬಾತನ ಮಗ ತೀರಿಹೋದರೆ, ಅಂತಹವನು ಅನ್ನ ತೊರೆದು, ಮೌನ ತಳೆದು, ತನ್ನ ಹಾಸಿಗೆಯ ಮೇಲೆ ಬಿದ್ದುಕೊಳ್ಳುತ್ತಿದ್ದನು. ಆಘಾತಗೊಂಡ ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಸೂಕ್ತ ಕಾರ್ಯವನ್ನು ಕುರಿತು ನಿರ್ಧರಿಸಿಕೊಂಡ ಕೂಡಲೇ ಎದ್ದು ಸ್ವತ್ತನ್ನು ವಿತರಣೆ ಮಾಡು

ತ್ತಿದನು. ಇಲ್ಲವೇ ರುಂಡಬೇಟೆಗೆ ಹೊರಡುತ್ತಿದ್ದನು. ಅಥವಾ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದನು. ಕ್ವಾಕಿಯೂಟಲ್‌ಗಳಲ್ಲಿ ಬಹಳ ಪ್ರಚಾರದಲ್ಲಿರುವ ಪುರಾಣ ಕತೆಗಳಲ್ಲೊಂದು ಒಬ್ಬ ತರುಣನನ್ನು ಕುರಿತುದು. ಅವನನ್ನು ಅವನ ತಂದೆಯೋ ತಾಯಿಯೋ ಬಯ್ದ ಕಾರಣ ಅವನು ನಾಲ್ಕು ದಿನ ಹಾಸಿಗೆಯ ಮೇಲೆ ನಿಶ್ಚಲನಾಗಿ ಬಿದ್ದಿದ್ದು, ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿಕೊಂಡು ಕಾಡಿಗೆ ಹೋಗುತ್ತಾನೆ. ಅವನು ಜಲಪಾತಗಳಿಂದ, ಪ್ರಪಾತಗಳಿಂದ ಧುಮುಕುತ್ತಾನೆ, ಇಲ್ಲವೇ ಕೊಳಗಳಲ್ಲಿ ಮುಳುಗಲು ಯತ್ನಿಸುತ್ತಾನೆ. ಆದರೆ ಒಂದು ದೇವತೆಯು ಅಡ್ಡಬಂದು ಅವನನ್ನು ಉಳಿಸಿ ಅವನಿಗೆ ತನ್ನ ಶಕ್ತಿಯನ್ನು ನೀಡುತ್ತದೆ. ಅನಂತರ ತನ್ನ ಪ್ರತಿಷ್ಠೆಯಿಂದ ತಂದೆತಾಯಿಗಳ ಮುಖಭಂಗ ಮಾಡಲು ಆವನು ಹಿಂತಿರುಗಿ ಬರುತ್ತಾನೆ.

ಹೋಲಿಕೆಯಿಂದ ನೋಡಿದರೆ ಆತ್ಮಹತ್ಯೆಯು ಬಹು ಮಟ್ಟಿಗೆ ರೂಢಿಯಲ್ಲಿತ್ತು. ತನ್ನ ಮಗಳ ಶೀಲವನ್ನು ಶಂಕಿಸಿ ಅಳಿಯನು ಅವಳನ್ನು ತೌರುಮನೆಗೆ ಕಳುಹಿಸಿದ್ದ ದಕ್ಕೆ ಅಪಮಾನಗೊಂಡು, ಅವಳ ತಾಯಿಯು ನೇಣುಹಾಕಿಕೊಂಡು ಪ್ರಾಣ ಬಿಟ್ಟಳು. ತನ್ನ ಮಗನು ದೀಕ್ಷಾ ಸಮಾರಂಭದ ನೃತ್ಯದಲ್ಲಿ ಮುಗ್ಗರಿಸಿದನೆಂದು, ಇನ್ನೊಮ್ಮೆ ಮಾಗಿ ಹಬ್ಬವನ್ನು ಏರ್ಪಡಿಸಲು ತನಗೆ ಅನುಕೂಲಗಳಿಲ್ಲದ್ದರಿಂದ ಒಬ್ಬಾತನು ಸೋತಂತಾಗಿ, ಗುಂಡಿಟ್ಟುಕೊಂಡು ಸತ್ತನು.

ಅಪಮಾನಕ್ಕೆ ಗುರಿಯಾದವನು ತಾನೇ ಸ್ವತಃ ತನ್ನ ಕೈಗಳಿಂದ ಆತ್ಮಹತ್ಯೆ ಮಾಡಿಕೊಳ್ಳದೇ ಹೋದರೂ ವ್ಯಕ್ತಿಗಳ ಸಾವಿಗೆ ಅವರು ಮುಖಭಂಗಗೊಂಡುದೇ ಕಾರಣವೆಂದು ಮತ್ತೆಮತ್ತೆ ಪರಿಗಣಿತವಾಗುತ್ತಿತ್ತು. ಚಿಕಿತ್ಸಾ ನೃತ್ಯದಲ್ಲಿ ತನ್ನ ಗುಟ್ಟು ರಟ್ಟಾದ ಶ್ಯಾಮನ್. ತಾಮ್ರಫಲಕಗಳನ್ನು ಮುರಿಯುವುದರಲ್ಲಿ ಸೋತುಹೋದ ಯಜಮಾನ, ಆಟದಲ್ಲಿ ಅಪಜಯಗೊಂಡ ಬಾಲಕ ಮೊದಲಾದವರೆಲ್ಲ ಅಪಮಾನದಿಂದ ತೀರಿಹೋದರೆಂದು ಹೇಳಲಾಗುತ್ತಿತ್ತು. ರೂಢಿಗೆ ವಿರುದ್ಧವಾದ ಮದುವೆಗಳಿಂದ ಉಂಟಾಗುವ ಆತ್ಮಹತ್ಯೆಗಳೇ ಹೆಚ್ಚು. ಇಂತಹ ಸಂದರ್ಭಗಳಲ್ಲಿ ವರನ ತಂದೆಯು ಟೀಕೆಗೆ ಸುಲಭವಾಗಿ ಈಡಾಗುತ್ತಿದ್ದನು. ಸ್ವತ್ತು ಹಾಗೂ ವಿಶೇಷಾಧಿಕಾರಗಳ ವರ್ಗಾವಣೆಗಳು ವಿವಾಹದೊಂದಿಗೆ ಹೊಸೆದುಕೊಂಡಿದ್ದುದರಿಂದ ವರನ ಪ್ರತಿಷ್ಠೆಯ ಪ್ರಶ್ನೆ ಮೇಲೇಳುತ್ತಿತ್ತು. ಈ ಕಾರಣದಿಂದಾಗಿ ರೂಢಿ ತಪ್ಪಿದ ಮದುವೆಯಿಂದಾಗಿ ವರನ ತಂದೆಯು ಭಾರಿ ಆಘಾತಕ್ಕೆ ಗುರಿಯಾಗುತ್ತಿದ್ದನು.

ತಮ್ಮ ಗ್ರಾಮವೊಂದರ ವೃದ್ಧ ಯಜಮಾನನು ಅಪಮಾನದಿಂದ ಸಾವನ್ನಪ್ಪಿದ ಪ್ರಸಂಗವನ್ನು ಕ್ವಾಕಿಯೂಟಲ್‌ಗಳು ನಿರೂಪಿಸುತ್ತಿದ್ದರು. ಎಷ್ಟೋವರ್ಷಗಳ ಹಿಂದೆ ಆವನ ಕಿರಿಯ ಮಗನು, ಗೌರವಸ್ಥರಾದ ಗುಲಾಮರ ಮಗಳೊಬ್ಬಳನ್ನು ಕಟ್ಟಿಕೊಂಡು ದೂರದ ಒಳ ದ್ವೀಪವೊಂದಕ್ಕೆ ಕೊರಟು ಹೋಗಿದ್ದನು. ಇದು ಟೀಕೆಗೆ ಗುರಿಯಾ

ಗುವಂತಹ ವಿಚಾರವಲ್ಲ. ಕಿರಿಯ ಮಕ್ಕಳು ತಿರಸ್ಕಾರಕ್ಕೆ ಪಾತ್ರರಾದ ಕೀಳು ಜಾತಿಯವರು. ಆ ದಂಪತಿಗಳಿಗೆ ಸುಂದರಿಯಾದ ಒಬ್ಬ ಮಗಳು ಹುಟ್ಟಿದಳು. ಅವಳು ಮದುವೆಯ ವಯಸ್ಸಿಗೆ ಬಂದಾಗ, ಅವಳ ತಂದೆಯ ಅಣ್ಣನು ಅವಳನ್ನು ಕಂಡು, ಮದುವೆಯಾದನು. ಅವನಿಗೆ ಅವಳ ಮೂಲ ಗೊತ್ತಿರಲಿಲ್ಲ. ಈ ಹೊಸ ದಂಪತಿಗಳಿಗೆ ಒಬ್ಬ ಮಗ ಹುಟ್ಟಿದ. ಮಗನಿಗೆ ತಂದೆಯು ತನ್ನ ಪ್ರಭುತ್ವ ಬಿರುದನ್ನು ನೀಡಿದನು. ಕೆಲವು ಕಾಲದ ನಂತರ, ಅವನು ತನ್ನ ಹೆಂಡತಿ, ಮಗು, ಅತ್ತೆಮಾವಂದಿರೊಂದಿಗೆ ತನ್ನ ಮನೆಗೆ ಹಿಂದಿರುಗಿದನು. ಆಗ ವೃದ್ಧ ಯಜಮಾನನು ತನ್ನ ಕಿರಿಯ ಮಗನ ಗುರುತು ಹಿಡಿದು, ಅಪಮಾನಗೊಂಡು ಸತ್ತು ಬಿದ್ದನು. ಅದಕ್ಕೆ ಕಾರಣ 'ತನ್ನ ಕಿರಿಯ ಮಗನ ಸಾಮಾನ್ಯಳಾದ ಮಗಳಲ್ಲಿ' ಜನಿಸಿದ ಮಗುವಿಗೆ ತನ್ನ ಕುಲೀನ ಪುತ್ರನು ತನ್ನ ಹೆಸರನ್ನು ನೀಡಿದ್ದುದು. ಆಗ ಕಿರಿಯ ಮಗನು ಸಂತೋಷಗೊಂಡನು. ಅದಕ್ಕೆ ಕಾರಣ ಅವನು ಕುಲೀನನಾದ ತನ್ನ ಅಣ್ಣನು ತನ್ನ ಮಗಳನ್ನು ಮದುವೆಯಾಗುವಂತೆ ಕರಾಮತ್ತು ನಡೆಸಿ, ತನ್ನ ಮೊಮ್ಮಗುವಿಗೆ ಬಿರುದೊಂದನ್ನು ಸಂಪಾದಿಸಿ ಕೊಟ್ಟಿದ್ದು.

ಈ ಮದುವೆಯನ್ನು ಕುರಿತು ವೃದ್ಧ ಮುಖಂಡನು, ಅಪಮಾನಗೊಂಡುದಕ್ಕೆ, ಅತಿ ಸಮೀಪ ಬಂಧುಗಳಲ್ಲಿ ನಡೆದ ಮದುವೆಗೆ ಇದ್ದ ವಿರೋಧವು ಲವಲೇಶವೂ ಕಾರಣವಲ್ಲ. ತಮ್ಮನು ಸಂಪೂರ್ಣವಾಗಿ ಪ್ರಭುತ್ವ ವರ್ಗದಿಂದ ಹೊರತಾದವನಲ್ಲವಾದರೆ, ತಮ್ಮನ ಮಗಳನ್ನು ಅಣ್ಣನು ಮದುವೆಯಾಗುವುದು, ಸಂಪ್ರದಾಯದ ಪ್ರಕಾರ ಮಾನ್ಯತೆ ಪಡೆದಿದ್ದ ವಿವಾಹ. ಕೆಲ ಕುಟುಂಬಗಳಲ್ಲಿ ಅದು ಅತ್ಯಾದರಣೀಯವಾಗಿತ್ತು. ವಾಯುವ್ಯ ತೀರಪ್ರದೇಶದ ಶ್ರೀಮಂತವರ್ಗವು ಜ್ಯೇಷ್ಠತ್ವಕ್ಕೆ ಅಂಟಿಕೊಂಡಿದ್ದು, ನಮ್ಮ ಶ್ರೀಮಂತ ವರ್ಗಗಳೊಂದಿಗೆ ನಾವು ತಗಲಿಸುವ 'ರಕ್ತಪ್ರತಿಷ್ಠೆ'ಗೆ ಅವರಲ್ಲಿ ಮಾನ್ಯತೆಯಿರಲಿಲ್ಲ.

ವಾಯುವ್ಯ ತೀರಪ್ರದೇಶದಲ್ಲಿನ ಜನರ ವಿಷಣ್ಣತೆ ಮತ್ತು ಆತ್ಮಹತ್ಯೆಗಳು ಅವರ ಮುಖ್ಯವಾದ, ಪ್ರಧಾನವಾದ ಕಾರ್ಯಗಳಿಗೆ ಸಹಜವಾದ ಪೂರಕಗಳು. ಅವರು ತಾವು ಮಾನ್ಯತೆ ನೀಡಿದ್ದ ವಿಜಯ ಮತ್ತು ಮುಖಭಂಗಗಳ ಆವೇಗ ಶ್ರೇಣಿಯನ್ನು ಅದರ ಅತ್ಯುಚ್ಚ ಪರಿಮಿತಿಯವರೆಗೆ ಉತ್ಪ್ರೇಕ್ಷೆಗೊಳಿಸಿಕೊಂಡಿದ್ದರು. ವಿಜಯವು ಮುಚ್ಚುಮರೆಯಿಲ್ಲದ ವೈಭವ ಪ್ರದರ್ಶನದ ಭ್ರಾಂತಿಯಲ್ಲಿ ವ್ಯಕ್ತಗೊಳ್ಳುತ್ತಿತ್ತು. ಮುಖಭಂಗವು ಸಾವಿಗೆ ಕಾರಣವಾಗುತ್ತಿತ್ತು. ಒಂದೇ ಒಂದು ಆವೇಗ ಶ್ರೇಣಿಯನ್ನು ಮಾತ್ರ ಅರಿತಿದ್ದ ಅವರು ಅತ್ಯಂತ ಅಸಂಭವ ಎನ್ನಿಸಬಹುದಾದ ಸಂದರ್ಭಗಳೂ ಸೇರಿದಂತೆ ಎಲ್ಲ ಸಂದರ್ಭಗಳಿಗೂ ಅದನ್ನೇ ಚಲಾಯಿಸುತ್ತಿದ್ದರು.

ಈ ನಿಯಮಗಳಿಗನುಸಾರವಾಗಿ ಬಾಳಬಲ್ಲ ವ್ಯಕ್ತಿಗಳಿಗೆ ಆ ಸಮಾಜದ ಸಕಲ ಪುರಸ್ಕಾರಗಳೂ ದೊರೆಯುತ್ತಿದ್ದುವು. ತನ್ನ ಒಡನಾಡಿಗಳ ಚರ್ಯೆಗಳಿಂದಾಗಲಿ, ಭೌತಿಕ ಸನ್ನಿವೇಶದಿಂದ ಒದಗಿ ಬಂದ ಆಕಸ್ಮಿಕಗಳಿಂದಾಗಲಿ, ಯಾವುದೇ ಪ್ರಸಂಗ ಒದಗಿದರೂ ಅದು ಮೊಟ್ಟಮೊದಲು, ಅತಿಮುಖ್ಯವಾಗಿ, ಆತ್ಮಭರವಸೆಗೆ ಹಾನಿ ಯುಂಟು ಮಾಡುತ್ತಿತ್ತು. ಆಘಾತದ ನಂತರ ವ್ಯಕ್ತಿಯನ್ನು ಪೂರ್ವಸ್ಥಿತಿಗೆ ತರಲು ನಿರ್ದಿಷ್ಟವಾದ ಕಾರ್ಯವಿಧಾನಗಳು ಏರ್ಪಟ್ಟಿದ್ದುವು. ಈ ಕಾರ್ಯವಿಧಾನ ಗಳ ಪ್ರಯೋಜನವನ್ನು ಪಡೆದುಕೊಳ್ಳಲಾರದವನಾದರೆ, ಅಂತಹವನಿಗೆ ಸಾಯುವುದು ಬಿಟ್ಟು ಬೇರೆ ದಾರಿಯಿರುತ್ತಿರಲಿಲ್ಲ. ಅವನು ತನ್ನ ಜೀವನ ದೃಷ್ಟಿಗೆ ಅನುಸಾರ ವಾಗಿ, ತನ್ನನ್ನು ಭರ್ಜರಿಯಾಗಿ ರೂಪಿಸಿಕೊಳ್ಳಲು, ತನ್ನ ತನು ಮನ ಧನಗಳನ್ನೆಲ್ಲ ಪಣಕಟ್ಟಿದ್ದನು. ಅವನ ಆತ್ಮವಿಶ್ವಾಸದ ನೀರ್ಗುಳ್ಳೆ ಒಡೆದಾಗ ಅವನಿಗೆ ಬೆಂಗಾವ ಲಾಗಿ ಯಾವ ಭರವಸೆಯೂ ಇರಲಿಲ್ಲ. ಊದಿ ಬಿದ್ದಿದ್ದ ಅವನ ಅಹಂ ಮುರಿದು ಬಿದ್ದಾಗ ಅವನನ್ನೂ ನೆಲಕ್ಕೆ ಬೀಳಿಸಿತು.

ಇದೇ ಮನೋಭಾವವು ಅವನು ತನ್ನ ಒಡನಾಡಿಗಳೊಂದಿಗೆ ಪಡೆದಿದ್ದ ಸಂಬಂಧಗಳನ್ನೂ ಕಟ್ಟುಪಾಡಿಗೊಳಪಡಿಸಿಕೊಂಡಿತ್ತು. ತನ್ನ ಸ್ಥಾನಮಾನವನ್ನು ಕಾಯ್ದುಕೊಳ್ಳಲು ಅವನು ತನ್ನ ನೆರೆಯವರ ಮೇಲೆ ಧಿಕ್ಕಾರ ಮತ್ತು ಕುಚೋದ್ಯ ಗಳ ಸುರಿಮಳೆ ಕರೆದಿದ್ದನು. ಅವನ ಎಲ್ಲ ಪ್ರಯತ್ನಗಳ ಗುರಿಯು ಅವರ ಸೋಗು ಗಾರಿಕೆಯನ್ನು ತನ್ನ ನಿಜವಾದ ತೂಕದಿಂದ 'ನೆಲಸಮ' ಗೊಳಿಸುವುದು ಹಾಗೂ ಅವರ ಹೆಸರುಗಳನ್ನು ಮುರಿದಿಕ್ಕುವುದು. ಕ್ವಾಕಿಯುಟಲ್‌ಗಳು ತಮ್ಮ ಈ ವರ್ತನೆ ಯನ್ನು ದೇವತೆಗಳೊಂದಿಗಿನ ವ್ಯವಹಾರದಲ್ಲೂ ಬಿಟ್ಟಿರಲಿಲ್ಲ. ಗುಲಾಮನೆಂದು ಕರೆ ಯುವುದು ಒಬ್ಬ ವ್ಯಕ್ತಿಗೆ ಅತ್ಯಂತ ಹೇಯವಾದ ಮುಖಭಂಗ ಮಾಡಿದಂತೆ. ಆದ್ದರಿಂದ ಅವರು ಒಳ್ಳೆಯ ಹವೆಗಾಗಿ ಪ್ರಾರ್ಥನೆ ಸಲ್ಲಿಸಿದ ನಂತರವೂ ಗಾಳಿಯು ದಿಕ್ಕು ಬದಲಾಗದೇ ಹೋದಾಗ. ತಮ್ಮ ದೇವತೆಗಳಿಗೂ ಅದೇ ರೀತಿ ಮುಖಭಂಗ ಮಾಡುತ್ತಿದ್ದರು. ಕ್ರಿಶ್ಚಿಯಾನ್ ಜನರನ್ನು ಕುರಿತು ಒಬ್ಬ ಪುರಾತನ ಪ್ರಯಾಣಿಕ ಹೀಗೆ ಬರೆದಿದ್ದಾನೆ: "ಮೇಲಿಂದ ಮೇಲೆ ಇಲ್ಲವೇ ಒಟ್ಟಿಗೆ ವಿಪತ್ತುಗಳೊದಗಿದಾಗ ಅವರು ದೇವರ ಮೇಲೆ ರೋಷಭೀಷಣರಾಗಿ ತಮ್ಮ ನೋಟವನ್ನು ಹಾಗೂ ಕೈಗಳನ್ನು, ಆಕಾಶದತ್ತ ಚಾಚಿ ನೆಲವನ್ನು ದಬದಬ ತುಳಿಯುತ್ತಾ 'ನೀನು ಒಬ್ಬ ದೊಡ್ಡ ಗುಲಾಮ' ಎಂದು ಮತ್ತೆ ಮತ್ತೆ ಹೇಳುತ್ತಾ ತಮ್ಮ ಕೋಪವನ್ನು ತೋರ್ಪಡಿಸುತ್ತಾರೆ. ಅವರಲ್ಲಿ ಅದು ಅತಿ ಹೇಯವಾದ ಬೈಗುಳ".

ಅವರು ತಮ್ಮ ದೇವತೆಗಳನ್ನು ದಯಾಮಯರೆಂದು ಭಾವಿಸಿರಲಿಲ್ಲ. ಅವರು ಬಿರುಗಾಳಿಯನ್ನೂ, ನೀರ್ಗಲ್ಲುಗಳ ಪ್ರಪಾತಗಳನ್ನೂ ಕಂಡಿದ್ದರು. ಅವು ದಯಾಮಯ

ವಾಗಿರಲಿಲ್ಲ. ತಮ್ಮ ಸುತ್ತಿನ ಜಗತ್ತಿನ ಪ್ರಕೃತಿಯ ಲಕ್ಷಣಗಳನ್ನೇ ಅವರು ತಮ್ಮ ದೇವತೆಗಳಿಗೂ ಆರೋಪಿಸಿದ್ದರು. ಅವರ ದೇವತೆಗಳಲ್ಲೊಬ್ಬ ಕ್ಯಾನಿಬಲ್. ಅವನು ನದಿಯ ಉತ್ತರದ ಅಂಚಿನಲ್ಲಿ ನೆಲೆಸಿದ್ದ. ತನಗೆ ಹೆಣಗಳನ್ನು ತಂದು ಒದಗಿಸಲು ಒಬ್ಬಳು ಗುಲಾಮಳನ್ನು ನೇಮಿಸಿಕೊಂಡಿದ್ದ. ಅವನ ಕಾವಲಾಳು ರಾವೆನ್ (ಡೊಂಬ ಕಾಗೆ) ಹೆಣಗಳ ಕಣ್ಣುಗಳನ್ನು ತಿನ್ನುತ್ತಿದ್ದ. ಅವನ ಇನ್ನೊಬ್ಬ ಗುಲಾಮನಾಗಿದ್ದ ಒಂದು ರಾಕ್ಷಸ ಹಕ್ಕಿ ತನ್ನ ಕೊಕ್ಕಿನಿಂದ ತಲೆಯೋಡುಗಳನ್ನು ಸೀಳಿ, ಮನುಷ್ಯರ ಮೆದುಳನ್ನು ಹೀರುತ್ತಿತ್ತು. ದೇವತೆಗಳು ದಯಾಪೂರ್ಣ ಮನೋಭಾವ ತಳೆದವರಾಗಿ ಅವರು ಭಾವಿಸಿರಲಿಲ್ಲ. ದೋಣಿ ಕಟ್ಟಿಯಾದ ನಂತರ ಕಟ್ಟುವವನು ಮಾಡುತ್ತಿದ್ದ ಮೊದಲ ಕೆಲಸವೆಂದರೆ ದೋಣಿಯ ಎರಡು ಪಕ್ಕಗಳಲ್ಲೂ ಮನುಷ್ಯನ ಮುಖದ ಬಣ್ಣದ ಚಿತ್ರವನ್ನು ಬಿಡಿಸುತ್ತಿದ್ದುದು. ಅದು ಈಗಾಗಲೇ ತೀರಿಹೋಗಿದ್ದ ದೋಣಿ ಕಟ್ಟುವವರನ್ನು ಹೆದರಿಸಿ ಓಡಿಸಲು. ಅವರನ್ನು ಹಾಗೆ ತಡೆಯದಿದ್ದರೆ ಅವರು ದೋಣಿಯು ಖಂಡಿತವಾಗಿ ಒಡೆಯುವಂತೆ ಮಾಡುತ್ತಿದ್ದರು. ಜುನಿ ಪುರೋಹಿತರು ತಮಗೆ ಪೂರ್ವದಲ್ಲಿ ತಮ್ಮ ವೃತ್ತಿಯನ್ನು ಅನುಸರಿಸಿದ್ದವರತ್ತ ತಳೆದಿದ್ದ ಸ್ನೇಹಭಾವ ಮತ್ತು ಅನುಕೂಲ ಬಾಂಧವ್ಯಗಳೊಂದಿಗೆ ಹೋಲಿಸಿ ನೋಡಿದರೆ ಇದು ಅದರ ವಿರುದ್ಧ ಧ್ರುವ. ವಾಯುವ್ಯ ತೀರಪ್ರದೇಶದಲ್ಲಿ ಆ ಗುಂಪಿನವರೇ, ಈಗ ಜೀವಂತರಾಗಿದ್ದ ತಮ್ಮ ಸಹೋದ್ಯೋಗಿಗಳ ವಿರುದ್ಧ ಕೈಯ್ಯುತ್ತಿದ್ದವರು. ನಾವು ಈಗಾಗಲೇ ಕಂಡಂತೆ, ದೇವತೆಗಳನ್ನು ಕೊಲ್ಲುವುದು ಅವರಿಂದ ಅನುಗ್ರಹ ಪಡೆಯಲು ದಾರಿಯೆಂದು ಪರಿಗಣಿತವಾಗಿತ್ತು. ಹಾಗೆ ಮಾಡಿದರೆ ಮಾತ್ರ ವಿಜಯ; ದೈವಿಕ ಶಕ್ತಿಯ ಅನುಗ್ರಹ ಲಾಭ.

ನಮ್ಮ ನಾಗರಿಕತೆಯಲ್ಲಿ ವಿಪರೀತವೆಂದು ನಾವು ಪರಿಗಣಿಸಿರುವ ಮಾನವ ವರ್ತನೆಯ ಒಂದು ಖಂಡ ವೃತ್ತವನ್ನು ವಾಯುವ್ಯ ತೀರಪ್ರದೇಶದ ಜನರು ತಮ್ಮ ಸಂಸ್ಕೃತಿಯಲ್ಲಿ ಸಂಸ್ಥೀಕರಿಸಲು ಆಯ್ದುಕೊಂಡಿದ್ದಾರೆ. ಅದರೂ ಆ ಮನೋಭಾವ, ನಮ್ಮ ಸಂಸ್ಕೃತಿಯ ಮನೋಭಾವಕ್ಕೆ ಸಾಕಷ್ಟು ಸಮೀಪವರ್ತಿಯಾಗಿದ್ದು ನಮಗೆ ಅರ್ಥವಾಗುವಂತಹುದು. ಅದನ್ನು ಕುರಿತು ಪರಾಮರ್ಶೆ ಮಾಡಲು ನಮ್ಮಲ್ಲಿ ನಿರ್ದಿಷ್ಟವಾದ ಪದಭಾವಗಳಿವೆ. ನಮ್ಮ ಸಮಾಜದಲ್ಲಿಯೂ ಸ್ವಪ್ರತಿಷ್ಠೆಯ ಭ್ರಾಂತಿಯ ಒಲವಿನಿಂದ ಅಪಾಯ ಒದಗುವ ಸಂಭವ ಖಂಡಿತವಾಗಿಯೂ ಇದೆ. ಅದರತ್ತ ಎರಡು ಸಾಧನೀಯ ಮನೋಭಾವಗಳಲ್ಲಿ ಒಂದನ್ನು ನಾವು ಆಯ್ದುಕೊಳ್ಳಬೇಕಾಗುತ್ತದೆ. ಅದನ್ನು ವಿಪರೀತವೆಂದೂ, ಹೇಯವೆಂದೂ ಭಾವಿಸುವುದು ಒಂದು ದಾರಿ. ನಮ್ಮ ನಾಗರಿಕತೆಯಲ್ಲಿ ನಾವು ಈ ಮನೋಭಾವವನ್ನು ಆಯ್ದು

ಕೊಂಡಿದ್ದೇವೆ. ಇನ್ನೊಂದು ತದ್ವಿರುದ್ಧ ಮಾರ್ಗವೆಂದರೆ ಸ್ವಪ್ರತಿಷ್ಠೆಯನ್ನೇ ಆದರ್ಶವ್ಯಕ್ತಿಯ ಪ್ರಮುಖ ಲಕ್ಷಣವಾಗಿ ಭಾವಿಸುವುದು. ವಾಯುವ್ಯ ತೀರಪ್ರದೇಶದ ಸಂಸ್ಕೃತಿಯು ಈ ಪರಿಹಾರವನ್ನು ಆಯ್ದುಕೊಂಡಿದೆ.

ಅಧ್ಯಾಯ 7

ಸಮಾಜದ ಸ್ವಭಾವ

ಜುನಿ, ಡೋಬು ಹಾಗೂ ಕ್ವಾಕಿಯೂಟಲ್, ಈ ಮೂರು ಸಂಸ್ಕೃತಿಗಳೂ ಕೇವಲ ವರ್ತನೆಗಳ ಮತ್ತು ಭಾವನೆಗಳ ಕಲಬೆರಕೆ ಗುಂಪುಗಳಲ್ಲ. ಅವುಗಳಲ್ಲಿ ಪ್ರತಿಯೊಂದರಲ್ಲೂ ವರ್ತನೆಯು ಖಚಿತವಾದ ಕೆಲವು ಗುರಿಗಳತ್ತ ಸಾಗಿದೆ. ಆ ಗುರಿಗಳನ್ನು ಅವರ ಸಂಸ್ಥೆಗಳು ಮುನ್ನಡೆಸುತ್ತವೆ. ಅವುಗಳಲ್ಲಿ ಇರುವ ತಾರತಮ್ಯವು ಒಂದು ಸ್ವಭಾವಲಕ್ಷಣವು ಇಲ್ಲಿ ಇರುವುದರಿಂದಲೋ ಇಲ್ಲವೇ ಒಂದೇ ಸ್ವಭಾವಲಕ್ಷಣವು ಎರಡು ಬೇರೆ ಪ್ರದೇಶಗಳಲ್ಲಿ ಎರಡು ರೂಪಗಳನ್ನು ತಳೆದಿರುವುದರಿಂದಲೋ ಮಾತ್ರ ಉಂಟಾದುದಲ್ಲ. ಸಮಷ್ಟಿಗಳಾಗಿ ಅವು ಬೇರೆ ಬೇರೆ ದಿಕ್ಕುಗಳತ್ತ ವಾಲಿರುವುದರಿಂದಲೇ ಅವುಗಳಲ್ಲಿ ಹೆಚ್ಚು ಮಟ್ಟಿನ ತಾರತಮ್ಯ ಉಂಟಾಗಿರುವುದು. ಅವು ವಿಭಿನ್ನ ಗುರಿಗಳನ್ನು ಬೆಂಬತ್ತಿ, ವಿಭಿನ್ನ ದಾರಿಗಳಲ್ಲಿ ಸಾಗಿವೆ. ಒಂದು ಸಮಾಜದ ಗುರಿ ಮತ್ತು ದಾರಿಗಳನ್ನು, ಇನ್ನೊಂದರ ಗುರಿ, ದಾರಿಗಳ ದೃಷ್ಟಿಯಲ್ಲಿ ತೀರ್ಪುಗೊಳಿಸುವುದು ಸಾಧ್ಯವಿಲ್ಲ; ಏಕೆಂದರೆ ಅವು ಮೂಲತಃ ಪರಸ್ಪರ ಸಾಮ್ಯತೆಯಿಲ್ಲದವು.

ಎಲ್ಲ ಸಂಸ್ಕೃತಿಗಳೂ ವರ್ತನೆಯ ಸಹಸ್ರಾರು ಅಂಶಗಳನ್ನು ಸಮತೋಲನವಾದ ಹಾಗೂ ಸಾಮರಸ್ಯವಾದ ಒಂದು ರೂಪಿಕೆಯಲ್ಲಿ ಅಳವಡಿಸಿಲ್ಲ ಎಂಬುದೇನೋ ನಿಜ. ಕೆಲವು ವ್ಯಕ್ತಿಗಳಂತೆ, ಕೆಲವು ಸಮಾಜ ವಿಧಾನಗಳೂ ಸಹ ತಮ್ಮ ಕಾರ್ಯ ಚಟುವಟಿಕೆಗಳನ್ನೆಲ್ಲ ಒಂದು ಪ್ರಧಾನ ಪ್ರೇರಣೆಗೆ ಅಂಕಿತಗೊಳಿಸಿರುವುದಿಲ್ಲ. ಅವು ಚದುರಿ ಹೋಗಿರುತ್ತವೆ. ಒಂದು ಸಂದರ್ಭದಲ್ಲಿ ಅವು ಕೆಲವು ನಿರ್ದಿಷ್ಟ ಗುರಿಗಳತ್ತ ಸಾಗಿರುವಂತೆ ತೋರಿಬಂದರೆ, ಇನ್ನೊಂದರಲ್ಲಿ ಹಿಂದೆ ನಡೆದುದಕ್ಕೆ ಸ್ವಲ್ಪವೂ ಅನುಗುಣವಲ್ಲದ ಬೇರಾವುದೋ ದಿಕ್ಕಿನಲ್ಲಿ ಸಾಗಿರುತ್ತವೆ. ಇದರಿಂದ ಮುಂದಿನ ಹೆಜ್ಜೆ ಎತ್ತ ಎಂಬ ಸುಳಿವು ಹತ್ತುವುದಿಲ್ಲ.

ಕೆಲವು ಸಂಸ್ಕೃತಿಗಳಲ್ಲಿ ಪ್ರಬಲವಾದ ಸಮಗ್ರತೆಯು ತೋರಿ ಬರುವಂತೆಯೇ ಮತ್ತೆ ಕೆಲವಲ್ಲಿ ಸಮಗ್ರತೆಯ ಕೊರತೆಯು ಸಹ ವಿಶೇಷ ಗುಣವೆಂದು ತೋರುತ್ತದೆ. ಬ್ರಿಟಿಷ್ ಕೊಲಂಬಿಯಾದ ಒಳ ಪ್ರದೇಶಗಳ ಬಣಗಳಂತೆ ಹಲವು ಜನರು ತಮ್ಮ ಸುತ್ತ ಮುತ್ತಣ ನಾಗರಿಕತೆಗಳಿಂದೆಲ್ಲ ವಿವಿಧ ಸ್ವಭಾವಲಕ್ಷಣಗಳನ್ನು ಪಡೆದು ಅಳವಡಿಸಿ ಕೊಂಡಿದ್ದಾರೆ. ತಮ್ಮ ಸಂಪತ್ತಿನ ನಿರ್ವಹಣೆಯ ರೂಪಿಕೆಗಳನ್ನು ಒಂದು ಸಾಂಸ್ಕೃತಿಕ ಪ್ರದೇಶದಿಂದ, ಮತಧರ್ಮಾಚಾರದ ಕೆಲ ಅಂಶಗಳನ್ನು ಇನ್ನೊಂದರಿಂದ, ಹೀಗೆಯೇ ಹಲವು ಅಸಮಂಜಸ ಅಂಶಗಳನ್ನು ಮತ್ತೊಂದರಿಂದ ಪಡೆದಿದ್ದಾರೆ. ಅವರ ಪುರಾಣವು ಅವರ ಸುತ್ತಲಿರುವ ಮೂರು ವಿವಿಧ ಪ್ರದೇಶಗಳ ಸಾಂಸ್ಕೃತಿಕ ಮಹಾಪುರುಷರನ್ನು ಕುರಿತ ಪ್ರಸಂಗಗಳ ಪರಸ್ಪರ ಹೊಂದಾಣಿಕೆಯಿಲ್ಲದ ಕಲಬೆರಕೆ. ಹೀಗೆ ಇತರರ ಸಂಸ್ಥೆಗಳಿಗೆ ಅವರು ಆದರಣೆ ತೋರಿದ್ದರೂ ಸಹ ಅವರ ಸಂಸ್ಕೃತಿಯು ಬಹಳ ಅಲ್ಪವಾದುದೆಂಬ ಭಾವನೆಯನ್ನುಂಟು ಮಾಡುತ್ತದೆ. ಯಾವುದೊಂದು ಅಂಶವೂ ಸಂಸ್ಕೃತಿಗೆ ಒಂದು ಆಕಾರ ನೀಡುವ ಮಟ್ಟಕ್ಕೆ ಮುಂದುವರಿದಿಲ್ಲ. ಅವರ ಸಮಾಜ ವ್ಯವಸ್ಥೆ ಅಷ್ಟಾಗಿ ಪರಿಷ್ಕಾರವಾಗಿಲ್ಲ. ಅವರ ಉತ್ಸವವಿಧಿಗಳು ಪ್ರಪಂಚದ ಇತರ ಬಹುತೇಕ ಪ್ರದೇಶಗಳಿಗಿಂತ ಅಲ್ಪವಾಗಿವೆ. ಅವರ ಬುಟ್ಟಿ ಹೆಣೆಯುವ ಹಾಗೂ ಮಣಿಕೆಲಸದ ತಂತ್ರವಿಧಾನಗಳು ರೂಪನಿರ್ಮಾಣ ಕಲೆಗೆ ಬಹು ಮಿತವಾದ ಅವಕಾಶ ನೀಡುತ್ತದೆ. ತಾರತಮ್ಯ ಜ್ಞಾನವಿಲ್ಲದ ಹಲವು ಹತ್ತು ಒಲವುಗಳಿಂದ ಪ್ರಭಾವಿತರಾದ ಕೆಲವು ವ್ಯಕ್ತಿಗಳಂತೆ, ಅವರ ಬಣಗಳ ವರ್ತನೆಯ ಮಾದರಿಗಳೂ ಸಹ ಹೊಂದಾಣಿಕೆಯಿಲ್ಲದೆ, ಅನಿಯತವಾಗಿವೆ.

ಬ್ರಿಟಿಷ್ ಕೊಲಂಬಿಯಾದ ಬಣಗಳಲ್ಲಿ ತೋರಿಬರುವ ಈ ಸಮಗ್ರತೆಯ ಕೊರತೆಯು ಸುತ್ತಣ ಪ್ರದೇಶಗಳ ವಿವಿಧ ಜನರಿಂದ ಪಡೆದ ಹಲವಾರು ಸ್ವಭಾವ ಲಕ್ಷಣಗಳು ಒಂದಾಗಿ ಕೂಡಿರುವುದರಿಂದ ಮಾತ್ರ ಉಂಟಾದಂತೆ ತೋರುವುದಿಲ್ಲ. ಅದಕ್ಕಿಂತ ಆಳವಾದ ಕಾರಣಗಳಿವೆ ಎನ್ನಿಸುತ್ತದೆ. ಜೀವನದ ಪ್ರತಿಯೊಂದು ಮುಖವೂ ತನ್ನದೇ ಆದ ವ್ಯವಸ್ಥೆಯನ್ನು ಪಡೆದಿದ್ದು, ಇತರ ಮುಖಗಳಿಗೆ ವ್ಯಾಪಿಸಿಲ್ಲ. ಮಕ್ಕಳು ಪ್ರೌಢರಾದಾಗ ಅವರು ಹಲವು ವ್ಯಕ್ತಿಗಳನ್ನು ಅನುಸರಿಸಲು, ಹಾಗೂ ರಕ್ಷಕ ಭೂತಗಳನ್ನು ಪಡೆಯಲು ಅನುವಾಗುವಂತಹ ಮಾಂತ್ರಿಕ ಶಿಕ್ಷಣ ನೀಡುವುದಕ್ಕೆ ಬಹಳವಾಗಿ ಗಮನ ಸಲ್ಲುತ್ತದೆ. ಪಶ್ಚಿಮದ ಬಯಲು ಸೀಮೆಯಲ್ಲಿ ಈ ರೀತಿಯ ದಿವ್ಯದರ್ಶನ ಪಡೆಯುವ ರೂಢಿಯು ಇಡೀ ವಯಸ್ಕ ಜೀವನದ ಸಂಕೀರ್ಣವನ್ನು ಸಂತೃಪ್ತಗೊಳಿಸಿದೆ. ಬೇಟೆ ಮತ್ತು ಯುದ್ಧ ವ್ಯಕ್ತಿಗಳು ಇದಕ್ಕೆ ಅನುವಾದ ಭಾವನೆಗಳಿಗೆ ಅಡಿಯಾಳಾಗಿವೆ. ಆದರೆ ಬ್ರಿಟಿಷ್ ಕೊಲಂಬಿಯಾದಲ್ಲಿ ಈ ದಿವ್ಯದರ್ಶನವನ್ನು ಅರಸುವುದು ಒಂದು ವ್ಯವಸ್ಥೆಗೆ ಒಳಪಟ್ಟ ಕ್ರಿಯೆಯಾದರೆ, ಯುದ್ಧವು ಬೇರೊಂದಕ್ಕೆ ಒಳಪಟ್ಟುದು.

ಅಂತೆಯೇ ಬ್ರಿಟಿಷ್ ಕೊಲಂಬಿಯಾದ ಹಬ್ಬಗಳು ಹಾಗೂ ನೃತ್ಯಗಳು ಸಂಪೂರ್ಣವಾಗಿ ಸಾಮಾಜಿಕ ಸ್ವರೂಪದವು. ಅವು ಉಲ್ಲಾಸ ಸಂದರ್ಭಗಳಾಗಿದ್ದು, ಪ್ರೇಕ್ಷಕರ ಮನ ರಂಜನೆಗಾಗಿ ಆಟಗಾರರು ಪ್ರಾಣಿಗಳನ್ನು ಅನುಕರಿಸುತ್ತಾರೆ. ಆದರೆ ರಕ್ಷಕಭೂತ ಗಳಾಗಬಲ್ಲ ಪ್ರಾಣಿಗಳನ್ನು ಅನುಕರಿಸುವುದು ಮಾತ್ರ ಕಡ್ಡಾಯವಾಗಿ ನಿಷಿದ್ಧ. ಈ ಉತ್ಸವಗಳು ಮತಧಾರ್ಮಿಕ ಮಹತ್ವವನ್ನೂ ಪಡೆದಿಲ್ಲ; ಅವು ಆರ್ಥಿಕ ವಿನಿಮಯದ ಸಂದರ್ಭಗಳೂ ಅಲ್ಲ. ಪ್ರತಿಯೊಂದು ಕ್ರಿಯೆಯೂ ಒಂದರಿಂದೊಂದು ಬೇರ್ಪಟ್ಟು ಪ್ರತ್ಯೇಕ ಪ್ರತ್ಯೇಕವಾಗಿವೆ. ಪ್ರತಿಯೊಂದು ಕ್ರಿಯೆಯೂ ತನ್ನ ಕಾರ್ಯಕ್ಷೇತ್ರಕ್ಕೆ ಮಿತ ಗೊಂಡಂತೆ ಸೂಕ್ತವಾದ ಪ್ರೇರಣೆಗಳನ್ನೂ, ಗುರಿಗಳನ್ನೂ ಪಡೆದಿರುವಂತಹ ಪ್ರತ್ಯೇಕ ಸಂಕೀರ್ಣವಾಗಿ ರೂಪಗೊಂಡಿದೆ. ಜನಜೀವನದ ತುದಿಮೊದಲಿನವರೆಗೆ ಅವು ವ್ಯಾಪಿಸಿಕೊಂಡಿಲ್ಲ. ಇಡೀ ಸಂಸ್ಕೃತಿಯನ್ನು ತನ್ನ ಅಂಕಿತಕ್ಕೆ ಒಳಪಡಿಸಿಕೊಳ್ಳು ವಂತಹ ಯಾವುದಾದರೂ ಒಂದು ವಿಶಿಷ್ಟವಾದ ಮಾನಸಿಕ ಪ್ರಚೋದನೆಯೂ ತಲೆಯೆತ್ತಿಲ್ಲ.

ಈ ರೀತಿಯ ಸಾಂಸ್ಕೃತಿಕ ಸಮಗ್ರತೆಯ ಕೊರತೆ ಒಂದು ವಿಧವಾಗಿದ್ದರೆ ಇನ್ನೊಂದು ವಿಧದ ಸಾಂಸ್ಕೃತಿಕ ಸಮಗ್ರತೆಯ ಕೊರತೆ, ಪರಸ್ಪರ ವಿರುದ್ಧಾಂಶಗಳ ಪ್ರಭಾವಕ್ಕೊಳಗಾದುದರಿಂದ ಹುಟ್ಟಿದ್ದಾಗಿರುತ್ತದೆ. ಈ ಎರಡನ್ನು ಎಲ್ಲಾ ಸಂದರ್ಭ ಗಳಲ್ಲೂ ಬೇರ್ಪಡಿಸಲು ಸಾಧ್ಯವಿಲ್ಲ. ಈ ಎರಡನೆಯ ರೀತಿಯ ಕೊರತೆಯು ಸುಸ್ಪಷ್ಟ ವಾದ ಸಾಂಸ್ಕೃತಿಕ ಪ್ರದೇಶಗಳ ಗಡಿಗಳಲ್ಲಿ ಉಂಟಾಗುತ್ತದೆ. ಈ ಅಂಚಿನ ಪ್ರದೇಶ ಗಳು ತಮ್ಮ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳನ್ನು ಅತ್ಯುನ್ನತ ಮಟ್ಟದಲ್ಲಿ ಪಡೆದಿರುವ ಬಣಗಳ ನಿಕಟ ಸಂಪರ್ಕದಿಂದ ದೂರವಾಗಿದ್ದು, ಪ್ರಬಲವಾದ ಹೊರ ಪ್ರಭಾವಗಳಿಗೆ ಗುರಿಯಾಗಿರುತ್ತವೆ. ಇದರ ಪರಿಣಾಮವಾಗಿ ತಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿಯೋ ಇಲ್ಲವೇ ತಮ್ಮ ಕಲಾ ವಿಧಾನಗಳಲ್ಲಿಯೋ ವಿರೋಧಾತ್ಮಕ ಕ್ರಮಗಳನ್ನು ಮೈಗೂಡಿಸಿ ಕೊಂಡಿರುತ್ತವೆ. ಕೆಲವೊಮ್ಮೆ ಅವು ಈ ಅಸಂಗತ ಸಾಂಸ್ಕೃತಿಕ ವಸ್ತುಗಳನ್ನು ಹೊಸ ಬಗೆಯಲ್ಲಿ ಸುಸಂಗತಗೊಳಿಸಿಕೊಳ್ಳುತ್ತವೆ. ಹಾಗೆ ಮಾಡುವಾಗ ತಾವು ವರ್ತನೆಯ ಹಲವಾರು ಅಂಶಗಳನ್ನು ಸಮಾನವಾಗಿ ಹಂಚಿಕೊಂಡಿರುವ ಸುಭದ್ರವಾಗಿ ನೆಲೆಗೊಂಡಿ ರುವ ಸಂಸ್ಕೃತಿಗಳಿಗಿಂತ ಮೂಲತಃ ಬೇರೆ ರೂಪಗಳನ್ನು ತಳೆಯುತ್ತವೆ. ಈ ಸಂಸ್ಕೃತಿ ಗಳ ಪೂರ್ವೇತಿಹಾಸವು ನಮಗೆ ಸಾಕಷ್ಟು ಮಟ್ಟಿಗೆ ಪರಿಚಯವಾಗಿದ್ದರೆ, ಸಾಕಷ್ಟು ಸಮಯಾವಕಾಶ ದೊರೆತರೆ ಪರರಿಂದ ಎರವಲಾಗಿ ಪಡೆದ ಅಸಂಗತ ಅಂಶಗಳು ಸುಸಂಗತತೆಯನ್ನು ಸಾಧಿಸುವ ಪ್ರವೃತ್ತಿಯನ್ನು ಪಡೆದಿವೆಯೆಂಬುದು ನಮಗೆ ತಿಳಿದು ಬರಬಹುದು. ಖಂಡಿತವಾಗಿ ಹೀಗಾಗಿರುವ ಸಂದರ್ಭಗಳು ಹಲವಾರು; ಆದರೆ ನಾವು ಖಚಿತವಾಗಿ ಅರಿತುಕೊಳ್ಳಲು ಅವಕಾಶವಿರುವ ಸಮಕಾಲೀನ ಆದಿವಾಸಿ

ಸಂಸ್ಕೃತಿಗಳತ್ತ ಸರಾಸರಿ ದೃಷ್ಟಿ ಬೀರಿದರೆ ಹಲವಾರು ಅಂಚಿನ ಪ್ರದೇಶಗಳು ಅಪಶೃತಿಯಂವಾಗಿಯೇ ಎದ್ದು ಕಾಣುತ್ತವೆ.

ಇತರ ಸಂದರ್ಭಗಳಲ್ಲಿ ಕೆಲವಾರು ಸಂಸ್ಕೃತಿಗಳಲ್ಲಿ ಕಂಡುಬರುವ ಸಮಗ್ರತೆಯ ಕೊರತೆಗೆ ಇತರ ಐತಿಹಾಸಿಕ ಸಂದರ್ಭಗಳು ಕಾರಣ. ಅಂಚಿನ ಪ್ರದೇಶಗಳ ಬಣಗಳ ಸಂಸ್ಕೃತಿಯು ಮಾತ್ರವಲ್ಲದೆ, ತಮ್ಮ ನೆರೆಯುವರಿಂದ ದೂರವಾಗಿ ಮತ್ತೊಂದು ನಾಗರಿಕತೆಯ ಪ್ರದೇಶದಲ್ಲಿ ನೆಲೆಯಾಗುವ ಬಣದ ಸಂಸ್ಕೃತಿಯೂ ಸಹ ಅಸಂಬದ್ಧವಾದುದಾಗಬಹುದು. ಇಂತಹ ಪ್ರಸಂಗಗಳಲ್ಲಿ ಆ ಬಣದ ಜನರ ಮೇಲೆ ಹೊಸದಾಗಿ ಉಂಟಾಗಿರುವ ಪ್ರಭಾವಗಳು ಹಾಗೂ ಸ್ವಾಭಾವಿಕವೆಂದು ಕರೆಯಬಹುದಾದ ಅವರ ವರ್ತನೆಗಳ ನಡುವಣ ಘರ್ಷಣೆಯು, ಎದ್ದು ಕಾಣುತ್ತದೆ. ಹೆಚ್ಚು ಪ್ರತಿಷ್ಠೆಯುಳ್ಳ ಅಥವಾ ಹೆಚ್ಚು ಸಂಖ್ಯಾ ಬಲವುಳ್ಳ ಮತ್ತೊಂದು ಬಣವು ಅವರ ಪ್ರದೇಶಕ್ಕೆ ಹೊಸದಾಗಿ ಬಂದು ಪ್ರಮುಖವಾದ ಬದಲಾವಣೆಗಳನ್ನು ಜಾರಿಗೆ ತಂದರೆ ತಾವು ಹುಟ್ಟಿದ ಭೂಮಿಯಲ್ಲೇ ಉಳಿದುಕೊಂಡ ಜನರಿಗೂ ಸಹ ಇಂತಹುದೇ ಸಂದರ್ಭ ಒದಗಿ ಬಂದಂತಾಗುತ್ತದೆ.

ನಿಜವಾಗಿಯೂ ಅಸ್ತವ್ಯಸ್ತಗೊಂಡಿರುವ ಸಂಸ್ಕೃತಿಯೊಂದರ ನಿಕಟ ಹಾಗೂ ಅರ್ಥಪೂರ್ಣ ಅಧ್ಯಯನವು ಕುತೂಹಲಕಾರಿಯಾಗಬಲ್ಲುದು. ಬಹುಶಃ ಒಟ್ಟಿಗೆ 'ಸಮಗ್ರತೆಯ ಕೊರತೆ'ಯೆಂದು ಗುಣನಿರೂಪಣೆ ಮಾಡುವುದಕ್ಕಿಂತ ನಿರ್ದಿಷ್ಟವಾದ ಘರ್ಷಣೆಗಳ ಸ್ವಭಾವ ಅಥವಾ ನೂತನ ಪ್ರಭಾವಗಳಿಗೆ ದೊರೆಯುವ ಸೌಮ್ಯ ಸ್ವಾಗತ ಮೊದಲಾದವುಗಳಿಗೆ ಹೆಚ್ಚಿನ ಮಹತ್ವ ನೀಡಬೇಕಾಗಿ ಬರಬಹುದು. ಅಂತಹ ಗುಣ ನಿರೂಪಣೆ ಎಂತಹದಾಗಿರಬಹುದೆಂದು ಊಹಿಸಲು ಸಾಧ್ಯವಿಲ್ಲ. ಅತ್ಯಂತ ಅಸ್ತವ್ಯಸ್ತಗೊಂಡಿರುವ ಸಂಸ್ಕೃತಿಗಳಲ್ಲಿ ಸಹ ಅಸಂಗತ ಅಂಶಗಳನ್ನು ತಳ್ಳಿ ಹಾಕಿ, ಕೆಲವು ಅಂಶಗಳನ್ನು ಆಯ್ದು ಅವುಗಳನ್ನು ಸುಸಂಬದ್ಧಗೊಳಿಸುವ ಹೊಂದಾಣಿಕೆಗಳಿಗೆ ನಾವು ಗಮನ ನೀಡಬೇಕಾಗಿ ಬರಬಹುದು. ಈ ಪ್ರತಿಕ್ರಿಯೆಯು ಸಾಗುತ್ತಿರುವಲ್ಲಿನ ವಿಷಯ ವಸ್ತುಗಳ ವೈಲಕ್ಷಣ್ಯ ಹೆಚ್ಚಿದಷ್ಟೂ ಪ್ರಕ್ರಿಯೆಯು ಹೆಚ್ಚೆಚ್ಚು ಸ್ಪಷ್ಟವಾಗಿ ಗೋಚರವಾಗಬಹುದು.

ಅಸಂಗತ ಅಂಶಗಳ ನಡುವಣ ಘರ್ಷಣೆಯ ಅತ್ಯುತ್ತಮ ಉದಾಹರಣೆಗಳು ಸಾಂಸ್ಕೃತಿಕ ಸಮಗ್ರತೆಯನ್ನು ಸಾಧಿಸಿರುವ ಬಣಗಳ ಗತ ಚರಿತ್ರೆಯಿಂದ ದೊರೆಯುತ್ತವೆ. ನಾವು ವಿವರಿಸಿದಂತಹ ಸುಬದ್ಧವಾದ ನಾಗರಿಕತೆಯನ್ನು ಕ್ವಾಕಿಯೂಟಲ್‌ಗಳು ಸದಾ ಪಡೆದಿದ್ದವರಲ್ಲ. ತೀರಪ್ರದೇಶದಲ್ಲಿಯೂ ವಾಂಕೂವರ್ ದ್ವೀಪದಲ್ಲಿಯೂ ನೆಲೆಸುವ ಮೊದಲು. ಅವರು ಇನ್ನೂ ದಕ್ಷಿಣ ಪ್ರದೇಶದ ಸಾಲಿಶ್ ಜನರ ಸಂಸ್ಕೃತಿಯನ್ನು ಬಹುಮಟ್ಟಿಗೆ ಪಡೆದಿದ್ದರು. ಈಗಲೂ ಅವರು

ತಮ್ಮ ಪುರಾಣ ಐತಿಹ್ಯಗಳು, ಗ್ರಾಮ ವ್ಯವಸ್ಥೆ ಮತ್ತು ನೆಂಟಸ್ತನ ಸೂಚಕ ಪರಿಭಾಷೆಗಳಲ್ಲಿ ಆ ಜನರೊಂದಿಗೆ ತಾವು ಪಡೆದಿದ್ದ ಬಾಂಧವ್ಯವನ್ನು ಉಳಿಸಿಕೊಂಡು ಬಂದಿದ್ದಾರೆ, ಆದರೆ ಸಾಲಿಶ್ ಬಣದ ಜನರು ವ್ಯಕ್ತಿವಾದಿಗಳು. ಅವರಲ್ಲಿ ವಂಶಾನುಗತವಾದ ಹಕ್ಕುಬಾಧ್ಯತೆಗಳು ಕನಿಷ್ಠ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಯೋಗ್ಯತೆಗೆ ಅನುಸಾರವಾಗಿ ಇತರ ಯಾವೊಬ್ಬ ವ್ಯಕ್ತಿಯಷ್ಟೇ ಅವಕಾಶ ಪಡೆದಿದ್ದಾನೆ. ಬೇಟೆಯಲ್ಲಿ ಚತುರತೆ ಇಲ್ಲವೇ ಜೂಜಿನಲ್ಲಿ ಅದೃಷ್ಟ ಅಥವಾ ಚಿಕಿತ್ಸಕನಾಗಿಯೋ, ಮಾಂತ್ರಿಕನಾಗಿಯೋ ಅವನು ಹೇಳಿಕೊಳ್ಳುವಂತಹ ದೈವಿಕ ಶಕ್ತಿಯನ್ನು ಯಶಸ್ವಿಯಾಗಿ ಪ್ರಯೋಗಿಸುವುದು ಮೊದಲಾದ ಅಂಶಗಳ ಆಧಾರದ ಮೇಲೆ ವ್ಯಕ್ತಿಯ ಮಹತ್ವ ನಿರ್ಣಯವಾಗುತ್ತದೆ. ವಾಯವ್ಯ ತೀರಪ್ರದೇಶದ ಸಮಾಜ ವಿಧಾನಕ್ಕೆ ಇದಕ್ಕಿಂತ ಹೆಚ್ಚಿನ ವೈಪರೀತ್ಯ ಬೇರೊಂದಿರಲಾರದು.

ಇಷ್ಟು ತೀವ್ರವಾದ ವಿಲಕ್ಷಣತೆಯೂ ಸಹ, ಕ್ವಾಕಿಯೂಟಲ್ ಜನರು ವಿಜಾತೀಯವಾದ ರೂಪಿಕೆಗಳನ್ನು ತಮ್ಮದಾಗಿ ಸ್ವೀಕರಿಸಲು ಅಡ್ಡಿಯಾಗಲಿಲ್ಲ. ಅವರು ಹೆಸರುಗಳನ್ನೂ, ಐತಿಹ್ಯಗಳನ್ನೂ, ಮನೆ ಕಂಭಗಳನ್ನೂ, ರಕ್ಷಕ ಭೂತಗಳನ್ನೂ, ಕೆಲವು ಸಂಘಗಳಿಗೆ ದೀಕ್ಷೆ ಪಡೆಯುವ ಹಕ್ಕನ್ನೂ, ಇಂತಹ ಹಲವು ಹತ್ತು ಇತರ ಅಂಶಗಳನ್ನೂ ವೈಯಕ್ತಿಕ ಆಸ್ತಿಯೆಂದು ಪರಿಗಣಿಸತೊಡಗಿದರು. ಆದರೆ ಅವಶ್ಯಕವಾದ ಹೊಂದಾಣಿಕೆಯ ಕೊರತೆಯು ಅವರ ಸಂಸ್ಥೆಗಳಲ್ಲಿ ಎದ್ದು ಕಾಣುತ್ತದೆ. ಎರಡು ಸಮಾಜವಿಧಾನಗಳು ಪರಸ್ಪರ ಹೊಂದಿಕೆಯಾಗದೆ ಇರುವ ವಿಚಾರದಲ್ಲಿ ಇದು ಬಹು ಸ್ಪಷ್ಟವಾಗುತ್ತದೆ. ವಿಶೇಷವಾಗಿ ಅವರ ಸಮಾಜದ ವ್ಯವಸ್ಥೆಯ ವಿಧಾನಗಳಲ್ಲಿ ಇದು ಕಾಣಬರುತ್ತದೆ. ಕ್ವಾಕಿಯೂಟಲ್ ಜನರು, ವಾಯವ್ಯ ತೀರ ಪ್ರದೇಶದ ವಿಶೇಷಾಧಿಕಾರಗಳು ಹಾಗೂ ಪೊಟ್ಲಾಚಿನ ಪದ್ಧತಿಯನ್ನು ಇಡಿಯಾಗಿ ತಮ್ಮ ಪದ್ಧತಿಗೆ ಅಳವಡಿಸಿಕೊಂಡರು. ಉತ್ತರದ ಬಣಗಳಲ್ಲಿ ಪ್ರಚಲಿತವಾಗಿದ್ದ ನಿಷ್ಠುರವಾದ ಮಾತೃಸಂತಾನ ಕುಲಪದ್ಧತಿಯ ಹಕ್ಕುಬಾಧ್ಯತೆಗಳು ಅನುಕ್ರಮವಾಗಿ ಇಳಿದು ಬರಲು ಅವಶ್ಯಕವಾದ ಒಂದು ಭದ್ರವಾದ ಚೌಕಟ್ಟನ್ನು ಒದಗಿಸಿತ್ತು. ಆದರೆ ಈ ಚೌಕಟ್ಟನ್ನು ಕ್ವಾಕಿಯೂಟಲ್‌ಗಳು ಅದೇ ರೀತಿಯಲ್ಲಿ ಒಪ್ಪಿ ಅಳವಡಿಸಿಕೊಳ್ಳಲಿಲ್ಲ. ಉತ್ತರದ ಬಣಗಳಲ್ಲಿ ವ್ಯಕ್ತಿಯು ಹುಟ್ಟಿನಿಂದ ತಾನು ಪಡೆದ ಹಕ್ಕಿಗೆ ಅನುಸಾರವಾಗಿ ತಾನೇ ತಾನಾಗಿ ಪ್ರಭುತ್ವದ ಬಿರುದಿನ ಸ್ಥಾನವೊಂದಕ್ಕೆ ಅಳವಡುತ್ತಿದ್ದನು. ಆದರೆ ನಾವು ನೋಡಿ ತಿಳಿದಂತೆ, ಕ್ವಾಕಿಯೂಟಲ್‌ಗಳಲ್ಲಿ ವ್ಯಕ್ತಿಯು ತನ್ನ ಜೀವಮಾನವನ್ನೆಲ್ಲ ಈ ಬಿರುದುಗಳನ್ನು ಪಡೆಯಲು ಚೌಕಾಶಿ ಮಾಡುತ್ತಲೇ ಕಳೆಯಬೇಕಾಗಿತ್ತು. ತನ್ನ ಕುಟುಂಬದ ಯಾವುದಾದರೊಂದು ಶಾಖೆಯಲ್ಲಿ ಹಿಂದೆ ಇದ್ದ ಬಿರುದುಗಳಿಗೆ ಮಾತ್ರ ಅವನ ಹಕ್ಕು ಮಿತಗೊಂಡಿತ್ತು.

ಕ್ವಾಕಿಯುಟಲ್‌ಗಳು ವಿಶೇಷಾಧಿಕಾರಗಳ ಇಡೀ ಪದ್ಧತಿಯನ್ನು ಸ್ವೀಕರಿಸಿದರು. ಆದರೆ ಉತ್ತರದ ಬಣಗಳಲ್ಲಿ ಪ್ರಚಲಿತವಾಗಿದ್ದ ಜಾತಿ ಪದ್ಧತಿಗೆ ತದ್ವಿರುದ್ಧವಾಗಿ ಪ್ರತಿಷ್ಠೆ ಗಳಿಸುವ ಮೇಲಾಟದಲ್ಲಿ ವ್ಯಕ್ತಿಗೆ ಸಂಪೂರ್ಣವಾದ ಸ್ವತಂತ್ರವನ್ನು ನೀಡಿದರು. ಹೀಗೆ ಕ್ವಾಕಿಯುಟಲ್‌ಗಳು ಹಿಂದೆ ತಾವು ದಕ್ಷಿಣ ಪ್ರದೇಶದಿಂದ ತೀರಪ್ರದೇಶಕ್ಕೆ ಬರುವಾಗ ತಮ್ಮೊಂದಿಗೆ ತಂದಿದ್ದ ಹಳೆಯ ಸಂಪ್ರದಾಯಗಳನ್ನೂ ಉಳಿಸಿಕೊಂಡಿದ್ದರು.

ಕ್ವಾಕಿಯುಟಲ್ ಜನರ ಕೆಲವು ನಿರ್ದಿಷ್ಟವಾದ ಸಾಂಸ್ಕೃತಿಕ ಸ್ವಭಾವ ಲಕ್ಷಣಗಳು ಹೊಸ ಮತ್ತು ಹಳೆಯ ವಿನ್ಯಾಸಗಳ ನಡುವಣ ಕೆಲವು ನಿಶ್ಚಿತ ಘರ್ಷಣೆಗಳ ಪ್ರತಿಫಲನಗಳು. ಸ್ವತ್ತು ತಳೆದ ಹೊಸ ಪ್ರಭಾವದಿಂದ ವಾರಸು ದಾರಿಕೆಯ ನಿಯಮಗಳು ಒಂದು ನೂತನ ಪ್ರಾಮುಖ್ಯತೆಯನ್ನು ತಳೆದುವು. ಒಳನಾಡಿನ ಸಾಲಿಶ್ ಬಣಗಳು ಸಡಿಲವಾಗಿ ಕುಟುಂಬಗಳು ಮತ್ತು ಗ್ರಾಮಂಗ ಳಾಗಿ ವ್ಯವಸ್ಥೆಗೊಂಡಿದ್ದುವು. ವ್ಯಕ್ತಿ ಸತ್ತಾಗ ಬಹುಮಟ್ಟಿನ ಸ್ವತ್ತುಗಳನ್ನು ನಾಶ ಪಡಿಸುತ್ತಿದ್ದರು. ಉತ್ತರದ ಬಣಗಳಲ್ಲಿ ವ್ಯವಸ್ಥೆಗೊಂಡಿದ್ದ ಬಿಗಿಯಾದ ಮಾತೃ ಸಂತಾನ ಕುಲದ ಪದ್ಧತಿಯು ಕ್ವಾಕಿಯುಟಲ್‌ಗಳಲ್ಲಿ ಮಾನ್ಯತೆ ಪಡೆಯಲಿಲ್ಲ ವೆಂಬುದನ್ನು ಈಗಾಗಲೇ ಕಂಡಿದ್ದೇವೆ. ಅಳಿಯನು ತನ್ನ ಹೆಂಡತಿಯ ತಂದೆಯಿಂದ ವಿಶೇಷಾಧಿಕಾರಗಳನ್ನು ಪಡೆದು, ಅವುಗಳನ್ನು ತನ್ನ ಮಕ್ಕಳಿಗಾಗಿ ದತ್ತಿಯಾಗಿ ಇಟ್ಟುಕೊಳ್ಳುವ ಹಕ್ಕನ್ನು ಮೇಲೆತ್ತಿ ಹಿಡಿದು, ರಾಜಿಮಾರ್ಗಕ್ಕೆ ದಾರಿ ಮಾಡಿಕೊಂಡರು. ಹೀಗಾಗಿ ವಾ ರ ಸು ದಾ ರಿ ಕೆ ಮಾತೃ ಸಂತಾನದ್ದೇ ಆಯಿತು. ಆದರೆ ಒಂದೊಂದು ತಲೆಮಾರನ್ನು ದಾಟಿ ದಾಟಿ ಹೋಗು ವಂತಾಯಿತು. ಒಂದು ಬಿಟ್ಟು ಒಂದು ತಲೆಮಾರಿನಲ್ಲಿ ವಿಶೇಷಾಧಿಕಾರಗಳು ದತ್ತಿ ಯಾಗಿ ಇರುತ್ತಿದ್ದವೇ ಹೊರತು ಚಲಾಯಿಸಲು ಬರುತ್ತಿರಲಿಲ್ಲ. ಈ ವಿಶೇಷಾಧಿ ಕಾರಗಳೆಲ್ಲ ರೂಢಿಬದ್ಧವಾದ ಪೊಟ್ಲಾಚ್ ವಿಧಾನಗಳಲ್ಲಿ ನಿರ್ವಹಣೆಯಾಗುತ್ತಿದ್ದು ವೆಂಬುದನ್ನು ಈಗಾಗಲೇ ಕಂಡೆವು. ಇದು ಒಂದಕ್ಕೊಂದು ಹೊಂದಿಕೆಯಿಲ್ಲದ ಎರಡು ಸಮಾಜವಿಧಾನಗಳ ನಡುವಣ ರಾಜಿಮಾರ್ಗವಾದ ಅಸಾಧಾರಣ ಹೊಂದಾಣಿಕೆ. ಎರಡು ವಿರುದ್ಧ ಗತಿಯ ಸಮಾಜ ವಿಧಾನಗಳನ್ನು ಸಾಮರಸ್ಯವಾಗಿ ಕೂಡಿಸುವ ಸಮಸ್ಯೆಯನ್ನು ಆ ಜನ ಎಷ್ಟು ಪರಿಷ್ಕಾರವಾಗಿ ಬಗೆಹರಿಸಿದರೆಂಬುದನ್ನು ಹಿಂದಿನ ಅಧ್ಯಾಯವೊಂದರಲ್ಲಿ ನಿರೂಪಿಸಿದ್ದೇವೆ.

ಆದ್ದರಿಂದ ಮೂಲಭೂತವಾದ ಘರ್ಷಣೆಯ ಜೊತೆ ಜೊತೆಯಲ್ಲಿಯೇ ಸಮಗ್ರ ತೆಯೂ ಸಾಧಿತವಾಗಬಹುದು. ಸಾಂಸ್ಕೃತಿಕ ಅಸ್ತವ್ಯಸ್ತತೆಯ ಪ್ರಸಂಗಗಳು ಪ್ರಸಕ್ತ ಸಮಯದಲ್ಲಿ ತೋರಿ ಬರುತ್ತಿರುವುದಕ್ಕಿಂತ ಕಡಮೆಯೇ. ಸಂಸ್ಕೃತಿಯ ಅಸ್ತವ್ಯಸ್ತ

ವಾಗಿರುವುದಕ್ಕಿಂತ, ಸಂಸ್ಕೃತಿಯ ನಿರೂಪಣೆಯು ಅಸ್ತವ್ಯಸ್ತವಾಗಿರಬಹುದಾದ ಸಾಧ್ಯತೆಗಳು ಸದಾ ಇದ್ದೇ ಇವೆ. ಅಲ್ಲದೇ ಸಮಗ್ರತೆಯ ಸ್ವಭಾವವು ನಮ್ಮ ಅನುಭವ ದಿಂದ ಆಚೆಯೇ ಉಳಿದು, ಅರಿತುಕೊಳ್ಳಲು ಕ್ಲಿಷ್ಟವಾದುದಾಗಿಯೂ ಇರಬಹುದು. ಇವುಗಳಲ್ಲಿ ಮೊದಲನೆಯ ತೊಡಕನ್ನು ಉತ್ತಮವಾದ ಕ್ಷೇತ್ರಾಧ್ಯಯನದಿಂದಲೂ, ಎರಡನೆಯ ತೊಡಕನ್ನು ತೀವ್ರವಾದ ವಿಶ್ಲೇಷಣೆಯಿಂದಲೂ ನಿವಾರಿಸಬಹುದು. ಈ ತೊಡಕುಗಳು ನಿವಾರಣೆಯಾದಾಗ ಸಂಸ್ಕೃತಿಗಳ ಸಮಗ್ರತೆಯ ಮಹತ್ವವು ಈಗಿಗಿಂತ ಹೆಚ್ಚು ಸ್ಪಷ್ಟವಾಗಬಹುದು. ನಾವು ಜುನಿ ಮತ್ತು ಕ್ವಾಕಿಯುಟಲ್ ಜನರನ್ನು ಕುರಿತು ನಿರೂಪಿಸಿದಂತೆ, ಎಲ್ಲ ಸಂಸ್ಕೃತಿಗಳೂ ಸುಸಂಗತವಾದ ವಿನ್ಯಾಸಗಳಲ್ಲ ಎಂಬು ದನ್ನು ಕಂಡುಕೊಳ್ಳುವುದು ಬಹಳ ಮುಖ್ಯ. ಪ್ರತಿಯೊಂದು ಸಂಸ್ಕೃತಿಯನ್ನೂ ಯಾವುದಾದರೂ ಆಕರ್ಷಕ ಗುಣವಾಚಕಕ್ಕೆ ಅನುಗುಣವಾಗಿ ಬಲಾತ್ಕಾರವಾಗಿ ಸೂತ್ರೀ ಕರಿಸುವುದು ತಿಳಿಗೇಡಿತನವಾದೀತು. ಮುಖ್ಯವಾದ ಸಿದ್ಧಾಂತವನ್ನು ಪುಷ್ಟೀಕರಿಸದಿರು ವಂತಹ ಪ್ರಮುಖ ಸಂಗತಿಗಳನ್ನು ಕೈ ಬಿಡಬಹುದಾದುದರ ಅಪಾಯವು ಅತ್ಯುತ್ತಮ ಅಧ್ಯಯನಗಳಲ್ಲಿಯೂ ಸಹ ಸಾಕಷ್ಟು ತೀವ್ರವಾದುದು. ಅಂತಹದರಲ್ಲಿ ವಿಷಯ ವಸ್ತುವನ್ನೇ ತುಂಡರಿಸುವಂತಹ ಪ್ರಸಂಗ ತಂದೊಡ್ಡುವುದು ಅಕ್ಷಮ್ಯ. ಆದರಿಂದ ನಾವು ವಿಷಯವಸ್ತುವನ್ನು ಕುರಿತು ಗಳಿಸಬಹುದಾದ ಅರಿವಿಗೆ ಹೆಚ್ಚಿನ ಅಡೆತಡೆ ಗಳನ್ನೊಡ್ಡಿದಂತಾಗುತ್ತದೆ.

ಸಂಸ್ಕೃತಿಯ ಸಮಗ್ರತೆಯನ್ನು ಕುರಿತ ಹಗುರವಾದ ಸಾಮಾನ್ಯ ಸೂತ್ರೀಕರಣವು ಕ್ಷೇತ್ರಾಧ್ಯಯನದಲ್ಲಿ ಅತ್ಯಂತ ಅಪಾಯಕಾರಿ. ಒಂದು ಅನ್ಯ ಸಂಸ್ಕೃತಿಯ ಭಾಷೆಯನ್ನು, ವರ್ತನೆಯ ಎಲ್ಲ ಮನೋವೈಶಿಷ್ಟ್ಯಗಳನ್ನೂ ಕೂಲಂಕಶವಾಗಿ ಅರಿತುಕೊಳ್ಳುವ ಪ್ರಯತ್ನದಲ್ಲಿರುವಾಗ, ಅದರ ವಿನ್ಯಾಸವನ್ನು ಕುರಿತು ವಿಚಾರಮಾಡುವುದರಿಂದ ಸ್ಪಷ್ಟ ವಾದ ಅರಿವನ್ನು ಗಳಿಸಲು ಅಡ್ಡಿಯಾಗುತ್ತದೆ. ಕ್ಷೇತ್ರಾಧ್ಯಾಯಿಯು ವಾಸ್ತವತೆಗೆ ಪ್ರಾಮಾಣಿಕನಾಗಿರಬೇಕು. ಅವನು ಸಂಬಂಧಪಟ್ಟಂತಹ ಎಲ್ಲ ವರ್ತನೆಯನ್ನೂ ಗುರುತಿಸಿ ಕೊಳ್ಳಬೇಕು. ಯಾವುದಾದರೊಂದು ಆಕರ್ಷಕವಾದ ಆಧಾರ ಕಲ್ಪನೆಗೆ ಅನುಗುಣ ವಾಗಿ ಪ್ರಮೇಯವೊಂದನ್ನು ಸಾಧಿಸಲೋಸ್ಕರ ಆಯ್ಕೆ ನಡೆಸುವುದರ ವಿರುದ್ಧ ಎಚ್ಚರ ವಹಿಸಬೇಕು. ಈ ಕೃತಿಯಲ್ಲಿ ನಾವು ಪರಾಮರ್ಶಿಸಿದ ಯಾವ ಜನರನ್ನೂ ಆಯಾ ಸಂಸ್ಕೃತಿಗಳು ಉದಹರಿಸುವಂತಹ ಒಂದು ಸಮಂಜಸ ವರ್ತನಾ ವಿಧಾನವನ್ನು ಕುರಿತು ಪೂರ್ವಾಭಿಪ್ರಾಯ ಪಡೆದು ಕ್ಷೇತ್ರಾಧ್ಯಯನ ಮಾಡಲಿಲ್ಲ. ಮಾನವ ಕುಲ ಶಾಸ್ತ್ರೀಯ ವಿವರಗಳನ್ನು ಅವು ದೊರೆತಂತೆ ಬರೆದುದೇ ಹೊರತು, ಅವುಗಳನ್ನು ಸ್ವಯಂ ಸಮಗ್ರಗೊಳಿಸುವ ಯಾವ ಪ್ರಯತ್ನವೂ ನಡೆದಿಲ್ಲ. ಆದ್ದರಿಂದ ಅಂತಿಮ ವಾಗಿ ದೊರೆತ ಚಿತ್ರಣಗಳು ಅಧ್ಯಯನ ಶೀಲನಿಗೆ ಹೆಚ್ಚು ಧೃಢೀಕೃತವಾದ

ಅರಿವನ್ನು ನೀಡುವಂತಿದೆ. ಸಂಸ್ಕೃತಿಯನ್ನು ಕುರಿತು ತಾತ್ತ್ವಿಕ ವಾದವಿವಾದಗಳಲ್ಲಿ ಸಹ, ಸಂಸ್ಕೃತಿಯ ಸಮಗ್ರತೆಯನ್ನು ಕುರಿತ ಸಾಮಾನ್ಯೀಕೃತ ಸೂತ್ರಗಳು, ಅವು ಉದ್ಧೃತವಾದಷ್ಟು ಮಟ್ಟಿಗೆ, ಸಾರ್ವತ್ರಿಕಗೊಳಿಸಲು ಪ್ರಯತ್ನಿಸಿದಷ್ಟು ಮಟ್ಟಿಗೆ ಶುಷ್ಕವಾಗುತ್ತವೆ. ನಮಗೆ ಒಂದೇ ಸಮಾಜದಿಂದ ವರ್ತನೆಯ ಪರಸ್ಪರ ವಿರುದ್ಧ ಮಿತಿಗಳು ಹಾಗೂ ಕ್ರಿಯಾಶೀಲವಾದ ಪ್ರೇರಣೆಗಳನ್ನು ಕುರಿತ ವಿವರವಾದ ಸಂಗತಿಗಳು ಬೇಕೇ ಹೊರತು ಬೇರೆ ಬೇರೆ ಸಮಾಜಗಳಿಂದ ಸಂಗ್ರಹಿತವಾದವುಗಳಲ್ಲ. ಮಾನವ ಕುಲಶಾಸ್ತ್ರೀಯ ಪಂಥವೊಂದರ ವೇದಿಕೆಯ ಮೇಲೆ ವಿನ್ಯಾಸದ ಹೆಸರು ಬರೆದ ಫಲಕ ನಮಗೆ ಬೇಡ. ತದ್ವಿರುದ್ಧವಾಗಿ ವಿವಿಧ ಸಂಸ್ಕೃತಿಗಳು ಯಾವ ಯಾವ ವೈವಿಧ್ಯ ಒಳಿತಿನತ್ತ ಸಾಗಿವೆ, ಅವುಗಳ ಸಂಸ್ಥೆಗಳ ಆಧಾರವಾಗಿರುವಂತಹ ವಿವಿಧ ಉದ್ದೇಶಗಳೇನು, ಎಂಬೀ ವಿವರಗಳು ನಮಗೆ ಬೇಕಾಗಿವೆ. ವೈವಿಧ್ಯ ಸಮಾಜ ವಿಧಾನಗಳು ಹಾಗೂ ವೈಯಕ್ತಿಕ ಮನೋವಿಧಗಳೆರಡನ್ನೂ ಅರಿತುಕೊಳ್ಳಲು ಇದು ಅವಶ್ಯಕ.

ಸಾಂಸ್ಕೃತಿಕ ಸಮಗ್ರತೆಗೂ ಪಾಶ್ಚಿಮಾತ್ಯ ನಾಗರಿಕತೆಗಳ ಅಧ್ಯಯನಕ್ಕೂ ಆದರಿಂದಾಗಿ ಸಮಾಜಶಾಸ್ತ್ರೀಯ ಸಿದ್ಧಾಂತಕ್ಕೂ ಇರುವ ಸಂಬಂಧವು ಸುಲಭವಾಗಿ ತಪ್ಪು ತಿಳಿವಳಿಕೆಗೆ ಎಡೆ ನೀಡುವಂತಹುದು. ನಮ್ಮ ಸಮಾಜವನ್ನು ಸಮಗ್ರತೆಯ ಕೊರತೆಗೆ ಬಹು ಸೂಕ್ತವಾದ ಉದಾಹರಣೆಯಾಗಿ ಚಿತ್ರಿಸುವುದುಂಟು. ನಮ್ಮ ಸಮಾಜದ ಬೃಹತ್ ಸಂಕೀರ್ಣತೆ, ತಲೆಮಾರಿನಿಂದ ತಲೆಮಾರಿಗೆ ಉಂಟಾಗುತ್ತಿರುವ ಶೀಘ್ರ ಬದಲಾವಣೆಗಳಿಂದಾಗಿ ವಿವಿಧ ಅಂಗಗಳಲ್ಲಿ ಸಾಮರಸ್ಯತೆಯು ತೋರಿ ಬರದಿರುವುದು ಅನಿವಾರ್ಯ. ಸರಳ ಸಮಾಜಗಳು ಹೀಗಲ್ಲ. ಆದರೆ ಬಹುತೇಕ ಅಧ್ಯಯನಗಳಲ್ಲಿ ಒಂದು ಸಣ್ಣ ತಾಂತ್ರಿಕ ತಪ್ಪಿನಿಂದಾಗಿ ಸಮಗ್ರತೆಯ ಕೊರತೆಯು ಅತಿಶಯಗೊಂಡು ತಪ್ಪಾಗಿ ಅರ್ಥೈಸಲ್ಪಟ್ಟಿದೆ. ಆದಿವಾಸಿ ಸಮಾಜಗಳು ಭೌಗೋಳಿಕ ಘಟಕಗಳಾಗಿ ಸಮಗ್ರತೆ ಗಳಿಸಿವೆ. ಆದರೆ ಪಾಶ್ಚಿಮಾತ್ಯ ನಾಗರಿಕತೆಯಲ್ಲಿಯಾದರೋ, ಸಮಾಜವು ಹಂತಹಂತವಾಗಿ ವಿಂಗಡಗೊಂಡಿದ್ದು, ಒಂದೇ ಕಾಲದಲ್ಲಿ, ಒಂದೇ ಸ್ಥಳದಲ್ಲಿ ಬೇರೆ ಬೇರೆ ಸಾಮಾಜಿಕ ಗುಂಪುಗಳು ಬೇರೆ ಬೇರೆ ಆದರ್ಶಗಳನ್ನು ಅನುಸರಿಸುತ್ತ ಬೇರೆ ಬೇರೆ ಪ್ರೇರಣೆಗಳಿಂದ ಪ್ರಚೋದಿತವಾಗಿ ಬಾಳುತ್ತಿವೆ.

ಮಾನವಶಾಸ್ತ್ರೀಯವಾದ ಸಾಂಸ್ಕೃತಿಕ ಪ್ರದೇಶದ ಕಲ್ಪನೆಯನ್ನು ಆಧುನಿಕ ಸಮಾಜಶಾಸ್ತ್ರಕ್ಕೆ ಅನ್ವಯಿಸುವ ಪ್ರಯತ್ನವು ಒಂದು ಮಟ್ಟದವರೆಗೆ ಮಾತ್ರ ಫಲಕಾರಿಯಾಗಬಲ್ಲದು. ಮೂಲತಃ ಹಿಂದಿನ ಜೀವನದ ವಿಧಾನಗಳು ಪ್ರಾದೇಶಿಕವಾಗಿ ವ್ಯಾಪ್ತವಾಗಿಲ್ಲದಿರುವುದೇ ಇದಕ್ಕೆ ಕಾರಣ. ಸಮಾಜಶಾಸ್ತ್ರಜ್ಞರಲ್ಲಿ 'ಸಾಂಸ್ಕೃತಿಕ ಪ್ರದೇಶದ' ಕಲ್ಪನೆಯ ಮೇಲೆ ಸಮಯವನ್ನು ಹರಣಮಾಡುವ ಪ್ರವೃತ್ತಿಯಿದೆ.

*ನಿಜವಾಗಿ ನೋಡಿದರೆ ಅಂತಹ ಒಂದು ಕಲ್ಪನೆಯೇ ಮಿಥ್ಯೆ. ಸ್ವಭಾವ ಲಕ್ಷಣಗಳು ಭೌಗೋಳಿಕವಾಗಿ ಗುಂಪುಗೂಡಿದ್ದರೆ ಅವುಗಳೊಂದಿಗೆ ಭೌಗೋಳಿಕವಾಗಿ ವ್ಯವಹರಿಸಬೇಕು. ಹಾಗಿಲ್ಲದೆ ಇರುವಾಗ ಸಡಿಲವಾದ ಒಂದು ಪ್ರಾಯೋಗಿಕ ಪಂಗಡವನ್ನೇ ವಿಧಿಸೂತ್ರವಾದುದೆಂದು ಪರಿಗಣಿಸುವುದು ವ್ಯರ್ಥ. ನಮ್ಮ ನಾಗರಿಕತೆಯನ್ನು ಮಾನವಶಾಸ್ತ್ರೀಯ ದೃಷ್ಟಿಕೋನದಿಂದ ನೋಡಿದರೆ ಅದರಲ್ಲಿ ಪ್ರಪಂಚದ ಯಾವ ಭಾಗದಲ್ಲಿಯೇ ಆದರೂ ಕಂಡು ಬರುವಂತಹ ಸಾರ್ವಲೌಕಿಕವಾದ ಏಕರೂಪದ ಸಂಸ್ಕೃತಿಯನ್ನು ಕಾಣುತ್ತೇವೆ. ಅಂತೆಯೇ ಕಾರ್ಮಿಕವರ್ಗ ಹಾಗೂ ಶ್ರೀಮಂತವರ್ಗದ ನಡುವೆ. ಚರ್ಚಿನ ಸುತ್ತಲೇ ಜೀವನ ಕೇಂದ್ರೀಕೃತವಾಗಿರುವ ಜನಸಮೂಹಗಳು ಹಾಗೂ ಕುದುರೆ ಜೂಜಿನಲ್ಲಿಯೇ ಕೇಂದ್ರೀಕೃತವಾಗಿರುವ ಜನಸಮೂಹಗಳ ನಡುವೆ, ಜೀವನ ವಿಧಾನಗಳಲ್ಲಿ ಅಪಾರವಾದ ಭಿನ್ನತೆಯಿದೆ. ಆಧುನಿಕ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಹೆಚ್ಚು ಮಟ್ಟಿನ ಆಯ್ಕೆಯ ಸ್ವಾತಂತ್ರ್ಯದಿಂದಾಗಿ ರೋಟರಿ ಕ್ಲಬ್ ಮತ್ತು ಗ್ರೀನ್ ವಿಚ್ ವಿಲೇಜ್ ಮೊದಲಾದ ವಿವಿಧ ಆದರ್ಶಗಳನ್ನು ಎತ್ತಿಹಿಡಿಯುವ ಪ್ರಮುಖವಾದ ಸ್ವಯಂಪ್ರೇರಿತ ಗುಂಪುಗಳು ಸ್ಥಾಪಿತವಾಗಲು ಅವಕಾಶವಾಗಿದೆ. ಈ ಆಧುನಿಕ ಸನ್ನಿವೇಶಗಳಿಂದಾಗಿ ಸಾಂಸ್ಕೃತಿಕ ಪ್ರಕ್ರಿಯೆಗಳ ಸ್ವಭಾವದಲ್ಲಿ ಮಾರ್ಪಾಟಾಗಿಲ್ಲ. ಆದರೆ ಸ್ಥಳೀಯ ಗುಂಪು ಅವುಗಳನ್ನು ಅಧ್ಯಯನ ಮಾಡಲು ಸೂಕ್ತವಾದ ಘಟಕವಾಗಿ ಉಳಿದಿಲ್ಲ.

ಸಂಸ್ಕೃತಿಯ ಸಮಗ್ರತೆಯ ಭಾವನೆಯು ಬಹುಮುಖ್ಯವಾದ ಸಮಾಜಶಾಸ್ತ್ರೀಯ ಪರಿಣಾಮಗಳೊಂದಿಗೆ ಕೂಡಿದ್ದಾಗಿದೆ. ಸಮಾಜಶಾಸ್ತ್ರ ಮತ್ತು ಸಾಮಾಜಿಕ ಮಾನಸಶಾಸ್ತ್ರಗಳ ಹಲವಾರು ಗಹನ ಸಮಸ್ಯೆಗಳ ಮೇಲೆ ತನ್ನ ಪ್ರಭಾವ ಬೀರುತ್ತದೆ. ಇವುಗಳಲ್ಲಿ ಮೊಟ್ಟ ಮೊದಲನೆಯದೆಂದರೆ ಸಮಾಜವು ಜೈವಿಕವಾಗಿ ರಚಿತವಾದುದೇ ಅಲ್ಲವೇ ಎಂಬುದು. ಬಹುಮಂದಿ ಸಮಾಜಶಾಸ್ತ್ರಜ್ಞರು ಮತ್ತು ಸಾಮಾಜಿಕ ಮಾನಸ ಶಾಸ್ತ್ರಜ್ಞರು ಸಮಾಜವು ಜೈವಿಕವಾಗಿ ರಚಿತವಾದುದಲ್ಲವೆಂದೂ. ಆಯಾ ಸಮಾಜವು ತಾನು ಒಳಗೊಂಡಿರುವ ವ್ಯಕ್ತಿಗಳ ಪ್ರಜ್ಞಾ ಸಾಮರ್ಥ್ಯಕ್ಕೆ ಮಿಗಿಲಾದುದಾಗಲಾರದೆಂದೂ ವಿವರವಾದ ವಾದಗಳನ್ನು ಮಂಡಿಸಿದ್ದಾರೆ. ತಮ್ಮ ಪ್ರತಿಪಾದನೆಯ ಅಂಗವಾಗಿ ಅವರುಗಳು 'ಗುಂಪೆಂಬ ಭ್ರಮೆ'ಯನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಈ ಗುಂಪೆಂಬ ಭಾವನೆಯು ಚಿಂತನೆ ಮಾಡುವ ಮತ್ತು ಕ್ರಿಯೆಗೆಯ್ಯುವ ಒಂದು ಮಿಥ್ಯಾ ವಸ್ತುವನ್ನು ಕಲ್ಪಿಸಿ ಬಿಡುತ್ತದೆಂಬುದು ಅವರ ಆಕ್ಷೇಪ. ತದ್ವಿರುದ್ಧವಾಗಿ ವಿವಿಧ ಸಂಸ್ಕೃತಿಗಳೊಂದಿಗೆ ವ್ಯವಹರಿಸಿರುವವರು, ಆ ವಿಷಯವಸ್ತುವಿನಲ್ಲಿ ತಾವು ಕಂಡ ವಾಸ್ತವಿಕತೆಯನ್ನು ವಿವರಿಸಲು ವ್ಯಕ್ತಿಗತ ಮಾನಸಶಾಸ್ತ್ರದ ಎಲ್ಲ ನಿಯಮಗಳೂ ಸಹ ಸಾಲವು ಎಂಬುದನ್ನು ಸುಸ್ಪಷ್ಟವಾಗಿ

ಅರಿತು ಆಧ್ಯಾತ್ಮದ ಪದಸಮೂಹಗಳಲ್ಲಿ ತಾವು ಕಂಡುದನ್ನು ವ್ಯಕ್ತಪಡಿಸಿದ್ದಾರೆ. ಡರಕೀಮನಂತೆ 'ವ್ಯಕ್ತಿ ಎಂಬುದೇ ಇಲ್ಲ.' ಎಂದು ಉದ್ಗರಿಸಿದ್ದಾರೆ. ಕ್ರೋಬರ್ ನಂತೆ ಅವರು ಸಾಂಸ್ಕೃತಿಕ ಪ್ರಕ್ರಿಯೆಗಳಿಗೆ ಕಾರಣೀಭೂತವಾದ ಸರ್ವೋತ್ತಮ ವ್ಯವಸ್ಥೆ ಜೈವಿಕಾತೀತ ಎಂದು ಹೆಸರಿಸಿರುವಂತಹ ಯಾವುದಾದರೂ ಶಕ್ತಿಯತ್ತ ಬೆರಳು ತೋರಿಸಿದ್ದಾರೆ.

ಇದು ಬಹುಮಟ್ಟಿಗೆ ಮಾತಿನ ಜಗಳವಷ್ಟೆ. ಜೈವಿಕವಾದಿಗಳೆಂದು ಕರೆದು ಕೊಳ್ಳುವವರು ಯಾರೂ ಸಹ ಒಂದು ಸಂಸ್ಕೃತಿಯು ಆವರಿಸಿಕೊಂಡಿರುವ ಎಲ್ಲ ವ್ಯಕ್ತಿಗಳ ಪ್ರಜ್ಞಾಶಕ್ತಿಗೆ ಮೀರಿದಂತಹ ಒಂದು ಪ್ರಜ್ಞಾಶಕ್ತಿಯ ಅಸ್ತಿತ್ವದಲ್ಲಿ ನಂಬಿಕೆ ತಳೆದವರಲ್ಲ. ಇನ್ನೊಂದು ಕಡೆ ಗುಂಪೆಂಬ ಭ್ರಮೆಯ ತೀವ್ರ ವಿರೋಧಿ ಗಳಲ್ಲಿ ಒಬ್ಬನಾದ ಆಲ್‌ಪೋರ್ಟನು ಸಹ ಗುಂಪುಗಳ ವೈಜ್ಞಾನಿಕ ಅಧ್ಯಯನದ ಅವಶ್ಯಕತೆಯನ್ನೂ, "ಅದು ಸಮಾಜಶಾಸ್ತ್ರದಂತಹ ವಿಶೇಷಶಾಸ್ತ್ರದ ಕ್ಷೇತ್ರ" ಎಂಬುದನ್ನೂ ಒಪ್ಪಿಕೊಂಡಿದ್ದಾನೆ. ಗುಂಪು ಎಂಬುದು ಅದರಲ್ಲಿರುವ ವ್ಯಕ್ತಿಗಳ ಮೊತ್ತಕ್ಕಿಂತ ಮಿಗಿಲಾದುದು ಎಂದು ಭಾವಿಸುವವರ ಮತ್ತು ಹಾಗೆ ಭಾವಿಸದವರ ನಡುವಣ ವಾದವಿವಾದಗಳಿಗೆ ಕಾರಣ, ಅವರು ಬೇರೆ ಬೇರೆ ತೆರನಾದ ವಿಷಯ ವಸ್ತು ಗಳೊಂದಿಗೆ ವ್ಯವಹರಿಸುತ್ತಿರುವ ಜಿಜ್ಞಾಸುಗಳು ಎಂಬುದು. ಡರ್‌ಕೀಮನು ಆರಂಭ ದಿಂದಲೂ ಸಂಸ್ಕೃತಿಗಳ ವೈವಿಧ್ಯತೆಯ, ಅದರಲ್ಲಿಯೂ ಮುಖ್ಯವಾಗಿ ಆಸ್ಟ್ರೇಲಿಯದ ಸಂಸ್ಕೃತಿಯ ನಿಕಟ ಪರಿಚಯ ಪಡೆದವನಾಗಿದ್ದು ಸಂಸ್ಕೃತಿಯ ಅಧ್ಯಯನಗಳ ಅವಶ್ಯಕತೆ ಯನ್ನು ಕೆಲವೊಮ್ಮೆ ಸಂದಿಗ್ಧ ಭಾಷೆಯಲ್ಲಿ ಒತ್ತಿಹೇಳಿದ್ದಾನೆ. ಸಮಾಜಶಾಸ್ತ್ರಜ್ಞ ರಾದರೋ ಪ್ರಮಾಣ ನಿಷ್ಕರ್ಷವಾದ ನಮ್ಮ ಸಂಸ್ಕೃತಿಯೊಂದಿಗೆ ವ್ಯವಹರಿಸುವವರಾ ಗಿದ್ದು, ತಮ್ಮ ಕಾರ್ಯದಲ್ಲಿ ಅವಶ್ಯಕತೆಯೇ ತೋರಿಬರದ ಒಂದು ವಿಧಾನ ಕ್ರಮವನ್ನು ಖಂಡಿಸಲು ಪ್ರಯತ್ನಪಡುತ್ತಿದ್ದಾರೆ.

ಜೂನಿ ಜನರು ಅವರಲ್ಲಿರುವ ಎಲ್ಲ ವ್ಯಕ್ತಿಗಳ ಸಮಷ್ಟಿಯು ಇಚ್ಛಿಸಿ ನಿರ್ಮಿಸಿರು ವುದಕ್ಕಿಂತ ಮೀರಿದ, ಮಿಗಿಲಾದ ಸಂಸ್ಕೃತಿಯನ್ನು ಪಡೆದಿದ್ದಾರೆ ಎಂಬುದು ಸುಸ್ಪಷ್ಟ ವಾಗಿದೆ. ಗುಂಪಿಗೆ ಪರಂಪರೆಯ ಬಲವಿದೆ. ಅದು 'ಕಾಲ ನಿಯತ' ವಾದುದು. ಅದನ್ನು ಜೈವಿಕವಾದ ಒಂದು ಸಮಷ್ಟಿ ಎಂದು ಕರೆಯುವುದು ನ್ಯಾಯವಾದುದು. ಅಂತಹ ಒಂದು ಗುಂಪು ತನ್ನ ಗುರಿಗಳನ್ನು ಆಯ್ಕೆಮಾಡಿಕೊಳ್ಳುತ್ತದೆ ಮತ್ತು ನಿರ್ದಿಷ್ಟ ವಾದ ಉದ್ದೇಶಗಳನ್ನು ಪಡೆದಿದೆ ಎಂದು ನಾವು ಹೇಳಿದರೆ ಅದು ನಮ್ಮ ಭಾಷೆಯಲ್ಲಿ ಹುದುಗಿಕೊಂಡಿರುವ ಸರ್ವಚೇತನ ಸಿದ್ಧಾಂತದಿಂದಾಗಿ ಆದ ಒಂದು ಅನಿವಾರ್ಯ ಪರಿ ಣಾಮ ಮಾತ್ರ. ಅದನ್ನು ಅಧ್ಯಯನಶೀಲನು ಯಾವುದೋ ಗೂಢವಾದ ತತ್ವಶಾಸ್ತ್ರ ವನ್ನು ಅನುಸರಿಸುತ್ತಿರುವನೆಂಬುದಕ್ಕೆ ರುಜುವಾತಾಗಿ ಭಾವಿಸಬಾರದು. ನಾವು

ಮಾನವ ವರ್ತನೆಯ ಇತಿಹಾಸವನ್ನು ಅರಿತುಕೊಳ್ಳಬೇಕಾದರೆ ಈ ಗುಂಪುಗಳ ಸಂಗತಿಗಳನ್ನು ಅಧ್ಯಯನ ಮಾಡಲೇಬೇಕು. ನಾವು ಎದುರ್ಗೊಳ್ಳುವ ವಾಸ್ತವಿಕತೆಯನ್ನು ವ್ಯಕ್ತಿಗತ ಮಾನಸ ಶಾಸ್ತ್ರವೊಂದೇ ವಿಷದಗೊಳಿಸಲಾರದು.

ಸಾಮಾಜಿಕ ಸಂಪ್ರದಾಯಗಳ ಅಧ್ಯಯನಗಳಲ್ಲೆಲ್ಲ, ಪರಿಗಣಿತವಾಗುತ್ತಿರುವ ವರ್ತನೆಯು ಸಾಮಾಜಿಕ ಮಾನ್ಯತೆಯೆಂಬ ಸೂಜಿಗಣ್ಣಿನ ಮೂಲಕ ಹಾಯ್ದು ಬರಬೇಕು ಎಂಬುದೇ ವಿಷಯದ ತಿರುಳು. ಸಾಮಾಜಿಕ ಮಾನ್ಯತೆ ಮತ್ತು ನಿರಾಕರಣೆಗಳ ಕದನವನ್ನು ವಿಶಾಲವಾದ ವ್ಯಾಪ್ತಿಯ ಇತಿಹಾಸವು ಮಾತ್ರ ನೀಡಬಲ್ಲದು. ಅಂದರೆ ಗಣನೆಗೆ ಪಾತ್ರವಾಗಬೇಕಾದುದು ಮಾನವಶಾಸ್ತ್ರ ಮಾತ್ರವಲ್ಲ ; ಇತಿಹಾಸವೂ ಸಹ. ಇತಿಹಾಸವೆಂಬುದು ಅಂತರಂಗ ಪರಿಶೀಲನೆಯಿಂದ ಕಂಡುಹಿಡಿಯಬಹುದಾದ ವಸ್ತುಗಣದಲ್ಲಿ ಸೇರಿದುದಲ್ಲ. ಆದ್ದರಿಂದಲೇ ನಮ್ಮ ನಿಯತಕಾಲಿಕಗಳಲ್ಲೂ, ಆಧುನಿಕ ಕೃತಿಗಳಲ್ಲೂ ನಿರೂಪಿತವಾಗುವಂತೆ ನಮ್ಮ ಅರ್ಥಿಕ ವ್ಯವಸ್ಥೆಯ ಮೂಲವನ್ನು ಮಾನವನ ಸ್ಪರ್ಧಾಭಾವಕ್ಕೂ, ಆಧುನಿಕ ಯುದ್ಧದ ಮೂಲವನ್ನು ಮಾನವನ ಹೋರಾಟ ಭಾವಕ್ಕೂ ಹೊಂದಿಸುವ ಪ್ರಯತ್ನ ನಡೆದಿದೆ. ಇಂತಹ ವಿವರಗಳು ಹಾಗೂ ಸಂಪ್ರದಾಯಗಳನ್ನು ಕುರಿತ ಇದೇ ಬಗೆಯ ಇತರ ವಿವರಣೆಗಳು ಮಾನವಶಾಸ್ತ್ರಜ್ಞರಿಗೆ ಒಡಕು ಶಬ್ದವಾಗಿ ತೋರುತ್ತವೆ. ಈ ವಿಚಾರವನ್ನು ಮೊಟ್ಟಮೊದಲು ತೀವ್ರವಾಗಿ ಎತ್ತಿದವರೆಂದರೆ ರಿವರ್ಸ್. ಕುಲವೈರವನ್ನು ಸೇಡಿನ ಮನೋಭಾವದ ಮೂಲಕ ಅರಿತುಕೊಳ್ಳುವುದಕ್ಕಿಂತಲೂ, ಕುಲವೈರದ ಸಂಸ್ಥೆಯ ಮೂಲಕ ಸೇಡಿನ ಮನೋಭಾವವನ್ನು ಅರಿತುಕೊಳ್ಳುವುದು ಹೆಚ್ಚು ಸೂಕ್ತವೂ ಅವಶ್ಯಕವೂ ಆದುದೆಂದು ಆತ ತೋರಿದರು. ಇದೇ ರೀತಿಯಲ್ಲಿ ಈರ್ಷ್ಯೆಯ ಮನೋಭಾವವನ್ನು ಸ್ಥಳೀಯವಾದ ಲೈಂಗಿಕ ನೀತಿ ನಿಯಮಗಳು ಮತ್ತು ಸ್ವತ್ತುಗಳ ಒಡೆತನದ ಸಂಸ್ಥೆಗಳ ಮೂಲಕ ಅಧ್ಯಯನ ಮಾಡುವುದು ಅವಶ್ಯಕ.

ಸಂಸ್ಕೃತಿಯನ್ನು ವ್ಯಕ್ತಿಗತ ವರ್ತನೆಯ ಆಧಾರದ ಮೇಲೆ ಸರಳವಾಗಿ ಅರ್ಥೈಸುವುದರಲ್ಲಿ ತೊಡಕಿದೆ. ಆ ತೊಡಕಿಗೆ ಕಾರಣ ಆ ಅರ್ಥ ವಿವರಣೆಗಳು ಮಾನಸಶಾಸ್ತ್ರ ರೀತಿಗನುಗುಣವಾಗಿ ನೀಡಿದಂತಹವು ಎಂಬುದಲ್ಲ. ಅವು ಇತಿಹಾಸವನ್ನೂ, ಸ್ವಭಾವ ಲಕ್ಷಣಗಳಿಗೆ ದೊರೆಯುವ ಮಾನ್ಯತೆ ಅಥವಾ ನಿರಾಕರಣೆಯ ಐತಿಹಾಸಿಕ ಪ್ರಕ್ರಿಯೆಯನ್ನೂ ಅಲಕ್ಷಿಸಿವೆ ಎಂಬುದು. ಸಂಸ್ಕೃತಿಗಳ ವಿನ್ಯಾಸಾತ್ಮಕ ಅರ್ಥ ವಿವರಣೆಯೂ ಸಹ ವೈಯಕ್ತಿಕ ಮಾನಸಶಾಸ್ತ್ರದ ಆಧಾರದ ಮೇಲೆ ಮಾಡಿರುವಂತಹುದು. ಆದರೆ ಅದು ಇತಿಹಾಸದ ಮೇಲೂ, ಮಾನಸಶಾಸ್ತ್ರದ ಮೇಲೂ ಆಧಾರಗೊಂಡಿದೆ. ಅದರ ಪ್ರಕಾರ ಕೆಲವು ಸಂಸ್ಕೃತಿಗಳ ಸಂಸ್ಥೆಗಳು ಡಯೊನೀಶಿಯನ್ ವರ್ತನೆಯನ್ನು ಎತ್ತಿಹಿಡಿಯುವುದಕ್ಕೆ ಕಾರಣ, ವ್ಯಕ್ತಿಗತ ಮಾನೋಭಾವದಲ್ಲಿ ಅದು ತೋರಿಬರುವ ಸಾಧ್ಯತೆ

ಶಾಶ್ವತವಾದುದು ಎಂಬುದು. ಕೆಲವು ಸಂಸ್ಕೃತಿಗಳಲ್ಲಿ ಅದನ್ನು ಎತ್ತಿಹಿಡಿಯುವು ದಕ್ಕೂ, ಇನ್ನು ಕೆಲವಲ್ಲಿ ಹಾಗೆ ಆಗದಿರುವುದಕ್ಕೂ ಕಾರಣ, ಐತಿಹಾಸಿಕ ಘಟನೆಗಳು ಒಂದೆಡೆಯಲ್ಲಿ ಅದರ ಬೆಳವಣಿಗೆಯನ್ನು ಪ್ರಚೋದಿಸಿರುವುದು ; ಇತರ ಎಡೆಗಳಲ್ಲಿ ಅದನ್ನು ತಳ್ಳಿಹಾಕಿರುವುದು. ಸಾಂಸ್ಕೃತಿಕ ರೂಪಗಳ ಅರ್ಥ ನಿರೂಪಣೆಯ ಕೆಲವು ಹಂತಗಳಲ್ಲಿ ಇತಿಹಾಸ ಮತ್ತು ಮಾನಸಶಾಸ್ತ್ರ ಇವೆರಡೂ ಅವಶ್ಯಕ. ಒಂದರ ಕಾರ್ಯ ವನ್ನು ಇನ್ನೊಂದು ನಿರ್ವಹಿಸಲಾರದು.

ಈಗ ನಾವು ವಿನ್ಯಾಸಾತ್ಮಕ ಮಾನವಶಾಸ್ತ್ರದ ಮೇಲೆ ಪ್ರಭಾವ ಬೀರಿರುವ, ಅತ್ಯಂತ ತೀವ್ರವಾದ ವಾದವಿವಾದವೆಬ್ಬಿಸಿರುವ ಸಮಸ್ಯೆಯತ್ತ ಗಮನ ನೀಡಬೇಕು. ಈ ಘರ್ಷಣೆಯು ಸಾಮಾಜಿಕ ಸಂಗತಿಗಳ ಜೈವಿಕ ಆಧಾರಗಳನ್ನು ಕುರಿತುದು. ಪ್ರಪಂಚದ ಎಲ್ಲೆಡೆಗಳಲ್ಲೂ ಮಾನವ ಮನೋಭಾವವು ಹೆಚ್ಚು ಕಡಮೆ ಒಂದೇ ತೆರನಾದುದು ಎನ್ನುವ ರೀತಿಯಲ್ಲಿ ನಾನು ನಿರೂಪಿಸಿದ್ದೇನೆ. ಪ್ರತಿಯೊಂದು ಸಮಾಜದಲ್ಲಿಯೂ ನಿಗೂಢಶಕ್ತಿಗಳು ಹೆಚ್ಚು ಕಡಮೆ ಒಂದೇ ರೀತಿಯಲ್ಲಿ ಹಂಚಿಹೋಗಿವೆ. ಸಂಸ್ಕೃತಿಯು ತನ್ನ ಪರಂಪರಾಗತ ರೂಪಿಕೆಗಳಿಗೆ ಅನುಗುಣವಾಗಿ ಅವುಗಳಿಂದ ಆಯ್ಕೆಮಾಡಿ, ಅದರ ಪ್ರಕಾರವಾಗಿ ಬಹುಮಟ್ಟಿನ ವ್ಯಕ್ತಿಗಳನ್ನು ಅನುರೂಪರನ್ನಾಗಿ ಅಚ್ಚೊತ್ತಿಬಿಡುತ್ತದೆ ಎಂದು ಅರ್ಥ ಬರುವಂತೆ ವಿವರಿಸಿದ್ದೇನೆ. ಉದಾಹರಣೆಗೆ ಈ ರೀತಿಯ ಅರ್ಥವಿವರಣೆಯ ಪ್ರಕಾರ, ಆನಂದ ಪರವಶತೆಯನ್ನು ಅನುಭವಿಸುವ ನಿಗೂಢ ಶಕ್ತಿಯು ಯಾವುದೇ ಜನ ಸಮೂಹದಲ್ಲಿಯಾದರೂ ಒಂದು ನಿರ್ದಿಷ್ಟ ಸಂಖ್ಯೆಯ ವ್ಯಕ್ತಿಗಳಲ್ಲಿ ಇದ್ದೇ ಇರುತ್ತದೆ. ಅದಕ್ಕೆ ಗೌರವನೀಡಿ, ಪುರಸ್ಕರಿಸುವುದಾದರೆ ಅವರಲ್ಲಿ ಸಾಕಷ್ಟು ಪ್ರಮಾಣದವರು ಅದನ್ನು ಸಾಧಿಸುತ್ತಾರೆ ಇಲ್ಲವೇ ಸಾಧಿಸಿದವರಂತೆ ಸೋಗು ಹಾಕುತ್ತಾರೆ. ಆದರೆ ನಮ್ಮ ನಾಗರಿಕತೆಯಲ್ಲಿ ಆನಂದಪರವಶತೆಯು ಕುಟುಂಬದ ಗೌರವಕ್ಕೆ ಕಳಂಕವೆಂದು ಪರಿಗಣಿತವಾಗಿರುವುದರಿಂದ ಅಂತಹವರ ಸಂಖ್ಯೆ ಕಡಮೆಯಾಗುತ್ತದೆ; ಅಂತಹವರು ಅತಿರೇಕದ ವ್ಯಕ್ತಿಗಳಾಗಿ ಪರಿಗಣಿತರಾಗುತ್ತಾರೆ.

ಈ ವಿಚಾರದಲ್ಲಿ ಇನ್ನೊಂದು ರೀತಿಯ ಅರ್ಥವಿವರಣೆಯೂ ಸಾಧ್ಯ. ಸ್ವಭಾವ ಲಕ್ಷಣಗಳು ಸಾಂಸ್ಕೃತಿಕವಾಗಿ ಆಯ್ಕೆಯಾಗುವುದಿಲ್ಲವೆಂದೂ, ಅವು ಜೈವಿಕವಾಗಿ ಮುಂದೆ ಸಾಗಿವೆ ಎಂದೂ ಉಗ್ರವಾಗಿ ವಾದಿಸುವವರಿದ್ದಾರೆ. ಈ ಅರ್ಥವಿವರಣೆಯ ಪ್ರಕಾರ ವ್ಯತ್ಯಾಸಗಳಿಗೆ ಕಾರಣವು ಬುಡಕಟ್ಟು ಸಂಬಂಧವಾದುದು. ಮೈದಾನ ಸೀಮೆಯ ಇಂಡಿಯನ್ನರು ದಿವ್ಯದರ್ಶನಾಕಾಂಕ್ಷಿಗಳಾಗಿದ್ದರೆ ಅದಕ್ಕೆ ಕಾರಣ, ಅಂತಹ ಅವಶ್ಯಕತೆಯು ಬುಡಕಟ್ಟಿನ ವರ್ಣತಂತುಗಳ ಮೂಲಕ ಸಾಗಣೆಯಾಗಿರುವುದು. ಅಂತೆಯೇ ಪ್ವೆಬ್ಲೋ ಸಂಸ್ಕೃತಿಗಳು ಶಾಂತಿ ಮತ್ತು ಇತಿಮಿತಿಗಳನ್ನು ಬೆಂಬತ್ತಿರುವುದಕ್ಕೆ, ಅಂತಹ ವರ್ತನೆಯು ಅವರ ಬುಡಕಟ್ಟು ಅನುವಂಶೀಯತೆಯಿಂದ ನಿರ್ಧರಿತ

ವಾಗಿರುವುದೇ ಕಾರಣ. ಈ ಜೈವಿಕ ಅರ್ಥವಿವರಣೆಯು ನಿಜವಾದರೆ, ಆಗ ಗುಂಪು ಗಳ ವರ್ತನೆಯನ್ನು ಅರಿತುಕೊಳ್ಳಲು ನಾವು ಇತಿಹಾಸದತ್ತ ತಿರುಗಬೇಕಾಗಿಲ್ಲ ; ಶರೀರ ವಿಜ್ಞಾನದತ್ತ ಗಮನಹರಿಸಬೇಕು.

ಆದರೆ ಈ ಜೈವಿಕ ಅರ್ಥವಿವರಣೆಯು ಭದ್ರವಾದ ವೈಜ್ಞಾನಿಕ ಆಧಾರವನ್ನು ಗಳಿಸಿಲ್ಲ. ಈ ದೃಷ್ಟಿಯನ್ನು ಎತ್ತಿಹಿಡಿಯುವವರು ತಮ್ಮ ವಾದವನ್ನು ಸಾಧಿಸಬೇಕಾದರೆ, ನಾವು ಅರಿತುಕೊಳ್ಳ ಹೊರಟಿರುವ ಸಾಮಾಜಿಕ ಸಂಗತಿಗಳಲ್ಲಿ ಬಹು ಸ್ವಲ್ಪ ಭಾಗಕ್ಕಾದರೂ ಕಾರಣಿಭೂತವಾಗಿರುವ ಶಾರೀರಿಕ ಅಂಶಗಳನ್ನು ತೋರಬೇಕು. ಬೇರೆ ಬೇರೆ ಮಾನವ ಗುಂಪುಗಳ ನಡುವೆ ಮೂಲ ಜೀವದ್ರವ್ಯ ರಚನೆಯಲ್ಲಿಯೋ, ನಿರ್ನಾಳ ಗ್ರಂಥಿಗಳ ಕಾರ್ಯನಿರ್ವಹಣೆಯಲ್ಲಿಯೋ ಖಚಿತವಾದ ವ್ಯತ್ಯಾಸಗಳಿರಬಹುದು. ಇದು ಮಾನವಶಾಸ್ತ್ರೀಯವಾದ ಸಮಸ್ಯೆಯಲ್ಲ. ಅಂತಹ ಸಾಕ್ಷ್ಯಾಧಾರಗಳನ್ನು ಶರೀರ ವಿಜ್ಞಾನಿಗಳೂ, ತಳಿಶಾಸ್ತ್ರಜ್ಞರೂ ಒದಗಿಸಿದಾಗ. ಅದು ಸಾಂಸ್ಕೃತಿಕ ಇತಿಹಾಸದ ಅಧ್ಯಯನಶೀಲರಿಗೆ ಪ್ರಯೋಜನಕ್ಕೆ ಬರುತ್ತದೆ.

ಸ್ವಭಾವಲಕ್ಷಣಗಳು ಅನುವಂಶೀಯವಾಗಿ ಪ್ರಸಾರವಾಗುವುದರ ಮಟ್ಟಿಗೆ ಮುಂದೆ ಜೀವವಿಜ್ಞಾನಿಗಳು ಒದಗಿಸಬಹುದಾದ ಶಾರೀರಿಕ ಅನ್ಯೋನ್ಯತೆಗೆ ಸಂಬಂಧಪಟ್ಟ ಸಾಕ್ಷ್ಯಾಧಾರಗಳು, ಅತ್ಯುತ್ತಮವೆನಿಸಿದರೂ ಸಹ ಎಲ್ಲ ಸಂಗತಿಗಳನ್ನೂ ವಿವರಿಸಲಾರವು. ಉತ್ತರ ಅಮೆರಿಕದ ಇಂಡಿಯನ್ನರೆಲ್ಲ ಜೈವಿಕವಾಗಿ ಒಂದೇ ಬುಡಕಟ್ಟಿಗೆ ಸೇರಿದವರು. ಆದರೆ ಅವರೆಲ್ಲರ ಸಾಂಸ್ಕೃತಿಕ ವರ್ತನೆಯು ಡಯೋನೀಶಿಯನ್ ಮಾದರಿಯದಲ್ಲ. ಜುನಿಗಳು ಅದಕ್ಕೆ ತದ್ವಿರುದ್ಧವಾದ ಪ್ರೇರಣೆಗಳ ಪರಕಾಷ್ಠತೆಗೆ ಉದಾಹರಣೆ. ಜುನಿಗಳ ಅಪೊಲೋನಿಯನ್ ಸಂಸ್ಕೃತಿಯನ್ನು ಇತರ ಪ್ವೆಬ್ಲೋಗಳು ಹಂಚಿಕೊಂಡಿದ್ದಾರೆ. ಅವರಲ್ಲಿ ಒಂದು ಗುಂಪಾದ ಹೋಪಿಗಳು ಶೋಶೋನಿಯನ್ ಉಪಗುಂಪಿಗೆ ಸೇರಿದವರು. ಈ ಉಪಗುಂಪಿಗೆ ಹಲವು ಡಯೋನೀಶಿಯನ್ ಬಣಗಳೂ ಸೇರಿವೆ. ಅವರಿಗೆ ಆಜ್ಟೆಕರು ಭಾಷಾಬಂಧುತ್ವವುಳ್ಳವರಾಗಿದ್ದರು; ಟೆವಾ ಎಂಬ ಇನ್ನೊಂದು ಪ್ವೆಬ್ಲೋ ಗುಂಪು, ದಕ್ಷಿಣದ ಮೈದಾನ ಸೀಮೆಯ ಪ್ವೆಬ್ಲೋಗಳಲ್ಲದ ಬಣವಾದ ಕಿಯೋವಾಗಳೊಂದಿಗೆ ಬುಡಕಟ್ಟು ಹಾಗೂ ಭಾಷಾ ಬಾಂಧವ್ಯ ಪಡೆದವರು. ಆದ್ದರಿಂದ ಸಾಂಸ್ಕೃತಿಕ ವಿನ್ಯಾಸಗಳು ಸ್ಥಳೀಯವಾಗಿದ್ದು, ಬೇರೆ ಬೇರೆ ಗುಂಪುಗಳ ನಡುವಣ ಜೈವಿಕ ಬಾಂಧವ್ಯಗಳೊಂದಿಗೆ ಜೋಡಣೆಯಾಗುವುದಿಲ್ಲ. ಅಂತೆಯೇ ಪಶ್ಚಿಮದ ಬಯಲು ಸೀಮೆಯಲ್ಲಿ ದಿವ್ಯದರ್ಶನಾಕಾಂಕ್ಷಿ ಜನರನ್ನು ಇತರ ಗುಂಪುಗಳಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ಒಂದುಗೂಡಿಸುವಂತಹ ಜೈವಿಕ ಅಂಶವಾವುದೂ ಕಂಡುಬರುವುದಿಲ್ಲ. ಈ ಪ್ರದೇಶದಲ್ಲಿ ನೆಲೆಸಿರುವ ಬಣಗಳು ವಿಶಾಲವ್ಯಾಪ್ತಿ ಪಡೆದಿರುವ ಅಲ್ಗೋನ್ಕಿಯನ್, ಅತಬಾಸ್ಕನ್, ಸಿಯೋನ್ ಸಂತತಿಗೆ ಸೇರಿದುವು. ಅವರಲ್ಲಿ

ಪ್ರತಿ ಗುಂಪೂ ತನ್ನ ಮೂಲ ವಂಶದ ಭಾಷೆಯನ್ನು ಉಳಿಸಿಕೊಂಡಿದೆ (1). ಈ ಮೂಲವಂಶಗಳಿಗೆ ಸೇರಿದಂತೆ ಮೈದಾನ ಸೀಮೆಯವರ ರೀತಿ ದಿವ್ಯದರ್ಶನಾಕಾಂಕ್ಷಿಗಳಾದ ಬಣಗಳೂ ಇವೆ, ಆ ಆಕಾಂಕ್ಷೆ ಇಲ್ಲದ ಬಣಗಳೂ ಇವೆ. ಮೈದಾನ ಸೀಮೆಯ ಭೌಗೋಳಿಕ ಎಲ್ಲೆಯಲ್ಲಿ ವಾಸಿಸುವ ಬಣಗಳಲ್ಲಿ ಮಾತ್ರ ಸಾಧಾರಣ ಆರೋಗ್ಯವಂತನಾದ ಪ್ರತಿಯೊಬ್ಬ ವಯಸ್ಕನೂ, ತನ್ನ ಸಾಮರ್ಥ್ಯತೆಯ ಸಜ್ಜಿನ ಅಂಗವಾಗಿ ದಿವ್ಯದರ್ಶನವನ್ನು ಪಡೆಯಲು ಇಚ್ಛಿಸುತ್ತಾನೆ.

ದೇಶಾನುಗುಣವಾದ ವ್ಯಾಪ್ತಿಗೆ ಬದಲಾಗಿ ಕಾಲಾನುಗುಣವಾದ ವ್ಯಾಪ್ತಿಯತ್ತ ತಿರುಗಿದರಂತೂ, ಈ ಸನ್ನಿವೇಶಾತ್ಮಕ ವಿವರಣೆಯು ಇನ್ನೂ ಹೆಚ್ಚು ಸೂಕ್ತವಾಗಿ ತೋರುತ್ತದೆ. ಜೈವಿಕ ರಚನೆಯಲ್ಲಿ ಹೆಚ್ಚಿನ ವ್ಯತ್ಯಾಸಗಳಾಗದೇ ಇರುವ ಗುಂಪುಗಳ ಮಾನಸಿಕ ವರ್ತನೆಯಲ್ಲಿ ಅತ್ಯಂತತೀವ್ರವಾದ ಮಾರ್ಪಾಡುಗಳೂ ಉಂಟಾಗಿವೆ. ನಮ್ಮದೇ ಸಾಂಸ್ಕೃತಿಕ ಹಿನ್ನೆಲೆಯು ಇದನ್ನು ಚೆನ್ನಾಗಿ ಉದಹರಿಸಿ ತೋರುತ್ತದೆ. ಐರೋಪ್ಯ ನಾಗರಿಕತೆಯು ಹತ್ತೊಂಬತ್ತನೆಯ ಶತಮಾನದಲ್ಲಿ ತೀವ್ರವಾದ ನಿಸ್ಸಂಕೋಚ ಐಹಿಕವಾದಕ್ಕೆ ಗುರಿಯಾಗಿದ್ದಷ್ಟೇ, ಮಧ್ಯಯುಗದಲ್ಲಿ ಅತೀಂದ್ರಿಯ ವರ್ತನೆಗೆ, ಮನೋವಿಕಲ್ಪದ ಅಂಟುಜಾಡ್ಯಕ್ಕೆ ಗುರಿಯಾಗಿತ್ತು. ಅಂದರೆ ಗುಂಪಿನ ಬುಡಕಟ್ಟು ರಚನೆಯಲ್ಲಿ ಯಾವೊಂದು ಬದಲಾವಣೆಯೂ ಆಗಿಲ್ಲವಾದರೂ ಸಂಸ್ಕೃತಿಯು ತನ್ನ ಪ್ರವೃತ್ತಿಯನ್ನು ಮಾರ್ಪಡಿಸಿಕೊಂಡಿದೆ ಎಂದಂತಾಯಿತು.

ವರ್ತನೆಯ ಸಾಂಸ್ಕೃತಿಕ ಅರ್ಥವಿವರಣೆಗಳು, ಅದರಲ್ಲಿ ಕೆಲವೊಂದು ಮಟ್ಟಿಗೆ ಶಾರೀರಿಕ ಅಂಶಗಳೂ ಸೇರಿವೆಯೆಂಬುದನ್ನು ಅಲ್ಲಗಳೆಯಬೇಕಾಗಿಲ್ಲ. ಆ ರೀತಿಯ ಅಲ್ಲಗಳಿಕೆಯು ವೈಜ್ಞಾನಿಕ ವಿವರಣೆಗಳನ್ನು ಕುರಿತ ತಪ್ಪು ಭಾವನೆಯಿಂದ ಉಂಟಾದುದು. ರಸಾಯನಶಾಸ್ತ್ರವು ಜೈವಿಕ ಸಂಗತಿಗಳನ್ನು ವಿವರಿಸಲು ಸಾಲದು ಎಂದ ಮಾತ್ರಕ್ಕೆ ಹಾಗೂ ಜೀವಶಾಸ್ತ್ರವು ವಿಶ್ಲೇಷಿಸಲು ಹೊರಟಿರುವ ವಸ್ತುಗಳಿಗೆ, ರಸಾಯನಶಾಸ್ತ್ರದ ನಿಯಮಗಳು ಆಧಾರವಾಗಿವೆಯೆಂಬ ಮಾತ್ರಕ್ಕೆ ಜೈವಿಕಾಂಶಗಳು ರಾಸಾಯನಿಕ ಸೂತ್ರಗಳಂತೆಯೇ ಕಾರ್ಯ ನಿರ್ವಹಿಸಬೇಕು ಎನ್ನುವಂತಿಲ್ಲ. ವಿಜ್ಞಾನದ ಪ್ರತಿ ಕ್ಷೇತ್ರದಲ್ಲಿಯೂ ವೀಕ್ಷಣೆಗೆ ಒಳಪಟ್ಟಿರುವ ಪರಿಸ್ಥಿತಿಗಳನ್ನು ಅತ್ಯಂತ ಸೂಕ್ತವಾಗಿ ವಿವರಿಸಬಲ್ಲ ನಿಯಮಗಳನ್ನೂ, ಅನುಕ್ರಮಗಳನ್ನೂ ಒತ್ತಿ ಹೇಳುವುದು ಅವಶ್ಯಕ. ಅಂತಿಮ ಪರಿಣಾಮದ ಮೇಲೆ ಪ್ರಮುಖವಾದ ಪ್ರಭಾವವನ್ನು ಬೀರಿಲ್ಲವೆಂದು ತೋರಬಹುದಾದರೂ ಇತರ ಅಂಶಗಳೂ ಪ್ರಾಸಂಗಿಕ ಎಂಬುದನ್ನು ಉಲ್ಲೇಖಿಸ

(1) ಈ ಸಂದರ್ಭಗಳಲ್ಲಿ ಜೈವಿಕ ಬಾಂಧವ್ಯ, ಭಾಷಾ ಬಾಂಧವ್ಯಗಳು ಜೋಡಣೆಯಾಗುತ್ತವೆ.

ಬೇಕು. ಆದ್ದರಿಂದ, ಸಾಂಸ್ಕೃತಿಕ ವರ್ತನೆಯು ಜೈವಿಕ ಆಧಾರಗಳು ಬಹುಮಟ್ಟಿಗೆ ಅಪ್ರಕೃತ ಎಂದು ಹೇಳಿದ ಮಾತ್ರಕ್ಕೆ ಅವುಗಳ ಇರುವಿಕೆಯನ್ನೇ ನಿರಾಕರಿಸಿದಂತಲ್ಲ; ಐತಿಹಾಸಿಕ ಅಂಶಗಳೇ ಬಲವತ್ತರವಾದುದು ಎಂಬ ಸಂಗತಿಯನ್ನು ಒತ್ತಿ ಹೇಳಿದಂತೆ ಮಾತ್ರ.

ನಮ್ಮ ಸಂಸ್ಕೃತಿಯನ್ನೇ ಕುರಿತ ಅಧ್ಯಯನಗಳಲ್ಲಿ ಸಹ, ಪ್ರಯೋಗಾತ್ಮಕ ಮಾನಸ ಶಾಸ್ತ್ರವು ಈ ನಿಲುವನ್ನು ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಏರ್ಪಟ್ಟಿದೆ. ವ್ಯಕ್ತಿತ್ವದ ಸ್ವಭಾವಲಕ್ಷಣಗಳನ್ನು ಕುರಿತು ಈಚೆಗೆ ನಡೆಸಿದ ಮುಖ್ಯವಾದ ಪ್ರಯೋಗಗಳು ಪ್ರಾಮಾಣಿಕತೆ ಮತ್ತು ಮುಖಂಡತ್ವದಂತಹ ಸ್ವಭಾವಲಕ್ಷಣಗಳಲ್ಲೂ ಸಹ ಸಾಮಾಜಿಕ ನಿಷ್ಕರ್ಷಗಳು ಅತ್ಯಂತ ಪ್ರಭಾವಶಾಲಿಗಳು ಎಂಬುದನ್ನು ತೋರಿವೆ. ಒಂದು ಪ್ರಾಯೋಗಿಕ ಸಂದರ್ಭದಲ್ಲಿ ತೋರಿಸಿದ ಪ್ರಾಮಾಣಿಕತೆಯು, ಅದೇ ಮಗುವು ಇನ್ನೊಂದು ಸಂದರ್ಭದಲ್ಲಿ ಮೋಸಗೊಳಿಸುವುದೋ ಹೇಗೆ ಎಂಬುದರ ಬಗ್ಗೆ ಯಾವೊಂದು ಸೂಚನೆಯನ್ನೂ ನೀಡಲಿಲ್ಲ. ಆದ್ದರಿಂದ ಪ್ರಾಮಾಣಿಕ–ಅಪ್ರಾಮಾಣಿಕ ಸನ್ನಿವೇಶಗಳಿವೆಯೇ ಹೊರತು ಪ್ರಾಮಾಣಿಕ–ಅಪ್ರಾಮಾಣಿಕ ವ್ಯಕ್ತಿಗಳಿಲ್ಲ ಎಂಬುದು ಹೊರಬಿದ್ದಿತು. ಇದೇ ರೀತಿಯಲ್ಲಿ ಮುಖಂಡರನ್ನು ಕುರಿತ ಅಧ್ಯಯನದಿಂದ ನಮ್ಮ ಸಮಾಜದಲ್ಲಿ ಸಹ ಯಾವೊಂದು ಏಕಪ್ರಕಾರದ ಸ್ವಭಾವ ಲಕ್ಷಣಗಳು ನಿರ್ಣಾಯಕವೆಂದು ಬಗೆಯಲು ಸಾಧ್ಯವಿಲ್ಲ ಎಂಬುದು ರುಜುವಾತಾಯಿತು. ಕಾರ್ಯಪಾತ್ರವು ಮುಖಂಡರನ್ನು ಮುಂದೆ ತರುತ್ತದೆ. ಪರಿಸ್ಥಿತಿಯು ಯಾವ ಗುಣಗಳಿಗೆ ಪ್ರಾಧಾನ್ಯ ನೀಡುವುದೋ ಅವೇ ಅವನ ಗುಣಗಳು. ಈ ಬಗೆಯ 'ಸನ್ನಿವೇಶಾತ್ಮಕ' ಪರಿಣಾಮಗಳಿಂದಾಗಿ ಆಯ್ದೆತ್ತಿದ ಒಂದು ಸಮಾಜದಲ್ಲಿ ಸಾಮಾಜಿಕ ನಡವಳಿಕೆ ಹಾಗೂ ನಿರ್ದಿಷ್ಟವಾದ ಮಾದರಿಯ ವರ್ತನೆಯು, ಈಗಾಗಲೇ ಪೂರ್ವ ನಿರ್ಧರಿತವಾಗಿರುವ ಒಂದು ಯಾಂತ್ರಿಕತೆಯ ವ್ಯಕ್ತರೂಪವಲ್ಲ; ನಮ್ಮನ್ನು ಎದುರುಗೊಂಡಿರುವ ಸಮಸ್ಯೆಗಳು ವಿವಿಧ ರೀತಿಗಳಲ್ಲಿ ಪ್ರಚೋದಿಸುವಂತಹ ಪ್ರವೃತ್ತಿಗಳ ಒಂದು ತಂಡ ಎಂಬುದು ಹೆಚ್ಚು ಹೆಚ್ಚಾಗಿ ಸ್ಪಷ್ಟವಾಗಿದೆ.

ಹೀಗೆ ಒಂದು ಸಮಾಜದ ಒಳಗಡೆಯೇ ಮಾನವ ವರ್ತನೆಯಲ್ಲಿ ವ್ಯತ್ಯಾಸಗಳನ್ನುಂಟು ಮಾಡುವ ಸನ್ನಿವೇಶಗಳಿವೆ. ಅವುಗಳನ್ನು ಪ್ರೇರಣೆಗಳು ಹಾಗೂ ಉದ್ದೇಶಗಳಲ್ಲಿ ಪರಸ್ಪರ ವಿರುದ್ಧವಾದ ಜುನಿ ಮತ್ತು ಕ್ವಾಕಿಯುಟಲ್‌ಗಳಂತಹ ಸಂಸ್ಕೃತಿಗಳಲ್ಲಿ ನೋಡಿದಾಗ ಅವು ಸಂಸ್ಕೃತಿಗಳ ನಡುವಣ ವೈಪರೀತ್ಯಗಳಾಗಿ ಉತ್ಪ್ರೇಕ್ಷಿಗೊಳ್ಳುತ್ತವೆ. ಆದ್ದರಿಂದ ಒಂದು ನಿರ್ಧಾರವು ಅನಿವಾರ್ಯವಾಗುತ್ತದೆ. ನಾವು ಮಾನವ ವರ್ತನೆಯನ್ನು ಅರಿತುಕೊಳ್ಳಬೇಕಾದರೆ ಆಯಾ ಸಮಾಜದಲ್ಲಿ

ಒದಗಿ ಬಂದಿರುವ ಸಂಸ್ಥೆಗಳನ್ನು ಅರಿತುಕೊಳ್ಳುವುದು ಮೊಟ್ಟಮೊದಲ ಅವಶ್ಯಕತೆ. ಏಕೆಂದರೆ ಮಾನವ ವರ್ತನೆಯು ಈ ಸಂಸ್ಥೆಗಳು ನಿರ್ದೇಶಿಸುವ ರೂಪವನ್ನು ತಳೆಯುತ್ತವೆ. ಆ ವರ್ತನೆಯು ವಿಪರೀತದ್ದಾದರೂ, ಆ ಸಂಸ್ಕೃತಿಯಲ್ಲೇ ಮುಳುಗಿ ಅದರ ಅಂಗವಾಗಿರುವ ವೀಕ್ಷಕನಿಗೆ ಅದರ ಅರಿವಿರುವುದಿಲ್ಲ.

ಈ ವೀಕ್ಷಕನು ಪರಕೀಯ ಸಂಸ್ಕೃತಿಗಳಲ್ಲಿ ಮಾತ್ರ ವರ್ತನೆಯ ಮಾರ್ಗಗಳನ್ನು ಕಾಣಬಲ್ಲ. ತನ್ನದರಲ್ಲಲ್ಲ. ಆದರೆ ಇದು ಸ್ಥಳೀಯವೂ, ತಾತ್ಕಾಲಿಕವೂ ಆದ ಪಕ್ಷಪಾತ. ಯಾವುದೇ ಒಂದು ಸಂಸ್ಕೃತಿಯು ಶಾಶ್ವತವಾದ ಒಂದು ವಿವೇಕ ಮಾರ್ಗವನ್ನು ಹಿಡಿದು ಮಾನವ ಸಮಸ್ಯೆಗಳಿಗೆಲ್ಲ ಪರಿಹಾರ ನೀಡಬಲ್ಲ ಏಕೈಕ ವಿಧಾನವಾಗಿ ಇತಿಹಾಸದಲ್ಲಿ ಎದ್ದು ನಿಲ್ಲುತ್ತದೆ ಎಂದು ಭಾವಿಸಲು ಯಾವ ಆಧಾರವೂ ಇಲ್ಲ. ಮುಂದಿನ ತಲೆಮಾರಿಗೆ ಸಹ ಹೆಚ್ಚು ತಿಳಿವಳಿಕೆಯಿರುತ್ತದೆ. ಆದ್ದರಿಂದ ನಮಗೆ ಸಾಧ್ಯವಿರುವ ಏಕೈಕ ವೈಜ್ಞಾನಿಕ ಮಾರ್ಗವೆಂದರೆ ಮಾನವ ಸಂಸ್ಕೃತಿಯ ಅಸಂಖ್ಯಾತ ವಿವಿಧ ವಿನ್ಯಾಸಗಳಲ್ಲಿ ನಮ್ಮ ಸಂಸ್ಕೃತಿಯೂ ಒಂದು ಉದಾಹರಣೆ ಎಂದು ಪರಿಗಣಿಸುವುದು.

ಒಂದು ನಾಗರಿಕತೆಯ ಸಾಂಸ್ಕೃತಿಕ ಮಾದರಿಯು, ನಿಗೂಢವಾದ ಮಾನವೀಯ ಉದ್ದೇಶ ಮತ್ತು ಪ್ರೇರಣೆಗಳ ಮಹಾನ್ ಖಂಡವೃತ್ತದಿಂದ ಒಂದು ನಿರ್ದಿಷ್ಟ ರೇಖಾ ಭಾಗವನ್ನು ಮಾತ್ರ ಎತ್ತಿ ಬಳಸಿಕೊಳ್ಳುತ್ತದೆ. ನಾವು ಹಿಂದಿನ ಅಧ್ಯಾಯವೊಂದರಲ್ಲಿ ಒಂದು ಸಂಸ್ಕೃತಿಯು ನಿರ್ದಿಷ್ಟವಾದ ಕೆಲವು ಪ್ರಾಪಂಚಿಕ ತಂತ್ರವಿಧಾನಗಳನ್ನೋ ಅಥವಾ ಸಾಂಸ್ಕೃತಿಕ ಸ್ವಭಾವ ಲಕ್ಷಣಗಳನ್ನೋ ಆರಿಸಿಕೊಂಡು ಬಳಸಿಕೊಳ್ಳುತ್ತದೆ ಎಂಬುದನ್ನು ಕಂಡೆವು. ಇದೂ ಹಾಗೆಯೇ. ಸಾಧನೀಯವಾದ ಮಾನವ ವರ್ತನೆಗಳೆಲ್ಲ ವ್ಯಾಪ್ತವಾಗಿ ಅಡಕಗೊಂಡಿರುವ ಮಹಾನ್ ಖಂಡವೃತ್ತವು ಬಹಳ ದೊಡ್ಡದಾಗಿದ್ದು, ವಿರೋಧಾಭಾಸಗಳಿಂದ ತುಂಬಿದೆ. ಅದರ ಒಂದು ಗಣನೀಯ ಪ್ರಮಾಣವನ್ನು ಸಹ ಯಾವುದೊಂದು ಸಂಸ್ಕೃತಿಯೂ ಬಳಸಿಕೊಳ್ಳಲಾರದು. ಆದ್ದರಿಂದ ಆಯ್ಕೆ ಮಾಡುವುದೇ ಮೊಟ್ಟಮೊದಲ ಅವಶ್ಯಕತೆ. ಈ ರೀತಿಯಲ್ಲಿ ಆಯ್ಕೆ ಮಾಡದೆ ಯಾವ ಸಂಸ್ಕೃತಿಯೂ ಅರ್ಥವತ್ತತೆಯನ್ನು ಸಹ ಸಾಧಿಸಲಾರದು. ಹೀಗೆ ಅದು ಆಯ್ಕೆ ಮಾಡಿ, ತನ್ನದಾಗಿಸಿಕೊಳ್ಳುವ ಉದ್ದೇಶಗಳು, ಅದು ಆರಿಸಿಕೊಳ್ಳುವ ಕಾರ್ಯವಿಧಾನಗಳು ಒಂದು ನಿರ್ದಿಷ್ಟ ಅಂಶಕ್ಕಿಂತ ಅಥವಾ ವಿವಾಹ ವಿಧಿಗಿಂತ ಬಹುಪಾಲು ಹೆಚ್ಚಿನ ಮಹತ್ವ ಉಳ್ಳಂತಹವು.

ನಾವು ವಿವರಿಸಿದ ಮೂರು ಸಂಸ್ಕೃತಿಗಳು, ಕಾರ್ಯರೂಪಕ್ಕೆ ಬರುವ ಸಾಮರ್ಥ್ಯವುಳ್ಳ ವರ್ತನೆಗಳ ಸಣ್ಣ ಖಂಡವನ್ನು ವಿವಿಧ ಜನರು ಆಯ್ದುಕೊಂಡು, ತಮ್ಮ ಪರಂಪರಾಗತ ಸಂಸ್ಥೆಗಳ ಮೂಲಕ ಊರ್ಜಿತಗೊಳಿಸಿರುವುದನ್ನು ಉದಾ

ಹರಣರೂಪವಾಗಿ ತೋರುತ್ತವೆ. ಅವರುಗಳು ಆಯ್ದುಕೊಂಡಿರುವ ಉದ್ದೇಶಗಳು ಹಾಗೂ ಪ್ರೇರಣೆಗಳು ಪ್ರಪಂಚದಲ್ಲಿ ಬಹಳ ಮಟ್ಟಿಗೆ ಅನುಸರಣೀಯವಾಗಿರುವುದು ಅಸಂಭವ. ಈ ನಿರ್ದಿಷ್ಟವಾದ ಉದಾಹರಣೆಗಳನ್ನು ಆಯ್ದುಕೊಳ್ಳಲು ಕಾರಣ ಜೀವಂತ ಸಂಸ್ಕೃತಿಗಳಾಗಿ ಅವುಗಳನ್ನು ಕುರಿತು ನಮಗೆ ಸಾಕಷ್ಟು ತಿಳಿದಿರುವುದು. ಇದರಿಂದ ಸಂಸ್ಕೃತಿಯನ್ನು ಕುರಿತ ಚರ್ಚೆಯಲ್ಲಿ ಏಳುವಂತಹ ಸಂಶಯಗಳನ್ನು, ವೀಕ್ಷಣೆಯಿಂದ ತಾಳೆ ನೋಡಬಹುದಾದ ಅವಕಾಶವಿದ್ದು, ಅವುಗಳ ನಿವಾರಣೆಗೆ ದಾರಿಯಿದೆ. ಉದಾಹರಣೆಗೆ ವೈದಾನ ಸೀಮೆಯ ಇಂಡಿಯನ್ನರ ಸಂಸ್ಕೃತಿಯ ಬಗ್ಗೆ ನಮಗೆ ಅಪಾರವಾದ ವಿವರಗಳು ಲಭ್ಯವಿದ್ದು, ಅವು ಅತ್ಯಂತ ವಸ್ತುನಿಷ್ಠವಾಗಿವೆ. ಸ್ಥಳೀಯ ವ್ಯಾಖ್ಯಾನಗಳು, ಯಾತ್ರಿಕರ ನಿರೂಪಣೆಗಳು, ಮಾನವಕುಲ ಶಾಸ್ತ್ರಜ್ಞರು ಸಂಗ್ರಹಿಸಿರುವ ಸ್ಮರಣೆಗಳು ಹಾಗೂ ಉಳಿದುಕೊಂಡು ಬಂದಿರುವ ಸಂಪ್ರದಾಯಗಳ ವಿವರಗಳು, ಮುಂತಾದುವುಗಳಿಂದ ಆ ಸಂಸ್ಕೃತಿಯ ಮನೋವೃತ್ತಿಯ ರೂಪಿಕೆಗಳು ಸುಸ್ಪಷ್ಟವಾಗಿವೆ. ಆದರೆ ಕೆಲಕಾಲದಿಂದ ಈ ಸಂಸ್ಕೃತಿಯು ಕಾರ್ಯನಿರತವಾಗಿಲ್ಲವಾದ್ದರಿಂದ ಸಂಶಯಕ್ಕೆ ಎಡೆಯಿದೆ. ಸಿದ್ಧಾಂತವೂ, ನಡವಳಿಕೆಯೂ ಹೇಗೆ ಒಂದಕ್ಕೊಂದು ಜೋಡಿಯಾಗಿದ್ದುವೆಂಬುದನ್ನೂ, ಅವುಗಳನ್ನು ಒಂದಕ್ಕೊಂದಕ್ಕೆ ಜೋಡಿಸಲು ಯಾವರೀತಿಯ ಯುಕ್ತಿಗಳಿದ್ದುವು ಎಂಬುದನ್ನೂ ಸುಲಭವಾಗಿ ಹೇಳಲು ಸಾಧ್ಯವಿಲ್ಲ.

ಸ್ವಭಾವ ಲಕ್ಷಣಗಳ ಒಂದು ಸ್ಥಿರ ರಾಶಿಯನ್ನು ಪ್ರತಿನಿಧಿಸುತ್ತವೆ ಎಂಬ ಅರ್ಥದಲ್ಲಿ ನಾವು ಚರ್ಚಿಸಿರುವ ವಿನ್ಯಾಸಗಳನ್ನು ಮಾದರಿಗಳೆಂದು ಪರಿಗಣಿಸಬಾರದು. ಪ್ರತಿಯೊಂದೂ ಒಂದೊಂದು ವಾಸ್ತವಿಕ ಸ್ವರೂಪ. ಅದು ಇರುವಂತೆಯೇ ಇರುವ ರೂಪದಲ್ಲಿ ಪ್ರಪಂಚದ ಬೇರೆ ಎಡೆಯಲ್ಲಿ ಪುನರ್ಸಂಭವಿಸುವ ಸಾಧ್ಯತೆ ಇರಲಾರದು. ಎಲ್ಲ ಸಂಸ್ಕೃತಿಗಳನ್ನೂ ಸ್ಥಿರವಾದ ಹಾಗೂ ಆಯ್ದ ಒಂದು ನಿರ್ದಿಷ್ಟ ಸಂಖ್ಯೆಯ ಮಾದರಿಗಳನ್ನಾಧಿ ಚಿತ್ರಿಸಲು ಪ್ರಯತ್ನಿಸುವುದು ಅತ್ಯಂತ ದುರದೃಷ್ಟಕರವಾದೀತು. ಎಲ್ಲ ನಾಗರಿಕತೆಗಳಿಗೂ, ಎಲ್ಲ ಸಂದರ್ಭಗಳಿಗೂ ಅನಿವಾರ್ಯವೆಂದೂ ಸಮಂಜಸವೆಂದೂ ಪರಿಗಣಿತವಾಗುವ ವಿಂಗಡಣೆಗಳು ಬರಿಯ ಹೊರೆ. ಡೋಬು ದ್ವೀಪ ಮತ್ತು ವಾಯುವ್ಯ ತೀರಪ್ರದೇಶ ಎರಡೂ ಜಾಗಗಳಲ್ಲಿ ತೋರಿಬರುವ ವಿಕಲ್ಪವಾದ ಆಕ್ರಮಣ ಶೀಲ ಪ್ರವೃತ್ತಿಗಳು ಆ ಎರಡು ಸಂಸ್ಕೃತಿಗಳಲ್ಲಿ ವಿಭಿನ್ನವಾದ ಇತರ ಸ್ವಭಾವಲಕ್ಷಣಗಳೊಂದಿಗೆ ಹೊಂದಿಕೊಂಡಿವೆಯೇ ಹೊರತು ಸ್ಥಿರವಾದ ರಾಶಿಯೊಂದರಲ್ಲಲ್ಲ. ಜುನಿ ಜನರು ಹಾಗೂ ಗ್ರೀಕರಲ್ಲಿ ಕಂಡುಬರುವ ಅಪೊಲೋನಿಯನ್ ಪ್ರಭಾವಗಳು ಮೂಲತಃ ಬೇರೆ ಬೇರೆಯಾದ ರೀತಿಯಲ್ಲಿ ಬೆಳೆದು ಬಂದಂತಹವು. ಜುನಿಗಳಲ್ಲಿ ಬೆಳೆದು ಬಂದ ನಿಗ್ರಹ ಮತ್ತು ಇತಿಮಿತಿಯ ಸದ್ಗುಣಗಳು ತಮ್ಮ ನಾಗರಿಕತೆಯಿಂದ

ತಮಗೆ ಹೊಂದಿಕೆಯಾಗದ ಬೇರೆ ಸ್ವಭಾವದ ಎಲ್ಲ ಗುಣಗಳನ್ನೂ ದೂರೀಕರಿಸಿವೆ. ಅಪೊಲೋನಿಯನ್ ಪ್ರಭಾವಗಳೊಂದಿಗೆ ಅದು ಸರಿತೂಕವಾಗಿ ಸಂಸ್ಥೀಕರಿಸಿದ ಡಯೋನೀಶಿಯನ್ ಸ್ವಭಾವಗಳನ್ನು ಅರಿತ ಹೊರತು ಗ್ರೀಕ್ ನಾಗರಿಕತೆಯು ಮನ ವರಿಕೆಯಾಗುವುದು ಕಷ್ಟ. ಇದರಲ್ಲಿ ಯಾವ 'ನಿಯಮವೂ' ಇಲ್ಲ. ಆದರೆ ಪ್ರಬಲವಾದ ಒಂದು ಮನೋಭಾವವು ಅನುಸರಿಸಬಹುದಾದ ಹಲವು ವಿಶಿಷ್ಟವಾದ ವಿಭಿನ್ನ ಮಾರ್ಗ ಗಳಿವೆ.

ಒಂದನ್ನೊಂದು ಬಹಳ ಮಟ್ಟಿಗೆ ಹೋಲುವಂತಹ ಸಂಸ್ಕೃತಿ ರೂಪಿಕೆಗಳು ಒಂದೇ ಬಗೆಯ ಸಂದರ್ಭಗಳನ್ನು ತಮ್ಮ ಪ್ರಧಾನ ಉದ್ದೇಶಗಳಿಗೆ ಅನುಸಾರವಾಗಿ ನಿರ್ವಹಿಸದೇ ಇರಬಹುದು. ಆಧುನಿಕ ನಾಗರಿಕತೆಯಲ್ಲಿ ವಾಣಿಜ್ಯ ಸ್ಪರ್ಧೆಯಲ್ಲಿ ಸ್ವಲ್ಪವೂ ದಯದಾಕ್ಷಿಣ್ಯ ತೋರದ ವ್ಯಕ್ತಿಯು ಬಹು ಮಟ್ಟಿಗೆ ದಾಕ್ಷಿಣ್ಯಪರನಾದ ಪತಿಯೂ, ಕ್ಷಮಾಶೀಲನಾದ ತಂದೆಯೂ ಆಗಿರುತ್ತಾನೆ. ಪಾಶ್ಚಿಮಾತ್ಯ ನಾಗರಿಕತೆ ಗಳಲ್ಲಿ ಯಶಸ್ಸುಗಳಿಸುವ ಗೀಳು, ವ್ಯವಹಾರಜೀವನದಲ್ಲಿ ಪ್ರಸರಿಸಿರುವ ಮಟ್ಟದಲ್ಲಿ ಕುಟುಂಬ ಜೀವನದಲ್ಲಿ ವ್ಯಾಪಿಸಿಲ್ಲ. ಈ ಎರಡು ಕಾರ್ಯಭಾಗಗಳನ್ನು ಆವರಿಸಿರುವ ಸಂಸ್ಥೆಗಳು ಒಂದು ಮಟ್ಟದವರೆಗೆ ಪರಸ್ಪರ ವಿಲಕ್ಷಣವಾಗಿವೆ. ಡೋಬುಗಳಲ್ಲಿ ಪರಿಸ್ಥಿತಿ ಹಾಗಿಲ್ಲ. ಡೋಬುಗಳಲ್ಲಿ ಕುಲಾವಾಣಿಜ್ಯವನ್ನು ಪ್ರಚೋದಿಸುವ ಪ್ರೇರಣೆ ಗಳೇ ಸಂಸಾರ ಜೀವನವನ್ನೂ ಪ್ರಚೋದಿಸುತ್ತವೆ. ಅವರಲ್ಲಿ ತೋಟಗಾರಿಕೆಯೂ ಸಹ ಇತರ ತೋಟಗಾರರ ಗೆಣಸುಗಳನ್ನು ತಾನು ಬಳಸಿಕೊಳ್ಳುವುದು ಎಂದು ಪರಿ ಗಣಿತವಾಗಿದೆ. ಸಂಸ್ಕೃತಿಯ ರೂಪಿಕೆಯು ಯಾವುದೇ ಆಗಿದ್ದರೂ, ಸಾಧಾರಣವಾಗಿ ದಿನನಿತ್ಯ ಕಾರ್ಯವಾದ ತೋಟಗಾರಿಕೆಯು ಅದರಿಂದ ಅಷ್ಟಾಗಿ ಪ್ರಭಾವಿತವಾಗಿರುವು ದಿಲ್ಲ. ಪ್ರಧಾನ ಪ್ರೇರಣೆಗಳು ಅದರ ತನಕ ವ್ಯಾಪ್ತವಾಗಿರುವುದಿಲ್ಲ; ವ್ಯಾಪ್ತವಾಗಿ ದ್ದರೂ ಹಿಡಿತದಲ್ಲಿರುತ್ತವೆ.

ವರ್ತನೆಯಲ್ಲಿ ಅಸಮತೆಯು ಎಷ್ಟು ಮಟ್ಟಿಗೆ ಸಂಸ್ಕೃತಿಯ ರೂಪಿಕೆಯ ಅಚ್ಚಿ ನಿಂದ ಪ್ರಭಾವಿತವಾಗುವುದು ಎಂಬುದು ಕ್ವಾಕಿಯೂಟಲ್ ಜೀವನದಿಂದ ವ್ಯಕ್ತವಾಗು ತ್ತದೆ. ಪ್ರಭುತ್ವ ವರ್ಗದ ವಯಸ್ಕನೊಬ್ಬನು ತೀರಿಹೋದರೆ ಅದಕ್ಕೆ ಕ್ವಾಕಿಯೂ ಟಲ್‌ಗಳ ಪ್ರತಿಕ್ರಿಯೆಯೆಂದರೆ ತಮ್ಮನ್ನು ಅಪಮಾನಗೊಳಿಸಿದ್ದ ವಿಧಿಯ ಮೇಲೆ ಪ್ರತಿ ಧಾಳಿಯನ್ನು ಮಾಡಿ ಹೋರಾಟದಲ್ಲಿ ಸಮಮಾಡಿಕೊಳ್ಳಲು ಏನಾದರೊಂದು ಯೋಜನೆಯನ್ನು ಕೈಗೊಳ್ಳುವುದಾಗಿತ್ತು ಎಂಬುದನ್ನು ಕಂಡಿದ್ದೇವೆ. ಆದರೆ ತಮ್ಮ ಮಗುವನ್ನು ಕಳೆದುಕೊಂಡು ಶೋಕಭರಿತರಾಗಿದ್ದ ತರುಣ ತಂದೆ, ತಾಯಿ ಈ ರೀತಿ ವರ್ತಿಸಬೇಕಾಗಿರಲಿಲ್ಲ. ತಾಯಿಯ ಗೋಳು ದುಃಖಪೂರಿತವಾಗಿರುತ್ತಿತ್ತು. ಎಲ್ಲ ಹೆಂಗಸರೂ ಅಳಲು ಬರುತ್ತಿದ್ದರು. ತಾಯಿ ಮಗುವನ್ನು ತನ್ನ ತೋಳುಗಳಲ್ಲಿ

ಹಿಡಿದು ಅಳುತ್ತಿದ್ದಳು. ಅವಳು ಕಿತ್ತನೆಯುವರನ್ನೂ, ಬೊಂಬೆ ಮಾಡುವವರನ್ನೂ ಹಿಡಿದು, ಹಲವು ಬಗೆಯ ಆಟದ ಸಾಮಾನುಗಳನ್ನು ಮಾಡಿಸಿ ಮಗುವಿನ ಮುಂದೆ ಹರಡುತ್ತಿದ್ದಳು. ಇತರ ಹೆಂಗಸರು ಅಳುತ್ತಿರುವಾಗ್ಯೆ, ತಾಯಿ ತನ್ನ ಮಗುವನ್ನು ಉದ್ದೇಶಿಸಿ ಹೀಗೆ ಹೇಳುತ್ತಿದ್ದಳು:

"ಓಹೊಹೋ ಮಗುವೇ, ನನಗೆ ನೀನು ಹೀಗೇಕೆ ಮಾಡಿದೆ ? ನನ್ನನ್ನು ನೀನು ತಾಯಿಯಾಗಿ ಆರಿಸಿಕೊಂಡೆ. ನಾನು ನಿನಗಾಗಿ ನನ್ನ ಕೈಲಾದುದನ್ನೆಲ್ಲ ಮಾಡಲು ಪ್ರಯತ್ನಿಸಿದೆ. ನೋಡು, ನಿನಗಾಗಿ ನಾನು ಎಷ್ಟೊಂದು ಆಟದ ಸಾಮಾನುಗಳನ್ನೂ, ಬೊಂಬೆಗಳನ್ನೂ ಮಾಡಿಸಿದ್ದೇನೆ. ನನ್ನನ್ನೇಕೆ ಕೈಬಿಟ್ಟೆ ಮಗೂ ? ನಾನು ನಿನಗೆ ಏನಾದರೂ ಮಾಡಿದೆನೆಂದೋ ? ಮಗೂ, ನೀನು ಹಿಂದಕ್ಕೆ ನನ್ನಲ್ಲಿಗೆ ಬಂದಾಗ ಇನ್ನೂ ಚೆನ್ನಾಗಿ ನೋಡಿಕೊಳ್ಳಲು ಯತ್ನಿಸುತ್ತೇನೆ. ನೀನು ಇಷ್ಟು ಮಾತ್ರ ಮಾಡು. ನೀನು ಎಲ್ಲಿಗೆ ಹೋಗುವೆಯೋ ಅಲ್ಲಿ ಬೇಗನೆ ಆರೋಗ್ಯವಂತನಾಗು. ಮರಳಿ ಶಕ್ತಿ ಬರುವಷ್ಟು ಶಕ್ತಿ ಕೂಡಿಸಿಕೊಂಡ ಕೂಡಲೇ ಬಂದು ಬಿಡು. ದಯವಿಟ್ಟು ದೂರ ಇರಬೇಡ ಮಗೂ. ನಿನ್ನ ತಾಯಿಯಾದ ನನ್ನ ಮೇಲೆ ಕರುಣೆ ತೋರು." ಆಕೆಯು ತನ್ನ ಮಗುವನ್ನು ಬೇಗ ಹಿಂತಿರುಗಿ ಬಾರೆಂದು, ಇನ್ನೊಮ್ಮೆ ತನ್ನ ದೇಹದಿಂದ ಜನ್ಮ ಪಡೆ ಎಂದು ಬೇಡಿಕೊಳ್ಳುತ್ತಿದ್ದಳು.

ತಮ್ಮ ಪ್ರೀತಿಯವರನ್ನು ಅಗಲುವ ಸಂದರ್ಭದ ಕ್ವಾಕಿಯುಟಲ್ ಗೀತೆಗಳೂ ವಿಷಾದ ಪೂರ್ಣವಾಗಿವೆ.

"ಓ ದೂರ ಹೋಗುತಿಹನು ಅವನು. ಓ ಪ್ರಿಯಾ, ಅವನನ್ನು
ನ್ಯೂಯಾರ್ಕ್ ಎಂಬ ಸುಂದರ ತಾಣಕ್ಕೆ ಕರೆದೊಯ್ಯುವರು,
ಓ ನಲ್ಲ, ಡೊಂಬ ಕಾಗೆಯಂತೆ ನಾನು ಅವನ ಪಕ್ಕದಲ್ಲಿ ಹಾರಬಲ್ಲೆನೇ,
ಓ ನಲ್ಲ, ನನ್ನ ಪ್ರಿಯನ ಪಕ್ಕದಲ್ಲಿ ಹಾರಬಲ್ಲೆನೇ,
ಓ ನನ್ನ ವಿರಹವೇ, ಅವನ ಪಕ್ಕದಲ್ಲಿ ನಾನು ಪವಡಿಸಬಲ್ಲೆನೇ,
ಓ ಒಡೆಯಾ, ನನ್ನ ನಲ್ಲನ ಪ್ರೀತಿ ನನ್ನನ್ನು ಕೊಲ್ಲುತಿದೆ.
ಓ ನಲ್ಲ, ನನ್ನನ್ನು ಜೀವದಿಂದಿರಿಸಿರುವವನ ಮಾತುಗಳು ನನ್ನ
ದೇಹವನ್ನು ಕೊಲ್ಲುತಿವೆ
ಓನಲ್ಲ, ಎರಡು ವರ್ಷ ಇತ್ತಕಡೆ ತಿರುಗುವುದಿಲ್ಲವೆಂದು ಹೇಳಿದನೇ
ಓನಲ್ಲ, ನೀನು ಮಲಗಲು ನಾನು ಮೆತ್ತನೆ ಹಾಸಿಗೆಯಾಗಬಲ್ಲೆನೇ,
ಓನಲ್ಲ, ನಿನ್ನ ತಲೆಯಿಡಲು ನಾನು ದಿಂಬಾಗಬಲ್ಲೆನೇ,
ಮನನೊಂದಿಹೆ ನಾನು, ನನ್ನ ಒಲವಿಗಾಗಿ ಅಳುತಲಿರುವೆ,
ಹೋಗಿ ಬಾ, ಶುಭವಾಗಲಿ !"

ಆದರೆ ಈ ಕ್ಯಾಕಿಯುೂಟಲ್ ಗೀತೆಗಳಲ್ಲಿ ಸಹ, ದುಃಖದೊಂದಿಗೆ, ನೋವಿಗೆ ಈಡಾಗಿರುವವನನ್ನು ಕಾಡುತ್ತಿರುವ ಅಪಮಾನದ ಭಾವವೂ ಸಹ ಕೂಡಿಬರುತ್ತದೆ. ಈ ಮನೋಭಾವವೂ ಕಟುವಾದ ಅಣಕವಾಗಿ ಮಾರ್ಪಟ್ಟು, ತಕ್ಕಡಿಯನ್ನು ಮತ್ತೆ ಸಮನಾಗಿಸುವ ಇಚ್ಛೆ ವ್ಯಕ್ತವಾಗುತ್ತದೆ. ಪ್ರಣಯ ದ್ರೋಹಕ್ಕೆ ಗುರಿಯಾದ ತರುಣ, ತರುಣಿಯರ ಹಾಡುಗಳು ನಮ್ಮ ಸಂಸ್ಕೃತಿಯಲ್ಲಿ ನಾವು ಕಾಣುವಂತಹ ಭಾವನೆಗಳಿಂದ ದೂರವಾಗಿಲ್ಲ.

ಓ ನನ್ನ ಪ್ರೇಯಸಿ, ನನ್ನ ಭಾವನೆಗಳನ್ನು ನಿನ್ನ ಕೃತ್ಯಕುರಿತು ನನ್ನ
ಭಾವನೆಗಳನ್ನು
ಹೇಗೆ ತಿಳಿಸಲಿ ಪ್ರೇಯಸಿ,
ನಗೆ ಪಾಟಲವಸ್ತು ಪ್ರೇಯಸಿ, ನಿನ್ನ ಕೃತ್ಯ ನಗೆ ಪಾಟಲ ವಸ್ತು
ಪ್ರೇಯಸಿ,
ತಿರಸ್ಕಾರದ ವಸ್ತು ಪ್ರೇಯಸಿ, ನಿನ್ನ ಕೃತ್ಯ ತಿರಸ್ಕಾರದ ವಸ್ತು
ಪ್ರೇಯಸಿ,
ಆ ಕೃತ್ಯಕಾಗಿ ನಿನ್ನ ಬೀಳ್ಕೊಡುವೆನು ಪ್ರಿಯೆ, ಬೀಳ್ಕೊಡುವೆನು
ನಲ್ಲೆ, ಬೀಳ್ಕೊಡುವೆನು ಓ ನನ್ನ ಪ್ರೇಯಸಿ.

ಅಥವಾ

'ಹಾನಲ್ಲೆ, ನನ್ನ ನಿಜವಾದ ಪ್ರಿಯೆಯವಳು, ಪ್ರೇಮವಿಲ್ಲದಿರುವಂತೆ
ನನ್ನಲ್ಲಿ ಅಲಕ್ಷ್ಯ ತೋರುತಿಹಳು,
ಓ ಪ್ರಿಯೆ, ನೀ ಸಾಗುತಿಹೆ ಬಹುದೂರ, ನಿನ್ನ ಕೀರ್ತಿ ಮಾತ್ರ
ತಗ್ಗುತಿದೆ ನಲ್ಲೆ,
ಮಿತ್ರರೇ, ದೃಷ್ಟಿಯಿಂದಾಚೆಯಿರುವವರ ಪ್ರೇಮಗೀತೆಗಳನ್ನು
ಕೇಳುವುದು ಬೇಡ,
ಮಿತ್ರರೇ, ಹೊಸಪ್ರಿಯೆಯೊಬ್ಬಳನು ಹೊಸ ನಲ್ಲೆಯೊಬ್ಬಳನು ನಾನು
ಕರೆದುಕೊಂಡರೊಳಿತು.
ಆ ನನ್ನ ಹೊಸ ಪ್ರಿಯೆಯೊಂದಿಗೆ ನಾ ನಲಿವಾಗ, ಈ ನನ್ನ
ಪ್ರಿಯೆಯು ನನ್ನ ಪ್ರೇಮಗೀತೆಯನ್ನು ಕೇಳುವಳೇನೋ !

ದುಃಖವು ಅಪಮಾನವಾಗಿ ಮಾರ್ಪಡುತ್ತದೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ದುಃಖವು ವ್ಯಕ್ತಗೊಳ್ಳಲು ಅವಕಾಶವಿದೆ. ಕುಟುಂಬದ ಅನ್ಯೋನ್ಯ ಜೀವನದಲ್ಲಿ ವಾತ್ಸಲ್ಯ ಭಾವವನ್ನು ತೋರ್ಪಡಿಸುವುದಕ್ಕೂ, ಕೊಟ್ಟು ಪಡೆಯುವ ಸಂತೋಷಕರವಾದ ಮಾನವ ಬಾಂಧವ್ಯಕ್ಕೂ

ಅವಕಾಶವಿದೆ. ಕ್ವಾಕಿಯೂಟಲ್ ಜೀವನದ ಎಲ್ಲ ಸಂದರ್ಭಗಳಲ್ಲೂ, ಅವರ ಬಾಳಿನ ವಿಶಿಷ್ಟ ಪ್ರೇರಣೆಗಳು ಏಕರೀತಿಯಾಗಿ ವ್ಯಕ್ತಗೊಳ್ಳುವುದಿಲ್ಲ.

ಕ್ವಾಕಿಯೂಟಲ್ ಜೀವನದಂತೆಯೇ, ಪಾಶ್ಚಿಮಾತ್ಯ ನಾಗರಿಕತೆಯಲ್ಲೂ ಆಧುನಿಕ ಜೀವನದಲ್ಲಿ ಎದ್ದು ಕಾಣುವಂತಹ ಅಧಿಕಾರ ಚಲಾಯಿಸುವ ಇಚ್ಛೆಯು ಬಾಳಿನ ಎಲ್ಲ ಮುಖಗಳಲ್ಲೂ ಏಕರೀತ್ಯಾ ವ್ಯಕ್ತಗೊಳ್ಳುವುದಿಲ್ಲ. ಆದರೆ ಡೋಬು ಮತ್ತು ಜುನಿ ಜನರಲ್ಲಿ ಬಾಳಿನ ಯಾವ ಅಂಶಗಳು ಅವರ ವಿನ್ಯಾಸದಿಂದ ಹಗುರವಾಗಿ ಪ್ರಭಾವಿತವಾಗಿವೆ ಎಂದು ಕಂಡುಹಿಡಿಯುವುದು ಸುಲಭವಲ್ಲ. ಸಾಂಸ್ಕೃತಿಕ ರೂಪಿಕೆಯ ಸ್ವಭಾವವು ಇದಕ್ಕೆ ಕಾರಣವಾಗಿರಬಹುದು ಅಥವಾ ಸಾಮರಸ್ಯವನ್ನುಂಟು ಮಾಡುವ ಜಾಯಮಾನವು ಕಾರಣವಾಗಿರಬಹುದು. ಕಾರಣವು ಯಾವುದೆಂದು ನಿರ್ಧರಿಸುವುದು ಸದ್ಯಕ್ಕೆ ಸಾಧ್ಯವಾಗದು.

ಸಾಂಸ್ಕೃತಿಕ ಸಮಗ್ರತೆಯನ್ನು ಅರಿತುಕೊಳ್ಳುವುದರಲ್ಲಿ ಒಂದು ಸಮಾಜ ಶಾಸ್ತ್ರೀಯ ಸಂಗತಿಯನ್ನು ಪರಿಗಣಿಸಲೇಬೇಕಾಗುತ್ತದೆ. ಅದು ಪ್ರಸರಣದ ಮಹತ್ವ. ಮಾನವನ ಅನುಕರಣೀಯತೆಯನ್ನು ಕುರಿತ ಸಂಗತಿಗಳನ್ನು ಕೆದರಿ ತೆಗೆಯುವುದಕ್ಕೆ ಅಪಾರ ಪ್ರಮಾಣದ ಮಾನವ ಶಾಸ್ತ್ರೀಯ ಕಾರ್ಯ ಮೀಸಲಾಗಿದೆ. ಆದಿವಾಸಿ ಪ್ರದೇಶಗಳಲ್ಲಿ ಸ್ವಭಾವ ಲಕ್ಷಣಗಳು ಪ್ರಸರಣವಾಗಿರುವ ಬೃಹತ್ ಪ್ರಾದೇಶಿಕ ವ್ಯಾಪ್ತಿಯು ಮಾನವ ಶಾಸ್ತ್ರದಲ್ಲಿ ಅತ್ಯಂತ ಸೋಜಿಗಕಾರಿ ಸಂಗತಿಗಳಲ್ಲೊಂದು. ಉಡುಪು, ಅಲಂಕರಣ, ಕಾರ್ಯತಂತ್ರಗಳು, ಉತ್ಸವ ವಿಧಿ, ಪುರಾಣ ಐತಿಹ್ಯಗಳು, ವಿವಾಹಕಾಲದಲ್ಲಿ ಆರ್ಥಿಕವಿನಿಮಯ, ಇಂತಹವುಗಳ ಸ್ವಭಾವಲಕ್ಷಣಗಳು ಒಂದೊಂದು ಇಡೀ ಖಂಡದಲ್ಲಿಯೇ ವ್ಯಾಪಿಸಿಕೊಂಡಿವೆ. ಆ ಖಂಡದ ಪ್ರತಿಯೊಂದು ಬಣವೂ ಒಂದಲ್ಲ ಒಂದು ರೂಪದಲ್ಲಿ ಒಂದೇ ಸ್ವಭಾವಲಕ್ಷಣವನ್ನು ಪಡೆದಿರುತ್ತದೆ. ಆದರೆ ಈ ವಿಶಾಲವಾದ ಪ್ರದೇಶದ ಕೆಲವೊಂದು ಪ್ರಾಂತಗಳು ಈ ಮೂಲವಸ್ತುವಿನ ಮೇಲೆ ವಿಶಿಷ್ಟವಾದ ಉದ್ದೇಶಗಳು ಮತ್ತು ಪ್ರೇರಣೆಗಳ ಅಚ್ಚನ್ನೊತ್ತಿವೆ. ಪ್ವೆಬ್ಲೋಗಳು ಉತ್ತರ ಅಮೆರಿಕದ ವಿಶಾಲ ಪ್ರದೇಶದಲ್ಲಿ ಅನುಸರಣೆಯಲ್ಲಿರುವ ಕೃಷಿ ವಿಧಾನಗಳು, ಯಕ್ಷಿಣಿಯ ಕ್ರಮಗಳು, ವ್ಯಾಪ್ತವಾಗಿ ಹರಡಿರುವ ಪುರಾಣ ಐತಿಹ್ಯಗಳನ್ನೇ ತಾವೂ ಬಳಸಿಕೊಳ್ಳುತ್ತಾರೆ. ಇನ್ನೊಂದು ಖಂಡದಲ್ಲಿ ಮತ್ತೊಂದು ಅಪೊಲೋನಿಯನ್ ಸಂಸ್ಕೃತಿಯು ಬೇರೆ ತೆರನಾದ ಮೂಲವಸ್ತುವಿನೊಂದಿಗೆ ಹೊಂದಿಕೊಳ್ಳಬೇಕಾಗುತ್ತದೆ. ಈ ಎರಡು ಸಂಸ್ಕೃತಿಗಳ ನಡುವಣ ಸಮಾನ ಅಂಶವೆಂದರೆ, ಅವು ಆಯಾ ಖಂಡಗಳಲ್ಲಿ ಲಭ್ಯವಿದ್ದ ಮೂಲವಸ್ತುವನ್ನು ಮಾರ್ಪಡಿಸಿರುವ ದಿಶೆ. ಆದರ ಸ್ವಭಾವಲಕ್ಷಣಗಳು ಬೇರೆ ಬೇರೆಯಾದಂತಹವು. ಪ್ರಪಂಚದ ವಿವಿಧ ಭಾಗಗಳಲ್ಲಿ ಅಸ್ತಿತ್ವದಲ್ಲಿರಬಹುದಾದ ಸಾಮ್ಯಶ್ಯ ವಿನ್ಯಾಸಗಳಲ್ಲಿ ಒಳವಸ್ತು

ಬೇರೆ ಬೇರೆಯೇ ಆಗಿರುತ್ತದೆ. ನಾವು ಪ್ವೆಬ್ಲೋ ಸಂಸ್ಕೃತಿಯು ಯಾವ ದಿಶೆಯಲ್ಲಿ ಸಾಗುತ್ತಿದೆಯೆಂಬುದನ್ನು ಅರಿತುಕೊಳ್ಳಲು, ಅವರದೇ ಮೂಲ ಅಂಶಗಳನ್ನು ಪಡೆದಿದ್ದು ಅವುಗಳನ್ನು ಬೇರೆ ತೆರನಾಗಿ ಬಳಸಿಕೊಂಡಿರುವ ಉತ್ತರ ಅಮೆರಿಕದ ಇತರ ಸಂಸ್ಕೃತಿಗಳೊಂದಿಗೆ ಅದನ್ನು ಹೋಲಿಸಿ ನೋಡಬೇಕು. ಅಂತೆಯೇ ಗ್ರೀಕ್ ನಾಗರಿಕತೆಯ ಅಪೊಲೋನಿಯನ್ ಒಲವನ್ನು ಅರಿತುಕೊಳ್ಳಬೇಕಾದರೆ ಅದನ್ನು ಪೂರ್ವ ಮೆಡಿಟರೇನಿಯನ್ ಸಂಸ್ಕೃತಿಗಳ ನಡುವೆ ಸ್ಥಳೀಯ ಸನ್ನಿವೇಶದಲ್ಲಿ ನಿಲ್ಲಿಸಿ ಅಧ್ಯಯನ ಮಾಡಬೇಕು. ಸಾಂಸ್ಕೃತಿಕ ಸಮಗ್ರತೆಯ ಪ್ರಕ್ರಿಯೆಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದರೆ, ಅದನ್ನು ಪ್ರಸರಣದ ಸಂಗತಿಗಳನ್ನು ಕುರಿತ ಅರಿವಿನಿಂದ ಬೇರ್ಪಡಿಸಬೇಕು.

ಸಮಗ್ರತೆಯ ಪ್ರಕ್ರಿಯೆಗಳನ್ನು ಕಂಡುಕೊಂಡರೆ, ವ್ಯಾಪ್ತಗೊಂಡಿರುವ ಸ್ವಭಾವಲಕ್ಷಣಗಳ ಪ್ರಕೃತಿಯನ್ನು ಕುರಿತು ದೊರೆಯುವ ಚಿತ್ರ ಬೇರೆ ತೆರನಾದುದು. ವಿವಾಹ, ದೀಕ್ಷಾವಿಧಿ, ಮತಧರ್ಮ ಮುಂತಾದವುಗಳನ್ನು ಕುರಿತ ಪ್ರಸಕ್ತ ಅಧ್ಯಯನಗಳು ಪ್ರತಿಯೊಂದು ಸ್ವಭಾವ ಲಕ್ಷಣವೂ ತನ್ನ ತನ್ನದೇ ಆದ ವಿಶಿಷ್ಟವಾದ ಪ್ರೇರಣೆಗಳನ್ನು ಪಡೆದಿರುವಂತಹ ವರ್ತನೆಯ ವಿಶೇಷ ಕ್ಷೇತ್ರಗಳೆಂದು ಪರಿಗಣಿಸಿವೆ. ವಿವಾಹವು ಲೈಂಗಿಕವಾದ ಮೆಚ್ಚುಗೆಯನ್ನು ವ್ಯಕ್ತಪಡಿಸುವ ಸಂದರ್ಭವೆಂದು ವೆಸ್ಟರ್‌ಮಾರ್ಕ್ ಹೇಳುತ್ತಾನೆ. ದೀಕ್ಷಾವಿಧಿಯ ಕ್ರಮಗಳು ತರುಣಾವಸ್ಥೆಗೆ ಬರುವಾಗ ಉಂಟಾಗುವ ಆಂದೋಳನದ ಪರಿಣಾಮ ಎಂಬುದು ಸಾಮಾನ್ಯವಾದ ಅರ್ಥವಿವರಣೆ. ಆದ್ದರಿಂದ ವಿವಾಹ ಅಥವಾ ದೀಕ್ಷಾವಿಧಿಯು ತಳೆದಿರುವ ಸಹಸ್ರಾರು ರೂಪಾಂತರಗಳು ಒಂದೇ ಸರಣಿಗೆ ಸೇರಿದ ವಸ್ತುಗಳು. ಅವುಗಳಲ್ಲಿ ಕಂಡುಬರುವ ವ್ಯತ್ಯಾಸಗಳಿಗೆ ಕಾರಣ ಸಾಧಾರಣವಾಗಿ ಸಂದರ್ಭದಲ್ಲಿ ಅಡಗಿಕೊಂಡಿರುವ ಯಾವುದೋ ಒಂದು ಮನಃ ಪ್ರವೃತ್ತಿ ಅಥವಾ ಆವಶ್ಯಕತೆ.

ಮಹತ್ವದ ಸಂದರ್ಭಗಳನ್ನು ಈ ಸರಳ ರೀತಿಯಲ್ಲಿ ಕೇವಲ ಕೆಲವು ಸಂಸ್ಕೃತಿಗಳು ಮಾತ್ರ ನಿರ್ವಹಿಸುವುದಿಲ್ಲ. ಮದುವೆಯಾಗಲಿ, ಮರಣವಾಗಲಿ, ದೇವತೆಗಳಿಗೆ ಸಲ್ಲಿಸುವ ಪ್ರಾರ್ಥನೆಯಾಗಲಿ, ಅಂತಹ ಸಂದರ್ಭಗಳನ್ನು ಪ್ರತಿ ಸಮಾಜವೂ ತನ್ನ ವಿಶಿಷ್ಟ ಉದ್ದೇಶಗಳನ್ನು ವ್ಯಕ್ತಪಡಿಸುವ ಸಂದರ್ಭಗಳನ್ನಾಗಿ ಬಳಸಿಕೊಳ್ಳುತ್ತದೆ. ನಿರ್ದಿಷ್ಟವಾಗಿ ಆಯ್ದ ಸಂದರ್ಭದಲ್ಲಿ, ಆ ಸಂದರ್ಭದ ಪ್ರಭಾವ ಪ್ರೇರಣೆಯು ಹುಟ್ಟಿಕೊಳ್ಳುವುದಿಲ್ಲ. ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳು ಅವುಗಳನ್ನು ಸಂದರ್ಭದ ಮೇಲೆ ಆರೋಪಿಸುತ್ತವೆ. ಈ ಪ್ರಕಾರವಾಗಿ ವಿವಾಹವು ಲೈಂಗಿಕವಾದ ಮೆಚ್ಚುಗೆಗೆ ಯಾವುದೇ ರೀತಿಯಲ್ಲೂ ಸಂಬಂಧಪಡದೆ ಇದ್ದು ಹೆಂಡತಿಯರನ್ನು ಸಂಗ್ರಹಿಸಿಕೊಳ್ಳುವುದು ಸಂಪತ್ತನ್ನು ಕೂಡಿಡುವುದರ ಪ್ರಸ್ತುತ ರೂಪಾಂತರವಾಗಿರಬಹುದು

ಲೈಂಗಿಕ ಕೂಡಿಕೆಗೆ ಬೇರೆ ದಾರಿಗಳೂ ಇರಬಹುದು. ಆರ್ಥಿಕ ವ್ಯವಹಾರಗಳು, ಆಹಾರ ಬಟ್ಟೆಗಳನ್ನು ಒದಗಿಸುವ ತಮ್ಮ ಮೂಲ ಪಾತ್ರದಿಂದ ಬಹುದೂರ ಸರಿದಿದ್ದು, ಕೃಷಿ ತಂತ್ರಗಳೆಲ್ಲಾ ಜನರ ಅವಶ್ಯಕತೆಗೆ ಹಲವಾರು ಮಡಿ ಹೆಚ್ಚಾದ ಆಹಾರವಸ್ತುಗಳನ್ನು ಸಂಗ್ರಹಿಸಿ ಪ್ರದರ್ಶಿಸುವುದಕ್ಕೂ, ಡಾಂಭಿಕವಾಗಿ ಅದು ಹಾಳಾಗಲು ಬಿಟ್ಟು ಹೆಮ್ಮೆ ಪಟ್ಟುಕೊಳ್ಳುವುದಕ್ಕೂ ಬಳಕೆಯಾಗುತ್ತಿರಬಹುದು.

ಸಂದರ್ಭದ ಸ್ವಭಾವದಿಂದ ಅತಿ ಸರಳವಾದ ಸಾಂಸ್ಕೃತಿಕ ಪ್ರಕ್ರಿಯೆಗಳನ್ನು ಸಹ ಅರಿತುಕೊಳ್ಳುವುದು ಕಷ್ಟ ಎಂಬುದನ್ನು ನಾವು ಆರಿಸಿಕೊಂಡಿರುವ ಮೂರು ಸಂಸ್ಕೃತಿಗಳ ವರ್ಣನೆಗಳು ಮತ್ತೆ ಮತ್ತೆ ಸ್ಪಷ್ಟಗೊಳಿಸಿವೆ. ಸಂದರ್ಭದ ಪ್ರಕಾರ ನೋಡಿದರೆ ಶೋಕಾಚರಣೆಯು ದುಃಖದ ಅಥವಾ ನಷ್ಟದ ಸನ್ನಿವೇಶದಲ್ಲಿ ತೋರಿಬರುವ ಉಪಶಮನಕಾರಿ ಪ್ರತಿಕ್ರಿಯೆ. ಈ ಮೂರು ಸಂಸ್ಕೃತಿಗಳಲ್ಲಿ ಯಾವುದೊಂದು ಸಹ ತನ್ನ ಶೋಕಾಚರಣೆಯ ಸಂಸ್ಥೆಗಳಲ್ಲಿ ಈ ರೀತಿಯ ಪ್ರತಿಕ್ರಿಯೆಯನ್ನು ವ್ಯಕ್ತಗೊಳಿಸುವುದಿಲ್ಲ. ಪ್ವೆಬ್ಲೋಗಳ ಸಂಸ್ಕಾರವಿಧಿಗಳು ಇದಕ್ಕೆ ಅತಿ ಹತ್ತಿರ ಬರುತ್ತವೆ. ಅವು ಬಂಧುವೊಬ್ಬನ ಮರಣವನ್ನು, ಪ್ರಮುಖವಾದ ದುರ್ಭರ ಪ್ರಸಂಗವೆಂದು ಪರಿಗಣಿಸಿ, ಸಮಾಜವು ತನ್ನ ಶಕ್ತಿಗಳನ್ನು ಒಗ್ಗೂಡಿಸಿ ಉಂಟಾಗಿರುವ ಅಹಿತವನ್ನು ಪರಿಹರಿಸಲು ಯತ್ನಿಸುವಂತೆ ಏರ್ಪಡಿಸಿವೆ. ಅವರ ವಿಧಿಗಳಲ್ಲಿ ದುಃಖವು ಸಂಸ್ಥೀಕರಣಗೊಂಡಿರುವುದು ಅತ್ಯಲ್ಪ. ಆದರೆ ಏರ್ಪಟ್ಟಿರುವ ನಷ್ಟವು ದುರ್ಭರವೆಂದು ಎಣಿಸಲ್ಪಟ್ಟು, ಅದನ್ನು ಆದಷ್ಟು ಕಡಮೆ ಮಾಡುವ ಅವಶ್ಯಕತೆಯನ್ನು ಮನಗಾಣಲಾಗಿದೆ.

ಕ್ವಾಕಿಯೂಟಲ್‌ಗಳಲ್ಲಿ ನಿಜವಾದ ದುಃಖವಿದೆಯೋ, ಇಲ್ಲವೋ ಎಂಬುದನ್ನು ಪರಿಗಣಿಸದಿದ್ದರೂ, ಶೋಕಾಚರಣೆಯ ಸಂಸ್ಥೆಗಳು, ಸಾಂಸ್ಕೃತಿಕ ಮನೋವಿಕಲ್ಪದ ವಿಶೇಷ ರೂಪಗಳು. ಅವುಗಳ ಪ್ರಕಾರ ಬಂಧುಗಳ ಮರಣದಿಂದ ತಾವು ಅಪಮಾನಗೊಂಡಂತೆ ಭಾವಿಸಿಕೊಂಡು, ಪ್ರತೀಕಾರ ಕೈಗೊಳ್ಳಲು ತಮ್ಮನ್ನು ತಾವು ಎಬ್ಬಿಸಿಕೊಳ್ಳುತ್ತಾರೆ. ಡೋಬುಗಳ ಶೋಕಾಚರಣೆಯ ಸಂಸ್ಥೆಗಳು ಕ್ವಾಕಿಯೂಟಲ್‌ನ ಸಂಸ್ಥೆಗಳೊಂದಿಗೆ ಹಲವಾರು ಸಮಾನ ಅಂಶಗಳನ್ನು ಪಡೆದಿದ್ದರೂ, ಪ್ರಥಮತಃ ಅವು ಸತ್ತವನ ರಕ್ತಸಂಬಂಧಿಗಳು ತಮ್ಮಲ್ಲಿ ಒಬ್ಬನ ಸಾವಿಗೆ ಕಾರಣವಾದುದಕ್ಕಾಗಿ ಜೀವಂತ ಉಳಿದಿರುವ ಪತಿ ಅಥವಾ ಪತ್ನಿಯನ್ನು ಶಿಕ್ಷೆಗೆ ಗುರಿಮಾಡುವ ಕ್ರಮಗಳು. ಜೀವನದ ಹಲವಾರು ಘಟನೆಗಳನ್ನು ಡೋಬುಗಳು ವಿಶ್ವಾಸ ದ್ರೋಹವೆಂದು ಪರಿಗಣಿಸಿ, ಆ ತಪ್ಪಿಗಾಗಿ ಶಿಕ್ಷಿಸಲು ಯಾವನಾದರೊಬ್ಬನ ಮೇಲೆ ಗೂಬೆ ಕೂರಿಸುತ್ತಾರೆ. ಇಂತಹ ಹಲವಾರು ಸಂದರ್ಭಗಳಲ್ಲಿ ಶೋಕಾಚರಣೆಯು ಒಂದು.

ಆವರಣ ಇಲ್ಲವೇ ಜೀವನಚಕ್ರ ಒದಗಿಸುವಂತಹ ಯಾವುದೇ ಒಂದು ಸಂದರ್ಭವನ್ನಾದರೂ ಅವುಗಳಿಗೆ ಮೂಲತಃ ಸಂಬಂಧಪಡದ ಉದ್ದೇಶಗಳಿಗಾಗಿ ಬಳಸಿಕೊಳ್ಳು

ವುದು ಪರಂಪರೆಗೆ ಅತ್ಯಂತ ಸುಲಭ. ಆ ಸಂದರ್ಭದ ವಿಶಿಷ್ಟ ಲಕ್ಷಣಕ್ಕೆ ದೊರೆಯುವ ಸ್ಥಾನ ಅತ್ಯಲ್ಪವಾಗಬಹುದು ; ಗದ್ದೆಕಟ್ಟಿನಿಂದ ಒಂದು ಮಗು ಸತ್ತರೆ, ಅದಕ್ಕೆ ಯಾವುದೇ ರೀತಿಯಲ್ಲಿಯೂ ಸಂಬಂಧವಿಲ್ಲದ ಬೇರಾವುದೋ ವ್ಯಕ್ತಿಯನ್ನು ಕೊಲ್ಲಬೇಕಾಗಿ ಬರಬಹುದು ಅಥವಾ ಒಂದು ಹುಡುಗಿಯು ಪ್ರಥಮಬಾರಿಗೆ ಋತುವಾದರೆ ಹೆಚ್ಚು ಕಡಮೆ ಇಡೀ ಬಣದ ಸ್ವತ್ತುಗಳೆಲ್ಲ ಕೈ ಬದಲಾಗಬೇಕಾಗಿ ಬರಬಹುದು. ಶೋಕಾಚರಣೆ, ವಿವಾಹ, ಪ್ರೌಢಾವಸ್ಥೆಯ ಸಂಸ್ಕಾರವಿಧಿಗಳು ಅಥವಾ ಆರ್ಥಿಕ ವ್ಯವಹಾರ ಇವು ಯಾವುವೂ ಮಾನವ ವರ್ತನೆಯ ವಿಶೇಷ ಅಂಶಗಳಲ್ಲ. ಅವುಗಳಿಗೆ ಗತ ಇತಿಹಾಸವನ್ನು ರೂಪಿಸಿದಂತಹ ಮತ್ತು ಭವಿಷ್ಯವನ್ನು ನಿರ್ಧರಿಸುವಂತಹ ವಿಶಿಷ್ಟವಾದ ಮನಃಪ್ರವೃತ್ತಿಗಳಾಗಲಿ ಇಲ್ಲ. ಅವು. ಸಮಾಜವು ತನ್ನ ಪ್ರಧಾನ ಸಾಂಸ್ಕೃತಿಕ ಗುರಿಗಳನ್ನು ವ್ಯಕ್ತಪಡಿಸಲು ಬಳಸಿಕೊಳ್ಳಬಹುದಾದ ಸಂದರ್ಭಗಳು.

ಈ ದೃಷ್ಟಿಯಿಂದ ನೋಡಿದರೆ ಮಹತ್ವಪೂರ್ಣವಾದ ಸಮಾಜ ಶಾಸ್ತ್ರೀಯ ಘಟಕವು ಸಂಸ್ಥೆಯಲ್ಲ, ಸಾಂಸ್ಕೃತಿಕ ವಿನ್ಯಾಸ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಕುಟುಂಬ, ಆದಿವಾಸಿ ಅರ್ಥವ್ಯವಸ್ಥೆ ಅಥವಾ ನೈತಿಕ ಭಾವನೆಗಳು ಮೊದಲಾದ ಸ್ವಭಾವ ಲಕ್ಷಣಗಳನ್ನು ಅಧ್ಯಯನ ಮಾಡುವಾಗ ಅವುಗಳನ್ನು ವಿವಿಧ ವಿನ್ಯಾಸಗಳು ಹೇಗೆ ತಮ್ಮ ಅಂಕಿತಕ್ಕೆ ಒಳಪಡಿಸಿಕೊಂಡಿವೆ ಎಂಬುದನ್ನು ಮೇಲಿಂದಮೇಲೆ ಒತ್ತಿ ಹೇಳುವ ಸಣ್ಣ ಅಂಗಗಳನ್ನಾಗಿ ವಿಂಗಡಿಸಿಕೊಳ್ಳಬೇಕಾದುದು ಅವಶ್ಯಕ. ಕ್ವಾಕಿಯೂಟಲ್‌ಗಳ ಕುಟುಂಬ ಒಂದನ್ನೇ ಎತ್ತಿಕೊಂಡು ಅಥವಾ ಅವರ ವಿವಾಹದ ಸಂದರ್ಭದಿಂದ ಕ್ವಾಕಿಯೂಟಲ್ ವಿವಾಹ ಸಂಬಂಧೀ ವರ್ತನೆಯನ್ನು ಉತ್ಪತ್ತಿ ಮಾಡಿಕೊಂಡು ಚರ್ಚೆ ಮಾಡುವುದರಿಂದ ಕ್ವಾಕಿಯೂಟಲ್ ಜೀವನದ ವಿಲಕ್ಷಣ ಸ್ವಭಾವವು ನಮಗೆ ಸ್ಪಷ್ಟವಾಗುವುದಿಲ್ಲ. ಅದೇ ರೀತಿಯಲ್ಲಿ ನಮ್ಮ ನಾಗರಿಕತೆಯಲ್ಲಿ ವಿವಾಹವನ್ನು ಲೈಂಗಿಕ ಸಂಬಂಧ ಹಾಗೂ ಗೃಹ ಜೀವನಗಳ ಸನ್ನಿವೇಶವಾಗಿ ಮಾತ್ರ ಅರಿತುಕೊಳ್ಳ ಹೊರಟರೆ ಅದು ಸ್ಪಷ್ಟವಾಗುವುದಿಲ್ಲ. ನಮ್ಮ ನಾಗರಿಕತೆಯಲ್ಲಿ ಸಾಧಾರಣತಃ ಖಾಸಗಿ ಆಸ್ತಿಗಳನ್ನು ಕೂಡಿಸಿಕೊಂಡು ಅವುಗಳನ್ನು ಪ್ರದರ್ಶಿಸಲು ಹೆಚ್ಚು ಹೆಚ್ಚಾಗಿ ಸಂದರ್ಭಗಳನ್ನೊದಗಿಸಿಕೊಳ್ಳುವುದು ಗಂಡಸಿನ ಪರಮೋದ್ದೇಶ. ಈ ಸುಳಿವನ್ನು ಕಂಡುಕೊಳ್ಳದೆ ಆಧುನಿಕ ಪತ್ನಿಯ ಸ್ಥಾನಮಾನಗಳಾಗಲಿ, ಆಧುನಿಕ ಈರ್ಷ್ಯಾ ಭಾವನೆಗಳಾಗಲಿ ಅರ್ಥವಾಗುವುದಿಲ್ಲ. ನಾವು ನಮ್ಮ ಮಕ್ಕಳತ್ತ ತಳೆಯುವ ಮನೋಭಾವವು ಸಹ ಇದೇ ಸಾಂಸ್ಕೃತಿಕ ಗುರಿಗೆ ಅಷ್ಟೇ ಮಟ್ಟಿನ ನಿದರ್ಶನ. ಕೆಲವು ಆದಿವಾಸಿ ಸಮಾಜಗಳಲ್ಲಿ ಶೈಶವದಿಂದ ಮಕ್ಕಳ ಹಕ್ಕುಗಳೂ, ಅಭಿರುಚಿಗಳೂ ಅನುದ್ದಿಷ್ಟವಾಗಿ ಗೌರವಕ್ಕೆ ಪಾತ್ರವಾಗಿವೆ. ಆದರೆ ನಮ್ಮ ಸಮಾಜದಲ್ಲಿ ಹಾಗಿಲ್ಲ. ನಮ್ಮ ಮಕ್ಕಳು ನಮಗೆ ಜವಾಬ್ದಾರಿ. ಸಂದರ್ಭಕ್ಕೆ ಅನುಸಾರವಾಗಿ ನಾವು ನಮ್ಮ ಮಕ್ಕಳಿಗೆ ಸೋತು

ವಶವಾಗುತ್ತೇವೆ ಇಲ್ಲವೇ ಅವರ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತೇವೆ. ಅವರು ನಮ್ಮ ಆಸ್ತಿ ಎಂದು ಪರಿಗಣಿಸುತ್ತೇವೆ. ಮೂಲತಃ ಅವರು ನಮ್ಮ ಅಹಮ್ಮಿನ ಪ್ರಲಂಬನಗಳು. ನಮ್ಮ ಅಧಿಕಾರವನ್ನು ಚಲಾಯಿಸಲು ಅವರು ನಮಗೆ ವಿಶೇಷ ಅವಕಾಶ ನೀಡುತ್ತಾರೆ. ನಾವು ಹೆಚ್ಚು ವಿಚಾರಮಾಡದೆ ಭಾವಿಸಿಕೊಳ್ಳುವಂತೆ ಈ ರೂಪಿಕೆಯು ತಂದೆತಾಯಿಗಳು ಹಾಗೂ ಮಕ್ಕಳ ಸಂಬಂಧದ ಸನ್ನಿವೇಶದಲ್ಲಿ ಅಡಕವಾಗಿಲ್ಲ. ಅದು ನಮ್ಮ ಸಂಸ್ಕೃತಿಯ ಪ್ರಧಾನ ಪ್ರೇರಣೆಗಳು ಸಂದರ್ಭದ ಮೇಲೆ ಒತ್ತಿರುವ ಅಚ್ಚು. ಪರಂಪರೆಯಾಗಿ ಬಂದಿರುವ ಗೀಳುಗಳನ್ನು ನಾವು ಅನುಸರಿಸುವ ಹಲವು ಸಂದರ್ಭಗಳಲ್ಲಿ ಇದು ಒಂದು.

ನಮ್ಮಲ್ಲಿ ಸಂಸ್ಕೃತಿ ಪ್ರಜ್ಞೆಯು ಹೆಚ್ಚು ಹೆಚ್ಚಾಗಿ ಬೆಳೆದಂತೆ, ನಾವು ಒಂದು ಸಂದರ್ಭದಲ್ಲಿ ಮೂಲತಃ ಅಡಗಿರುವ ಸಣ್ಣ ನಡು ಹುರಿಯನ್ನೂ (ತಿರುಳನ್ನೂ) ಅದರ ಸುತ್ತ ಹೆಣೆದುಕೊಂಡಿರುವ ಮಾನವ ನಿರ್ಮಿತವಾದ, ಸಾಂಸ್ಕೃತಿಕವಾದ ಬಹುತೇಕ ಅಂಗವೃದ್ಧಿಗಳನ್ನೂ ಬೇರ್ಪಡಿಸಲು ಶಕ್ತರಾಗುತ್ತೇವೆ. ಈ ಅಂಗವೃದ್ಧಿಗಳು ಆ ಸಂದರ್ಭದ ಅನಿವಾರ್ಯ ಪರಿಣಾಮಗಳಲ್ಲವೆಂದ ಮಾತ್ರಕ್ಕೆ ಅವುಗಳನ್ನು ಬದಲಾಯಿಸುವುದು ಸುಲಭವೆಂದೋ, ಅವು ನಮ್ಮ ವರ್ತನೆಯಲ್ಲಿ ಅಮುಖ್ಯವೆಂದೋ ಪರಿಗಣಿಸುವಂತಿಲ್ಲ. ಬಹುಶಃ ನಾವು ಭಾವಿಸಿರುವುದಕ್ಕಿಂತ ಅವುಗಳನ್ನು ಬದಲಾಯಿಸುವುದು ಕಠಿಣವೇ ಆಗಿರಬಹುದು. ಉದಾಹರಣೆಗೆ ತಾಯಿಯ ಪಾಲನ ವಿಧಾನಗಳಲ್ಲಿ ಪರಿಷ್ಕಾರವಾದ ಮಾರ್ಪಾಡುಗಳನ್ನು ಮಾಡಿದರೂ ಸೂಕ್ಷ್ಮವೇದಿಯಾದ ಮಗುವನ್ನು ರಕ್ಷಿಸಲು ಅವು ಸಾಲದಾಗಬಹುದು. ಆ ಮಗುವು ತಾನು ಪಡೆಯುವ ಪ್ರತಿಯೊಂದು ಸಂಪರ್ಕದಿಂದಲೂ ಬಲಗೊಳ್ಳುತ್ತಿರುವ ಜುಗುಪ್ಸೆಯ ಸನ್ನಿವೇಶದಲ್ಲಿ ಸಿಕ್ಕಿ ಬಿದ್ದಿರುತ್ತದೆ. ಅದು, ಅವನು ಬೆಳೆದಂತೆ, ತಾಯಿಯನ್ನು ದಾಟಿ, ಅವನ ಶಾಲೆ, ವ್ಯವಹಾರ, ಹೆಂಡತಿ ಅವರತ್ತ ವೃದ್ಧಿಯಾಗುತ್ತದೆ. ಅವನಿಗೆ ಎದುರಾಗುವ ಜೀವನವು ಅದರ ಉದ್ದಕ್ಕೂ ಪೈಪೋಟಿ ಮತ್ತು ಒಡೆತನಗಳನ್ನೇ ಎತ್ತಿಹಿಡಿಯುವಂತಹುದು. ಬಹುಶಃ ಆ ಮಗುವಿಗೆ ಪರಿಹಾರದ ದಾರಿಯು ಒಳ್ಳೆಯ ಅದೃಷ್ಟದಿಂದಲೋ ಅಥವಾ ನಿರ್ಲಿಪ್ತತೆಯಿಂದಲೋ ದೊರೆತೀತು. ಅದೇನೇ ಇರಲಿ ಸಮಸ್ಯೆಯ ಪರಿಹಾರವು ತಂದೆತಾಯಿ-ಮಕ್ಕಳ ಸಂಬಂಧದ ಎಡರುತೊಡರುಗಳ ಮೇಲೆ ಕಡಮೆ ಪ್ರಾಮುಖ್ಯತೆಯನ್ನು ಸೂಚಿಸುವುದಲ್ಲದೆ ಅಹಂ ಪ್ರಲಂಬನ ಮತ್ತು ಆತ್ಮೀಯ ಸಂಬಂಧಗಳ ದುರುಪಯೋಗಗಳು ಪಾಶ್ಚಿಮಾತ್ಯರ ವರ್ತನೆಯಲ್ಲಿ ತಳೆಯುವ ರೂಪಾಂತರಗಳನ್ನು ಹೆಚ್ಚು ಒತ್ತಿ ಹೇಳಬಹುದು.

ಸಾಮಾಜಿಕ ಮೌಲ್ಯದ ಸಮಸ್ಯೆಯು, ಸಂಸ್ಕೃತಿಯು ವಿವಿಧ ರೂಪಿಕೆಗಳಿವೆಯೆಂಬ ವಾಸ್ತವಾಂಶಕ್ಕೆ ನಿಕಟವಾಗಿ ಹೊಂದಿಕೊಂಡಿವೆ. ಸಾಧಾರಣವಾಗಿ ಸಾಮಾಜಿಕ

ವನೌಲ್ಯವನ್ನು ಕುರಿತ ವಾದ ವಿವಾದಗಳು ಕೆಲವೊಂದು ಮಾನವ ಸ್ವಭಾವ ಲಕ್ಷಣಗಳನ್ನು ಅಪೇಕ್ಷಣೀಯವೆಂದು ನಿರೂಪಿಸಿ. ಆ ಸದ್ಗುಣಗಳಿಗೆ ಹೊಂದಿಕೊಳ್ಳುವಂತಹ ಸಾಮಾಜಿಕ ಗುರಿಗಳನ್ನು ಸೂಚಿಸುವಷ್ಟರಲ್ಲಿಯೇ ತೃಪ್ತಿಪಟ್ಟುಕೊಂಡಿವೆ. ಆತ್ಮೀಯ ಸಂಬಂಧಗಳಲ್ಲಿ ಇತರರನ್ನು ಶೋಷಿಸುವುದು, ತನ್ನ ಅಹಮ್ಮಿನ ಬೇಡಿಕೆಗಳನ್ನೇ ದೊಡ್ಡದು ಮಾಡುವುದು ಕೆಟ್ಟದೆಂದೂ, ಸಾಮೂಹಿಕ ಚಟುವಟಿಕೆಗಳಲ್ಲಿ ಮಗ್ನರಾಗುವುದು ಒಳ್ಳೆಯದೆಂದೂ ಖಚಿತವಾಗಿ ಹೇಳಲಾಗಿದೆ. ಕ್ರೌರ್ಯಕಾಮದಿಂದಾಗಲಿ, ತನ್ನ ಜೊತೆಯವರಿಂದ ಹಿಂಸೆಗೆ ಗುರಿಯಾಗುವುದರಿಂದಾಗಲಿ, ಮನೋತೃಪ್ತಿಗೊಳ್ಳುವ ಪ್ರವೃತ್ತಿಯಿಂದ ದೂರವಾಗಿ ಬಾಳಲು. ಬಾಳಿಸಲು ಇಚ್ಛಿಸುವ ಭಾವವು ಉತ್ತಮವಾದುದೆಂದು ಹೇಳಲಾಗಿದೆ. ಆದರೆ ಈ 'ಸದ್ಗುಣ'ಗಳನ್ನೇ ಪ್ರಮಾಣೀಭೂತಗೊಳಿಸಿಕೊಂಡಿರುವ ಜುನಿಗಳ ಸಮಾಜ ಪದ್ಧತಿಯು ಆದರ್ಶ ಪದ್ಧತಿಯಾಗಿಲ್ಲ. ಆ ಪದ್ಧತಿಯು ಈ ಸದ್ಗುಣಗಳ ಕೊರತೆಯನ್ನು ಎತ್ತಿ ತೋರುತ್ತದೆ. ನಾವು ಹಿರಿದೆಂದು ಪರಿಗಣಿಸಿ ಗೌರವಿಸುವ ರೂಢಿಯಿಟ್ಟುಕೊಂಡಿರುವ ಹಲವಾರು ಮನೋವೃತ್ತಿಗಳಿಗೆ ಅದರಲ್ಲಿ ಎಡೆಯಿಲ್ಲ. ಉದಾಹರಣೆಗೆ ಇಚ್ಛಾಶಕ್ತಿಗಾಗಲಿ, ವೈಯಕ್ತಿಕ ಮುಂದರಿಕೆಗಾಗಲಿ, ಕಷ್ಟಗಳು ಕವಿದು ಬಂದಾಗ ಅವುಗಳ ವಿರುದ್ಧ ಕೆಚ್ಚೆದೆಯಿಂದ ನಿಲ್ಲುವ ಮನೋಭಾವಕ್ಕಾಗಲಿ ಅದರಲ್ಲಿ ಅವಕಾಶವಿಲ್ಲ. ಜುನಿ ಜೀವನವನ್ನು ವ್ಯಾಪಿಸಿಕೊಂಡಿರುವ ಸಾಮೂಹಿಕ ಚಟುವಟಿಕೆಗಳು, ಹುಟ್ಟು, ಸಾವು, ಪ್ರೇಮ, ಗೆಲುವು, ಸೋಲು, ಪ್ರತಿಷ್ಠೆ ಇವೇ ಮೊದಲಾದ ಮಾನವ ಜೀವನದ ಮೂಲ ಶೃತಿಗಳಿಗೆ ಹೊಂದಿಕೊಂಡಿಲ್ಲ. ಅವರ ಉದ್ದೇಶಗಳನ್ನು ಸಂಸ್ಕಾರ ವಿಧಿಪೂರ್ವಕವಾದ ಉಜ್ವಲ ಪ್ರದರ್ಶನವು ಪೂರೈಸಿ, ಹೆಚ್ಚು ಮಾನವೀಯವಾದ ಹಿತಾಕಾಂಕ್ಷೆಗಳನ್ನು ಅದುಮಿ ಇಟ್ಟಿದೆ. ಯಾವುದೇ ರೀತಿಯ ಸಾಮಾಜಿಕ ಶೋಷಣೆ ಅಥವಾ ಸಾಮಾಜಿಕ ಹಿಂಸಾಪ್ರವೃತ್ತಿಯಿಂದ ಮುಕ್ತವಾಗಿರುವ ಅದು, ನಾಣ್ಯದ ಇನ್ನೊಂದು ಬದಿಯಲ್ಲಿ ಮಾನವನ ಜೀವನದ ಯಾವ ಪ್ರಮುಖ ಗುರಿಯನ್ನೂ ಸಾಧಿಸಲು ಅಳವಡದಿರುವ ತುದಿ ಮೊದಲಿಲ್ಲದ ಬಾಹ್ಯ ಕರ್ಮಾಚರಣೆಯಾಗಿ ಕಾಣಿಸಿಕೊಂಡಿದೆ. ಮೇಲ್ಭಾಗವಿರುವುದಕ್ಕೆಲ್ಲ ತಳಭಾಗವಿರುತ್ತದೆ, ಬಲಭಾಗವಿರುವುದಕ್ಕೆಲ್ಲ ಎಡಭಾಗವಿರುತ್ತದೆ ಎಂಬ ಹಳೆಯ ಮಾತಿನ ಅನಿವಾರ್ಯವಾದ ಸತ್ಯವನ್ನು ಇದು ಸ್ಪಷ್ಟಪಡಿಸುತ್ತದೆ.

ಸಾಮಾಜಿಕ ಮೌಲ್ಯಗಳ ಸಮಸ್ಯೆಯ ಜಟಿಲತೆಯನ್ನು ಕ್ವಾಕಿಯೂಟಲ್ ಸಂಸ್ಕೃತಿ ಬಹಳ ಸ್ಪಷ್ಟವಾಗಿ ತೋರಿಸುತ್ತದೆ. ಕ್ವಾಕಿಯೂಟಲ್ ಸಂಸ್ಥೆಗಳು ಆಧಾರಗೊಂಡಿರುವ ಹಾಗೂ ಬಹು ಮಟ್ಟಿಗೆ ಆಧುನಿಕ ಸಮಾಜದೊಂದಿಗೆ ಸಮಾನವಾಗಿ ಪಡೆದಿರುವ ಮುಖ್ಯವಾದ ಪ್ರೇರಣೆಯು ಪೈಪೋಟಿ. ಪೈಪೋಟಿಯು, ಸಂಬಂಧಪಟ್ಟ ಕಾರ್ಯ ಚಟುವಟಿಕೆಯ ನಿಜವಾದ ಗುರಿಗಳತ್ತ ಕೇಂದ್ರಿಕೃತವಾದುದಲ್ಲ. ಆದರ

ಗಮನವೆಲ್ಲ ಎದುರಾಳಿಯನ್ನು ಹಿಂದೆ ಬೀಳಿಸುವುದರ ಮೇಲೆ, ಕುಟುಂಬಕ್ಕೆ ಧಾರಾಳವಾದ ರೀತಿಯಲ್ಲಿ ಅವಶ್ಯಕ ವಸ್ತುಗಳನ್ನು ಒದಗಿಸುವುದರ ಕಡೆಗೆ ಇಲ್ಲವೇ ಬಳಕೆ ಅಥವಾ ಸಂತೋಷಕ್ಕೆ ಒದಗಿಬರುವ ವಸ್ತುಗಳನ್ನು ಸಂಗ್ರಹಿಸುವುದರ ಕಡೆಗೆ ಕೇಂದ್ರೀಕೃತವಾಗಿದೆ. ಗಮನವೆಲ್ಲ ನೆರೆಯವನನ್ನು ಹಿಂದೆ ಬೀಳಿಸಿ, ಎಲ್ಲರಿಗಿಂತ ಹೆಚ್ಚಿಗೆ ಸಂಪತ್ತು ಪಡೆಯುವುದರ ಮೇಲೆ ಹರಿಯುತ್ತದೆ. ಜಯಗಳಿಸಬೇಕು ಎಂಬ ಆ ಮಹಾನ್ ಆಕಾಂಕ್ಷೆಯಲ್ಲಿ ಬೇರೆ ಎಲ್ಲವೂ ಕ್ವಾಕಿಯೂಟಲ್ ದೃಷ್ಟಿಯಿಂದ ಹೊರಗೆ ಉಳಿದಿದೆ. ಪೈಪೋಟಿಯು ಸ್ಪರ್ಧೆಯಂತೆ ಮೂಲ ಕಾರ್ಯದ ಮೇಲೆ ಗಮನ ಹರಿಯುವುದಿಲ್ಲ. ಬುಟ್ಟಿ ಹೆಣೆಯುವ, ಇಲ್ಲವೇ ಜೋಡು ಮಾಡುವಂತಹ ಸಾಧಾರಣ ಸನ್ನಿವೇಶಗಳಲ್ಲಿಯೂ ಕೃತಕ ಸನ್ನಿವೇಶವನ್ನು ಹುಟ್ಟಿಸುತ್ತದೆ. ತಾನು ಇತರರೊಂದಿಗೆ ಸೆಣಸಾಡಿ ಗೆಲ್ಲಬಲ್ಲೆನೆಂದು ತೋರಿಸುವ ಆಟ ಅದು.

ಪೈಪೋಟಿ ಅತಿ ಹಾನಿಕಾರಿ ಹಾಗೂ ದುಂದುಕಾರ್ಯ. ಮಾನವೀಯ ಮೌಲ್ಯಗಳ ಪಟ್ಟಿಯಲ್ಲಿ ಅದರ ಸ್ಥಾನ ಕೀಳು. ಯಾವುದಾದರೊಂದು ಸಂಸ್ಕೃತಿಯಲ್ಲಿ ಅದನ್ನು ಒಮ್ಮೆ ಪ್ರೋತ್ಸಾಹಿಸಿಬಿಟ್ಟರೆ ಯಾವನೂ ಅದರಿಂದ ಬಿಡಿಸಿಕೊಳ್ಳಲಾಗದಂತಹ ಉಪದ್ರವವಾಗಿ ಬಿಡುತ್ತದೆ. ಹಿರಿಮೆಯ ಆಕಾಂಕ್ಷೆ ರಾಕ್ಷಸನಿದ್ದಂತೆ. ಅದನ್ನು ತೃಪ್ತಿಪಡಿಸುವುದು ಸಾಧ್ಯವಿಲ್ಲ. ಸೆಣಸಾಟಕ್ಕೆ ಕೊನೆಮೊದಲಿಲ್ಲ. ಹೆಚ್ಚು ಹೆಚ್ಚು ಸರಕುಗಳನ್ನು ಸಂಗ್ರಹಿಸಿದಷ್ಟೂ, ಹೆಚ್ಚು ಹೆಚ್ಚು ಪಣ ಹೂಡಿ ಆಡುತ್ತಾರೆ. ಆದರೆ ಪಣ ಕಮ್ಮಿಯಾಗಿದ್ದಾಗಿನಂತೆಯೇ ಹೆಚ್ಚಿದ್ದಾಗಲೂ ಆಟದಲ್ಲಿ ವಿಜಯವು ದೂರವೇ ನಿಲ್ಲುತ್ತದೆ. ಕ್ವಾಕಿಯೂಟಲ್ ಸಂಸ್ಥೆಗಳು ಬಂಡವಾಳ ಹೂಡುವುದನ್ನೂ ಸರಕುಗಳನ್ನು ನಾಶ ಮಾಡುವುದನ್ನೂ ಸಮಾನವಾಗಿ ಪರಿಗಣಿಸಿರುವುದರಿಂದ ಪೈಪೋಟಿಯು, ಅವಿವೇಕದ ಗರಿಷ್ಠ ಮಟ್ಟವನ್ನು ಮುಟ್ಟಿದೆ. ಮುಖ್ಯವಾಗಿ ಸರಕುಗಳ ಸಂಗ್ರಹಣೆಯಲ್ಲಿ ಹಿರಿಮೆ ಗಳಿಸಲು ಅವರು ಸೆಣಸಾಡುತ್ತಾರೆ. ಆದರೆ ಆಗಾಗ್ಗೆ ತಮ್ಮ ಮೌಲ್ಯಮಾಪನದ ಪ್ರಕಾರ ಅತ್ಯಂತ ಬೆಲೆ ಬಾಳುವ ತಾಮ್ರಫಲಕಗಳನ್ನು ಮುರಿಯುವ ಹಾಗೂ ತಮ್ಮ ಮನೆಯ ಹಲಗೆಗಳು, ಕಂಬಳಿಗಳು ಮತ್ತು ದೋಣಿಗಳನ್ನು ಉರಿಗೆ ಈಡುಮಾಡುವ ಕಾರ್ಯದಲ್ಲೂ ಮೇಲುಗೈಯಾಗಲು ಸೆಣಸುತ್ತಾರೆ. ಅವೆರಡರ ನಡುವಣ ವ್ಯತ್ಯಾಸದ ಪ್ರಜ್ಞೆ ಅವರಿಗಿಲ್ಲ. ಸಾಮಾಜಿಕ ಹಾನಿಯಂತೂ ಸ್ಪಷ್ಟ. ಅದೇ ರೀತಿಯಲ್ಲಿ ಮಿಡ್ಲ್ ಟೌನಿನಲ್ಲಿ ಪ್ರತಿಯೊಂದು ಕುಟುಂಬವೂ ತಾನು ಆಟದಿಂದ ಹೊರತಾದೆನೆಂದು ಪರಿಗಣಿತವಾಗದಿರಲೋಸುಗ ಮನೆಗಳನ್ನು ಕಟ್ಟುವಾಗ, ಬಟ್ಟೆಗಳನ್ನು ಕೊಳ್ಳುವಾಗ, ಮನರಂಜನೆಗಳಿಗೆ ಹೋಗುವಾಗ ತೋರ್ಪಡಿಸುವ ಎಡೆಬಿಡದ ಪೈಪೋಟಿಯಲ್ಲಿಯೂ ಆಗುವ ಸಾಮಾಜಿಕ ಹಾನಿಯೂ ಸ್ಪಷ್ಟ.

ಇದು ಒಂದು ಅನಾಕರ್ಷಕ ಚಿತ್ರ. ಕ್ವಾಕಿಯುಟಲ್ ಜೀವನದಲ್ಲಿ ಎದುರಾಳಿಯ ನಾಶದ ಆಧಾರದ ಮೇಲೆ ಮಾತ್ರ ಯಶಸ್ಸು ಎಂಬ ರೀತಿಯಲ್ಲಿ ಪೈಪೋಟಿ ಸಾಗುತ್ತದೆ. ಮಿಡ್ಲ್ ಟೌನಿನಲ್ಲಿ ವೈಯಕ್ತಿಕ ಆಯ್ಕೆಗಳನ್ನೂ, ಪ್ರತ್ಯಕ್ಷವಾದ ತೃಪ್ತಿಗಳನ್ನೂ ಕನಿಷ್ಠಕ್ಕೆ ಇಳಿಸಿ, ಎಲ್ಲ ಮಾನವ ಇಚ್ಛಾಪೂರ್ತಿಗಳಿಗಿಂತಲೂ ಇತರರೊಂದಿಗೆ ಅನುರೂಪತೆಯನ್ನೇ ಬಯಸುವ ರೀತಿಯಲ್ಲಿ ಸಾಗುತ್ತದೆ. ಎರಡು ಸಂದರ್ಭಗಳಲ್ಲೂ ಸಂಪತ್ತನ್ನು ಅದು ಪ್ರತ್ಯಕ್ಷವಾಗಿ ಮಾನವ ಅವಶ್ಯಕತೆಗಳನ್ನು ಪೂರೈಸುತ್ತದೆಂಬ ಕಾರಣದಿಂದ ಬಯಸಿ, ಗೌರವಿಸುವುದಿಲ್ಲ. ಪೈಪೋಟಿಯ ಪಂದ್ಯಾಟದಲ್ಲಿ ಕಟ್ಟುವ ಪಣಗಳ ಸರಣಿಯಾಗಿ ಅದರ ಸ್ಥಾನ. ಆರ್ಥಿಕ ಜೀವನದಿಂದ, ಮೇಲುಗೈಯಾಗಬೇಕು ಎಂಬ ಇಚ್ಛೆಯನ್ನು ತೆಗೆದು ಹಾಕಿಬಿಟ್ಟರೆ, ಸಂಪತ್ತಿನ ವಿತರಣೆ ಮತ್ತು ಅನುಭೋಗಗಳು ಜೂನಿಯಲ್ಲಿರುವಂತೆ ಬೇರೆ ತೆರನಾದ 'ನಿಯಮ'ಗಳನ್ನು ಅನುಸರಿಸುತ್ತವೆ.

ಆದರೆ ಕ್ವಾಕಿಯುಟಲ್ ಸಮಾಜದಲ್ಲಿಯೂ, ಅಮೆರಿಕದ ಆದಿಪರಿಶೋಧಕರ ಜೀವನದ ಕಟುವಾದ ವೈಯಕ್ತಿಕ ಸಿದ್ಧಾಂತದಲ್ಲಿಯೂ ವಿಜಯದ ಗುರಿಯು ಮನುಷ್ಯನ ಬಾಳಿಗೆ ಚೈತನ್ಯ, ಹುರುಪುಗಳನ್ನು ನೀಡುತ್ತದೆಯೆಂಬುದನ್ನು ಕಾಣಬಹುದು. ಕ್ವಾಕಿಯುಟಲ್ ಜೀವನವು ತನ್ನದೇ ರೀತಿಯಲ್ಲಿ ಶ್ರೀಮಂತವಾಗಿದೆ ಹಾಗೂ ಬಲಶಾಲಿಯಾಗಿದೆ. ಅದು ಆಯ್ದುಕೊಂಡಿರುವ ಗುರಿಯು ಅದಕ್ಕೆ ಅನುರೂಪವಾದ ಉತ್ಕೃಷ್ಟ ಗುಣಗಳನ್ನು ಪಡೆದಿದೆ. ಸಾಮಾಜಿಕ ಮೌಲ್ಯಗಳು ಕ್ವಾಕಿಯುಟಲ್ ನಾಗರಿಕತೆಯಲ್ಲಿ ಜೂನಿಗಳಲ್ಲಿಗಿಂತ ಹೆಚ್ಚು ಗಾಢವಾಗಿ ಬೆರೆತುಕೊಂಡಿವೆ. ಯಾವುದೇ ಸಾಮಾಜಿಕ ಪ್ರವೃತ್ತಿಯನ್ನಾಗಲಿ, ಅದನ್ನು ಚೈತನ್ಯಪೂರ್ಣವಾಗಿ ಅನುಸರಿಸಿದರೆ ಆ ಸಮಾಜವು ತಾನು ಆರಿಸಿಕೊಂಡ ಗುರಿಗಳಿಗೆ ಸಹಜವಾದ ಕೆಲವೊಂದು ಉತ್ಕೃಷ್ಟ ಗುಣಗಳನ್ನೂ ಬೆಳೆಸಿಕೊಳ್ಳುತ್ತದೆ. ಅಲ್ಲದೆ ನಾವು ಮಾನವ ಜೀವನದಲ್ಲಿ ಹಿರಿದೆಂದು ಎಣಿಸಿರುವ ಎಲ್ಲಾ ಉತ್ಕೃಷ್ಟ ಗುಣಗಳನ್ನೂ ಒಂದೇ ಸಮಾಜ ಪದ್ಧತಿಯಲ್ಲಿ ಎತ್ತಿ ಹಿಡಿಯುವ ಸಾಮರ್ಥ್ಯವು ಅತ್ಯುತ್ತಮ ಸಮಾಜಕ್ಕೆ ಸಹ ಇರಲಾರದು. ಮಾನವ ಜೀವನವು ದೋಷರಹಿತವಾಗಿ ವಿಕಸಿಸುವಂತಹ, ಅಂತಿಮವಾದ ಹಾಗೂ ಪರಿಪೂರ್ಣವಾದ ರಚನೆಯ ಕಲ್ಪನಾ ರಾಜ್ಯವು ಕಾರ್ಯಸಾಧ್ಯವಲ್ಲ. ಅಂತಹ ಕಲ್ಪನಾ ರಾಜ್ಯಗಳು ಬರಿಯ ಹಗಲ್ಗನಸುಗಳು ಎಂಬುದನ್ನು ನಾವು ಗಮನಿಸಬೇಕು. ಸಮಾಜ ವ್ಯವಸ್ಥೆಯಲ್ಲಿ ನಿಜವಾದ ಅಭಿವೃದ್ಧಿಯು ಹೆಚ್ಚು ಮಿತವಾದ ಹಾಗೂ ಕಠಿಣವಾದ ವಿವೇಚನಾ ಪೂರ್ಣ ಆಯ್ಕೆಗಳ ಮೇಲೆ ಆಧಾರಗೊಂಡಿದೆ. ವಿವಿಧ ಸಂಸ್ಥೆಗಳನ್ನು ಅವುಗಳಿಗೆ ತಗಲುವ ಸಾಮಾಜಿಕ ಬಂಡವಾಳ, ಅವು ಪ್ರಚೋದಿಸಬಹುದಾದ ಅನಪೇಕ್ಷಣೀಯ ವರ್ತನಾ ಸ್ವಭಾವ ಲಕ್ಷಣಗಳು, ಹಾಗೂ ಅವು ಉಂಟುಮಾಡುವ ವೇದನೆ ಹಾಗೂ ಆಶಾಭಂಗಗಳ ಪರಿಶೀಲನೆಯ ಆಧಾರದ ಮೇಲೆ, ಆ ಸಂಸ್ಥೆಗಳ ಬೆಲೆಯೇನೆಂಬುದನ್ನು ಪರಿಗಣಿಸಲು

ಸಾಧ್ಯ. ಯಾವುದಾದರೂ ಸಮಾಜವು ತಾನು ಆಯ್ದುಕೊಂಡ, ಹಾಗೂ ತನಗೆ ಸಮರಸವಾದ ಸ್ವಭಾವಲಕ್ಷಣಗಳಿಗಾಗಿ ಈ ಬೆಲೆಯನ್ನು ಭರಿಸಲು ಸಿದ್ಧವಿದ್ದರೆ, ಆ ರೂಪಿಕೆಯಲ್ಲಿ ಅವು ಎಷ್ಟೇ ಕೆಟ್ಟವಾದರೂ ಕೆಲವೊಂದು ಉತ್ಕೃಷ್ಟ ಗುಣಗಳು ಬೆಳೆಯುತ್ತವೆ. ಆದರೆ ಎದುರಿಸಬೇಕಾಗಿ ಬರಬಹುದಾದ ಗಂಡಾಂತರ ದೊಡ್ಡದು. ಸಮಾಜ ವ್ಯವಸ್ಥೆ ಆ ಬೆಲೆಯನ್ನು ಭರಿಸಲು ಸಾಧ್ಯವಾಗದೇ ಹೋಗಬಹುದು. ಅದರ ಭಾರದಿಂದ ವ್ಯವಸ್ಥೆಯೇ ಮುರಿದು ಬೀಳಬಹುದು. ಅದರಿಂದ ಕ್ರಾಂತಿಯು ಗೊತ್ತುಗುರಿಯಿಲ್ಲದೇ ಹಾಳೆದ್ದು ಹೋಗಿ, ಆರ್ಥಿಕವಾದ ಹಾಗೂ ಭಾವಾತ್ಮಕವಾದ ಅನರ್ಥ ಉಂಟಾಗಬಹುದು. ಆಧುನಿಕ ಸಮಾಜದಲ್ಲಿ ಪ್ರಸ್ತುತ ತಲೆಮಾರು ಎದುರಿಸಬೇಕಾಗಿರುವ ಗುರುತರವಾದ ಸಮಸ್ಯೆಗಳಲ್ಲಿ ಇದು ಅತ್ಯಂತ ಮಹತ್ವದ್ದು. ಕ್ರಾಂತಿಯ ಗೀಳು ಹತ್ತಿರುವವರು ಆರ್ಥಿಕ ಪುನರ್ವ್ಯವಸ್ಥೆಯಿಂದ ಪ್ರಪಂಚಕ್ಕೆ ತಾವು ಹಗಲುಗನಸಿನಲ್ಲಿ ಕಂಡ ಕಲ್ಪನಾ ರಾಜ್ಯವನ್ನು ನೀಡಿಬಿಡಬಹುದೆಂದು ಭಾವಿಸಿದ್ದಾರೆ. ಯಾವುದೇ ಸಮಾಜ ವ್ಯವಸ್ಥೆಯಾದರೂ ತನ್ನ ಉತ್ಕೃಷ್ಟ ಗುಣಗಳಿಂದ, ಅವೇ ಉತ್ಕೃಷ್ಟ ಗುಣಗಳ ದೋಷಗಳನ್ನು ಬೇರ್ಪಡಿಸಲಾರದು ಎಂಬುದನ್ನು ಅವರು ಮರೆಯುತ್ತಾರೆ. ನನಸಾಗಬಲ್ಲ ಕಲ್ಪನಾ ರಾಜ್ಯಕ್ಕೆ ಯಾವ ರಾಜಮಾರ್ಗವೂ ಇಲ್ಲ.

ಆದರೆ ನಾವು ಸಂಸ್ಕೃತಿಯ ಪ್ರಜ್ಞೆಯನ್ನು ಹೆಚ್ಚು ಹೆಚ್ಚಾಗಿ ಗಳಿಸಿದಂತೆ, ಒಂದು ಕಠಿಣವಾದ ಅಭ್ಯಾಸಕ್ಕೆ ಪಳಗಿಕೊಳ್ಳಬಹುದು. ನಮ್ಮದೇ ನಾಗರಿಕತೆಯ ಪ್ರಧಾನ ಸ್ವಭಾವಲಕ್ಷಣಗಳನ್ನು ಕುರಿತು ತೀರ್ಪು ನೀಡಲು ನಮ್ಮನ್ನು ತರಪೇತಿಗೊಳಿಸಿಕೊಳ್ಳಬಹುದು. ಅವುಗಳ ಪ್ರಭಾವದ ಆಸರೆಯಲ್ಲಿಯೇ ಬೆಳೆದು ಬಂದವರಿಗೆ, ಅವುಗಳನ್ನು ಗುರುತಿಸುವುದು ಸಹ ಸಾಕಷ್ಟು ಕಠಿಣವಾದ ಕಾರ್ಯ. ಅವಶ್ಯಕತೆ ಏರ್ಪಟ್ಟಾಗ ಅವುಗಳ ಬಗ್ಗೆ ನಮಗಿರುವ ಪಕ್ಷಪಾತವನ್ನು ತಡೆಹಿಡಿಯುವುದಂತೂ ಇನ್ನೂ ಕಷ್ಟ. ಅವು ಬಳಕೆಯಾಗಿರುವ ಪ್ರೀತಿಯ ಮನೆಯಂತೆ ಚಿರಪರಿಚಿತ. ಅವು ಕಾಣುಬರದ ಜಗತ್ತು ನಮಗೆ ಉಲ್ಲಾಸ ರಹಿತವಾಗಿ ಅಸಮರ್ಥನೀಯವಾಗಿ ತೋರಿಬರುತ್ತದೆ. ಆದರೆ ಇಡೀ ಸ್ವಭಾವಲಕ್ಷಣಗಳೇ, ಮೂಲಭೂತವಾದ ಸಾಂಸ್ಕೃತಿಕ ಪ್ರಕ್ರಿಯೆಯಿಂದಾಗಿ ಆಗಿಂದಾಗ ಅತಿರೇಕಕ್ಕೆ ಹೋಗುತ್ತವೆ. ಅವು ತಮ್ಮ ಮೇರೆಯನ್ನು ಮೀರುತ್ತವೆ. ಇನ್ನಿತರ ಸ್ವಭಾವ ಲಕ್ಷಣಗಳಿಗಿಂತ ನಮ್ಮ ಒಲವಿಗೆ ಪಾತ್ರವಾದ ಈ ಸ್ವಭಾವಲಕ್ಷಣಗಳು ಕೈಮೀರಿ ಹೋಗುವ ಸಂಭವ ಹೆಚ್ಚು. ಯಾವ ವಿಚಾರದಲ್ಲಿ ಟೀಕೆಯ ಅವಶ್ಯಕತೆಯು ಅತಿ ಹೆಚ್ಚಾಗಿರುವ ಸಂಭವವುಂಟೋ, ಅಲ್ಲಿ ನಾವು ಅತ್ಯಂತ ಕಡಮೆಯಾಗಿ ವಿಮರ್ಶಾತ್ಮಕ ದೃಷ್ಟಿಯನ್ನು ತಳೆಯುವ ಅನಿವಾರ್ಯವು ಏರ್ಪಡುತ್ತದೆ. ಸುಧಾರಣೆಯೇನೋ ಬಂದೇ ಬರುತ್ತದೆ. ಆದರೆ ಅದು ಕ್ರಾಂತಿಯ ಇಲ್ಲವೇ ಕುಸಿತದ ಮೂಲಕ ಬರುತ್ತದೆ. ಸಂಬಂಧಪಟ್ಟ ತಲೆಮಾರು ಮೇರೆ ಮೀರಿ ಬೆಳೆದು ನಿಂತಿದ್ದ

ತನ್ನ ಸಂಸ್ಥೆಗಳ ಗುಣವಿಮರ್ಶೆ ಮಾಡಲು ಸಾಧ್ಯವಾಗದ್ದರಿಂದ ವ್ಯವಸ್ಥಿತ ಪ್ರಗತಿಗೆ ಅವಕಾಶವೇ ಇಲ್ಲದಂತಾಗುತ್ತದೆ. ಅದರತ್ತ ಅಹಂಭಿನ್ನವಾದ ದೃಷ್ಟಿಯನ್ನು ತಳೆಯುವ ಶಕ್ತಿಯನ್ನು ಕಳೆದುಕೊಂಡದ್ದರಿಂದ, ಅದನ್ನು ಲಾಭ-ನಷ್ಟಗಳ ರೀತಿಯಲ್ಲಿ ತೂಗಿ ಪರಿಗಣಿಸಲು ಸಾಧ್ಯವಾಗಲಿಲ್ಲ. ಯಾವುದಾದರೂ ಪರಿಹಾರವು ಒದಗುವುದರೊಳಗೆ ಸಂದರ್ಭವು ಕುಸಿತದ ಮಟ್ಟವನ್ನು ಮುಟ್ಟುವಂತಾಯಿತು.

ಇದುವರೆಗೆ ಸಂಬಂಧಪಟ್ಟ ಸ್ವಭಾವ ಲಕ್ಷಣವು ಜೀವಂತ ಅಂಶವಾಗಿರುವ ತನಕ, ನಮ್ಮ ಪ್ರಧಾನ ಸ್ವಭಾವ ಲಕ್ಷಣಗಳ ಗುಣವಿಮರ್ಶೆಗೆ ಅವಕಾಶವಾಗಿಲ್ಲ. ನಮ್ಮ ನಾಗರಿಕತೆಯು ಮತಧರ್ಮಕ್ಕೆ ಗಾಢವಾಗಿ ಬದ್ಧವಾಗಿದ್ದ ತನಕ, ಮತಧರ್ಮವನ್ನು ನಾವು ಅಹಂಭಿನ್ನಭಾವದಿಂದ ವಿಮರ್ಶೆ ಮಾಡಲಿಲ್ಲ. ಈಗ ಮೊದಲ ಬಾರಿಗೆ ನಾವು ಮತಧರ್ಮಗಳ ತುಲನಾತ್ಮಕ ಅಧ್ಯಯನವನ್ನು ಸಂಬಂಧಪಟ್ಟ ಯಾವುದೇ ಅಂಶದಿಂದಲಾದರೂ ಆರಂಭಿಸಿ, ಮುಂದುವರಿಯಲು ಸ್ವತಂತ್ರರಾಗಿದ್ದೇವೆ. ಅದೇ ರೀತಿಯಲ್ಲಿ ಬಂಡವಾಳವಾದವನ್ನು ಕುರಿತು ಚರ್ಚಿಸುವುದು ಇನ್ನೂ ಸಾಧ್ಯವಾಗಿಲ್ಲ. ಹೀಗೆಯೇ ಯುದ್ಧಕಾಲದಲ್ಲಿ ಯುದ್ಧ ಮತ್ತು ಅಂತರ್ರಾಷ್ಟ್ರೀಯ ಸಂಬಂಧಗಳ ಸಮಸ್ಯೆಗಳು ನಿಷಿದ್ಧ. ಆದರೂ ನಮ್ಮ ನಾಗರಿಕತೆಯ ಪ್ರಧಾನ ಸ್ವಭಾವಲಕ್ಷಣಗಳ ವಿಶೇಷವಾದ ಪರಾಮರ್ಶೆಯು ಅತ್ಯವಶ್ಯಕ. ಅವು ನಿರ್ಬಂಧಕಾರಿಗಳಾಗಿವೆ ಎಂಬುದಕ್ಕೆ ಅವು ಒಂದು ಮಟ್ಟದಲ್ಲಿ ಮಾನವ ವರ್ತನೆಯಲ್ಲಿ ಮೂಲಭೂತವೂ, ಅನಿವಾರ್ಯವೂ ಆಗಿವೆಯೆಂಬುದು ಕಾರಣವಲ್ಲ; ಅವು ಸ್ಥಳೀಯವಾಗಿದ್ದು, ನಮ್ಮ ಸಂಸ್ಕೃತಿಯಲ್ಲಿ ಮೇರೆ ಮೀರಿ ಬೆಳೆದು ನಿಂತಿವೆ ಎಂಬುದು ಕಾರಣ ಎಂಬುದನ್ನು ನಾವು ಮನವರಿಯಬೇಕು. ಡೋಬುವನನು ಮಾನವ ಸ್ವಭಾವಕ್ಕೆ ಮೂಲಭೂತವಾದುದೆಂದು ಬಗೆಯುವ ಜೀವನ ಮಾರ್ಗವು ಮೂಲತಃ ವಿಶ್ವಾಸಘಾತದ್ದಾಗಿದ್ದು, ಅದನ್ನು ಅತಿಯಾದ ಭಯದಿಂದ ಕಾಪಾಡಿಕೊಂಡು ಬರಲಾಗುತ್ತಿದೆ. ಅಂತೆಯೇ ಕ್ವಾಕಿಯೂಟಲ್ ಜನರು ಜೀವನವನ್ನು, ಪ್ರೈಪ್ರೋಟಿಯ ಸನ್ನಿವೇಶಗಳ ಸರಣಿಯಂತಲ್ಲದೇ ಬೇರೆ ಬಗೆಯಲ್ಲಿ ಕಾಣಲರಿಯರು. ಅವರು ತಮ್ಮ ಸಹಜೀವಿಗಳ ತೇಜೋವಧೆಯಿಂದ ಯಶಸ್ಸನ್ನು ಅಳೆಯುತ್ತಾರೆ. ಅವರವರ ನಾಗರಿಕತೆಗಳಲ್ಲಿ ಆಯಾ ಜೀವನ ಮಾರ್ಗಗಳು ಪಡೆದಿರುವ ಪ್ರಾಮುಖ್ಯತೆಯೇ ಅವರ ಭಾವನೆಗೆ ಆಧಾರ. ಆದರೆ ಒಂದು ಸಂಸ್ಕೃತಿಯಲ್ಲಿ ಒಂದು ಸಂಸ್ಥೆಯು ಪಡೆದಿರುವ ಪ್ರಾಮುಖ್ಯತೆಯು ಅದರ ಉಪಯುಕ್ತತೆಯನ್ನು ಅಥವಾ ಅದರ ಅನಿವಾರ್ಯತೆಯನ್ನು ಕುರಿತು ನೇರವಾಗಿ ಯಾವ ಸೂಚನೆಯನ್ನೂ ನೀಡುವುದಿಲ್ಲ. ಆ ರೀತಿಯ ವಾದವು ಸಂಶಯಾತ್ಮಕವಾದುದು. ನಾವು ನಿರ್ವಹಿಸಬಹುದಾದ ಯಾವುದೇ ಸಾಂಸ್ಕೃತಿಕ ನಿಯಂತ್ರಣವು, ನಮ್ಮ ಪಾಶ್ಚಿಮಾತ್ಯ ನಾಗರಿಕತೆಯಲ್ಲಿ ನಾವು ಪ್ರೋತ್ಸಾಹ

ನೀಡಿ, ಅನುರಕ್ತಿಯಿಂದ ಬೆಳೆಸಿಕೊಂಡು ಬಂದಿರುವ ಸ್ವಭಾವ ಲಕ್ಷಣಗಳನ್ನು ಎಷ್ಟು ಮಟ್ಟಿಗೆ ಅಹಂಭಿನ್ನವಾದ ಪರಾಮರ್ಶೆಗೆ ಒಳಪಡಿಸಲು ಸಾಧ್ಯ ಎಂಬುದನ್ನೇ ಆಧಾರಗೊಂಡಿದೆ.

ಅಧ್ಯಾಯ 8

ವ್ಯಕ್ತಿ ಮತ್ತು ಸಂಸ್ಕೃತಿಯ ರೂಪಿಕೆ

ನಾವು ಚರ್ಚಿಸಿದ ಬೃಹತ್ ಸಾಮೂಹಿಕ ವರ್ತನೆಯೂ, ವ್ಯಕ್ತಿಗಳ ವೈಯುಕ್ತಿಕ ವರ್ತನೆಯೂ ಅಗಿದೆ. ಒಬ್ಬ ವ್ಯಕ್ತಿ ಅನೇಕ ವ್ಯಕ್ತಿಗಳಾಗಿ ಕಾಣುವ ವಿಶ್ವವೇ ಅದು. ಒಬ್ಬ ವ್ಯಕ್ತಿ ತನ್ನ ವೈಯುಕ್ತಿಕ ಜೀವನವನ್ನು ಆ ಜಗತ್ತಿನಿಂದ ರೂಪಿಸಿಕೊಳ್ಳಬೇಕು. ಒಂದು ನಾಗರಿಕತೆಯನ್ನು ಕೆಲವು ಪುಟಗಳಿಗೆ ಇಳಿಸಿ ನಿರೂಪಿಸುವಾಗ ಸಾಮೂಹಿಕ ಆದರ್ಶಗಳನ್ನು ಎತ್ತಿ ತೋರಿಸಿ. ಆಯಾ ಸಂಸ್ಕೃತಿಯ ಪ್ರೇರಣೆಗಳನ್ನು ಮೂರ್ತೀಕರಿಸುವಂತಹ ವೈಯುಕ್ತಿಕ ವರ್ತನೆಯನ್ನು ಮಾತ್ರ ವಿವರಿಸಬಹುದು. ಅಂದ ಮಾತ್ರಕ್ಕೆ ವ್ಯಕ್ತಿಯು, ಅವನನ್ನು ಅದುಮಿಹಾಕುವಂತಹ ಸಾಗರದಲ್ಲಿ ಮುಳುಗಿ ಹೋಗಿದ್ದಾನೆಂದು ಎಣಿಸಿದರೆ ಆ ಸಂದರ್ಭದ ಅಗತ್ಯತೆಗಳನ್ನು ತಪ್ಪಾಗಿ ತಿಳಿದುಕೊಂಡಂತಾಗುತ್ತದೆ.

ಸಮಾಜದ ಪಾತ್ರಕ್ಕೂ, ವ್ಯಕ್ತಿಯ ಪಾತ್ರಕ್ಕೂ ಯಾವುದೇ ರೀತಿಯ ನಿಜವಾದ ವೈರತ್ವವಿಲ್ಲ. ಹತ್ತೊಂಬತ್ತನೆಯ ಶತಮಾನದ ಈ ದ್ವಂದ್ವವಾದದಿಂದ ಉಂಟಾಗಿರುವ ಅತ್ಯಂತ ತಪ್ಪು ದಾರಿಗೆ ಎಳೆಯುವ ಅಪಾರ್ಥವೆಂದರೆ, ಸಮಾಜದಿಂದ ಕಳೆದುದನ್ನು ವ್ಯಕ್ತಿಗೆ ಕೂಡಿಸುವ ಹಾಗೂ ವ್ಯಕ್ತಿಯಿಂದ ಕಳೆದುದನ್ನು ಸಮಾಜಕ್ಕೆ ಕೂಡಿಸುವ ಕಲ್ಪನೆ. ಈ ದ್ವಂದ್ವವಾದದ ಆಧಾರದ ಮೇಲೆ ಸ್ವಾತಂತ್ರ್ಯವನ್ನು ಕುರಿತ ಸಿದ್ಧಾಂತಗಳು, ನಿರಾತಂಕ ಸ್ವಾತಂತ್ರ್ಯದ ರಾಜಕೀಯ ಪಂಥಗಳು, ರಾಜಕುಲಗಳನ್ನು ಉರುಳಿಸಿದಂತಹ ಕ್ರಾಂತಿಗಳು ನಿರ್ಮಿತವಾದವು. ಮಾನವ ಶಾಸ್ತ್ರೀಯ ವಿಚಾರ ಸರಣಿಯಲ್ಲಿ ಸಂಸ್ಕೃತಿಯ ಮಾದರಿ ಹಾಗೂ ವ್ಯಕ್ತಿಯ ಸಾಪೇಕ್ಷ ಪ್ರಾಧಾನ್ಯತೆಯನ್ನು ಕುರಿತ ವಾದವಿವಾದಗಳು ಸಮಾಜ ಸ್ವಭಾವವನ್ನು ಕುರಿತ ಈ ಮೂಲಭೂತ ಕಲ್ಪನೆಯ ಒಂದು ಸಣ್ಣ ಸುಳಿ ಮಾತ್ರ.

ವಾಸ್ತವವಾಗಿ, ಸಮಾಜ ಮತ್ತು ವ್ಯಕ್ತಿ ಪರಸ್ಪರ ವಿರೋಧಿಗಳಲ್ಲ. ವ್ಯಕ್ತಿಯು ತನ್ನ ಜೀವನವನ್ನು ರೂಪಿಸಿಕೊಳ್ಳಲು, ಸಂಸ್ಕೃತಿಯು ಆತನಿಗೆ ಮೂಲವಸ್ತುಗಳನ್ನು ಒದಗಿಸುತ್ತದೆ. ಅದು ಅಲ್ಪವಾಗಿದ್ದರೆ ವ್ಯಕ್ತಿಯು ಕಷ್ಟಪಡುತ್ತಾನೆ; ಅದು ಶ್ರೀಮಂತವಾಗಿದ್ದರೆ ವ್ಯಕ್ತಿಯು ತನಗೆ ದೊರೆಯುವ ಸುಯೋಗಗಳನ್ನು ಬಳಸಿಕೊಳ್ಳಲು ಹೆಚ್ಚಿನ ಅವಕಾಶ ಪಡೆಯುತ್ತಾನೆ. ತನ್ನ ನಾಗರಿಕತೆಯ ಪರಂಪರಾಗತ ಕಣಜವು ತುಂಬಿಕೊಂಡಷ್ಟೂ ಪ್ರತಿಯೊಬ್ಬ ಗಂಡಸು ಮತ್ತು ಹೆಂಗಸಿನ ಪ್ರತಿಯೊಂದು ಖಾಸಗಿ ಹಿತಾಸಕ್ತಿಗೂ ಪ್ರಯೋಜನವುಂಟು. ಬಹು ಪರಿಷ್ಕಾರದಿಂದ ಸಂಗೀತ ಸಂವೇದನೆಯೂ ಸಹ ತನ್ನ ಸಂಪ್ರದಾಯದ ಆದರ್ಶ ಹಾಗೂ ಸಾಧನೆಗಳ ಪರಿಮಿತಿಯಲ್ಲಿ ಮಾತ್ರ ವ್ಯವಹರಿಸಬಲ್ಲದು. ಆ ಸಂಪ್ರದಾಯಕ್ಕೆ ಅದು ಬಹು ಮುಖ್ಯವಾದ ಕೊಡುಗೆಗಳನ್ನು ನೀಡಬಹುದು, ಆದರೆ ಆ ಸಾಧನೆಯು ಸಹ ಆ ಸಂಸ್ಕೃತಿಯು ನೀಡಿರುವ ವಾದ್ಯಗಳು ಮತ್ತು ಸಂಗೀತ ಸಿದ್ಧಾಂತಕ್ಕೆ ಅನುಪ್ರಮಾಣವಾಗಿಯೇ ಇರಲು ಸಾಧ್ಯ. ಇದೇ ರೀತಿಯಲ್ಲಿ ಯಾವುದಾದರೂ ಮಲನೇಶಿಯನ್ ಬಣದಲ್ಲಿ ಅಡಗಿರುವ ವೀಕ್ಷಣಾ ಸಾಮರ್ಥ್ಯವು ಮಾಂತ್ರಿಕ ಮತಧಾರ್ಮಿಕ ಕ್ಷೇತ್ರದ ಕಿರಿದಾದ ಪರಿಮಿತಿಯೊಳಗೆ ಮಾತ್ರ ಬಳಕೆಯಾಗಬೇಕಾಗಿದೆ. ಅದರ ನಿಗೂಢ ಶಕ್ತಿಯು ಸಿದ್ಧಿಗೊಳ್ಳಬೇಕಾದರೆ ವೈಜ್ಞಾನಿಕ ಕಾರ್ಯವಿಧಾನವು ಅಭಿವೃದ್ಧಿಗೊಳ್ಳಬೇಕಾದುದು ಅಗತ್ಯ. ಆ ಸಂಸ್ಕೃತಿಯು ಅವಶ್ಯಕವಾದ ಭಾವರೂಪ ಹಾಗೂ ಸಲಕರಣೆಗಳನ್ನು ರೂಪಿಸಿಕೊಳ್ಳದೇ, ಆ ಸಾಮರ್ಥ್ಯ ಫಲಕಾರಿಯಾಗದು.

ಸಾಧಾರಣ ಮನುಷ್ಯನು, ಇನ್ನೂ ಸಹ ಸಮಾಜ ಮತ್ತು ವ್ಯಕ್ತಿಯ ನಡುವೆ ವಿರೋಧವಿರುವುದು ಅನಿವಾರ್ಯವೆಂದೆಣಿಸುತ್ತಾನೆ. ನಮ್ಮ ನಾಗರಿಕತೆಯಲ್ಲಿ ನಿಯಂತ್ರಣ ಕಾರ್ಯಗಳೇ ಎದ್ದುಕಾಣುವುದು ಇದಕ್ಕೆ ಬಹುಮಟ್ಟಿಗೆ ಕಾರಣ. ಕಾನೂನು ನಮ್ಮ ಮೇಲೆ ಹೇರುವ ನಿಬಂಧನೆಗಳನ್ನು ನಾವು ಸಮಾಜದೊಂದಿಗೆ ಸಮೀಕರಿಸುತ್ತೇವೆ. ನಾನು ನನ್ನ ಕಾರನ್ನು ಗಂಟೆಗೆ ಇಷ್ಟೇ ಮೈಲಿ ವೇಗದಲ್ಲಿ ಓಡಿಸಬೇಕೆಂದು ಕಾನೂನು ನಿರ್ಬಂಧಿಸುತ್ತದೆ. ಆ ನಿರ್ಬಂಧವನ್ನು ಅದು ತೆಗೆದುಹಾಕಿಬಿಟ್ಟರೆ, ಅಷ್ಟುಮಟ್ಟಿಗೆ ನಾನು ಹೆಚ್ಚು ಸ್ವತಂತ್ರ. ಸಮಾಜ ಮತ್ತು ವ್ಯಕ್ತಿಯ ನಡುವಣ ಮೂಲಭೂತ ವಿರೋಧಕ್ಕೆ ನಿದರ್ಶನವಾಗಿ ಈ ಆಧಾರವನ್ನು ತೋರಿ, ಅದನ್ನೇ ಒಂದು ಮೂಲಾತ್ಮಕವಾದ ಸೈದ್ಧಾಂತಿಕ ಹಾಗೂ ರಾಜಕೀಯ ತತ್ವವಾಗಿ ವ್ಯಾಪ್ತಿಗೊಳಿಸಿಕೊಂಡರೆ ಅದು ವಿಚಾರಹೀನತೆಯಾಗುತ್ತದೆ. ಪ್ರಾಸಂಗಿಕವಾಗಿ, ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿ ಮಾತ್ರ ಸಮಾಜವು ನಿಯಂತ್ರಕವಾಗುತ್ತದೆ. ಕಾನೂನು ಮತ್ತು ಸಮಾಜಪದ್ಧತಿಗಳು ಸಮಾನವಲ್ಲ. ಸರಳವಾದ ಸಮರೂಪ ಸಂಸ್ಕೃತಿಗಳಲ್ಲಿ ಸಾಮೂಹಿಕ ರೂಢಿ ಅಥವಾ ಸಂಪ್ರದಾಯವು, ವಿಧಿಬದ್ಧವಾದ ಕಾನೂನಿನ ಅಧಿಕಾರವು ಬೆಳೆ

ಯುಂವ ಅವಶ್ಯಕತೆಯುನ್ನೇ ತಳ್ಳಿಹಾಕಬಹುದು. ಕೆಲವು ವೇಳೆ ಅಮೆರಿಕನ್ ಇಂಡಿಯನ್ನರು "ಹಿಂದೆ ಬೇಟೆಯಾಡುವ ಅಡವಿಗಳಿಗಾಗಲಿ, ಮೀನು ಹಿಡಿಯುಂವ ಪ್ರದೇಶಗಳಿಗಾಗಲಿ ಹೊಡೆದಾಡುತ್ತಿರಲಿಲ್ಲ. ಆಗ ಕಾನೂನು ಇರಲಿಲ್ಲ. ಎಲ್ಲರೂ ಉಚಿತವಾದುದನ್ನೇ ಮಾಡುತ್ತಿದ್ದರು" ಎಂದು ಹೇಳುವುದುಂಟು. ಈ ಮಾತು ಹಿಂದಿನ ಜೀವನ ವಿಧಾನದಲ್ಲಿ ಹೊರಗಿನಿಂದ ಹೇರಲ್ಪಟ್ಟ ಸಾಮಾಜಿಕ ನಿಯಂತ್ರಣಕ್ಕೆ ತಾವು ಅಡಗಿದವರು ಎಂದು ಅವರು ಭಾವಿಸುತ್ತಿರಲಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ನಮ್ಮ ನಾಗರಿಕತೆಯಲ್ಲಿ ಸಹ ಕಾನೂನು, ಸಮಾಜದ ಒಂದು ಒರಟು ಆಯುಧಕ್ಕಿಂತ ಹೆಚ್ಚಿನದೇನೂ ಅಲ್ಲ. ಅದು ಆಗಾಗ್ಗೆ ಸೊಕ್ಕಿನ ಮಾರ್ಗ ಹಿಡಿಯದಿರಲು ನಿಯಂತ್ರಣ ಅವಶ್ಯಕ. ಅದನ್ನೇ ಸಮಾಜಪದ್ಧತಿಗೆ ಸಮಾನವಾಗಿ ಪರಿಗಣಿಸಬಾರದು.

ನಾವು ಈ ಕೃತಿಯಲ್ಲಿ ಪರಾಮರ್ಶೆ ಮಾಡಿರುವ ಪ್ರಕಾರ, ಸಮಾಜವೆಂಬುದು ಅದರ ಪೂರ್ಣ ಅರ್ಥದಲ್ಲಿ ಅದು ಒಳಗೊಂಡಿರುವ ವ್ಯಕ್ತಿಗಳಿಂದ ಭಿನ್ನಗೊಳಿಸಬಹುದಾದ ಒಂದು ಅಸ್ತಿತ್ವವಲ್ಲ. ಯಾವೊಬ್ಬ ವ್ಯಕ್ತಿಯೂ ತಾನು ಭಾಗವಹಿಸುವ ಸಂಸ್ಕೃತಿಗೆ ಹೊರತಾಗಿ, ತನ್ನ ನಿಗೂಢ ಶಕ್ತಿಗಳ ಹೊಸ್ತಿಲನ್ನು ಸಹ ಮುಟ್ಟಲಾರ. ವಿಪರ್ಯಯವಾಗಿ, ಅಂತಿಮವಾದ ವಿಶ್ಲೇಷಣೆಗೊಳಪಡಿಸಿದಲ್ಲಿ, ಯಾವ ನಾಗರಿಕತೆಯೂ ಒಬ್ಬ ವ್ಯಕ್ತಿಯಿಂದ ನೀಡಲ್ಪಡದ ಯಾವೊಂದು ಅಂಶವನ್ನೂ ಪಡೆದಿರುವುದಿಲ್ಲ. ಒಂದು ಸ್ವಭಾವಲಕ್ಷಣವು ಯಾವನಾದರೊಬ್ಬ ಗಂಡಸು, ಹೆಂಗಸು ಅಥವಾ ಮಗುವಿನ ವರ್ತನೆಯಿಂದ ಬರಬೇಕಲ್ಲದೆ ಬೇರೆ ಎಲ್ಲಿಂದ ತಾನೇ ಬರಲು ಸಾಧ್ಯ ?

ಸಾಂಸ್ಕೃತಿಕ ವರ್ತನೆಯುನ್ನು ಒತ್ತಿ ಹೇಳಿದರೆ ವ್ಯಕ್ತಿಯ ಸ್ವತಂತ್ರವನ್ನು ಅಲ್ಲಗಳೆದಂತಾಯಿತೆಂದು ಮತ್ತೆ ಮತ್ತೆ ಅರ್ಥೈಸಲಾಗಿದೆ. ಸಮಾಜ ಮತ್ತು ವ್ಯಕ್ತಿಯ ನಡುವಣ ವಿರೋಧ ಭಾವವನ್ನು ಪರಂಪರಾಗತವಾಗಿ ಒಪ್ಪಿಕೊಂಡು ಬಂದಿರುವುದೇ ಇದಕ್ಕೆ ಮುಖ್ಯ ಕಾರಣ. ಸಮ್ನರನ 'ಫೋಕ್‌ವೇಸ್' ಕೃತಿಯಲ್ಲಿ ಆತನು ಅನುಸರಿಸಿರುವ ಅರ್ಥ ವಿವರಣೆಯ ಪ್ರಕಾರ ವ್ಯಕ್ತಿಯ ಕಾರ್ಯವ್ಯಾಪ್ತಿಯನ್ನೂ, ಮುಂದರಿಕೆಯನ್ನೂ ಸೀಮಿತಗೊಳಿಸಿದೆ ಎಂಬ ಆಕ್ಷೇಪಣೆ ಸರ್ವೇಸಾಧಾರಣ. ಹಿತಕಾರಿಯಾದ ಮಾನವಕಲ್ಪನೆಯೊಂದನ್ನು ಅಸಮರ್ಥನೀಯಗೊಳಿಸುವುದರಿಂದ, ಮಾನವಶಾಸ್ತ್ರವು ಒಂದು ಹತಾಶ ವಾದವೆಂದು ನಂಬುವವರೂ ಇದ್ದಾರೆ. ಆದರೆ ಪರಸಂಸ್ಕೃತಿಗಳ ಅನುಭವದ ಹಿನ್ನೆಲೆಯುಳ್ಳ ಯಾವ ಮಾನವಶಾಸ್ತ್ರಜ್ಞನೂ, ವ್ಯಕ್ತಿಗಳು ತಮ್ಮ ನಾಗರಿಕತೆಯ ಆಣತಿಗಳನ್ನು ಯಾಂತ್ರಿಕವಾಗಿ ಕಾರ್ಯಗತಗೊಳಿಸುತ್ತಿರುವ ಕೀಲುಗೊಂಬೆಗಳೆಂದು ಎಂದೆಂದೂ ಭಾವಿಸಿಲ್ಲ. ಇದುವರೆಗೆ ವೀಕ್ಷಣೆಗೆ ಒಳಪಟ್ಟಿರುವ ಯಾವ ಸಂಸ್ಕೃತಿಯೂ ತನ್ನ ವ್ಯಾಪ್ತಿಗೆ ಒಳಪಟ್ಟ ವ್ಯಕ್ತಿಗಳ ಮನೋವೃತ್ತಿಗಳಲ್ಲಿರುವ ವ್ಯತ್ಯಾಸಗಳನ್ನು ತೊಡೆದುಹಾಕಲು ಸಾಧ್ಯವಾಗಿಲ್ಲ. ಅದು ಯಾವಾಗಲೂ ಕೊಡಕೊಳ್ಳುವ ವ್ಯವ

ಹಾರ. ವ್ಯಕ್ತಿಯ ಸಮಸ್ಯೆಯು ಸಂಸ್ಕೃತಿಗೂ ವ್ಯಕ್ತಿಗೂ ಇರುವ ವಿರೋಧವನ್ನು ಒತ್ತಿ ಹೇಳುವುದರಿಂದ ಸ್ಪಷ್ಟಗೊಳ್ಳುವುದಿಲ್ಲ. ಆದರೆ ವ್ಯಕ್ತಿ ಮತ್ತು ಸಂಸ್ಕೃತಿಗಳ ಪರಸ್ಪರ ಪುಷ್ಟಿಗೊಳಿಸುವಿಕೆಯನ್ನು ಒತ್ತಿಹೇಳುವುದರಿಂದ ಸ್ಪಷ್ಟಗೊಳ್ಳುತ್ತದೆ. ಈ ಅನುವರ್ತನೆಯು ಎಷ್ಟು ಬಲವಾದುದೆಂದರೆ. ಸಂಸ್ಕೃತಿಯ ರೂಪಿಕೆಗಳನ್ನು ಕುರಿತು ಚರ್ಚಿಸಬೇಕಾದರೆ, ಅವು ವ್ಯಕ್ತಿಗತ ಮನೋವ್ಯಾಪಾರಕ್ಕೆ ಹೇಗೆ ನಿರ್ದಿಷ್ಟವಾಗಿ ಸಂಬಂಧಪಟ್ಟಿವೆಯೆಂಬುದನ್ನು ಪರಿಗಣಿಸದೇ ದಾರಿಯೇ ಇಲ್ಲ.

ಯಾವುದೇ ಸಮಾಜವಾದರೂ ಕಾರ್ಯ ಸಾಧ್ಯವಾದ ಮಾನವ ವರ್ತನೆಯ ಖಂಡವೃತ್ತದಿಂದ ಒಂದು ತುಣುಕನ್ನು ಆಯ್ದುಕೊಳ್ಳುತ್ತದೆ. ಅದು ತನ್ನ ಸಂಸ್ಥೆಗಳಲ್ಲಿ ಸಮಗ್ರತೆಯನ್ನು ಸಾಧಿಸಿದಷ್ಟೂ ಮಟ್ಟಿಗೆ ಆಯ್ದ ವರ್ತನೆಯ ತುಣುಕು ಹೆಚ್ಚು ಸುವ್ಯಕ್ತವಾಗುತ್ತ ವಿರೋಧ ಭಾವಗಳು ಅಡಗುತ್ತ ಹೋಗುತ್ತವೆಂಬುದನ್ನು ಈಗಾಗಲೇ ನೋಡಿಯಾಗಿದೆ. ಆದರೆ ಈ ವಿರೋಧ ಭಾವಗಳು ಆ ಸಂಸ್ಕೃತಿಯ ವಾಹಕರಾದ ವ್ಯಕ್ತಿಗಳಲ್ಲಿ ಒಂದು ನಿರ್ದಿಷ್ಟ ಪ್ರಮಾಣದವರಿಗೆ ಒಗ್ಗುವಂತಹ ಮನೋಕ್ರಿಯೆಗಳಾಗಿರುತ್ತವೆ. ಈ ಆಯ್ಕೆಯು ಜೈವಿಕವಾದುದಲ್ಲ, ಸಾಂಸ್ಕೃತಿಕವಾದುದು ಎಂದು ನಾವು ನಂಬಲು ಕಾರಣಗಳೇನೆಂಬುದನ್ನು ಈಗಾಗಲೇ ವಿವರಿಸಿದ್ದೇವೆ. ಆದ್ದರಿಂದ ಯಾವುದೊಂದು ಸಂಸ್ಕೃತಿಯ ಸಂಸ್ಥೆಗಳೂ ಸಹ ತನ್ನ ಆಶ್ರಯದಲ್ಲಿರುವ ಎಲ್ಲ ವ್ಯಕ್ತಿಗಳಿಗೆ ಒಗ್ಗುವಂತಹ ಮನೋಕ್ರಿಯೆಗಳಿಗೆಲ್ಲ ಏಕಸಮನಾಗಿ ಒದಗಿಬರುತ್ತವೆಂದು ತಾತ್ವಿಕ ಆಧಾರದ ಮೇಲೆ ಸಹ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ವ್ಯಕ್ತಿಯ ವರ್ತನೆಯನ್ನು ಅರಿತುಕೊಳ್ಳಬೇಕಾದರೆ ಅವನ ವೈಯಕ್ತಿಕ ಜೀವನ ಚರಿತ್ರೆಯನ್ನು ಅವನ ಸಹಜ ಯೋಗ್ಯತೆಗೆ ಹೊಂದಿಸಿ, ಅವುಗಳನ್ನು ಮಧ್ಯಸ್ತವಾಗಿ ಆಯ್ದ ಒಂದು ಸಮಷ್ಠಿತಿಯ ಮಾದರಿಗೆ ತಾಳೆ ಹಾಕಿ ನೋಡಿದರೆ ಮಾತ್ರ ಸಾಲದು. ಅವನಿಗೆ ಒಗ್ಗಿಬಂದ ಮನೋಕ್ರಿಯೆಗಳನ್ನು ಅವನ ಸಂಸ್ಕೃತಿಯ ಸಂಸ್ಥೆಗಳಲ್ಲಿ ಆಯ್ಕೆಗೊಂಡಿರುವ ವರ್ತನೆಗೂ ತಾಳೆ ಹಾಕಿ ನೋಡಬೇಕು.

ಒಂದು ಸಮಾಜದ ಸಂಸ್ಥೆಗಳ ವೈಲಕ್ಷಣ್ಯಗಳೇನೇ ಇರಲಿ, ಆ ಸಮಾಜದಲ್ಲಿ ಜನಿಸಿದ ಒಟ್ಟು ವ್ಯಕ್ತಿಗಳಲ್ಲಿ ಬಹು ದೊಡ್ಡ ಪ್ರಮಾಣದವರು ಆ ಸಮಾಜವು ವಿಧಿಸಿರುವ ವರ್ತನೆಯನ್ನೇ ತಳೆಯುತ್ತಾರೆ. ಆ ಸಂಸ್ಕೃತಿಯ ವಾಹಕರ ಅಭಿಪ್ರಾಯದಲ್ಲಿ ಇದಕ್ಕೆ ಕಾರಣ, ತಮ್ಮ ವಿಶಿಷ್ಟ ಸಂಸ್ಥೆಗಳು ಅತ್ಯುಚ್ಚವೂ ಸರ್ವಸಮ್ಮತವೂ ಆದ ವಿವೇಚನೆಯನ್ನು ಪ್ರತಿನಿಧಿಸುತ್ತವೆ ಎಂಬುದು. ಆದರೆ ನಿಜವಾದ ಸ್ಥಿತಿ ಬೇರೆ. ಬಹುಮಟ್ಟಿನ ಜನರು ತಮ್ಮ ಸಂಸ್ಕೃತಿಯ ಮಾದರಿಗೆ ಅನುಗುಣವಾಗಿ ರೂಪಿತರಾಗುವುದಕ್ಕೆ ಕಾರಣ ಅವರ ಮೂಲ ಸಾಮರ್ಥ್ಯವು ಅಪಾರವಾದ ಸುಲಭ ನಮ್ಯತೆಯನ್ನು ಪಡೆದಿರುವುದು. ಅವರು ಜನಿಸಿದ ಸಮಾಜದ ರೂಪಕ

ಶಕ್ತಿಗೆ ಅವರು ಬಾಗುತ್ತಾರೆ. ವಾಯುವ್ಯ ತೀರಪ್ರದೇಶದಲ್ಲಿ ಆತ್ಮ ಪ್ರಶಂಸೆಯ ಮೋಹವು ಅವಶ್ಯಕವೆಂಬುದೋ, ಇನ್ನೊಂದು ನಾಗರಿಕತೆಯಲ್ಲಿ ಸ್ವತ್ತುಗಳನ್ನು ಸಂಗ್ರಹಿಸುವುದು ಅವಶ್ಯಕವೆಂಬುದೋ ಅದಕ್ಕೆ ಅಡ್ಡಿಯಾಗುವುದಿಲ್ಲ, ಹೇಗೇ ಆದರೂ ಬಹುಸಂಖ್ಯಾತ ವ್ಯಕ್ತಿಗಳು ತಮಗೆ ತೋರಿಸಲ್ಪಟ್ಟ ರೂಪವನ್ನು ಸುಲಭವಾಗಿ ಅಳವಡಿಸಿಕೊಳ್ಳುತ್ತಾರೆ.

ಆದರೆ ಅವರಲ್ಲಿ ಎಲ್ಲರಿಗೂ ಅದು ಒಂದೇ ಮಟ್ಟದಲ್ಲಿ ಒಗ್ಗಿ ಬರುವುದಿಲ್ಲ. ತಮ್ಮ ನಿಗೂಢ ಶಕ್ತಿಗಳು, ತಮ್ಮ ಸಮಾಜವು ಆಯ್ದ ವರ್ತನಾವಿಧಾನಕ್ಕೆ ಅತ್ಯಂತ ಹತ್ತಿರವಾಗಿ ಹೊಂದಿಕೊಂಡಿರುವವರು ಅನುಗ್ರಹಕ್ಕೆ ಪಾತ್ರರಾದ, ಅದೃಷ್ಟವಂತರು. ತಾವು ಹತಾಶರಾಗುವಂತಹ ಸಂದರ್ಭದಲ್ಲಿ, ಆದಷ್ಟು ಬೇಗ ಆ ಪ್ರಸಂಗದಿಂದ ಹೊರತಾಗಲು ಸಹಜವಾಗಿ ಬಯಸುವವರಿಗೆ ಪ್ವೆಬ್ಲೋ ಸಂಸ್ಕೃತಿಯು ಹೆಚ್ಚಿಗೆ ಒಗ್ಗಿ ಬರುತ್ತದೆ. ನೈಋತ್ಯ ಪ್ರದೇಶದ ಸಂಸ್ಥೆಗಳು ತೀವ್ರವಾಗಿ ಹತಾಶೆಗೆ ಒಳಗಾಗಬಹುದಾದ ಸನ್ನಿವೇಶಗಳನ್ನು ಕನಿಷ್ಠ ಮಿತಿಗೆ ಇಳಿಸಿವೆ ಹಾಗೂ ಅದರಿಂದ ತಪ್ಪಿಸಿಕೊಳ್ಳಲಾಗದ ಮರಣದಂತಹ ಪ್ರಸಂಗಗಳಲ್ಲಿ ಆದಷ್ಟು ಬೇಗ ಅದನ್ನು ಹಿಂದಿಕ್ಕಲು ತಕ್ಕ ವಿಧಾನಗಳನ್ನೂ ರೂಪಿಸಿವೆ.

ಇದಕ್ಕೆ ಪ್ರತಿಯಾಗಿ ಹತಾಶೆಗೊಳ್ಳುವುದು ಮುಖಭಂಗ ಎಂಬ ಮನೋವೃತ್ತಿ ತಳೆದು, ಸಮಸ್ಥಿತಿಗಳಿಸುವುದಕ್ಕೆ ಆದ್ಯತೆ ನೀಡುವವರಿಗೆ ವಾಯುವ್ಯ ತೀರಪ್ರದೇಶ ಒಗ್ಗಿ ಬರುತ್ತದೆ. ಅವರು ತಮ್ಮ ಸಹಜ ಮನೋವೃತ್ತಿಯನ್ನು ಹುಟ್ಟು ಮುರಿಯುವ, ದೋಣಿ ತಲೆ ಕೆಳಾಗುವ, ಇಲ್ಲವೇ ಮರಣದಿಂದಾಗಿ ನಂಟರಿಂದ ಅಗಲಬೇಕಾಗಿ ಬರುವ ಸಂದರ್ಭಗಳಿಗೆಲ್ಲ ವ್ಯಾಪ್ತಿಗೊಳಿಸಿಕೊಳ್ಳಬಹುದು. ಮೊದಲು ಅವರು ವಿಷಣ್ಣ ಭಾವದಿಂದ ಚೇತರಿಸಿಕೊಂಡು ಸ್ವತ್ತು ಇಲ್ಲವೇ ಶಸ್ತ್ರಗಳಿಂದ ಹೋರಾಡಿ ಪ್ರತಿಧಾಳಿ ನಡೆಸಲು ಸಿದ್ಧರಾಗುತ್ತಾರೆ. ಅವರು ತಮಗಾದ ಹತಾಶೆಗೆ ಪ್ರತಿಯಾಗಿ ಇತರರಿಗೆ ಮುಖಭಂಗ ಮಾಡುವುದರಿಂದ ಸಮಾಧಾನಗೊಳ್ಳುವರು. ಯಾವ ರೀತಿಯ ಘರ್ಷಣೆಯಿಲ್ಲದೆ, ಅಂತಹ ವರ್ತನೆಯನ್ನು ಈ ಸಮಾಜದಲ್ಲಿ ಅನುಸರಿಸಬಹುದು. ಅವರ ಒಲವೇ ಆ ಸಂಸ್ಕೃತಿಯಲ್ಲಿ ಆಳವಾಗಿ ಹರಿಯುತ್ತಿರುವ ಪ್ರವಾಹವಾಗಿರುವುದು ಅದಕ್ಕೆ ಕಾರಣ. ತಮ್ಮ ತೊಂದರೆಗಳಿಗೆಲ್ಲ ಯಾವನಾದರೊಬ್ಬನನ್ನು ಕಾರಣಕರ್ತನನ್ನಾಗಿ ಹೆಸರಿಸಿ, ತಮಗಾಗುವ ಹಿಂಸೆಯನ್ನೆಲ್ಲ ಶಿಕ್ಷಾರೂಪವಾಗಿ ಅವನ ಮೇಲೆ ಹೇರುವ ಮನೋಭಾವವೇ ಪ್ರಧಾನವಾಗಿರುವವರು ಡೋಬು ದ್ವೀಪದಲ್ಲಿ ಭಾಗ್ಯಶಾಲಿಗಳು.

ನಾವು ವಿವರಿಸಿರುವ ಈ ಮೂರು ಸಂಸ್ಕೃತಿಗಳಲ್ಲಿ ಯಾವುದೊಂದೂ ಸಹ ಹತಾಶೆಯ ಸಂದರ್ಭದಲ್ಲಿ ಯಥಾಸ್ಥಿತಿಯನ್ನೂ, ಕಡಿದುಹೋದ ಅನುಭವ ಸರಣಿ

ಯನ್ನೂ ಪುನಃ ಸ್ಥಾಪಿಸುವುದನ್ನು ಒತ್ತಿ ಹೇಳುವಂತಹ ವ್ಯಾವಹಾರಿಕ ವಿಧಾನವನ್ನು ಅನುಸರಿಸುವುದಿಲ್ಲ. ಮರಣದ ಪ್ರಸಂಗದಲ್ಲಿ ಇದು ಅಸಾಧ್ಯವಾಗಿಯೂ ತೋರ ಬಹುದು. ಆದರೆ ಅನೇಕ ಸಂಸ್ಕೃತಿಗಳ ಸಂಸ್ಥೆಗಳು ಅದನ್ನೇ ಸಾಧಿಸಲೆಳಸುತ್ತವೆ. ನಷ್ಟ ಪರಿಹಾರವು ತಳೆದಿರುವ ಕೆಲವು ರೂಪಗಳು ನಮಗೆ ಜುಗುಪ್ಸೆಯನ್ನುಂಟು ಮಾಡಬಹುದು. ಆದರೆ ಹತಾಶೆಯನ್ನು ಎದುರಿಸಬಲ್ಲ ಈ ನಿಗೂಢ ವರ್ತನೆಗೆ ಕಾರ್ಯಾವಕಾಶ ದೊರೆಯುವಂತಹ ಸಂಸ್ಕೃತಿಗಳಲ್ಲಿ, ಆ ಸಮಾಜದ ಸಂಸ್ಥೆಗಳು ಆ ಮಾರ್ಗವನ್ನೇ ವಿಪರೀತಕ್ಕೆ ಕೊಂಡೊಯ್ಯುತ್ತವೆ. ಎಸ್ಕಿಮೋಗಳಲ್ಲಿ ಒಬ್ಬ ಮನುಷ್ಯನು ಇನ್ನೊಬ್ಬನನ್ನು ಕೊಲೆ ಮಾಡಿದರೆ, ಕೊಲೆಯಾದವನ ಕುಟುಂಬವು ತನ್ನ ಗುಂಪಿಗೆ ಆದ ನಷ್ಟವನ್ನು, ತುಂಬಿಕೊಳ್ಳಲು ಕೊಲೆಗಾರನನ್ನೇ ತಮ್ಮೊಂದಿಗೆ ಸೇರಿಸಿಕೊಳ್ಳ ಬಹುದು. ತನ್ನ ಕೃತ್ಯದಿಂದ ವಿಧವೆಯಾದ ಹೆಂಗಸಿಗೆ ಕೊಲೆಗಾರನು ಗಂಡನಾಗು ತ್ತಾನೆ. ಇಲ್ಲಿ ನಷ್ಟ ಪರಿಹಾರವೇ ಪ್ರಾಮುಖ್ಯತೆ ಗಳಿಸಿ, ಆ ಸನ್ನಿವೇಶದಲ್ಲಿ ನಮಗೆ ಅತಿಮುಖ್ಯವೆಂದು ಕಂಡುಬರುವಂತಹ ಇತರ ಅಂಶಗಳನ್ನು ನಿರ್ಲಕ್ಷಿಸಲಾಗಿದೆ. ಪರಂ ಪರೆಯು ಅಂತಹ ಒಂದು ಗುರಿಯನ್ನು ಆಯ್ಕೆ ಮಾಡಿಕೊಂಡನಂತರ ಬೇರೆಲ್ಲವನ್ನೂ ನಿರ್ಲಕ್ಷಿಸಬೇಕಾಗಿ ಬರುವುದು ಸಹಜ.

ಶೋಕಾಚರಣೆಯ ಸಂದರ್ಭದಲ್ಲಿ ನಷ್ಟಪರಿಹಾರದ ಇನ್ನೂ ಕೆಲವು ವಿಧಾನಗಳು ಪಾಶ್ಚಿಮಾತ್ಯ ನಾಗರಿಕತೆಯ ಆದರ್ಶಗಳಿಗೆ ಸ್ವಲ್ಪ ಹೆಚ್ಚಿಗೆ ಒಗ್ಗುವಂತಹವು. ದತ್ತು ಸ್ವೀಕಾರವು, ಮಹಾಸರೋವರಗಳ ದಕ್ಷಿಣಭಾಗದ ಮಧ್ಯಅಲಗೊಂಕಿಯನ್ ಇಂಡಿ ಯನ್ನರ ಕೆಲವು ಬಣಗಳಲ್ಲಿ ರೂಢಿಯಲ್ಲಿತ್ತು. ಒಂದು ಮಗು ತೀರಿಹೋದರೆ ಅಂತ ಹುದೇ ಇನ್ನೊಂದು ಮಗುವನ್ನು ಅದರ ಜಾಗಕ್ಕೆ ತರುತ್ತಿದ್ದರು. ಸಾಮ್ಯತೆಯನ್ನು ನಿರ್ಧರಿಸಲು ಹಲವು ವಿಧಾನಗಳಿದ್ದುವು. ಕೆಲವೊಮ್ಮೆ ಧಾಳಿಮಾಡಿ ಸೆರೆ ಹಿಡಿದ ಮಗುವೊಂದನ್ನು ಕುಟುಂಬದ ಸದಸ್ಯನನ್ನಾಗಿ ಸ್ವೀಕರಿಸುತ್ತಿದ್ದರು. ಸತ್ತು ಹೋದ ಮಗುವಿಗೆ ದೊರೆಯುತ್ತಿದ್ದ ಎಲ್ಲ ಹಕ್ಕುಬಾಧ್ಯತೆಗಳೂ ಪ್ರೀತಿಯೂ ಆ ಮಗುವಿಗೆ ದೊರೆಯುತ್ತಿತ್ತು. ಇನ್ನು ಕೆಲವು ಸಂದರ್ಭಗಳಲ್ಲಿ ತೀರಿಹೋದ ಮಗುವಿನ ಅತಿ ಪ್ರೀತಿಯ ಆಟದ ಜೊತೆಗಾರ ಮಗುವನ್ನೋ ಇಲ್ಲವೇ, ತಮ್ಮ ಬಂಧುಜನರ ಶಿಬಿರ ದಿಂದ ಎತ್ತರ ಮತ್ತು ಲಕ್ಷಣಗಳಲ್ಲಿ ಸತ್ತ ಮಗುವನ್ನು ಹೋಲುವಂತಹ ಒಂದು ಮಗು ವನ್ನೋ ಕರೆತರುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ಮಗುವನ್ನು ನೀಡುವ ಕುಟುಂಬ ದವರು ಆ ಆಯ್ಕೆಯಿಂದ ಸಂತೋಷಪಡುವರೆಂದು ಭಾವಿಸಲಾಗುತ್ತಿತ್ತು. ಅಲ್ಲದೇ ಬಹುಮಟ್ಟಿನ ಪ್ರಸಂಗಗಳಲ್ಲಿ, ನಮ್ಮ ಸಂಸ್ಥೆಗಳಲ್ಲಿನಂತೆ ಅದು ದೊಡ್ಡ ಬದಲಾವಣೆ ಯೇನೂ ಆಗಿರುತ್ತಿರಲಿಲ್ಲ. ಮಗುವು ಯಾವಾಗಲೂ ಹಲವರು 'ತಾಯಂದಿರನ್ನು' ಅರಿತಿದ್ದು, ಹಲವಾರು ಮನೆಗಳಲ್ಲಿ ಬಳಕೆ ಪಡೆದಿರುತ್ತಿತ್ತು. ಈ ಹೊಸ ಬಾಂಧವ್ಯ

ದಿಂದ ಇನ್ನೊಂದು ಮನೆಯಂತ್ತ ಅಂತಹುದೇ ಬಳಕೆಯನ್ನು ಪಡೆದು ಹೊಂದಿಕೊಳ್ಳು ತ್ತಿತ್ತು. ಮಗುವನ್ನು ಕಳೆದು ಕೊಂಡ ತಂದೆತಾಯಿಗಳ ದೃಷ್ಟಿಯಲ್ಲಿ, ಈ ನಷ್ಟ ಪರಿ ಹಾರದಿಂದ ತಮ್ಮ ಮಗುವು ತೀರಿಹೋಗುವುದಕ್ಕೆ ಮೊದಲು ಇದ್ದ ಪೂರ್ವ ಸ್ಥಿತಿಯು ಮತ್ತೆ ನೆಲೆಗೊಂಡು, ಪರಿಸ್ಥಿತಿಯನ್ನು ತಾವು ಸೂಕ್ತ ರೀತಿಯಲ್ಲಿ ದಾಟಿದಂತಾಗುತ್ತಿತ್ತು.

ತೀರಿಹೋದ ವ್ಯಕ್ತಿಗಾಗಿ ಶೋಕಿಸುವುದಕ್ಕಿಂತ ಹೆಚ್ಚಾಗಿ, ಬಂದ ಸನ್ನಿವೇಶಕ್ಕಾಗಿ ಶೋಕಿಸುವಂತಹ ವ್ಯಕ್ತಿಗಳಿಗೆ ಈ ಸಂಸ್ಕೃತಿಗಳಲ್ಲಿ, ನಮ್ಮ ಸಂಸ್ಥೆಗಳಲ್ಲಿ ಕಲ್ಪಿಸಿಕೊಳ್ಳ ಲಾರದಷ್ಟು ಅವಕಾಶ ದೊರೆತಿದೆ. ನಾವೂ ಸಹ ಅಂತಹ ಉಪಶಮನದ ಸಾಧ್ಯತೆ ಯನ್ನು ಒಪ್ಪಿಕೊಂಡರೂ, ಆದ ನಷ್ಟಕ್ಕೆ ಅದರ ಸಂಬಂಧವನ್ನು ಆದಷ್ಟು ಕಡಮೆ ಯಾಗಿಡಲು ಎಚ್ಚರಿಕೆ ವಹಿಸುತ್ತೇವೆ. ಅದನ್ನು, ನಾವು ಶೋಕಾಚರಣೆಯ ವಿಧಾನ ವಾಗಿ ಅನುಸರಿಸುವುದಿಲ್ಲ. ಅಂತಹ ಪರಿಹಾರದಿಂದ ಸಮಾಧಾನಗೊಳ್ಳುವ ವ್ಯಕ್ತಿ ಗಳಿಗೆ, ಅವರ ಅತ್ಯಂತ ಸಂಕಟದ ಕಾಲ ಕಳೆಯುವವರೆಗೆ ಯಾವ ರೀತಿಯ ಆಧಾರವೂ ಇಲ್ಲದಂತಾಗುತ್ತದೆ.

ಹತಾಶೆಯಂತ್ತ ಇನ್ನೂ ಒಂದು ಮನೋಭಾವವನ್ನು ತಳೆಯುವುದು ಸಾಧ್ಯ. ಅದು ಪ್ವೆಬ್ಲೋ ಮನೋಭಾವಕ್ಕೆ ತದ್ವಿರುದ್ಧವಾದುದು. ಮೈದಾನ ಪ್ರದೇಶದ ಇಂಡಿಯನ್ನರ ಡಯೋನೀಸಿಯನ್ ಪ್ರವೃತ್ತಿಗಳನ್ನು ವಿವರಿಸುವಾಗ ಅದನ್ನು ಪ್ರಸ್ತಾಪಿ ಸಿದ್ದೇವೆ. ಅತ್ಯಂತ ಕಡಮೆ ತೊಂದರೆಯಿಂದ ದುಃಖಾನುಭವವನ್ನು ದಾಟಲು ಪ್ರಯತ್ನಿಸುವುದರ ಬದಲು, ಈ ಮನೋಭಾವವು ದುಃಖವನ್ನು ವಿಪರೀತವಾಗಿ ಪ್ರದ ರ್ಶಿಸಿ ಸಮಾಧಾನ ಪಡೆಯುತ್ತದೆ. ಮೈದಾನ ಪ್ರದೇಶದ ಇಂಡಿಯನ್ನರು ವಿಪರೀತ ದಲ್ಲಿ ಮಗ್ನರಾಗುವುದನ್ನೇ ಪ್ರಾಬಲ್ಯಗೊಳಿಸಿಕೊಂಡು, ತಮ್ಮ ಭಾವೋದ್ರೇಕವನ್ನು ಆವೇಶ ಪೂರ್ಣವಾಗಿ ತೋರಿಸಿಕೊಳ್ಳುವುದನ್ನು ಸಾಧಾರಣ ಕ್ರಮವಾಗಿ ಮಾಡಿ ಕೊಂಡಿದ್ದಾರೆ.

ಯಾವುದೇ ಒಂದು ಗುಂಪಿನ ಜನರಲ್ಲಿ ಹತಾಶೆ ಮತ್ತು ದುಃಖಕ್ಕೆ ಈ ವಿವಿಧ ವಾದ–ಎಂದರೆ ಅದನ್ನು ಅಲಕ್ಷ್ಯಮಾಡುವ, ಅದನ್ನೇ ಅಡೆತಡೆಯಿಲ್ಲದೇ ತೋರಿ ಕೊಳ್ಳುವ, ಏನಾದರೊಂದು ದಾರಿಯಿಂದ ಸಮಸ್ಥಿತಿಯನ್ನು ನೆಲೆಗೊಳಿಸುವ, ಯಾವ ನನ್ನಾದರೂ ಕಾರಣವಾಗಿ ಹೆಸರಿಸಿ ಅವನನ್ನು ಶಿಕ್ಷಿಸುವ ಮತ್ತು ನಷ್ಟ ಪರಿಹಾರದ ಮೂಲಕ ಯಥಾಸ್ಥಿತಿಯನ್ನು ಸ್ಥಾಪಿಸಲು ಯತ್ನಿಸುವ -ಪ್ರತಿಕ್ರಿಯೆಗಳು ಒಗ್ಗುವಂತ ಹವರನ್ನು ಕಾಣಬಹುದು. ನಮ್ಮ ಸಮಾಜದ ಮನೋರೋಗಗಳನ್ನು ಕುರಿತ ದಾಖಲೆ-ಗಳಲ್ಲಿ ಅಂತಹ ಸನ್ನಿವೇಶವನ್ನು ಎದುರಿಸಲು ಈ ಮನೋಕ್ರಿಯೆಗಳಲ್ಲಿ ಕೆಲವು ಕೆಟ್ಟ ವೆಂದೂ, ಕೆಲವು ಒಳ್ಳೆಯವೆಂದೂ ನಿರೂಪಿಸಲಾಗಿದೆ. ಕೆಟ್ಟವುಗಳು ಮಾನಸಿಕ ಅವ್ಯ ವಸ್ಥೆಗೂ ಉನ್ಮಾದಕ್ಕೂ ದಾರಿಮಾಡಿಕೊಡುವುವೆಂದೂ, ಒಳ್ಳೆಯವು ಯಥೋಚಿತ

ವಾದ ಸಾಮಾಜಿಕ ಕ್ರಿಯೆಗೆ ದಾರಿಯಾಗುವುದೆಂದೂ ಹೇಳಲಾಗಿದೆ. ಆದರೆ ನಿರುಪಾಧಿಕ ಸೃಷ್ಟಿಯಲ್ಲಿ ಯಾವುದೋ ಒಂದು ಕೆಟ್ಟಪ್ರವೃತ್ತಿಗೂ ಮನೋವಿಕಾರಕ್ಕೂ ಪರಸ್ಪರ ಸಂಬಂಧವು ಇಲ್ಲವೆಂಬುದು ಸ್ಪಷ್ಟ. ಪ್ವೆಬ್ಲೋಗಳಲ್ಲಿ ಇರುವಂತೆ, ದುಃಖದಿಂದ ಆದಷ್ಟು ಬೇಗ ದೂರ ಸರಿದು, ಅದನ್ನು ಹಿಂದಕ್ಕೆ ತಳ್ಳುವ ಇಚ್ಛೆಯು ಸಮಾಜದ ಸಂಸ್ಥೆಗಳ ಮೂಲಕ ಮುನ್ನಡೆದು ಸಮಾಜದ ಪ್ರತಿಯೊಂದು ಮನೋಭಾವದಿಂದಲೂ ಬೆಂಬಲ ಪಡೆಯುವಂತಾದರೆ, ಅದು ವಿಕೃತ ವರ್ತನೆಯನ್ನು ಪ್ರಚೋದಿಸುವುದಿಲ್ಲ. ಪ್ವೆಬ್ಲೋಗಳು ನರವ್ಯಾಧಿ ಪೀಡಿತರಲ್ಲ. ಅವರ ಸಂಸ್ಕೃತಿಯು ಮಾನಸಿಕ ಆರೋಗ್ಯವನ್ನು ಪ್ರಚೋದಿಸುವಂತೆ ತೋರುತ್ತದೆ. ಇದೇ ರೀತಿಯಲ್ಲಿ ಕ್ವಾಕಿಯೂಟಲ್ ಜನರು ತೀವ್ರವಾಗಿ ವ್ಯಕ್ತಪಡಿಸುವ ಮನೋಭ್ರಾಂತ ಭಾವಗಳು ನಮ್ಮ ನಾಗರಿಕತೆಯಿಂದ ರೂಪಿತವಾದ ಮನೋರೋಗ ಸಿದ್ಧಾಂತಕ್ಕೆ ಅನುಸಾರವಾಗಿ 'ಕೆಟ್ಟ' ವು. ಅಂದರೆ ಹಲವು ರೀತಿಗಳಲ್ಲಿ ವ್ಯಕ್ತಿತ್ವದ ಕುಸಿತಕ್ಕೆ ಕಾರಣವಾಗುವಂತಹವು. ಆದರೆ ಕ್ವಾಕಿಯೂಟಲ್‌ಗಳಲ್ಲಿ ಅಂತಹವರು ತಮ್ಮ ಮನೋವೃತ್ತಿಯನ್ನು ಅತ್ಯಂತ ಸ್ವತಂತ್ರವಾಗಿ ವ್ಯಕ್ತಪಡಿಸಲು ಒಗ್ಗುವಂತಹ ಅವಕಾಶಪಡೆಯುತ್ತಾರೆ. ಅವರು ಕ್ವಾಕಿಯೂಟಲ್ ಸಮಾಜದಲ್ಲಿ ಮುಂದಾಳುಗಳು. ಅವರು ಆ ಸಂಸ್ಕೃತಿಯಲ್ಲಿ ಅತ್ಯುನ್ನತವಾದ ವೈಯಕ್ತಿಕ ಸಾರ್ಥಕತೆಯನ್ನು ಸಾಧಿಸಬಲ್ಲರು.

ಯಥೋಚಿತವಾದ ವೈಯಕ್ತಿಕ ಹೊಂದಾಣಿಕೆಯು ಕೆಲವು ಪ್ರೇರಣೆಗಳನ್ನು ಅನುಸರಿಸುವುದನ್ನೂ, ಇತರವುಗಳಿಂದ ದೂರವಿರುವುದನ್ನೂ ಆಧಾರಗೊಂಡಿಲ್ಲ ಎಂಬುದು ನಿಸ್ಸಂಶಯ. ಅನ್ಯೋನ್ಯತೆಯು ಬೇರೆ ದಿಕ್ಕಿನಲ್ಲಿದೆ. ಆಯಾ ಸಮಾಜದ ವಿಶಿಷ್ಟ ವರ್ತನೆಗೆ ತಮ್ಮ ಮನೋಕ್ರಿಯೆಗಳು ಒಗ್ಗಿ ಬರುವಂತಹವರು ಅದಕ್ಕೆ ಸಮೀಪವಾಗುತ್ತಾರೆ. ತಮ್ಮ ಸಂಸ್ಕೃತಿಯು ಮೈಗೂಡಿಸಿಕೊಂಡಿರುವ ವರ್ತನೆಯ ಪಿಂಡವೃತ್ತಕ್ಕೆ ಒಗ್ಗದ ಮನೋಕ್ರಿಯೆಗಳನ್ನು ಪಡೆದವರು ದಿಕ್ಕೆಡುತ್ತಾರೆ. ತಮ್ಮ ನಾಗರಿಕತೆಯ ಸಂಸ್ಥೆಗಳಿಂದ ಬೆಂಬಲ ಪಡೆಯಲಾಗದವರು ವ್ಯತಿರೇಕಿಗಳಾಗುತ್ತಾರೆ. ತಮ್ಮ ಸಂಸ್ಕೃತಿಯ ಪರಂಪರಾಗತ ವಿಧಾನಗಳಿಗೆ ಸುಲಭವಾಗಿ ಹೊಂದಿಕೊಳ್ಳಲಾಗದ ಜನರುಗಳು ಹೊರತಾದವರಾಗಿ ನಿಲ್ಲುತ್ತಾರೆ.

ಸಪ್ರಮಾಣವಾದ ಸಾಪೇಕ್ಷ ಮನೋರೋಗಾಧ್ಯಯನಕ್ಕೆ, ಈ ರೀತಿಯಾಗಿ ತಮ್ಮ ಸಂಸ್ಕೃತಿಗೆ ಯಥೋಚಿತವಾಗಿ ಹೊಂದಿಕೊಳ್ಳಲು ಶಕ್ತರಾಗದೇ ಹೋದ ವ್ಯಕ್ತಿಗಳು ಪ್ರಮುಖವಾದ ಅಧ್ಯಯನ ವಸ್ತುಗಳು. ಮನೋರೋಗಶಾಸ್ತ್ರದ ಅಧ್ಯಯನವು, ತಮಗೆ ವಿಶಿಷ್ಟವಾದ ಮನೋಕ್ರಿಯೆಗಳಿಗೆ ತಮ್ಮ ಸಮಾಜದಲ್ಲಿ ಮಾನ್ಯತೆ ದೊರೆಯದಂತಾಗಿರುವ ವ್ಯಕ್ತಿಗಳ ಅಧ್ಯಯನದಿಂದ ಆರಂಭವಾಗುವುದರ ಬದಲು, ಕೆಲವು ನಿರ್ದಿಷ್ಟ ರೋಗಚಿಹ್ನೆಗಳ ಪಟ್ಟಿಯಿಂದ ಆರಂಭವಾಗಿರುವುದರಿಂದ ಬೇಕಾದಷ್ಟು ಗೊಂದಲವುಂಟಾಗಿದೆ.

ನಾವು ವಿವರಿಸಿರುವ ಎಲ್ಲ ಬಣಗಳಲ್ಲೂ, ಆಯಾ ಸಂಸ್ಕೃತಿಗಳಲ್ಲಿ ಭಾಗವಹಿಸಲಾಗದ "ವ್ಯತಿರೇಕಿ" ವ್ಯಕ್ತಿಗಳಿದ್ದಾರೆ. ಡೋಬುವಿನಲ್ಲಿ ಸಹಜ ಸ್ನೇಹಪರನಾದ ಮತ್ತು ತನ್ನ ಕಾರ್ಯಗಳನ್ನೇ ಗುರಿಯಾಗಿ ಭಾವಿಸಿರುವ ವ್ಯಕ್ತಿಯು ಸಂಪೂರ್ಣವಾಗಿ ವಿರುದ್ಧ ದಿಕ್ಕಿಗೆ ತಿರುಗಿದವನಾಗುವನು. ಅವನು ತನ್ನ ಒಡನಾಡಿಗಳನ್ನು ಎತ್ತಿ ಹಾಕುವುದನ್ನಾಗಲಿ, ಶಿಕ್ಷಿಸುವುದನ್ನಾಗಲಿ ಬಯಸದ ಉಲ್ಲಾಸ ಜೀವಿ. ಯಾರು ಕೋರಿದರೂ ಅವರಿಗಾಗಿ ದುಡಿಯಲು, ಶ್ರಮಪಟ್ಟು ಅವರ ಆಣತಿಗಳನ್ನು ಪಾಲಿಸಲು ಅವನು ಸಿದ್ಧ. ತನ್ನ ನೆರೆಯವರಂತೆ ಅವನಿಗೆ ದುಷ್ಟ ಶಕ್ತಿಗಳ ಭಯವಿಲ್ಲ. ತನ್ನ ಸಮೀಪ ಬಂಧುಗಳಾದ ಸಹೋದರಿಯರು, ಹೆಂಡತಿಯಂತಹ ಹೆಂಗಸರುಗಳತ್ತ ಸಾರ್ವಜನಿಕವಾಗಿ ಸ್ನೇಹಭಾವ ತೋರುವ ಇಚ್ಛೆಯನ್ನು ಇತರರಂತೆ ಅವನು ಅಡಗಿಸಿಕೊಳ್ಳುವುದಿಲ್ಲ. ಕೆಲವೊಮ್ಮೆ ಇತರರೆದುರಿಗೆ ಅವರನ್ನು ಅವನು ಶ್ಲಾಘಿಸಲೂ ಸಿದ್ಧ. ಇತರ ಡೋಬುವನರಲ್ಲಾದರೆ ಅದು ಅಗೌರವದ ವರ್ತನೆಯಾದೀತು. ಆದರೆ ಅವನ ಮಟ್ಟಿಗೆ ಅದು ಪೆದ್ದು ನಡವಳಿಕೆಯಾಗಿ ಪರಿಗಣಿತವಾಗುತ್ತದೆ. ಇಡೀ ಗ್ರಾಮವೇ ಅವನನ್ನು ಕನಿಕರದಿಂದ ನೋಡುತ್ತದೆ. ಅವನ ಪೆದ್ದುತನದ ಲಾಭ ಪಡೆಯುವುದಿಲ್ಲ; ಅವನನ್ನು ಕುಚೋದ್ಯ ಮಾಡುವುದೇ ಒಂದು ಕ್ರೀಡೆಯಾಗಿ ಪರಿಗಣಿಸುವುದಿಲ್ಲ. ಅವನು ತಮ್ಮ ಆಟದಿಂದ ಹೊರಗಿದ್ದಾನೆಂದು ಭಾವಿಸುತ್ತಾರೆ.

ಡೋಬುವನ್ ಪೆದ್ದನಿಗೆ ಒಗ್ಗಿ ಬರುವ ವರ್ತನೆಯನ್ನು ನಮ್ಮ ನಾಗರಿಕತೆಯ ಕೆಲವು ಕಾಲಗಳಲ್ಲಿ ಆದರ್ಶವಾಗಿ ಪರಿಗಣಿಸಲಾಗುತ್ತಿತ್ತು. ಈಗಲೂ ಬಹುತೇಕ ಪಾಶ್ಚಿಮಾತ್ಯ ಸಮಾಜದಲ್ಲಿ ಅಂತಹ ಮನೋಕ್ರಿಯೆಗಳನ್ನು, ಕೆಲವೊಂದು ವ್ಯಕ್ತಿಗಳಲ್ಲಿ ಸಹಜವಾದುದೆಂದು ಭಾವಿಸಲಾಗುತ್ತಿದೆ. ಅದೂ ಸಂಬಂಧಪಟ್ಟ ವ್ಯಕ್ತಿಯು ಹೆಂಗಸಾದರಂತೂ ನಮ್ಮ ನೈತಿಕ ರೂಢಿಗಳಿಗನ್ವಯವಾಗಿ ಆಕೆಗೆ ಸಕಲ ಸೌಕರ್ಯಗಳೂ ದೊರೆಯುತ್ತವೆ; ಆಕೆ ತನ್ನ ಕುಟುಂಬದಲ್ಲೂ, ಸಮುದಾಯದಲ್ಲೂ ಗೌರವಾನ್ವಿತಳಾಗಿ ಬಾಳುತ್ತಾಳೆ. ಅಂದರೆ ಆ ಡೋಬುವನನು ತನ್ನ ಸಂಸ್ಕೃತಿಯಲ್ಲಿ ಕ್ರಿಯಾಶೀಲನಾಗಲು ಸಾಧ್ಯವಾಗದುದು ಅವನ ವಿಶಿಷ್ಟ ಕ್ರಿಯೆಗಳ ಪರಿಣಾಮವಲ್ಲ; ಅವಕ್ಕೂ, ಆ ಸಂಸ್ಕೃತಿಯ ರೂಪಿಕೆಗೂ ನಡುವೆ ಇದ್ದ ಅಪಾರ ಅಂತರದ ಪರಿಣಾಮ.

ಇತರ ಮಾನವ ಕುಲ ಶಾಸ್ತ್ರಜ್ಞರ ಅನುಭವವೂ ಇದೇ ಆಗಿದೆ. ಒಂದು ಸಂಸ್ಕೃತಿಯು ತಿರಸ್ಕಾರದಿಂದ ತನ್ನ ಆವರಣದ ಹೊರಗೆ ಇಡುವ ವ್ಯಕ್ತಿಗಳನ್ನು ಇನ್ನೊಂದು ಸಂಸ್ಕೃತಿಯು ಹಾಗಿಡುತ್ತಿರಲಿಲ್ಲವೆಂಬುದನ್ನು ಅವರೂ ಕಂಡಿದ್ದಾರೆ. ಮೈದಾನ ಸೀಮೆಯ ಕ್ರೋ ಇಂಡಿಯನ್ನರಲ್ಲಿ ಆ ಸಂಸ್ಕೃತಿಯ ರೀತಿಗಳ ಬಗ್ಗೆ ಅಪಾರ ಜ್ಞಾನ ಪಡೆದಿದ್ದವನೊಬ್ಬನನ್ನು ಲೋವಿ ಪತ್ತೆ ಹಚ್ಚಿದರು. ಅವನು ತನ್ನ ಸಂಸ್ಕೃ

ತಿಯ ರೀತಿಗಳನ್ನು ನಿಷ್ಪಕ್ಷಪಾತ ಭಾವದಿಂದ ನೋಡಿ, ಅದರ ವಿವಿಧ ಅಂಶಗಳ ಪರಸ್ಪರ ಸಂಬಂಧವನ್ನು ಅರಿತುಕೊಳ್ಳುವುದರಲ್ಲಿ ಆಸಕ್ತನಾಗಿದ್ದ. ವಂಶಾವಳಿಗಳ ವಿಚಾರದಲ್ಲಿ ಅವನು ಅಪಾರ ಆಸಕ್ತಿ ವಹಿಸಿದ್ದು, ಐತಿಹಾಸಿಕ ಅಂಶಗಳನ್ನು ಕುರಿತು ಅಮೂಲ್ಯವಾದ ನೆರವು ನೀಡಬಲ್ಲವನಾಗಿದ್ದ. ಒಟ್ಟಿನಲ್ಲಿ ಕ್ರೋ ಜೀವನ ವಿಧಾನದ ಬಗ್ಗೆ ಆದರ್ಶಪ್ರಾಯನಾದ ಪರಾಮರ್ಶಕನಾಗಿದ್ದ. ಆದರೆ ಅವನ ಈ ಸ್ವಭಾವ ಲಕ್ಷಣಗಳು ಕ್ರೋ ಜನರ ನಡುವೆ ಗೌರವ ಗಳಿಸುವ ದಾರಿಗಳಾಗಿರಲಿಲ್ಲ. ದೈಹಿಕವಾದ ಅಪಾಯ ಒದಗುವ ಪ್ರಸಂಗಗಳಲ್ಲಿ ಅವನು ಖಂಡಿತ ಹಿಂಜರಿಯುತ್ತಿದ್ದ. ಆದರೆ ಸಾಹಸವು ಅವರ ಬಣದ ಸಂಪನ್ನ ಗುಣ. ಅವನು ಒಂದು ಯುದ್ಧ ಗೌರವವನ್ನು ಮೋಸದಿಂದ ತನ್ನದೆಂದು ಹೇಳಿಕೊಂಡು ಹೆಸರುಗಳಿಸಲು ಪ್ರಯತ್ನಿಸಿದ್ದುದು ಪರಿಸ್ಥಿತಿಯನ್ನು ಇನ್ನೂ ಹದಗೆಡಿಸಿತ್ತು. ಅವನು ತಾನು ಹೇಳಿಕೊಂಡಂತೆ ಶತ್ರು ಶಿಬಿರದಲ್ಲಿ ಕಟ್ಟಿಹಾಕಿದ್ದ ಕುದುರೆಯೊಂದನ್ನು ಹಿಡಿದು ತಂದಿರಲಿಲ್ಲ. ಕ್ರೋ ಜನರಲ್ಲಿ ಯುದ್ಧ ಗೌರವವನ್ನು ಪಡೆಯಲು ಸುಳ್ಳು ಹೇಳುವುದು ಅಕ್ಷಮ್ಯ ಅಪರಾಧ. ಆದ್ದರಿಂದ ಜನಾಭಿಪ್ರಾಯದ ಪ್ರಕಾರ ಅವನು ಬೇಜವಾಬ್ದಾರಿಯೆಂದೂ ಅಸಮರ್ಥನೆಂದೂ ಪರಿಗಣಿತವಾಗಿಬಿಡುತ್ತಿದ್ದ. ಅದೇ ಭಾವನೆಯನ್ನು ಮೇಲಿಂದ ಮೇಲೆ ಸಮರ್ಥಿಸಲಾಗುತ್ತಿತ್ತು.

ನಮ್ಮ ನಾಗರಿಕತೆಯಲ್ಲಿ ವೈಯಕ್ತಿಕ ಸ್ವತ್ತುಗಳೇ ಪರಮೋಚ್ಚವಾದುವೆಂದು ಭಾವಿಸದೇ ಇರುವ ಮನುಷ್ಯನತ್ತ ನಾವು ತೋರುವ ಮನೋಭಾವವು ಈ ಸಂದರ್ಭಕ್ಕೆ ಸಮಾನಾಂತರವಾದುದು. ಸ್ವತ್ತುಗಳನ್ನು ಕೂಡಿಸಿಕೊಳ್ಳುವುದೇ ಸಾಕಷ್ಟು ಮಟ್ಟಿನ ಪ್ರೇರಕಶಕ್ತಿಯೆಂದು ಎಣಿಸದೇ ಇರುವವರು ನಮ್ಮ ಅಲೆಮಾರಿ ಜನರೊಂದಿಗೆ ಸೇರಿಕೊಳ್ಳುತ್ತಲೇ ಇದ್ದಾರೆ. ಈ ವ್ಯಕ್ತಿಗಳು ಅಲೆಮಾರಿಗಳೊಂದಿಗೆ ಸೇರಿಕೊಂಡರೆ ಜನಾಭಿಪ್ರಾಯವು ಅವರನ್ನು ಮುಂದೆ ಕೇಡಿಗರಾಗಬಹುದೆಂದು ಪರಿಗಣಿಸುತ್ತದೆ. ಅವರು ಸಿಕ್ಕಿಬೀಳುವ ಅಸಾಮಾಜಿಕ ಸನ್ನಿವೇಶಗಳಿಂದಾಗಿ ಅವರು ಹಾಗಾಗುವುದೂ ಉಂಟು. ಆದರೆ ಇದೇ ಜನ ತಮ್ಮ ಕಲಾಪ್ರವೃತ್ತಿಗಳನ್ನು ರೂಢಿಸಿಕೊಳ್ಳುವುದರಲ್ಲಿ ಪರಿಹಾರಮಾರ್ಗವನ್ನು ಕಂಡುಕೊಂಡು, ಸಮಾಜ ಭ್ರಷ್ಟರಾದ ಕೆಳದರ್ಜೆಯ ಕಲಾವಿದರ ಗುಂಪುಗಳಿಗೆ ಸೇರಿಕೊಂಡರೆ ಜನಾಭಿಪ್ರಾಯವು ಅವರನ್ನು ಕೇಡಿಗರೆಂದೆಣಿಸದೇ, ಪೆದ್ದರೆಂದು ಭಾವಿಸುತ್ತದೆ. ಎರಡು ಪ್ರಸಂಗಗಳಲ್ಲೂ ಅವರು ತಮ್ಮ ಸಮಾಜದ ರೂಢಿಗಳಿಂದ ಬೆಂಬಲವಿಲ್ಲದವರಾಗುವರು. ತಮ್ಮ ಸಾಮರ್ಥ್ಯವನ್ನು ತೃಪ್ತಿಕರವಾಗಿ ಪ್ರದರ್ಶಿಸುವುದು, ಸಾಧಾರಣತಃ ಅವರ ಶಕ್ತಿಗೆ ಮೀರಿದ್ದಾಗಿ ಬಿಡುತ್ತದೆ.

ಅಂತಹ ವ್ಯಕ್ತಿಯ ಉಭಯ ಸಂಕಟವನ್ನು ಅವನಲ್ಲಿ ಪ್ರಬಲವಾಗಿರುವ ಸಹಜ ಪ್ರವೃತ್ತಿಗಳಿಗೆ ತೀವ್ರಾಘಾತ ಉಂಟುಮಾಡುವುದರಿಂದ ಹಾಗೂ ಆ ಸಂಸ್ಕೃತಿಯು ಗೌರವಿಸುವ ಪಾತ್ರವನ್ನು ಒಪ್ಪಿಕೊಳ್ಳುವಂತೆ ಮಾಡುವುದರಿಂದ ಬಹು ಯಶಸ್ವಿಯಾಗಿ ಪರಿಹರಿಸಬಹುದು. ಸಾಮಾಜಿಕ ಮಾನ್ಯತೆಯು ಅವಶ್ಯಕವೆಂದು ಭಾವಿಸುವವನಿಗಂತೂ ಸಾಧಾರಣವಾಗಿ ಅದೊಂದೇ ಮಾರ್ಗ. ಜುನಿಗಳಲ್ಲಿ ಅತ್ಯಂತ ಸಮರ್ಥ ವ್ಯಕ್ತಿಯೊಬ್ಬನು ಈ ಅನಿವಾರ್ಯವನ್ನು ಒಪ್ಪಿಕೊಂಡಿದ್ದನು. ಯಾವುದೇ ರೀತಿಯ ಅಧಿಕಾರ ಸ್ಥಾನವನ್ನೂ ಸಂಶಯದಿಂದ ನೋಡುವ ಆ ಸಮಾಜದಲ್ಲಿ, ಅವನು ತನ್ನಲ್ಲಿದ್ದ ಆಕರ್ಷಕ ವ್ಯಕ್ತಿತ್ವದಿಂದ ಯಾವುದೇ ಗುಂಪಿನಲ್ಲೂ ಎದ್ದು ಕಾಣುತ್ತಿದ್ದನು. ಇತಿಮಿತಿ ಮತ್ತು ಸುಲಭಮಾರ್ಗವನ್ನು ಎತ್ತಿ ಹಿಡಿಯುವ ಆ ಸಮಾಜದಲ್ಲಿ ಎದುರು ಬೀಳುವ ಸ್ವಭಾವದವನಾಗಿದ್ದು ಸಂದರ್ಭ ಒದಗಿದಾಗ ಹೊಡೆದಾಡಲು ಹಿಂಜರಿಯುತ್ತಿರಲಿಲ್ಲ. ಸ್ನೇಹ ಪರತೆಯಿಂದ ಧಾರಾಳವಾಗಿ ಮಾತನಾಡುವ ನಮ್ರ ವ್ಯಕ್ತಿಯನ್ನು ಹೊಗಳುವ ಆ ಸಮಾಜದಲ್ಲಿ ಅವನು ಬಿಗುಮಾನದಿಂದ ಪ್ರತ್ಯೇಕವಾಗಿರುತ್ತಿದ್ದನು. ಅಂತಹ ವ್ಯಕ್ತಿತ್ವವುಳ್ಳವರನ್ನು ಮಾಟಗಾರರೆಂದು ಆಪಾದಿಸುವುದು ಜುನಿಗಳು ತೋರುವ ಏಕೈಕ ಪ್ರತಿಕ್ರಿಯೆ. ಅವನು ಒಮ್ಮೆ ಕಿಟಕಿಯ ಆಚೆಯಿಂದ ಮನೆಯೊಳಕ್ಕೆ ಇಣಿಕಿ ನೋಡುತ್ತಿದ್ದನಂತೆ. ಅದು ಮಾಟಗಾರರನ್ನು ಗುರುತು ಹಚ್ಚಲು ಖಂಡಿತವಾದ ಕುರುಹು. ಅವನು ಒಂದು ದಿನ ಕುಡಿದು ಮತ್ತೇರಿದಾಗ, ತನ್ನನ್ನು ಅವರ್‍ಯಾರೂ ಕೊಲ್ಲಲಾರರೆಂದು ಬಡಾಯಿ ಹೊಡೆದನು. ಅವನನ್ನು ಯುದ್ಧ ಪಂಥದ ಪುರೋಹಿತರ ಮುಂದಕ್ಕೆ ಎಳೆದೊಯ್ಯಲಾಯಿತು. ಅವನು ತಾನು ಮಾಟಗಾರನೆಂದು ಒಪ್ಪಿಕೊಳ್ಳುವವರೆಗೆ ಒಂದು ತೊಲೆಗೆ ಅವನ ಹೆಬ್ಬೆರಳುಗಳ ಮೂಲಕ ಅವನನ್ನು ನೇಣು ಕಟ್ಟಲಾಯಿತು. ಮಾಟಗಾರಿಕೆಯ ಆಪಾದನೆ ಮಾಡಲ್ಪಟ್ಟಾಗ ಇದು ರೂಢಿಯಿಂದ ಬಂದ ಕ್ರಮ. ಆದರೆ ಅವನು ಒಬ್ಬ ಸುದ್ದಿಗಾರನನ್ನು ಸರ್ಕಾರಿ ಪಡೆಗಳಿದ್ದಲ್ಲಿಗೆ ಕಳುಹಿಸಿದನು. ಸರ್ಕಾರಿ ಪಡೆಗಳು ಬರುವಾಗ್ಗೆ ಅವನ ಭುಜಗಳು ಸರಿಪಡಿಸಲಾಗದಂತೆ ಊನವಾಗಿ ಹೋಗಿದ್ದುವು. ಕಾನೂನು ಪಾಲಕನಾದ ಅಧಿಕಾರಿಗೆ, ಅಂತಹ ಒಂದು ಪಾತಕಕ್ಕಾಗಿ ಯುದ್ಧ ಪಂಥದ ಪುರೋಹಿತರನ್ನು ಬಂಧಿಸುವುದರ ಹೊರತು ಬೇರೆ ದಾರಿಯಿರಲಿಲ್ಲ. ಬಂಧನಕ್ಕೊಳಗಾದ ಯುದ್ಧ ಪಂಥದ ಪುರೋಹಿತರಲ್ಲಿ ಒಬ್ಬಾತನು ಜುನಿಗಳ ಈಚಿನ ಇತಿಹಾಸದಲ್ಲಿ ಪ್ರಾಯಶಃ ಅತ್ಯಂತ ಗೌರವಕ್ಕೆ ಪಾತ್ರನಾದವನೂ ಪ್ರಮುಖನೂ ಆಗಿದ್ದ ವ್ಯಕ್ತಿ. ಅವನು ಸರ್ಕಾರದ ಸೆರೆಮನೆಯಲ್ಲಿದ್ದು ಹಿಂತಿರುಗಿದ ಮೇಲೆ ತನ್ನ ಪೌರೋಹಿತ್ಯದ ಅಧಿಕಾರವನ್ನು ಮತ್ತೆ ವಹಿಸಿಕೊಳ್ಳಲಿಲ್ಲ. ತನ್ನ ಶಕ್ತಿ ಮುರಿದು ಹೋಯಿತು ಎಂದು ಆತನ ಭಾವನೆ. ಜುನಿ ಇತಿಹಾಸದಲ್ಲಿ ಪ್ರಾಯಶಃ ಇದು ಸಾಟಿಯಿಲ್ಲದಂತಹ ಒಂದು ಪ್ರತೀಕಾರವಾಗಿದ್ದಿರಬೇಕು. ಇದರಿಂದ ಪುರೋ

ಹಿತ ಪಂಥಗಳಿಗೆ ಸವಾಲು ಹಾಕಿದಂತಾಯಿತು. ತನ್ನ ಕೃತ್ಯದಿಂದ ಮಾಟಗಾರನು ಬಹಿರಂಗವಾಗಿ ಅವರನ್ನು ಎದುರಿಸಿ ನಿಂತಂತೆಯೂ ಆಯಿತು.

ಈ ಉಲ್ಲಂಘನೆಯನಂತರ ಮುಂದಿನ ನಲವತ್ತು ವರ್ಷಗಳಲ್ಲಿ ಆ ಮಾಟಗಾರಿಕೆಯ ಆಪಾದನೆಗೆ ಗುರಿಯಾದಾತನ ಜೀವನವು ಹಿಡಿದ ದಾರಿಯನ್ನು ಸುಲಭವಾಗಿ ಊಹಿಸುವುದು ಅಸಾಧ್ಯ. ಶಿಕ್ಷೆಗೆ ಗುರಿಯಾದ ಕಾರಣದಿಂದ ಮಾಟಗಾರನನ್ನು ವಿವಿಧ ಪಂಥಗಳ ಗುಂಪುಗಳ ಸದಸ್ಯತ್ವದಿಂದ ಹೊರಗಿಡುವುದಿಲ್ಲ. ಸಮಾಜದಲ್ಲಿ ಸ್ಥಾನಗಳಿಸಲು ಅಂತಹ ಚಟುವಟಿಕೆಗಳಲ್ಲಿ ಪಾಲುಗೊಳ್ಳುವುದೊಂದೇ ದಾರಿ. ಅವನಿಗೆ ತೀಕ್ಷ್ಣವಾದ ಜ್ಞಾಪಕ ಶಕ್ತಿಯಿತ್ತು; ಇಂಪಾದ ಧ್ವನಿಯಿತ್ತು. ಅವನು ಊಹೆಗೂ ಎಟುಕದಷ್ಟು ಪ್ರಮಾಣದ ಪುರಾಣ ಐತಿಹ್ಯಗಳು, ಗೂಢವಾದ ಮಂತ್ರ ವಿಧಿಗಳು, ಪಂಥಗೀತೆಗಳು ಇವನ್ನೆಲ್ಲಾ ಕಲಿತ. ಅವನು ತೀರಿಹೋಗುವ ಮೊದಲು ಅವನು ಹೇಳಿದ ನೂರಾರು ಪುಟಗಳಷ್ಟು ಕತೆಗಳು ಹಾಗೂ ಸಂಸ್ಕಾರ ಸಂಬಂಧವಾದ ಕಾವ್ಯವನ್ನು ಬರೆದಿಟ್ಟು ಕೊಳ್ಳಲಾಯಿತು. ಅವನು ತನಗೆ ತಿಳಿದಿರುವ ಹಾಡುಗಳು ಇನ್ನೂ ಬೇಕಾದ ಹಾಗಿವೆ ಯೆಂದು ಹೇಳುತ್ತಿದ್ದ. ಅವನು ಉತ್ಸವ ಜೀವನದ ಒಂದು ಅನಿವಾರ್ಯ ಅಂಗವಾದ. ತೀರಿಹೋಗುವ ಮೊದಲು ಜುನಿಪ್ರದೇಶದ ಗವರ್ನರಾದ. ಅವನ ವ್ಯಕ್ತಿತ್ವದ ಸಹಜ ಒಲವು ಅವನನ್ನು ತನ್ನ ಸಮಾಜದೊಂದಿಗೆ ಬದ್ಧ ವಿರೋಧಕ್ಕೆ ಗುರಿಮಾಡಿತು. ಅವನು ಆ ಉಭಯ ಸಂಕಟವನ್ನು ತನ್ನಲ್ಲಿ ಹುದುಗಿದ್ದ ಒಂದು ಪ್ರಾಸಂಗಿಕ ಕಲಾ ಸಾಮರ್ಥ್ಯವನ್ನು ಬಳಸಿ ನಿವಾರಿಸಿಕೊಂಡ. ಅವನು ಸಂತೋಷ ಜೀವಿಯಾಗಿರಲಿಲ್ಲ ಎಂಬುದು ಯಾರಾದರೂ ಊಹಿಸಬಹುದಾದ ವಿಷಯ. ಅವನು ಜುನಿಯ ಗವರ್ನ ರಾಗಿದ್ದರೂ, ತನ್ನ ಪಂಥದ ಗುಂಪುಗಳಲ್ಲಿ ಹಿರಿಯ ಸ್ಥಾನಗಳನ್ನು ಪಡೆದಿದ್ದರೂ, ತನ್ನ ಸಮುದಾಯದಲ್ಲಿ ಎದ್ದು ಕಾಣುವ ಮನುಷ್ಯನಾಗಿದ್ದರೂ, ಮರಣ ಭೀತಿಗೆ ಗುರಿ ಯಾಗಿದ್ದ. ಸೌಮ್ಯ ಸಂತೋಷ ಜೀವಿಗಳಾದ ತನ್ನ ಜನರ ನಡುವೆ ಅವನು ಸುಖ ವಂಚಿತನಾಗಿದ್ದ.

ಇದೇ ವ್ಯಕ್ತಿ, ಮೈದಾನ ಸೀಮೆಯ ಇಂಡಿಯನ್ನರ ನಡುವೆ ಸಮಾಜದ ಸಂಸ್ಥೆಗಳೆಲ್ಲವೂ ಅವನಿಗೆ ಸಹಜವಾಗಿದ್ದ ಸ್ವಭಾವಲಕ್ಷಣಗಳಿಗೆ ಅನುಕೂಲವಾಗಿದ್ದ ಜಾಗದಲ್ಲಿ ಜನಿಸಿದ್ದರೆ ಅವನ ಜೀವನವು ಏನಾಗುತ್ತಿತ್ತೆಂಬುದನ್ನು ಊಹಿಸಿಕೊಳ್ಳುವುದು ಸುಲಭ. ವೈಯಕ್ತಿಕವಾದ ಅಧಿಕಾರ, ದರ್ಪ, ದುರ್ದಮ್ಯತೆ, ಇತರರನ್ನು ಧಿಕ್ಕರಿಸುವುದು ಮೊದಲಾದುವೆಲ್ಲವೂ ಅವನು ಜೀವನದ ಯಾವ ಮಾರ್ಗ ಹಿಡಿದಿದ್ದರೂ ಅಲ್ಲಿ ಅವನಿಗೆ ಗೌರವ ಗಳಿಸಿಕೊಡುತ್ತಿದ್ದುವು. ಜುನಿಗಳ ಗವರ್ನರಾಗಿ, ಯಶಸ್ವಿಯಾದ ಪುರೋಹಿತನಾಗಿದ್ದರೂ ಅವನ ಸ್ವಭಾವದಿಂದ ಅಸಂತೋಷವನ್ನು

ಬೇರ್ಪಡಿಸಲಾಗುತ್ತಿರಲಿಲ್ಲ. ಅವನು ಚಿಯೆನ್ನೆಗಳ ಯುದ್ಧನಾಯಕನಾಗಿದ್ದಿದ್ದರೆ ಅಸಂತೋಷಕ್ಕೆ ಎಡೆಯಿರುತ್ತಿರಲಿಲ್ಲ. ಅವನ ಅಸಂತೋಷಕ್ಕೆ ಅವನ ಸ್ವಭಾವಜನ್ಯ ಸ್ವಭಾವಲಕ್ಷಣಗಳು ಕಾರಣವಲ್ಲ; ತನ್ನ ಸಂಸ್ಕೃತಿಯ ಆದರ್ಶಗಳಲ್ಲಿ ಅವನ ಸಹಜ ಪ್ರವೃತ್ತಿಗಳು ವ್ಯಕ್ತಗೊಳ್ಳಲು ದಾರಿಯಿಲ್ಲದಿದ್ದುದು.

ನಾವು ಇದುವರೆಗೆ ವಿವರಿಸಿದ ವ್ಯಕ್ತಿಗಳು ಯಾವ ದೃಷ್ಟಿಯಿಂದಲೂ ಮನೋರೋಗಿಗಳಲ್ಲ. ಒಬ್ಬ ವ್ಯಕ್ತಿಗೆ ಒಗ್ಗಿ ಬರುವ ಪ್ರೇರಣೆಗಳಿಗೆ ಅವನ ಸಂಸ್ಕೃತಿಯ ಸಂಸ್ಥೆಗಳಲ್ಲಿ ಅವಕಾಶ ದೊರೆಯದೇ ಹೋದಾಗ ಉಂಟಾಗುವ ಉಭಯ ಸಂಕಟಕ್ಕೆ ಅವರು ನಿದರ್ಶನ. ಸಂಬಂಧಪಟ್ಟ ವರ್ತನೆಯು ಸಮಾಜವೊಂದರಲ್ಲಿ ಸ್ಪಷ್ಟವಾಗಿ ಅಸಾಮಾನ್ಯವೆಂದು ಪರಿಗಣಿತವಾದಾಗ ಈ ಉಭಯ ಸಂಕಟವು ಮನೋವ್ಯಾಧಿ ಸಂಬಂಧವಾದ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಪಾಶ್ಚಿಮಾತ್ಯ ನಾಗರಿಕತೆಯು ಅಲ್ಪ ಪ್ರಮಾಣದ ಸ್ವಲಿಂಗಾನುರಕ್ತನನ್ನು ಸಹ ಅತಿರೇಕಿಯೆಂದು ಪರಿಗಣಿಸುತ್ತದೆ. ಸ್ವಲಿಂಗಾನುರಕ್ತಿಯ ರೋಗಮಾಪಕ ಚಿತ್ರಣಗಳು, ಅದು ಉಂಟು ಮಾಡುವ ನರವ್ಯಾಧಿಗಳನ್ನೂ ಮನೋವಿಕಾರಗಳನ್ನೂ ಒತ್ತಿ ಹೇಳಿ, ಅಷ್ಟೇ ಮಟ್ಟಿಗೆ ಸಲಿಂಗಕಾಮಿಯ ಕ್ರಿಯಾಶೀಲತೆಯ ನ್ಯೂನತೆಗಳನ್ನೂ ಅವನ ವರ್ತನೆಯನ್ನೂ ವಿವರಿಸುತ್ತವೆ. ನಾವು ಇತರ ಸಂಸ್ಕೃತಿಗಳತ್ತ ಕಣ್ಣು ಹಾಯಿಸಿದರೆ, ಸ್ವಲಿಂಗಾನುರಕ್ತರು ಸಾಮಾಜಿಕ ಸನ್ನಿವೇಶಗಳಿಗೆ ಇದೇ ರೀತಿಯಲ್ಲಿ ಸೂಕ್ತರಲ್ಲವೆಂದು ಪರಿಗಣಿತರಾಗಿಲ್ಲವೆಂಬುದು ಸ್ಪಷ್ಟಗೊಳ್ಳುತ್ತದೆ. ಅವರು ಎಲ್ಲ ಸಂದರ್ಭಗಳಲ್ಲೂ ಕ್ರಿಯಾಶೀಲರಾಗುವುದರಲ್ಲಿ ಸೋತಿಲ್ಲ. ಕೆಲವು ಸಮಾಜಗಳಲ್ಲಿಯಂತೂ ಅವರನ್ನು ವಿಶೇಷವಾಗಿ ಪ್ರಶಂಸಿಸಲಾಗಿದೆ. ಪ್ಲೇಟೋವಿನ 'ರಿಪಬ್ಲಿಕ್' ಅಂತೂ ಸ್ವಲಿಂಗಾನುರಕ್ತಿಯ ಗೌರವಾನ್ವಿತ ಸ್ಥಾನವನ್ನು ಕುರಿತ ಅತ್ಯಂತ ಮುಂದಟ್ಟಾದ ನಿರೂಪಣೆ. ಉತ್ತಮ ಜೀವನದ ಹೆದ್ದಾರಿಗಳಲ್ಲೊಂದಾಗಿ ಅದನ್ನು ನಿರೂಪಿಸಲಾಗಿದೆ. ಈ ಮನೋಕ್ರಿಯೆಯನ್ನು ಕುರಿತು ಪ್ಲೇಟೋ ನೀಡಿದ ಉನ್ನತ ನೈತಿಕ ಮೌಲ್ಯಮಾಪನಕ್ಕೆ ಅವನ ಕಾಲದ ಗ್ರೀಸಿನ ರೂಢಿಬದ್ಧ ವರ್ತನೆಯು ಸಮರ್ಥನೆ ನೀಡಿತ್ತು.

ಅಮೆರಿಕದ ಇಂಡಿಯನ್ನರು ಸ್ವಲಿಂಗಾನುರಕ್ತಿಗೆ ಪ್ಲೇಟೋ ನೀಡಿರುವಂತೆ ಉನ್ನತ ನೈತಿಕ ಸಮರ್ಥನೆಯನ್ನು ನೀಡುವುದಿಲ್ಲವಾದರೂ, ಬಹುಮಟ್ಟಿಗೆ ಸಲಿಂಗಕಾಮಿಗಳನ್ನು ಅಪೂರ್ವ ಸಾಮರ್ಥ್ಯ ಉಳ್ಳವರೆಂದು ಪರಿಗಣಿಸಿದ್ದಾರೆ. ಉತ್ತರ ಅಮೆರಿಕದ ಬಹುಭಾಗದಲ್ಲಿ 'ಬೆರ್ಡಾಚೆ' ಎಂದು ಫ್ರೆಂಚರು ಕರೆಯುವ ಸಂಸ್ಥೆ ಪ್ರಚಲಿತವಾಗಿದೆ. ಈ ಶಿಖಂಡಿಗಳು ಗಂಡಸರಾಗಿದ್ದು ಪ್ರೌಢಾವಸ್ಥೆಗೆ ಬಂದಾಗಲೋ, ಅನಂತರವೋ ಹೆಂಗಸರ ಉಡುಗೆತೊಡುಗೆಗಳನ್ನೂ, ವೃತ್ತಿಗಳನ್ನೂ ಕೈಗೊಂಡವರು. ಕೆಲವೊಮ್ಮೆ ಅವರು ಗಂಡಸರನ್ನೇ ಮದುವೆಯಾಗಿ ಬಾಳಿದುದೂ ಉಂಟು. ಅವರು ಕೆಲವೊಮ್ಮೆ ಸಲಿಂಗ

ಕಾಮಿಗಳಾದಿರದೆ, ತಮ್ಮ ಲೈಂಗಿಕ ಸಾಮರ್ಥ್ಯವು ದುರ್ಬಲವಾಗಿರುವುದರಿಂದಾಗಿ ಹೆಂಗಸರಿಂದ ಅವಹೇಳನೆಯನ್ನು ತಪ್ಪಿಸಿಕೊಳ್ಳಲು ಆ ವೇಷ ಧರಿಸುತ್ತಾರೆ. ಸೈಬೀರಿಯಾದಲ್ಲಿ ಗಂಡುಹೆಂಗಸರು ಉನ್ನತಮಟ್ಟದ ದೈವೀಕ ಪ್ರಭಾವವುಳ್ಳವರಾಗಿ ಪರಿಗಣಿತರಾಗಿರುವಂತೆ ಬೆರ್ಡಾಚೆಗಳು ಪರಿಗಣಿತರಾಗಿಲ್ಲ. ಅವರು ಹೆಂಗಸರ ವೃತ್ತಿಗಳಲ್ಲಿ ಮುಖಂಡರಾಗಿಯೂ, ಕೆಲವು ಕಾಯಿಲೆಗಳಿಗೆ ಉತ್ತಮ ಚಿಕಿತ್ಸಕರಾಗಿಯೂ ಹೆಸರಾಗಿದ್ದಾರೆ. ಕೆಲವು ಬಣಗಳಲ್ಲಿ ಸಾಮಾಜಿಕ ವ್ಯವಹಾರಗಳ ದಕ್ಷ ನಿರ್ವಾಹಕರಾಗಿ ಪರಿಗಣಿತರಾಗಿದ್ದಾರೆ. ಅವರಿಗೆ ಸಮಾಜವು ಯಾವುದೇ ಸ್ಥಾನ ನೀಡಿದ್ದರೂ ಸಾಧಾರಣವಾಗಿ ಜನರು ಅವರನ್ನು ಒಂದು ರೀತಿಯ ಮುಜಗರದಿಂದಲೇ ನೋಡುತ್ತಾರೆ. ಗಂಡಸೆಂದು ತಿಳಿದೂ ತಿಳಿದೂ, ಜುನಿಗಳಲ್ಲಿರುವ ರೂಢಿಯಂತೆ ಆ ವ್ಯಕ್ತಿ ತೀರಿಕೊಂಡಾಗ ಸ್ಮಶಾನದ ಗಂಡಸರ ವಿಭಾಗದಲ್ಲಿ ಸಮಾಧಿಯಾಗುತ್ತಾನೆಂದು ಅರಿತೂ, ಆ ವ್ಯಕ್ತಿಯನ್ನು 'ಅವಳು' ಎಂದು ಕರೆಯುವುದು ಸ್ವಲ್ಪಮಟ್ಟಿಗೆ ಹಾಸ್ಯಾಸ್ಪದ. ಅದೇನೇ ಆದರೂ ಸಾಮಾಜಿಕವಾಗಿ ಅವರಿಗೆ ಒಂದು ಸ್ಥಾನವಿದೆ. ಬಹುತೇಕ ಬಣಗಳಲ್ಲಿ, ಹೆಂಗಸರ ವೃತ್ತಿಗಳನ್ನು ಕೈಗೊಂಡ ಗಂಡಸರು ತಮ್ಮ ಶಕ್ತಿ ಮತ್ತು ಮುಂದುವರಿಕೆಯ ಕಾರಣದಿಂದ ಅವುಗಳಲ್ಲಿ ಅತಿಸಮರ್ಥರಾಗುತ್ತಾರೆ ಎಂಬ ವಿಚಾರಕ್ಕೆ ಹೆಚ್ಚು ಪ್ರಾಧಾನ್ಯತೆಯಿದೆ. ಅದರಿಂದಾಗಿ ಅವರು ಹೆಂಗಸರ ವೃತ್ತಿ ವಿಧಾನಗಳಲ್ಲಿ ಮುಂದಾಳುಗಳಾದಿ, ಹೆಂಗಸರು ಕೂಡಿಸಿಕೊಳ್ಳಬಹುದಾದ ಸ್ವತ್ತುಗಳನ್ನು ಸಂಗ್ರಹಿಸಿಕೊಳ್ಳುವುದರಲ್ಲಿಯೂ ಮುಂದಿರುತ್ತಾರೆ. ಒಂದು ತಲೆಮಾರಿನ ಹಿಂದೆ ಜುನಿಗಳಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದ ವ್ಯಕ್ತಿಗಳಲ್ಲಿ 'ವೆವ್ಹಾ' ಎಂಬ ಶಿಖಂಡಿಯೂ ಸೇರಿದ್ದನು. ಅವನ ಸ್ನೇಹಿತೆಯಾದ ಶ್ರೀಮತಿ ಸ್ಟೀವನ್‌ಸನ್ ಅವನನ್ನು ಕುರಿತು, 'ಮಾನಸಿಕವಾಗಿ ಹಾಗೂ ದೈಹಿಕವಾಗಿ ಜುನಿಗಳಲ್ಲಿ ಅತ್ಯಂತ ಬಲಶಾಲಿ ವ್ಯಕ್ತಿ' ಎಂದಿದ್ದಾರೆ. ಮಂತ್ರವಿಧಿಗಳ ವಿಷಯದಲ್ಲಿ ಅವನಿಗಿದ್ದ ಅಸಾಧಾರಣ ಜ್ಞಾಪಕಶಕ್ತಿಯಿಂದಾದಿ ಉತ್ಸವ ಸಮಾರಂಭಗಳಲ್ಲಿ ಆತ ಒಬ್ಬ ಪ್ರಮುಖ ವ್ಯಕ್ತಿಯಾಗುತ್ತಿದ್ದ. ಅವನು ತನ್ನ ಶಕ್ತಿ ಮತ್ತು ಜಾಣ್ಮೆಗಳಿಂದ ನಾನಾ ತೆರನಾದ ಕುಶಲ ವೃತ್ತಿಗಳಲ್ಲಿ ಮುಂದಾಳಾಗಿದ್ದ.

ಜುನಿಗಳಲ್ಲಿ ಎಲ್ಲ ಶಿಖಂಡಿಗಳೂ ಶಕ್ತಿಶಾಲಿಗಳೂ, ಆತ್ಮವಿಶ್ವಾಸಿಗಳೂ ಆಗಿಲ್ಲ. ಅವರಲ್ಲಿ ಕೆಲವರು, ತಾವು ಗಂಡಸರ ಚಟುವಟಿಕೆಗಳಲ್ಲಿ ಭಾಗವಹಿಸಲು ಅಸಮರ್ಥರಾದ್ದರಿಂದ ಈ ಅಸರೆ ಪಡೆದಿರುತ್ತಾರೆ. ಅವರಲ್ಲಿ ಒಬ್ಬನಂತೂ ತಿಳಿಗೇಡಿ. ಇನ್ನೊಬ್ಬ ಹೆಣ್ಣು ಹುಡುಗಿಯರಂತೆ ಕೋಮಲವಾದ ಲಕ್ಷಣಗಳುಳ್ಳ ಹುಡುಗ ; ಜುನಿಗಳಲ್ಲಿ ಒಬ್ಬ ವ್ಯಕ್ತಿಯು ಬೆರ್ಡಾಚೆಯಾಗಲು ವಿವಿಧವಾದ ಕಾರಣಗಳಿರುತ್ತವೆಂಬುದು ನಿಜ. ಆದರೆ ಕಾರಣ ಯಾವುದೇ ಇರಲಿ, ಬಹಿರಂಗವಾಗಿ ಹೆಂಗಸರ ವೇಷ ಭೂಷಣಗಳನ್ನು ಧರಿಸಿದ ಗಂಡಸು, ಸಮಾಜದ ಕ್ರಿಯಾಶೀಲ ಸದಸ್ಯನಂತೆ ತನ್ನನ್ನು ನೆಲೆಗೊಳಿಸಿಕೊಳ್ಳಲು ಇತರ

ವ್ಯಕ್ತಿಗಳಷ್ಟೇ ಅವಕಾಶ ಪಡೆದಿದ್ದಾನೆ. ಅವರ ನಡೆವಳಿಕೆಗೆ ಸಾಮಾಜಿಕ ಮಾನ್ಯತೆಯಿದೆ. ಅವರಲ್ಲಿ ಸಹಜವಾದ ಸಾಮರ್ಥ್ಯವಿದ್ದರೆ ಅದಕ್ಕೆ ಅವಕಾಶವಿದೆ. ಅವರು ದುರ್ಬಲರಾದ ವ್ಯಕ್ತಿಗಳಾದರೆ, ಅವರು ತಮ್ಮ ಸ್ವಭಾವ ದೌರ್ಬಲ್ಯದಿಂದ ಅಯಶಸ್ವಿಗಳಾಗುತ್ತಾರೆ; ನಪುಂಸಕರು ಎಂಬ ಕಾರಣದಿಂದಲ್ಲ.

ಇಂಡಿಯನ್ನರ ಈ ಬೆರ್ಡಾಚೆ ಸಂಸ್ಥೆಯು ಮೈದಾನ ಸೀಮೆಯಲ್ಲಿ ಪ್ರಬಲವಾಗಿತ್ತು. ಡಕೋಟಗಳಲ್ಲಿ 'ಬೆರ್ಡಾಚೆಯ ಹಾಗೆ ಸೊಗಸಾದ ಪರಿಕರಗಳುಳ್ಳವಳು' ಎಂಬ ಗಾದೆ ರೂಢಿಯಲ್ಲಿತ್ತು. ಯಾವಳಾದರೂ ಹೆಂಗಸಿನ ಗೃಹಕೃತ್ಯದ ಪರಿಕರಗಳ ಬಗ್ಗೆ ಮೆಚ್ಚುಗೆಗೆ ಇದು ಪರ್ಯಾಯವಾಗಿ ಬಳಕೆಯಾಗುತ್ತಿತ್ತು. ಬೆರ್ಡಾಚೆಯು ಬಿಲ್ಲಿಗೆ ಎರಡು ಹೆದೆಗಳು. ಹೆಂಗಸರ ಕಾರ್ಯ ವಿಧಾನಗಳಲ್ಲಿ ಅವನು ಸಮರ್ಥ, ಅಂತೆಯೇ ಗಂಡಸಿನ ಚಟುವಟಿಕೆಯಾದ ಬೇಟೆಯಿಂದಲೂ ತನ್ನ ಪರಿವಾರವನ್ನು ಸಾಕಲು ಸಮರ್ಥ. ಆದ್ದರಿಂದ ಅವನಿಗಿಂತ ಶ್ರೀಮಂತರಿಲ್ಲ. ಉತ್ಸವ ಸಮಾರಂಭಗಳಿಗಾಗಿ ಅತ್ಯಂತ ಕುಶಲವಾದ ಮಣಿ ಒಡವೆಗಳೋ, ಇಲ್ಲವೇ ಅಲಂಕೃತವಾದ ಚರ್ಮವೋ ಬೇಕಾದಾಗ ಇತರರಿಗಿಂತ ಬೆರ್ಡಾಚೆಯ ಕುಶಲಕಾರ್ಯವೇ ಬಹಳವಾಗಿ ಬೇಡಿಕೆಯಲ್ಲಿರುತ್ತಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಅವನು ಸಾಮಾಜಿಕವಾಗಿ ಉಪಯುಕ್ತನೆಂಬುದಕ್ಕೆ ಪ್ರಾಮುಖ್ಯತೆ ದೊರೆಯುತ್ತಿತ್ತು. ಜುನಿಗಳಲ್ಲಿದ್ದಂತೆ ಅವರಲ್ಲೂ ಬೆರ್ಡಾಚೆಯತ್ತ ತಳೆಯುತ್ತಿದ್ದ ಮನೋಭಾವವು ದ್ವಂದ್ವಾತ್ಮಕವಾಗಿಯೂ, ಸುಸ್ಪಷ್ಟವಾದ ಒಂದು ಅಸಮಂಜಸತೆಯತ್ತ ತೋರುತ್ತಿದ್ದ ಮುಜುಗರದಿಂದ ಕೂಡಿಯೂ ಇರುತ್ತಿತ್ತು. ಸಾಮಾಜಿಕ ಧಿಕ್ಕಾರ ಬೆರ್ಡಾಚೆಯನ್ನು ಕುರಿತುದಲ್ಲ; ಅವನೊಂದಿಗೆ ಬಾಳುವೆ ನಡೆಸುತ್ತಿದ್ದ ಗಂಡಸಿನತ್ತ ಸೂಚಿತವಾಗುತ್ತಿತ್ತು. ಆ ಗಂಡಸು ತಮ್ಮ ಸಂಸ್ಕೃತಿಯಲ್ಲಿ ಮಾನ್ಯತೆಗಳಿಸಿದ್ದ ಗುರಿಗಳತ್ತ ಸಾಗುವುದನ್ನು ಬಿಟ್ಟು ಸುಲಭಮಾರ್ಗ ಹಿಡಿದಿದ್ದ ದುರ್ಬಲ ವ್ಯಕ್ತಿಯೆಂದು ಪರಿಗಣಿತನಾಗಿದ್ದ. ಈಗಾಗಲೇ ಬೆರ್ಡಾಚೆಯು ಶ್ರಮವೊಂದರಿಂದಲೇ ಇತರ ಎಲ್ಲ ಮನೆವಾರ್ತೆಗಳಿಗೆ ಮಾಲಿಯಾಗಿದ್ದ ತನ್ನ ಮನೆವಾರ್ತೆಗೆ ಅವನು ಏನೂ ಸಲ್ಲಿಸುತ್ತಿರಲಿಲ್ಲ. ಅವನನ್ನು ಕುರಿತು ತೀರ್ಪಿಗೆ ಬರುವಾಗ ಅವನ ಲೈಂಗಿಕ ಹೊಂದಾಣಿಕೆಯೊಂದನ್ನೇ ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಆರ್ಥಿಕ ಹೊಂದಾಣಿಕೆಯ ಆಧಾರದಿಂದ ಅವನು ಭ್ರಷ್ಟನಾಗಿ ಪರಿಗಣಿತನಾಗುತ್ತಿದ್ದ.

ಸ್ವಲಿಂಗಾನುರಕ್ತಿಯ ಪ್ರತಿಕ್ರಿಯೆಯೇ ವಕ್ರತೆಯೆಂದು ಪರಿಗಣಿತವಾಗುವಾಗ, ಸಲಿಂಗ ಕಾಮಿಯು ಇದಕ್ಕೆದ್ದಂತೆ ತಪ್ಪುದಾರಿ ಹಿಡಿದವರೆಲ್ಲರೂ ಗುರಿಯಾಗುವ ತೊಳಲಾಟಕ್ಕೆ ಗುರಿಯಾಗುತ್ತಾನೆ. ಅವನ ಕಳಂಕ, ತಾನು ಕೊರತೆಯೊಂದರಿಂದ ಪೀಡಿತನಾಗಿರುವನೆಂಬ ಭಾವನೆ, ಅವನ ಅಯಶಸ್ಸು, ಇವೆಲ್ಲವೂ ಸಾಮಾಜಿಕ ಪರಂಪರೆಯು ಅವನ ಮೇಲೆ ಹೇರಿರುವ ಅಪಖ್ಯಾತಿಯ ಪರಿಣಾಮಗಳು. ತಮ್ಮ ಸಮಾಜದ ಆದರ್ಶ

ಗಳ ಬೆಂಬಲವಿಲ್ಲದೇ ತೃಪ್ತಿಕರವಾಗಿ ಬಾಳುವೆ ನಡೆಸಬಲ್ಲವರು ಅತಿ ಕಡಮೆ ಮಂದಿ. ಸಮಾಜವು ಅವರ ಮೇಲೆ ಹೊರಿಸುವ ಹೊಂದಾಣಿಕೆಗಳ ಭಾರ, ಯಾವನನ್ನಾದರೂ ಪ್ರಯಾಸಕ್ಕೆ ಈಡುಮಾಡುವಂತಹುದು. ಈ ತೊಳಲಾಟದ ಪರಿಣಾಮಗಳನ್ನು ಅವರ ಸ್ವಲಿಂಗಾನುರಕ್ತಿಯೊಂದಿಗೆ ನಾವು ಸಮೀಕರಿಸುತ್ತೇವೆ.

ನಮ್ಮ ಸಮಾಜದಲ್ಲಿ ಯೋಗ ಸಮಾಧಿ ಸಹ ಇದೇ ರೀತಿಯ ಒಂದು ಅತಿರೇಕ. ಪಾಶ್ಚಿಮಾತ್ಯ ನಾಗರಿಕತೆಗಳಲ್ಲಿ ಅತ್ಯಲ್ಪ ಪ್ರಮಾಣದ ಅತೀಂದ್ರಿಯಾನುಭವವು ಸಹ ತಪ್ಪುದಾರಿಯೆಂದು ಪರಿಗಣಿತವಾಗುತ್ತದೆ. ನಮ್ಮ ಸಾಮಾಜಿಕ ಗುಂಪುಗಳಲ್ಲಿ ತೋರಿ ಬರುವ ಸಮಾಧಿ ಸ್ಥಿತಿ ಅಥವಾ ಅಪಸ್ಮಾರವನ್ನು ಅಧ್ಯಯನ ಮಾಡಬೇಕಾದರೆ ನಾವು ಅತಿರೇಕಿಗಳ ಪ್ರಸಂಗಗಳನ್ನೇ ಹುಡುಕಿನೋಡಬೇಕು. ಆದ್ದರಿಂದ ಅತೀಂದ್ರಿಯಾನು ಭವಕ್ಕೂ ಮತ್ತು ನರರೋಗ ಹಾಗೂ ಮನೋವ್ಯಾಧಿಗಳಿಗೂ ಇರುವ ಪರಸ್ಪರ ಸಂಬಂಧವು ಕರಾರುವಾಕ್ಕಾದುದಾಗಿ ತೋರುತ್ತದೆ. ಅದರೆ ಸ್ವಲಿಂಗಾನುರಕ್ತಿಯ ವಿಚಾರದಂತೆಯೇ, ಇದೂ ಸಹ ನಮ್ಮ ಶತಮಾನದ ಪರಸ್ಪರಾನುಬಂಧದ ಒಂದು ಲಕ್ಷಣ. ನಮ್ಮ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸಹ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಪರಿಣಾಮ ರೂಪಗಳನ್ನು ಕಾಣಬಹುದು. ಮಧ್ಯಯುಗದಲ್ಲಿ ಕ್ಯಾಥೊಲಿಕ್ ಧರ್ಮವು ತುರೀಯಾನುಭವವನ್ನು ಸಂತತ್ವದ ಕುರುಹೆಂದು ಪರಿಗಣಿಸಿದ್ದಾಗ ಸಮಾಧಿಸ್ಥಿತಿಯ ಅನು ಭವಕ್ಕೆ ಮಹತ್ವಬಂದಿತ್ತು. ಅದಕ್ಕೆ ಒಗ್ಗಿಬರುವ ಮನೋಭಾವವುಳ್ಳವರು ಈ ನಮ್ಮ ಶತಮಾನದಲ್ಲಿರುವಂತೆ ಯಾವುದೋ ಉತ್ಪಾತಕ್ಕೆ ಗುರಿಯಾದವರಂತೆ ಬೀಳುವ ಬದಲು ತಮ್ಮ ತಮ್ಮ ಜೀವನ ವೃತ್ತಿಗಳನ್ನು ಅನುಸರಿಸಲು ಹೆಚ್ಚಿನ ಆತ್ಮವಿಶ್ವಾಸ ಪಡೆಯು ತ್ತಿದ್ದರು. ಅದು ಮನೋವಿಕಲ್ಪದ ಕಳಂಕವಾಗಿರಲಿಲ್ಲ. ಮಹತ್ವಾಕಾಂಕ್ಷೆಯನು ಊರ್ಜಿತಗೊಳಿಸಿಕೊಳ್ಳುವ ದಾರಿಯಾಗಿತ್ತು. ಆದ್ದರಿಂದ ಸಮಾಧಿ ಸ್ಥಿತಿಗೆ ಒಗ್ಗು ವಂತಹ ವ್ಯಕ್ತಿಗಳು, ತಮ್ಮ ತಮ್ಮ ಸಹಜ ಸಾಮರ್ಥ್ಯಕ್ಕನುಗುಣವಾಗಿ ಯಶಸ್ಸು ಅಥವಾ ಅಯಶಸ್ಸು ಗಳಿಸುತ್ತಿದ್ದರು. ಸಮಾಧಿ ಸ್ಥಿತಿಯ ಅನುಭವವು ಬಹು ಮಹ ತ್ವದ್ದಾಗಿದ್ದುದರಿಂದ ಒಬ್ಬ ಮಹಾನಾಯಕನಲ್ಲಿಯೂ ಆ ಶಕ್ತಿಯಿರುವುದು ಹೆಚ್ಚು ಸಮಂಜಸವಾಗಿರುತ್ತಿತ್ತು.

ಆದಿವಾಸಿ ಜನರಲ್ಲಿ ಸಮಾಧಿ ಸ್ಥಿತಿ ಮತ್ತು ಅಪಸ್ಮಾರಗಳು ಬಹಳವಾಗಿ ಮನ್ನಣೆಗೆ ಪಾತ್ರವಾಗಿವೆ. ಕ್ಯಾಲಿಫೋರ್ನಿಯಾದ ಕೆಲವು ಇಂಡಿಯನ್ ಬಣಗಳಲ್ಲಿ ಕೆಲವು ರೀತಿಯ ಸಮಾಧಿ ಸ್ಥಿತಿಯ ಅನುಭವಗಳನ್ನು ಪಡೆದವರಿಗೆ ಬಹುಮಟ್ಟಿಗೆ ಪ್ರತಿಷ್ಠಿತ ಪದವಿಗಳು ದೊರೆಯುತ್ತವೆ. ಆ ಎಲ್ಲ ಬಣಗಳಲ್ಲೂ ಹೆಂಗಸರು ಮಾತ್ರ ಅಂತಹ ಅನುಗ್ರಹಕ್ಕೆ ಪಾತ್ರರು ಎಂಬ ನಂಬಿಕೆಯಿಲ್ಲವಾದರೂ ಶಾಸ್ತ ಬಣದ ಜನ ರಲ್ಲಿ ಇದು ರೂಢಿ. ಶಾಸ್ತ ಜನರಲ್ಲಿ ಶ್ಯಾಮನರು ಹೆಂಗಸರು. ಅವರಿಗೆ ಸಮು

ದಾಯವು ಅತಿ ಹೆಚ್ಚಿನ ಪ್ರತಿಷ್ಠೆಯನ್ನು ನೀಡಿದೆ. ಸಮಾಧಿ ಸ್ಥಿತಿ ಮತ್ತು ಅದಕ್ಕೆ ಸಂಬಂಧಪಟ್ಟಂತಹ ಇತರ ಮೈ ತುಂಬುವಿಕೆಗಳಿಗೆ ಸುಲಭವಾಗಿ ತುತ್ತಾಗುವಂತಹ ಸ್ವಭಾವ ಜನ್ಯ ಶಕ್ತಿಯಿದ್ದವರನ್ನು ಆ ವೃತ್ತಿಗೆ ಆಯ್ಕೆ ಮಾಡುತ್ತಿದ್ದರು. ಹಾಗೆ ಮೀಸಲಾಗಿದ್ದ ಹೆಂಗಸು ಒಂದು ದಿನ ತನ್ನ ದೈನಂದಿನ ಕಾರ್ಯಗಳಲ್ಲಿ ನಿರತಳಾಗಿರುವಾಗ್ಗೆ ಇದ್ದಕ್ಕಿದ್ದಂತೆ ನೆಲಕ್ಕೆ ಬೀಳುತ್ತಿದ್ದಳು. ಯಾವುದೋ ಒಂದು ಧ್ವನಿಯು ತನ್ನೊಂದಿಗೆ ಅತ್ಯಂತ ಕಟುವಾದ ಸ್ವರದಲ್ಲಿ ಮಾತನಾಡಿದುದನ್ನು ಅವಳು ಕೇಳಿರುತ್ತಿದ್ದಳು. ಅದನ್ನು ಕೇಳಿ ತಿರುಗಿ ನೋಡಿದಾಗ, ಬಾಣ ಹೂಡಿದ ಬಿಲ್ಲನ್ನು ಹಿಡಿದಿದ್ದ ಒಬ್ಬ ಮನುಷ್ಯನನ್ನು ಕಂಡಿದ್ದಳು. ಅವನು ಅವಳನ್ನು ಹಾಡೆಂದು ಆಜ್ಞಾಪಿಸಿ, ಹಾಡದೇ ಹೋದರೆ ಅವಳ ಹೃದಯಕ್ಕೆ ಬಾಣ ಬಿಟ್ಟು ಸೀಳುವುದಾಗಿ ಬೆದರಿಸಿದ್ದನು. ಆ ಅನುಭವದ ಒತ್ತಡವನ್ನು ತಾಳಲಾರದೇ ಅವಳು ಜ್ಞಾನತಪ್ಪಿ ಬಿದ್ದಿದ್ದಳು. ಆಗ ಆವಳ ಕುಟುಂಬದವರೆಲ್ಲಾ ಬಂದು ಕೂಡುತ್ತಿದ್ದರು. ಅವಳು ಕಲ್ಲಿನಂತೆ ಬಿದ್ದಿರುತ್ತಿದ್ದಳು; ಉಸಿರು ಸಹ ಬಹಳ ಕ್ಷೀಣವಾಗಿರುತ್ತಿತ್ತು. ಕೆಲವು ಕಾಲದಿಂದ ಶ್ಯಾಮನ್ ವೃತ್ತಿಯನ್ನು ಅನುಸರಿಸು ಎಂದು ಸೂಚಿಸುವಂತಹ ವಿಶೇಷ ಕನಸುಗಳನ್ನು ಅವಳು ಕಾಣುತ್ತಿದ್ದಳೆಂಬುದು ಅವರಿಗೆ ಗೊತ್ತಿರುತ್ತಿತ್ತು. ಕೂದಲು ತುಂಬಿದ್ದ ಕರಡಿಗಳಿಂದ ತಪ್ಪಿಸಿಕೊಂಡಂತೆ, ಮರದ ಅಥವಾ ಬೆಟ್ಟದ ಶಿಖರದ ಮೇಲಿನಿಂದ ಬಿದ್ದಂತೆ, ಹಳದಿ ಚಿಟ್ಟೆಗಳ ಹಿಂಡು ತನ್ನನ್ನು ಮುತ್ತಿದಂತೆ ಕನಸು ಕಂಡಿರುತ್ತಿದ್ದಳು. ಆದ್ದರಿಂದ ಜನಕ್ಕೆ ಇದು ನಿರೀಕ್ಷಿತ ಎಂಬುದು ಗೊತ್ತಿತ್ತು. ಕೆಲವು ಗಂಟೆಗಳ ಕಾಲ ಬಿದ್ದಿದ್ದ ಮೇಲೆ ಆ ಹೆಂಗಸು ಮೆಲ್ಲನೆ ನರಳಲು ತೊಡಗಿ ಜೋರಾಗಿ ಕಂಪಿಸುತ್ತಾ ನೆಲದ ಮೇಲೆ ಹೊರಳಾಡುತ್ತಿದ್ದಳು. ಆಗ ಅವಳು ತನಗೆ ಅಪ್ಪಣೆಯಾಗಿದ್ದು, ಸಮಾಧಿ ಸ್ಥಿತಿಯಲ್ಲಿದ್ದಾಗ ಭೂತವು ಕಲಿಸಿದ್ದ ಹಾಡನ್ನು ಪುನರುಚ್ಚರಿಸುತ್ತಿರುವಳೆಂದು ಜನ ಭಾವಿಸುತ್ತಿದ್ದರು. ಅವಳು ಚೇತರಿಸಿಕೊಳ್ಳುತ್ತ ಬಂದಂತೆ, ಅವಳ ನರಳಿಕೆಯು ಹೆಚ್ಚೆಚ್ಚು ಸ್ಪಷ್ಟವಾಗಿ ಆ ಭೂತದ ಹಾಡಾಗುತ್ತಿತ್ತು. ಕೊನೆಗೆ ಅವಳು ಆ ಭೂತದ ಹೆಸರನ್ನೇ ಹೇಳುತ್ತಿದ್ದಳು, ಹಾಗೆ ಹೇಳಿದ ಕೂಡಲೇ ಅವಳ ಬಾಯಿಂದ ರಕ್ತ ಚಿಮ್ಮುತ್ತಿತ್ತು.

ಹೀಗೆ ಭೂತದೊಂದಿಗೆ ಮೊದಲ ಸಮಾಗಮವಾಗಿ, ಅವಳು ಎಚ್ಚರಗೊಂಡ ನಂತರ ಆ ರಾತ್ರಿ ಅವಳು ಮೊದಲಬಾರಿಗೆ ದೀಕ್ಷಾವಿಧಿಯ ಶ್ಯಾಮನ್ ನೃತ್ಯವನ್ನು ಮಾಡುತ್ತಿದ್ದಳು. ಛಾವಣಿಯಿಂದ ಇಳಿಬಿಟ್ಟಿದ್ದ ಹಗ್ಗವೊಂದನ್ನು ಹಿಡಿದು ಅವಳು ಮೂರು ರಾತ್ರಿ ಕುಣಿಯುತ್ತಿದ್ದಳು. ಮೂರನೆಯ ರಾತ್ರಿ ಅವಳು ತನ್ನ ದೇಹಕ್ಕೆ ಭೂತದಿಂದ ಬಲವನ್ನು ಬರಮಾಡಿಕೊಳ್ಳಬೇಕಾಗಿತ್ತು. ಅವಳು ಕುಣಿಯುತ್ತಲೇ ಇದ್ದು, ಆ ಕ್ಷಣವು ಹತ್ತಿರವಾದಾಗ 'ಅವನು ಬಾಣ ಬಿಡುತ್ತಾನೆ, ಅವನು ಬಾಣ

ಬಿಡುತ್ತಾನೆ' ಎಂದು ಅರಚಿಕೊಳ್ಳುತ್ತಿದ್ದಳು. ಆಗ ಅವಳ ಸ್ನೇಹಿತರು ಅವಳನ್ನು ಹಿಡಿದುಕೊಳ್ಳುತ್ತಿದ್ದರು. ಅವಳಿಗೆ ಒಂದು ಬಗೆಯ ಅಪಸ್ಮಾರ ಅಥವಾ ಮೂರ್ಛಾವಸ್ಥೆ. ಅವಳು ತೂರಾಡುವಾಗ್ಗೆ ನೆಲಕ್ಕೆ ಬೀಳದಂತೆ ಹಿಡಿಕೊಳ್ಳದೇ ಹೋದರೆ ಅವಳು ಸಾಯುತ್ತಿದ್ದಳು. ಆಗಿನಿಂದ ಅವಳ ದೇಹದಲ್ಲಿ ಭೂತದ ಬಲವು ಕಲ್ಲಿನಾಕಾರದ ಒಂದು ವಸ್ತುವಾಗಿ ನೆಲೆಸಿ ಕಾಣಿಸುತ್ತಿತ್ತು. ಅವಳು ನೃತ್ಯ ಮಾಡುವಾಗ ಅದನ್ನು ದೇಹದ ಒಂದು ಭಾಗದಲ್ಲಿ ತೋರಿ, ಇನ್ನೊಂದು ಭಾಗಕ್ಕೆ ಚಲಿಸುವಂತೆ ಮಾಡುತ್ತಿದ್ದಳು. ಅದು ಮೊದಲು ಅವಳು ತನ್ನ ಶಕ್ತಿಯ ಪ್ರದರ್ಶನ ನೀಡುವುದು ಆರಂಭವಾಗುತ್ತಿತ್ತು. ಹುಟ್ಟು ಸಾವುಗಳ ಪ್ರಮುಖ ತಂತರ್ು ಪ್ರಸಂಗಗಳಲ್ಲಿ, ರೋಗ ಚಿಕಿತ್ಸೆಗಾಗಿ, ಕಣಿ ಹೇಳುವುದಕ್ಕಾಗಿ, ಹಾಗೂ ಸಲಹೆ ನೀಡುವುದಕ್ಕಾಗಿ ಆಕೆಯನ್ನು ಆಹ್ವಾನಿಸುತ್ತಿದ್ದರು. ಅಂದರೆ ಈ ವಿಧಾನದಿಂದ ಆಕೆಯು ಮಹಾಶಕ್ತಿಶಾಲಿಯೂ, ಪ್ರಮುಖಳೂ ಆದ ಹೆಂಗಸಾಗುತ್ತಿದ್ದಳು.

ಆ ಸಮಾಜವು ಅಪಸ್ಮಾರ ಅಥವಾ ಮೂರ್ಛಾವಸ್ಥೆ ಬರುವುದನ್ನು, ಕುಟುಂಬ ಗೌರವಕ್ಕೆ ಕಳಂಕವೆಂದಾಗಲೀ, ಭಯಂಕರ ವ್ಯಾಧಿಯ ಕುರುಹೆಂದಾಗಲೀ ಭಾವಿಸದೇ, ಸಾಂಸ್ಕೃತಿಕ ಮನ್ನಣೆಯೂ ಅದನ್ನೇ ಎತ್ತಿ ಹಿಡಿದು ತನ್ನ ಸಹ ಜೀವಿಗಳ ಮೇಲೆ ಅಧಿಕಾರ ಗಳಿಸಲು ಅದನ್ನು ಹೆದ್ದಾರಿಯಾಗಿ ಮಾಡಿಕೊಟ್ಟಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅಪಸ್ಮಾರವು ಅತ್ಯಂತ ಹೆಚ್ಚಿನ ಸಾಮಾಜಿಕ ಪ್ರತಿಷ್ಠೆಗಳಿಸಿದವರ ಮಾದರಿಯ ವಿಶಿಷ್ಟ ಲಕ್ಷಣವಾಗಿದ್ದು, ಆ ಮಾದರಿಗೆ ಸೇರಿದವರು ಬಹಳ ಗೌರವದಿಂದ, ಜವಾದರಣೆಗೆ ಪಾತ್ರರಾಗಿ ಕಾರ್ಯಶೀಲರಾಗಿರುತ್ತಿದ್ದರು. ಈ ಸಂಸ್ಕೃತಿಯಲ್ಲಿ ಅಧಿಕಾರ ಸ್ಥಾನಗಳಿಗೂ ನಾಯಕತ್ವದ ಪದವಿಗಳಿಗೂ ಅಪಸ್ಮಾರ ಪೀಡಿತ ವ್ಯಕ್ತಿಗಳೇ ವಿಶಿಷ್ಟ ರೀತಿಯ ಯೋಗ್ಯತೆ ಪಡೆದವರಾಗುತ್ತಿದ್ದರು.

ಸಾಮಾಜಿಕ ರಚನೆಯಲ್ಲಿ 'ಅತಿರೇಕ' ದ ನಮೂನೆಗಳ ಉಪಯುಕ್ತತೆಯ ಸಾಧ್ಯತೆಯನ್ನು ಕುರಿತು ಪ್ರಪಂಚದ ಎಲ್ಲ ಭಾಗಗಳಿಂದಲೂ ನಿದರ್ಶನಗಳು ದೊರೆಯುತ್ತವೆ. ಆದರೆ ಆ ನಮೂನೆಗಳು ಸಂಬಂಧಪಟ್ಟ ಗುಂಪಿನಿಂದ ಸಾಂಸ್ಕೃತಿಕವಾಗಿ ಆಯ್ಕೆಗೊಂಡಿರಬೇಕು ಅಷ್ಟೆ. ಸೈಬೀರಿಯಾದ ಶ್ಯಾಮನ್‌ಗಳು ತಮ್ಮ ಸಮುದಾಯದಲ್ಲಿ ಮೇಲುಗೈಯ್ಯಾಗಿದ್ದಾರೆ. ಆ ಜನರ ಭಾವನೆಗಳ ಪ್ರಕಾರ, ಆ ವ್ಯಕ್ತಿಗಳು ಭೂತಗಳ ಇಚ್ಛೆಗೆ ತಲೆಬಾಗಿ ಒಂದು ಭಯಂಕರ ರೋಗದಿಂದ ಮುಕ್ತರಾದವರು. ಮೂರ್ಛೆ ಬರುವುದು ಅದರ ಕುರುಹು. ಈ ದಾರಿಯಿಂದ ಅವರು ಎಣೆಯಿಲ್ಲದಷ್ಟು ದೈವಿಕ ಶಕ್ತಿಯನ್ನೂ, ಅಸದೃಶವಾದ ಆರೋಗ್ಯ, ಚೈತನ್ಯಗಳನ್ನೂ ಪಡೆದುಕೊಂಡಿದ್ದಾರೆ. ಆ ದೈವಿಕ ಕರೆ ಬಂದ ಕಾಲದಲ್ಲಿ ಕೆಲವರು ಹಲವು ವರ್ಷಗಳ ಕಾಲ ಮತಿಭ್ರಾಂತರಾದುದುಂಟು. ಮತ್ತೆ ಕೆಲವರು ಬೇಜವಾಬ್ದಾರರಾಗಿ, ಅವರು ಮಂಜಿನಲ್ಲಿ ಅಲೆಯು

ಹೋಗಿ ಹಿಮದ ಕೊರೆತಕ್ಕೆ ತುತ್ತಾಗದಂತೆ ಸದಾ ಅವರ ಮೇಲೆ ನಿಗಾ ಇಡಬೇಕಾಗಿ ಬರಬಹುದು. ಇನ್ನು ಕೆಲವರು ರೋಗಗ್ರಸ್ತರಾಗಿ ಸಾಯುವಷ್ಟು ಮಟ್ಟಿಗೆ ಕೃಶರಾಗಿ ಕೆಲವು ವೇಳೆ ರಕ್ತ ಮಿಶ್ರಿತ ಬೆವರು ಸುರಿಸುವುದುಂಟು. ಇದಕ್ಕೆಲ್ಲ ಅವರ ಚಿಕಿತ್ಸೆ, ಶ್ಯಾಮನ್ ವೃತ್ತಿಯನ್ನು ಕೈಗೊಳ್ಳುವುದು. ಸೈಬೀರಿಯಾದ ಪ್ರೇತ ವ್ಯವಹಾರ ಪ್ರದರ್ಶನವು ಬಹು ಶ್ರಮದ್ದಾಗಿರುತ್ತದೆ. ಆದರೆ ಅದು ತಮಗೆ ವಿಶ್ರಾಂತಿ ನೀಡಿ, ಆದಿಂದಾಗ ಮತ್ತೊಮ್ಮೆ ಪ್ರದರ್ಶನ ನೀಡುವ ಸಾಮರ್ಥ್ಯ ನೀಡುತ್ತದೆಂದು ಅವರು ಹೇಳುತ್ತಾರೆ. ಯಾವುದೇ ಶ್ಯಾಮನೀಯ ಪ್ರದರ್ಶನದಲ್ಲೂ ಅಪಸ್ಮಾರ ಬರುವುದು ಅನಿವಾರ್ಯವಾದ ಒಂದು ಅಂಗ.

ಶ್ಯಾಮನನ ನರವ್ಯಾಧಿ ಸ್ಥಿತಿಯ ಹಾಗೂ ಅವನ ಸಮಾಜ ಅವನಿಗೆ ನೀಡುವ ಗಮನವನ್ನು ಬಹು ಹಿಂದೆಯೇ ಕ್ಯಾನನ್ ಕೆಲ್ಲವೇ ಚೆನ್ನಾಗಿ ವಿವರಿಸಿದ್ದಾನೆ. ದಕ್ಷಿಣ ಆಫ್ರಿಕದ ವೃದ್ಧ ಜುಲು ಒಬ್ಬನ ಮಾತುಗಳಲ್ಲೇ ಅದು ನಿರೂಪಿತವಾಗಿದೆ.

'ಪುಣ್ಯಪುರುಷ ಅಥವಾ ಪೂಜ್ಯನಾಗಲಿರುವವನ ಪರಿಸ್ಥಿತಿ ಹೀಗಿರುತ್ತದೆ. ಮೊದ ಮೊದಲು ಅವನು ಮೇಲ್ನೋಟಕ್ಕೆ ಆರೋಗ್ಯವಂತನಾಗಿಯೇ ಇರುತ್ತಾನೆ.ಆದರೆ ಕಾಲ ಕ್ರಮೇಣ ಅವನು ಸೂಕ್ಷ್ಮವಾಗುತ್ತ ಹೋಗುತ್ತಾನೆ. ಯಾವ ನಿಜವಾದ ಕಾಯಿಲೆಯೂ ಅಲ್ಲ, ಬರೀಸೂಕ್ಷ್ಮವಾಗುವುದಷ್ಟೆ. ಕೆಲವು ಬಗೆಯ ಆಹಾರಗಳನ್ನು ತೆಗೆದುಕೊಳ್ಳದಿರು ವುದನ್ನು ರೂಢಿ ಮಾಡಿಕೊಳ್ಳುತ್ತಾನೆ. ತನಗೆ ಇಚ್ಛೆಯಾದುದನ್ನೇ ಆರಿಸಿಕೊಳ್ಳುತ್ತಾನೆ; ಅದನ್ನೂ ಬಹಳವಾಗಿ ಸೇವಿಸುವುದಿಲ್ಲ. ಸದಾ ದೇಹದ ವಿವಿಧ ಭಾಗಗಳಲ್ಲಿ ನೋವು ಎಂದು ಹೇಳುತ್ತಿರುತ್ತಾನೆ. ತಾನು ಒಂದು ನದಿಯಲ್ಲಿ ಕೊಚ್ಚಿ ಹೋದಂತೆ ಕನಸು ಕಂಡುದಾಗಿ ಹೇಳುತ್ತಾನೆ. ಅವನು ಹಲವಾರು ವಿಚಾರಗಳನ್ನು ಕನಸು ಕಾಣುತ್ತಾನೆ. ಅವನ ದೇಹ (ನದಿಯಂತೆ) ಗಲಿಬಿಲಿಯಾಗುತ್ತದೆ. ಅವನು ಕನಸುಗಳು ನಿವಾಸವಾಗು ತ್ತಾನೆ. ಅವನು ಆಗೀದಾಗ್ಗೆ ಕನಸಿನಿಂದ ಎಚ್ಚರಗೊಂಡಾಗ ತನ್ನ ಸ್ನೇಹಿತರೊಂದಿಗೆ ' ನನ್ನ ದೇಹ ಗಲಿಬಿಲಿಯಾಗಿದೆ. ಹಲವಾರು ಮಂದಿ ಕೂಡಿ ನನ್ನನ್ನು ಕೊಲ್ಲುತ್ತಿ ದ್ದುದಾಗಿ ಕನಸು ಕಂಡೆ. ನಾನು ಹೇಗೆ ತಪ್ಪಿಸಿಕೊಂಡೆನೋ ಗೊತ್ತಿಲ್ಲ. ಎಚ್ಚರ ಗೊಂಡಾಗ ನನ್ನ ದೇಹದ ಒಂದು ಭಾಗ ಇತರ ಭಾಗಗಳಂತಿರಲಿಲ್ಲ. ಎಲ್ಲ ಕಡೆಗಳಲ್ಲೂ ಒಂದೇ ರೀತಿ ಇರಲಿಲ್ಲ.' ಎಂದು ಮುಂತಾಗಿ ಕನಸಿನ ಹಲವಾರು ವಿಚಾರಗಳನ್ನು ಹೇಳುತ್ತಾನೆ. ಕೊನೆಗೆ ಆತ ಬಹಳ ಕಾಯಿಲೆಯವನಾಗುತ್ತಾನೆ. ಆಗ ಅವರುಗಳು ವಿಚಾರಿಸಲು ಪುಣ್ಯಪುರುಷರಲ್ಲಿಗೆ ಹೋಗುತ್ತಾರೆ.

ಆ ಪುಣ್ಯಪುರುಷರು ಒಂದೇ ಸಲಕ್ಕೆ ಅವನ ತಲೆ ಕೆಟ್ಟಿದೆಯೆಂದು ಕಂಡುಕೊಳ್ಳು ವುದಿಲ್ಲ.(ಅಂದರೆ ಶ್ಯಾಮನ್ ವೃತ್ತಿಗೆ ಸಂಬಂಧಪಟ್ಟಂತಹ ಸೂಕ್ಷ್ಮ ಗ್ರಹಣ ಶಕ್ತಿ ಬೆಳೆದು ಬರುತ್ತಿದೆಯೆಂದು ಕಂಡುಕೊಳ್ಳುವುದಿಲ್ಲ.) ನಿಜವನ್ನು ಕಂಡುಕೊಳ್ಳುವುದು ಅವರಿಗೆ

ಬಹು ಕಷ್ಟ. ಎಡೆಬಿಡದೆ ಅವರು ಅಸಂಬದ್ಧವಾದಂದನ್ನು ಹೇಳುತ್ತಾರೆ; ಸುಳ್ಳು ಹೇಳಿಕೆ ನೀಡುತ್ತಾರೆ. ಅವರು ಅವನ ಜನಗಳ ಭೂತವು ತನ್ನ ಆಹಾರಕ್ಕಾಗಿ ದನಗಳನ್ನು ಕೇಳುತ್ತಿದೆಯೆಂದು ಹೇಳುತ್ತಾರೆ. ಅವರ ಮಾತಿನಂತೆ ಅವನ ದನಗಳೆಲ್ಲಾ ತಿಂದು ಹಾಕಲ್ಪಡುತ್ತವೆ. ಕೊನೆಗೆ ಅವನ ಸ್ವತ್ತೆಲ್ಲ ವ್ಯಯವಾಗುತ್ತದಾದರೂ, ಅವನು ರೋಗಿಯಾಗಿಯೇ ಇರುತ್ತಾನೆ. ಅವನಲ್ಲಿ ಇನ್ನು ದನಗಳಿಲ್ಲವಾದ್ದರಿಂದ ಅವರಿಗೆ ಮುಂದೆ ಏನು ಮಾಡಬೇಕೆಂಬುದು ತಿಳಿಯುವುದಿಲ್ಲ. ಅವನಿಗೆ ಬೇಕಾಗುವ ವಸ್ತುಗಳನ್ನು ನೀಡಿ ಅವನ ಮಿತ್ರರು ನೆರವಾಗುತ್ತಾರೆ.

ಸ್ವಲ್ಪ ದಿನಗಳ ನಂತರ ಒಬ್ಬ ಪುಣ್ಯಪುರುಷ ಬಂದು ಉಳಿದವರು ಹೇಳಿದ್ದೆಲ್ಲಾ ಸುಳ್ಳೆಂದು ಹೇಳುತ್ತಾನೆ. "ಅವನಲ್ಲಿ ಭೂತಗಳು ಆವಾಹನೆಯಾಗಿವೆ. ಬೇರೆ ಏನೂ ಇಲ್ಲ. ಅವು ಎರಡು ತಂಡಗಳಲ್ಲಿ ಅವನಲ್ಲಿ ಸಂಚರಿಸುತ್ತಿವೆ. ಕೆಲವು 'ಇಲ್ಲ, ನಮ್ಮ ಮಗುವಿಗೆ ನೋವಾಗುವುದನ್ನು ನಾವು ಸಹಿಸುವುದಿಲ್ಲ,' ಎನ್ನುತ್ತವೆ. ಈ ಕಾರಣದಿಂದಲೇ ಅವನು ಗುಣಗೊಳ್ಳುತ್ತಿಲ್ಲ. ಭೂತಗಳ ಇಚ್ಛೆಗೆ ಅಡ್ಡ ಬಂದರೆ ನೀವು ಅವನನ್ನು ಕೊಲ್ಲುತ್ತೀರಿ, ಅವನು ಪುಣ್ಯಪುರುಷನೂ ಆಗುವುದಿಲ್ಲ. ಮತ್ತೆ ಮನುಷ್ಯನೂ ಆಗುವುದಿಲ್ಲ." ಎಂದು ಹೇಳುತ್ತಾನೆ.

ಹೀಗೆ ಆ ಮನುಷ್ಯ ಎರಡು ವರ್ಷ ಇಲ್ಲವೇ ಇನ್ನೂ ಹೆಚ್ಚು ಕಾಲ ಕಾಯಿಲೆಯಾಗಿಯೇ ಇರಬಹುದು. ಅವನು ತನ್ನ ಮನೆಯಲ್ಲಿಯೇ ಇರಬೇಕಾಗಿ ಬರುತ್ತದೆ. ಅವನ ಕೂದಲುಗಳೆಲ್ಲ ಉದುರುವ ತನಕ ಅವನ ಸ್ಥಿತಿ ಹೀಗೆಯೇ ಇರುತ್ತದೆ. ಅವನ ದೇಹ ಶುಷ್ಕವಾಗಿ, ಹೊಟ್ಟು ಉದುರುತ್ತ ಹೋಗುತ್ತದೆ. ಅವನು ಎಣ್ಣೆ ಹಚ್ಚಿಕೊಳ್ಳಲಿಚ್ಛಿಸುವುದಿಲ್ಲ. ಅವನು ತಾನು ಪುಣ್ಯಪುರುಷನಾಗಲಿರುವನೆಂಬುದನ್ನು, ಮೇಲಿಂದ ಮೇಲೆ ಆಕಳಿಸುವುದರಿಂದ, ಎಡೆಬಿಡದೇ ಸೀನುವುದರಿಂದ ಸೂಚಿಸುತ್ತಾನೆ. ಅವನು ನಶ್ಯದ ಮೇಲೆ ಬಹಳವಾದ ಇಚ್ಛೆ ತೋರುವುದರಿಂದಲೂ ಅದನ್ನು ತೋರಿಕೊಳ್ಳುತ್ತಾನೆ. ಅವನು ನಶ್ಯ ಹಾಕಿಕೊಳ್ಳದೇ ಬಹಳ ವೇಳೆಯನ್ನು ಕಳೆಯುವುದಿಲ್ಲ. ಇದರಿಂದ ಜನರಿಗೆ ಅವನಿಗೆ ಬೇಕಾಗಿದ್ದುದು ದೊರೆಯಹತ್ತಿದೆ ಎಂದು ಭಾಸವಾಗುತ್ತದೆ.

ಅನಂತರ ಅವನು ಮತ್ತೆ ಕಾಯಿಲೆ ಬೀಳುತ್ತಾನೆ. ಆಗಾಗ ಅವನಿಗೆ ಸೆಳವು ಬರುತ್ತದೆ. ಅವನ ಮೇಲೆ ನೀರು ಸುರಿದಾಗ ಕೆಲವು ಕಾಲ ಅದು ಬಿಟ್ಟಿರುತ್ತದೆ. ಸ್ವಲ್ಪ ಎದುರಾಡಿದರೂ ಕಣ್ಣೀರು ಸುರಿಸುತ್ತಾನೆ. ಕಡೆಗೆ ಜೋರಾಗಿ ಅಳಲೂ ತೊಡಗುತ್ತಾನೆ. ಜನರೆಲ್ಲ ಮಲಗಿರುವಾಗ ಅವನು ಗಲಭೆ ಮಾಡುತ್ತಾನೆ. ತನ್ನ ಹಾಡಿನಿಂದ ಅವರನ್ನು ಎಚ್ಚರಿಸುತ್ತಾನೆ. ಆಗ ಅವನು ಒಂದು ಹಾಡನ್ನು ರಚಿಸಿರುತ್ತಾನೆ. ಅದನ್ನು ಅವನೊಂದಿಗೆ ಕೂಡಿ ಹಾಡಲು ಗಂಡಸರು ಹೆಂಗಸರೆಲ್ಲ ಎದ್ದು

ಹೋಗುತ್ತಾರೆ. ಇಡೀ ಗ್ರಾಮದ ಜನರೆಲ್ಲ ನಿದ್ರೆಗೆಟ್ಟು ತೊಂದರೆ ಪಡುತ್ತಾರೆ. ಪುಣ್ಯಪುರುಷನಾಗಲಿರುವವನು ತಾನು ನಿದ್ರಿಸದೇ ಸದಾ ಬುದ್ಧಿಯಿಂದ ಕೆಲಸ ಮಾಡುವವನಾದ್ದರಿಂದ ಬೇಕಾದಷ್ಟು ತೊಂದರೆಗಳನ್ನುಂಟುಮಾಡುತ್ತಾನೆ. ಅವನ ನಿದ್ರೆ ಅಲ್ಲಿಷ್ಟು, ಇಲ್ಲಿಷ್ಟು ತುಣುಕು ತುಣುಕು. ಅವನು ಹಲವಾರು ಹಾಡುಗಳನ್ನು ಹೇಳುತ್ತಾ ಏಳುತ್ತಾನೆ. ಅವನ ಹಾಡು ಕೇಳಿ ಹತ್ತಿರದಲ್ಲಿರುವ ಜನರು ಅವ ನೊಂದಿಗೆ ಕೂಡಿಹಾಡಲು ರಾತ್ರಿ ವೇಳೆ ತಮ್ಮ ಹಳ್ಳಿಗಳನ್ನು ಬಿಡುತ್ತಾರೆ. ಅವನು ಬೆಳಕು ಹರಿಯುವ ತನಕವೂ ಹಾಡಬಹುದು. ಅವನು ತನ್ನ ಮನೆಯಲ್ಲಿ ಕಪ್ಪೆಯಂತೆ ಕುಪ್ಪಳಿಸುತ್ತಾನೆ. ಅವನಿಗೆ ಅವನ ಮನೆ ಸಾಲದಾಗುತ್ತದೆ. ಅವನು ಕುಪ್ಪಳಿ ಸುತ್ತಾ, ಹಾಡುತ್ತಾ ಅಡ್ಡಾಡುತ್ತಾನೆ. ಅವನು ಬೆವರು ಸುರಿಸುತ್ತಾ, ನೀರಲ್ಲಿರುವ ಜೊಂಡಿನಂತೆ ಅಲ್ಲಾಡುತ್ತಾನೆ.

ಸ್ಥಿತಿ ಹಾಗಿರುವಾಗ ಅವರು, ಅವನು ಯಾವುದೇ ವೇಳೆಗೆ ಸಾಯಬಹುದೆಂದು ನಿರೀಕ್ಷಿಸುತ್ತಿರುತ್ತಾರೆ. ಈಗ ಅವನ ದೇಹ ಬರೀ ಮೂಳೆ, ಚರ್ಮ. ನಾಳೆಗೆ ಜೀವ ದಿಂದಿರುತ್ತಾನೋ. ಇಲ್ಲವೋ ಎಂದಾಡಿಕೊಳ್ಳುತ್ತಿರುತ್ತಾರೆ. ಆ ಕಾಲಗಲ್ಲಿ ಜನ ಅವನು ಪುಣ್ಯಪುರುಷನಾಗುವುದಕ್ಕೆ ಪ್ರೋತ್ಸಾಹ ನೀಡಲು ಹಲವಾರು ದನಗಳನ್ನು ತಿನ್ನುತ್ತಾರೆ. ಕೊನೆಗೆ ಒಮ್ಮೆ ಅವನಿಗೆ ಅವನ ವಂಶೀಕವಾದ ಒಂದು ಪುರಾತನ ಭೂತವು (ಕನಸಲ್ಲಿ) ತೋರಿಬರುತ್ತದೆ. ಆ ಭೂತ ಅವನನ್ನು ಕುರಿತು 'ಇಂತಹ ವನಲ್ಲಿಗೆ ಹೋಗು, ಅವನು ನಿನಗೆ ಪಾಂತಿ ಮದ್ದು ಕಡೆದುಕೊಡುತ್ತಾನೆ. (ಈ ಮದ್ದನ್ನು ಸೇವಿಸುವುದು ಶ್ಯಾಮನ್ ವೃತ್ತಿಗೆ ದೀಕ್ಷೆ ಪಡೆಯುವುದರ ಒಂದು ಅಂಗ.) ನೀನು ಆಗ ಪೂರ್ಣ ಪುಣ್ಯಪುರುಷನಾಗಬಹುದು' ಎಂದು ಹೇಳುತ್ತದೆ. ಅನಂತರ ಅವನು ತನಗೆ ಔಷಧ ಕಡೆದು ಸಿದ್ಧ ಪಡಿಸಿಕೊಡಲು ಸೂಚಿತನಾದ ಪೂಜ್ಯನಲ್ಲಿಗೆ ಹೋಗಿ ಕೆಲಕಾಲ ಶಾಂತನಾಗಿರುತ್ತಾನೆ. ಅವನು ಹಿಂತಿರುಗುವಾಗ್ಗೆ ಹೊಸಮನುಷ್ಯನಾಗಿರು ತ್ತಾನೆ. ಅವನು ಶುದ್ಧನಾಗಿರುತ್ತಾನೆ. ನಿಜವಾದ ಪುಣ್ಯ ಪುರುಷನಾಗಿರುತ್ತಾನೆ." ಅನಂತರ ಅವನು ಆಜೀವ ಪರ್ಯಂತ ಆ ಭೂತಗಳಿಂದ ಆವಾಹಿತನಾಗಿರುತ್ತಾನೆ. ಭವಿಷ್ಯ ಹೇಳುತ್ತಾನೆ; ಕಳೆದು ಹೋದ ವಸ್ತುಗಳನ್ನು ಕಂಡುಹಿಡಿಯುತ್ತಾನೆ.

ಇದರಿಂದ ಅತ್ಯಂತ ತೀವ್ರವಾಗಿ ಅಸ್ಥಿರವಾದ ಮಾನವ ನಮೂನೆಗಳನ್ನು ಸಹ ಸಂಸ್ಕೃತಿಯು ಮನ್ನಣೆ ನೀಡಿ, ಸಾಮಾಜಿಕವಾಗಿ ಉಪಯುಕ್ತನ್ನಾಗಿ ಮಾಡಿಕೊಳ್ಳು ವುದೆಂಬುದು ಸ್ಪಷ್ಟವಾಗುತ್ತದೆ. ಅವರ ವೈಲಕ್ಷಣ್ಯಗಳನ್ನು ಮಾನವ ವರ್ತನೆಯ ಅತ್ಯಂತ ಉಪಯುಕ್ತ ವಿಭೇದಗಳೆಂದು ಭಾವಿಸುವುದರಿಂದ ಸಂಬಂಧಪಟ್ಟ ವ್ಯಕ್ತಿಗಳು ಸಂದರ್ಭಕ್ಕೆ ಸರಿಯಾಗಿ ಮೇಲೆದ್ದು ತಮ್ಮ ಸಾಮಾಜಿಕ ಪಾತ್ರಗಳನ್ನು ನಿರ್ವಹಿಸಬಲ್ಲ ವರಾಗುತ್ತಾರೆ. ಆಂದರೆ ಸಾಮಾಜಿಕ ಹೊಂದಾಣಿಕೆಗೆ ಒಗ್ಗುವ ಹಾಗೂ ಒಗ್ಗದೇ ಇರುವ

ನಮೂನೆಗಳು ಇವೆ ಎಂಬ ಭಾವನೆ ಸರಿಯಲ್ಲ. ಯಾವುದೇ ಸಮಾಜದಲ್ಲಿಯಾದರೂ ಸಾಕಷ್ಟು ಮಟ್ಟದಲ್ಲಿ ಕ್ರಿಯಾಶಾಲಿಗಳಾಗಲು ಶಕ್ತರಲ್ಲದ ವ್ಯಕ್ತಿಗಳು, ಕೆಲವು ಖಚಿತವಾದ 'ಅತಿರೇಕ' ಲಕ್ಷಣಗಳುಳ್ಳವರಲ್ಲ; ತಮ್ಮ ಸಂಸ್ಕೃತಿಯ ಸಂಸ್ಥೆಗಳಲ್ಲಿ ತಮ್ಮ ಮನೋವೃತ್ತಿಗಳಿಗೆ ಪ್ರೋತ್ಸಾಹ ದೊರಕದವರು. ಈ ಅತಿರೇಕಿಗಳ ಅಶಕ್ತತೆಯು ಬಹುಮಟ್ಟಿಗೆ ಕಾಲ್ಪನಿಕ. ಅವರಲ್ಲಿ ಅವಶ್ಯಕವಾದಷ್ಟು ಚೈತನ್ಯವಿಲ್ಲ ಎಂಬ ಕಾರಣದಿಂದ ಅದು ಉಗಮಗೊಂಡಿಲ್ಲ. ಆ ವ್ಯಕ್ತಿಗಳ ಸಹಜ ಮನೋವೃತ್ತಿಗಳು ಅವರ ಸಮಾಜದಿಂದ ದೃಢೀಕರಣಗೊಂಡಿಲ್ಲವೆಂಬುದು ಅದಕ್ಕೆ ಕಾರಣ. ಸ್ಯಾಪಿರ್ ಹೇಳುವಂತೆ, ಅವರು 'ಅಸಾಧ್ಯವಾದ ಜಗತ್ತೊಂದರಿಂದ ವಿಮುಖರಾದವರು.'

ತನ್ನ ಕಾಲ, ದೇಶಗಳ ಬೆಂಬಲವಿಲ್ಲದೆ, ಅಪಹಾಸ್ಯದ ಬಿರುಗಾಳಿಗೆ ತುತ್ತಾದವನ ಚಿತ್ರಣವು ಯೂರೋಪಿಯನ್ ಸಾಹಿತ್ಯದಲ್ಲಿ ಡಾನ್‌ಕ್ವಿಕ್ಸೋಟನ ವ್ಯಕ್ತಿತ್ವದಲ್ಲಿ ಮನನೀಯವಾಗಿ ರೂಪಗೊಂಡಿದೆ. ಈಗಲೂ ಸಹ ಭಾವನಾರೂಪದಲ್ಲಿ ಮನ್ನಣೆಗೆ ಪಾತ್ರವಾಗಿರುವ ಒಂದು ಪರಂಪರೆಯ ಮೇಲೆ ಸರ್ವಾಂಟೆಸನು, ಬದಲಾವಣೆಯಾಗಿರುವ ಕಾರ್ಯಶೀಲ ಆದರ್ಶಗಳ ಶ್ರೇಣಿಯ ಬೆಳಕನ್ನು ಬೀರಿದ್ದಾನೆ. ಅವನ ಕಥಾನಾಯಕನಾದ ಆ ವೃದ್ಧ ಇನ್ನೊಂದು ತಲೆಮಾರಿನಲ್ಲಿ ಪ್ರಚಲಿತವಾಗಿದ್ದ ಭಾವನಾಶೀಲ ಧೀರೋದಾತ್ತತೆಯನ್ನು ಸಾಂಪ್ರದಾಯಿಕವಾಗಿ ಎತ್ತಿ ಹಿಡಿಯ ಹೋಗಿ ಪೆದ್ದನಾದ. ಅವನು ಈಟಿಯಿಂದ ಇರಿಯ ಹೊರಟ ಆ ಗಾಳಿಯಂತ್ರಗಳು ಆಗ ತಾನೇ ಕಣ್ಮರೆಯಾಗಿದ್ದ ಕಾಲದ ಜಗತ್ತಿನಲ್ಲಿ ಘನವಾದ ಪ್ರತಿಶಕ್ತಿಗಳಾಗಿದ್ದುವು. ಆದರೆ ಜಗತ್ತು ಅವುಗಳನ್ನು ಘನವಾದುವೆಂದು ಎಣಿಸದಿರುವಾಗ ಅವುಗಳನ್ನು ಎದುರಿಸಿ ನಿಲ್ಲುವುದು ಹುಚ್ಚು ಕೋಲಾಹಲ. ಅವನು ಡಲ್ಸಿನೀಯನ್ನು ಧೀರೋದಾತ್ತತೆಯ ಅತ್ಯುನ್ನತವಾದ ಪರಂಪರೆಯ ಮಾದರಿಯಲ್ಲಿ ಪ್ರೇಮಿಸಿದ. ಆದರೆ ಅವನ ಕಾಲಕ್ಕೆ ಬೇರೆ ರೀತಿಯಲ್ಲಿ ಪ್ರೇಮಿಸುವುದು ರೂಢಿಯಾಗಿತ್ತು. ಅವನ ಪ್ರೇಮದ ತೀವ್ರತೆಯೇ ಇತರರು ಅವನನ್ನು ಹುಚ್ಚನೆಂದೆಣಿಸಲು ಕಾರಣವಾಯಿತು.

ನಾವು ಪರಾಮರ್ಶಿಸಿದ ಆದಿವಾಸಿ ಸಂಸ್ಕೃತಿಗಳಲ್ಲಿ ವಿಭಿನ್ನ ಜಗತ್ತುಗಳು ಒಂದರಿಂದೊಂದು ಪ್ರಾದೇಶಿಕವಾಗಿ ಬೇರ್ಪಟ್ಟಿವೆ. ಆದರೆ ಆಧುನಿಕ ಪಾಶ್ಚಿಮಾತ್ಯ ಇತಿಹಾಸದಲ್ಲಿ ಅವು ಬಹುಮಟ್ಟಿಗೆ ಕಾಲಗತಿಯಿಂದ ಬೇರ್ಪಟ್ಟಿವೆ. ಎರಡು ಪ್ರಸಂಗಗಳಲ್ಲೂ ಮುಖ್ಯವಾದ ಸಮಸ್ಯೆ ಮಾತ್ರ ಒಂದೇ. ಆದರೆ ಆಧುನಿಕ ಪ್ರಪಂಚದಲ್ಲಿ ನಾವು ಬಯಸಿದರೂ ಸಹ ಕಾಲಗತಿಯಲ್ಲಿ ಬದಲಾಗುವ ವಿನ್ಯಾಸಗಳಿಂದ ತಪ್ಪಿಸಿಕೊಳ್ಳಲಾರೆವಾದ್ದರಿಂದ ಈ ವಿಚಾರವನ್ನು ಅರಿತುಕೊಳ್ಳುವುದು ಹೆಚ್ಚಿನ ಮಹತ್ವದ್ದಾಗಿದೆ. ಪ್ರತಿಯೊಂದು ಸಂಸ್ಕೃತಿಯೂ ತನ್ನದೇ ಆದ ಪ್ರತ್ಯೇಕ ಪ್ರಪಂಚವಾಗಿದ್ದು, ಎಷ್ಟೋ ಸಂಸ್ಕೃತಿಯಂತೆ ಹೆಚ್ಚು ಸ್ಥಿರವಾಗಿದ್ದು, ಭೌಗೋಳಿಕವಾಗಿ ಇತರ ಸಂಸ್ಕೃತಿಗಳಿಂದ

ಬೇರ್ಪಟ್ಟಿದ್ದರೆ ಈ ಸಮಸ್ಯೆಯು ಶುಷ್ಕ ಜಿಜ್ಞಾಸೆಯಾಗುತ್ತಿತ್ತು. ನಮ್ಮ ಕಣ್ಣೆದುರಿಗೇ ಮುಳುಗುತ್ತಿರುವ ಸಾಂಸ್ಕೃತಿಕ ಆದರ್ಶಗಳ ಬಗ್ಗೆಯೂ ಮತ್ತು ದೂರದಿಗಂತದಿಂದ ಮೂಡಿಬರುವ ಆದರ್ಶಗಳ ಬಗ್ಗೆಯೂ ನಾವು ಮತ್ತು ನಮ್ಮ ನಾಗರಿಕತೆ ವಿಚಾರ ಮಾಡಬೇಕು. ನಾವು ಹುಟ್ಟಿ ಬೆಳೆದು ಬಂದ ನೀತಿ ಪದ್ಧತಿಯಲ್ಲಿಯೂ ಸಹ ಬದಲಾಗುತ್ತಿರುವ ರೂಢಿ ಕ್ರಮಗಳನ್ನು ಪರಿಗಣಿಸಲು ನಾವು ಸಿದ್ಧರಿರಬೇಕು. ನಾವು ನೀತಿನಿಯಮಗಳನ್ನು ಕುರಿತು ಒಂದು ನಿರುಪಾಧಿಕ ಸೂತ್ರಕ್ಕೆ ಬದ್ಧರಾದೆವಾದರೆ ನೈತಿಕ ಸಮಸ್ಯೆಗಳನ್ನು ಎದುರಿಸುವಾಗ ಹೇಗೆ ಅಡಚಣೆಗಳಿಗೆ ಒಳಗಾಗುತ್ತೇವೋ, ಹಾಗೆಯೇ ನಮ್ಮ ಸ್ಥಳೀಯ ರೂಢಿಕ್ರಮಗಳನ್ನು ಬಾಳಿನ ಅನಿವಾರ್ಯ ಅವಶ್ಯಕತೆಗಳನ್ನಾಗಿ ಪರಿಗಣಿಸಿರುವ ತನಕ ಮಾನವ ಸಮಾಜವನ್ನು ಕುರಿತು ಅರಿತುಕೊಳ್ಳುವಾಗ ಅಡಚಣೆಗಳಿಗೆ ಒಳಗಾಗುತ್ತೇವೆ.

ಇದುವರೆಗೆ ಯಾವ ಸಮಾಜವೂ ಸಹ ತನ್ನ ಮುಂದಿನ ತಲೆಮಾರಿನಲ್ಲಿ ಸೃಷ್ಟಿಯಾಗುವಂತಹ ಹೊಸ ರೂಢಿಕ್ರಮಗಳಿಗೆ ಆತ್ಮಪ್ರಜ್ಞಾಪೂರ್ವಕವಾದ ಮಾರ್ಗಗಳನ್ನು ರೂಪಿಸಲು ಪ್ರಯತ್ನಿಸಿಲ್ಲ. ಡ್ಯೂಯಿಯು ಈ ಕ್ರಮವು ಹೇಗೆ ಸಾಧ್ಯ ಎಂಬುದನ್ನೂ, ಅಂತಹ ಸಾಮಾಜಿಕ ಶಿಲ್ಪವು ಎಷ್ಟು ತೀವ್ರ ಪರಿಣಾಮಕಾರಿಯಾಗಬಹುದು ಎಂಬುದನ್ನು ಸೂಚಿಸಿದ್ದಾನೆ. ಕೆಲವು ಪರಂಪರಾಗತ ವ್ಯವಸ್ಥೆಗಳಿಗೆ ನಾವು ಮಾನವೀಯ ಪೇಚಾಟ ಮತ್ತು ಹತಾಶೆಗಳ ರೂಪದಲ್ಲಿ ಬಹು ಭಾರಿಯ ಬೆಲೆಯನ್ನು ತೆರುತ್ತಿದ್ದೇವೆಂಬುದು ಸುಸ್ಪಷ್ಟವಾಗಿದೆ. ಈ ವ್ಯವಸ್ಥೆಗಳನ್ನು ಅನಿವಾರ್ಯಗಳಾಗಿ ಪರಿಗಣಿಸದೆ ಬರಿಯ ವ್ಯವಸ್ಥೆಗಳೆಂದು ಪರಿಗಣಿಸಿದರೆ, ಯಾವುದಾದರೊಂದು ರೀತಿಯಲ್ಲಿ ಅವುಗಳನ್ನು ವಿಚಾರಪೂರ್ವಕವಾಗಿ ಆಯ್ದ ಗುರಿಗಳಿಗೆ ಸರಿಹೊಂದಿಸುವುದೇ ನಮಗೆ ಇರುವ ವಿವೇಕ ಮಾರ್ಗ. ಈ ಮಾರ್ಗಗಳನ್ನು ತೊರೆದು ನಾವು ಸಮಕಾಲೀನ ಪರಂಪರೆಯ ಹಾಸ್ಯಾಸ್ಪದ ಮೂರ್ತರೂಪಗಳಾದ ಡಾನ್ ಕ್ವಿಕ್ಸೋಟರನ್ನು ಹೀಗಳೆಯುತ್ತಿದ್ದರೂ, ನಮ್ಮ ರೂಢಿಕ್ರಮಗಳೇ ಅಂತಿಮವೆಂದೂ, ಪ್ರಪಂಚದ ಸ್ವಭಾವವೇ ಅವನ್ನು ನಿರ್ಣಯಿಸಿದೆಯೆಂದೂ ನಂಬಿಕೊಂಡಿದ್ದೇವೆ.

ಈ ನಡುವೆ, ಈ ಬಗೆಯ ಮನೋರೋಗಿಗಳನ್ನು ಹೇಗೆ ನಿರ್ವಹಿಸುವುದು ಎಂಬ ಚಿಕಿತ್ಸಾ ಸಮಸ್ಯೆಯನ್ನು ಅಪಾರ್ಥಮಾಡಿಕೊಂಡಿದ್ದೇವೆ. ಅವರು ವಾಸ್ತವಿಕ ಜಗತ್ತಿನಿಂದ ವಿಮುಖರಾಗಿರುವುದನ್ನೂ, ತಮಗೆ ಒಗ್ಗದೇ ಹೋಗುವ ಕ್ರಮಗಳನ್ನೇ ಒಗ್ಗಿಸಿಕೊಳ್ಳಬೇಕು ಎಂದು ಒತ್ತಾಯ ಮಾಡುವ ವಿಧಾನವನ್ನೂ ಬಿಟ್ಟು ಹೆಚ್ಚು ವಿವೇಚನಾಪರವಾದ ವಿಧಾನಗಳಲ್ಲಿ ಪರಿಹಾರಗೊಳಿಸಬಹುದು. ಈ ರೀತಿಯ ಎರಡು ವಿಧಾನಗಳು ನಮಗೆ ಸಾಧ್ಯ. ಮೊದಲನೆಯದು ಎಡವಟ್ಟಾದಾಗ ವ್ಯಕ್ತಿಯು ತನ್ನ ಒಲವುಗಳತ್ತಲೇ ಹೆಚ್ಚು ವಾಸ್ತವಿಕವಾದ ಆಸಕ್ತಿಯನ್ನು ಬೆಳೆಸಿ

ಕೊಂಡು, ರೂಢಿಕ್ರಮದ ನಮೂನೆಯಿಂದ ತಾನು ಬೇರೆಯಾಗಿರುವೆನೆಂಬುದನ್ನು ಹೆಚ್ಚು ಸಮಚಿತ್ತತೆಯಿಂದ ನಿರ್ವಹಿಸುವುದನ್ನು ಕಲಿಯುವುದು. ಅವನು ತನ್ನ ತೊಂದರೆಗಳಿಗೆ ತನ್ನ ಜನರ ಮನೋಭಾವದಿಂದ ಬೆಂಬಲ ದೊರೆಯದೇ ಹೋದುದು ಎಷ್ಟು ಮಟ್ಟಿಗೆ ಕಾರಣವಾಗಿದೆಯೆಂಬುದನ್ನು ಕಂಡುಕೊಳ್ಳಲು ಶಕ್ತನಾದರೆ, ಕಾಲ ಕ್ರಮೇಣ ತನ್ನ ವಿಲಕ್ಷಣತೆಯ ಪ್ರಮಾಣವನ್ನು ಕಡಮೆ ತೊಂದರೆಯಿಂದ ಸಹಿಸಿಕೊಳ್ಳಲು ಶಕ್ತನಾಗುವಂತೆ ತನ್ನನ್ನು ತಿದ್ದಿಕೊಳ್ಳಬಹುದು. ಉನ್ಮತ್ತ ವಿಷಣ್ಣನಾದವನ ಭಾವನಾ ಗೊಂದಲಗಳೂ, ಹಾಗೂ ವಿಚಾರ, ಭಾವನೆ, ಕ್ರಿಯೆಗಳ ಕೊಂಡಿ ತಪ್ಪಿದ ಮನೋರೋಗಿಯ ಏಕಾಂತವೂ, ಬೇರೆ ರೀತಿಯಲ್ಲಿ ರಚಿತರಾದವರಿಗೆ ನಿಲುಕದ ಕೆಲವು ಮೌಲ್ಯಗಳನ್ನು ಬಾಳಿಗೆ ತಂದುಕೊಡುತ್ತವೆ. ತನ್ನ ಒಲವಿನ ಹಾಗೂ ತನಗೆ ಸಹಜವಾದ ಪ್ರವೃತ್ತಿಗಳನ್ನು ಸ್ಥೈರ್ಯದಿಂದ ಅನುಸರಿಸಿದ ಬೆಂಬಲರಹಿತ ವ್ಯಕ್ತಿಯು ತನಗಾಗಿ ತಾನು ನಿರ್ಮಿಸಿಕೊಂಡ ಪ್ರತ್ಯೇಕ ಜಗತ್ತಿನಲ್ಲಿ ಆಶ್ರಯ ಪಡೆಯಬೇಕಾದ ಅನಿವಾರ್ಯದಿಂದ ಪಾರಾಗಿ ಕಾರ್ಯ ಸಾಧ್ಯವಾದ ಒಂದು ವರ್ತನಾ ವಿಧಾನವನ್ನು ಅನುಸರಿಸಬಹುದು. ಅವನು ತನ್ನ ವಿಲಕ್ಷಣತೆಗಳತ್ತ ಹೆಚ್ಚು ಸ್ವತಂತ್ರ ಹಾಗೂ ಕಡಮೆ ವೇದನೆಯನ್ನೊಳಗೊಂಡ ಮನೋಭಾವವನ್ನು ರೂಢಿಸಿಕೊಂಡು, ಈ ಮನೋಭಾವದ ಆಧಾರದ ಮೇಲೆ ತಕ್ಕ ಮಟ್ಟಿಗೆ ಕಾರ್ಯಶೀಲವಾಗಿರುವ ಬಾಳೊಂದನ್ನು ರೂಪಿಸಿಕೊಳ್ಳಬಹುದು.

ಎರಡನೆಯದಾಗಿ ಸಮಾಜವು, ತನ್ನಲ್ಲಿರುವ ಅಸಾಧಾರಣ ನಮೂನೆಗಳತ್ತ ಹೆಚ್ಚಿನ ಸಹಿಷ್ಣುತೆಯ ಮನೋಭಾವವನ್ನು ತಳೆದು ರೋಗಿಯ ಆತ್ಮ ಶಿಕ್ಷಣದೊಂದಿಗೆ ಕೈಗೂಡಿಸಬೇಕು. ಈ ದಿಶೆಯಲ್ಲಿ ಸಾಧ್ಯತೆಗಳಿಗೆ ಕೊನೆ ಮೊದಲಿಲ್ಲ. ಪರಂಪರೆಯೂ ಸಹ ಯಾವುದೇ ಮನೋರೋಗಿಯಷ್ಟೇ ನರವ್ಯಾಧಿ ಪೀಡಿತವಾದುದು. ಆಕಸ್ಮಿಕವಾಗಿ ತನ್ನಲ್ಲಿ ಬೆಳೆದು ಬಂದಿರುವ ಆದರ್ಶಗಳಿಂದ ಅತ್ತಿತ್ತ ಸರಿಯಲು ಅದು ವ್ಯಕ್ತಪಡಿಸುವ ಅಪಾರ ಭೀತಿಯು ಮನೋವ್ಯಾಧಿಯನ್ನು ಕುರಿತು ಬಳಕೆಯಲ್ಲಿರುವ ಎಲ್ಲ ಸೂತ್ರಗಳಿಗೂ ಅನುಗುಣವಾಗಿದೆ. ಈ ಭೀತಿಯು ಸಾಮಾಜಿಕ ಒಳ್ಳಿತಿಗಾಗಿ ಒಂದು ಮಿತಿಯ ಒಳಗೆ ಅನುವರ್ತನೆಯು ಆವಶ್ಯಕ ಎಂಬ ಭಾವನೆಯನ್ನು ಆಧಾರಗೊಂಡಿಲ್ಲ. ಕೆಲವು ಸಂಸ್ಕೃತಿಗಳಲ್ಲಿ ವ್ಯಕ್ತಿಗೆ ಅಡ್ಡ ಮಾರ್ಗಗಳನ್ನು ಹಿಡಿಯಲು ಹೆಚ್ಚು ಸ್ವಾತಂತ್ರ್ಯವಿದೆ. ಈ ರೀತಿ ಅನುಮತಿಸಿರುವ ಸಂಸ್ಕೃತಿಗಳು ತಮ್ಮ ವಿಲಕ್ಷಣತೆಯಿಂದಾಗಿ ತೊಂದರೆಗೀಡಾಗಿವೆಯೆಂದು ಹೇಳುವಂತಿಲ್ಲ. ಭವಿಷ್ಯದ ಸಮಾಜವ್ಯವಸ್ಥೆಗಳು ಈ ಸಹಿಷ್ಣುತೆಯನ್ನೂ ವೈಯಕ್ತಿಕ ವೈವಿಧ್ಯತೆಗಳಿಗೆ ಇರುವ ಪ್ರೋತ್ಸಾಹವನ್ನೂ ಇದುವರೆಗೆ ನಾವು ಕಂಡಿರುವ ಯಾವ ಸಂಸ್ಕೃತಿಯಲ್ಲಿಯೂ ತೋರಿಬಾರದಷ್ಟು ಮಟ್ಟಕ್ಕೆ ಕೊಂಡೊಯ್ಯಬಹುದು.

ಆದರೆ ಪ್ರಸಕ್ತ ಸಮಯದಲ್ಲಿ ಅಮೇರಿಕದ ಒಲವು ತದ್ವಿರುದ್ಧವಾಗಿದೆ. ಆದ್ದರಿಂದ ಅಂತಹ ಒಂದು ಮನೋಭಾವವು ಏನೇನು ಬದಲಾವಣೆಗಳನ್ನು ಮಾಡೀತು ಎಂಬುದನ್ನು ಊಹಿಸಿಕೊಳ್ಳುವುದೂ ಕಠಿಣ. ನಮ್ಮ ನಗರಗಳ ಜನರಲ್ಲಿ ತಮ್ಮ ನೆರೆಹೊರೆಯವರಿಗಿಂತ ಸ್ವಲ್ಪ ಮಟ್ಟಿಗೆ ಬೇರೆ ರೀತಿಯಾಗಿರಲೂ ಸಹ ಇರುವ ಹೆದರಿಕೆಗೆ ಮಿಡ್ಲ್‌ಟೌನ್ ಉತ್ತಮ ಉದಾಹರಣೆ. ಪರಾವಲಂಬನಕ್ಕಿಂತಲೂ ವಿಜಾತೀಯತೆ ಭೀಕರ. ತಮ್ಮ ಕುಟುಂಬದಲ್ಲಿ ಯಾವನೊಬ್ಬನೂ, ಇತರರಂತಲ್ಲ ಎಂಬ ಕಳಂಕಕ್ಕೆ ತುತ್ತಾಗದಂತೆ ಇರಲು ಸಮಯ ಹಾಗೂ ಸಮಾಧಾನಗಳನ್ನು ಸರ್ವರೀತಿಗಳಲ್ಲೂ ತ್ಯಾಗ ಮಾಡಲು ಸಿದ್ಧ. ಮಕ್ಕಳು ತಾವು ಒಂದು ನಿಶ್ಚಿತವಾದ ಬಗೆಯ ಕಾಲುಚೀಲ ಧರಿಸದೆ ಇರುವುದನ್ನೋ, ಒಂದು ನೃತ್ಯ ಶಿಕ್ಷಣ ತರಗತಿಗೆ ಸೇರದೇ ಇದ್ದುದನ್ನೋ, ಇಲ್ಲವೇ ಒಂದು ನಿಶ್ಚಿತ ತಯಾರಿಕೆಯ ಕಾರನ್ನು ನಡೆಸದಿದ್ದುದನ್ನೋ ಮಹಾನ್ ದುರಂತಗಳಾಗಿ ಪರಿಗಣಿಸುತ್ತಾರೆ. ಮಿಡ್ಲ್‌ಟೌನಿನ ಮೇಲೆ ಅಚ್ಚೊತ್ತಿರುವ ಪ್ರಮುಖ ಪ್ರೇರಣೆಯೆಂದರೆ ಇತರರಿಗಿಂತ ಬೇರೆಯಾಗಿರಲು ಇರುವ ಭೀತಿ.

ಇಂತಹ ಒಂದು ಪ್ರೇರಣೆಯು ಮನೋವ್ಯಾಧಿಗಳ ರೂಪದಲ್ಲಿ ತೆಗೆದುಕೊಳ್ಳುವ ಶುಲ್ಕವು ನಮ್ಮ ದೇಶದಲ್ಲಿ ಮನೋರೋಗಿಗಳಿಗಾಗಿ ಇರುವ ಪ್ರತಿಯೊಂದು ಚಿಕಿತ್ಸಾ ಸಂಸ್ಥೆಯಲ್ಲೂ ಎದ್ದು ಕಾಣುತ್ತದೆ. ಇತರ ಹಲವು ಪ್ರೇರಣೆಗಳ ನಡುವೆ ಇದೂ ಒಂದು ಸಣ್ಣ ಪ್ರೇರಣೆಯಾಗಿದ್ದಿದ್ದರೆ ಮಾನಸಿಕ ಆರೋಗ್ಯದ ಚಿತ್ರಣವೇ ಬೇರೆ ತೆರನಾಗಿರುತ್ತಿತ್ತು. ಅದೇನೇ ಇದ್ದರೂ, ಪ್ರಸ್ತುತ ಸಮಯದಲ್ಲಿ ಅಮೇರಿಕವು ಎದುರಿಸುತ್ತಿರುವ ಮನೋರೋಗ ದುರಂತಗಳ ಭಾರಿ ಹೊರೆಯನ್ನು ಒಂದು ಶೈಕ್ಷಣಿಕ ಕಾರ್ಯಕ್ರಮದಿಂದ ನಿವಾರಿಸುವುದೇ ಅತ್ಯಂತ ಪರಿಣಾಮಕಾರಿ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆ ಶೈಕ್ಷಣಿಕ ಕಾರ್ಯಕ್ರಮದಿಂದ ಮಿಡ್ಲ್ ಟೌನ್ ಮತ್ತು ಇತರ ನಗರ ಪರಂಪರೆಗಳಿಗೆ ಹೊರತಾಗಿ ಸಮಾಜದಲ್ಲಿ ಸಹಿಷ್ಣುತೆಯನ್ನೂ, ಒಂದು ರೀತಿಯ ಆತ್ಮ ಗೌರವ ಹಾಗೂ ಸ್ವತಂತ್ರ ಪ್ರವೃತ್ತಿಯನ್ನೂ ಬೆಳೆಸಬೇಕು.

ಹೀಗೆಂದ ಮಾತ್ರಕ್ಕೆ ಎಲ್ಲ ಮನೋರೋಗಿಗಳು, ತಮ್ಮ ಸಹಜ ಮನೋವೃತ್ತಿಗಳಿಗೂ ತಮ್ಮ ಸಮಾಜದ ಮನೋವೃತ್ತಿಗಳಿಗೂ ಹೊಂದಾಣಿಕೆಯಾಗದೆ ಇರುವ ವ್ಯಕ್ತಿಗಳು ಎಂದಲ್ಲ. ಯಶಸ್ಸಿಗಾಗಿ ತೀವ್ರವಾಗಿ ಪ್ರೇರಿತರಾಗಿ ತಮ್ಮ ಸೋಲನ್ನು ತಾಳಿಕೊಳ್ಳಲಾರದ ದುರ್ಬಲರ ದೊಡ್ಡ ಗುಂಪೊಂದಿದೆ. ಅಧಿಕಾರ ದಾಹಕ್ಕೆ ಬಹಳ ಹೆಚ್ಚಿನ ಮನ್ನಣೆ ನೀಡಿರುವ ಸಮಾಜದಲ್ಲಿ ಅಯಶಸ್ವಿಗಳಾದವರೆಲ್ಲ ಬೇರೆ ರೀತಿಯಲ್ಲಿ ರೂಪಗೊಂಡ ವ್ಯಕ್ತಿಗಳಾಗಿಲ್ಲದೆ ಇರಬಹುದು. ಅವರು ಸಾಕಷ್ಟು ಸಾಮರ್ಥ್ಯ ಪಡೆದಿಲ್ಲದವರಾಗಿರಲೂಬಹುದು. ತಾನು ಕೀಳೆಂಬ ಮನೋಭಾವವು ನಮ್ಮ

ಸಮಾಜದಲ್ಲಿ ಹೆಚ್ಚಿನ ಸಂಕಟಕ್ಕೆ ಕಾರಣವಾಗಿದೆ. ಈ ರೀತಿಯಲ್ಲಿ ಸಂಕಟಕ್ಕೆ ಗುರಿಯಾದವರು, ತಮ್ಮಲ್ಲಿ ಬಲವಾಗಿರುವ ಸಹಜ ಮನೋವೃತ್ತಿಗಳು ವ್ಯಕ್ತಗೊಳ್ಳಲು ಅವಕಾಶವಿಲ್ಲದೇ ಹತಾಶೆಗೆ ತುತ್ತಾಗಬೇಕಾಗಿಲ್ಲ. ಅವರ ಹತಾಶೆಯು ಒಂದು ನಿಶ್ಚಿತ ಗುರಿಯನ್ನು ತಾವು ಮುಟ್ಟಲು ಅಸಮರ್ಥರಾದಂದರ ಪ್ರತಿಫಲನ. ಇದರಲ್ಲಿಯೂ ಒಂದು ಸಾಂಸ್ಕೃತಿಕ ಇಂಗಿತವಿದೆ. ಪರಂಪರಾಗತವಾಗಿ ಮಾನ್ಯತೆ ಪಡೆದ ಗುರಿಗಳನ್ನು ಹೆಚ್ಚಿನ ಮಂದಿಗೋ ಇಲ್ಲವೇ ಬಹು ಸ್ವಲ್ಪ ಮಂದಿಗೋ ಮುಟ್ಟಲು ಸಾಧ್ಯವಾಗಬಹುದು. ಯಶಸ್ಸು ಒಂದು ಗೀಳಾಗಿ, ಸ್ವಲ್ಪ ಮಂದಿಗೆ ಮಾತ್ರ ನಿಲುಕುವಂತಹುದಾದರೆ, ಹೆಚ್ಚು ಹೆಚ್ಚು ಮಂದಿ ತೀವ್ರ ಅವ್ಯವಸ್ಥೆಯ ದಂಡನೆಗೆ ಗುರಿಯಾಗುತ್ತಾರೆ.

ಆದ್ದರಿಂದ ನಾಗರಿಕತೆಯು, ಉನ್ನತ ಹಾಗೂ ಅಪೇಕ್ಷಣೀಯ ಗುರಿಗಳನ್ನು ನಿಯಮಿಸಿಕೊಳ್ಳುವುದರಿಂದ, ಅದು ಕೆಲವು ಮಟ್ಟಿಗೆ ಅತಿರೇಕಿಗಳ ಸಂಖ್ಯೆಯನ್ನು ಹೆಚ್ಚಿಸಬಹುದು. ಆದರೆ ಸಾಮಾಜಿಕ ಮನೋಭಾವದಲ್ಲಿ ಉಂಟಾಗಬಹುದಾದ ಅತ್ಯಲ್ಪ ಪ್ರಮಾಣದ ಮಾರ್ಪಾಡುಗಳು ಸಹ ಈ ಅನ್ಯೋನ್ಯಾನುಬಂಧವನ್ನು ಏರುಪೇರು ಮಾಡಬಹುದಾದ್ದರಿಂದ ಈ ವಿಚಾರವನ್ನು ಅತಿರೇಕಕ್ಕೆ ಕೊಂಡೊಯ್ಯುವುದು ಸುಲಭ. ಒಟ್ಟಿನಲ್ಲಿ ಸಹಿಷ್ಣುತೆ ಮತ್ತು ವೈಯಕ್ತಿಕ ವಿಭೇದಗಳಿಗೆ ನೀಡುವ ಮಾನ್ಯತೆಗಳ ಸಾಮಾಜಿಕ ಸಾಧ್ಯತೆಗಳನ್ನು ಕಾರ್ಯತಃ ಅಲ್ಪ ಪ್ರಮಾಣದಲ್ಲಿ ಮಾತ್ರ ಪರಿಶೋಧಿಸಿ ನೋಡಿರುವುದರಿಂದ ನಾವು ನಿರಾಶೆಗೊಳ್ಳಬೇಕಾಗಿಲ್ಲವೆಂದು ತೋರುತ್ತದೆ. ಇದುವರೆಗೆ ನಾವು ಪರಾಮರ್ಶಿಸಿದ ಇನ್ನಿತರ ಕೆಲವು ಸಾಮಾಜಿಕ ಅಂಶಗಳು ನಮ್ಮಲ್ಲಿನ ನರವ್ಯಾಧಿ ಹಾಗೂ ಮನೋವ್ಯಾಧಿ ಪೀಡಿತರಲ್ಲಿ ಬಹುಮಂದಿ ಹಾಗಾಗಲು ಕಾರಣವಾಗಿದೆ. ನಾಗರಿಕತೆಯು ಇಚ್ಛಿಸಿದಲ್ಲಿ, ತನಗೆ ಯಾವ ಬಗೆಯಾದ ವಾಸ್ತವಿಕವಾದ ನಷ್ಟವೂ ಆಗದ ರೀತಿಯಲ್ಲಿ ಈ ಅಂಶಗಳನ್ನು ನಿರ್ವಹಿಸುವುದು ಸಾಧ್ಯ.

ಆಯಾ ಸಮಾಜದಲ್ಲಿ ವ್ಯಕ್ತಿಗಳ ಯಥೋಚಿತ ಕಾರ್ಯ ನಿರ್ವಹಣಾ ಸಾಮರ್ಥ್ಯದ ದೃಷ್ಟಿಯಿಂದ ನಾವು ಅವರನ್ನು ಪರಿಶೀಲಿಸುತ್ತಿದ್ದೇವೆ. ಸಮಸ್ಥಿತಿಯನ್ನು, ವೈದ್ಯಶಾಸ್ತ್ರರೀತ್ಯಾ ಸೂತ್ರೀಕರಿಸುವುದರಲ್ಲಿ ಈ ಯಥೋಚಿತ ಕಾರ್ಯ ನಿರ್ವಹಣಾ ಸಾಮರ್ಥ್ಯದ ಮಾಪನವೂ ಒಂದು ವಿಧಾನ. ಅದನ್ನು ಕೆಲವು ನಿಶ್ಚಿತ ಲಕ್ಷಣಗಳ ರೀತಿಯಲ್ಲೂ ಸೂತ್ರೀಕರಿಸುವುದುಂಟು. ಸಂಖ್ಯಾ ಪರಿಶೀಲನೆಯಿಂದ ದೊರೆತ ಸರಾಸರಿಯಿಂದ ಸಮಸ್ಥಿತಿಯನ್ನು ನಿರ್ಧರಿಸುವುದು ರೂಢಿ. ಈ ಸರಾಸರಿಯು ಕಾರ್ಯತಃ ಪ್ರಯೋಗಾಲಯದಲ್ಲಿ ನಿರ್ಧರಿತವಾದುದಾಗಿದ್ದು, ಅದರಿಂದ ಅತ್ತಿತ್ತ ಸರಿಸಂಬಂಧಗಳನ್ನು ಸಮಸ್ಥಿತಿಯೆಂದು ಸೂತ್ರೀಕರಿಸಲಾಗುತ್ತದೆ.

ಒಂದು ಸಂಸ್ಕೃತಿಯ ದೃಷ್ಟಿಯಿಂದ ನೋಡುವಾಗ ಈ ವಿಧಾನವು ಉಪಯುಕ್ತ ವೆನ್ನಿಸುತ್ತದೆ. ಇದು ನಾಗರಿಕತೆಯ ಪ್ರಯೋಗದ ಪ್ರಧಾನ ಚಿತ್ರಣವನ್ನು ನೀಡುತ್ತದೆ. ಸಾಮಾಜಿಕ ಮನ್ನಣೆ ಪಡೆದ ವರ್ತನೆಯನ್ನು ಕುರಿತು ಬೇಕಾದಷ್ಟು ಮಾಹಿತಿಗಳನ್ನೊದ ಗಿಸುತ್ತದೆ. ಆದರೆ ಇದೇ ನಿರುಪಾಧಿಕ ಸಮುಸ್ಥಿತಿಯೆಂದು ಸಾಮಾನ್ಯೀಕರಣ ಮಾಡು ವುದು ಬೇರೆ ವಿಚಾರ. ನಾವು ಈಗಾಗಲೇ ಕಂಡಿರುವಂತೆ ಬೇರೆ ಬೇರೆ ಸಂಸ್ಕೃತಿಗಳಲ್ಲಿ ಸಮುಸ್ಥಿತಿಯ ಪರಿಮಿತಿಯು ಸಮಪಾತವಾಗಿಲ್ಲ. ಉದಾಹರಣೆಗೆ ಜುನಿ ಮತ್ತು ಕ್ವಾಕಿ ಯೂಟಲ್ ಸಂಸ್ಕೃತಿಗಳ ನಡುವಣ ಅಂತರ ದೊಡ್ಡದಾಗಿದ್ದು ಅವುಗಳ ಮೇಲು ಸೇರುವೆ ಅತ್ಯಲ್ಪ. ವಾಯುವ್ಯ ತೀರ ಪ್ರದೇಶದಲ್ಲಿ ಸಂಖ್ಯಾಗಣನ ರೀತ್ಯಾ ನಿರ್ಧರಿ ಸುವ ಸಮುಸ್ಥಿತಿಯು ಪ್ಯೆಬ್ಲೋಗಳಲ್ಲಿ ವಿಷಮುಸ್ಥಿತಿಯ ಪರಮಾವಧಿ ಸೀಮೆಗೆ ಹೊರಗೆ ನಿಲ್ಲುತ್ತದೆ. ಸಾಧಾರಣವಾದ ಕ್ವಾಕಿಯೂಟಲ್ ಮೇಲಾಟದ ಪೈಪೋಟಿಯನ್ನು ಜುನಿಗಳು ಹುಚ್ಚು ಎಂದು ಅರ್ಥಮಾಡಿಕೊಳ್ಳುತ್ತಾರೆ. ಅದೇ ರೀತಿಯಲ್ಲಿ ಇತರರನ್ನು ಕೆಳತುಳಿದು ಮುಖಭಂಗ ಮಾಡುವುದರತ್ತ ಜುನಿಗಳು ತಳೆದಿರುವ ಪರಂಪರಾಗತ ಅಲಕ್ಷ್ಯ ದೃಷ್ಟಿಯು ವಾಯುವ್ಯ ತೀರ ಪ್ರದೇಶದ ಪ್ರಭುತ್ವಕುಟುಂಬಗಳ ವ್ಯಕ್ತಿಯೊಬ್ಬ ನಲ್ಲಿ ಪೆದ್ದನ ಮಂದಬುದ್ಧಿಯಾಗಿ ಪರಿಗಣಿತವಾಗುತ್ತದೆ. ಅವುಗಳಲ್ಲಿ ಯಾವುದೊಂದು ಸಂಸ್ಕೃತಿಯಲ್ಲಿಯೇ ಆದರೂ ಅಪಗತಿಯ ವರ್ತನೆಯನ್ನು, ವರ್ತನೆಯ ಯಾವುದಾದ ರೊಂದು ಕನಿಷ್ಠತಮ ಛೇದಕ್ಕೆ ಹೊಂದಿಸಿ ನಿರ್ಧರಿಸುವುದು ಸಾಧ್ಯವಿಲ್ಲ. ಯಾವ ಸಮಾಜವಾದರೂ ತನ್ನ ಪ್ರಧಾನ ಮನೋವೃತ್ತಿಗಳಿಗೆ ಅನುಗುಣವಾಗಿ ಚಿತ್ತೋದ್ರೇಕ, ಅಪಸ್ಮಾರ ಅಥವಾ ಮತಿಭ್ರಮಣೆಯ ಲಕ್ಷಣಗಳನ್ನು ವ್ಯಕ್ತಪಡಿಸುವ ವ್ಯಕ್ತಿಗಳ ಮೇಲೆ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಸಾಮಾಜಿಕ ಅವಲಂಬನೆಯನ್ನು ಬೆಳಸಿಕೊಳ್ಳಬಹುದು.

ಈ ತಥ್ಯವು ಮನೋರೋಗ ಶಾಸ್ತ್ರಕ್ಕೆ ಮುಖ್ಯವಾದುದು. ಏಕೆಂದರೆ ಇದು ಬಹುಶಃ ಪ್ರತಿ ಸಂಸ್ಕೃತಿಯಲ್ಲಿಯೂ ಅಸ್ತಿತ್ವದಲ್ಲಿರುವ ಅತಿರೇಕಗಳ ಇನ್ನೊಂದು ಗುಂಪನ್ನು ಸ್ಪಷ್ಟವಾಗಿ ಎತ್ತಿ ತೋರುತ್ತದೆ. ಈ ಅತಿರೇಕಿಗಳು ಸ್ಥಳೀಯ ಸಾಂಸ್ಕೃತಿಕ ನಮೂನೆಯ ಪರಾಕಾಷ್ಠ ಬೆಳವಣಿಗೆಯನ್ನು ಪ್ರತಿನಿಧಿಸುತ್ತಾರೆ. ಈ ಗುಂಪು ಈಗಾ ಗಲೇ ನಾವು ಪರಾಮರ್ಶಿಸಿದಂತಹ, ತಮ್ಮ ಮನೋವೃತ್ತಿಗಳು ತಮ್ಮ ಸಂಸ್ಕೃತಿಯ ಆದರ್ಶಗಳಿಂದ ಭಿನ್ನಗೊಂಡಿರುವ ವ್ಯಕ್ತಿಗಳಿಗೆ ಸಾಮಾಜಿಕವಾಗಿ ತದ್ವಿರುದ್ಧ ಸ್ಥಾನದಲ್ಲಿ ದ್ದಾರೆ. ಸಮಾಜವು ಈ ಗುಂಪಿನ ವ್ಯಕ್ತಿಗಳನ್ನು ಪ್ರತಿ ಹಂತದಲ್ಲಿಯೂ ಬಹಿರಂಗಕ್ಕೆ ತರುವುದಕ್ಕೆ ಪ್ರತಿಯಾಗಿ ಅವರ ಅತಿರೇಕವನ್ನು ವೃದ್ಧಿಗೊಳಿಸುತ್ತದೆ. ಅವರು ತುದಿ ಮೊದಲಿಲ್ಲದೇ ಸ್ವಪ್ರಯೋಜನವನ್ನು ಸಾಧಿಸಲು ಅನುಮತಿ ಪಡೆದಿದ್ದಾರೆ. ಈ ಕಾರಣದಿಂದಾಗಿ ಈ ವ್ಯಕ್ತಿಗಳು ಪ್ರಸ್ತುತ ಮನೋರೋಗಿಗಳ ವ್ಯಾಪ್ತಿಯಿಂದ ಹೊರಗೆ ಉಳಿದಿದ್ದಾರೆ. ಅವರಿಗೆ ಆಶ್ರಯ ನೀಡಿ ಪ್ರೋತ್ಸಾಹಿಸುವ ತಲೆಮಾರಿನ ಅತ್ಯಂತ ಶ್ರದ್ಧಾಪೂರ್ಣ ಕೈಪಿಡಿಗಳಲ್ಲಿ ಸಹ ಅವರುಗಳ ಬಗ್ಗೆ ವಿವರಣೆ ದೊರೆಯುವ ಸಂಭವ

ಬಹಳ ಕಡಮೆ. ಆದರೆ ಮತ್ತೊಂದು ತಲೆಮಾರಿನ ಅಥವಾ ಸಂಸ್ಕೃತಿಯ ದೃಷ್ಟಿಯಿಂದ, ಅವರು ಅವರ ಕಾಲದ ಮನೋರೋಗ ನಮೂನೆಯಲ್ಲಿ ಅತ್ಯಂತ ವಿಪರೀತದವರಾಗಿ ಪರಿಗಣಿತರಾಗುವುದು ಸರ್ವೇಸಾಧಾರಣ.

ಹದಿನೆಂಟನೆಯ ಶತಮಾನದ ನ್ಯೂ ಇಂಗ್ಲೆಂಡಿನಲ್ಲಿದ್ದ ಪ್ಯೂರಿಟನ್ ಕ್ರೈಸ್ತ ವೈದಿಕರನ್ನು ಪ್ರಚಲಿತವಾಗಿದ್ದ ಸಮಕಾಲೀನ ಜನಾಭಿಪ್ರಾಯವು ಮನೋರೋಗ ಪೀಡಿತರೆಂದು ಖಂಡಿತವಾಗಿಯೂ ಪರಿಗಣಿಸುತ್ತಿರಲಿಲ್ಲ. ಅವರು ನಡೆಸುತ್ತಿದ್ದಂತಹ ಬೌದ್ಧಿಕ ಹಾಗೂ ಭಾವನಾತ್ಮಕ ನಿರಂಕುಶ ಆಡಳಿತಕ್ಕೆ ಸರಿಗಟ್ಟುವಂತಹ ಪ್ರತಿಷ್ಠಿತ ಗುಂಪುಗಳನ್ನು ಇತರ ಸಂಸ್ಕೃತಿಗಳಲ್ಲಿ ಕಾಣುವುದು ಅಪರೂಪ. ಅವರು ದೈವವಾಣಿಯಾಗಿದ್ದರು. ಆದರೆ ಆಧುನಿಕ ವೀಕ್ಷಕನಿಗೆ ಪ್ಯೂರಿಟನ್‌ರು ನ್ಯೂ ಇಂಗ್ಲೆಂಡಿನಲ್ಲಿ ಮನೋ—ನರರೋಗ ಪೀಡಿತರಾಗಿದ್ದರು ಎಂದು ತೋರುತ್ತದೆಯೇ ಹೊರತು, ಅವರು ಮಾಟಗಾತಿಯರೆಂದು ಹೆಸರಿಸಿ ಮರಣದಂಡನೆಗೆ ಗುರಿಪಡಿಸುತ್ತಿದ್ದಂತಹ ಗಲಿಬಿಲಿಗೀಡಾಗಿ ಯಾತನೆ ಪಡುತ್ತಿದ್ದ ಹೆಂಗಸರಲ್ಲ. ಅವರು ತಾವೇ ಪರಿವರ್ತನೆಗೊಂಡಾಗಿನ ಅನುಭವಗಳಲ್ಲಿ ವ್ಯಕ್ತಪಡಿಸುತ್ತಿದ್ದಷ್ಟು ಹಾಗೂ ತಮ್ಮಿಂದ ಪರಿವರ್ತಿತರಾದವರಿಂದ ನಿರೀಕ್ಷಿಸುತ್ತಿದ್ದಷ್ಟು ಉತ್ಕಟವಾದ ಕಳಂಕ ಮನೋಭಾವವನ್ನು ಸ್ವಲ್ಪ ಹೆಚ್ಚು ಮಟ್ಟಿನ ವಿವೇಚನಾಪೂರ್ಣ ನಾಗರಿಕತೆಗಳಲ್ಲಿ ಮನೋರೋಗಿಗಳಿಗಾಗಿ ಏರ್ಪಟ್ಟಿರುವ ಸಂಸ್ಥೆಗಳಲ್ಲಿ ಮಾತ್ರ ಕಾಣಬಹುದು. ಅವರು ತಕ್ಕ ಶಿಕ್ಷೆಯಿಲ್ಲದೇ ಪಾಪಕ್ಕೆ ಒಂದು ವಿಮೋಚನೆಯಿದೆ ಎಂಬುದನ್ನು ಒಪ್ಪುತ್ತಿರಲಿಲ್ಲ. ಶಿಕ್ಷೆಗೆ ಗುರಿಯಾದವನನ್ನು ತೀಕ್ಷ್ಣ ಪರಿತಾಪಕ್ಕೂ, ಭೀಕರ ಸಂಕಟಕ್ಕೂ ಒಳಪಡಿಸಿ, ಕೆಲವೊಮ್ಮೆ ಹಲವು ವರ್ಷಗಳ ಕಾಲ ನಿತ್ರಾಣ ಗೊಳಿಸುತ್ತಿದ್ದರು. ಅತ್ಯಂತ ಸಣ್ಣ ವಯಸ್ಸಿನ ಮಗುವಿನ ಹೃದಯದಲ್ಲೂ ನರಕದ ಭಯವನ್ನು ನಾಟುವುದು ಮತ್ತು ಪ್ರತಿಯೊಬ್ಬ ಪರಿವರ್ತಿತನಿಂದಲೂ ದೇವರಿಗೆ ತನ್ನನು ನರಕಕ್ಕೆ ನೂಕುವುದು ಯೋಗ್ಯವೆಂದು ತೋರಿದರೆ ಹಾಗೆ ನೂಕಿಸಿಕೊಳ್ಳುವುದಕ್ಕೆ ಭಾವನಾತ್ಮಕವಾದ ಒಪ್ಪಿಗೆಯನ್ನು ಪಡೆಯುವುದು ಪಾದ್ರಿಯ ಕರ್ತವ್ಯವಾಗಿತ್ತು. ಮಾಟಗಾತಿಯರ ವಿಚಾರದಲ್ಲಾಗಲೀ, ಇನ್ನೂ ಹನ್ನೆರಡು ವಯಸ್ಸು ಸಹ ಮೀರದ ಅರಕ್ಷಿತ ಮಕ್ಕಳ ವಿಚಾರದಲ್ಲಾಗಲೀ, ನರಕದಂಡನೆ ಹಾಗೂ ಹಣೆಯ ಬರಹ ಮೊದಲಾದ ವಿಚಾರಗಳಲ್ಲಾಗಲೀ ನಾವು ಆ ಕಾಲದ ನ್ಯೂ ಇಂಗ್ಲೆಂಡಿನ ಪ್ಯೂರಿಟನ್ ಚರ್ಚುಗಳ ದಾಖಲೆಗಳನ್ನು ಪರಾಮರ್ಶಿಸಿದರೆ ಒಂದು ವಿಚಾರ ಸ್ಪಷ್ಟಗೊಳ್ಳುತ್ತದೆ. ಆ ಕಾಲದ ಸಾಂಸ್ಕೃತಿಕ ಪ್ರತಿಪಾದನೆಗಳನ್ನು ಪರಾಕಾಷ್ಠೆಗೆ ಕೊಂಡೊಯ್ದು, ಪೂರ್ಣಾತಿಪೂರ್ಣವಾಗಿ ಗೌರವಿಸಿದ ಜನರ ಗುಂಪು, ಸ್ವಲ್ಪ ಮಟ್ಟಿಗೆ ಬದಲಾಗಿರುವ ನಮ್ಮ ತಲೆಮಾರಿನ ಮಾನದಂಡದ ಪ್ರಕಾರ ಅಸಹ್ಯವಾದ ಬುದ್ಧಿ ಭ್ರಮಣೆಯಿಂದ ಪೀಡಿತರಾದವರಾಗಿ ತೋರುತ್ತಾರೆ. ಸಾಪೇಕ್ಷ ಮನೋರೋಗ ಶಾಸ್ತ್ರದ ದೃಷ್ಟಿಯಿಂದ ಅವರು ಅತಿರೇಕಿಗಳಾಗಿ ವರ್ಗೀಕೃತರಾಗುತ್ತಾರೆ.

ಇದೇ ರೀತಿಯಲ್ಲಿ ನಮ್ಮ ತಲೆಮಾರಿನಲ್ಲಿಯೂ ಸ್ವಾರ್ಥ ತೃಪ್ತಿಯ ಹಲವಾರು ವಿಪರೀತ ವಿಧಾನಗಳು ಸಾಂಸ್ಕೃತಿಕ ಪ್ರೋತ್ಸಾಹ ಪಡೆದಿವೆ. ಕಂಟುಂಬಸ್ಥರಾಗಿ, ಕಾನೂನು ಚಲಾಯಿಸುವ ಅಧಿಕಾರಿಗಳಾಗಿ, ವಾಣಿಜ್ಯ ನಿರ್ವಾಹಕರಾಗಿ. ಈ ದುರ್ನಸಂಕಾರಿಗಳನ್ನೂ, ಇತಿಮಿತಿಯಿಲ್ಲದ ಸ್ವಾರ್ಥಪರರನ್ನೂ ಕಾದಂಬರಿಗಾರರೂ, ನಾಟಕಕಾರರೂ ಮಂತ್ರೆ ಮತ್ತೆ ಚಿತ್ರಿಸಿದ್ದಾರೆ. ಪ್ರತಿ ಸಮುದಾಯದಲ್ಲಿಯೂ ಅವರು ಪರಿಚಿತರೇ. ಪ್ಯೂರಿಟನ್ ಕ್ರೈಸ್ತ ವೈದಿಕರ ವರ್ತನೆಯಂತೆ, ಇವರ ನಡವಳಿಕೆಗಳೂ ಸಹ ಕಾರಾಗೃಹವಾಸಿಗಳದ್ದಕ್ಕಿಂತ ಹೆಚ್ಚು ಅಸಾಮಾಜಿಕವಾಗಿರುವುದುಂಟು. ಅವರು ತಮ್ಮ ಸಂತ್ರಲೂ ಹಂಚಿ ಹರಡುವ ವೇದನೆ ಹಾಗೂ ಹತಾಶೆಗೆ ಸಾಟಿಯಿಲ್ಲ. ಅಷ್ಟೇ ತೀವ್ರವಾಗಿ ಮಾನಸಿಕ ವಕ್ರತೆಯೂ ಉಂಟಾಗಿರಬಹುದಾದ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ. ಆದರೂ ಅವರಿಗೆ ಹೆಚ್ಚಿಗೆ ಪ್ರಭಾವ ಹಾಗೂ ಮಹತ್ವವುಳ್ಳ ಅಧಿಕಾರ ಸ್ಥಾನಗಳು ನೀಡಲ್ಪಡುತ್ತವೆ. ಅವರು ಕುಟುಂಬಗಳಲ್ಲಿ ಪಿತೃಸ್ಥಾನದಲ್ಲಿರುವುದು ಸರ್ವೇಸಾಧಾರಣ. ತಮ್ಮ ಮಕ್ಕಳ ಮೇಲೆ, ತಮ್ಮ ಸಮಾಜರಚನೆಯ ಮೇಲೆ, ಅವರು ಒತ್ತಿರುವ ಅಚ್ಚು ಅಳಿಸಲಾಗದಂತಹುದು. ಅವರುಗಳನ್ನು ನಮ್ಮ ಮನೋರೋಗಶಾಸ್ತ್ರದ ಕೈಪಿಡಿಗಳು ಪರಾಮರ್ಶಿಸುವ ಗೋಜಿಗೆ ಹೋಗಿಲ್ಲದಿರುವುದಕ್ಕೆ ನಮ್ಮ ನಾಗರಿಕತೆಯ ಪ್ರತಿಯೊಂದು ಸಿದ್ಧಾಂತದಿಂದಲೂ ಅವರು ಬೆಂಬಲ ಪಡೆದಿರುವುದೇ ಕಾರಣ. ತಮ್ಮ ಸಂಸ್ಕೃತಿಯ ದಿಕ್ಸೂಚಿಯು ನಿರ್ದೇಶಿಸುವ ದಿಶೆಯತ್ತಲೇ ತಿರುಗಿಕೊಂಡಿರುವವರಿಗೆ ಮಾತ್ರ ಹಾಗಿರಲು ಸಾಧ್ಯ. ಆದರೆ ಭವಿಷ್ಯ ಕಾಲದ ಮನೋರೋಗ ಶಾಸ್ತ್ರವು ನಮ್ಮ ಕಾದಂಬರಿಗಳು, ಪತ್ರಗಳು ಮತ್ತು ಸಾರ್ವಜನಿಕ ದಾಖಲೆಗಳನ್ನೆಲ್ಲ ಶೋಧಿಸಿ ಈ ಬಗೆಯ ವಿಷಮ ಸ್ಥಿತಿಯನ್ನು ಕುರಿತು ಅರಿತುಕೊಳ್ಳಬಹುದು. ಹಾಗಿಲ್ಲದೆ ಹೋದರೆ ಅದರ ಇರುವಿಕೆಯನ್ನು ನಂಬಲೂ ಸಹ ಸಾಧ್ಯವಾಗುವುದಿಲ್ಲ. ಪ್ರತಿಯೊಂದು ಸಮಾಜದಲ್ಲಿಯೂ ಹೀಗೆ ಸಾಂಸ್ಕೃತಿಕವಾಗಿ ಪ್ರೋತ್ಸಾಹಿತರಾಗಿ, ಭದ್ರಗೊಂಡವರ ಗುಂಪಿನಲ್ಲಿ ಮಾನವ ವರ್ತನೆಯ ಅತ್ಯತಿರೇಕದ ನಮೂನೆಗಳು ಪೋಷಿತವಾಗಿರುತ್ತವೆ.

ಪ್ರಸಕ್ತ ಸಮಯದಲ್ಲಿ ಸಾಮಾಜಿಕ ಚಿಂತನೆಗೆ ಸಾಂಸ್ಕೃತಿಕ ಸಾಪೇಕ್ಷತೆಯನ್ನು ಅಥವಾ ಪರಸ್ಪರಾವಲಂಬನೆಯನ್ನು ಸೂಕ್ಷ್ಮವಾಗಿ ಪರಿಗಣನೆಗೆ ತೆಗೆದುಕೊಳ್ಳುವುದಕ್ಕಿಂತ ಮಹತ್ವದ ಕಾರ್ಯ ಬೇರೊಂದಿಲ್ಲ. ಸಮಾಜಶಾಸ್ತ್ರ ಮತ್ತು ಮಾನಸಶಾಸ್ತ್ರ ಕ್ಷೇತ್ರಗಳೆರಡರಲ್ಲಿಯೂ ಇದರ ಪರಿಣಾಮ ಮೂಲಾತ್ಮಕ ರೂಪದ್ದು. ಜನಾಂಗಗಳ ನಡುವಣ ಸಂಪರ್ಕಗಳು ಹಾಗೂ ಮಾರ್ಪಾಡಾಗುತ್ತಿರುವ ನಮ್ಮ ಆದರ್ಶಗಳನ್ನು ಕುರಿತು ಆಧುನಿಕ ಚಿಂತನೆಗೆ ವಿವೇಚನಾಯುತವಾದ ವೈಜ್ಞಾನಿಕ ಮಾರ್ಗದ ಅವಶ್ಯಕತೆಯು ಮಹತ್ವದ್ದಾಗಿದೆ. ಕ್ಲಿಷ್ಟವಾದ ಆಧುನಿಕ ಮನೋಭಾವವು, ಸಾಮಾಜಿಕ ಸಾಪೇಕ್ಷತೆಯನ್ನು

ತಾನು ಮಾನ್ಯ ಮಾಡಿರುವ ಕಿರಿದಾದ ಕ್ಷೇತ್ರದಲ್ಲಿಯೂ ಸಹ ಹತಾಶೆಯ ಸಿದ್ಧಾಂತವನ್ನಾಗಿ ಮಾಡಿದೆ; ಶಾಶ್ವತತೆ ಹಾಗೂ ಆದರ್ಶತೆಗಳನ್ನು ಕುರಿತ ರೂಢಿಬದ್ಧ ಕನಸುಗಳಿಗೂ, ವ್ಯಕ್ತಿ ಸ್ವಾತಂತ್ರ್ಯವನ್ನು ಕುರಿತ ವೈಯಕ್ತಿಕ ಭ್ರಮೆಗಳಿಗೂ ಮತ್ತು ಸಾಮಾಜಿಕ ಸಾಪೇಕ್ಷತೆಗೂ ಇರುವ ಅಸಮಂಜಸತೆಯನ್ನು ಬೆಟ್ಟು ಮಾಡಿ ತೋರಿಸಿದೆ. ಮಾನವನ ಜೀವನಾನುಭವವು ಇವುಗಳನ್ನೆಲ್ಲ ಬಿಟ್ಟುಕೊಟ್ಟರೆ, ಬಾಳಿನ ಸಾರಸಾರಾಂಶವೇ ಬರಿದಾಗುವುದೆಂಬ ವಾದವನ್ನು ಮಂಡಿಸಿದೆ. ನಮ್ಮ ಉಭಯ ಸಂಕಟವನ್ನು ಈ ತೆರನಾಗಿ ಅರ್ಥೈಸುವುದರಿಂದ ನಾವು ಅಸಂಗತತೆಯ ಅಪರಾಧವೆಸಗಿದಂತಾಗುತ್ತದೆ. ಹೊಸದರಲ್ಲಿ ಹಳತನ್ನು ಅರಸಬೇಕೆಂದೂ ಹೊಸ ಸುನಮ್ಯತೆಯಲ್ಲಿ ಹಳೆಯ ಖಚಿತತೆ ಮತ್ತು ಶಾಶ್ವತತೆಯನ್ನು ಕಂಡುಕೊಳ್ಳುವುದರ ಹೊರತು ಬೇರೆ ಪರಿಹಾರವಿಲ್ಲವೆಂದೂ ನಾವು ಒತ್ತಾಯಪಡಿಸುತ್ತಿರುವುದು ಸಾಂಸ್ಕೃತಿಕ ಹಿಂಬೀಳಿಕೆಯ ಅನಿವಾರ್ಯತೆಯಿಂದಾಗಿ ಮಾತ್ರ. ಸಾಂಸ್ಕೃತಿಕ ಸಾಪೇಕ್ಷತೆಯನ್ನು ಒಪ್ಪಿಕೊಳ್ಳುವುದರಿಂದ ಅದರದೇ ಆದ ಮೌಲ್ಯಗಳನ್ನೂ ಕೂಡಿಸಿ ತರುವಂತಾಗುತ್ತದೆ. ಈ ಮೌಲ್ಯಗಳು ಅಭೇದವಾದಿ ತತ್ವಸಿದ್ಧಾಂತಗಳದ್ದೇ ಆಗಿರಬೇಕಾಗಿಲ್ಲ. ಸಾಂಸ್ಕೃತಿಕ ಸಾಪೇಕ್ಷತೆಯು ರೂಢಿಬದ್ಧ ಅಭಿಪ್ರಾಯಗಳನ್ನು ಪ್ರತಿಭಟಿಸಿ, ಅವುಗಳಲ್ಲೇ ಬೆಳೆದು ಬಂದವರಿಗೆ ಅತೀವವಾದ ಕಿರಿಕಿರಿಯನ್ನುಂಟು ಮಾಡುತ್ತದೆ. ಅದು ನಿರಾಶೆಯನ್ನೆಬ್ಬಿಸುವುದಕ್ಕೆ ಕಾರಣ ಹಳೆಯ ಸೂತ್ರಗಳನ್ನು ತಲೆಕೆಳಗು ಮಾಡುತ್ತದೆಂಬುದೇ ಹೊರತು ಅದರಲ್ಲಿ ಯಾವುದೋ ವಾಸ್ತವಿಕವಾದ ತೊಡಕು ಇದೆ ಎಂಬುದಲ್ಲ. ಹೊಸ ಭಾವನೆಯನ್ನು ರೂಢಿಬದ್ಧ ವಿಶ್ವಾಸದಂತೆಯೇ ಅಪ್ಪಿಕೊಂಡರೆ ಅದು ಹಿತವಾದ ಬಾಳಿಗೆ ಆಸರೆ ನೀಡಬಲ್ಲ ಆಲದ ಮರವಾಗುತ್ತದೆ. ಬಾಳಿನ ಮೂಲ ಪರಿಕರಗಳಿಂದ ಮಾನವ ಕುಲವು ತನಗಾಗಿ ನಿರ್ಮಿಸಿಕೊಂಡಿರುವ, ಸಹಬಾಳ್ವೆಗೊಂಡಿರುವ ಹಾಗೂ ಸಮಪ್ರಮಾಣದಲ್ಲಿ ಸಮಂಜಸವಾಗಿರುವ ಬಾಳಿನ ರೂಪಿಕೆಗಳನ್ನು ನಮ್ಮ ಆಶಾವಾದಕ್ಕೆ ನೆಲಗಟ್ಟನ್ನಾಗಿಯೂ, ಸಹಿಷ್ಣುತೆಗೆ ಹೊಸ ಆಧಾರಗಳನ್ನಾಗಿಯೂ ಮಾಡಿಕೊಂಡರೆ ಆಗ ನಾವು ಹೆಚ್ಚು ವಾಸ್ತವಿಕವಾದ ಸಮಾಜ ಧರ್ಮವನ್ನು ಕಂಡುಕೊಂಡಂತಾಗುತ್ತದೆ.

ಪಾರಿಭಾಷಿಕ ಶಬ್ದಕೋಶ

ಅ ಅಗಮ್ಯಗಮನ	Incest
ಅಡ್ಡದಾರಿ	Deviance
ಅತಿರೇಕಿ	Abnormal, Aberrant
ಅತಿಶಿಷ್ಟತೆ	Dourness
ಅತೀಂದ್ರಿಯ ವರ್ತನೆ	Mystic behaviour
ಅತೀಂದ್ರಿಯ ಶಕ್ತಿ	Mystic sanction
ಅಧಿಷ್ಠಾನ ಶಕ್ತಿ	Power of Command
ಅರ್ಧಕುಲೀನ	Half noble
ಅನುಕಂಪನ ಮಾಂತ್ರಿಕತೆ	Sympathetic magic
ಅನುಕರಣೀಯತೆ	Imitativeness
ಅನುಕರಣೀಯ ಮಾಟ	Imitative magic
ಅನುರೂಪತೆ	Conformity
ಅನುವರ್ತನೆ	Rapport
ಅನ್ಯೂನ	Perfect
ಅಪಸ್ಮಾರ	Catalepsy
ಅಪಶ್ರುತಿ	Disonance
ಅಮೂರ್ತ	Immaterial, Impersonal
ಅವಕುಂಠನ	Head dress
ಅಸಾಧ್ಯಾದರ್ಶವಾದಿತ್ವ	Utopianism
ಅಹಂಪ್ರಲಂಬನ	Ego-extension
ಅಹಂಭಿನ್ನವಾಗಿ	Objectively
ಅಕ್ಷರಪೂರ್ವ	Preliterate
ಆ ಆಂತರಂಗಿಕ	Introspective
ಆತ್ಮ ವಿಸ್ಮೃತಿ	Self oblivion
ಆವಿಷ್ಕರಣ	Innovation
ಇ ಇಳಿಪಟ್ಟಿ	Stole

ಉ	ಉಚ್ಚಾಟನಾ ಮಂತ್ರ	Exorcism
	ಉಚ್ಚಾಟನೆ	Exorcism
	ಉತ್ಸವಪ್ರಿಯ	Ceremonious
	ಉಬ್ಬುಸಾಲು	Ledge
ಎ	ಎರೆ	Bait
ಏ	ಏಡಿಹುಣ್ಣು	Gangossa
ಐ	ಐಹಿಕ	Materialist
	ಐಹಿಕವಾದ	Materialism
	ಐಹಿಕತೆ	Secularisation
ಒ	ಒಡ್ಡು ಮೋಡಗಳು	Cumulus clouds
	ಒಳಹುರಿ	Core
ಅಂ	ಅಂಗ ವೃದ್ಧಿಗಳು	Accretions
	ಅಂತರಬಣ ಸವಾಲು	Intertribal Challenge
ಕ	ಕಣಿ ಹೇಳುವುದು	Divining
	ಕರ್ಮಕಾಂಡ ವಿವರಗಳು	Elaborate Practices
	ಕಲ್ಪನಾರಾಜ್ಯ	Utopia
	ಕಾಲನಿಯತ	Time binding
	ಕುಟುಂಬದ ಸಾಲುನೆಲೆ	Family alignment
	ಕುದುರೆ ಮಸಾಲೆ ಸೊಪ್ಪು	Clover
	ಕುಲದೇವತಾವಾದ	Totemism
	ಕುಲದೇವತಾ ಸ್ತಂಭ	Totempole
	ಕುಲಧನ	Heirloom
	ಕುಲವ್ಯವಸ್ಥೆ	Clan organisation
	ಕುಲವೈರ	Blood feud
	ಕೂಡಿಕೆಯ ರೂಢಿಗಳು	Mating habits
	ಕೃತಕನಾಣ್ಯ	Counter
	ಕೇಡಿಗತನ	Malevolence
	ಕೊಬ್ಬಿಸುವ ಗೃಹಗಳು	Fatting houses
	ಕೊಂಬುಕೊಕ್ಕಿನ ಹಕ್ಕಿ	Hornbill
	ಕ್ಯಾನಿಬಲ್	Canibal

	ಕ್ರಿಯಾತ್ಮಕ ಅಧ್ಯಯನ	*Functional study*
	ಕ್ರಿಯಾತ್ಮಕ ವಿಧಾನ	Functional app roach
	ಕ್ರೌರ್ಯಕಾಮ	Sadism
	ಕ್ಷುದ್ರಧರ್ಮಿ	Pagan
	ಕ್ಷೇತ್ರಾಧ್ಯಯನ	Field work
	ಕ್ಷೇತ್ರಾಧ್ಯಾಯಿ	Field worker
ಗ	ಗರ್ಭಾಣು	Germcell
	ಗೀಳು	Obsession
	ಗುಬುಟು	Button
	ಗುಣವಿಮರ್ಶೆ	Appraisal
	ಗುಣ ವಿವರಣೆ ನೀಡು	Characterise
	ಗುಣಾತ್ಮಕ ವಿನ್ಯಾಸ	Characteristic configuration
	ಗುಂಪೆಂಬ ಭ್ರಮೆ	Group fal lacy
	ಗೂಢವಿದ್ಯೆ	Esoteric mystery
	ಗೆಣಸು	Yam
	ಗೆಲವೊಸಗೆ	Triumph
	ಗೋತ್ರ ಮಿಶ್ರಣ	Intermixture
	ಗ್ರಹಿಕೆ	Perception
ಚ	ಚಿತ್ತ ಸ್ಥಿಮಿತತೆ	Sobriety
	ಚಿಪ್ಪಿನ ಅಡ್ಡಿಕೆ	Shell necklace
	ಚಿಪ್ಪಿನ ತೋಳಂಬಳೆಗಳು	Arm shells
	ಚೊಲ್ಲಾ ಮುಳ್ಳು	Barbs of cholla
ಜ	ಜನಪದ	Community
	ಜಿತೇಂದ್ರಿಯತ್ವ	Chastity
	ಜೂಜುಗಡ್ಡಿ	Gambling stick
	ಜೈವಿಕ ನಿಯೋಜನೆ	Biological Constitution
	ಜೈವಿಕ ರಚನೆ	Biological structure
	ಜೈವಿಕ ಸಮರೂಪ	Biological homogeneity
	ಜೈವಿಕ ಹೊಂದಾಣಿಕೆ	Biological adjustment
	ಜೈವಿಕಾತೀತ	Superorganic

	ಜೊಂಡು ಕಡ್ಡಿ	Willow shoot
	ಜ್ಯೇಷ್ಠಾಧಿಕಾರ	Primogeniture
	ಜ್ಞಾತ ಚೌಕಟ್ಟು	Subjective frame work
	ಜ್ಞೇಯ ಜಗತ್ತು	Objective world
	ಜ್ಞೇಯ ಜೀವನ	Conscious life
ಡ	ಡಯೋನೀಶಿಯನ್	Dionysian
ತ	ತತ್ವ ಮತ್ತು ಕ್ರಿಯೆ	Dogma and practice
	ತಲೆಯೋಡು	Scalp
	ತಾಯಿತ	Fetish
	ತಾರುಣ್ಯ	Adolescence
	ತುರೀಯಾನುಭವ	Ecstatic experience
	ತೇಜೋವಧೆ	Humiliation
ದ	ದತ್ತಿ	Trust
	ದಬ್ಬಳ ರಂಧ್ರ	Awl hole
	ದಾರಿ ತಪ್ಪಿದ	Aberrant
	ದಿವ್ಯ ದರ್ಶನ	Vision
	ದೀಕ್ಷಾವಿಧಿ	Initiation
	ದುಮ್ಮಾನ	Sulking
	ದುಂಪ್ರೇರಣೆ	Temptation
	ದೇವಡಿ	Retreat
	ದೈವನಿಯಾಮಕ ವಿಧಿ	Supernatural sanction
	ದೈವಿಕ ಅಭ್ಯಾಗತ	Supernatural visitant
	ದೈವಿಕ ಶಕ್ತಿ	Supernatural Power
ಧ	ಧ್ವನಿಕ್ರಮ	Phonetic system
	ಧ್ವನಿತಂತು	Vocal chord
	ಧಾರ್ಮಿಕ ಉದ್ವೇಗ	Religious emotion
	ಧೀರೋದಾತ್ತತೆ	Chivalry
ನ	ನ್ಯಣ	Tweedledum and Tweedle-dee
	ನಡವಳಿಕೆ	Practice

	ನಡುಹುರಿ	Core
	ನಯಸ್ಥ	Suave
	ನರವ್ಯಾಧಿ ಪೀಡಿತ	Neurotic
	ನರಸಂಬಂಧವಾದ ಗೊಂದಲ	Motor disturbance
	ನಾಮ ಮಾಂತ್ರಿಕ	Name magic
	ನಿಗೂಢತೆ	Mystical
	ನಿಗೂಢ ಶಕ್ತಿ	Potentiality
	ನಿರ್ಬಂಧಕ	Compulsive
	ನಿಯತಿ ಭಾವ	Destiny idea
	ನಿಯಂತ್ರಕ	Regulative
	ನಿರಾತಂಕ ಸ್ವಾತಂತ್ರ್ಯ	Laissez faire
	ನಿರಾಕ್ಷೇಪ	Inoffensive
	ನಿರುಪಾಧಿಕ	Absolute
	ನಿರೋಧಶಕ್ತಿ	Resistance
	ನಿಶ್ಚಿತಾವಧಿಯ ಕೂಲಿಗಾರ	Indentured labour
	ನಿಷ್ಠುರ ಭಾವ	Prudery
	ನಿಷೇಧ ಪ್ರತಿಷೇಧಗಳು	Prohibitions
	ನೀತಿ ಪದ್ಧತಿ	Morality
	ನೃತ್ಯ ರೂಪಿಕೆಗಳು	Dance patterns
	ನೆಲ ಮುಳ್ಳಿ	Strawberry
	ನೇರ ಶಾಖೆ	Lineal
	ನೈಚ್ಯಭಾವ	Inferiority complex
	ನೈತಿಕಾಧಾರವುಳ್ಳ ರೂಢಿಕೆಗಳು	Mores
	ನ್ಯಾಸಧಾರಿ	Depository
ಪ	ಪರಂಪರೆ	Tradition
	ಪೂಜಾಗೃಹ	Ceremonial chamber
	ಪೂಜ್ಯವಸ್ತು	Sacred objetc
	ಪವಿತ್ರ ಔಷಧಿಗಳ ಗಂಟು	Sacred medicine bundle
	ಪಂಚಾಂಗ	Calender
	ಪರಾಕ್ರಮಾವೇಶ	Heroism

	ಪಾಂಡನಸ್ ಎಲೆ	Pandanus leaf
	ಪಾಲನ ವಿಧಾನ	Nursery behaviour
	ಪೂಜನೀಯ ದೃಷ್ಟಿ	Reverence
	ಪೆಯೋಟ್	Peyote
	ಪೊಟ್ಲಾಚ್	Potlach
	ಪೌರಾಣಿಕ ಪೀಳಿಗೆ	Mythological ancestry
	ಪ್ರಕ್ಷುಬ್ಧತೆ	Turbulence
	ಪ್ರಕೃತ್ಯತೀತ	Supernatural
	ಪ್ರಜ್ಞೆಯ ಇತಿಹಾಸ	History of Intelligence
	ಪ್ರಣಯ ದ್ರೋಹಕ್ಕೆ ಗುರಿಯಾದ	Jilted
	ಪ್ರಣಯ ಯಕ್ಷಿಣಿ	Love magic
	ಪ್ರತಿ ಮಂತ್ರ	Counter charm
	ಪ್ರತಿಹಕ್ಕು	Counter claim
	ಪ್ರತಿಷ್ಠೆಯ ಹಕ್ಕುಗಳು	Prestige prerogatives
	ಪ್ರಧಾನ ಪ್ರೇರಕ	Prime motivation
	ಪ್ರಭುತ್ವ ಬಿರುದು	Nobility title
	ಪ್ರಭುತ್ವ ವರ್ಗ	Nobility
	ಪ್ರಮಾಣ	Proof
	ಪ್ರಮೇಯ	Proposition
	ಪ್ರಲಂಬನ	Extension
	ಪ್ರಸರಣ	Diffusion
	ಪ್ರಸರಣಾ ಅಧ್ಯಯನ	Diffusion study
	ಪ್ರಾರ್ಥನಾದಂಡ	Prayer stick
	ಪ್ರೇತ ವ್ಯವಹಾರ ಪ್ರದರ್ಶನ	Seance
	ಪ್ರೌಢಾವಸ್ಥೆ	Puberty
ಫ	ಫಲಕಟ್ಟುವ ಮಂತ್ರ ಪಠಣ	Husbanding incantation
	ಫಲಶಕ್ತಿ	Fertility
ಬ	ಬಣ	Tribe
	ಬಣೀಯ ಸಂಘ	Tribal society

	ಬಹಿರ್ಮುಖಿ	Exotic
	ಬಹಿರ್ವಿವಾಹಿ	Exogomous
	ಬಹುರೂಪ ವ್ಯಕ್ತತೆ	Hydra manifestation
	ಬಾಲಿಶ ಪ್ರವೃತ್ತಿ	Childishness
	ಬಾಹ್ಯ ಕರ್ಮಾಚರಣೆ	Ceremonialism
	ಬುಡಕಟ್ಟು ಪೂರ್ವಗ್ರಹ	Race prejudice
	ಬುಡೋ ಬುಡೋ	Budo Budo
	ಬುದ್ಧಿ ಭ್ರಮಣೆ	Aberration
	ಬೆರ್ಡಾಚೆ	Berdache
	ಬೇ ಮರ	Bay tree
	ಬೌದ್ಧಾತ್ಮಕ	Intellectual
	ಬ್ರಹ್ಮಚರ್ಯ	Continence
ಭ	ಭಯೋದ್ರೇಕ	Terror
	ಭಾವನಾತ್ಮಕ	Emotional
	ಭಾವೋನ್ಮಾದ	Intensity
	ಭಿನ್ನ ಶಾಖೆ	Collateral
	ಭ್ರಾಂತಿ	Hallucination
ಮ	ಮತಧರ್ಮೀಯ ಸಂಘ	Religious society
	ಮದ್ದುಗಾರ	Medicine man
	ಮಧ್ಯಸ್ಥವಾಗಿ ಆಯ್ದ ಸಮಸ್ಥಿತಿ	Arbitraily Selected nermality.
	ಮನವಿ ಕಾಣಿಕೆ	Solicitory gift
	ಮನುಷ್ಯ ಮಾಂಸ ಭಕ್ಷಣ ಅನುರಕ್ತತೆ	Epicurean Cannibalism
	ಮನೋವಿಕಲ್ಪ	Paranoia
	ಮಾಯಕಮದ್ದು	Drugs
	ಮಲಿನತೆ	Contamination
	ಮಂತ್ರ	Ritual
	ಮಂತ್ರ ಕಾವ್ಯ	Ritual poetry
	ಮಂತ್ರೋಚ್ಚಾರ	Incantation

ಮಾಗಿ ಹಬ್ಬ	Winter ceremonial
ಮಾಟ	Sorcery
ಮಾಟಗಾತಿ	Witch
ಮಾಟಗಾರಿಕೆ	Witch craft
ಮಾತೃ ಸಂತಾನ	Matrilineal
ಮಾತೃ ಸ್ಥಾನೀಯ	Matrilocal
ಮಾನದಂಡ	Standard
ಮಾನವ ಪೂರ್ವ	Prehuman
ಮಾನವ ಬುಡಕಟ್ಟು	Human race
ಮಾನವ ಶಾಸ್ತ್ರ	Anthropology
ಮಾನವ ಕುಲಶಾಸ್ತ್ರ	Ethnology
ಮಾನವ ಸಜ್ಜು	Human equipment
ಮಾನವೀಯ ಹೊಂದಾಣಿಕೆ	Human adjustment
ಮಾಂತ್ರಿಕ ಅನುಭೋಗ	Magical prerogative
ಮಾಂತ್ರಿಕ ಕಳ್ಳತನ	Magical thieving
ಮಾಂತ್ರಿಕ ಕಾರ್ಯಕಾರಿತ್ವ	Magical efficacy
ಮಾಂತ್ರಿಕ ಕಾವಲು	Magical watch
ಮಾಂತ್ರಿಕ ಕೊಲೆ	Supernatural Killing
ಮಾಂತ್ರಿಕ ತರಪೇತಿ	Magical training
ಮುಖವಾಡದ ದೇವತೆ	Masked god
ಮುಂದರಿಕೆ	Initiative
ಮೂರ್ಛಾರೂಪ	Cataleptic
ಮೂಲಜೀವದ್ರವ್ಯ ರಚನೆ	Body metabolism
ಮೂಲಪ್ರೇರಣೆ	Original impulse
ಮೂಲವಂಶ	Stock
ಮೇಲುಗೈ ಲಕ್ಷಣಗಳು	Dominant characteristics
ಮೇಲು ಸೇರುವ	Coincidence, Overlapping
ಮೈದುಂಬುವುದು	Possession
ಮೋಡಿಗಾರ	Sorcerer
ಮೋಡಿವಿದ್ಯೆ	Magic
ಮೌಲ್ಯಮಾಪನ	Standard

ಯ	ಯಥಾರ್ಥವಾದಿ	Realistic
	ಯಥೋಚಿತ ವಿಶ್ಲೇಷಣೆ	Adequate analysis
	ಯಾಂತ್ರಿಕ ಕಾರ್ಯಕಾರಿತ್ವ	Mechanical efficacy
	ಯಾಂತ್ರಿಕತೆ	Mechanism
	ಯುಕ್ಕಾಚಾವಟಿ	Yucca whip
ರ	ರಕ್ತ ಸಂಬಂಧೀ ಗುಂಪು	Blood relationship
	ರಕ್ಷಕ ಭೂತ	Guardian spirit
	ರಕ್ಷಾಮಂತ್ರ	Charm
	ರಸಜ್ಞತೆ	Aestheticism
	ರಸಾಭಿಜ್ಞಾನ	Aesthetics
	ರಾಕ್ಷಸಕಳ್ಳಿ	Giant Cacus
	ರಾಜಿಯ ವರ್ತನೆ	Conciliatory behaviour
	ರೂಢಿ ಬದ್ಧ ವರ್ತನೆ	Customary behaviour
	ರೂಪಿಕಾತ್ಮಕತೆ	Patterning
	ರೂಪಿಕೆ	Pattern
ಲ	ಲಯಬದ್ಧತೆ	Rhythm
	ಲಾಳ	Reed
	ಲೈಂಗಿಕ ಸಾಂಕೇತಿಕತೆ	Sex symbolism
	ಲೌಕಿಕ	Secular
ವ	ವರ್ಗೀಕೃತ ಬಾಂಧವ್ಯ ಸೂಚಕ ಪದ್ಧತಿ	Classificatory kinship system
	ವಡ	Vada
	ವಮನಕಾರಿ	Vomittor
	ವಯಸ್ಕತೆ	Adulthood
	ವಶ್ಯಸುಪ್ತಿ	Vision, trance
	ವಾಬುವಾಬು	Wabu wabu
	ವಾರಸುದಾರಿಕೆ	Inheritance
	ವಿಕಾಸಾತ್ಮಕ ವಿಧಾನ	Evolutionary method
	ವಿಕಾಸಾನುರೀತ್ಯವಾದ ಅನುಕ್ರಮ	Evolutionary sequence

ವಿಚಾರ, ಭಾವನೆ, ಕ್ರಿಯೆಗಳ ಕೊಂಡಿ ತಪ್ಪಿದ ಮನೋರೋಗಿ	Schizophrenic
ವಿಚಾರ ಮತ್ತು ಆಚಾರಗಳ ಸುಸಂಗತ ರೂಪಿಕೆ	Consistent Pattern of thought and action
ವಿಚ್ಛಿದ್ರಕಾರಿ ಮಾನಸಿಕ ಸ್ಥಿತಿ	Disruptive psychological state
ವಿಜಾತೀಯ	Heterogeneous
ವಿಜಾತೀಯತೆ	Eccentricity
ವಿಧಾನ ಶಾಸ್ತ್ರೀಯ	Methodologically
ವಿಧಿವಿಹಿತ ಮಾನ್ಯತೆ	Formal recognition
ವಿನ್ಯಾಸ	Modelling
ವಿನ್ಯಾಸಾತ್ಮಕ ಅರ್ಥವಿವರಣೆ	Configurational interpretation
ವಿವಾಹಪೂರ್ವ ಅನುನಯ	Courtship
ವಿಷಮ ಪರೀಕ್ಷೆ	Ordeal
ವಿಶೇಷ ಅಧಿಕಾರ	Prerogative
ವಿಹಿತಾಚರಣೆ	Formal procedure
ವೈವಿಧ್ಯ ಒಳ್ಳಿತುಗಳು	Contrasted goods
ವ್ಯತಿರೇಕಿ	Abnormal
ವ್ರತಸಂಬಂಧೀ ತಂದೆ	Ceremonial father
ಶ ಶಕ್ತಿಯ ಮೂಲನೆಲೆ	Source of power
ಶಾಸನ ಬದ್ಧ ಅಸ್ತಿತ್ವ	Legality
ಶಾಸ್ತ್ರೀಯ ಗುಂಪು	Technical group
ಶಿಖರಗೃಹ	Cliff dwelling
ಶಿಥಿಲ	Disintegrate
ಶಿಷ್ಟಾಚಾರ ಪೂರ್ಣ ವಿನಿಮಯ	Ceremonial exchange
ಶೋಕಾಚರಣೆ	Mourning
ಶ್ಯಾಮನ್	Shaman
ಸ ಸನ್ನಿವೇಶಾತ್ಮಕ ವಿವರಣೆ	Environmental explanation

ಸಮಗ್ರ ಮನೋಭಾವಗಳು	Integrated attitudes
ಸಮಗ್ರತೆ	Integration
ಸಮರೂಪ	Uniform
ಸಮ ಮತ್ತು ವಿಷಮ	Normal and abnormal
ಸಮಾಜಧರ್ಮ	Social faith
ಸಮಾಜ ವ್ಯವಸ್ಥೆ	Social order
ಸಮಾಜೀಕೃತ ರೂಢಿ	Socialised habit
ಸಮುದ್ರ ತೀರದಲ್ಲಿ ಆಯ್ದು ತಿನ್ನುವವ	Beach comber
ಸರ್ವಚೇತನವಾದ	Animism
ಸಹಜ ಪ್ರವೃತ್ತ ವರ್ತನೆ	Instinctive behaviour
ಸಹಜ ಪ್ರವೃತ್ತೀಯ	Instinctive
ಸಹ ಸಂಯೋಗತೆ	Equivalence
ಸಾಧನೀಯತೆ	Possibility
ಸಾಧಾರಣ ಬಂಧನ	Ordinary bounds
ಸಾಪೇಕ್ಷ್ಯತೆ	Relativity
ಸಾಮಾಜಿಕ ಮಾನ್ಯತೆ	Social acceptance
ಸಾಮಾಜಿಕ ಬಂಡವಾಳ	Social Capital
ಸಾಮಾಜಿಕ ನಿಯಮ	Sociological law
ಸಾಮಾಜಿಕ ನಿಷ್ಕರ್ಷಕ	Social determinant
ಸಾಮಾಜಿಕ ವ್ಯವಸ್ಥೆ	Social organisation
ಸಾಮಾಜಿಕ ವಿಧಿ ಸಂಹಿತೆ	Social regulation
ಸಾಮಾಜಿಕ ವರ್ತನೆ	Corporate behaviour
ಸಿದ್ಧಾಂತ	Dogma
ಸುನಮ್ಯತೆ	Plasticity
ಸುಲಭ ನಮ್ಯತೆ	Malleability
ಸುಸಂಗತತೆ	Harmony
ಸೂಕ್ಷ್ಮವೇದಿ	Neurotic
ಸೋಪಾಧಿಕ ಪ್ರತಿಕ್ರಿಯೆ	Conditioned response
ಸಂಖ್ಯಾ ಪರಿಶೀಲನೆಯಿಂದ ದೊರೆತ ಸರಾಸರಿ	Statistical average

ಸಂಪೂರಣಗೊಳಿಸು	Saturate
ಸಂವೇದನೆ	Sensitivity
ಸಂವೇದನೆಗಳ ಕ್ರಮ	Sensory routine
ಸಂವೃತ ಪದ್ಧತಿ	Closed system
ಸಂಸ್ಕಾರ	Ritual
ಸಂಸ್ಕಾರವಿಧಿ	Ceremony
ಸಂಸ್ಕೃತಿ	Culture
ಸಂಸ್ಕೃತಿಯ ಅಂತಃಪ್ರವೃತ್ತಿ	Genius of culture
ಸಂಸ್ಕೃತಿಯ ತಿರುಳು	Heart of Culture
ಸಂಸ್ಕೃತಿಯ ಸ್ವಭಾವ ಲಕ್ಷಣ	Cultural trait
ಸಂಸ್ಥೀಕರಿಸಿರುವ	Institutionalised
ಸಾಂಕೇತಿಕ ನಿರೂಪಣೆ	Symbolism
ಸಾಂಘಿಕ ಸಂಸ್ಕಾರ	Group ritual
ಸಾಂಸ್ಕೃತಿಕ ಇಂಗಿತ	Cultural implication
ಸಾಂಸ್ಕೃತಿಕ ಗುರಿ	Cultural theme
ಸಾಂಸ್ಕೃತಿಕ ಜಾಲ	Cultural web
ಸಾಂಸ್ಕೃತಿಕ ನಿಯಂತ್ರಣ	Cultural control
ಸಾಂಸ್ಕೃತಿಕ ಪ್ರಕ್ರಿಯೆ	Cultural process
ಸಾಂಸ್ಕೃತಿಕ ಪ್ರದೇಶ	Cultural area
ಸಾಂಸ್ಕೃತಿಕ ರೂಪ	Cultural form
ಸಾಂಸ್ಕೃತಿಕ ವ್ಯವಸ್ಥೆ	Cultural arrangement
ಸಾಂಸ್ಕೃತಿಕ ಶಕ್ತಿ	Cultural energy
ಸಾಂಸ್ಕೃತಿಕ ಸಾಧನ	Cultural mechanism
ಸಾಂಸ್ಕೃತಿಕ ಸಂಕೀರ್ಣತೆ	Cultural complexity
ಸಾಂಸ್ಕೃತಿಕ ಹಿಂಬೀಳಿಕೆ	Cultural lag
ಸಾಂಸ್ಕಾರಿಕ ತಂತ್ರ	Ritual technique
ಸಾಂಸ್ಕಾರಿಕ ನೃತ್ಯ	Ceremonial dance
ಸಾಂಸ್ಕಾರಿಕ ವಿನಿಮಯ	Ritual exchange
ಸಾಂಸ್ಕಾರಿಕ ಸ್ಥಾನಮಾನ	Cermonial role
ಸಾಂಸ್ಕಾರಿಕ ಸೇಡು	Ritual revenge
ಸಾಂಸ್ಥಿಕ ಅನುಮತಿ	Institutional sanction

	ಸ್ತರ	Order
	ಸ್ಥಾನದಿಶಾ ವಿನ್ಯಾಸ	Orientation
	ಸ್ವಚ್ಛಂದತೆ	License
	ಸ್ವಬಳ್ಳಿ	Inbreeding
	ಸ್ವಲಿಂಗಾನುರಕ್ತಿ	Homosexuality
	ಸ್ವಯಂಪ್ರೇರಿತ ಗುಂಪುಗಳು	Voluntary groups
	ಸ್ವಂತದ ಮಾಂತ್ರಿಕವಸ್ತು	Personal fetish
	ಸ್ವಾನುರಕ್ತಿ	Narcissism
	ಸೃಷ್ಟಿ ಆರಂಭದ ಕತೆ	Origin myth
	ಸೃಷ್ಟಿ ಪ್ರಥಮವಾದ ಧರ್ಮ	Primordial religion
ಹ	ಹಗುರ ಭಾವ	Sensation of levitation
	ಹಗೆತನ	Hostility
	ಹಿಂಸೆಗೆ ಗುರಿಯಾಗುವುದರಿಂದ ತೃಪ್ತಿ	Mesoschism.

ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಪುಸ್ತಕಗಳು

1.	ಸುಭಿಕ್ಷತೆಗೆ ತೆರೆದ ಬಾಗಿಲು	(ಪ್ರತಿಗಳು ತೀರಿವೆ)	2-00
2.	ಪೀಡೆ ನಿರ್ವಹಣೆ	(")	5-00
3.	ಕೀಟ ವಿಂಗಡಣೆ		15-00
4.	ಕೀಟ ಹತೋಟಿ	(ದ್ವಿತೀಯ ಮುದ್ರಣ)	12-00
5.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ	(ಭಾಗ-1)	6-25
6.	ತರಕಾರಿ ಬೇಸಾಯ	(ಪ್ರತಿಗಳು ತೀರಿವೆ)	12-50
7.	ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ	(ಸಾದಾಪ್ರತಿ)	5-00
	ನಿರೂಪಣಾವಳಿ.	(ಕ್ಯಾಲಿಕೊ)	6-25
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	(ಸಾದಾಪ್ರತಿ)	15.00
		(ಕ್ಯಾಲಿಕೊ)	19-00
9.	ರೈತರ ನೆಚ್ಚುಮೆಚ್ಚಿನ ಮರಗಳು	(ಸಾದಾಪ್ರತಿ)	15-00
		(ಕ್ಯಾಲಿಕೊ)	19-00
10.	ಸಾಕು ಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ	(ಸಾದಾಪ್ರತಿ)	11-25
	(ಭಾಗ-2)	(ಕ್ಯಾಲಿಕೊ)	15-00
11.	ಬೀಜಗಣಿತ ಪರಿಚಯ	(ಅಚ್ಚಿನಲ್ಲಿದೆ)	
12.	ಮಣ್ಣು ಮತ್ತು ನೀರು ನಿರ್ವಹಣೆ	(ಸಾದಾಪ್ರತಿ)	15-00
		(ಕ್ಯಾಲಿಕೊ)	19-00
13.	ಮಣ್ಣು	(ಸಾದಾಪ್ರತಿ)	11-25
		(ಕ್ಯಾಲಿಕೊ)	15.00
14.	ಕೃಷಿ ಸಹಕಾರ	(ಸಾದಾಪ್ರತಿ)	6-25
		(ಕ್ಯಾಲಿಕೊ)	10-00
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	(ಸಾದಾಪ್ರತಿ)	15-00
		(ಕ್ಯಾಲಿಕೊ)	19-00
16.	ಗೋಸಂಪತ್ತು	(ಸಾದಾಪ್ರತಿ)	6-25
		(ಕ್ಯಾಲಿಕೊ)	10.00
17.	ಧಾನ್ಯದಾಸ್ತಾನು ತತ್ವ ಮತ್ತು ಪದ್ಧತಿಗಳು	(ಸಾದಾಪ್ರತಿ)	7-50
		(ಕ್ಯಾಲಿಕೊ)	11-25
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	(ಸಾದಾಪ್ರತಿ)	17-50
		(ಕ್ಯಾಲಿಕೊ)	21-25
19.	ಪಶುವೈದ್ಯಕೀಯ ವಿಜ್ಞಾನ	(ಸಾದಾಪ್ರತಿ)	7-50
		(ಕ್ಯಾಲಿಕೊ)	11-25

20.	ಹೊಲದ ಬೆಳೆಗಳಿಗೆ ಬೀಳುವ ಕೀಟಗಳು	(ಸಾದಾಪ್ರತಿ)	8-25
		(ಕ್ಯಾಲಿಕೊ)	12-00
21.	ಟ್ರಾಕ್ಟರ್ ಹಾಗೂ ಅವುಗಳನ್ನು ಸಂಸ್ಥಿತಿಯಲ್ಲಿಡುವ ಕ್ರಮಗಳು	(ಸಾದಾಪ್ರತಿ)	7-50
		(ಕ್ಯಾಲಿಕೊ)	12-50
22.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ (ಭಾಗ-3)	(ಸಾದಾಪ್ರತಿ)	10-00
		(ಕ್ಯಾಲಿಕೊ)	15-00
23.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	(ಸಾದಾಪ್ರತಿ)	11-25
		(ಕ್ಯಾಲಿಕೊ)	16-25
24.	ಕಣಜದ ಪೀಡೆಗಳು ಹಾಗೂ ಅವುಗಳ ಹತೋಟಿ	(ಸಾದಾಪ್ರತಿ)	15-00
		(ಕ್ಯಾಲಿಕೊ)	19-25
25.	ಸಸ್ಯ ವರ್ಗೀಕರಣ ಶಾಸ್ತ್ರ	(ಸಾದಾಪ್ರತಿ)	15-00
		(ಕ್ಯಾಲಿಕೊ)	20-00
26.	ಪೌಷ್ಟಿಕ ಆಹಾರ	(ಸಾದಾಪ್ರತಿ)	9-00
		(ಕ್ಯಾಲಿಕೊ)	14-00
27.	ಕಡಲ ಮೀನುಗಾರಿಕೆ	(ಸಾದಾಪ್ರತಿ)	5-00
		(ಕ್ಯಾಲಿಕೊ)	10-00
28.	ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10-70
29.	ಕಬ್ಬಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		4-50
30.	ಶಿಶುವಿಹಾರ	(ದ್ವಿತೀಯ ಮುದ್ರಣ)	6-00
31.	ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		7-50
32.	ಕೃಷಿ ಎಂಜಿನಿಯರಿಂಗ್ ಪಠ್ಯಪುಸ್ತಕ	(ಸಾದಾಪ್ರತಿ)	9-50
		(ಕ್ಯಾಲಿಕೊ)	14-00
33.	ಇಲಿಗಳು ಹಾಗೂ ಅವುಗಳ ನಿಯಂತ್ರಣ	(ಸಾದಾಪ್ರತಿ)	9-50
		(ಕ್ಯಾಲಿಕೊ)	13-25
34.	ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		12-50

35.	ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		16-25
36.	ಕ್ಯಾನಿಂಗ್	(ಸಾದಾಪ್ರತಿ)	16-25
		(ಕ್ಯಾಲಿಕೊ)	21-25
37.	ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10-75
38.	ಜೀವಕೋಶ ಕ್ರಿಯಾಶಾಸ್ತ್ರ ಹಾಗೂ	(ಸಾದಾಪ್ರತಿ)	20-00
	ಜೀವರಸಾಯನಶಾಸ್ತ್ರ	(ಕ್ಯಾಲಿಕೊ)	25-00
39.	ಎಲುಬುಶಾಸ್ತ್ರ	(ಸಾದಾಪ್ರತಿ)	11-25
		(ಕ್ಯಾಲಿಕೊ)	16-25
40.	ಕಡಲೆಕಾಯಿ	(ಸಾದಾಪ್ರತಿ)	10-00
		(ಕ್ಯಾಲಿಕೊ)	15-00
41.	ಗಣಿತಶಾಸ್ತ್ರ ಪ್ರವೇಶಿಕೆ (ಭಾಗ–1)	(ಸಾದಾಪ್ರತಿ)	25-00
		(ಕ್ಯಾಲಿಕೊ)	30-00
42.	ತೆಂಗು ಅಡಿಕೆ ಇತರ ಗರಿಮರಗಳ ಕೀಟಗಳು ಹಾಗೂ ಅವುಗಳ ಹತೋಟಿ		9-00
43.	ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		12.00
44.	ಭಾರತದಲ್ಲಿ ಕೋಳಿಸಾಕಣೆ	(ಸಾದಾಪ್ರತಿ)	22-50
		(ಕ್ಯಾಲಿಕೊ)	27-50
45.	ಕಲ್ಲುನಾರು (ಭೂತಾಳೆ) ಗಿಡಗಳು		5.00
46.	ಎಣ್ಣೆ (ಬೀಜ) ಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		7.00
47.	ಹತ್ತಿ (ನೂಲು) ಹಾಗೂ ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10.00
48.	ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		5.00
49.	ಮಾದಕ (ಹೊಗೆಸೊಪ್ಪು, ಗಾಂಜ) ಹಾಗೂ ಸಾಂಬಾರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		3.75
50.	ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		4.50

51. ಸಸ್ಯ ಸಾಮ್ರಾಜ್ಯ	(ಸಾದಾಪ್ರತಿ)	25.00
	(ಕ್ಯಾಲಿಕೊ)	30.00
52. ಭಾರತೀಯ ಗ್ರಾಮೀಣ ಯುವಕ ರೈತ ಸಂಘಟಣೆ	(ಸಾದಾಪ್ರತಿ)	8.25
	(ಕ್ಯಾಲಿಕೊ)	13.25
53. ಮಿನುಗಾರಿಕೆ	(ಸಾದಾಪ್ರತಿ)	10.00
	(ಕ್ಯಾಲಿಕೊ)	15.00
54. ಗಣಿತಶಾಸ್ತ್ರ ಪ್ರವೇಶಿಕೆ (ಭಾಗ–2)	(ಸಾದಾಪ್ರತಿ)	20.00
	(ಕ್ಯಾಲಿಕೊ)	25.00
55. ಸಾವಯವ ರಸಾಯನ ಶಾಸ್ತ್ರ ಪ್ರವೇಶಿಕೆ	(ಅಚ್ಚಿನಲ್ಲಿದೆ)	
56. ಪಶುರೋಗಗಳು ಹಾಗೂ ಸಾರ್ವಜನಿಕ ಆರೋಗ್ಯ	(ಸಾದಾಪ್ರತಿ)	12-50
	(ಕ್ಯಾಲಿಕೊ)	17-50
57. ಭಾರತದಲ್ಲಿ ಜೇನುಸಾಕಣೆ	(ಸಾದಾಪ್ರತಿ	20.00
	(ಕ್ಯಾಲಿಕೊ)	25 0
58. ಸಾಕುಪ್ರಾಣಿ ಮೂಲದ ಸೋಂಕು ರೋಗಗಳು	(ಸಾದಾಪ್ರತಿ)	7-50
	(ಕ್ಯಾಲಿಕೊ)	12-50
59. ದೊಡ್ಡರೋಗ	(ಸಾದಾಪ್ರತಿ)	5.00
60. ಮೂಲ ಅರ್ಥಶಾಸ್ತ್ರ	(ಸಾದಾಪ್ರತಿ)	19.00
	(ಕ್ಯಾಲಿಕೊ)	24.00
61. ಜೇನುಸಾಕಣೆ	(ಸಾದಾಪ್ರತಿ)	17.50
	(ಕ್ಯಾಲಿಕೊ)	22-50
62. ಕೃಷಿ ರಸಾಯನ ಶಾಸ್ತ್ರ ಪಾರಿಭಾಷಿಕ ಶಬ್ದಕೋಶ		3.25
63. ಮಣ್ಣು ನಿರ್ವಹಣೆ, ಸಂರಕ್ಷಣೆ ಬೆಳೆ ಉತ್ಪಾದನೆ	(ಅಚ್ಚಿನಲ್ಲಿದೆ)	
64. ಕೃಷಿ ಅನಿಲಯಂತ್ರ ಹಾಗೂ ಟ್ರಾಕ್ಟರು	(")	
65. ಸಹಕಾರಿ ಬೇಸಾಯ	(")	
66. ಕೋಶ	(ಅಚ್ಚಿನಲ್ಲಿದೆ)	
67. ತರಕಾರಿ ಬೆಳೆಗಳ ಕೀಟ ನಿಯಂತ್ರಣ	(ಸಾದಾಪ್ರತಿ)	12-50
	(ಕ್ಯಾಲಿಕೊ)	19.00
68. ಸಾಕುಪ್ರಾಣಿಗಳ ಭ್ರೂಣಶಾಸ್ತ್ರ	(ಸಾದಾಪ್ರತಿ)	20.00
	(ಕ್ಯಾಲಿಕೊ)	25.00
69. ಸಂಸ್ಕೃತಿಯು ರೂಪಿಕೆಗಳು	(ಸಾದಾಪ್ರತಿ)	17.00
	(ಕ್ಯಾಲಿಕೊ)	22.00
70. ರೇಖಾತ್ಮಕ ಬೀಜಗಣಿತ	(ಸಾದಾಪ್ರತಿ))	30.00
	(ಕ್ಯಾಲಿಕೊ))	35.00

71. ಹುಲಿ–ಭಾರತದ ರಾಷ್ಟ್ರೀಯ ಮೃಗ	(ಸಾದಾಪ್ರತಿ)	20.00
	(ಕ್ಯಾಲಿಕೊ)	24.00
72. ನೀರಾವರಿ ತತ್ವ ಮತ್ತು ಪದ್ಧತಿಗಳು	(ಅಚ್ಚಿನಲ್ಲಿದೆ)	
73. ಮಣ್ಣು ಶಿಲೀಂಧ್ರ ಕೈಪಿಡಿ	(ಅಚ್ಚಿನಲ್ಲಿದೆ)	
74. ಪ್ರಾಣಿಗಳ ವರ್ತನೆ	(ಸಾದಾಪ್ರತಿ)	17.00
	(ಕ್ಯಾಲಿಕೊ)	22.00
75. ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಹತೋಟಿ	(ಕ್ಯಾಲಿಕೊ)	125-00
76. ಸಸ್ಯ ತಳಿ ಅಭಿವೃದ್ಧಿ ವಿಧಾನಗಳು	(ಕ್ಯಾಲಿಕೊ)	60.00
77. ಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ	(ಅಚ್ಚಿನಲ್ಲಿದೆ)	
78. ಆಹಾರ ಸೂಕ್ಷ್ಮಜೀವಿ ವಿಜ್ಞಾನದಲ್ಲಿ ಪ್ರಾಮುಖ್ಯತೆ ಪಡೆದಿರುವ ಸೂಕ್ಷ್ಮ ಜೀವಿಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ ಭಾಗ–1)		8-50
79. ಕೆಲವು ಸಸ್ಯಗಳ ವೈಜ್ಞಾನಿಕ ಇಂಗ್ಲಿಷ್ ಹಾಗೂ ಕನ್ನಡ ಹೆಸರಂಗಳು.	(ಅಚ್ಚಿನಲ್ಲಿದೆ)	
80. ಮೀನು ಮತ್ತು ಇತರ ಸಾಗರೋತ್ಪನ್ನ ಆಹಾರಗಳ ಶೀತಜೋಪಾಸನೆ	(")	
81. ಕೀಲು ಮತ್ತು ಸ್ನಾಯುಶಾಸ್ತ್ರ	(")	
82. ಕುರಿಸಾಕಣೆ	(ಸಾದಾಪ್ರತಿ)	10-50
	(ಕ್ಯಾಲಿಕೊ)	15-00
83. ಜೋಳ	(ಸಾದಾಪ್ರತಿ)	10-00
	(ಕ್ಯಾಲಿಕೊ)	15-00
84. ಹಂದಿಭ್ರೂಣಶಾಸ್ತ್ರ	(ಅಚ್ಚಿನಲ್ಲಿದೆ)	
85. ಆಧುನಿಕ ಹೈನಾಗಾರ ದನಗಳ ನಿರ್ವಹಣೆ	(")	
86. ಮತ್ಸ್ಯಶಾಸ್ತ್ರ	(")	
87. ಹಣ್ಣು ಮತ್ತು ತರಕಾರಿಗಳ ಸಂರಕ್ಷಣೆ	(")	
88. ಕೃಷಿ ನಿರ್ವಹಣೆ ಅರ್ಥಶಾಸ್ತ್ರ	(")	
89. ತೆಂಗು	(")	
90. ಆಹಾರ ರಕ್ಷಣೆ ಮತ್ತು ಕೆಡುವಿಕೆಯ ತತ್ವಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ ಭಾಗ 2)	(")	